ಶ್ರೀ ಶ್ರೀ ಮತ್ತು ಸಿದ್ಧಲಿಂಗಯ್ಯ ತೌಲನಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯದ ಪಿಹೆಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕ :
ಶಿವಕುಮಾರ್. ಕೆ.

ಮಾರ್ಗದರ್ಶಕರು :
ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ
ವಿಶೇಷಾಧಿಕಾರಿಗಳು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೧೦

ಶ್ರೀ ಶ್ರೀ ಮತ್ತು ಸಿದ್ಧಲಿಂಗಯ್ಯ ತೌಲನಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯದ ಪಿಹೆಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕ :

ಶಿವಕುಮಾರ್. ಕೆ.

ಮಾರ್ಗದರ್ಶಕರು :

ಪ್ರೊ|| ಮಲ್ಲೇಪುರಂ ಜಿ. ವೆಂಕಟೇಶ

ವಿಶೇಷಾಧಿಕಾರಿಗಳು

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೦

ದೃಢೀಕರಣ ಪತ್ರ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಪಿಎಚ್.ಡಿ. ಪದವಿಗಾಗಿ ವಿಶ್ವವಿದ್ಯಾಲಯಕ್ಕೆ ನಾನು ಸಲ್ಲಿಸುತ್ತಿರುವ **'ಶ್ರೀಶ್ರೀ ಮತ್ತು ಸಿದ್ಧಲಿಂಗಯ್ಯ : ತೌಲನಿಕ ಅಧ್ಯಯನ'** ಎಂಬ ಈ ಸಂಶೋಧನ ಮಹಾಪ್ರಬಂಧವು ನನ್ನ ಸ್ವಂತ ಅಧ್ಯಯನವನ್ನು ಆಧರಿಸಿ ರಚನೆಗೊಂಡಿದೆ.

'ಶ್ರೀಶ್ರೀ ಮತ್ತು ಸಿದ್ಧಲಿಂಗಯ್ಯ : ತೌಲನಿಕ ಅಧ್ಯಯನ' ಎಂಬ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ, ಯಾವ ವಿಶ್ವವಿದ್ಯಾಲಯಕ್ಕೂ ಸಲ್ಲಿಸಿಲ್ಲ. ಇದು ಇಡಿಯಾಗಿ ಇಲ್ಲವೆ ಬಿಡಿಯಾಗಿ ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕ :
ಶಿವಕುಮಾರ್. ಕೆ.

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.
ದಿನಾಂಕ: ೧೨-೩-೨೦೧೦

<u>ಪ್ರಮಾಣ ಪತ್ರ</u>

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ. ಪದವಿಗಾಗಿ **'ಶ್ರೀಶ್ರೀ ಮತ್ತು ಸಿದ್ಧಲಿಂಗಯ್ಯ ತೌಲನಿಕ ಅಧ್ಯಯನ'** ಎಂಬ ವಿಷಯದ ಮಹಾಪ್ರಬಂಧವನ್ನು **ಶಿವಕುಮಾರ್. ಕೆ.** ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಮಹಾಪ್ರಬಂಧದ ವಿಷಯವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಿ, ಬೇರೆ ಉದ್ದೇಶಗಳಿಗಾಗಿ ಸಲ್ಲಿಸಲಾಗಿಲ್ಲ. ಆದ್ದರಿಂದ ಪ್ರೌಢಪ್ರಬಂಧವು ಪಿಎಚ್.ಡಿ ಪದವಿಗೆ ಅರ್ಹವಾಗಿದೆಯೆಂದು ದೃಢೀಕರಿಸುತ್ತೇನೆ.

ದಿನಾಂಕ: ೧೨-೩-೨೦೧೦

ಪ್ರೊ. ಮಲ್ಲೇಪುರಂ. ಜಿ. ವೆಂಕಟೇಶ
ಪ್ರಾಧ್ಯಾಪಕರು
ಮಾರ್ಗದರ್ಶಕರು

ನೆನೆಕೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಅಧ್ಯಯನ ಮಾಡುವುದಕ್ಕೆ ಅವಕಾಶ ನೀಡಿದ ಮಾನ್ಯ ಕುಲಪತಿಗಳಾದ ಡಾ. ಎ. ಮುರಿಗೆಪ್ಪನವರಿಗೆ, ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿಯವರಿಗೆ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ. ವೀರೇಶಬಡಿಗೇರ ಅವರಿಗೆ.

ನನ್ನನ್ನ ತಿದ್ದಿ, ತೀಡಿ, ತಾಳ್ಮೆಯಿಂದ ಮಾರ್ಗದರ್ಶನ ಮಾಡಿದ ತಾಯಿಪ್ರೀತಿಯ ವಿಮರ್ಶಕ, ನಾಡಿನ ಶ್ರೇಷ್ಠ ಚಿಂತಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ,

ನನ್ನಲ್ಲಿ ಮತ್ತೆ ಮತ್ತೆ ಹೊಸಚೈತನ್ಯ ತುಂಬುತ್ತಾ ಬಂದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಸುಚೇತನಾ ನವರತ್ನ ಅವರಿಗೆ, ಅಮೂಲ್ಯ ಪುಸ್ತಕ ನೀಡಿ ಹರಸಿದ ಸಿ. ವೆಂಕಟೇಶ್ ಅವರಿಗೆ, ಅಧ್ಯಯನದ ಕಾಳಜಿ ತುಂಬಿದ ಡಾ. ಮಾಧವ ಪೆರಾಜೆ, ಡಾ. ಸುಬ್ಬಣ್ಣ ರೈ ಅವರಿಗೆ.

ಮೈಸೂರಿನ ಡಾ. ಅಪ್ಪಗೆರೆ ಸೋಮುಶೇಖರ್ ಅವರಿಗೆ, ಕೂಡ್ಲಿಗೆಯ ಡಾ. ವೃಷಭೇಂದ್ರಾಚಾರ್ ಅವರಿಗೆ, ಡಾ. ವೆಂಕಟಗಿರಿದಳವಾಯಿ ಅವರಿಗೆ, ಡಾ. ಸಿ. ಮುಂಜುನಾಥ, ಡಾ. ಡಿ. ಪಿ. ತಿಪ್ಪೇಸ್ವಾಮಿ, ಬಸವರಾಜ್, ಡಾ. ಹನುಮಂತಯ್ಯ, ಡಾ. ಬಸವರಾಜ್‌ಗೆ, ಬಳ್ಳಾರಿಯ ಸುಭಾಷ್‌ಭರಣಿ ವೇದಿಕೆಯ ಅಧ್ಯಕ್ಷರಾದ ಮಂಜುನಾಥ್ ಅವರಿಗೆ, ಹೊನ್ನೂರ್‌ಆಲಿ ಅವರಿಗೆ, ಸದಾ ನನ್ನ ಓದಿನ ಕಾಳಜಿ ಮತ್ತು ಕನಸುಗಳಿಗಾಗಿ ಜೀವ ಸವೆಸುವ ಪ್ರೀತಿಯ ಅಮ್ಮ ಮತ್ತು ಅಪ್ಪನಿಗೆ, ಸೋದರಿ ಮತ್ತು ಸಹೋದರರಿಗೆ, ಪತ್ನಿ ಬಿ. ಎಸ್. ಗಾಯಿತ್ರಿಗೆ ಹಾಗೂ ಬಂಧುಮಿತ್ರರಿಗೆ,

ನನ್ನ ಕಾಲೇಜಿನ ಪ್ರಾಂಶುಪಾಲರೂ ಹಾಗೂ ಎಲ್ಲಾ ಸಿಬ್ಬಂದಿ ವರ್ಗಕ್ಕೆ, ಎಂದೆಂದಿಗೂ ನನ್ನ ಪ್ರೀತಿಯ ವಿದ್ಯಾರ್ಥಿ ದೈವಕ್ಕೆ, ಸಂಶೋಧನ ಪ್ರಬಂಧವನ್ನು ಮುತುವರ್ಜಿಯಿಂದ ಡಿ.ಟಿ.ಪಿ ಮಾಡಿದ ಬೆಂಗಳೂರಿನ ಉದಯ ಗ್ರಾಫಿಕ್ಸ್‌ನ ಶ್ರೀಮತಿ ಶೈಲಜಾ ಎಂ. ಹೆಗಡೆ ಅವರಿಗೆ,

ಕೃತಿರಚನೆಯ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಅಪ್ರತ್ಯಕ್ಷವಾಗಿ ಸಹಕರಿಸಿದ ಸರ್ವರಿಗೂ ನೆನೆಯುವೆ.

ಶಿವಕುಮಾರ್. ಕೆ.

ಪರಿವಿಡಿ

ಭಾಗ -೧

ಅಧ್ಯಾಯ -೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ೧-೫

ಅಧ್ಯಾಯ -೨

ಕನ್ನಡ ಬಂಡಾಯ ಕಾವ್ಯ ಪರಂಪರೆ ೬-೪೬

ಅ. ಪರಿಶಿಷ್ಟ ಕಾವ್ಯ ಪರಂಪರೆ

ಆ. ಶಿಷ್ಟಕಾವ್ಯ ಪರಂಪರೆ

ಭಾಗ-೨

ಅಧ್ಯಾಯ-೧

ದಲಿತ ಕಾವ್ಯಪರಂಪರೆ ಮತ್ತು ವರ್ತಮಾನ ೪೭-೬೫

ಅಧ್ಯಾಯ-೨

ತೆಲುಗು ಪ್ರಜಾಕಾವ್ಯ ಪರಂಪರೆ ೬೬-೮೯

ಭಾಗ-೩

ಅಧ್ಯಾಯ-೧

ಸಿದ್ಧಲಿಂಗಯ್ಯನವರ ಸಾಹಿತ್ಯ ಮತ್ತು ಗ್ರಹಿಕೆಯ ಹಲವು ನೆಲೆಗಳು ೯೦-೧೧೫

ಅಧ್ಯಾಯ-೨

ಶ್ರೀಶ್ರೀ ಅವರ ಸಾಹಿತ್ಯ ಮತ್ತು ಗ್ರಹಿಕೆಯ ಹಲವು ನೆಲೆಗಳು ೧೧೬-೧೪೫

ಅಧ್ಯಾಯ-೩

ಸಿದ್ಧಲಿಂಗಯ್ಯನವರ ಕಾವ್ಯಾಭಿವ್ಯಕ್ತಿಯ ಅನನ್ಯತೆ ೧೪೬-೧೮೩

ಅಧ್ಯಾಯ-೪

ಶ್ರೀಶ್ರೀ ಅವರ ಕಾವ್ಯಾಭಿವ್ಯಕ್ತಿಯ ಅನನ್ಯತೆ ೧೮೪-೨೨೧

ಅಧ್ಯಾಯ-೫

ಸಿದ್ಧಲಿಂಗಯ್ಯ ಮತ್ತು ಶ್ರೀಶ್ರೀ ಕಾವ್ಯಗಳಲ್ಲಿನ ಸಮಾನತೆ
ಮತ್ತು ವಿಭಿನ್ನತೆಯ ನೆಲೆಗಳು. ೨೨೨-೨೮೩

ಭಾಗ-೪

ಸಮಾರೋಪ ೨೮೪-೨೮೬

ಅನುಬಂಧಗಳು : ೧. ಕನ್ನಡ ಆಕರಗಳು ೨೮೭-೨೯೧

೨. ತೆಲುಗಿನ ಆಕರಗಳು ೨೯೨-೨೯೩

ಭಾಗ – ೧

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

'ಶ್ರೀಶ್ರೀ ಮತ್ತು ಸಿದ್ಧಲಿಂಗಯ್ಯ ತೌಲನಿಕ ಅಧ್ಯಯನ'

ಅಧ್ಯಯನದ ಉದ್ದೇಶ ವ್ಯಾಪ್ತಿ ಸ್ವರೂಪ

ಸಾಹಿತ್ಯವು ಅನೇಕ ವೈವಿಧ್ಯತೆಗಳನ್ನ ಹೊಂದಿದ್ದಾಗಿದೆ. ಭಾಷೆಗಳಿಗನುಗುಣವಾಗಿ ಸಾಹಿತ್ಯದ ಪರಂಪರೆಗಳನ್ನು ನಾವು ಕಾಣಬಹುದು. ಜನಾಂಗ, ಮತ, ಧರ್ಮ, ಭಾಷೆ ಎಂದು ಅವುಗಳನ್ನು ಸ್ಥೂಲವಾಗಿ ವಿಂಗಡಿಸಿಕೊಳ್ಳಬಹುದು. ಆಯಾ ಪ್ರದೇಶ ಮತ್ತು ಭಾಷೆಗನುಗುಣವಾಗಿಯೇ ಆಯಾ ಸಂಸ್ಕೃತಿಯ ಭಿನ್ನತೆಗಳಿರುತ್ತವೆ. ಭಾಷಿಕ ಅಧ್ಯಯನಗಳೆಂದರೆ ಅವು ಇಂತಹ ಸಮಾನ ಮತ್ತು ಭಿನ್ನತೆಯ ತೌಲನಿಕ ನೋಟಗಳೂ ಆಗಿರುತ್ತವೆ.

ದ್ರಾವಿಡ ಮೂಲದ ಸೋದರ ಭಾಷೆಗಳಾದ ಕನ್ನಡ ಮತ್ತು ತೆಲುಗು ಕಾವ್ಯ ಪರಂಪರೆಯನ್ನು ಪ್ರಸ್ತುತ ಅಧ್ಯಯನದಲ್ಲಿ ತೌಲನಿಕವಾಗಿ ಗ್ರಹಿಸಲು ಯತ್ನಿಸಲಾಗಿದೆ. ಈ ಎರಡೂ ಕಾವ್ಯ ಪರಂಪರೆಯಲ್ಲಿ ಆರಂಭದಲ್ಲಿ ಮಾತ್ರ ಹೆಚ್ಚು ಕೊಡುಕೊಳೆಗಳು ನಡೆದಿರುವುದನ್ನ ಗಮನಿಸಬಹುದು. ಈ ಎರಡೂ ಪ್ರದೇಶಗಳು ಭೌಗೋಳಿಕ, ಜನಾಂಗೀಯ ಸಾಮ್ಯಗಳಲ್ಲದೆ ಐತಿಹಾಸಿಕವಾಗಿಯೂ ಬಹಳ ಕಾಲ ಸಮಾನ ಸಾಮ್ರಾಜ್ಯಗಳ ಆಳ್ವಿಕೆಗೆ ಒಳಪಟ್ಟಿದ್ದವು. ಕ್ರಿ.ಪೂ.ಕಾಲದಲ್ಲಿ ಮೌರ್ಯ ಸಾಮ್ರಾಜ್ಯದ ಅಧೀನದಲ್ಲಿ ದಖನ್ ಪ್ರಸ್ಥಭೂಮಿ ಎಂಬ ಭಾಗದಲ್ಲಿ ಈ ಎರಡೂ ಪ್ರದೇಶಗಳಿದ್ದವು. ಕ್ರಿ.ಪೂ ೨ನೇ ಶತಮಾನದಲ್ಲಿ ಈ ಪ್ರದೇಶಗಳು ಶಾತವಾಹನರ ಆಳ್ವಿಕೆಗೂ ಒಳಪಟ್ಟಿದ್ದವು. ೧೨ನೇ ಶತಮಾನದವರೆಗೆ ಈ ಪ್ರದೇಶಗಳನ್ನ ಚಾಳುಕ್ಯರು ಮತ್ತು ರಾಷ್ಟ್ರಕೂಟರು ಆಳಿದರು. ಮುಂದೆ ೧೬ನೇ ಶತಮಾನದವರೆಗೆ ಈ ಪ್ರದೇಶಗಳನ್ನ ವಿಜಯನಗರದ ದೊರೆಗಳು ಆಳಿದರು.

೧೦ನೇ ಶತಮಾನದ ನಮ್ಮ ಪಂಪ, ಪೊನ್ನರು ಈಗಿನ ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯವರಾಗಿದ್ದರು. ವೆಂಗಿಪೊಳು ಮತ್ತು ಪುಂಗನೂರು ಈ ಪ್ರದೇಶದಲ್ಲಿವೆ. ಹಾಗೆಯೇ ೧ನೇ ನಾಗವರ್ಮ, ಭೀಮಕವಿ, ದುರ್ಗಸಿಂಹ ಆಂಧ್ರದ ಸೀಮೆಯಿಂದಲೇ ಬಂದವರು.

ತೆಲುಗು ಕಾವ್ಯದ ಆದಿಕವಿ ನನ್ನಯ್ಯನು ಕರ್ನಾಟಕದ ನಂಜನಗೂಡಿನಿಂದ ಬಂದವನೆಂದು ಹೇಳಲಾಗುತ್ತದೆ. ೧೧ನೇ ಶತಮಾನದಲ್ಲಿ ಆತ ಬರೆದ 'ಆಂದ್ರಭಾರತ'ಕ್ಕೆ ಕನ್ನಡದ ಪಂಪಭಾರತವೇ ಪ್ರೇರಕವಾಗಿದೆ. ನನ್ನಯ್ಯನಿಗೆ ನಾರಾಯಣಭಟ್ಟನೆಂಬ ಕನ್ನಡದ ಗುರು ಮಾರ್ಗದರ್ಶನ ಮಾಡಿದ್ದಾನೆ.

ಪ್ರಾರಂಭಕಾಲದ ತೆಲುಗು ಸಾಹಿತ್ಯದ ಮೇಲೆ ಕನ್ನಡದ ಪ್ರಭಾವ ಬಹಳಷ್ಟಿದೆ. ಕನ್ನಡದ 'ಕವಿರಾಜ ಮಾರ್ಗ'ದಂತೆ ತೆಲುಗಿನಲ್ಲಿ ಕವಿಜನಾಶ್ರಯಮು ಕೃತಿ ಇದೆ. ನಾಗವರ್ಮನ 'ಕರ್ಣಾಟಕ ಭಾಷಾ ಭೂಷಣದಂತೆ' ಆಂದ್ರ ಭಾಷಾಭೂಷಣವಿದೆ. ಪಾಲ್ಕುರಿಕೆ ಸೋಮನಾಥ ಎರಡೂ ಭಾಷೆಗಳಲ್ಲೂ ಕಾವ್ಯಗಳನ್ನ ರಚಿಸಿದ್ದಾನೆ. ಶ್ರೀಶೈಲ ಈ ಎರಡೂ ಭಾಷೆಯ ಜನರ ಪ್ರಸಿದ್ಧ ಧಾರ್ಮಿಕ ಕ್ಷೇತ್ರ.

ತೆಲುಗಿನ ಮಹಾಕವಿ ಶ್ರೀನಾಥನಿಗೆ ಆಶ್ರಯ ನೀಡಿ ಕನಕಾಭಿಷೇಕ ಮಾಡಿಸಿದವನು ವಿಜಯನಗರದ ಅರಸ ಪ್ರೌಢದೇವರಾಯ. ಇದಕ್ಕೆ ಋಣವೆಂಬಂತೆ ಶ್ರೀನಾಥನೂ ಕೂಡ "ಎವರೊಮನನಂಡ್ರು ನಾಕೇಮಿ ಕೊರತ ನಾಕವಿತ್ವಂಬು ನಿಜಮು ಕರ್ನಾಟ ಭಾಷಾ" ಎಂದಿದ್ದಾನೆ. ಕೃಷ್ಣದೇವರಾಯನ ಅಷ್ಟದಿಗ್ಗಜರಲ್ಲಿ ಒಬ್ಬನಾದ ಮುಕ್ಕು ತಿಮ್ಮನ್ನನ 'ಪಾರಿಜಾತಾಪಹರಣ' ಕೃತಿಗೆ ಕನ್ನಡದ ರುದ್ರಭಟ್ಟನ 'ಜಗನ್ನಾಥ ವಿಜಯವು' ಪ್ರೇರಣೆ ನೀಡಿದೆ. ಹಾಗೇ ಕನ್ನಡದ ಪುರಂದರದಾಸರು ತೆಲುಗಿನ ಅನ್ನಮಯ್ಯ ಮತ್ತು ತ್ಯಾಗರಾಜರಿಗೆ ಆದರ್ಶರಾಗಿದ್ದಾರೆ.

ಸರ್ವಜ್ಞ ಮತ್ತು ವೇಮನ ಹೋಲಿಸಬಹುದಾದ ಸಮಾನರೂಪಗಳು ತೆಲುಗಿನ ಮೊದಲ ಆಧುನಿಕ ಕವಿ ಗುರುಜಾಡ ಅಪ್ಪಾರಾವ್ ಅವರ 'ಮುತ್ಯಾಲ ಸರಾಲು' ಕಾವ್ಯದ ಛಂದಸ್ಸಿಗೆ ಕನ್ನಡದ ಭಾಮಿನೀ ಷಟ್ಪದಿ ಛಂದಸ್ಸೇ ಕಾರಣವಾಗಿದೆ. ಕನ್ನಡ ನವೋದಯ ಕವಿಗಳಲ್ಲೂ ತೆಲುಗಿನ ಭಾವ ಕವಿಗಳಲ್ಲೂ ಈ ಬಗೆಯ ಹೋಲಿಕೆಗಳಿವೆ. ಕುವೆಂಪು ಅವರು ಶ್ರೀ ರಾಮಾಯಣದರ್ಶನಂ ಬರೆದಂತೆ ಅಲ್ಲಿ ವಿಶ್ವನಾಥ ಸತ್ಯನಾರಾಯಣರು 'ರಾಮಾಯಣ ಕಲ್ಪವೃಕ್ಷಮು' ಬರೆದಿದ್ದಾರೆ.

ತೆಲುಗಿನಲ್ಲಿ ನಿಡುದ ವೋಲು ವೆಂಕಟರಾವ್ ಅವರು ಎರಡೂ ಭಾಷೆ ಮತ್ತು ಸಾಹಿತ್ಯಗಳ ಪ್ರಾಚೀನ ಕಾಲದ ಸಂಬಂದವನ್ನು ಕುರಿತು ಸಂಶೋಧನಾಗ್ರಂಥ ಬರೆದಿದ್ದಾರೆ. ಡಾ॥ ಎ. ವೃಷಬೇಂದ್ರಾಚಾರ್ ಅವರು 'ಸ್ವಾತಂತ್ರ್ಯೋತ್ತರ ಕನ್ನಡ ಹಾಗೂ ತೆಲುಗು ಕಾವ್ಯಗಳಲ್ಲಿ ಸಾಮಾಜಿಕ ಪ್ರಜ್ಞೆ' ಎಂಬ ಆಧುನಿಕ ಕವಿತೆ ಕುರಿತಾದ ಸಂಶೋಧನಾ ಪ್ರಬಂಧ ಬರೆದಿದ್ದಾರೆ.

ಆಧುನಿಕ ತೆಲುಗು ಮತ್ತು ಕನ್ನಡ ಕಾವ್ಯ ಕುರಿತಂತೆ ಅಲ್ಲಲ್ಲಿ ಪರಿಚಯಾತ್ಮಕ ಲೇಖನಗಳು ಅನುವಾದಗಳು ಬಂದಿವೆ. ಇವುಗಳಲ್ಲಿ ಗುರುಮೂರ್ತಿ ಪೆಂಡಕೂರರ ಸಮಗ್ರ ದಿಗಂಬರಕಾವ್ಯ, ನಗ್ನ ಮುನಿಯವರ ಮರಗುದುರೆ ಪ್ರಮುಖ ಅನುವಾದಗಳು ಹಾಗೇ ಎ. ವೃಷಬೇಂದ್ರಾಚಾರ್ ಅವರ ಆಧುನಿಕ ಆಂದ್ರ ಮಹಾಭಾರತಮು

(ಶೇಷೇಂದ್ರಶರ್ಮ) ಜಾಷ್ವ ಅವರ ಬಾವಲಿ (ಗಬ್ಬಿಲಂ) ಡಾ॥ ಬಂಜಗೆರೆ ಜಯಪ್ರಕಾಶ್ ಅವರ ವರವರರಾವ್ ಅವರ 'ಸಮುದ್ರ ಗೀತೆಗಳು', ವೆಂಕಟಾಪು ಸತ್ಯಂ ಅನುವಾದಿಸಿದ ಕೆ. ಶಿವಾರೆಡ್ಡಿ ಅವರ ಕವಿತೆಗಳು ಹಾಗೆ ಕನ್ನಡದಲ್ಲಿ ಬಹು ಹಿಂದೆಯೇ ಪ್ರಕಟವಾದ ಶ್ರೀಶ್ರೀ ಅವರ ಮಹಾಪ್ರಸ್ಥಾನ ಮತ್ತೊಂದು ಪ್ರಸ್ಥಾನ (ಅನುವಾದ : ಬಂಜಗೆರೆ, ಎಚ್.ಎಸ್.ಶಿವಪ್ರಕಾಶ್, ರಾಘವೇಂದ್ರರಾವ್) ಪ್ರಮುಖ ಕೃತಿಗಳೆನ್ನಬಹುದು.

ಕನ್ನಡ ಮತ್ತು ತೆಲುಗಿನ ನಡುವೆ ಊಟ, ಉಡುಗೆ, ಹಬ್ಬ, ಆಚರಣೆ, ಕಲೆಗಳ ಸಾಮ್ಯತೆ ಮತ್ತು ಭಿನ್ನತೆ ಇರುವಂತೆಯೇ ಸಾಹಿತ್ಯದ ಸಾಮ್ಯತೆ ಮತ್ತು ಭಿನ್ನತೆಗಳಿವೆ. ಇಂತಹ ಅಂಶವನ್ನೇ ವೃಷಬೇಂದ್ರಾಚಾರ್ ಅವರು 'ಸಾಮಾಜಿಕ ಪ್ರಜ್ಞೆ' ಎಂಬ ದೃಷ್ಟಿಕೋನದಲ್ಲಿ ಎರಡು ಕಾವ್ಯಗಳನ್ನ ತೌಲನಿಕವಾಗಿ ಅಭ್ಯಾಸ ಮಾಡಿದ್ದಾರೆ. ಸಿದ್ಧಲಿಂಗಯ್ಯನವರ ಕಾವ್ಯಕ್ಕೆ ಮುನ್ನುಡಿ ಬರೆಯುವಾಗ ಕನ್ನಡ ಪ್ರಸಿದ್ಧ ವಿಮರ್ಶಕ ಡಾ॥ ಡಿ. ಆರ್. ನಾಗರಾಜ್ ಅವರು "ಶ್ರೀಶ್ರೀ ಮತ್ತು ಸಿದ್ಧಲಿಂಗಯ್ಯ ಉತ್ಪ್ರೇಕ್ಷಾಲಂಕಾರದ ಕವಿಗಳು" ಎಂಬ ಹೊಸನೋಟವೇ ನನಗೆ ಈ ಬಗೆಯ ಕಾವ್ಯ ಅಧ್ಯಯನಕ್ಕೆ ಪ್ರೇರಣೆ ನೀಡಿತು.

ಪ್ರಸ್ತುತ ಅಧ್ಯಯನ ಶ್ರೀಶ್ರೀ ಮತ್ತು ಸಿದ್ಧಲಿಂಗಯ್ಯನವರ ಕಾವ್ಯವನ್ನ ಕುರಿತದ್ದಾದರೂ ಇದು ಇಡೀ ಪರಂಪರೆಯ ಹಿನ್ನೆಲೆಯನ್ನ ಸ್ಥೂಲವಾಗಿ ಇಟ್ಟುಕೊಂಡಿದೆ.

ಹಾಗೇ ಸಿದ್ಧಲಿಂಗಯ್ಯನವರ ಕಾವ್ಯ ಪ್ರವೇಶಕ್ಕೆ ಮೊದಲು ಕನ್ನಡ ಬಂಡಾಯ ಪರಂಪರೆಯನ್ನ ನೋಡಲಾಗುತ್ತದೆ. ಇಲ್ಲಿ ಭಾಗ ೧ರಲ್ಲಿ ಪರಿಶಿಷ್ಟ ಕಾವ್ಯಪರಂಪರೆ, ಭಾಗ ೨ರಲ್ಲಿ ಶಿಷ್ಟ ಕಾವ್ಯ ಪರಂಪರೆ ಎಂದು ವಿಂಗಡಿಸಿಕೊಂಡು ಮೌಖಿಕ ಮತ್ತು ಅಕ್ಷರ ಕಾವ್ಯ ಪರಂಪರೆಗಳನ್ನು ಗಮನಿಸಲಾಗುತ್ತದೆ. ಆನಂತರ ದಲಿತಕಾವ್ಯ ಪರಂಪರೆಯನ್ನ ವಸ್ತು, ಭಾಷೆ, ಶೈಲಿ, ಅಲಂಕಾರಗಳ ಮತ್ತು ಧೋರಣೆಗಳ ಭಿನ್ನತೆಗಳನ್ನ ಗುರುತಿಸಲಾಗುತ್ತದೆ. ಭಾಗ-೨, ಅಧ್ಯಾಯ-೨ರಲ್ಲಿ ತೆಲುಗಿನಲ್ಲಿ ಹೇಗೆ ಕಾವ್ಯ ಜನಪರವಾಯಿತು; ಹೇಗೆ ಈ ಜನಪರ ಕಾವ್ಯ ಪರಂಪರೆ ಬೆಳೆಯುತ್ತಾ ಬಂತು ಎಂಬುದನ್ನು 'ಪ್ರಜಾಕಾವ್ಯ ಪರಂಪರೆ' ಎಂಬ ಹಿನ್ನೆಲೆಯಲ್ಲಿ ಅಭ್ಯುದಯ, ವಚನ, ದಿಗಂಬರ ಮತ್ತು ವಿಪ್ಲವ ಕಾವ್ಯಗಳನ್ನು ಇಲ್ಲಿ ನೋಡಲು ಯತ್ನಿಸಲಾಗಿದೆ.

ಭಾಗ-೩ರಲ್ಲಿ ಈ ಮಹಾಪ್ರಬಂಧದ ಪ್ರಧಾನ ವಸ್ತು ಶ್ರೀಶ್ರೀ ಮತ್ತು ಸಿದ್ಧಲಿಂಗಯ್ಯ ತೌಲನಿಕ ನೋಟಕ್ಕೆ ಒತ್ತುಕೊಟ್ಟು ಮೊದಲ ಅಧ್ಯಾಯದಲ್ಲಿ ಸಿದ್ಧಲಿಂಗಯ್ಯನವರ ನಾಟಕ, ಪರಿಶೋಧನೆ, ಆತ್ಮಕಥೆ, ಕಾವ್ಯಗಳನ್ನ ಗಮನಿಸುತ್ತ ಅಧ್ಯಾಯ ೨ರಲ್ಲಿ ಶ್ರೀಶ್ರೀಯವರ ನಾಟಕಗಳು, ಉಪನ್ಯಾಸಗಳು, ವಿಮರ್ಶೆ, ಆತ್ಮಕತೆಗಳನ್ನು ಗಮನಿಸಲಾಗುತ್ತದೆ. ಅಧ್ಯಾಯ ಮೂರು ಮತ್ತು ನಾಲ್ಕರಲ್ಲಿ ಇಬ್ಬರ

ಕಾವ್ಯದ ಅನನ್ಯ ಲಕ್ಷಣಗಳನ್ನು ಕಾಣಲು ಪ್ರಯತ್ನಿಸಲಾಗುವುದು. ಈ ಬೆಳಕಿನಲ್ಲೇ ಅಧ್ಯಾಯ ಐದರಲ್ಲಿ ಶ್ರೀಶ್ರೀ ಮತ್ತು ಸಿದ್ಧಲಿಂಗಯ್ಯನವರ ಕಾವ್ಯಗಳ ಸಮಾನ ಮತ್ತು ಭಿನ್ನ ಅಂಶಗಳನ್ನ ಗುರುತಿಸಲಾಗುವುದು. ವ್ಯಕ್ತಿ ಅಧ್ಯಯನಗಳು ಕನ್ನಡದಲ್ಲಿ ಸಾಕಷ್ಟು ಇವೆ. ಆದರೆ ಎರಡು ಭಾಷೆಗಳ ನಡುವಿನ ಪ್ರಧಾನ ಕವಿಗಳ ಅಧ್ಯಯನಗಳು ಅತ್ಯಂತ ವಿರಳವೆಂದೇ ಹೇಳಬಹುದು.

ಈ ಹಿನ್ನೆಲೆಯಲ್ಲಿ ಆಧುನಿಕ ತೆಲುಗು ಮತ್ತು ಕನ್ನಡದ ಜನಪರ ಕಾವ್ಯವನ್ನ ತಿಳಿಸುವ 'ಶ್ರೀಶ್ರೀ ಮತ್ತು ಸಿದ್ಧಲಿಂಗಯ್ಯ' ತೌಲನಿಕ ಅಧ್ಯಾಯ ಕನ್ನಡಕ್ಕೆ ಹೊಸ ಬಗೆಯದಾದ ಪ್ರಯತ್ನವೆಂದೇ ನನ್ನ ಭಾವನೆ. ಇಲ್ಲಿನ ನೋಟ, ಅಧ್ಯಯನ ಕ್ರಮ ಮತ್ತು ತೌಲನಿಕ ದೃಷ್ಟಿಗಳಲ್ಲಿ ಹಲವು ಮಿತಿಗಳಿರ ಬಹುದಾದರೂ ಈ ಬಗೆಯ ಸಮಗ್ರ ಮತ್ತು ಸ್ಪಷ್ಟ ನಿಲುವುಗಳಿಗೆ ಇದೊಂದು ಪುಟ್ಟ ಹೆಜ್ಜೆಯೆಂದೇ ನಾನು ವಿನಯ ಪೂರ್ವಕವಾಗಿ ಹೇಳಬಯಸುತ್ತೇನೆ.

ಈ ತೌಲನಿಕ ಅಧ್ಯಯನವು ಆರ್ಥಿಕ, ಸಾಮಾಜಿಕ, ವೈಚಾರಿಕ ದೃಷ್ಟಿಕೋನದಿಂದ ಕನ್ನಡ ಮತ್ತು ತೆಲುಗು ಕಾವ್ಯ ಪರಂಪರೆಗಳನ್ನ ಬಗೆದು ನೋಡುವ ಪ್ರಾಮಾಣಿಕ ಪ್ರಯತ್ನವಾಗಿದೆ. ಇದು ಇಬ್ಬರು ಶ್ರೇಷ್ಟ ಕವಿಗಳ ಕಾವ್ಯದ ಅಧ್ಯಯನವಾದರೂ ಬಹುಶಿಸ್ತೀಯ ದೃಷ್ಟಿಕೋನ ಈ ಅಧ್ಯಯನಕ್ಕಿದೆ. ಕಾಲ, ಭಾಷೆ ಮತ್ತು ರಚನೆಗಳಿಂದ ಭಿನ್ನರಾದ ಶ್ರೀಶ್ರೀ ಮತ್ತು ಸಿದ್ಧಲಿಂಗಯ್ಯನವರನ್ನ ಅಂತಿಮ ಎಂಬಂತೆ ವಿಮರ್ಶಿಸುವೆ ಎಂಬ ಭ್ರಮೆ ನನಗಿಲ್ಲ ಹಾಗೇ ತಕ್ಕಡಿಯಲ್ಲಿಟ್ಟು ಶ್ರೇಷ್ಟ ಮತ್ತು ಕನಿಷ್ಟವೆಂದು ಹೇಳಿ ಬಿಡಬೇಕೆಂಬ ಒತ್ತಾಯದ ಉಮೇದೂ ನನಗಿಲ್ಲ. ಎರಡು ಪರಂಪರೆಗಳ ಜನಪರ ನಿಲುವುಗಳು ಎರಡು ಮಹಾಪ್ರತಿಭೆಗಳ ಸಮಾನ ಮತ್ತು ಭಿನ್ನತೆಗಳ ಅಂಶಗಳನ್ನ ಚರ್ಚಿಸಲು ಈ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.

ಜಗತ್ತಿನ ಯಾವ ಕವಿಯನ್ನು ಗಮನಿಸಿದರೂ ಆತ ತನ್ನದೇ ಆದ ಆಕೃತಿಯೊಂದನ್ನ ಕಟ್ಟಿಕೊಂಡು ವರ್ತಮಾನವನ್ನ ವಿಶ್ಲೇಷಿಸುತ್ತಿರುತ್ತಾನೆ. ಹಾಗೆಯೇ ಬದುಕು ಮತ್ತು ಮನುಷ್ಯನನ್ನು ಗಮನಿಸುತ್ತಿರುತ್ತಾನೆ. ಈ ಅಂಶವೇ ಆತನನ್ನ ಬಹುದೂರ ಕೊಂಡೊಯ್ಯುತ್ತದೆ. ಆಧುನಿಕ ಕವಿಗಳನ್ನು ಅವರು ರೂಪಿಸಿಕೊಂಡ ಆಕೃತಿಯು ಹೇಗೆ ಕೈಹಿಡಿದು ನಡೆಸಿದೆಯೆಂಬ ಬಗೆಗೂ ಈ ಅಧ್ಯಯನ ಕುತೂಹಲಕರವಾಗಿದೆ.

ಇಲ್ಲಿ ಪರಂಪರೆಗಳನ್ನ ಸ್ಥೂಲವಾಗಿ ಗ್ರಹಿಸುತ್ತ ಅಧ್ಯಯನಕ್ಕೆ ಪೂರಕವೆಂಬಂತೆ ಮಾತ್ರ ನೋಡಲಾಗುತ್ತದೆ. ಆಯಾ ಕವಿಗಳ ನಾಟಕ, ಆತ್ಮಕಥೆಗಳನ್ನು ಉಪನ್ಯಾಸ, ಸಂಶೋಧನಾ ಬರಹಗಳನ್ನ ಕಾವ್ಯಗಳೊಂದಿಗೆ ನೋಡಿದಾಗ ಅಧ್ಯಯನದ ಹರವು ತುಂಬಾ ದೊಡ್ಡದಾಗ ಬಹುದಾದ ಸಾಧ್ಯತೆಯಿರುವುದರಿಂದ ಆಯಾ ಕವಿಗಳ ಕಾವ್ಯಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಈ ಅಧ್ಯಯನವು ಅಕ್ಷರ ಕಾವ್ಯದ ಏಕಮುಖೀ

ನೆಲೆಯದಲ್ಲ. ಏಕೆಂದರೆ ಈ ಇಬ್ಬರೂ ಜನಪದ ಕಾವ್ಯವನ್ನ ಬಳಸಿಕೊಂಡೇ ತಮ್ಮ ಉದ್ದೇಶ ಈಡೇರಿಸಿಕೊಂಡಿದ್ದಾರೆ. ಅಂತಲೇ, ಅವರ ಕಾವ್ಯಕ್ಕೇ ಪೂರಕವಾಗಿ ಜನಪದ ಕಾವ್ಯವನ್ನು ಮಾರ್ಕ್ಸ್, ಗಾಂಧಿ, ಅಂಬೇಡ್ಕರರ ಹಿನ್ನೆಲೆಗಳನ್ನು ಆಯಾ ಕವಿಗಳ ಕವಿತೆಗಳ ಮೂಲಕವೇ ಸ್ಥೂಲವಾಗಿ ಕಾಣಲು ಇಲ್ಲಿ ಯತ್ನಿಸಲಾಗಿದೆ.

❖

ಅಧ್ಯಾಯ-೨

ಕನ್ನಡ ಬಂಡಾಯಕಾವ್ಯ ಪರಂಪರೆ

ಅ: ಪರಿಶಿಷ್ಟ ಪರಂಪರೆ

ಆ: ಶಿಷ್ಟ ಪರಂಪರೆ

ಕನ್ನಡ ಬಂಡಾಯಕಾವ್ಯ ಪರಂಪರೆ

ಕನ್ನಡ ಕಾವ್ಯಲೋಕವನ್ನು ಒಮ್ಮೆ ತಿರುಗಿ ನೋಡಿದರೆ ನಮ್ಮಕಣ್ಣೆದುರು ಎರಡು ಸುದೀರ್ಘ ಪರಂಪರೆಗಳು ಕಂಡುಬರುತ್ತವೆ. ಅವೆರಡನ್ನು ಸ್ಥೂಲವಾಗಿ ಶ್ರಮಿಕರ ಕಾವ್ಯ (ದೈಹಿಕ ದುಡಿಮೆಗಾರರ) ಮತ್ತು ಅಕ್ಷರಕಾವ್ಯಗಳೆಂದು ವಿದ್ವಾಂಸರು ಕರೆಯಬಹುದು. ಬಹುಸೂಕ್ಷ್ಮಕ್ಕಿಳಿದರೆ ಎರಡರಲ್ಲೂ ಜನಪರವಾದ ಭಿನ್ನಭಿನ್ನ ಮುಖಗಳಿವೆ. ದುಡಿವ ಜನರ ಮತ್ತು ಒಡೆಯರ ಪರವಾದ ನೋಟಗಳಿವೆ. ಈ ಬಗೆಯ ನೋಟಗಳು ನಾಡಿನ ಚಾರಿತ್ರಿಕ ಸಂಗತಿಗಳ ಭಿನ್ನಭಿನ್ನ ಸಾಧ್ಯತೆಗಳನ್ನ ತೋರಿಸಿಕೊಡುತ್ತವೆ. ಹಾಗಾಗಿಯೇ ಇಂದು ನಮಗೆ ಚಾರಿತ್ರಿಕ ದಾಖಲೆಗಳಂತೆ ಸಾಹಿತ್ಯವೂ ಸಾಂಸ್ಕೃತಿಕ ದಾಖಲೆಗಳಾಗಿವೆ. ಜನಪದ ಮತ್ತು ಅಕ್ಷರಕಾವ್ಯವನ್ನ ಈ ಹಿನ್ನಲೆಯಲ್ಲಿ ನೋಡಿದಾಗ ಜನಪದವು ಮಾನವ ಇತಿಹಾಸದ ಬೇಟೆ, ಪಶುಪಾಲಕ, ಕೃಷಿಕ ಸಮಾಜಗಳ ಸಾಂಸ್ಕೃತಿಕ ಸಂಗತಿಗಳಿಗೆ, ಸ್ತ್ರೀ ಸಮುದಾಯಗಳ ಶ್ರಮಿಕ ಧ್ವನಿಗಳಿಗೆ ಆಕರವಾಗಿದೆ. ಅಕ್ಷರ ಕಾವ್ಯದಲ್ಲಿ ಸ್ತ್ರೀ ಪರ ನೋಟವಿದ್ದರೂ ಅದು ಬಹುತೇಕ ಪುರುಷ ಪ್ರಧಾನ ಧ್ವನಿಯಾಗಿದೆ. ಜನಪರಂಪರೆಯ ಸ್ಪಷ್ಟ ನೋಟವು ಮೊದಲಬಾರಿಗೆ ವಚನಕಾರರ ಕಾಲದಲ್ಲಿ ಕಂಡುಬಂದರೆ ಆನಂತರ ಕಂಡುಬಂದದ್ದೆ ಸ್ವಾತಂತ್ರೋತ್ತರ ಕಾಲದ ದಲಿತ ಬಂಡಾಯ ಕಾವ್ಯಗಳಲ್ಲಿ ವಿಶೇಷವೆಂದರೆ ಈ ಎರಡರಲ್ಲೂ ಸ್ತ್ರೀಪುರುಷರಿಬ್ಬರ ಸಮಸಮ ಧ್ವನಿಗಳಿವೆ. ಇವುಗಳನ್ನ ಸ್ಥೂಲವಾಗಿ ಪರಿಶಿಷ್ಟ ಕಾವ್ಯ ಮತ್ತು ಶಿಷ್ಟಕಾವ್ಯ ಎಂದು ವಿಂಗಡಿಸಿಕೊಳ್ಳಬಹುದು.

ಅ: ಪರಿಶಿಷ್ಟ ಕಾವ್ಯ ಪರಂಪರೆ : "ಹೊಲೆಯ ಮಾದಿಗರು ಈ ನಾಡಿನ ಮೂಲಕೃಷಿಕರು, ತಾಂತ್ರಿಕ ಹಾಗೂ ಶಾಕ್ತಪಂಥಗಳನ್ನು ಅನುಸರಿಸಿದವರು. ಭೂಮಿ ಮತ್ತು ಕೃಷಿಯ ಒಡೆತನಗಳಲ್ಲಿ ಭಾಗಿಯಾಗಿದ್ದ ಇವರು ಒಂದು ಕಾಲದಲ್ಲಿ ನೆಲದ ಹಕ್ಕು ಹಾಗೂ ಮಠದ ಹಕ್ಕುಗಳನ್ನು ಹೊಂದಿದಂಥವರು. "ಕುಳವಾಡಿ ಎಂಬ ಹೊಲೆಯ, ಗ್ರಾಮದ ಮುಖ್ಯಸ್ಥನಾದ ಸಂದರ್ಭಗಳೂ ಇವೆ. ದಲಿತರು ಕೋವಿಕಟ್ಟಿಕೊಂಡು ಆಳಿದ ವಿಚಾರ ಆನಂತರ ಅದು ಬ್ರಾಹ್ಮಣರ ಕೈಸೇರಿದ್ದು ಕೊನೆಕೊನೆಗೆ ಹೊಲೆಯ ಮಾದಿಗರು ದೇಗುಲಗಳ ಪ್ರವೇಶದ ಹಕ್ಕನ್ನು ಕಳೆದುಕೊಂಡು ಜಾತಿಶ್ರೇಣಿಕರಣದ ಕೆಳಸ್ಥರದ ಅಸ್ಪೃಶ್ಯ ವ್ಯವಸ್ಥೆಗೆ ಸಂದುಹೋದದ್ದು ಈ ದೇಶದ ಬಹುದೊಡ್ಡ ವಿಪರ್ಯಾಸ"[1] ಮುಖ್ಯವಾಗಿ ಮಂಟೆಸ್ವಾಮಿ, ಮಾದೇಶ್ವರ

ಕಾವ್ಯಗಳನ್ನು ತಾಂತ್ರಿಕ ಪಂಥದ ಹಿನ್ನಲೆಯಲ್ಲಿ ಗುರುತಿಸುವುದರಿಂದ ಜಾತಿ ಪದ್ಧತಿಗೂ ಪೂರ್ವದ ಪಣ ಸಮಾಜವನ್ನು ಇಲ್ಲಿ ಕಲ್ಪಿಸಿಕೊಳ್ಳಬಹುದು. ತಂತ್ರ ಪಂಥಗಳಲ್ಲೂ ಎಡಗೈ ಬಲಗೈ ವಿಂಗಡಣೆ ಇದೆ. ಎಡಗೈನವರದು ಮಾಟ, ಮಂತ್ರ, ಬಲಿ, ರಕ್ತ, ನೈವೇದ್ಯ, ಮೈಥುನದಂಥ ತೀವ್ರತರವಾದ ಆಚರಣೆಗಳಾದರೆ, ಬಲಗೈನವರದು ಜಾದು, ಪವಾಡ, ಯಕ್ಷಿಣಿ, ಗಾರುಡಿ ವಿದ್ಯೆಗಳಂಥ ಸೌಮ್ಯ ಆಚರಣೆಗಳು. ಈ ಎರಡೂ ಬಗೆಯ ವಿವರಗಳನ್ನು ಮಂಟೆಸ್ವಾಮಿ ಮತ್ತು ಮಲೆ ಮಾದೇಶ್ವರ ಕಾವ್ಯಗಳಲ್ಲಿ ನೋಡಬಹುದು. ಎಡಗೈನವರನ್ನು ಬಲಗೈ ಒಕ್ಕಲಾಗಿಸುವುದೇ ಮಂಟೇಸ್ವಾಮಿ ಉದ್ದೇಶ.

ಮೈಲಾರಲಿಂಗನ ಕಾವ್ಯ: ಮೈಲಾರ ಹಲವು ಕುಲಜಾತಿಗಳ ದೈವ ಆದರೆ ಕುರುಬರು ಈತನ ಪ್ರಧಾನ ಒಕ್ಕಲು ದ್ರಾವಿಡ ಕುಲ ಸಮಾಜದಲ್ಲಿ ಶಿವಶಕ್ತಿಯರಿಗೆ ಇರುವಂಥ ಬಹುಮುಖ್ಯ ಆರಾಧನೆ ಅದೇ ರೂಪದ ಮೈಲಾರ ಮಾಳವ್ವರಲ್ಲೂ ಬೆಸೆದಿದೆ. ಮೈಲಾರ ಮತ್ತು ಮಣಿ ಮಲ್ಲಾಸುರರ ಸಂಘರ್ಷವೆಂದರೆ ಅದು ಕುರುಬರು ಮತ್ತು ದಲಿತರ ನಡುವಿನ ಸಂಘರ್ಷವೇ ಮಧ್ಯಕರ್ನಾಟಕದಲ್ಲಿ ನೆಲೆನಿಂತ ಕೃಷಿಕರಾದ ಹೊಲೆಯರನ್ನು ಈ ಪಶುಪಾಲಕ ವರ್ಗ ತುಳಿಯುವ ಮೂಲಕ ಕೃಷಿ ಸಾಮ್ಯ ಕಂಡುಕೊಂಡಿತು. ಇಷ್ಟಾದರೂ ಮೈಲಾರ ಕಂಚಾವೀರರ [ಹರಿಜನರ] ಮೂಲಕವೇ ಹೊಲೆಯ ಮಣೀ ಮಲ್ಲಾಸುರ ನನ್ನ ಗೆಲ್ಲುತ್ತಾನೆ. ಕಂಚಾವೀರರು ಬಹುದೊಡ್ಡ ತಾಂತ್ರಿಕ ಪವಾಡಗಾರರಾಗಿರುವಂತೆಯೇ ಖಡ್ಗಪಾಣಿಗಳೂ ಆಗಿದ್ದಾರೆ. ಅಂತಲೇ ಮೈಲಾರ ತನ್ನ ಆಡಳಿತಕ್ಕೆ ಬೆಂಗಾವಲಾಗಿ ಈ ವರ್ಗಗಳನ್ನು ಇಟ್ಟುಕೊಂಡಿದ್ದಾನೆ.

ಮೈಲಾರ ಒಂದೇ ಜನಾಂಗಕ್ಕೆ ಜಾತಿಗೆ ಅನ್ವಯಿಸಿ ನೋಡದ ಹಾಗೆ ಮೈಲಾರ ಸಂಸ್ಕೃತೀಕರಣಗೊಳ್ಳುತ್ತಲೇ ಬಂದಿದ್ದಾನೆ. ಕೆಲವಡೆ ಕುರುಬ, ಬೆಸ್ತರು ಮೈಲಾರನ ಪೂಜಾರಿಕೆ ಬಹಿಸಿದ್ದರೆ ದೇವರಗುಡ್ಡದಂತಹ ಇನ್ನೂ ಹಲವು ಕ್ಷೇತ್ರಗಳಲ್ಲಿ ಬ್ರಾಹ್ಮಣ ಪೌರೋಹಿತ್ಯವಿದೆ. ಕೆಲವೆಡೆ ವೀರಶೈವ ಬ್ರಾಹ್ಮಣರು ಮೈಲಾರನನ್ನ ತಮ್ಮ ಕುಲದೇವತೆಯನ್ನಾಗಿ ಮಾಡಿಕೊಂಡಿದ್ದಾರೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನಲ್ಲಿ ಶತಮಾನಗಳಷ್ಟು ಹಳೆಯದಾದ ಬೃಹತ್ ಮಠವಾದ ಗುಂಡಗುರ್ತಿಯ ಮೈಲಾರ ಸೇರಿದಂತೆ ಕರಿಗುಡ್ಡ, ದೇವರಗುಡ್ಡ ಗ್ರಾಮಗಳಲ್ಲೂ ಹೊಲೆಯರೇ ಮೈಲಾರನ ಪೂಜಾರಿಗಳಾಗಿದ್ದಾರೆ.

ಜುಂಜಪ್ಪನ ಕಾವ್ಯ: "ಕಾಡುಗೊಲ್ಲರ ಜನಪದ ಕಾವ್ಯವು ಕನ್ನಡದ ಇತರ ಜನಪದ ಕಾವ್ಯವು ಕನ್ನಡದ ಇತರ ಜನಪದ ಕಾವ್ಯಗಳಿಗಿಂತ ಕೆಲವು ಅಂಶಗಳಲ್ಲಿ ಭಿನ್ನವೂ ವೈಶಿಷ್ಟ್ಯಪೂರ್ಣವೂ ಆಗಿದೆ. ತಮ್ಮನ್ನು ಇತರ ಜನವರ್ಗದಿಂದ ಪ್ರತ್ಯೇಕಿಸಿಕೊಂಡ ಜನಾಂಗವೊಂದರ ಸಾಂಸ್ಕೃತಿಕ ಸ್ವರೂಪವನ್ನು ಈ ಕಾವ್ಯ

ತಿಳಿಯಪಡಿಸುತ್ತದೆ. ಜುಂಜಪ್ಪನು ನಾಯಕನಾಗಿರುವ ಕಾಡುಗೊಲ್ಲರ ಜನಪದ ಕಾವ್ಯವು ಒಂದೇ ಜನಾಂಗದ ಒಳಗಡೆಯೇ ವ್ಯಕ್ತಿತ್ವ ವಿಕಸನ ಹಾಗೂ ಸಾಮೂಹಿಕ ಏಳ್ಗೆಯನ್ನು ಸಹಿಸದೆ ದಬ್ಬಾಳಿಕೆ ಮತ್ತು ದೌರ್ಜನ್ಯದ ದಾರಿಯನ್ನು ಹಿಡಿದ ಶಕ್ತಿಗಳ ವಿರುದ್ಧ ಬಾಲಕನೊಬ್ಬ ಸಿಡಿದೇಳುವ ಕಥೆಯನ್ನು ಒಳಗೊಂಡಿದೆ. ಮಗ್ದರ ಅವಕಾಶ ವಿಹೀನರ ಮೂಕವೇದನೆಯೇ ಮಡುಗೊಂಡು ನೈತಿಕ ಧೈರ್ಯದ ರೂಪವಾಗಿ ಗಟ್ಟಿಯಾಗುತ್ತಾ ಹೋದ ವಿವಿಧ ಹಂತಗಳನ್ನೂ ಈ ಜನಪದ ಕಾವ್ಯವು ಸ್ಪಷ್ಟಪಡಿಸುತ್ತದೆ."[೨]

ಗೊಂಡರ ರಾಮಾಯಣ: "ಕರ್ನಾಟಕದ ಸಹ್ಯಾದ್ರಿಗೊಂಡರಲ್ಲಿ ಜನಕ ರಾಜನಲ್ಲ ಬದಲಿಗೆ ಒಬ್ಬ ರೈತ. ತಾನೇ ಸ್ವತಃ ಉಳುವಾಗ ಸಿಕ್ಕಿದ ಸೀತೆಯನ್ನು ತಂದು ಸಾಕುತ್ತಾನೆ. ಭಾರತದ ಇತರ ಬುಡಕಟ್ಟುಗಳಲ್ಲಿ ಸಿಗುವ ರಾಮಾಯಣಗಳಲ್ಲಿ ಜನಕ ರೈತನೇ. ಆತ ಅರಮನೆಯಲ್ಲಿ ವಾಸವಿರಲಿಲ್ಲ. ಹೊಲದ ಬಳಿಯ ಒಂದು ಗುಡಿಸಲಲ್ಲಿ ಇರುತ್ತಾನೆ. ಬಿಲ್ಲರು ಮತ್ತು ಸಂತಾಲರ ಪ್ರಕಾರ ಜನಕರಾಜನಿಗೆ ಮಗು ಸಿಗುವುದು ಪವಾಡದಿಂದಲ್ಲ. ಭೀಕರ ಬರಗಾಲದ ಕಾರಣ ಜೀವಂತ ಮಕ್ಕಳನ್ನೇ ಮಣ್ಣಿಗೆ ಹಾಕುವ ಪರಿಪಾಠ ಆ ಭಾಗದಲ್ಲಿ ಇರುತ್ತದೆ. ಅಂಥ ನತದೃಷ್ಟ ಮಕ್ಕಳಲ್ಲಿ ಒಬ್ಬಳು ಸೀತಾ"[೩]

"ವಾಲ್ಮೀಕಿ ಮತ್ತು ಬಡಕಟ್ಟು ರಾಮಾಯಣಗಳ ಬಹುಮುಖ್ಯ ಭಿನ್ನತೆಗಳೆಂದರೆ ವಾಲ್ಮೀಕಿ ರಾಮಾಯಣ ವರ್ಣ ವ್ಯವಸ್ಥೆಯ ಪರವಾಗಿದ್ದು ಪುರೋಹಿತಗಳಾಗಿ ಮೌಲ್ಯಗಳನ್ನೆ ಎತ್ತಿ ಹಿಡಿಯುತ್ತದೆ. ಆದ್ದರಿಂದ ಅಲ್ಲಿ 'ನೀಚ ಕುಲಗಳಿಗೆ' ಸೇವೆ ಮಾಡುವುದು ಪಾಪವೆಂದಾಗುತ್ತದೆ. ಮುಂದೆ ಬಂದ ನಮ್ಮ ಕನ್ನಡದ ಮಹಾಕಾವ್ಯಗಳಲ್ಲೂ ಈ ದುಡಿವ ಹೊಲೆ-ಮಾದಿಗ ಕುಲಗಳು ಕೀಳಾಗಿ, ಪಾಪವಾಗಿ, ತಪ್ಪಿಗೆ ಶಿಕ್ಷೆಯಾಗಿ ಕಾಣಿಸಿಕೊಂಡಿವೆ. ಆದರೆ ಗೊಂಡರ ರಾಮಾಯಣದಲ್ಲಿ ಭರತನ ರಾಜ್ಯಭಾರ ಹೇಗಿತ್ತು ಎಂದರೆ:

ಸುಖದಲ್ಲೂ ಕಾಲ ಕಳಿವಂಗಾ ತಾನ
ಅರು ಮನೆಯಲ್ಲವರೆ ಉಳುವವರಾ
ಒಕ್ಕಲು ಮಕ್ಕಳು ಸಲಿಕೊಂಡಾ ತಾನಾ
ಆಳೂ ಮಕ್ಕಳು ಕಟ್ಟಿಕೊಂಡಾ

ಇದು ನಮ್ಮ ಬುಡಕಟ್ಟು ಕಥೆಗಾರರ ಆಶಯ. ಯಾವ ರಾಜನೂ ಬಂದರೂ ದುಡಿಯುವ ಸಮುದಾಯಕ್ಕೆ ಸೇರಿದ ಅನ್ನಹಾಕುವ ಒಕ್ಕಲು ಮಕ್ಕಳು ಮತ್ತು ಆಳು ಮಕ್ಕಳನ್ನು ಸಲಹುವುದು ಅವರ ಕರ್ತವ್ಯ"[೩]

"ಅಖಂಡ ಉದ್ದೇಶ ಆದರ್ಶಗಳಿಲ್ಲದ ಬುಡಕಟ್ಟು ರಾಮಾಯಣದ ದಶರಥ ಬೇಟೆಗೆ ಹೋಗುವ ಪ್ರಸಂಗ ಅತ್ಯಂತ ಸರಳ ಉದ್ದೇಶದಿಂದ ಪ್ರಾಣಿಗಳನ್ನು ಕೊಂದು, ಅವುಗಳ ಮಾಂಸದಿಂದ ಅಡಿಗೆ ಮಾಡುವುದಕ್ಕೆ ದಶರಥ ಬೇಟೆಗೆ ಹೊರಡುವ ರೀತಿ ನೋಡಿ:

ಚಣ್ಣಾ ಗುಂಡೀನ ಕೋವಿಯ ಲೋವಿಗಿನ್ನು
ಮದ್ದು ಗುಂಡೊಂದೆ ತುಂಬಿದ ನೋವಿನ್ನು
ಹಂಡಾ ನಾಯೊಂದೆ ಕರಕೊಂಡಾಳ
ಹುಂಡಾ ನಾಯೊಂದೆ ಕರಕೊಂಡಾ

ದಶರಥನ ನಾಲ್ಕು ಮಕ್ಕಳಿಗೆ ವಿದ್ಯಾಬುದ್ಧಿ ಕಲಿಸಿದ್ದಾರೆ. ಗರಡಿ ಸಾಧನೆಗಳನ್ನು ಕಲಿಸಿಕೊಟ್ಟಿದ್ದಾರೆ. ಬಿಲ್ಲು ವಿದ್ಯೆಯೂ ಆಗಿದೆ ಆದರೆ ಇಲ್ಲಿ ಅತ್ಯಂತ ಮುಖ್ಯವಾಗಿ ಗಮನಿಸ ಬೇಕಾದುದು ಜಾಲು ವಿದ್ಯೆಯನ್ನು ಕಲಿಸಿದರು ಎಂಬುದು. ಒಂದು ಬುಡಕಟ್ಟು ಸಮಾಜ ಬಿಲ್ಲುವಿದ್ಯೆ ಗರಡಿವಿದ್ಯೆಗಳಿಗಿಂತ ಮಾಂತ್ರಿಕ ವಿದ್ಯೆಯನ್ನು ಹೆಚ್ಚು ಗೌರವಿಸುತ್ತದೆ. ಮಾಂತ್ರಿಕ ವಿದ್ಯೆಯ ಅನೇಕ ಮಜಲುಗಳ ಈ ಜಾಲ ವಿದ್ಯೆಯನ್ನು ದಶರಥನ ಮಕ್ಕಳು ಕಲಿಯುತ್ತಾರೆ"[೩]

"ಗೊಂಡರ ರಾಮಾಯಣದಲ್ಲಿ ಲಕ್ಷ್ಮಣನೇ ಮುಖ್ಯವ್ಯಕ್ತಿ. ಸೀತೆಯನ್ನು ಗೆದ್ದು ರಾಮನಿಗೆ ಮದುವೆ ಮಾಡಿಕೊಟುತ್ತಾನೆ. ನೇಮ, ನಿಯಮ, ತಪಸ್ಸು ಮತ್ತು ಸಾತ್ವಿಕತೆ ಎಲ್ಲದರಲ್ಲಿಯೂ ರಾಮನಿಗಿಂತ ಲಕ್ಷ್ಮಣನೇ ಮುಂದು"[೩] ಸೀತೆ ಕೇವಲ ಜಿಂಕೆಯನ್ನು ಬಯಸುವವಳಲ್ಲ. ಅವಳಿಗೆ ಬೇಕಾಗಿರುವುದು ಆ ಸುಂದರ ಜಿಂಕೆಯ ಚರ್ಮ. ಆ ಚರ್ಮದಿಂದ ಅವಳು ತನ್ನ ದೇಹಕೊಪ್ಪುವ ಸುಂದರ ಕುಬುಸ ಹೊಲಿಸಿಕೊಳ್ಳಬೇಕಾಗಿದೆ.

'ಗುಹವಾಸಿಗಳಾಗಿದ್ದುಕೊಂಡು ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಿ ಬದುಕುತ್ತಿದ್ದ ಮೂಲ ನಿವಾಸಿ ಬುಡಕಟ್ಟುಗಳಾದ ವಾನರರಿಗೆ ವಾಲಿನಾಯಕ. ವಾಲಿ ಇಲ್ಲದಿರುವ ಸಂದರ್ಭದಲ್ಲಿ ನಾಯಕತ್ವವನ್ನೂ ಕಸಿದುಕೊಂಡು ಮೋಸಮಾಡಿದ್ದ ಎಂಬ ಕಾರಣಕ್ಕೆ ಅವನ ತಮ್ಮ ಸುಗ್ರೀವನನ್ನೂ ರಾಜ್ಯಭ್ರಷ್ಟನನ್ನಾಗಿಸಿ ಅವನ ಹೆಂಡತಿಯನ್ನೂ ತನ್ನ ಜೊತೆಗೇ ಇಟ್ಟುಕೊಂಡಿದ್ದ. ಆದ್ದರಿಂದ ವಾಲಿಯನ್ನು ಕಂಡರೆ ಸುಗ್ರೀವನಿಗೆ ಸಹಜವಾಗಿ ದ್ವೇಷವಿತ್ತು. ಬಹುಶಃ ಬಿಲ್ಲುಬಾಣಗಳ ಉಪಯೋಗವನ್ನೇ ಅರಿಯದ ವಾನರ ವಂಶಸ್ಥರಿಗೆ ಧನುರ್ದಾರಿಗಳಾದ ರಾಮಲಕ್ಷ್ಮಣರ ಸಾಹಸ ಖಂಡಿತವಾಗಿಯೂ ಮರಳು ಮಾಡಿದೆ. ಇವರ ಸಹಾಯದಿಂದ ವಾಲಿಯನ್ನು ಕೊಂದು ತಾನೇ ನಾಯಕ ಪಟ್ಟ ಕಟ್ಟಿಕೊಳ್ಳ ಬೇಕೆಂಬುದು ಸುಗ್ರೀವನ ಆಸೆ. ಹನುಮಂತನು ಸುಗ್ರೀವನ ಬೆನ್ನಿಗಿದ್ದಾನೆ. ಇಂಥಾ ಒಂದು ಸಂದರ್ಭವನ್ನು ರಾಮಲಕ್ಷ್ಮಣರು ಸದುಪಯೋಗ ಪಡಿಸಿಕೊಳ್ಳುತ್ತಾರೆ. ಸುಗ್ರೀವ ರಾಮನಿಗೆ ಹೇಳುತ್ತಾನೆ.

[illegible]

[illegible]

[illegible]

[illegible]

[illegible]

[illegible]

[illegible]

ನನ್ನ ಅಣ್ಣಾನೆ ಎಂಬುವ ನಾಲಾ
ನನ್ನ ಹೆಣ್ತೀನೆ ಅಳುಕೊಂಡಾ
ನನ್ನ ಹೆಣ್ತಿ ನನಗೆ ಕೊಡಿಸಿದರೆ
ನನ್ನ ಸೈನ್ಯಾನ ಕೊಡುತೀವಾ.

ಇಲ್ಲಿ ಸ್ನೇಹಕ್ಕಿಂತ ಸ್ಪಷ್ಟವಾದ ಒಂದು ವ್ಯವಹಾರ ಸಂಬಂಧವಿದೆ. ರಾಜ್ಯ ಭ್ರಷ್ಟನಾಗಿರುವ ಸುಗ್ರೀವನಿಗೆ ಮೊದಲನೆಯದಾಗಿ ಅವನ ಹೆಂಡತಿಬೇಕು. ಅವನ ಹೆಂಡತಿಯನ್ನು ಅವನಿಗೆ ಕೊಡಿಸುವುದು ಎಂದರೆ ವಾಲಿಯನ್ನು ಗೆಲ್ಲುವುದು ಎಂದೇ ಅರ್ಥ. ವಾಲಿ ಎಂಥಾ ಅಸಹಾಯ ಶೂರ ಎಂದರೆ ರಾವಣನಂಥ ಬಲಾಢ್ಯನನ್ನೇ ಒಮ್ಮೆ ಹಿಡಿದುತಂದು ತನ್ನ ಶಿಶುವಿನ ತೊಟ್ಟಿಲಿಗೆ ಕಟ್ಟಿದ್ದವನು. ಆದರೆ ಅಂಥ ಅಸಹಾಯ ಶೂರನನ್ನು ನಾಗರೀಕ ಜಗತ್ತಿನ ರಾಮ ತನ್ನ ಆಧುನಿಕ ಅಸ್ತ್ರವಾದ ಧನಸ್ಸು ಬಳಸಿ ಒಂದೇ ಏಟಿಗೆ ಕೊಲ್ಲುತ್ತಾನೆ. ಆಗ ವಾಲಿಯ ಪ್ರತಿಕ್ರಿಯೆ ನೋಡಿ:

ಯಾವ ಕಳ್ಳನೋ ನೀನಿನ್ನು ತಾನ
ಎದುರು ಬಂದು ನನ್ನ ಹೊಡಿಲಾಕು ತಾನ
ಮರೆಯಲಿ ಬಂದು ನಿಂತು ಹೊಡಿದಿಯಲಾ[೩]

ರಾಮಾಯಣ ಅರಣ್ಯವಾಸಿ, ಗುಹವಾಸಿಗಳಾದ ಜನರನ್ನು ಬೇಟೆ, ಪಶುಪಾಲಕ, ಕೃಷಿ, ಸಂಸ್ಕೃತಿಯನ್ನು ಯುದ್ಧ ರಾಜ್ಯವಿಸ್ತಾರ ಮೊದಲಾದ ಸಂಗತಿಗಳ ಜೊತೆಗೆ ಊಳಿಗಮಾನ್ಯ ವ್ಯವಸ್ಥೆಗಳನ್ನು ಹೇಳುವ ಮಹಾಕಾವ್ಯ ಎನ್ನಬಹುದು.

ಬುರ್ರಕಥೆ: ತೆಲುಗಿನಲ್ಲಿ ಹೆಚ್ಚು ಜನಪ್ರಿಯಗೊಂಡ ಕಲಾ ಪ್ರಕಾರವಿದು. ನಮ್ಮಲ್ಲಿ ಯಕ್ಷಗಾನ, ಬಯಲಾಟಗಳಿದ್ದಂತೆ. ಬುರ್ರಕಥಾ ಅಲ್ಲಿ ಜನರ ಮನೆಯ ಮಾತಾಗಿ ಬಿಟ್ಟಿದೆ. ಆಂದ್ರಪ್ರದೇಶದ ಪ್ರಭಾವ ಹೆಚ್ಚಾಗಿರುವ ಬಳ್ಳಾರಿ, ಚಿತ್ರದುರ್ಗ, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ಈ ಬುರ್ರಕಥಾ ಹಾಡುವ ಜನಾಂಗ ಹೆಚ್ಚಾಗಿ ಕಾಣುತ್ತಾರೆ. ಬಹುಪಾಲು ಹಾಡುಗಾರರು ಕೆಳಸಮುದಾಯಗಳೇ.

ಆಂದ್ರದ ಮೊದಲ ಜನಪದ ಕಾವ್ಯವೆಂದು ಊಹಿಸುವ ೧೨ನೇ ಶತಮಾನದ ಪಲ್ನಾಡು ವೀರಚರಿತ್ರೆ ದ್ವಿಪದಿ ಛಂದಸ್ಸಿನ ವೀರಗಾಥೆ. ಕದಿರಿಬಾಲನ ಚರಿತ್ರೆ. ಮಾಹುರಮ್ಮನಕಥೆ, ಮಾತೆಯ ಪುರಾಣ, ಗೌತಮ ಪುರಾಣ, ಆಲದ ಮರಗಳಕಥೆ, ಕಾಕತಮ್ಮನಕಥೆ, ರೇಣುಕಾಯುದ್ಧ, ಅಂಕಮ್ಮನಕಥೆ, ಗಂಗಮ್ಮನಕಥೆ, ಮಾತಂಗಿಕಥೆ, ಕೃಷ್ಣಗೊಲ್ಲರಕಥೆ, ಕುಮಾರರಾಮನಕಥೆಗಳು ಎರಡೂ ಭಾಷೆಗಳಲ್ಲಿ ಹಾಡಲ್ಪಟ್ಟಿವೆ. ಸಂಚಾರಿ ಗಾಯಕರಾದ ಇವರನ್ನು ತೆಲುಗಿನಲ್ಲಿ 'ವೀರಗಾಥಲು' ಅಥವಾ ಜಾನಪದ ಕಥಾಗೇಯುಲು' ಎಂದು ಕರೆಯುತ್ತಾರೆ. ಪಲ್ನಾಟಿ ವೀರರ ಕಥೆಗಳು, ಕಾಟಿಮರಾಜನಕಥೆಗಳು, ಬೊಬ್ಬಿಲಿ ನಾಗಿರೆಡ್ಡಿ ಕಥೆ, ದೊಳಿಂಗರಾಜನಕಥೆ,

ಬಾಲನಾಗಮ್ಮನಕಥೆ, ಅದೋನಿಲಕ್ಷ್ಮಮ್ಮನಕಥೆ ಮುಂತಾದವುಗಳನ್ನು ಉದಾಹರಿಸಬಹುದು.

"ಭಾರತದಲ್ಲಿ ಪ್ರಜಾಪ್ರಭುತ್ವವಾದಿ ರಾಜಕೀಯ ವ್ಯವಸ್ಥೆ ತಲೆ ಎತ್ತಿದ ನಂತರ ಈ ಗಾಥಾಕಾರರು [ಹಾಡುಗಾರರು] ರಾಜನ ಆಸ್ಥಾನಗಳನ್ನು ಬಿಟ್ಟು ಪರಂಪರೆಯ ಮುಂದುವರಿಕೆಯಾಗಿ ಪೂರ್ವದ ರಾಜಕುಲಗಳ ಚರಿತೆ [ಸಾಂಸ್ಕೃತಿಕ ವೀರರ ಚರಿತೆ]ಯನ್ನು ಹಾಡಲು ಶುರುಮಾಡಿದರು. ಈಗಿನ ನಮ್ಮ ವರ್ಣವ್ಯವಸ್ಥೆಯಲ್ಲಿ ಪ್ರತಿಯೊಂದು ಜನಾಂಗಕ್ಕೂ ಅದರ ಕುಲಮೂಲದ ದೈವಗಳಿಗೂ ಒಂದೊಂದು ಆರಾಧನಾ ಕುಲದೈವ ಪಂಥಗಳಿವೆ. ಅದರಲ್ಲಿ ಕುಲದೈವಭಕ್ತ, ಸೇವಕರಾದ ನಿಷ್ಠಾವಂತ ವರ್ಗವೊಂದು ಗುರುಭಕ್ತ ಅಥವಾ ಗುರುಪರಂಪರೆ ಎಂಬಂತೆ ಬೆಳೆದು ಬಂದಿದೆ. ಮೈಲಾರನ ಗ್ವಾರಪ್ಪಗ್ವಾರಮ್ಮ, ಜುಂಜಪ್ಪನ ಗೆಣೆಗಾರರು, ಮಾದೇಶ್ವರನ ಕಂಸಾಳೆಯವರು, ಮಂಪೇಸ್ವಾಮಿಯ ನೀಲಗಾರ ಗುಡ್ಡರು, ಸಿರಿಯ ಭೂತೇರು, ಭೂತಯ್ಯಗಳು, ಎಲ್ಲಮ್ಮನ ಜೋಗಮ್ಮ ಜೋಗಪ್ಪಗಳು, ತಿರುಪತಿಯ ದಾಸಪ್ಪಗಳು ಹೀಗೆ ಒಂದು ಬಲಿಷ್ಠ ಜನಪದ ಗುರವರ್ಗವೇ ಈ ನಾಡಿನ ತುಂಬೆಲ್ಲಾ ಹರಡಿಕೊಂಡಿದೆ. ಇದು ರಾಜ ಮಹಾರಾಜರಿಗಿಂತ ಆಯಾಕುಲ ನಾಯಕ ದೈವ ಪರಂಪರೆ ಸಂಸ್ಕೃತಿಯ ಹಿನ್ನಲೆ. ಮುನ್ನಲೆಗಳನ್ನು ತಿಳಿಸಿಕೊಡುತ್ತದೆ.

ಇದೇ ತೆರನಾಗಿ ತೆಲುಗಿನ ಬ್ರಾಹ್ಮಣರಿಗೆ ವಿಪ್ರವಿನೋದರು [ಸೂರ್ಯವಂಶ ಕ್ಷತ್ರಿಯರು] ಕ್ಷತ್ರಿಯರಿಗೆ ಭಟ್ರಾಜರು, ವೈಶ್ಯರಿಗೆ ವೀರಮುಷ್ಟರು, ಯಾದವರಿಗೆ ಕೊಪಮ್ಮಕುಲದವರು, ಭಟ್ರಾಜರು ವೆಲಮ ಬಲಿಜ ಕುಲದವರಿಗೆ ಮಾಲದಾಸರಿಗಳು. ಅಕ್ಕಸಾಲಿಗಳಿಗೆ ಪನಸವಾರು ನೇಕಾರರಿಗೆ ಮಿತ್ರ ಅಯ್ಯುವಾರಲು [ಮಿತ್ತರಿ ವಾಸುರುಲು] ಹೊಲೆಯರಿಗೆ ಮಾಷ್ಟೀಲು, ಮಾದಿಗರಿಗೆ ವಕ್ಕಲವಾರು ಹೀಗೆ ಕುಲವೃತ್ತಿಯ ಸಾಮಾಜಿಕ ಸ್ಥಿತಿಗತಿಗಳನ್ನು ಧರ್ಮಪ್ರಸಾರಕರಂತೆ ಪ್ರಸರಣ ಮಾಡಲು ಈ ಯಾಚಕರಿದ್ದಾರೆ.

"ಬುರ್ರಕಥಾ ಈರಮ್ಮ ಹಾಡುವ ಹತ್ತು ಹನ್ನೊಂದು ಮಹಾಕಾವ್ಯಗಳಲ್ಲಿ ಬಹುತೇಕ ಕಾವ್ಯಗಳು ತೆಲುಗು ಕನ್ನಡದಲ್ಲೂ ಹಾಡುವಂತವು. ಏಕಕಾಲಕ್ಕೆ ಇವು ಆಂದ್ರದ ತೆಲುಗು ಜನಪದ ಮಹಾಕಾವ್ಯಗಳೂ ಹೌದು ಕನ್ನಡ ಜನಪದ ಮಹಾಕಾವ್ಯಗಳೂ ಹೌದು. ಕರ್ನಾಟಕದಲ್ಲಿ ಮಾತೃಭಾಷೆಯ ನೆಲೆಯಿಂದ ನೋಡಿದರೆ ಅವು ಬುಡ್ಲ ಜನಪದ ಮಹಾಕಾವ್ಯಗಳಾಗಿ ಬಿಡುತ್ತವೆ. ಈರಮ್ಮ ಇಲ್ಲೆಲ್ಲಾ ಬಹುದೊಡ್ಡ ಮೌಖಿಕ ಕಾವ್ಯಗಳ ಅನುವಾದಕಿಯಂತೆ ಕಂಡುಬರುತ್ತಾಳೆ. ಆಕೆಗೆ ಗೊತ್ತಿರುವ ಎರಡು ಮೂರು ಭಾಷೆಗಳಲ್ಲಿಯೂ ಈ ಕಾವ್ಯಗಳನ್ನು ತೂಗಿಸಬಲ್ಲಳು. ಭಾಷೆ ಪಂಡಿತರ ಸ್ವತ್ತು ಎನ್ನುವುದನ್ನು ಇಂಥ ಜನಪದ ವಕ್ತೃಗಳು ಎಂದೊ ಅಳಿಸಿ ಹಾಕಿದ್ದಾರೆ."

ಜನಪದ ಖಂಡಕಾವ್ಯ ದೀರ್ಘ ಪರಂಪರೆಯನ್ನುಳ್ಳ ಕಥೆಗಳನ್ನು ಒಳಗೊಂಡಿದೆ. ಮುಖ್ಯವಾಗಿ ಇವು ಹಾಡುವ ಪರಂಪರೆಯುಳ್ಳವು. ಜನಪದ ತ್ರಿಪದಿಗಳಿಗಿಂತ ದೀರ್ಘವಾಗಿಯೂ ಜನಪದ ಮಹಾಕಾವ್ಯಗಳಿಗಿಂತ ಕಡಿಮೆ ಪ್ರಮಾಣದ ಕಥಾನಕಗಳನ್ನು ಒಳಗೊಂಡಿವೆ. ಜನಪದ ಖಂಡಕಾವ್ಯಗಳಲ್ಲಿ ಹೆಣ್ಣು ಪ್ರಧಾನವಾಗಿ ಕಂಡು ಬರುತ್ತಾಳೆ. ಈ ಎಲ್ಲಾ ಕಥೆಗಳಲ್ಲಿ ಹೆಣ್ಣಿನ ಅಂತರಾಳದ ನೋವು, ಸಂಕಟ, ಅಪಮಾನಗಳು ಅಭಿವ್ಯಕ್ತಗೊಂಡಿವೆ. ಪುರುಷ ಪ್ರಧಾನ ಸಮಾಜ ರೂಪಿಸಿಕೊಂಡು ಬಂದ ಮೌಲ್ಯ, ನಂಬಿಕೆ, ಸಿದ್ಧಾಂತಗಳಿಗೆ ವ್ಯತಿರಿಕ್ತವಾಗಿ ಬದುಕದೇ ಇರುವಂತಹ ಪ್ರತಿಭಟಿಸದೇ ಇರುವಂತಹ ಸಂದರ್ಭವನ್ನು ಆ ಕಾಲದ ಸಮಾಜ ರೂಪಿಸಿಕೊಂಡಿದ್ದು ದುರಂತವಾಗಿ ಕಾಣುತ್ತದೆ. ಇಷ್ಟಾದರೂ ಈ ಕಥನಗಳ ಸ್ತ್ರೀಯರು ಒಂದಲ್ಲ ಒಂದು ಬಗೆಯಲ್ಲಿ ತಮ್ಮ ದಿಟ್ಟತನವನ್ನು ತೋರಿಸುತ್ತಾರೆ. ಅದು ಸಾಧ್ಯವಾಗದೇ ಇರುವಾಗ ತಮ್ಮ ಬಲಿತ್ಯಾಗಗಳನ್ನು ತೋರ್ಪಡಿಸುತ್ತಾರೆ.

ಉತ್ತರೆ, ಉತ್ತರೆಸೂಳೆಯಾಗುವುದು, ಈರೋಬಿ ಬೆಂಕಿಗೆ ಆಹುತಿಯಾಗುವುದು, ಕೆರೆಹೊನ್ನಮ್ಮ ಕೆರೆಗೆ ಹಾರವಾದದ್ದು, ನಾಗವ್ವ ಕೆಂಡಹಾರಿದ್ದು, ಹುಳಿಯಾರ ಕೆಂಚಮ್ಮ ಕೆರೆಗೆ ಹಾರವಾದದ್ದು, ಸಂಪನ್ನೆ, ಹಿರಿದಮ್ಮವ್ವ ಮತ್ತು ಕೊಂತ್ಯಮ್ಮ ಇವರೆಲ್ಲ ಸಾಮಾಜಿಕ ಕಟ್ಟುಪಾಡು, ಪಾಡುಗಳಿಗೆ ಬಲಿಯಾದಂತವರೇ. ಈ ಬಗೆಯ ಬಲಿದಾನಗಳನ್ನು ನಮ್ಮ ಜನಪದ ಸಮಾಜ ತನ್ನ ಕಣ್ಣೆದುರಿನ ಆದರ್ಶವೆಂಬಂತೆ ವೈಭವೀಕರಿಸುತ್ತಲೇ ಬಂದಿದೆ. ಊಳಿಗಮಾನ್ಯ ಕಾಲಘಟ್ಟದಲ್ಲಿ ಪಾಳೆಗಾರಿಕೆಗಳಂತಹ, ಸಾಮಂತಶಾಹಿ ವ್ಯವಸ್ಥೆಯಲ್ಲಿ ರೂಪುಗೊಂಡ ಈ ಬಗೆಯ ಎಲ್ಲ ಕಥನಕಗಳು ಮಾತೃಪ್ರಧಾನ ವ್ಯವಸ್ಥೆಯನ್ನು, ತಾಯಿ ಮೂಲ ಸಂಸ್ಕೃತಿಯನ್ನು ತಣ್ಣಗೆ ನಮ್ಮೆದುರು ತೆರೆದಿಡುತ್ತವೆ.

ಕನ್ನಡದ ಲಾವಣಿಗಳಿಗೂ ಜನಪದ ಖಂಡಕಾವ್ಯಗಳಿಗಿರುವ ಶಕ್ತಿಯೇ ಇದೆ. ಆದರೆ ಎಷ್ಟೋ ಲಾವಣಿಗಳು ಹೆಣ್ಣನ್ನು ರೋಚಕವಾಗಿ, ಮೋಹಕವಾಗಿ ವರ್ಣಿಸುತ್ತವೆಯೇ ಹೊರತು ಜನಪದ ಖಂಡಕಾವ್ಯಗಳಂತೆ ಅವಳ ಬಾಳಿನ ನೋವು, ಅಪಮಾನ ಸಂಕಟಗಳನ್ನು ಕೇಂದ್ರವಾಗಿರಿಸಿಕೊಂಡು ಬಿಡಿಸಿನೋಡುವ ವ್ಯವಧಾನವನ್ನು ತೋರುವುದಿಲ್ಲ. ಆದರೆ ಐತಿಹಾಸಿಕ ಹಾಗೂ ಸಮಕಾಲೀನ ಸಂಗತಿಗಳನ್ನು ಕಟ್ಟಿಕೊಡಲು ಈ ಲಾವಣಿ ಪ್ರಕಾರ ಒಳ್ಳೆಯ ಅಭಿವ್ಯಕ್ತಿಯಾಗಿದೆ ಎಂದಷ್ಟೇ ಹೇಳಬಹುದು. ಜನಪದ ಕಥನ ಕಾವ್ಯಗಳು ಶ್ರಮಿಕ ಹೆಣ್ಣುಗಳ ಕಥನಗಳಾಗಿವೆ. ಉತ್ತರೆ, ಈರೋಬಿ, ನಾಗವ್ವ, ಕೆಂಚವ್ವ, ಹಿರಿದಿಮ್ಮಿ, ಬಂಜೆಹೊನ್ನಮ್ಮ, ಬಡತನದ ಕೊಂತ್ಯಮ್ಮ ಕೆರೆಗೆ ಹಾರವಾದ ಭಾಗೀರಥಿಯ ಕತೆಗಳು ನಾಡಿನ ಮನೆ ಮಾತಾಗಿವೆ.

ಜನಪದ ಕಾವ್ಯಗಳಲ್ಲಿ ವಿವಿಧ ಕಸಬುಗಳನ್ನು ಆಧರಿಸಿದ ಕಾವ್ಯವನ್ನು ಬಿಡಿಬಿಡಿಯಾಗಿಯೇ ನೋಡಬಹುದಾಗಿದೆ. ಸುಮ್ಮನೆ ಪಟ್ಟಿಮಾಡಿದರೂ ಒಂದು ಊರಿನ ಸಮಸ್ತ ದುಡಿವ ಜನ ವರ್ಗಗಳಾದ ಬಡಿಗ, ಕಮ್ಮಾರ, ಕುಂಬಾರ,

ಕ್ಷೌರಿಕ, ಗಾಣಿಗ, ಅಗಸ, ಅಕ್ಕಸಾಲಿಗ, ಹೊಲೆಯ, ಚಮ್ಮಾರ, ರೈತ, ಕೂಲಿ, ಹೀಗೆ ದೊಡ್ಡ ಸಾಲೇ ಎದುರು ನಿಲ್ಲುತ್ತವೆ. ಇಲ್ಲಿ ರೈತನೊಬ್ಬ ತನ್ನ ಭಕ್ತಿಯನ್ನೂ ಮತ್ತು ದುಡಿಮೆಯನ್ನು ಹೀಗೆ ಬೆಸೆಯುತ್ತಾನೆ:

ಹಂತೀಯ ಹೊಡಿಬೇಕ ಸಂತಸ ಪಡಬೇಕ
ಹುಲಿಗೆಂಬ ಸೆಬುದ ನುಡಿಬೇಕ॥ ನಂ ಬಸವ
ಪಾದಕ್ಕೆ ಸೆರಣು ಮಾಡ್ಬೇಕ.[೪]

ಕುಳಿತವನಿಗೆ ಹೊನ್ನು ಬೆಲೆಯುಳ್ಳದ್ದಾಗಿ ಕಂಡರೆ ದುಡಿವವನಿಗೆ ಮಣ್ಣೆ ಬೆಲೆಯುಳ್ಳದ್ದಾಗುತ್ತದೆ.

ಮಣ್ಣನ್ನು ನಂಬಿ ಮಣ್ಣಿಂದ ಬದುಕೋಣ
ಮಣ್ಣೆನಗೆ ಮುಂದೆ ಹೊನ್ನ॥ ಅಣ್ಣಯ್ಯ
ಮಣ್ಣೆ ಲೋಕದಲಿ ಬೆಲೆಯಾದ್ದು.[೫]

ದುಡಿವ ಮಹಿಳೆಗೆ ಕೆಲಸಗಳು ಹೊರೆಯಾಗಲ್ಲ ಬದಲಿಗೆ ಅವನ್ನೇ ಅವರು ದೈವವೆಂದು ಭಾವಿಸುತ್ತಿದ್ದರು. ತ್ರಿಪದಿಗಳಂತೂ ಅಂತಹ ಹತ್ತಾರು ಪ್ರಸಂಗಗಳನ್ನು ಸೊಗಸಾಗಿ ನೀಡುತ್ತವೆ.

ಬೀಸಾಕ ಕುಂತಾರ ಬ್ಯಾಸರಿಕಿ ನಮಗಿಲ್ಲ
ಸೂಸಿ ಹರಿದಾವ ತವರಿಗೂ॥ ನಮಪದ
ಕೂಸಿಗೂ ಬಂತು ಸವಿನಿದ್ದಿ॥
ಬೀಸುವ ಪದ ಚಂದ ಕೂಸಿನ ದನಿಚಂದ
ನವಿಲಾಡೊ ನಮ್ಮ ವನಚಂದ॥ ಚನ್ನಿರಗ
ಬೆವರಿನ ಗಂಧ ಬಲುಚಂದ.[೬]

ಜನಪದರಿಗೆ ಸೌಂದರ್ಯ ಪ್ರಜ್ಞೆಯ ಜತೆಗೇ ದುಡಿವ ಪ್ರಜ್ಞೆಯೂ ಇತ್ತು. ಆಕೆ ಒಂದೆಡೆ ನವಿಲಿನ ಚಂದ ಕಂಡರೆ ಮತ್ತೊಂದೆಡೆ ಬೆವರಿನ ಗಂಧವನ್ನು ಬಲುಚಂದ ಎನ್ನುತ್ತಾಳೆ. ಬಿಕ್ಕಿ ಬಿಕ್ಕಿ ಅತ್ತರೆ ಬೀಸುವಕಲ್ಲು ತಿರುಗೀತೆ? ಎಂದು ಪ್ರಶ್ನಿಸುತ್ತಲೇ "ಅನಾಥರ ಬದುಕಿಗೆ ಆಕಾಶವೇ ಕಾವಲು' ಎಂಬಂತಹ ಗಾದೆ ಮಾತುಗಳನ್ನು ಸೃಷ್ಟಿಸುತ್ತಾಳೆ.

ಶಿಷ್ಟ ಕಾವ್ಯ ಪರಂಪರೆ:

ಪಂಪ: ಪ್ರಾಚೀನ ಕಾವ್ಯವು ಮೇಲುನೋಟಕ್ಕೆ ಸಂಪ್ರದಾಯದ ಕಾವ್ಯವಾಗಿ ಕಂಡರೂ ಆದಿಕವಿ ಪಂಪನಲ್ಲೇ ವಿಚಾರವಾದಿ ದೃಷ್ಟಿಕೋನವನ್ನು ಕ್ರಾಂತಿಕಾರಿ

ಚಿಂತನೆಗಳನ್ನ ಕಾಣಬಹುದಾಗಿದೆ. ಪಂಪನ ವಿಕ್ರಮಾರ್ಜುನ ವಿಜಯ ಅರಸನ ಕಾವ್ಯವಾದರೂ ಅದರ ಒಳತೋಟಿಯಲ್ಲಿ ಸಾಮಾನ್ಯರ, ಅಸಹಾಯಕರ, ಕಡೆಗಣಿಸಲ್ಪಟ್ಟವರ ಪರವಾದ ಪ್ರತಿಕ್ರಿಯೆಗಳಿವೆ. ರಾಜನ ಆಸ್ಥಾನವೇ ಒಂದು ರೀತಿಯಲ್ಲಿ ನಾನಾ ಉದ್ಯೋಗಗಳಿಗೆ ಸ್ಥಾನ ನೀಡುವ ಕಛೇರಿ. ಅಲ್ಲಿ ಒಂದೆಡೆ ಬೊಕ್ಕಸದ, ಸೈನ್ಯದ, ಆಡಳಿತದ ಅಧಿಕಾರಿ ವರ್ಗಗಳು ಕಂಡುಬಂದರೆ ಮತ್ತೊಂದೆಡೆ ಸಾಮಾನ್ಯರಾದ ನರ್ತಕಿಯರು, ದ್ವಾರಪಾಲಕರು, ಚಾಮರದವರು, ಹಡಪದವರು, ಕನ್ನಡಿಯವರು, ಕಳಶದವರು, ಪಂಜಿನವರು, ವಾದ್ಯದವರು, ಗಾಯಕರು, ವಂದಿಮಾಗಧರು ಮೊದಲಾದವರ ದೊಡ್ಡಪಡೆಯೇ ಇದೆ. ಇಷ್ಟೇ ಅಲ್ಲ ಅಲ್ಲಿ ಕೃಷಿಯಿದೆ. ವ್ಯಾಪಾರವಿದೆ. ಬೇಟೆಯಿದೆ. ಪಂಪ ಎಲ್ಲವನ್ನೂ ಸಂಪ್ರದಾಯದಂತೆ ಒಪ್ಪಿಕೊಳ್ಳದೆ "ಮನುಷ್ಯ ಜಾತಿ ತಾನೊಂದೆ ವಲಂ" ಎಂದು ಪ್ರತಿಕ್ರಿಯಿಸಿದ್ದಾನೆ. ಕುಲದ ಪ್ರಶ್ನೆಯನ್ನ ಕರ್ಣ, ದ್ರೋಣ ಮತ್ತು ಭೀಷ್ಮ ಪ್ರಸಂಗಗಳಲ್ಲಿ. ಸತ್ಯಂತಪ ಋಷಿಯ ಬಳಿ ದುರ್ಯೋಧನನ ಮುಖವಾಡವನ್ನು ಕಳಚಿದ್ದಾನೆ. ಮೇಲ್ವರ್ಗದ ಧೋರಣೆಯನ್ನ ಶಲ್ಯ, ದುರ್ಯೋಧನರ ಸಂಭಾಷಣೆಯಲ್ಲಿ ಬಿಚ್ಚಿ ತೋರಿಸಿದ್ದಾನೆ. ಮುಖನೋಡಿ ಮಣೆಹಾಕುವ ರೀತಿಯನ್ನ ಭೀಷ್ಮಕರ್ಣರ ಪಟ್ಟದ ಪ್ರಸಂಗದಲ್ಲಿ ತಂದಿದ್ದಾನೆ. ತಾನು ಅರಸೊತ್ತಿಗೆಯನ್ನು ಒಪ್ಪುವುದಿಲ್ಲ ಅದರ ಕಷ್ಟವನ್ನು ಅದರ ಮಿತಿಗಳನ್ನು ಎತ್ತಿ ತೋರಿದ್ದಾನೆ. ಹಾಗೆಯೇ ಆತ ಮೊದಲ ಸಮಾಜದ ಭಿನ್ನ ಭಿನ್ನ ಮುಖತೋರಿದ ಕವಿ ಎನ್ನಬಹುದು.

"ಪಂಪ ಶ್ರೀಮಂತ ಜೀವನದಲ್ಲಿ ಬಾಳಿದವನು. ಒಡೆಯನ ಸ್ನೇಹಿತನಾಗಿದ್ದನೇ ಹೊರತು ಯಾರಿಗೂ ತಲೆಬಾಗಿ ದೇಹಿ ಎನ್ನದ ಅಭಿಮಾನಿ. ಅವನೇ ಒಂದೆಡೆ ಹೇಳಿದ್ದಾನೆ. "ಪೆರರೀ ಪರರ್ ಮಾಡುವುದೊಂ ಪೆರರಿಂದ ಅಪ್ಪುದೊಂ" ಜೊತೆಗೆ ಆವಾಹದೊಳರಾತಿ ನಾಯಕರ ಪಟ್ಟನೆ ಪಾರಿಸೆ ಸಂದ ಪೆಂಪು" ಸೇರಿ ಕವಿ ಮಾತ್ರವಲ್ಲದೆ ಕಲಿಯೂ ಆಗಿದ್ದನು. ಕವಿ ಜೀವನಕ್ಕೆ ವ್ಯಕ್ತಿಜೀವನ ಒಂದು ಮುಖವಾದರೆ ಅವನ ಕೃತಿ ಜೀವನ ಮತ್ತೊಂದು ಮುಖ. ನಿಜವಾದ ಕವಿಯಲ್ಲಿ ಈ ಎರಡೂ ಕಾವ್ಯದ ರೀತಿ ರಸಗಳಂತೆ ಅಭಿನ್ನವಾಗಿ ಅನುಭವಕ್ಕೆ ಬರುವುದುಂಟು."

ಪಂಪ ಮಾನವ ಪ್ರಕೃತಿಯಲ್ಲಾಗಲೀ ಲೋಕ ಪ್ರಕೃತಿಯಲ್ಲಾಗಲೀ ತುಂಬು ಅನುಭವವನ್ನು ಪಡೆದವನು. ಮಾನವ ನಿಜವಾದ ಮಾನವನಾಗಬೇಕಾದರೆ ಏನೇನು ಗುಣಗಳಿರಬೇಕು ಎಂಬುದನ್ನು ಕುರಿತು ಪಂಪ ಹೀಗೆ ಹೇಳುತ್ತಾನೆ.

> "ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
> ಳ್ಗಾಗರವಾದ ಮಾನಸರೆ ಮಾನಸರ್"[7]

[illegible]

ಜೀವನದಲ್ಲಿ ಪ್ರಥಮಸ್ಥಾನ ತ್ಯಾಗಕ್ಕೆ ಆನಂತರ ಭೋಗ, ತಾನು ಪಡುವ ಸುಖವನ್ನು ಹತ್ತು ಜನಕ್ಕೆ ಹಂಚಿ ತಾನು ಭೋಗಿಸುವ ತ್ಯಾಗ ಮನೋಭಾವ ಮೊದಲು ಇವರೊಡನೆ 'ಅಕ್ಕರದ' ಅರಿವೂ ಬೇಕು. ಹಿರಿಯರು ಬರೆದ ಕಾವ್ಯಶಾಸ್ತ್ರ ಇತ್ಯಾದಿಗಳನ್ನು ತಿಳಿಯುವ ವಿದ್ಯೆಯೂ ಮಾನವನಿಗೆ ಅಗತ್ಯ. ಇಷ್ಟಾದರೆ ಸಾಲದು. 'ಗೇಯದ' ಅಂದರೆ ಸಂಗೀತದ ಅಭಿರುಚಿಯೂ ಇರಬೇಕು. ಇವೆಲ್ಲ ಇದ್ದರೂ ಮನುಷ್ಯನನ್ನು ನಿಜವಾದ ಮಾನವನನ್ನಾಗಿ ಮಾಡುವ ಮುಖ್ಯವಾದ ಅಂಶ 'ಗೊಟ್ಟಿಯ ಲಂಪು' ಸಹೃದಯರ, ಸಜ್ಜನರ ಗೋಷ್ಠಿಯಿಂದ ಉಂಟಾಗುವ ಸಂತೋಷ ಇದರಮೇಲೆ ತನ್ನನ್ನು ತಾನು ಕಾಪಾಡಿಕೊಳ್ಳುವ ಶಕ್ತಿ ಮಾತ್ರವಲ್ಲ ಬಂದು ಮರೆಹೊಕ್ಕವರನ್ನು ಕಾಯುವ ತ್ಯಾಗ ವೀರತೆಯೂ ಬೇಕು. ಹೀಗಿದ್ದ 'ಮಾನಸರೇ ಮಾನೆಸರ್' ಇಲ್ಲದಿದ್ದರೆ?.. ಅಜಾಂಡವೆಂಬು ದೊಂತ್ತಿಯ ಪೆಣ್ಲೊಳಿರ್ಪ ಪುಳುವಲ್ಲದೆ ಮಾನಸನೋ?'' ಆದುದರಿಂದ ಮಾನವ ನಿಜವಾದ ಮಾನವನಾಗಬೇಕಾದರೆ, ರಸಿಕತೆ, ಧೀರತೆ, ಧಾರ್ಮಿಕತೆ ಮೂರೂ ಮುಪ್ಪುರಿಗೊಳ್ಳಬೇಕು. ಬದುಕು ತುಂಬಬೇಕು."[೨]

ವಡ್ಡಾರಾಧನೆ

ಕನ್ನಡದ ಮೊದಲ ಗದ್ಯ ಗ್ರಂಥವಾದ ವಡ್ಡಾರಾಧನೆಯಲ್ಲೂ ಭಿನ್ನ ವರ್ಗಗಳಾದ ಅರಸು, ಒಡೆಯ, ಸಿರಿವಂತರು ಮತ್ತು ಜನಸಾಮಾನ್ಯ ವರ್ಗಗಳಾದ ವೃತ್ತಿಪರರು, ರೈತರು, ಕೂಲಿಯಾಳು, ಜೀತದಾಳುಗಳನ್ನು ಕಾಣಬಹುದು. ಕ್ರೌರ್ಯ, ನಯವಂಚಕತನ, ಮೋಸ, ಕಪಟಗಳನ್ನು ಕಾಣಬಹುದು. "ಜೈನ ಆಸ್ತಿಕತೆಯನ್ನೇ ಏಕೈಕ ಮೂಲ ಉದ್ದೇಶವನ್ನಾಗಿಟ್ಟುಕೊಂಡ ವಡ್ಡಾರಾಧನೆ ಗ್ರಂಥದಲ್ಲಿ ಕಥೆಯೊಂದರ ನಡುವೆ ಕಾಣುವ ಕೆಲವು ಸಂಸ್ಕೃತ ಪದ್ಯಗಳ ಪ್ರಕಾರ ಹಿಂದಿನ ಜನ್ಮದಲ್ಲಿ ಪಾಪಮಾಡಿದವನು ಈಗ ಕುರೂಪಿ, ಭಾಗ್ಯಹೀನ, ನೀಚ, ಕೆಟ್ಟ ಜಾತಿಯವ, ಹಸಿವು ಬಾಯಾರಿಕೆಗಳಿಂದ ಪೀಡಿಸಲ್ಪಟ್ಟವನು, ರೋಗಿ, ಮನೋರೋಗಿ, ಸೇವಕ, ಅತಿ ಹಗುರ ಸಾವಿಗೆ ಒಳಗಾಗುವ, ದುಃಖಿ, ಕುರುಡ, ಕುಂಟ, ಮೂಗ, ಕುಳ್ಳ, ದಡ್ಡ, ಹುಬ್ಬಲ್ಲಿನವ, ಒಕ್ಕಣ್ಣ, ಹಾದರಕ್ಕೆ ಹುಟ್ಟಿದವ, ಕುಷ್ಟರೋಗಿ, ಚರ್ಮರೋಗ ಪೀಡಿತ– ಇತ್ಯಾದಿ ತೊಂದರೆಗಳಿಗೆ ಒಳಗಾಗಿ ಹುಟ್ಟುವನು. ಹಾಗೆಯೇ ಹಿಂದಿನ ಜನ್ಮದಲ್ಲಿ ಪುಣ್ಯ ಮಾಡಿದವನು ಈ ಜನ್ಮದಲ್ಲಿ ಸೌಂದರ್ಯ, ಉತ್ತಮಕುಲ, ಬಲ, ಕೀರ್ತಿ, ಆಯುಸ್ಸು, ಹೆಣ್ಣು, ಐಶ್ವರ್ಯ, ಸುಖ, ಮನೆ, ವಾಹನ, ಪಲ್ಲಕ್ಕಿ, ಆನೆ, ಇತ್ಯಾದಿಯಾದವುಗಳಿಗೆಲ್ಲ ಒಡೆಯನಾಗುವನು."[೩]ಎಂದೆಲ್ಲಾ ವಿವರಗಳಿವೆ.

ವಚನಕಾರರು

ವೃತ್ತಿಯೇ ದೇವರಾದ ಪರಂಪರೆಯ ಪಾಶುಪತಿ ಪಶುಪಾಲಕ ವೃತ್ತಿಗೂ ರುದ್ರನು ಕೃಷಿಕ ವೃತ್ತಿಗೂ ದೈವವಾಗಿದ್ದಾನೆ. ಕಾಲಾಂತರಗಳಲ್ಲಿ ಕಾಡು ಸಂಸ್ಕೃತಿ

ಕಳೆದು ನಾಡು ಸಂಸ್ಕೃತಿ ಬೆಳೆದಂತೆಲ್ಲಾ ಬುಡಕಟ್ಟಿನ ಮಾತೃಪ್ರಧಾನ ವ್ಯವಸ್ಥೆ ಬದಲಾಗಿ ಕುಟುಂಬಗಳ ಪಿತೃಪ್ರಧಾನ ಸಂಸ್ಕೃತಿ ಬಂದಿತು. ಅನಂತರದಲ್ಲಿ ಊಳಿಗಮಾನ್ಯ ವ್ಯವಸ್ಥೆ ಪ್ರಭು ಪರಂಪರೆಗಳು ಹುಟ್ಟಿ ದುಡಿವ ವರ್ಗಗಳಲ್ಲಿ ಏರುಪೇರಾಗಿ ಕೆಲವರನ್ನ ಕೀಳೆಂತಲೂ ಕೆಲವರನ್ನು ಮೇಲೆಂತಲೂ ವಿಭಜಿಸಲಾಯಿತು. ಬುದ್ಧಿ ಪ್ರಧಾನ ದುಡಿಮೆಯನ್ನು ಮೇಲೆಂದಲೂ, ಶ್ರಮ ಪ್ರಧಾನ ದುಡಿಮೆಯನ್ನು ಕೀಳೆಂತಲೂ ಪರಿಗಣಿಸಲಾಯಿತು. ಬರು ಬರುತ್ತ ಈ ವೃತ್ತಿಗಳೇ ಅಪಾಯಕಾರಿ ಜಾತಿ ವರ್ಗಗಳಾಗಿ, ವರ್ಣವ್ಯವಸ್ಥೆಗಳಾಗಿ ಬೆಳೆದುನಿಂತವು. ಇಂತಹ ಅಪಾಯಕಾರಿ ವ್ಯವಸ್ಥೆಯ ವಿರುದ್ಧ ಬುದ್ಧನ ಕಾಲದಿಂದಲೂ ಪ್ರಶ್ನೆ, ಪ್ರತಿಭಟನೆ, ಪರ್ಯಾಯ ಚಿಂತನೆಗಳು ನಡೆದಿವೆ. ಈ ನೆಲೆಯಲ್ಲಿ ನಮ್ಮ ವಚನಕಾರರು ಪ್ರಮುಖರು. ಇವರು ಕುಲಶ್ರೇಷ್ಠತೆಗಳನ್ನು ಛಿದ್ರಿಸುತ್ತ "ವ್ಯಾಸ ಬೋಯತಿಯ ಮಗ, ಮಾರ್ಕಾಂಡೇಯ ಮತಂಗಿಯ ಮಗ, ಮಂಡೋದರಿ ಕಪ್ಪೆಯ ಮಗಳು, ಕುಲದಿಂದ ಮುನ್ನೇವಾದಿರಿಂಭೋ! ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿಲ್ಯನೆಂಬ ಋಷಿ ಮೂರು ಭುವನವನರಿಯೆ ನಾವಿದ ಕಾಣಿಭೋ. ನಮ್ಮ ಕೂಡಲ ಸಂಗನ ವಚನ ಎಂತಂದುದು! ಶ್ವಪಚೋಪಿಯಾದರೇನು ಶಿವಭಕ್ತನೇ ಕುಲಜನು" ಎನ್ನುತ್ತಾರೆ. ವಚನಕಾರರು ವೃತ್ತಿ ಮೂಲವ ಜಾತಿಪದ್ಧತಿಯನ್ನ ಖಂಡಿಸುತ್ತಾರೆ. ಶರಣರಿಗೆ ಕಾಯಕವೆಂದರೆ ಅದೊಂದು ಸತ್ಯಶುದ್ಧಕ್ರಿಯೆ. ಅದೊಂದು ವೃತ್ತಿ ಎಂಬ ಭಾವಕ್ಕಿಂತಲೂ "ಸಾಧನ" ಎಂಬ ಭಾವವಾಗಿತ್ತು.

ಇಲ್ಲಿ ಅಕ್ಷರದತ್ತ ಮುಖ ಮಾಡಿದವರು ಕುಳಿತು ಉಣ್ಣುವ ಪ್ರವೃತ್ತಿಯವರಲ್ಲ. ಅವರು ಶ್ರಮಿಕರು. ಮುಕ್ಕಾಲು ಪಾಲು ಕೆಳವರ್ಗದವರು. ೧೨ನೇ ಶತಮಾನ ಒಂದುರೀತಿಯಲ್ಲಿ ವೃತ್ತಿಯ ಪುನರ್ ಮೌಲ್ಯೀಕರಿಸಿದ ಕಾಲವೆನ್ನಬಹುದು. ಬಸವಣ್ಣ ಹೇಳುವ ವಚನವನ್ನು ನೋಡಿ:

> "ಸೆಟ್ಟಿಯೆಂಬೆನೆ ಸಿರಿಯಾಳನ?
> ಮಡಿವಾಳನೆಂಬೆನೆ ಮಾಚಯ್ಯನ
> ಡೋಹಾರ ನೆಂಬೆನೆ ಕಕ್ಕಯ್ಯನ?
> ಮಾದಾರ ನೆಂಬೆನೆ ಚನ್ನಯ್ಯನ
> ಆನು ಹಾರವನೆಂದರೆ ಕೂಡಲ ಸಂಗಯ್ಯ ನಗುವನಯ್ಯ"

ಹೀಗೆ ವೃತ್ತಿ ಗೌರವಿಸುವಾಗಲೂ ಆಸಮಾಜದ ಅಂತರಂಗದೊಳಗೆ ಕೀಳು ವೃತ್ತಿಗಳು ಭದ್ರವಾಗಿದ್ದವು ಎಂಬುದಕ್ಕೆ ಬಸವಣ್ಣನವರು ತೋರಿಸಿದ್ದಾರೆ.

ಆ ಕಾಲದ ಕ್ರೌರ್ಯ ಹೇಗಿತ್ತೆಂಬುದಕ್ಕೆ ಉದಾಹರಣೆಯಂತೆ ಆಯ್ದಕ್ಕಿ ಲಕ್ಕಮ್ಮನ ವಚನವಿಂತಿದೆ:

"ಒತ್ತೆಯ ಹಿಡಿದು ಮತ್ತೊತ್ತಿಯ ಹಿಡಿಯೆ
ಹಿಡಿದಡೆ ಬೆತ್ತಲೆ ನಿಲಿಸಿ ಕೊಲುವರಯ್ಯಾ
ವ್ರತಹೀನನರೆದು ಬೆರೆದಡೆ
ಕಾದ ಕತ್ತಿಯಲ್ಲಿ ಕೈ, ಕಿವಿ, ಮೂಗಕೊಯ್ವರಯ್ಯ
ಒಲ್ಲೆ ನೊಲ್ಲೆ, ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ.೩

ಹನ್ನೆರಡನೆಯ ಶತಮಾನದಿಂದ ಈಚೆಗೆ ಇಡೀ ಕರ್ನಾಟಕ ಚರಿತ್ರೆಯಲ್ಲಿ ಜಾತಿ, ವರ್ಗ, ಸಂಬಂಧಗಳೊ ಮೊದಲಾದ ಜನಜೀವನದ ಮೂಲ ಅಡಿಪಾಯವನ್ನು ಬದಲಿಸುವ ಮುಖ್ಯ ಹೋರಾಟಗಳು ನಡೆಯಲಿಲ್ಲ. ಈ ವರ್ಷಗಳಲ್ಲಿ ಕವಿದ ಜಡತೆಯಿಂದಾಗಿ ಕಾವ್ಯ ಭಾಷೆ ಕೂಡಾ ಮೃತಾವಸ್ತೆಗೆ ಬಂದಿತು. ಈ ಕಾಲದ ಮಹತ್ವದ ಕವಿ ಕುಮಾರವ್ಯಾಸನ ಕಾವ್ಯ "ಅರಸುಗಳಿಗಿದು ವೀರ ದ್ವಿಜರಿಗೆ ಪರಮ ವೇದದ ಸಾರ.... ಆದರೆ ಪಾಮರರಿಗೆ? ಎಂಬ ಪ್ರಶ್ನೆಗೆ ಉತ್ತರ ನೀಡದಾಗಿದೆ. ಪ್ರತಿಕ್ರಿಯೆಯಾಗಿ ಹರಿಹರ, ರಾಘವಾಂಕ, ಸರ್ವಜ್ಞರ ಕಾವ್ಯವನ್ನು ನೋಡಬಹುದು.

ಶರಣರ ಕಾಯಕ ಸಿದ್ಧಾಂತದ ಕೆಲ ಮುಖ್ಯಾಂಶಗಳು:

೧. ಸೋಮಾರಿತನದ ಜೀವನವನ್ನು ನಡೆಸುವುದು ಅನ್ಯಾಯವಾಗಿ ಹಣ ಸಂಪಾದಿಸುವುದು ಹೇಯಕರ. ಆದ್ದರಿಂದ ಪ್ರತಿಯೊಬ್ಬನೂ ಒಂದು ವೃತ್ತಿಯನ್ನ ಅನುಸರಿಸಬೇಕು.

೨. ತನ್ನ ಕೆಲಸವು ಎಷ್ಟು ಹಣವನ್ನ ಪಡೆಯಲರ್ಹವೋ ಅಷ್ಟನ್ನ ಮಾತ್ರ ತಾನು ಸ್ವೀಕರಿಸಬೇಕು.

೩. ದುಡಿದು ಗಳಿಸಿದ್ದರಲ್ಲಿ ಬೇಕಾದಷ್ಟು ಇಟ್ಟುಕೊಂಡು ಉಳಿದದ್ದನ್ನು ಸಮಾಜ ಪ್ರಗತಿಗಾಗಿ ವಿನಿಯೋಗಿಸುವ ಸಮರ್ಪಣಾಭಾವ ಹಾಗೂ ಸರಳಜೀವನ ನಡೆಸುವುದು.

೪. ಯಾವ ವ್ಯಕ್ತಿಯ ಕಾಯಕವೂ ಮೇಲಲ್ಲ ಎಲ್ಲವೂ ಗೌರವಯುತವೇ ಎಂಬ ಶ್ರಮಗೌರವ

೫. ವೃತ್ತಿ ನಿಷ್ಠೆಯೇ ದೈವಪೂಜೆ.

೬. ಕಾಯಕದಲ್ಲಿ ವಿಶ್ರಾಂತಿಯೆಂಬುದಿಲ್ಲ. ಕಾಯಕದ ಬದಲಾವಣೆಯೇ ಅದರ ವಿಶ್ರಾಂತಿ. ಕಾಯಕವೆಂಬುದು ಸಾಮಾಜಿಕ ಬದ್ಧತೆ, ಸಾಮಾಜಿಕ ಹೊಣೆಗಾರಿಕೆ ಮತ್ತು ಸಾಮಾಜಿಕ ನ್ಯಾಯಗಳನ್ನು ಪ್ರತಿಪಾದಿಸುತ್ತದೆ.

ಸ್ಥೂಲವಾಗಿ ಸಾಮಾನ್ಯ ವಚನಕಾರರು ಅವರ ಕಾಯಕಗಳನ್ನು ಈ ರೀತಿ ಪಟ್ಟಿ ಮಾಡಬಹುದು.

೧. ದೇವರ ದಾಸಿಮಯ್ಯ	:	ನೇಯ್ಗೆ
೨. ನುಲಿಯ ಚಂದಯ್ಯ	:	ಹಗ್ಗ ಹೊಸೆಯುವುದು
೩. ಸೂಜಿಕಾಯಕದ ರಾಮಿತಂದೆ	:	ಬಟ್ಟೆ ಹೊಲಿಯುವುದು
೪. ಮಾದಾರ ಚೆನ್ನಯ್ಯ	:	ಪಾದರಕ್ಷೆ ತಯಾರಿ
೫. ಹಡಪದ ಅಪ್ಪಣ್ಣ	:	ಕ್ಷೌರಿಕ
೬. ಕುಂಬಾರ ಗುಂಡಯ್ಯ	:	ಗಡಿಗೆ ಮಾಡುವವ
೭. ಮೇದಾರ ಕೇತಯ್ಯ	:	ಬಿದಿರು ಸಾಮಾಗ್ರಿ ತಯಾರಿಕೆ
೮. ಬಾಚಿ ಕಾಯಕದ ಬಸಣ್ಣ	:	ಬಡಗಿ
೯. ಅಂಬಿಗರ ಚೌಡಯ್ಯ	:	ದೋಣಿ ನಡೆಸುವುದು
೧೦. ಒಕ್ಕಲು ಮುದ್ದಯ್ಯ	:	ವ್ಯವಸಾಯ
೧೧. ಕಾಮಾಟಕ ಭೀಮಣ್ಣ	:	ಕೂಲಿ
೧೨. ಗಜೋಶ ಮಸಣಯ್ಯ	:	ಆನೆ ಪಳಗಿಸುವುದು
೧೩. ವೀರಗೊಲ್ಲಾಳ	:	ಕುರಿ ಕಾಯುವುದು
೧೪. ತುರುಗಾಹಿ ರಾಮಣ್ಣ	:	ದನ ಕಾಯುವುದು
೧೫. ಗಾಳದ ಕಣ್ಣಪ್ಪ	:	ಮೀನುಗಾರ
೧೬. ಪಾಕದ ಭೀಮಣ್ಣ	:	ಅಡುಗೆ ಮಾಡುವುದು
೧೭. ಅಗ್ಘವಣಿ ಹೊನ್ನಯ್ಯ	:	ನೀರು ತರುವುದು
೧೮. ಶಿವಶಂಕರಯ್ಯ	:	ಕಸಗುಡಿಸುವುದು
೧೯. ಚಾಂಗು ಬಲ್ಲಯ್ಯಾ	:	ಬೆಳಗಿನ ಜಾವ ಭಕ್ತರನ್ನು ಎಚ್ಚರಿಸುವುದು
೨೦. ತಂಗಟೂರು ಮಾರಯ್ಯ	:	ದ್ವಾರಪಾಲಕ
೨೧. ವೈದ್ಯ ಸಂಗಣ್ಣ	:	ವೈದ್ಯ
೨೨. ಆದಯ್ಯ	:	ವ್ಯಾಪಾರ
೨೩. ಎಲೆಗಾರ ದೇವಯ್ಯ	:	ಎಲೆ ಮಾರುವುದು

೨೪. ಚಿಕ್ಕ ದೇವಯ್ಯ	:	ಪಾತ್ರೆ ಮಾರುವುದು
೨೫. ಪುಷ್ಪದಸೋಮಯ್ಯ	:	ಹೂ ಮಾರುವುದು
೨೬. ಮೋಳಿಗೆ ಮಾರಯ್ಯ	:	ಕಟ್ಟಿಗೆ ಮಾರುವುದು
೨೭. ಸಪ್ಪೆಯಲ್ಲಮಮೇವ	:	ಕುಳ್ಳು ಮಾರುವ ಕಾರ್ಯ
೨೮. ಹುಲ್ಲು ಹೊರೆ ಬಂಕಣ್ಣ	:	ಹುಲ್ಲು ಮಾರುವುದು
೨೯. ಹೊನ್ನ ಕಾಯಕದ ಬೊಮ್ಮಯ್ಯ	:	ಚಿನ್ನದ ವ್ಯಾಪಾರ
೩೦. ರತ್ನದ ಮಾಚಯ್ಯ	:	ರತ್ನ ಮಾರುವುದು
೩೧. ಘಟ್ಟಿವಾಳ ಮುದ್ದಣ್ಣ	:	ಪರಿಮಳದ್ರವ್ಯ ವ್ಯಾಪಾರಿ
೩೨. ಸುಂಕದ ಬಂಕಣ್ಣ	:	ಸುಂಕಿಗ
೩೩. ವಚನ ಭಂಡಾರಿಶಾಂತರಸ	:	ಗ್ರಂಥಾಧಿಕಾರಿ
೩೪. ಶಂಕರಿ ಕಕ್ಕಯ್ಯ	:	ಶಂಕರಿ ವಾದ್ಯ ನುಡಿಸುವುದು
೩೫. ಚನ್ನ ಬಸವಣ್ಣ	:	ಶಿವಾನುಭವ
೩೬. ಸಕಲೇಶ ಮಾದರಸ	:	ವೀಣಾವಾದನ
೩೭. ಬೊಮ್ಮಯ್ಯ	:	ಕಿನ್ನರಿ ನುಡಿಸುವುದು
೩೮. ಮಾರಯ್ಯ	:	ಡಕ್ಕೆ ನುಡಿಸುವುದು
೩೯. ಕಲಕೇತಯ್ಯ	:	ಕಿಳ್ಳೇಕೇತರ ಕಲೆ ಪ್ರದರ್ಶನ
೪೦. ಗೋರಾಂಟ	:	ಕೋತಿ ಆಡಿಸುವವ
೪೧. ನಗೆಮಾರಿತಂದೆ	:	ಜನರನ್ನ ನಗಿಸುವುದು
೪೨. ಚೌಡಯ್ಯ	:	ಬಹುರೂಪಿ
೪೩. ಕಾಮಿ ದೇವ	:	ತಳವಾರ
೪೪. ಕನ್ನ ಮಾರಿತಂದೆ	:	ಕಳ್ಳತನ
೪೫. ರಾಯಸದ ಮಂಚಣ್ಣ	:	ಪತ್ರ ಮುಟ್ಟಿಸುವವ
೪೬. ಆಯ್ದಕ್ಕಿ ಮಾರಯ್ಯ	:	ಉಗ್ರಾಣದಲ್ಲಿ ಅಕ್ಕಿ ಆರಿಸುವುದು
೪೭. ಸಂಬೋಳಿ ನಾಗಿದೇವ	:	ಕೂಗುವ ಕಾಯಕ
೪೮. ಗಾಣಿಗರ ಕಪ್ಪಣ್ಣ	:	ಎಣ್ಣೆ ತಗೆಯುವುದು
೪೯. ಹೆಂಡದ ಮಾರಯ್ಯ	:	ಹೆಂಡ ಮಾರುವುದು

ಶಿವ ಶರಣೆಯರು ಹಾಗೂ ಅವರ ಕಾಯಕ

೧. ಅಮ್ಮುಗೆರಾಯಮ್ಮ	:	ನೇಯ್ಗೆ
೨. ಕಾಲ ಕಣ್ಣಿಯ ಕಾಮಮ್ಮ	:	ಹಗ್ಗ ಹೊಸೆಯುವುದು
೩. ಕೊಟ್ಟಣದ ಕಿಮ್ಮವ್ವೆ	:	ಕುಟ್ಟುವ ಕೆಲಸ
೪. ಕೇತಲಾ ದೇವಿ	:	ಗಡಿಗೆ ಮಾಡುವ ಕೆಲಸ
೫. ಧೂಪದ ಗೊಗ್ಗವ್ವೆ	:	ಧೂಪ ತಯಾರಿ
೬. ಮಹಾದೇವಿ	:	ಕಟ್ಟಿಗೆ ಮಾರುವುದು
೭. ರಾಯಮ್ಮ	:	ಓಲೆತಯಾರಿ
೮. ಸತ್ಯಕ್ಕ	:	ಕಸ ಗುಡಿಸುವುದು
೯. ಸಂಕವ್ವೆ	:	ವೇಶ್ಯಾವೃತ್ತಿ
೧೦. ನೀಲಾಂಬಿಕೆ	:	ಶಿವಾನುಭವ
೧೧. ಶಿವಮಾಯಿದೇವಿ	:	ಪುರಾಣ ಹೇಳುವುದು
೧೨. ಗಂಗಾಂಬಿಕೆ ಅಕ್ಕ ನಾಗಮ್ಮ	:	ಶಿವತತ್ವ ಪ್ರಸಾರ.

ಹರಿಹರ–ರಾಘವಾಂಕ:

"ಸಂಪ್ರದಾಯಕ್ಕೂ ಪ್ರಯೋಗಶೀಲತೆಗೂ ನಡೆಯುವ ಘರ್ಷಣೆಯ ಪರಿಣಾಮವನ್ನೇ ನಾವು ಸಾಹಿತ್ಯದಲ್ಲಿ ಪ್ರಗತಿ ಎಂದು ಗುರುತಿಸುತ್ತೇವೆ. ಯಾವನೋ ಒಬ್ಬ ಸಮರ್ಥನಾದ ಕವಿಯಿಂದ ಆರಂಭವಾದ ಹೊಸಮಾರ್ಗ ಕ್ರಮೇಣ ಒಂದು ಸಿದ್ಧ ಪರಂಪರೆಯಾಗಿ, ಅನಂತರದ ಕವಿಗಳ ಕುರುಡು ಅನುಸರಣೆಯಿಂದ ಬೇಸರವನ್ನು ತಂದಾಗ ಅಂತಹ ಒಂದು ಸಾಹಿತ್ಯ ಪ್ರಕಾರವನ್ನು ಮುರಿದು ಮತ್ತೊಂದನ್ನು ತರುವ ಅಗತ್ಯ ಅನಿವಾರ್ಯವಾಗಿ ಉದ್ಭವಿಸುತ್ತದೆ. ಹಾಗಾದಾಗ ಅದು ಮತ್ತೊಂದು ಹೊಸ ಸಂಪ್ರದಾಯದ ನಿರ್ಮಾಣ ಎನ್ನಿಸಿಕೊಳ್ಳುತ್ತದೆ. ಹೀಗೆ ಸಾಹಿತ್ಯ ನಿರ್ಮಿತಿಯಲ್ಲಿ ಒಂದು ನೂತನ ನಿರ್ಮಾಣ ಎನ್ನುವುದು ಪ್ರಯೋಗ ಪ್ರವೃತ್ತಿ ಪರಂಪರೆಯೊಂದಿಗೆ ಹೋರಾಡಿ ಅದರೊಂದಿಗೆ ಮಾಡಿಕೊಂಡ ಒಡಂಬಡಿಕೆಯ ರೂಪದ್ದೋ ಹೋರಾಟದ ಪರಿಣಾಮ ರೂಪದ್ದೋ ಅಥವಾ ಪ್ರತಿಭಟನಾ ರೂಪದ್ದೋ ಆಗಿರುತ್ತದೆ. ನಮ್ಮ ಹಳೆಯಕಾವ್ಯ ಪರಂಪರೆಯನ್ನ ಗಮನಿಸಿದಾಗ ಈ ಬಗೆಯ ಕ್ರಿಯೆ ಬಹು ಮಂದಗತಿಯಿಂದ ಸಾಗಿ ಅಲ್ಲಲ್ಲಿ ಬೆರಳಲ್ಲಿ ಎಣಿಸಬಹುದಾದಷ್ಟು ಘಟ್ಟಗಳನ್ನು ನಿರ್ಮಿಸಿರುವುದು ಕಂಡು ಬರುತ್ತದೆ. ಅಂತಹ ಘಟ್ಟಗಳಲ್ಲಿ ಹರಿಹರ–ರಾಘವಾಂಕರ ಕಾಲವೂ ಒಂದು."[೨]

ಪಂಪನಲ್ಲಾದರೋ ಕಾವ್ಯಶ್ರದ್ಧೆ ಲೌಕಿಕ ಆಗಮಿಕ ಎಂದು ಕವಲೊಡೆಯಿತು. ಹಾಗೆ ಕವಲೊಡೆದದ್ದು ಒಂದು ಸಂಪ್ರದಾಯವೇ ಆಯಿತು. ಆದರೆ ಹರಿಹರನಲ್ಲಿ ಹಾಗಾಗದೆ ಅವೆರಡೂ ಕನ್ನಡ ಸಾಹಿತ್ಯದಲ್ಲಿ ಮೊಟ್ಟ ಮೊದಲು ಬೆಸುಗೆಯಾದದ್ದು ಹೊಸ ಸಂಗತಿಯಾಗಿದೆ. ಲೌಕಿಕ ಮತ್ತು ಧಾರ್ಮಿಕ ಎರಡೂ ಪ್ರತ್ಯೇಕವಾಗಿ ಪ್ರಕಟಿಸಬೇಕಾದ ಶಾಖೆಗಳಲ್ಲಿ ವಾಸ್ತವವಾಗಿ ಅವೆರಡೂ ಅಭಿನ್ನ ಎನ್ನುವ ಪ್ರಜ್ಞೆ ಕನ್ನಡ ಸಾಹಿತ್ಯದಲ್ಲಿ ಮೊಟ್ಟ ಮೊದಲು ಮೈದೋರಿದ್ದು ಹರಿಹರನಲ್ಲಿ ಧರ್ಮದ ಉನ್ನತ ನೆಲೆಯಲ್ಲಿ ಮನಸ್ಸು ನಿಂತಮೇಲೆ ಎಲ್ಲದಕ್ಕಿಂತ ಧರ್ಮವೇ ದೊಡ್ಡದು ಎಂದು ಅರಿತಮೇಲೆ ಕಾವ್ಯ ರಾಜ ಮಹಾರಾಜರ ಆಶ್ರಯದ ಹಂಗನ್ನು ತಿರಸ್ಕರಿಸಿದ್ದು ಸಹಜವಾಗಿಯೇ ಇದೆ ರಾಘವಾಂಕ ಹರಿಶ್ಚಂದ್ರ ನನ್ನ ಕಾವ್ಯ ನಾಯಕನನ್ನಾಗಿ ಮಾಡಿಕೊಂಡಿದ್ದು ದಿವ್ಯಾದರ್ಶವೊಂದರ ಸಾಧನೆಯಿಂದ ಮನುಷ್ಯ ಯಾವ ನೆಲೆಗೆ ಏರಬಲ್ಲನೆಂಬುದನ್ನು ತೋರಿಸಲು "ಕಾವ್ಯಂ ಕೇಳ್ದು ಜನ ಬದುಕ ಬೇಕೆಂದು ಪೇಳ್ದೆನನಪೇಕ್ಷೆಯಿಂದ" ಎನ್ನುವ ವಿನಯದಿಂದ.

ಹರಿಹರ: ಮದ್ಯಕಾಲೀನ ಕಾವ್ಯ ಸಂದರ್ಭದಲ್ಲಿ ದುಡಿವ ವರ್ಗಗಳ ಪರವಾದ ಧ್ವನಿ ಎತ್ತಿದವರಲ್ಲಿ ಹರಿಹರನೂ ತುಂಬಾ ಪ್ರಮುಖನಾಗಿದ್ದಾನೆ. ಆತನ ನೋಟ ವಿರಕ್ತ ಅನುರಕ್ತರ ಮೇಲಿದ್ದರೂ ಆತನ ಕಾವ್ಯಗಳಲ್ಲಿ ಶ್ರಮಿಕ ವರ್ಗಗಳದೇ ಕಾರುಬಾರು. ಕುಂಬಾರ, ಅಗಸ, ಗಾಣಿಗ, ಕ್ಷತ್ರಿಯ, ವೈಶ್ಯ, ಮಾದಿಗ, ಬೇಡ, ಹೊಲಿಗೂಲಿ ಕರಣಿಕ, ಲೆಕ್ಕಿಗ, ತುರುಕಾರ ಮೊದಲಾದ ವೃತ್ತಿಕಾರರ ಚಿತ್ರಣವೇ ದಟ್ಟವಾಗಿ ಸಿಗುತ್ತವೆ. ಹಿಂದಿನ ಕವಿಗಳಿಗೆ ರಾಜರು ರಾಜಪತ್ತೆ ದೊಡ್ಡದಾಗಿ ಕಂಡರೆ ಹರಿಹರನಿಗೆ ಜನರು ಜನಸತ್ರೆಯೇ ದೊಡ್ಡದು. ಅದರಲ್ಲೂ ಶ್ರಮಿಕರು ಆತನ ನಾಯಕರಾಗಿದ್ದಾರೆ ಆತನ ಕಾವ್ಯವು ಭಕ್ತಿಯ ಹೊಳೆಯಾದರೂ ಅಲ್ಲಲ್ಲಿ ವರ್ಗಬೇಧ, ವರ್ಣಬೇಧಗಳು ಇಣುಕು ಹಾಕಿವೆ. ಹಾವಿನಹಾಳ ಕಲ್ಲಯ್ಯನ ಮಗಳು ತನ್ನ ನೀರಿನ ಕೊಡವನ್ನು ಬ್ರಾಹ್ಮಣನು ಮುಟ್ಟದ ಕಾರಣ ಮೈಲಿಗೆಯಾಯಿತೆಂದು ತಿಳಿಸಿ ಒಡೆದು ಹಾಕುವ ಪ್ರಸಂಗ, ನಾಯಿಯಿಂದ ವೇದವನ್ನು ಓದಿಸುವ ಪ್ರಸಂಗ ಸಾಮವೇದಿಯ ನೆರಳಿಂದ ತಾನು ಬೇಯಿಸುತ್ತಿದ್ದ ಮಾಂಸ ಮೈಲಿಗೆಯಾಗುತ್ತದೆಂದು ಭಾವಿಸಿ ಶ್ವಪಚಯ್ಯ ಮಾಂಸದ ಮೇಲೆ ತನ್ನ ಕೆರವನ್ನು ಮುಚ್ಚುವುದು ಶತಮಾನಗಳ ಶೋಷಕ ನೋಟಕ್ಕೆ ತಿರುಗೇಟಿನಂತಿವೆ. ಇಲ್ಲಿ ಸ್ವತಃ ಚೋಳ ಚಕ್ರವರ್ತಿಯೇ ಮಾದಾರ ಚೆನ್ನಯ್ಯನ ಗುಡಿಸಲಿಗೆ ಬರುತ್ತಾನೆ.

ಹರಿಹರನ ಭಕ್ತಿಗೆ ಮೇಲುಕೀಳೆಂಬ ಪ್ರಶ್ನೆಯೇ ಇಲ್ಲ. ಅದಕ್ಕೆ ಅರ್ಹತೆಯೂ ಬೇಕಿಲ್ಲ. ಕಣ್ಣಪ್ಪನಾದರೂ ಸತ್ಯವಂ ನುಡಿವುದಂ ಕನಸಿನಲಿ ಕಂಡರಿಯ. ಸತ್ಯಂತ ದಿಟವ ತಾಂ ಮನಸಿನೊಳು ನೆನೆದರಿಯ ನಲಿಯ ನಾತಂ ಬೇರೆ ದೇವರುಂಟೆಂಬುದಂ

[illegible]

[illegible]

ಇಂಥವನಿಗೆ ಶಿವನೊಲಿದುದನ್ನು ಕಂಡು ಪಾರ್ವತಿಗೇ ಆಶ್ಚರ್ಯ. ಆಕೆ ಶಿವನಿಗೆ ಹೇಳುತ್ತಾಳೆ. ಈ ಲೋಕದೊಳಗೆಲ್ಲ ನೀನೊಲಿದೊಡೆನಲನಂ ಇಂತ್ಯಪ್ಪ ಬೇಡಂಗೆ ಮಯ್ಯಾನುವರೇ ಶಿವಾ? ಇತ್ಯಾದಿಯಾಗಿ ಕಣ್ಣಪ್ಪನ ಅನರ್ಹತೆಯನ್ನು ಎತ್ತಿ ನುಡಿಯುತ್ತಾಳೆ, ಆದರೆ ಶಿವನಿಗೆ ಪ್ರಿಯವಾದುದು ಇಂಥವನ ಕಾಲುಪೂಜೆಯೇ ಹೊರತು ಶಿವಬ್ರಾಹ್ಮಣನಾದ ಪೂಜಾರಿಯ ಶಾಸ್ತ್ರೋಕ್ತ ಪೂಜೆಯಲ್ಲ. ಶಿವಲಿಂಗದ ಕಣ್ಣಿಂದ ನೆತ್ತರೊಸರ ತೊಡಗಿದಾಗ ಡಂಬಾಚಾರಿಯಾದ ಪೂಜಾರಿ ರಾಜನಿಗೆ ತಿಳಿಸಲು ಹೋಗುತ್ತಾನೆ. ಕಣ್ಣಪ್ಪ ತನ್ನೆರಡೂ ಕಣ್ಣುಗಳನ್ನೇ ಕಿತ್ತು ಶಿವನಿಗಿಡುತ್ತಾನೆ. ಶೈವ ಬ್ರಾಹ್ಮಣನ ಆಗಮೋಕ್ತ ಬಹಿರಂಗ ಶುದ್ಧ ಪುಷ್ಪಾರ್ಚನೆಯನ್ನು ನಿರಾಕರಿಸಿ ಕೀಳುಜಾತಿಯ ಬೇಡನ ಎಂಜಲು ಮಾಂಸದ ಪೂಜೆಗೆ ಒಲಿಯುವುದರ ಮೂಲಕ ಹರಿಹರ ಶಿವಧರ್ಮ ನೀತಿಗಳನ್ನು ತಿರುಗಾಮರುಗಾ ಮಾಡುತ್ತಾನೆ. ಒಟ್ಟಾರೆ ಶರಣರಂತೆಯೇ ಹರಿಹರನು ಶತಮಾನದಷ್ಟು ಹಳೆಯದಾದ ವರ್ಗ, ವರ್ಣ ಸಂಘರ್ಷಗಳನ್ನು ತೊಡೆದು ಹಾಕುವುದರ ಜೊತೆಗೆ ವ್ಯಕ್ತಿಗೌರವ, ಸ್ವಾತಂತ್ರ್ಯ, ಸ್ವಾವಲಂಬನೆ, ಸಮಾನತೆ ಮತ್ತು ಶ್ರಮ ಗೌರವಗಳನ್ನು ಎತ್ತಿಹಿಡಿದಿದ್ದಾನೆ ಎನ್ನಬಹುದು.

ರಾಘವಾಂಕ: "ಅತಿ ಹುಸಿವ ಯತಿ ಹೊಲೆಯ ಹುಸಿಯದಿಹ ಹೊಲೆಯನ್ನುನ್ನತ ಯತಿವರನು" ಎಂಬಲ್ಲಿ ಹೊಲೆಯ ಮತ್ತು ಯತಿ ಇಬ್ಬರನ್ನು ಸಮಾನರೆಂದು ಪರಿಗಣಿಸಿ ಹೇಳುವ ಧೋರಣೆ ಇದ್ದಂತಿಲ್ಲ. ಅಲ್ಲಿ ಯತಿಶ್ರೇಷ್ಠ ಹೊಲೆಯ ಕನಿಷ್ಠ ಎಂಬ ಭಾವನೆಯೇ ಇದೆ. ಆದರೆ ಅದು ಅಪವಾದ ರೂಪದ ಹೊಲೆಯ ಮತ್ತು ಅಪವಾದ ರೂಪದ ಯತಿಯನ್ನು ಮಾತ್ರ ಲಕ್ಷದಲ್ಲಿಟ್ಟುಕೊಂಡು ಹೇಳುವ ಮಾತಾಗಿದೆ. ರಾಘವಾಂಕ ಹೊಲೆತನಕ್ಕೆ ಸಂಬಂಧಿಸಿದಂತೆ ಪ್ರಗತಿಪರ ಧೋರಣೆಯನ್ನು ಕಾವ್ಯದಲ್ಲಿ ಪ್ರತಿಪಾದಿಸಿದ್ದಾನೆಂಬುದಕ್ಕೆ ತಕ್ಕ ಆಧಾರ ದೊರೆಯುವುದಿಲ್ಲ. ಈ ವಿಷಯದಲ್ಲಿ ಕವಿಯ ಧೋರಣೆ ವೈದಿಕ ಪರಂಪರೆಯ ಪರಿಕಲ್ಪನೆಗೆ ಅನುಗುಣವಾಗಿಯೇ ಇದೆ." ರಾಘವಾಂಕನ ಹರಿಶ್ಚಂದ್ರಕಾವ್ಯದಲ್ಲಿ ಹೊಲತಿಯರ ಪ್ರಸಂಗ[೫] ಕುರಿತಾಗಿಯೂ ಆತನ ಏಕಪತ್ನಿ ವ್ರತಸ್ಥ ಎಂಬ ಭಾವವನ್ನು ಕುರಿತು ಇದೇ ರೀತಿ ಪ್ರತಿಕ್ರಿಯಿಸಬಹುದಾಗಿದೆ. "ಏಕಪತ್ನಿ ವ್ರತವೇ ಆಗಿದ್ದರೆ ಅವನು ರಾತ್ರಿಯಿಡೀ ವೇಶ್ಯಾವಾಟಿಕೆಯನ್ನು ನೋಡಿಯೂ ಅಷ್ಟೊಂದು ಮಜಾ ಏಕೇ ತೆಗೆದುಕೊಳ್ಳಬೇಕಿತ್ತು? ಸಾಲದ್ದಕ್ಕೆ ಅವನಿಗೆ ಬೇಕಾದಷ್ಟು ಕಾಮಿನಿಯರೂ ಇದ್ದರು"[೬] ಪ್ರಸ್ತುತ ಧೋರಣೆಗಳು ಹರಿಶ್ಚಂದ್ರ ನನ್ನ ಮೇಲುವರ್ಗಗಳ ಉತ್ಸವ ಮೂರ್ತಿಯಂತೆ ಬಿಂಬಿಸಿದ್ದರೂ ಆ ಕಾಲದ ಸಮಾಜ ಕೆಳವರ್ಗಗಳ ಬಗ್ಗೆ ತಳೆದಿದ್ದ ನಿಲುವನ್ನ ಈ ಕೃತಿ ಬಿಚ್ಚಿಡುತ್ತದೆ ಎಂಬುದರಲ್ಲಿ ಎರಡುಮಾತಿಲ್ಲ.

ಕನಕದಾಸರು: ದುಡಿವ ವರ್ಗದಿಂದ ಬಂದು ದಾಸಕೂಟವನ್ನು ಸೇರಿದ ಕನಕದಾಸರು ಒಂದುಕಡೆ ನಾವು ಕುರುಬರು ನಮ್ಮ ದೇವರು ಬೀರಯ್ಯ ಎಂದು ಹೆಮ್ಮೆಯಿಂದ ಹಾಡಿದರೂ ಇನ್ನೊಂದುಕಡೆ ಕೆಳಸಂಸ್ಕೃತಿಯ ಬಣಗು ದೈವಗಳನ್ನು ಹಿಯಾಳಿಸುತ್ತಾರೆ. ಆದರೆ ಮೇಲುಸಂಸ್ಕೃತಿಯ ದೇವತೆಗಳಾದ ಶಿವಪಾರ್ವತಿ, ಸರಸ್ವತಿ ಹನುಮಂತ, ಮುಂತಾದ ದೇವತೆಗಳನ್ನು ಕುರಿತು ಪುರಂದರ ದಾಸರ ಹಾಗೆ ಹಾಡು ಕಟ್ಟುತ್ತಾರೆ.

ಕನಕ ಕೀರ್ತನಕಾರನಷ್ಟೇ ಅಲ್ಲ. ಕವಿ. ಸಮಾಜದ ಕೆಳವರ್ಗದ ಬದುಕು, ಭಾಷೆ, ಸಂಸ್ಕೃತಿಗಳ ನಿಕಟ ಸಂಪರ್ಕವಿದ್ದವ ಆತನ ಬರಹದಲ್ಲಿ ದೇಸೀಯ ಸೊಗಸಿದೆ. ದೈನಂದಿನ ಮಾತು, ಪಡೆನುಡಿ, ಗಾದೆಮಾತು, ಒಗಟು, ಉಪಮೆ, ರೂಪಕಗಳನ್ನು ಸಮರ್ಪಕವಾಗಿ ಬಳಸಿಕೊಡುವುದರಿಂದ ಅವನ ಕೃತಿಗಳು ಸಾಮಾನ್ಯರಿಗೆ ತೀರಾ ಹತ್ತಿರವಾಗಿವೆ. ಕನಕದಾಸರು ಬದುಕಿನಲ್ಲಿ ಬಡತನ ಶ್ರೀಮಂತಿಕೆ ಎರಡನ್ನು ಕಂಡವರು. ಅಂತಲೇ ರಾಮಧ್ಯಾನ ಚರಿತೆ ಅವರಲ್ಲಿ ಸಾಮಾಜಿಕ ವೈಪರಿತ್ಯವನ್ನು ತೋರುವ ವಿಡಂಬನಾ ಕಾವ್ಯವಾಗಿದೆ. ವರ್ಗ ಸಂಘರ್ಷದ ರೂಪಕ ಕಾವ್ಯವೆನ್ನುವಂತೆ ರಚನೆಗೊಂಡ ಈ ಕಾವ್ಯಕ್ಕೆ "ಒಳ್ಳೆತನಕ್ಕೆ ದೇವರು ಒಲಿಯುತ್ತಾನೆಂಬ ಜನಪದ ನಂಬುಗೆಯೇ ಮೂಲವಾಗಿದೆ" ವರ್ಗ ಸಂಘರ್ಷವನ್ನು ಪ್ರತಿಪಾದಿಸುವ ವಿಷಯವನ್ನು ಆಯ್ದುಕೊಂಡು ಕಾವ್ಯ ವಿರಚಿಸಿದ ಇನ್ನೊಬ್ಬ ಕವಿ ಹಳಗನ್ನಡದಲ್ಲಿ ನಮಗೆ ಸಿಗುವುದಿಲ್ಲ. ಈ ವಿನೂತನತೆಯನ್ನು ಸಾಧಿಸಿದ ಮೊದಲ ಕವಿಯೆಂಬ ಪರಿಗಣನೆಗೆ ಕನಕದಾಸ ಅರ್ಹನಾಗಿದ್ದಾನೆ."೫

ಸರ್ವಜ್ಞ: ಜನಪದರಲ್ಲಿ ಜನಪದ ಶಿಷ್ಟರಲ್ಲಿ ಶಿಷ್ಟ ಎನ್ನ ಬಹುದಾದ ಸರ್ವಜ್ಞನು ಕೂಡ ದುಡಿವ ಜನರ ದುಡಿಮೆಯನ್ನ ಪುನರ್ ಮೌಲ್ಯೀಕರಿಸಿದ್ದಾನೆ.

"ಖಂಡಿಸದೆ ಕರಣವನು ದಂಡಿಸದೆ ದೇಹವನು
ಉಂಡುಂಡು ಸ್ವರ್ಗಕಯ್ದುಲ್ಕೆ ಅದನೇನು
ರಂಡೆ ಆಳುವಳೆ ಸರ್ವಜ್ಞ"

ಮನುಷ್ಯರ ರೀತಿ ನಡವಳಿಕೆಗಳನ್ನು ಕವಿ ಚಿತ್ರಿಸುವಾಗ "ಸಾಲಗಾರ ಬಂದಾಗ ಕಿಬ್ಬದಿಯ ಕೀಲು ಮುರಿಯುವುದಿರಲಿ, ರುಂಡೆಗೆ ಚೇಳು ಕಡಿದಂತೆ ಆಗುತ್ತಿದಯಂತೆ"

ಲೋಕ ಕೆಂಡವಾಗಿ ನಿಂತರೂ ಸರ್ವಜ್ಞ ಮಾತ್ರ ಅಖಂಡ ಖಂಡಿತವಾದಿ ಎಂದೂ ರಾಜಿ ಮಾಡಿಕೊಳ್ಳದೆ ಮುನ್ನುಗ್ಗುವ ಗುಣದವನು. ಲೋಕವನ್ನು ತುಂಬು ಮನಸ್ಸಿನಿಂದ ಪ್ರೀತಿಸುವ ಈತನಿಗೆ ಮಾತ್ರ ಇಷ್ಟು ಕಟುವಾಗಿ ಮಾತನಾಡುವ ನೈತಿಕ ಧೈರ್ಯವಿದೆ. ಹಾಗೆಯೇ ಗೋಲಿಗೆ ನಿಂತರೂ ಹರಿತವಾದ ಆಯುಧ ಇದ್ದೇ ಇರುತ್ತದೆ.

ಮೂರೆಳೆಯ ನುಟ್ಟಾತ ಹಾರುವಡೆ ಸ್ವರ್ಗಕೆ
ನೊರೆಂಟು ಎಳೆಯ ಕೌದಿಯನು ಹೊದ್ದಾತ
ಹಾರನೇಕಯ್ಯ ಸರ್ವಜ್ಞ?

ಸರ್ವಜ್ಞ ವೈದಿಕ ಪುರೋಹಿತ ಶಾಹಿಯನ್ನ ಜನಪದ ಮಾತುಗಳಲ್ಲೇ ತರಾಟೆಗೆ ತೆಗೆದುಕೊಳ್ಳುತ್ತಾನೆ.

೧. ಕೊಂದು ತಿನ್ನುವ ಹೊಲೆಯನೆಂದು ನೀನೆನಬೇಡ
ನೊಂದ ಜೀವವನು ತಾನ್ಹರಿವ ಹಾರವನು
ಕೊಂದಾದ ಹೊಲೆಯ ಸರ್ವಜ್ಞ

೨. ಹಸಿವು, ತೃಷೆ, ನಿದ್ರೆಗಳು ವಿಷಯ ಮೈಥುನ ಬಯಕೆ
ಪಶು, ಪಕ್ಷಿ, ನರಗೆ ಸಮನಿರಲು ಕುಲವೆಂಬ
ಘಸಣಿಯೆತ್ತಣದು ಸರ್ವಜ್ಞ

ಸಜ್ಜನರು–ದುರ್ಜನರು–ಅವರ ಸಹವಾಸ

ಬಳ್ಳಿದರ ಒಡನಾಡಿ ಕಳ್ಳನೊಳ್ಳಿದ ನಕ್ಕು
ಬಳ್ಳಿದ ಕಳ್ಳರೊಡನಾಡಿ ಅವಳುದ್ದ
ಕಳ್ಳ ತಾನಕ್ಕು ಸರ್ವಜ್ಞ

ರಾಜ–ರಾಜಧರ್ಮ–ರಾಜಭಕ್ತಿ

ರಾಗವಿಲ್ಲದ ವಿದ್ಯೆ ಭೋಗವಿಲ್ಲದ ನಿದ್ರೆ
ತ್ಯಾಗವಿಲ್ಲದವನ ದೊರೆತನ ಹಾಳೂರ
ಗೊಗೆಯಂತಕ್ಕೂ ಸರ್ವಜ್ಞ

ಸಮಾನತೆ–ಜಾತಿ ಕುರಿತ ನಿಲುವು

ಎಲುವಿಲ್ಲ ನಾಲಿಗೆಗೆ ಬಲವಿಲ್ಲ ಬಡವಂಗೆ
ತೊಲೆಕಂಬವಿಲ್ಲ ಗಗನಕ್ಕೆ: ದೇವರಲಿ
ಕುಲಭೇದವಿಲ್ಲ ಸರ್ವಜ್ಞ

ರಾಜ–ರಾಜ ಪರಿವಾರ

ಮೆಚ್ಚಿದಂತರಸಿನಲಿ ಎಚ್ಚರದಿಂದಿರಬೇಕು
ಎಚ್ಚರವು ತಪ್ಪಿ ನಡದರೆ ಆಮೆಚ್ಚು
ಕಿಚ್ಚಿ ನಂತಕ್ಕು ಸರ್ವಜ್ಞ

ಅರಸ ರಕ್ಕಸನಂತೆ ವರ ಮಂತ್ರಿ ಹುಲಿಯಂತೆ
ಬರೆವಾತ ನಾಡ ನರಿಯಂತೆ ಪರಿವಾರ
ಗರಗಸದಂತೆ ಸರ್ವಜ್ಞ

ಸಂಸಾರ ಕುರಿತು

ಸುಣ್ಣವಿಲ್ಲದ ವೀಳ್ಯ ಬಣ್ಣವಿಲ್ಲದ ಮದುವೆ
ಹೆಣ್ಣಿಲ್ಲದವನ ಸಂಸಾರ ಮಳಲೊಳಗೆ
ಎಣ್ಣೆ ಹೊಯ್ದಂತೆ ಸರ್ವಜ್ಞ

ಅಡಕೆಯಿಲ್ಲದ ವೀಳ್ಯ ಕಿಟಕಿಯಿಲ್ಲದ ಮನೆಯು
ಒಡಕು ಬಾಯವಳ ಮನೆವಾರ್ತೆ ಎಣ್ಣೆಯ
ಕುಡಿಕೆಯೊಡೆದಂತೆ ಸರ್ವಜ್ಞ

ಹಗೆತನ

ಗವುಡನೊಳು ಹಗೆತನವು, ಕಿವುಡನೊಳು ಏಕಾಂತ
ಪ್ರವುಢನೊಳು ಮೂಢನುಪದೊಳ ಹಸಿದೆದ್ದು
ತವುಡು ತಿಂದಂತೆ ಸರ್ವಜ್ಞ

ಎಳ್ಳು ಗಾಣಿಗ ಬಲ್ಲ ಸುಳ್ಳು ಸಿಂಪಿಗ ಬಲ್ಲ
ಕಳ್ಳರನು ಬಲ್ಲ ತಳವಾರ ಬಣಜಿಗ
ಎಲ್ಲವನ್ನೂ ಬಲ್ಲ ಸರ್ವಜ್ಞ

"ಅಸ್ಪೃಶ್ಯರ ಕುರಿತು ಹಳೆಗನ್ನಡದ ಕೃತಿಯಲ್ಲಿ ಮೊದಲ ಬಾರಿಗೆ ಹೆಚ್ಚು ವಿವರಗಳು ದಾಖಲಾಗಿರುವುದು ನಾಗವರ್ಮನ "ಕರ್ಣಾಟಕ ಕಾದಂಬರಿ"ಯಲ್ಲಿ. ಅನಂತರದ ಸ್ಥಾನ ಬ್ರಹ್ಮಶಿವನ "ಸಮಯ ಪರೀಕ್ಷೆ" ಎಂಬ ಕೃತಿ ಪಡೆದುಕೊಳ್ಳುತ್ತೇನೆ. ನಯಸೇನನ "ಧರ್ಮಾಮೃತ"ದಲ್ಲೂ ಬ್ರಾಹ್ಮಣ, ಕ್ಷತ್ರಿಯ ಎಂಬ ವರ್ಣಗಳ ಜೊತೆಗೆ ಅಸ್ಪೃಶ್ಯರ ಒಳಪಂಗಡಗಳ ವಿವರಗಳನ್ನೂ ಗಮನಿಸಲಾಗಿದೆ. ವರ್ಣ ಬಾಹಿರರಾದ ಅಸ್ಪೃಶ್ಯರು ಎಂದರೆ, ಅಸ್ಥಿತ್ವ ಇಲ್ಲದಿರುವ ಸಂಸ್ಕಾರ ಇಲ್ಲದಿರುವ ವ್ಯಕ್ತಿಗಳೆಂದೇ ಚರಿತ್ರೆಯ ಉದ್ದಕ್ಕೂ ದಾಖಲಾಗಿದ್ದಾರೆ. ಆದರೆ ಈ ವಿಚಾರವನ್ನು ಮೀರಿದ ಅಸ್ಪೃಶ್ಯರೆಂದರೆ ಜಾಣರು ಬುದ್ಧವಂತರೆಂದು ಅಪರೂಪಕ್ಕೆ ದಾಖಲಾಗಿರುವುದನ್ನು ದುರ್ಗಸಿಂಹನ ಪಂಚತಂತ್ರದಲ್ಲಿ ಕಾಣುತ್ತೇವೆ. ಈ ಕೃತಿಯಲ್ಲಿಯೂ ಬ್ರಾಹ್ಮಣರ ಪಾತ್ರಗಳೇ ಬುದ್ಧಿವಂತ ಪಾತ್ರಗಳೆಂದು ಅಧಿಕೃತವಾಗಿ ಹೇಳಿದರೂ, ಅಂಥವರನ್ನು ಬೌದ್ಧಿಕವಾಗಿ, ಚಂಡಾಲರು, ಹೊಲೆಯರು, ಮಾದಿಗರು ಹೇಗೆ ಮೀರಬಲ್ಲರು ಎನ್ನುವುದನ್ನು ದಾಖಲಿಸಲಾಗಿದೆ"[೭]

ನವೋದಯ ಕಾವ್ಯ

ನವೋದಯ ಕಾವ್ಯವೆಂದು ಕುವೆಂಪುರವರಿಂದ ಹೆಸರಿಸಲಾದ ಆಧುನಿಕ ಕಾವ್ಯಕ್ಕೆ ಇಂಗ್ಲೀಷಿನ ರೋಮ್ಯಾಂಟಿಕ್ ಪರಂಪರೆಯೇ ಮಾರ್ಗದರ್ಶಕವಾಗಿತ್ತು. ವಸ್ತು-ರೂಪ, ಛಂದಸ್ಸು ವರ್ಣನಾ ವಿಧಾನ ಮುಂತಾದವುಗಳಲ್ಲಿ ಆದರೆ ಅದಕ್ಕೆ ಈ ನೆಲದ್ದೇ ಸತ್ವ ತುಂಬಲ್ಪಟ್ಟಿತು. ರಾಷ್ಟ್ರೀಯತೆ, ಗಾಂಧೀವಾದ, ಸ್ವಾತಂತ್ರ್ಯ ಸಂಗ್ರಾಮ ಮೊದಲಾದ ಭಾವತೀವ್ರವಾದ ವಾತಾವರಣವೂ ಈ ಪ್ರಕಾರಕ್ಕೆ ಪ್ರೇರಣೆ ನೀಡಿತು.

ನವೋದಯ ಕಾವ್ಯದ ವಿಶಿಷ್ಟ ಪ್ರತಿಭೆಗಳಾಗಿ ಕುವೆಂಪು, ಬೇಂದ್ರೆ, ಪುತಿನ ಅವರನ್ನ ಆ ಕ್ಷಣಕ್ಕೆ ಗುರ್ತಿಸಬಹುದಾದರೂ ಆನಂತರದ ಅನೇಕರಲ್ಲಿಯೂ ಇವರ ಪ್ರಭಾವವನ್ನ ಪಡೆಯುತ್ತಲೇ ತಮ್ಮದೇ ಆದ ವಿಶಿಷ್ಟ ಅಭಿವ್ಯಕ್ತಿಗಳಿಂದ ಕನ್ನಡ ಕಾವ್ಯವನ್ನ ವಿಸ್ತರಿಸಿದ ಅನೇಕ ಕವಿಗಳಿದ್ದಾರೆ. ಕನ್ನಡ ಕಾವ್ಯ ಪರಂಪರೆಯಲ್ಲಿ ನವೋದಯ ಕಾವ್ಯ ಮತ್ತೊಮ್ಮೆ ಜನಪರವಾಗಿ ಯೋಚಿಸುವ ಹಾದಿಗೆ ನಾಂದಿ ಹಾಡಿತು ಎನ್ನಬಹುದು. ಹಾಗಂತ ಇದಕ್ಕೆ ಕೊರತೆಗಳೂ ಇಲ್ಲ ಎನ್ನುವಂತಿಲ್ಲ. "ನಮ್ಮ ನವೋದಯ ಸಾಹಿತಿಗಳು ವರ್ತಮಾನದ ಬದುಕಿನ ನಿಜದನಿಗಳನ್ನು, ನಿಷ್ಠೂರ ವಾಸ್ತವದ ಅನುಭವಗಳನ್ನು ಸಂಕೋಚದಿಂದ ನೋಡುವ ಚಾರಿತ್ರಿಕ, ಧಾರ್ಮಿಕ, ಆಧ್ಯಾತ್ಮಿಕ ಮೌಲ್ಯಗಳನ್ನು ಆರಾಧಿಸುವ ಮನೋಭಾವವನ್ನ ಹೆಚ್ಚಾಗಿ ಬೆಳಸಿಕೊಂಡಂತೆ ತೋರುತ್ತದೆ"[೮] ಎನ್ನುತ್ತಾರೆ ಜಿ.ಎಚ್.ನಾಯಕ.

ನವೋದಯ ಕಾವ್ಯದ ಸಾಮಾಜಿಕ ಪ್ರಜ್ಞೆಯನ್ನು ಕುರಿತು ಗಿರಡ್ಡಿಯವರು "ಸಾಮಾಜಿಕ ಸಮಸ್ಯೆಗಳ ವಿಷಯದಲ್ಲಿ ಪೂರ್ವಯೋಜಿತ ಸಿದ್ಧ ಪ್ರತಿಕ್ರಿಯೆಗಳು ವ್ಯಕ್ತವಾಗಿರುವುದು ಕಾಣುತ್ತವೆ. ಜಾತ್ಯಾತೀತತೆ, ಸಮಾನತೆ, ಮೌಢ್ಯ ವಿಮೋಚನೆ, ದಲಿತ ಪರ ಕರುಣೆ, ಶ್ರೀಮಂತರ ವಿರುದ್ಧ ಆಕ್ರೋಶ. ಇಲ್ಲೆಲ್ಲಾ ಇಂಥ ವಸ್ತುವಿಗೆ ಇಂಥ ಪ್ರತಿಕ್ರಿಯೆ ಎಂದು ಸುಲಭ ಸಮೀಕರಣವಿರುವಂತೆ ಭಾಸವಾಗುತ್ತದೆ....ಒಟ್ಟಿನಲ್ಲಿ ಇದು ಸರಳವಾದ ಕಪ್ಪುಬಿಳುಪಿನ ಪ್ರಪಂಚ"[೯]

"ನವೋದಯ ಸಾಹಿತ್ಯದಲ್ಲಿ ಮನುಷ್ಯನ ವಾಸ್ತವವನ್ನು ಅಂದರೆ ಬಡತನವನ್ನು ಶಾಶ್ವತ ಸತ್ಯ ಎಂದು ಗ್ರಹಿಸುವವರೆ ಹೆಚ್ಚು ಈ ಗ್ರಹಿಕೆಯಿಂದ ಸಾಮಾನ್ಯ ಮನುಷ್ಯನ ಸ್ಥಿತಿಯ ಬಗ್ಗೆ ಅನುಕಂಪ ಮಾತ್ರ ಸಾಧ್ಯ"[೧೦] ಎನ್ನುವ ಐ. ಆರ್. ನಾಗರಾಜ್ ಇದಕ್ಕೆ ಕಾರಣವೆಂದರೆ ಅಂದಿನ ಕವಿಗಳೆಲ್ಲ ಮಧ್ಯಮ ವರ್ಗಕ್ಕೆ ಸೇರಿದವರು ಮತ್ತು ಓದುಗರಲ್ಲೂ ಬಹುಪಾಲು ವೈದಿಕರು ಎಂದು ಸೂಚಿಸುತ್ತಾರೆ.

ನವೋದಯ ಕವಿಗಳು

ಕುವೆಂಪು: ನವೋದಯ ಕವಿತೆಯನ್ನ ಗಮನಿಸುವಾಗ ನವೋದಯ ಪೂರ್ವ ಮತ್ತು ನವೋದಯ ಕಾವ್ಯದ ಮೊದಲ ಘಟ್ಟವನ್ನು ಮರೆಯುವಂತಿಲ್ಲ ಆದರೆ

ಜನಪರ ದೃಷ್ಟಿಕೋನದಿಂದ ನೋಡಿದಾಗ ಕುವೆಂಪು ಕಾಲದಿಂದಲೇ ಒಂದು ವಿಶಿಷ್ಟ ಬದಲಾವಣೆ ಕಂಡು ಬಂದಿರುವುದರಿಂದ ಪ್ರಸ್ತುತ ಕಾವ್ಯಪರಂಪರೆಯನ್ನ ಕುವೆಂಪು ಅವರಿಂದಲೇ ನೋಡಲಾಗಿದೆ.

ಕುವೆಂಪು ಧಾರ್ಮಿಕ ಶೋಷಣೆ ಮತ್ತು ಕಂದಾಚಾರವನ್ನು ಖಂಡಿಸಿ ವಿಶ್ವ ಮಾನವ ಧರ್ಮವನ್ನು ಪ್ರತಿಪಾದಿಸಿದ್ದಾರೆ. ಶ್ರಮ ಜೀವಿಗಳನ್ನ, ಶೋಷಿತರನ್ನ ಸುಧಾರಿಸ ಬೇಕೆಣ್ನುವ ಧೋರಣೆ ಇವರದು.

ಒಂದು ಕಾಲದಲ್ಲಿ ರಾಜರ ಅರಮನೆ ಅಂತಃಪುರಗಳಲ್ಲಿ ಮಾತ್ರ ವಿಹರಿಸುತ್ತಿದ್ದ ಸಾಹಿತ್ಯ ಸರಸ್ವತಿಯು ಹೇಗೆ ಬಡವರ ಗುಡಿಸಲಿಗೆ ಕಾಲಿಟ್ಟಳು ಎಂಬುದನ್ನ ಅವರ ಗೊಬ್ಬರ ಕವಿತೆಯ ಮೂಲಕ ನೋಡಬಹುದು.

ವೀಣೆಯಂ ಶೂದ್ರಂ ಕಸಿದುಕೊಂಡು ಗೊಬ್ಬರದ
ಗುಂಡಿಯನ್ನಗೆಯ ಗುದ್ದಲಿಯ ಮಾಡಿದವನಲ್ಲ[11]

ಯಾವ ಸಾಧನ ಕಾಲಹರಣಗೈಯ್ಯುವ ಸುಖದ, ಸಂಭ್ರಮದ ಪ್ರತೀಕವಾಗಿತ್ತೋ ಅದನ್ನಿಲ್ಲಿ ಕವಿ ಶ್ರಮದ, ಬೆವರಿನ ದುಡಿವವರ ಸಾಧನವಾಗಿಸಿದ್ದಾರೆ. ಒಂದು ಕಾಲದ ವಿದ್ಯೆಯ ನಿಲುವನ್ನ ಮತ್ತೊಂದು ಕಾಲದಲ್ಲಿ ಬದಲಿಸಿದ್ದಾರೆ. ಹೊಸಗನ್ನಡ ಕಾವ್ಯದಲ್ಲಿ "ಶ್ರೀ ಸಾಮಾನ್ಯನೆ ಭಗವದ್ ಮಾನ್ಯಂ, ಶ್ರೀ ಸಾಮಾನ್ಯನೆ ಭಗವದ್ ಧನ್ಯಂ" ಎಂಬ ಹೊಸ ಮಂತ್ರ ಘೋಷಣೆ ಮಾಡಿದವರೇ ಕುವೆಂಪು.

ಕವಿತೆ ಭೂಪಾಲರ ಮನೆಯಲ್ಲಿ ಕೈಕೆಸರು
ಮಾಡಿಕೊಳ್ಳದೆಯೆ ಮೊಸರ ನುಣುತಿರ್ದ ಪಂಡಿತರ
ದಿವ್ಯ ಜಿಹ್ವಾರಸದ್ರಂಗದಲಿ ಕುಣಿದಾಡಿ
ಸುಳಿದಾಡಿ, ನಲಿದಾಡಿದಾ ನೀನು ಹಾ! ಇಂದು
ಕೊಳೆತು ನಾರುವ ರೈತನೊಡಗೂಡಿ ಒದ್ದಾಡಿ
ಗಂಧ ಪುನುಗು, ಜವಾವಿ ಕಸ್ತೂರಿಗಳ ಸುಳಿದು
ಸೆಗಣಿಗಂಪಾಘ್ರಾಣಿಪಂತಾಯ್ತೆ?.....................
....
ರಕ್ತ ತೃಷೆ ಕರ್ಮಮಂ ಖಡ್ಗಧನುಗಳ
ಬಾಣ ಪ್ರಯೋಗ ಕೌಶಲಮಂ ಕಿರೀಟಾದಿ
ವಸನ ಭೂಷಣ ತನುತ್ರ ಶಿರಪು ವಿಭವಮಂ
ವರ್ಣಿಸಿದ ನೀನಿದಂ ನೇಗಿಲಂ ಹಾರೆಯಂ
ಮಣ್ಣಗೆವ ಕಜ್ಜಮಂ ವರ್ಣಿಪಂತಾಯ್ತೆ?

ಕುವೆಂಪುರವರು ತುಂಬಾ ಮಾನವತಾ ವಾದಿಯಾಗಿ ಪರಿಸರವನ್ನು ನೋಡುತ್ತ ಬಂದವರು. ಮನುಷ್ಯ-ಮುನುಷ್ಯರ ನಡುವಿನ ಅಂತರ ಕಡಿಮೆಯಾಗಬೇಕಾದರೆ ಹೃದಯ ವೈಶಾಲ್ಯ ಬೇಕೆನಿಸುತ್ತದೆ. "ಎದೆಯೊಲುಮೆಯು ಕಣ್ಮುಚ್ಚಲು ಜೀವಕೆ ಬೆಳಕಿಲ್ಲ" "ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?" ಎಂದು ಕೇಳುತ್ತಾರವರು.

"ಇವರ ಚಿಂತನೆಗಳ ಮೇಲೆ ವಚನಕಾರರು ಪ್ರಭಾವ ಬೀರಿದ ಹಾಗೆ ಸ್ವಾಮಿ ವಿವೇಕಾನಂದರ, ಅರವಿಂದರ ಮತ್ತು ಗಾಂಧಿಯವರ ವಿಚಾರಗಳು ಪ್ರಭಾವ ಬೀರಿವೆ. ಆದ್ದರಿಂದಲೇ ಹೆಚ್ಚು ಹೆಚ್ಚು ಮನುಷ್ಯನ ಬದುಕಿನ ಆಶೆ-ಅಂತರಗಳತ್ತ ಇವರು ಪರಿತಪಿಸುವುದು."[೧೨]

ಕುವೆಂಪುರವರು ಬದುಕಿನ ಕಡೆಗೆ ಆಸ್ಥೆ ತೋರಿಸುವಾಗಲೆಲ್ಲ ಒಂದು ಸಮಾಜದ ಅವ್ಯವಸ್ಥೆಗೆ ಕಾರಣೀಭೂತವಾದ ದೇವರು-ಧರ್ಮ-ಈ ಜಾತೀಯ ವ್ಯವಸ್ಥೆ ಹೇಗೆ ಒಂದಕ್ಕೊಂದು ಪೂರಕವಾಗಿ ಮೇಲು ಕೀಳು ಭಾವನೆಯನ್ನು ಪೋಷಿಸುತ್ತ ಬಂದವು ಎನ್ನುವ ಕಡೆಗೆ ಗಂಭೀರವಾದ ಚಿಂತನೆಯನ್ನು ಕಾಣಬಹುದು. ಇಂಥ ಅಸಹ್ಯ ಸಂಬಂಧಗಳನ್ನು ಪ್ರತಿಭಟಿಸದೆ ಹೊಸ ಸಮಾಜದ ಬಗೆಗಿನ ಆಸೆ ಪೊಳ್ಳುತನದಿಂದ ಕೂಡಿದ್ದು ಎಂಬ ಅರಿವಿದೆ.

> "ಹಳೆಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ
> ಕೊಚ್ಚಿ ಹೋಗಲಿ, ಬರಲಿ ವಿಜ್ಞಾನ ಬುದ್ಧಿ" ಎನ್ನುವಲ್ಲಿಯೂ
> "ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ
> ಬಡತನ ಬುಡಮಟ್ಟ ಕೀಳ ಬನ್ನಿ
> ಸಾಕಿನ್ನು ಸೇರಿರೈ ಮನುಜ ಮತಕೆ" ಎನ್ನುವಲ್ಲಿ

ಕುವೆಂಪು ಕಾವ್ಯದ ಮಹತ್ತರ ಉದ್ದೇಶವಿದೆ. ಜನ ಸಾಮಾನ್ಯರ ಸುಖದ ವಿಷಯ ಬಂದಾಗ ಅವರ ಕಾವ್ಯವು ಅಷ್ಟೇ ನೇರ ಮತ್ತು ನಿಷ್ಠೂರವಾಗಿ ಹರಿಯುತ್ತದೆ.

> "ಬಡವರ ಗೋಳನು ಕೇಳದೆ ಕಿವುಡರು
> ಹೊಟ್ಟೆಯ ಪಾಡಿಗೆ ಕಾವಿಯನುಟ್ಟು
> ಸುಖ ಸಂಪತ್ತನು ಕೊಂಡವರು
> ಮೃಷ್ಟಾನ್ನವ ಉಂಡವರು"

(ಕೋಗಿಲೆ ಮತ್ತು ಸೋವಿಯಟ್ ರಷ್ಯಾ)

[illegible]

ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯವೂ ಕೂಡ ಜನ ಸಾಮಾನ್ಯರ ಉದ್ದಾರವನ್ನೇ ಬಯಸುತ್ತದೆ.

"ಪಾಪಿಗುದ್ದಾರಮಿಹುದೌ"
ಸೃಷ್ಟಿಯ ಮಹದ್‌ವ್ಯಹ ರಚನೆಯೊಳ್" ಎಂಬಲ್ಲಿ

ಅವರ ಸರ್ವೋದಯ ದೃಷ್ಟಿಯಿದೆ. " ಯಾರೂ ಮೇಲಲ್ಲ ಯಾರೂ ಕೀಳಲ್ಲ ಯಾವುದೇ ಅವಕಾಶ ಯಾರೊಬ್ಬರ ಗುತ್ತಿಗೆಯೂ ಅಲ್ಲ ಅದು ಎಲ್ಲರಿಗೂ ಸೇರಿದ್ದು. ಅದು ಮುಚ್ಚಿದ ಬಾಗಿಲಲ್ಲ; ತೆರೆದ ಬಾಗಿಲು."[೧೩]

"ಸುಖ ಮಮೂಲ್ಯಂ ಅದಾರಾದೊಡಂ
ರಾಜ ಸುಖದಂತೆಯೆ ಪ್ರಜಾ ಸುಖಂ...." ಎನ್ನುತ್ತಾರೆ.

"ಜನ ಮನದ ಶಕ್ತಿ
ಮೇಣವರಭೀಪ್ಸೆಯೆ ಮಹಾತ್ಮರಂ ನಮ್ಮಿಳೆಗೆ
ತಪ್ಪದೆಳೆತರ್ಪುದು ಕಾಣಾ" ಎಂಬುದು ಕುವೆಂಪು ನಿಲುವು.

ಹಾಗಾಗಿ ಅವರು ಜನರ ಮೂಲಕವೇ ರಾಮಶಕ್ತಿಯನ್ನ ನೋಡುತ್ತಾರೆ.

"ಜನ ಮನಮೆ
ಯುಗಶಕ್ತಿಯಲ್ತೆ? ತಾನಾ ಶಕ್ತಿ ಮೂರ್ತಿಗೊಳೆ
ನಾಮದನ್ನವತಾರಮೆಂದು ಪೂಜಿಪೆವಲ್ತೆ, ಪೇಳ್.
ವ್ಯಷ್ಟಿ ರೂಪದಿನಿಳಿವ ಸೃಷ್ಟಿಯ ಸಮಷ್ಟಿಯಂ?"[೧೪]

ಕರಿಸಿದ್ಧ ಮತ್ತು ಕಿಟ್ಟಂಯ್ಯನಂತವರನ್ನು ಹೊಗಳಬೇಕಾದ ಅನಿವಾರ್ಯತೆಯುಂಟಾಗಿದೆ. ಇದು ಕಾಲದ ಕರೆಯೂ ಹೌದು ಎಂಬುದನ್ನು ಕುವೆಂಪು ತಿಳಿಸಿದ್ದಾರೆ. "ಗೊಬ್ಬರದ ಜೀವವನೆ ಹೀರಿ, ಕೊಬ್ಬಿದ ಹೂವೆ ಕಬ್ಬಕ್ಕೆ ನೀಂ ಮಾತ್ರ ವಸ್ತುವೆ?" ಎಂದು ಕೇಳುವ ಕುವೆಂಪು ಅವರ ಪ್ರಶ್ನೆ ತುಂಬಾ ಮಾರ್ಮಿಕವಾಗಿದೆ. ವಾಸ್ತವದ ಜನತಾ ಜಗತ್ತಿನ ದೃಷ್ಟಿಯ ಮೂಲಕವೇ ಅವರು ಹಳೆಯ ಶ್ರೇಷ್ಟವೆನಿಸಿಕೊಂಡ ಜಗತ್ತುಗಳನ್ನು ನೋಡುತ್ತಾರೆ.

ನಮ್ಮ ಕೈಗಳೆ ಭೂಮಿಗಿಳಿದಿಹ ಕಲ್ಪವೃಕ್ಷಗಳು
ನಮ್ಮ ಕಾಲುಗಳಿಗೆ ಬಂದಿಹ ಕಾಮಧೇನುಗಳು
ಕೆಸರು ಧೂಳುಗಳಿಂದ ಕೆದರಿದ
ನಮ್ಮ ತಲೆ ವೈಕುಂಠವು!
ಬಿಸಿಲ ಬೇಗೆಗೆ ಬೆಂದು ಕಂದಿಹ
ನಮ್ಮ ಎದೆ ಕೈಲಾಸವು

ನಮ್ಮ ಬೆವರಿಳಿದಿಳೆಗೆ ಬೀಳುವ
ವರೆಗು ಗಂಗೆಯು ಬತ್ತಳು
ನಮ್ಮ ಕರ್ಮದ ಮಂತ್ರದಿಂದಲೆ
ಬರದ ಮಾರಿಯು ಸತ್ತಳು. (ಸುಗ್ಗಿಯ ಹಾಡು)

ಬೇಂದ್ರೆ: ನಾಡಕವಿ, ಜನಕವಿ ಎಂದೇ ಗುರ್ತಿಸಿಕೊಂಡವರು ಬೇಂದ್ರೆ. ಅವರ ತುತ್ತಿನ ಚೀಲ, ಅನ್ನವತಾರ, ಬೈರಾಗಿಯ ಹಾಡು, ದರಿದ್ರನಾರಾಯಣ, ಭೂಮಿತಾಯಿಯ ಚೊಚ್ಚಿಲ ಮಗ, ಮನುವಿನ ಮಕ್ಕಳು ಮತ್ತು ಬಿಡುಗಡೆ ಮುಂತಾದ ಕವನಗಳ ಮೂಲಕ ಸಾಮಾಜಿಕ ಸ್ಥಿತಿಗಳಿಗೆ ಸಾಕಷ್ಟು ತೀವ್ರವಾಗಿ ಪ್ರತಿಕ್ರಿಯಿಸುತ್ತಾರೆ. ಬಡಜನತೆಯ ಜೀವನದ ಸಾವು ನೋವುಗಳನ್ನು ಶೋಷಕರ ಕ್ರೌರ್ಯಗಳನ್ನು ಅವರು ಸೊಗಸಾಗಿ ಚಿತ್ರಿಸಿದ್ದಾರೆ. ಇವುಗಳಲ್ಲಿ ಕೆಲವನ್ನ ಹೀಗೆ ನೋಡಬಹುದು.

೧. "ಕೂಲಿ ಕುಂಬಳಿಯವರ
ಪಾಲಿನ ಮೈದೊಗಲ
ಧೂಳಿಯ ಭಂಡಾರ ಹಣೆಯೊಳಗಿತ್ತೋ"[೧೫]

(ಕುರುಡು ಕಾಂಚಾಣ)

೨. "ಕೂಸುಗಳಿಗೆ ಹಾಲು ಇಲ್ಲ ಪಶು ಬಲಿಯೇ ನಡೆದಿದೆ
ಕಾಳು ಇದೆ ಕೂಳು ಇಲ್ಲ ಹಣದ ಹುಚ್ಚು ಹಿಡಿದಿದೆ
ಕತ್ತಲಲ್ಲಿ ಬೆಳಕೆ ಇಲ್ಲ. ಜಗಕೆ ಬೆಂಕಿ ಹತ್ತಿದೆ
ಎಲ್ಲ ಇದೆ ಎಲ್ಲ ಇಲ್ಲ ಇಲ್ಲೆ ಸುತ್ತಿ ಮುತ್ತಿದೆ"[೧೬]

(ಅನ್ನಯಜ್ಞ)

೩. ದೇವರದೊಂದು
ಗೋರಿಯ ಕಟ್ಟಿ
ಧರ್ಮದ ಧೂಪಕೆ
ಬೆಂಕಿಯ ನಿಕ್ಕಿ
ಗಣ ಗಣ ಬಾರಿಸಿ
ಪ್ರಾಣದ ಗಂಟೆಯ
ಸಾವಿನ ನೋವಿಗೆ
ಕಲಮಲ ವೆದ್ದು
ತುತ್ತುವೆನೆಂದು
ಗದರುತ್ತಿಹುದು

ಬಡವರ ಬಗ್ಗರ
ತುತ್ತಿನ ಚೀಲವ
ಒಳಗಿನ ಒಳಗಿನ
ಒಳದನಿಯೊಂದು"

ಬೇಂದ್ರೆಯವರ ಅತ್ಯುತ್ತಮ ಕಾವ್ಯ ಸೃಷ್ಟಿಯಾಗಿರುವುದೇ ಮಾನವೀಯ ಬದುಕಿನ ಸಾವು ನೋವುಗಳಲ್ಲಿ; ಮನುಷ್ಯ ಜೀವನದ ಅತ್ಯುತ್ಕಟ ಕ್ಷಣಗಳ ಅನುಭವವನ್ನು ಹಿಡಿದಿಡುವಲ್ಲಿ; ಉದಾ: ಪುಟ್ಟ ವಿಧವೆ, ನೀ ಹಿಂಗ ನೋಡಬ್ಯಾಡ ನನ್ನ, ಹುಬ್ಬಳ್ಳಿಯಾವ, ನಾನು ಬಡವಿ, ಎದುರಾಡದಿರು ಗೆಳತಿ ಮೊದಲಾದವು. ಬೇಂದ್ರೆಯವರು ತಮ್ಮ ಕಾವ್ಯ ಶಕ್ತಿಯ ಪೂರ್ಣತೆಯನ್ನ ಸಾಧಿಸಿರುವುದು ಸಾಮಾಜಿಕ ಪ್ರಜ್ಞೆಯ ಪ್ರತಿಕ್ರಿಯಾತ್ಮಕ ಪದ್ಯಗಳಲ್ಲಿಯೇ ಎನ್ನಬಹುದು. ಸಂತತಿ ಎಂಬ ಪದ್ಯದಲ್ಲಿ.

"ಕೃತಯುಗವು ಕಲಿಯುಗಕೆ ಇಳಿದು ನಿಂತಿತು; ಮಾನವನ ದುಃಖ ದರ್ಶನವು ಬೆಳೆದು ಬಂದಿತು: ಸುಖವು ಕನಸಿನಲಿ ಕೆಣಕುತಿದೆ" ಎಂದು ಮಾನವ ಪ್ರಪಂಚವನ್ನೆ ತೆರೆಯುತ್ತಾರೆ.

"ತೊಗಲ ಚೀಲಗಳಲ್ಲಿ ಬದುಕು ನಡೆದಿದೆ. ಹೊಟ್ಟೆ ಹೊಸೆಯುವುದೆ
ಬಾಳುವೆಯು ನಿದ್ದೆ ಹಿಗ್ಗು; ಮಣ್ಣಿನಲಿ ಅನ್ನವನು ಬೆದಕುತಿವೆ
ಕಣ್ಣುಗಳು; ಇನ್ನವೂ, ಹೂತಿಲ್ಲ ಮನದ ಮೊಗ್ಗು." ಎನ್ನುತ್ತಾರೆ.

ಬೇಂದ್ರೆಯವರದು ಪದ್ಯ ಭಾಷೆ ಎಂಬುದಕ್ಕಿಂತ ಹೃದ್ಯಭಾಷೆ

ನಗುವಿರಲಿ
ಅಳುವಿರಲಿ
ಎರಡನ್ನು ನಂಬೆ.
ನಗೆ ನಂಜು
ಅಳು ಮಂಜು
ಇದ್ದೀತು ಎಂಬೆ. (ಲಕ್ಷ)

ಪುತಿನ: ಪುತಿನ ಮೂಲತಹ ಭಾಗವತಕವಿ ದೈವ ನಿಷ್ಠೆಯೇ ಅವರ ಪ್ರಧಾನ ನಿಲುವು. ಸಮಾಜವನ್ನ ನಿಸರ್ಗವನ್ನ ನೋಡುವಾಗಲೆಲ್ಲಾ ಅವರ ಕಣ್ಣು ದೈವೀದರ್ಶನ ಕಂಡರೂ ಅದರೊಳಗೆ ಆಗಾಗ ಜನಸಾಮಾನ್ಯರ ಪರವಾಸ ಕರುಣೆ ತುಳುಕಾಡಿದೆ. ಈ ಮಾತಿಗೆ ಅವರ "ಮಳೆಯು ನಾಡ ತೊಯ್ಯುತಿರೆ" ಕವನವನ್ನ ಉದಾಹರಿಸಬಹುದು.

"ಮಳೆಯು ನಾಡ ತೊಯ್ಯುತಿರೆ
ಮಿಂಚಿಗಿರುಳು ಬೆದರುತಿರೆ
ಗೂಡ ಮುದ್ದು ಗೊಲ್ಲ ನಡೆಯೊಳೊಂದು ಹಣತೆ ಮಿನುಗುತಿರೆ"[೧೬]

ಇಲ್ಲಿ ಕನಸಿನ ಲೋಕದಲ್ಲೇ ಇರುವ ಕವಿಗೆ ದೈವ ಹೊಳೆದರೂ ವಾಸ್ತವದ ಇರವು ಅರಿವಿಗೆ ಬಂದಾಗ

"ಇಂದು ನಮ್ಮ ಬಾಳು ಗೋಳು ಬಯಲು, ಹುಸಿಯು..." ಎನಿಸಿಬಿಡುತ್ತದೆ. ಅವರ ಕವಿತೆಗಳಲ್ಲಿ ಸಾಮಾಜಿಕ ಸ್ಪಂದನೆ ಪರಿಮಿತವಾದರೂ ಒಲುಮೆ ಮತ್ತು ಕರುಣೆಗಳಲ್ಲಿ ಯಾವುದು ಹೆಚ್ಚು ಎಂಬ ಪೈಪೋಟಿ ಮುಖ್ಯವಾಗುತ್ತದೆ. ಆಕಸ್ಮಿಕವಾಗಿ ಕಣ್ಣಿಗೆ ಬಿದ್ದ ತಬ್ಬಲಿ ನಾಯಿಮರಿಗೆ ಆಶ್ರಯವಿತ್ತು ಆರುತಿಂಗಳ ತನಕ ಪೋಷಿಸುವ ನಿರ್ವ್ಯಾಜ್ಯ ಕರುಣೆಯನ್ನ ತೋರಿದ ಕವಿಯ ಮನೆಯನ್ನೂ ಅದು ತೊರೆದು ಒಂದು ರಾತ್ರಿ ಒಲುಮೆ ತೋರಿದೆ ಕುರುಬ ಗೌಡನೊಂದಿಗೆ ಹೋಗಿಬಿಡುತ್ತದೆ. ಮಡಿವಂತಿಕೆಯ ಕಾರಣ ಮುಟ್ಟದಯೇ ತೋರಿದ ಕರುಣೆಯಿಂದ ಕೂಡಿದ ಕವಿಯ ಮನೆಯವರೆಲ್ಲರ ಪ್ರೀತಿ ಒಂದೆಡೆಗೆ: ಆಗಂತುಕನಾಗಿ ಬಂದ ಕುರುಬಗೌಡ ತಲೆ ನೈದಡವಿ ರೊಟ್ಟಿಯಿತ್ತು ಚಳಿಯೆಂದು ತನ್ನ ಕಂಬಳಿಯೊಳಗೆಯೇ ಮಲಗಿಸಿಕೊಳ್ಳುವಂತಹ ಆತ್ಮೀಯವಾದ ಒಲುಮೆ. ಇನ್ನೊಂದೆಡೆಗೆ ಇಂತಹ ಕರುಣೆ, ಒಲುಮೆಗಳಲ್ಲಿ ಒಂದನ್ನು ಆಯ್ದುಕೊಳ್ಳಬೇಕಾಗಿ ಬಂದಾಗ ಆ ನಾಯಿಮರಿ ಕುರುಬಗೌಡನ ಒಲವನ್ನೇ ಅಪ್ಪಿ ಕೊಳ್ಳುತ್ತದೆ! ಇದ ಕಂಡು ಕವಿಯ ಕಣ್ಣು ತೆರೆಯುತ್ತದೆ. ಈ ನೆಲೆಯಲ್ಲೇ ಪುತಿನ ಅವರ ಮಾನವೀಯ ಪರತೆಯನ್ನ ಅರ್ಥಮಾಡಿಕೊಳ್ಳಬೇಕು. ಅವರ ಪತಿತೆ, ರಂಗವಲ್ಲಿ ಪದ್ಯಗಳೂ ಇಂತಹ ಡಾಂಬಿಕತೆಗಳನ್ನು ಬಹುನವಿರಾಗಿ ಕಳಚುತ್ತವೆ.

"ತ್ಯಾಗವೇ ಒಲುಮೆ" ಎಂಬ ಕವನದಲ್ಲಿ ಹೆಣ್ಣೊಬ್ಬಳ ಒಲುಮೆಯ ಆದರ್ಶವನ್ನು ತಿಳಿಸುವ 'ರೋಜಹೂವು' ತನ್ನ ಸರ್ವಸ್ವವನ್ನೂ ತನ್ನ ಪ್ರಿಯಕರನಿಗೆ ಸಮರ್ಪಿಸುತ್ತದೆ. ಕೇವಲ ಒಲುಮೆಗಾಗಿ! ಸಾಯುವ ಗಳಿಗೆ ಸಮೀಪಿಸಿದಾಗ–

"ಒಲುಮೆಯ ಸಲುವಾಗಿ ಎಲ್ಲವ ತೆತ್ತೆ,
ಚೆಂದವ, ಪ್ರಾಯವ, ಜೀವವ ತೆತ್ತೆ:
ಬಲಿಯಲು ತೆತ್ತೆ
ಒಲಿದುದಕೆ ತೆತ್ತೆ:
ಸಾಯುವೆ: ತುಸ ಹೊತ್ತು ಮುತ್ತಿಡು ಮತ್ತೆ."[೧೭]

ಎಂದು ಮುತ್ತಿಡುತ್ತಲೇ ಸಾಯುವ ಹೂ ಸಾರುವ ಸಿದ್ಧಾಂತ

"ತ್ಯಾಗವೆ ಒಲುಮೆ
ಬಾಳ್ವೆಯ ಕುಲುಮೆ"

ಕೆ.ಎಸ್. ನರಸಿಂಹಸ್ವಾಮಿ: ಕೆ.ಎಸ್.ನ ಸಾಮಾನ್ಯದ ಆರಾಧಕರು ಎಂದು ಅನಂತಮೂರ್ತಿ ಹೇಳುತ್ತಾರೆ. ಅದು ನಿಜ. ನಿತ್ಯದ ಸಾಮಾನ್ಯ ದೈನಿಕಗಳಲ್ಲೇ ಅಪೂರ್ವವಾದ ಕವಿತೆಗಳನ್ನ ಸೃಷ್ಟಿಸಬಲ್ಲರು. ಕೆ.ಎಸ್.ನ ನಗರ ಹಳ್ಳಿಗಳ ನಡುವಿನ ಮದ್ಯಮ ವರ್ಗದ ಬದುಕೇ ಅವರ ಕಾವ್ಯಗಳಲ್ಲಿ ಹರಡಿಕೊಂಡಿದೆ. ಮೂಲತಃ ಒಲವಿನ ಕವಿ ಪ್ರೇಮ ಕವಿ ಎಂದೇ ಕರೆಸಿಕೊಳ್ಳುವ ಅವರು ಅದನ್ನ ಒಪ್ಪಿಕೊಳ್ಳುತ್ತಾರೆ.

ಸೇತುವೆ ದಾಟುತ್ತ
ಹೆದ್ದಾರಿಯಲ್ಲಿ ನಡೆದು
ಎಲ್ಲ ನೋವನು
ಮರತೆ ಬದುಕಿನೊಳಗೆ
ನೊಂದ ನೋವನ್ನಷ್ಟೆ
ಹಾಡಲೇ ಬೇಕೇನು?
ಬೇಡವೇ ಯಾರಿಗೂ
ಸಿರಿಮಲ್ಲಿಗೆ? –ಮಲ್ಲಿಯ ಮಾಲೆ.

ಕೆ. ಎಸ್. ನ ತಮ್ಮ ಮಲ್ಲಿಗೆಯ ಮಾಲೆಯ ಮುನ್ನುಡಿಯಲ್ಲಿ ಹೇಳುವಂತೆ" ಬಳೆಪೇಟೆಯಲ್ಲಿ ನನ್ನನ್ನು ಕಂಡು ಕಿರುನಗೆ ಬೀರುವ ದಂಪತಿಗಳಿದ್ದಾರೆ: ಸಿಟಿ ಬಸ್ಸಿನಲ್ಲಿ ನನ್ನನ್ನು ಗುರುತಿಸಿ ಸ್ಥಳ ಮಾಡಿಕೊಡುವ ತರುಣ ತರುಣಿಯರಿದ್ದಾರೆ...ನನ್ನ ಅಭಿಮಾನಿ ವೃಂದದಲ್ಲಿ ಧಾರವಾಡದ ಬಸ್‌ಸ್ಟಾಂಡಿನಲ್ಲಿ ನನ್ನ ಹಾಡನ್ನು ಸ್ವಲ್ಪ ಅದಲು ಬದಲು ಮಾಡಿ ನನಗೊ ಹಾಡಿ ನನ್ನಿಂದ ಪೈಸೆ ಪಡೆದ ಬಡಹುಡುಗನೂ ಸೇರಿದ್ದಾನೆ. ಇಂಥ ಪಡೆದ ಸಂಗತಿಗಳನ್ನೆಲ್ಲ ವರ್ಣಿಸಲು ಒಂದು ಪುಸ್ತಕವೇ ಬೇಕಾದೀತು" ಜನಕ್ಕೆ ಬೇಕಾದ ಕವಿಯೊಬ್ಬನ ಕೃತಜ್ಞತೆಯ ಸಾಲುಗಳಿವು. ಬದುಕನ್ನ ಸ್ವೀಕರಿಸುವ ಅವರ ಕವಿತೆಯ ಸಾಲುಗಳಿವು:

ಸಾವಿಗಂಜುವ ಬದುಕಿಗಿಲ್ಲಿ ನೆಲೆಯಿಲ್ಲ
ನೋವಿರಲಿ, ಚೆಲುವಿಹುದು ಬದುಕಿನೊಳಗೆಲ್ಲ (ಐರಾವತ)

ಚಿಕ್ಕ ಪದ್ಯದಲ್ಲೇ ಅರ್ಥಗರ್ಭಿತ ಚಿತ್ರವನ್ನ ಅಡಗಿಸಬಲ್ಲ ಸಾಮರ್ಥ್ಯ ಕೆ.ಎಸ್.ನ. ಪ್ರತಿಭೆಗಿದೆ. ಅವರ ರೈಲ್ವೆ ನಿಲ್ದಾಣದಲ್ಲಿ ಸಣ್ಣ ಸಂಗತಿ ಪದ್ಯಗಳು ಅದಕ್ಕೊಂದು ಉದಾಹರಣೆ. ತವರಿನಿಂದ ಮಗಳನ್ನು ಬೀಳ್ಕೊಡುವ ಸಾಧಾರಣ ಸನ್ನಿವೇಶದ ಆಳದ ನೋವು. ದುಃಖ ಸಂಕಟಗಳನ್ನ ಈ ಸಾಲುಗಳು ಹೇಗೆ ಹಿಡಿದಿವೆ ನೋಡಿ.

" ಬಿಸಿ ನೀರಿದೆಯೇ ಮೀನಾ?
ಮಗುವಿನ ಹಾಲಿನ ಪುಡಿಗೆ?
ಬೇಕಾದಷ್ಟಿದೆಯಮ್ಮ–
(ಕಣ್ಣಲ್ಲೂ ಜೊತೆಗೆ) –ರೈಲ್ವೆ ನಿಲ್ದಾಣದಲ್ಲಿ

ಕೆ.ಎಸ್.ನ ಮನುಷ್ಯ ಪ್ರಪಂಚ ಅವರ ಕಾವ್ಯದಷ್ಟೆ ನೇರ, ಸರಳ, ಕೃತಕ ನಾಗರೀಕತೆಯಿಲ್ಲ. ಮೋಸ, ತಗಾದೆಗಳಿಲ್ಲದ ಜನರವರು.

ಮುದ್ದಿನಲಿ ಹೇಡಿತನವನು ಊಡದಿರು ನನಗೆ
ವಜ್ರವಾಗಲಿ ನಿನ್ನ ಒಲುಮೆ"
–ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ.

ಮೃದು ಮನಸ್ಸಿನ ಈ ಕವಿಯ ಮಾತು ಮೃದುವಾಗಿದ್ದರೂ ಅದು ಹೊಳೆಯಿಸುವ ವ್ಯಂಗ್ಯ, ಮಾಡುವ ಟೀಕೆ ತೀಕ್ಷ್ಣವಾಗಿಯೇ ಇರುತ್ತದೆ.

ಇವನ ಕಾಡುತ್ತಿಲ್ಲ ನಾಳೆಗೆನ್ನುವ ಚಿಂತೆ
ಆದ್ದರಿಂದಲೇ ಇವನು ನಿತ್ಯ ಸುಖಿಯೇ?
ಇವನ ಬದುಕಿಗೆ ಕೂಡ ಬೆಲೆಯಿಲ್ಲವೆಂದಲ್ಲ
ಚುನಾವಣೆಗಳಲ್ಲಿವನು ಒಂದು ಓಟು.–ಕಾವಲುಗಾರ.

ನಿನ್ನ ಹೆಸರಿಡಬಹುದು ಬೀದಿ ಬೀದಿಗೆ. ಸುಲಭ
ನಿನ್ನಂತೆ ಬದುಕುವುದು ದುರ್ಲಭ
ನಿನ್ನ ಹೆಸರೆತ್ತಿದರೆ, ನಿನ್ನ ಮಾತಾಡಿದರೆ
ನಿನ್ನ ವೈರಿಗೆ ಕೂಡಾ ಲಾಭ–ಗಾಂಧೀಸ್ತವನ.

ಮನೆಯಿಂದ ಮನೆಗೆ, ತೆರೆದ ಬಾಗಿಲು ಮುಂತಾದ ಕವನಗಳಲ್ಲಿ ನರಸಿಂಹಸ್ವಾಮಿಯುವರು ದೈನಂದಿನ ಜೀವನದ ಸಾಮಾನ್ಯ ವಿವರಗಳನ್ನು ಕಟ್ಟಿಕೊಡುವುದು ಕೆಳ ಮಧ್ಯಮ ವರ್ಗದ ಬದುಕನ್ನೇ.

ವರುಷ ತುಂಬಿದರೆ ಹೊರ ಮನೆಯಿಂದ ಹೊರ ಮನೆಗೆ
ವರ್ಗ, ವರ್ಗವೆಂದರೆ ಮತ್ತೆ
ಗಂಟು ಮೂಟೆಯ ಬಿಗಿತ, ಇನ್ನಷ್ಟು ಆಯಾಸ.
ತಿರುಪಿರದ ಲಾಂದ್ರಗಳು, ತಳವಿರದ ಗೋಡೆಗಳು,
ಜರಡಿ, ತೊಟ್ಟಿಲು–ಬಯಕೆ–ಇವುಗಳದೆ ಮೆರವಣಿಗೆ!

ಕೆ.ಎಸ್.ನ ವಾಸ್ತವಕ್ಕೆ ಕಣ್ಮುಚ್ಚಿ, ಅಪ್ರಮಾಣಿಕವಾದವರಲ್ಲ 'ತರುಣ ಮಿತ್ರನಿಗೆ' ಎಂಬ ಕವನದಲ್ಲಿ ಕವಿ ಹೀಗೆ ಹೇಳುತ್ತಾರೆ.

ಪಯಣದಲಿ ಆಗಾಗ ನಿಂತು ನೋಡುತ ನಡೆವ
ಜನವೆಲ್ಲ ನಿರ್ಗತಿಕರಲ್ಲ! ಓ ತರುಣ ಮಿತ್ರ
ಒಲಿದಿತ್ತ ನೋಡು. ಚಲಿಸುವುದಿಲ್ಲ; ಭೂಮಿಯೇ
ಸುಸ್ಥಿತಿಯಲುರುಳುತಿದೆ; ಇಲ್ಲಿ ಕಾಣದು ಓಟ
ಇದು ಕಾಲ ದೇಶಗಳ ಚೆಲುವು ಕಟ್ಟಿದ ತೋಟ
ಭಾಗ್ಯಮಯವೀ ನೆಲದ ನೋಟ, ಓಡುವುದಿರಲಿ.
ನಡು ನಡುವೆ ನಿಂತು ನೋಡುವ ತಾಳ್ಮೆ ನಿನಗೆ ಬರಲಿ.

ತಾಳ್ಮೆ ಅವರ ಕವಿತೆಗಳ ಪ್ರಧಾನ ನಿಲುವು 'ಉಂಗುರ' ಕವಿತೆಯಲ್ಲೂ ಹೀಗೇ ಹೇಳುತ್ತಾರೆ.

ಬರವೇ ಇರಲಿ, ಸಮೃದ್ಧಿ ಬರಲಿ
ತಾಳುವ ಬಾಳೀನ ಬಾವುಟವಿರಲಿ.

ಜಿ. ಎಸ್. ಶಿವರುದ್ರಪ್ಪ

ನಗರದ ಜನಸಾಮಾನ್ಯರ ಯಾಂತ್ರಿಕ ಬದುಕನ್ನು ಹೃದಯರಹಿತ ಸ್ಥಿತಿಯನ್ನು ಅತ್ಯಂತ ವಿಶಿಷ್ಟವಾಗಿ ಹೇಳಿದವರು ಜಿ.ಎಸ್.ಎಸ್.

"ಹುಟ್ಟಿದ್ದು; ಆಸ್ಪತ್ರೆಯಲ್ಲಿ
ಬೆಳೆದದ್ದು; ಬಸ್ ಟ್ರಾಂ ಕಾರು ಟ್ಯಾಕ್ಸಿ ಎಲೆಕ್ಟ್ರಿಕ್ ಟ್ರೇನ್‌ಗಳಲ್ಲಿ।
ಕುಡಿದದ್ದು; ಕಾಣದೆಮ್ಮೆಯ ಕೆಚ್ಚಲು ಕರೆದು ಕಳಿಸಿದ ।
ಬಾಟ್ಲಿಯ ಹಾಲು, ಗ್ರೈಪ್ ಸಿರಪ್, ಹಾರ್ಲಿಕ್ಸ್ ಇತ್ಯಾದಿ ।
ಕಂಡದ್ದು; ಬೆಳಗಿನಿಂದ ಸಂಜೆಯ ತನಕ ಲಕ್ಷ ಚಕ್ರದುರುಳು।
ಅವಸರದ ಹೆಜ್ಜೆಯ ಮೇಲೆ ಸರಿವ ಸಾವಿರ ಕೊರಳು।
ಕಲಿತದ್ದು; ಕ್ಯೂ ನಿಲ್ಲು, ಫುಟ್‌ಪಾತ್‌ನಲ್ಲಿಯೇ ಸಂಚರಿಸು
ಹೇಗೋ ಅವರಿವರ ತಳ್ಳು ಮುನ್ನುಗ್ಗು।
ಎಲ್ಲಾದರೂ ಸರಿಯೇ ಬೇರೂರು ಹೀರು!
ತಾಯಿ; ರಸ್ತೆಯಂಚಿನಲ್ಲಿಯೇ ಕೈ ಹಿಡಿದು ನಡೆಸಿದವಳು
ಕೋಣೆಯಲ್ಲೇ ಹೊರಲೋಕವ ಪರಿಚಯಿಸಿ ಎಚ್ಚರಿಕೆ ಕೊಟ್ಟವಳು।
ತಂದೆ; ಬೆಳಗಿಂದ ಸಂಜೆಯತನಕ ಕಣ್ಮರೆಯಾಗಿ।
ಒಮ್ಮೊಮ್ಮೆ ರಜಾದಿನಗಳಲ್ಲಿ ಕಣ್ಣಿಗೆ ಕಂಡು।
ಕುಳಿತು ಕೆಮ್ಮುವ ಪ್ರಾಣಿ।
ವಿದ್ಯೆ; ಶಾಲೆ ಕಾಲೇಜು–ಜಾಹಿರಾತು–ರೇಡಿಯೋ

ಸಿಲೋನ್ ವ್ಯಾಪಾರ ವಿಭಾಗ ಶಿಫಾರಸು ಮಾಡಿದ್ದು।
ನೀನಾಗಿ ಕಲೆತದ್ದು ಬಲು ಕಡಿಮೆ..."

ಬಣ್ಣಗಳ ಕಡೆ ಕಣ್ಣಾಡಿಸುವುದು– ಲಕ್ಷದಾರಿಗಳ ಚದುರಂಗದಾಟದಲಿ ಯಾರದೋ ಕೈಗೊಂಬೆಯಾಗಿ ದುಡಿಯುವುದು ಸೋತು ಸುಸ್ತಾಗಿ ತ್ತರಿಸುತ್ತ ಮನೆಯೆಂಬ ಗೂಡಿಗೆ ಬಂದು ಮಲಗುವುದು ಇದು ಬಹುಸಂಖ್ಯೆಯ ನಾಗರೀಕರ ಬದುಕಿನ ದಿನಚರಿ. ಇಲ್ಲಿ ಸಹಜತೆ, ಜೀವಂತಿಕೆ, ಮಾನವೀಯತೆಗಳ ಕೊರತೆಯಿರುವುದನ್ನು ಶಿವರುದ್ರಪ್ಪನವರು ಬಹು ಚೆನ್ನಾಗಿ ನಿರೂಪಿಸಿದ್ದಾರೆ.

ಜನರ ದಾಸ್ಯ ಮನೋವೃತ್ತಿಯನ್ನು ನಾಯಿಗೆ ಹೋಲಿಸುತ್ತ

"ನಾವು ಗುಲಾಮರು ನಮಗೆಂದಿಗೂ। ಬೇಕಾಗಿಲ್ಲ ಬಿಡುಗಡೆ
ಶತಮಾನಗಳ ಕಾಲ ಕೊರಳ ಪಟ್ಟಿಯಲ್ಲೆ।
ಬೆಳೆದ ನಾಯಿಗಳು ನಾವು ಬಿಚ್ಚಿದರೂ
ಮತ್ತೆ ಅಭ್ಯಾಸ ಬಲದಿಂದ ಅಲ್ಲೇ ನಿಂತು
ಟೇಬಲ್ಲಿನಿಂದುದರ ಪಿಂಜಲಿಗಾಗಾಗಿ।
ನಾಲಿಗೆ ಚಾಚಿ ನಿಂತ ನೊಣಗಳು" – ಗುಲಾಮರು

ಯುವ ಪೀಳಿಗೆ ಹಾಳಾಗುವ ನಿರರ್ಥಕ ಚಟುವಟಿಕೆಗಳಲ್ಲೇ ಮುಳುಗಿದ ವಿದ್ಯಾರ್ಥಿ ಸಂಕುಲವನ್ನು ಕುರಿತು :

ಬರುತ್ತವೆ ಕ್ಲಾಸಲ್ಲಿ ಕೂತು ಕತ್ತು ಬಗ್ಗಿಸಿಕೊಂಡು ಪಾಠ ಕೇಳುತ್ತವೆ॥
ಯಾರಾದರೂ ನಾಲ್ಕು ಜನ ಬಂದು ಕಲ್ಲೆಸೆದು।
ಜೈ ಎಂದು ಕೂಗಿದರೆ ಪುಸ್ತಕಗಳನ್ನು ಬಗಲಿಗಿಟ್ಟು।
ಹೊರಕ್ಕೆ ಪುರ್ರೆಂದು ಹಾರಿ ಹೋಗುತ್ತವೆ।
ಮರದ ಕೆಳಗೆ ಕೂತು ಕಣ್ಣಲ್ಲಿ ಕಣ್ಣಿಟ್ಟು।
ಸಲ್ಲಾಪ ನಡೆಸುತ್ತವೆ॥ –ವಿದ್ಯಾರ್ಥಿಗಳು

'ನೆಲದ ಕರೆ' ಎಂಬ ಅವರ ಪದ್ಯದಲ್ಲೂ ನೊಂದ ಜೀವಿಗಳಿಗೆ ನೆಮ್ಮದಿಯ ತಂಪ ನೀಡುವುದನ್ನು ಪರಮ ಪೂಜೆ ಎಂಬ ಮೌಲಿಕ ಮಾತಿದೆ. ಬರಗಾಲಕ್ಕೆ ತತ್ತರಿಸಿದ ರೈತನ ದನಿಯಾಗಿ ಈ ಪದ್ಯವನ್ನು ನೋಡಬಹುದು.

ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ
ನಾಲ್ಕು ಹನಿಯ ಚೆಲ್ಲಿ
ದಿನ ದಿನವೂ ಕಾದು ಬಾಯಾರಿ ಬೆಂದೆ
ಬೆಂಗದಿರತಾಪದಲೂ

ಓ ಬನ್ನಿ ಬನ್ನಿ, ಓ ಬನ್ನಿ ಬನ್ನಿ
ನನ್ನೆದೆಗೆ ತಂಪ ತನ್ನಿ
ನೊಂದ ಜೀವರಿಗೆ ತಂಪನೀಯುವುದೆ
ಪರಮ ಪೂಜೆಯೆನ್ನಿ॥

ಜೀತದಾಳು ಮತ್ತು ಕೂಲಿಕಾರರನ್ನು ಕುರಿತು "ಕಾಡಿನ ಕತ್ತಲಲ್ಲಿ" ಪದ್ಯ ಮಾತಾಡುತ್ತದೆ. ದನ ಕಾಯಲು ಹೋದ ಹುಡುಗ ಸಂಜೆಯ ಹೊತ್ತಿಗೆ ದನಗಳು ಸಿಗಲಾರದೇ ಇದ್ದಾಗ ಹೇಗೆ ಪರಿತಪಿಸುತ್ತಾನೆ ಎಂಬುದನ್ನು ಇಡೀ ಕವಿತೆ ಕಣ್ಣೆದುರು ನಿಲ್ಲಿಸುತ್ತದೆ.

"ಹರಕು ಚಿಂದಿಯ, ಜೋಲು ಮೇರೆಯ
ಕೆದರಿದ ತಲೆಯ ಕೆಳಗೆ ಗಾಬರಿ ಕಣ್ಣು
ಅಳು ಬೆರೆತ ಮಾತು
ದನ ಬರಲಿಲ್ಲ, ಮನೆಯಲ್ಲಿ
ಒಡೇರು ಒಡಿತಾರೆ... ಅದಕ್ಕೆ ಇಲ್ಲಿ..."

ಚನ್ನವೀರ ಕಣವಿ

ವಿಡಂಬನೆಯನ್ನು ಮುಖ್ಯ ಅಸ್ತ್ರವಾಗಿಸಿಕೊಂಡ ಕಣವಿ ಆ ಮೂಲಕವೇ ವಾಸ್ತವ ಜಗತ್ತನ್ನು ಜನರ ವಿವಿಧ ಮುಖಗಳನ್ನ ಪರಿಚಯಿಸುತ್ತಾ ಹೋಗುತ್ತಾರೆ. ಅಪರಾವತಾರ, ಲಾಗ, ಜಗದೇಕಮಲ್ಲ, ಮನುಷ್ಯ ಪ್ರಾಣಿ ಇತ್ಯಾದಿ ಸಂಪೂರ್ಣ ವಿಡಂಬನಾ ಕಾವ್ಯಗಳಾಗಿವೆ. ಲಾಗ ಕವನದಲ್ಲಿ ತನ್ನ ಗುರಿಯ ಈಡೇರಿಕೆಗಾಗಿ ಕುಪಿಲೋಪಾಯಗಳನ್ನ ಮಾಡುವ ಮಂಗನ ರೂಪಕದಲ್ಲಿ ಮಾನವರ ಕಥೆಗಳನ್ನು ಬಳಸುತ್ತಾರೆ.

ನೀ ಕೊಟ್ಟ ಹಣ್ಣು ರುಚಿ ಹೃದಯ ನಿನ್ನೆಷ್ಟು ಸವಿ
ಕಡಲ ತಳದಲಿ ಮೊಸಳೆ ತೆರೆದ ಬಾಯಿ
ಮರದಲ್ಲಿ ಹೃದಯವನು ಬಿಟ್ಟ ಸೋಜಿಗವ ನುಡಿ
ಬದುಕಿಕೊಳ್ಳಲು ಇದೇ ತಕ್ಕ ದಾರಿ
ಬೆಕ್ಕು ಬೆಣ್ಣೆಯ ಜಗಳದಲ್ಲಿ ತಕ್ಕಡಿಯ ತೂಗಿ
ನ್ಯಾಯ ದಾನವ ಗೈದ ನಿನ್ನ ಬುದ್ಧಿ
ರಾಜಕಾರಣಿಗಳನು ತಲೆದೂಗಿಸಿಹುದಿಲ್ಲಿ
ನಿನಗಿಂತ ಅವರಿಗೇ ಹೆಚ್ಚು ಸಿದ್ಧಿ

ಇದೇ ಮಾದರಿಯಲ್ಲೂ ಅವರ ಜಗದೇಕಮಲ್ಲ, ಕೃತಾರ್ಥ. ಅಪರಾವತಾರ, ಕವನಗಳನ್ನು ನೋಡಬಹುದಾಗಿದೆ. ಕಣವಿಯವರ ರಚನೆಗಳನ್ನು ಕುರಿತು ಡಾ॥ ಬಿಳಿಮಲೆಯವರು, "ನನಗನ್ನಿಸಿದ ಹಾಗೆ ಕಣವಿಯವರ ಕವನಗಳ ನೆಲೆ ಇರುವುದೇ ಭಾರತೀಯ ಸಮಾಜದಲ್ಲಿ ಆಧುನೀಕರಣ ಉಂಟು ಮಾಡಿದ ಹೊಸ ರಚನೆಗಳ ವಿರುದ್ಧವಾಗಿ ಹಳೆ ರಚನೆಗಳನ್ನು ಅಪ್ಪಿಕೊಳ್ಳುವಲ್ಲಿ. ಈ ಬಯಕೆ ಮೂಲತಃ ವೈದಿಕ ಪರವಾದುದು ಸಾಂಪ್ರದಾಯಿಕವಾದುದು. ಆಧುನಿಕತೆಗೆ ಬೆನ್ನ ಹಾಕಿದುದು" ಎನ್ನುತ್ತಾರೆ. ಈ ಹೇಳಿಕೆ ಅಷ್ಟು ಸರಿಯಲ್ಲ ಕಣವಿ ಉದ್ದಕ್ಕೂ ಸಮಾಜದ ಬೆಳವಣಿಗೆಯ ಜೊತೆ ಜೊತೆಗೆ ಪ್ರತಿಕ್ರಿಯಿಸುತ್ತಲೇ ಬಂದವರು ಬಿಳಿಮಲೆ ಭಾವಿಸಿದಷ್ಟು ಬಂಡಾಯಗಾರರಲ್ಲದಿದ್ದರೂ ನವಿರಾಗೇ ಜನ ಸಾಮಾನ್ಯರ ಪರವಾಗಿ ನಿಂತವರು ಕಣವಿ.

"ತಾಸಿಗಿಪ್ಪತ್ತು ಅಪಘಾತ ಆಕಾಶದಲ್ಲಿ ನೆಲದಲ್ಲಿ ಪಾತಾಳದಲ್ಲಿ
ಹತ್ತು ದಿಕ್ಕಿಗೂ ಸಂಪು।
ಒತ್ತಿ ಮಾಡಿದರೆ ಕಂಪು।
ಕಲಾಪ ಕಲಾಪಿಗೆ ಜನರ ಗುಂಪು... ಕೊಲಾಹಲ।
ಕಲ್ಲು ತೂರಾಟ, ಲಾರಿ. ಲೂಟಿ ಸೋಡಾಬಾಟ್ಲಿ
ಅಶ್ರುವಾಯು ಪ್ರಯೋಗ।
ಸದಾ ತೆರೆದುಕೊಂಡಿರುವುದು ಆಸ್ಪತ್ರೆ ಗೇಟು" –ಜೀರ್ಣೋದ್ಧಾರ

ಕಣವಿ ಜನರೆಂದರೆ ಹೊತ್ತು ಬಂದಂತೆ ಕೊಡೆ ಹಿಡಿಯುವವರು ಎನ್ನುತ್ತಾರೆ.

ದೊಡ್ಡವರ ಕಾರು ಸಿಡಿಸುವ ಕೊಳೆಗೆ
ಆಗದವರು ಎದುರು ಬಂದಾಗ ಮರೆಗೆ
ಏಕ ಚಕ್ರಾಧಿಪತಿಯ ಬೆಳ್ಗೊಡೆಗೆ
ಪಲ್ಲಕ್ಕಿಯಲ್ಲಿಟ್ಟು ದೇವರಿಗೆ
ಬೆದರಿಸಲಿಕ್ಕೆ ನಾಯಿಗೆ
ನಡೆಯಲಿಕ್ಕೆ ಊರುಗೋಲಾಗಿ...

ಹೀಗೆ ಸಮಯಕ್ಕೆ ತಕ್ಕಂತೆ ಕೊಡೆ ಹಿಡಿಯುತ್ತೇವೆ ಎನ್ನುತ್ತಾರೆ.

ಜಿ.ಪಿ. ರಾಜರತ್ನಂ

ಬಡ ಬಗ್ಗರ ದೈನಂದಿನ ಜೀವನವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಜಿ.ಪಿ. ರಾಜರತ್ನಂ ಕಾವ್ಯ ಅಪ್ಪಟ ಗ್ರಾಮೀಣ ಶೈಲಿಯದ್ದು.

ಯೇಳ್ಕೊಳ್ಳಾಕ್ ಒಂದ್ ಊರು
ತಲೆಮೇಗ್ ಒಂದು ಸೂರು
ಮಲಗಾಕೆ ಭೂಮ್ತಾಯಿ ಮಂಚ
ಕೈಯಿಡದೊಳ್ ಪುಟ್ನಂಜಿ
ನಗೆನಗುತ ಉಪ್ಗಂಜಿ
ಕೊಟ್ರಾಯ್ತು ರತ್ನನ್ ಪರ್ಪಂಚ!
ಅಗಲೆಲ್ಲ ಬೆವರ್ ಅರ್ಸಿ
ತಂದದ್ರಲ್ಲಿ ಒಸಿ ಮುರ್ಸಿ
ಸಂಜೇಲಿ ವುಳಿಯೆಂಡ ಕೊಂಚ
ಯ್ತೀರ್ತ ಮೈ ಝುಂ ಅಂದ್ರೆ
ವಾಸ್ನೆ ಘಂ ಘಂ ಅಂದ್ರೆ
ತುಂಭೋಯ್ತು ರತ್ನನ್ ಪ್ರಪಂಚ!

ಬೆವರಿನ ಮೌಲ್ಯ ಹೇಳುತ್ತ ಹಾಗೆ ಶೋಷಣೆ ಮಾಡಿದ ಈ ಕೊರಳನ್ನು ಒತ್ತಿಕೊಂಡು ಹೋದ ಹೊಟ್ಟೆಯ ಕರುಳಿನಿಂದಲೇ ಆ ಶ್ರೀಮಂತಿಕೆಯ ಕೊರಳಿಗೆ ಗಲ್ಲಾಗಬೇಕು ಎಂದು ಕವಿ ನಯವಾಗಿಯೇ ಮುನಿಯನ್ ಮೊಕ್ಕ ಮೂರ್ ನೀರು ಕವನದಲ್ಲಿ ಸಿಡಿದೇಳುತ್ತಾರೆ.

ಮೈಯ್ಯಿನ್ ರಕ್ತ ನೀರ್ ಮಾಡ್ಕೊಂಡಿ
ಬೆವರಿನ ಮಳೇಲ್ ಕಾಸಕೆರಕೊಂಡಿ
ನೆಪ್ಗೆ ಬಂದ್ರೆ ಇಲ್ಲೆ
ಮೋಸಮಾಡ್ತ ಮೆಲ್ಗೆ
ಬತ್ಕೊಂಡ್ ಒಪ್ಪಿನ್ ಒಗದಿರಕೊಳ್ಳೋ
ಡೊಳ್ಳಿನ್ ಆಕ್ಬೇರ್‌ಗಲ್ಲೇ!

ದಿನಕರ ದೇಸಾಯಿ

ದಿನಕರ ದೇಸಾಯಿ ದುಡಿವ ಸಾಮಾನ್ಯ ಕೆಲಸಗಾರರ ಬೆವರು ರಕ್ತದ ಬಗ್ಗೆ ಹೇಳುತ್ತ ಕೆಳವರ್ಗದ ಶ್ರಮವನ್ನು ಮೂಲೆ ಗುಂಪಾಗಿಸಿದ ಸ್ಥಿತಿಯನ್ನು ಹೀಗೆ ಹೇಳುತ್ತಾರೆ : ಕಲ್ಲು ಕುಟಿಗರು ಪದ್ಯದಲ್ಲಿ

ಇಂದ್ರ ಭವನವ ನಾವು ರಚಿಸಿದರು ದುಡಿದು
ನಮ್ಮ ಗುಡಿಸಲು ಮಾತ್ರ ಸೋರುವುದು ಬಿಡದು
ನೆತ್ರಿನ ನೀರಾಯ್ತು!

ಅತ್ತರೂ ಬೆವರಾಯ್ತು!
ಸತ್ತರೇ ಸಾರಾಯ್ತು ನಮ್ಮ ಜೀವ!
ನಮ್ಮ ಕಾಯುವನಾರು? ಯಾವ ದೇವ!

ಅರಸರು ರಾಜ್ಯವನ್ನು ಕಟ್ಟುವಲ್ಲಿ ಬೆಳೆಸುವಲ್ಲಿ ಸಾಮಾನ್ಯರ ಉಪಯೋಗವನ್ನು ಪಡೆದು ನಂತರದಲ್ಲಿ ಹೊರಗೆಸೆದ ಸಂದರ್ಭಗಳು ಚರಿತ್ರೆಯಲ್ಲಾಗುವುದಿಲ್ಲ.

ಕಸಗುಡಿಸುವ ಪಂಚಮರ ಕುರಿತು ಭಾವುಕವಾಗಿ ಹೀಗೆ ಹೇಳಿದ್ದಾರೆ :

"ರೋಗ ತಂತುಗಳು ಹುಟ್ಟುವ ಮುನ್ನ
ಚೊಕ್ಕ ಮಾಡುವರು ಪೃಥ್ವಿಯ ಬೆನ್ನ
ನಿತ್ಯ ಕರ್ಮದಲಿ ನರಕವ ಗುಡಿಸಿ
ಭೂಮಿಗೆ ಸ್ವರ್ಗವನಿಳಿಸುವರಣ್ಣಾ!"

ಪ್ರಾಚೀನ ಕನ್ನಡ ಸಾಹಿತ್ಯದಿಂದ ಆಧುನಿಕ ಕನ್ನಡ ಸಾಹಿತ್ಯದ ತನಕ ನೋಡಿದಾಗ ಕಾವ್ಯ ಆ ಕ್ಷಣಕ್ಕೆ ಪ್ರಧಾನ ಸಂಸ್ಕೃತಿಯ ಮುಖ ವಾಣಿಯಂತೆಯೇ ಕೆಲಸ ಮಾಡಿದೆ. ಪ್ರಾಚೀನ ಕಾವ್ಯಕ್ಕಂತೂ ಇದು ಅಕ್ಷರ ಸಹ ಸತ್ಯ. ವಚನಕಾರರಲ್ಲೂ ದಾಸರಲ್ಲಿ ಈ ಕುರಿತ ಭಿನ್ನ ಪ್ರತಿಕ್ರಿಯೆಗಳು ಕಂಡುಬಂದರೂ ಅಲ್ಲಿನ ಜನಸಾಮಾನ್ಯರ ಪರಕ್ಕೂ ಒಂದು ಧಾರ್ಮಿಕ ಬಂಧನವಿದೆ. ಇಂಗ್ಲೀಷ್ ಶಿಕ್ಷಣ ಮತ್ತು ಶೂದ್ರ ಸಮುದಾಯದಿಂದ ಬಂದ ಕುವೆಂಪು ಕಾಲದಿಂದ ಅದು ಹೀಗಾಗಲಿಲ್ಲ. ಪರಂಪರೆಯ ವಿರುದ್ಧವಾಗಿ ಜನಸಾಮಾನ್ಯರ ಬದುಕು, ಬವಣೆಗಳು, ಕಾವ್ಯದ ವಸ್ತುವಾದರೂ ಇಲ್ಲಿಯ ಬರಹಗಳನ್ನು ಪರಿಪೂರ್ಣ ಎನ್ನುವಂತಿಲ್ಲ. ಆದರ್ಶದ, ಕನಸುಗಾರಿಕೆಯ, ಭಾವುಕ ನೆಲೆಯ ಇಲ್ಲಿನ ಧೋರಣೆಗಳು ಉದಾರವಾದೀ ದೃಷ್ಟಿಕೋನವನ್ನು ಹೊಂದಿವೆ. ಒಂದೆಡೆ ಭಾಷಿಕವಾಗಿ ಮೊದಲು ಕ್ರಾಂತಿಕಾರಿ ಹೆಜ್ಜೆ ಇಟ್ಟವರು ಶರೀಫ, ಕೈವಾರ ನಾರಾಯಣತಾತ, ಜನಪದರ ಮೊಹರ್‍ರಂ ಪದಗಳ, ಸವಾಲ್ ಜವಾಬ್ ಪದಗಳ ರಚನೆಕಾರರು ಎನ್ನಬಹುದು. ಆದರೆ ಪ್ರಗತಿಪರ ಸಮಾಜದ ಕನಸು, ಸಾಮಾನ್ಯ ಜನರ ಬದುಕೂ ಕೂಡ ಕಾವ್ಯವಾದದ್ದು ನವೋದಯ ಕಾವ್ಯದಿಂದಲೇ. ಇಲ್ಲಿ ಶುರುವಾದ ಆರಂಭ ತನ್ನ ಮಿತಿಗಳನ್ನ ದಾಟುತ್ತ ಗಟ್ಟಿ ದನಿಯಾಗಿ ನೆಲೆ ನಿಂತದ್ದೇ ಬಂಡಾಯ ಮತ್ತು ದಲಿತ ಕಾವ್ಯಗಳಲ್ಲಿ. ಹಾಗಾಗಿ ಕನ್ನಡ ಕಾವ್ಯದ ಜನಪರಂಪರೆಯನ್ನು ಪ್ರಾಚೀನ, ಸ್ವಾತಂತ್ರ್ಯ ಮತ್ತು ಸ್ವಾತಂತ್ರ್ಯೋತ್ತರ ಎಂದು ಮೂರು ನೆಲೆಗಳಲ್ಲಿ ವಿವರಿಸಬಹುದಾಗಿದೆ. ಕನ್ನಡ ನವೋದಯ ಕಾವ್ಯದ ಹಿಂದಿನ ಸಾಮಾಜಿಕ ಅನುಭವದ ಪ್ರೇರಣೆಗಳ ಬಗ್ಗೆ ತಾತ್ವಿಕ ಚರ್ಚೆಯನ್ನ ನೋಡುವುದಾದರೆ "ವಸಾಹತುಶಾಹೀ ಆಗಮನಕ್ಕೆ ಉಂಟಾದ ಪ್ರತಿಕ್ರಿಯೆಗಳೇ ಕನ್ನಡ ನವೋದಯದ ಮೂಲ ಕಾರಣ. ಪರಕೀಯರ ಆಳ್ವಿಕೆಗೆ ತುತ್ತಾದ ನಾಡಿನ

ಸಂಸ್ಕೃತಿಯಲ್ಲಿ ಒಂದು ನಿರ್ದಿಷ್ಟ ಘಟ್ಟದಲ್ಲಿ ಪರಕೀಯ ಶಿಕ್ಷಣದ ಕಾರಣಕ್ಕಾಗಿಯೇ ಸ್ವ-ಪ್ರಜ್ಞೆ ಉಂಟಾಗುತ್ತದೆ. ತಮ್ಮನ್ನು ಆಳುತ್ತಿರುವ ಜನರ "ಸಂಸ್ಕೃತಿ ತಮ್ಮ ಸಂಸ್ಕೃತಿಗಿಂತ ಶ್ರೇಷ್ಠವಾದದ್ದು ಎಂಬ ಅಂತರ್ಗತ ಅರಿವಿನಿಂದಲೇ ಈ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಆದರೆ ಇದು ರಾಷ್ಟ್ರೀಯ ಸ್ವಾಭಿಮಾನದ ಘಟ್ಟ ಕೂಡಾ ಹೌದು. ಆದ್ದರಿಂದ ತಮ್ಮ ಸಂಸ್ಕೃತಿಯೂ ಕೂಡಾ. ಘನತೆಯಿಂದ ಬಾಳಿದ, ಸಂಭ್ರಮದಿಂದ ಮೆರೆದ ಘಟ್ಟವೊಂದಿತ್ತು ಎಂದು ತಮ್ಮ ಸಂಸ್ಕೃತಿಯ ಭೂತಕಾಲದ ಕಡೆಗೆ ಆಸೆಯಿಂದ ನಡೆಯುತ್ತಾರೆ. ವರ್ತಮಾನದ ಘೋರ ಅಪಮಾನವನ್ನು ಮರೆಯಲು ಭೂತದ ಕಡೆಗೆ ಮರೆಹೋಗುವ ವಿಷಾದಮಯ ಪ್ರಯತ್ನ ಇದು. ನಿಧಾನಕ್ಕೆ ಈ ರೀತಿಯ ಆತ್ಮಾಭಿಮಾನದ ಮೂಲಕ ಹೊಸ ಸಂಸ್ಕೃತಿಯನ್ನು ನಿರ್ಮಿಸುತ್ತಾರೆ. ಆದರೆ ಈ ಸಂಸ್ಕೃತಿಯ ಮೂಲಾಧಾರಗಳನ್ನು ಬೆರೆಸಿ ಈ ಹೊಸ ಸಂಸ್ಕೃತಿಯನ್ನು ನಿರ್ಮಿಸುತ್ತಾರೆ. ಆದರೆ ಈ ಸಂಸ್ಕೃತಿ ನಿರ್ಮಾಣದ ಪ್ರಕ್ರಿಯೆಯಲ್ಲಿ ತುಂಬಾ ಸ್ವಾರಸ್ಯಕರ ಅಂಶವೊಂದಿದೆ. ಅದೆಂದರೆ ಸಂಸ್ಕೃತಿಯೊಂದು ಇಲ್ಲಿ ಬರೀ ಮೌಲ್ಯಗಳ ಹಂತದಲ್ಲಿರುವುದಿಲ್ಲ. ಇದೊಂದು ಹೋರಾಟದ ಸಾಧನವೂ ಹೌದು. ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲೂ ಈ ಸಂಸ್ಕೃತಿ ನಿರ್ಮಾಣ ಅತ್ಯಂತ ದೊಡ್ಡ ಹೋರಾಟದ ಸಾಧನವೂ ಹೌದು."

"ಮನುಷ್ಯ ಮತ್ತು ಸಮಾಜವೆರಡನ್ನೂ ಚಾರಿತ್ರಿಕವಾಗಿಯೇ ಶ್ರೀ ಅವರು ಗ್ರಹಿಸಿದರು. ಅರಸರ ಮತ್ತು ಬ್ರಿಟಿಷರ ಆಳ್ವಿಕೆಯಲ್ಲಿ ಈ ಎರಡೂ ಆಶಾದಾಯಕ ಸಾಮರಸ್ಯ ಸಾಧಿಸಿವೆ ಎಂಬುದು ಈ ಕವಿಯ ಗ್ರಹಿಕೆ. ಇಂಥ ಶ್ರೀರಕ್ಷೆಯಲ್ಲಿ ಕನ್ನಡ ಜನಾಂಗದ ಬದುಕು ಪ್ರಗತಿಯತ್ತ ನಡೆಯುತ್ತದೆ ಎಂಬ ರಾಜತ್ವವಾದೀ ನಂಬಿಕೆ ಕವಿಯದು. ಸಾಮಾಜಿಕ ಸ್ಥಿರತೆಯ ಸಂದೇಶವೇ ಬಿ.ಎಂ.ಶ್ರೀ. ಡಿ.ವಿ.ಜಿ. ಮುಂತಾದವರ ಜೀವನ ದರ್ಶನದ ಸತ್ಯ" ಹತ್ತೊಂಬತ್ತನೇ ಶತಮಾನದ ಅನುಭಾವೀ ಕವಿಗಳ ಪ್ರತಿಕ್ರಿಯೆ ತುಂಬ ಮಹತ್ವವಾದದ್ದು. ಇಲ್ಲೂ ಕೂಡಾ ಸಮಾಜದ ಚಾರಿತ್ರಿಕ ಸ್ವರೂಪದ ಬಗ್ಗೆ ಸ್ಪಷ್ಟ ಜಾಗೃತಿ ಇದೆ. ಆದರೆ ಇಲ್ಲಿ ಬಿ.ಎಂ.ಶ್ರೀ. ಧಾರೆಯ ಹಾಗೆ ಗೌರವಪೂರ್ವಕ ಒಪ್ಪಿಗೆ ಕಾಣುವುದಿಲ್ಲ. ತಮ್ಮ ಒಳಮುಖೀ ಧಾರ್ಮಿಕ ಸಂವೇದನೆಯ ಸಂದರ್ಭದಲ್ಲಿ ಈ ಬದಲಾವಣೆಗೆ ಕನ್ನಡ ಅನುಭಾವಿಗಳು ಪ್ರತಿಸ್ಪಂದಿಸಿದರು. ಚರಿತ್ರೆಯೊಡನೆ ಮುಖಾಮುಖಿಯಾದರು. ಈ ದೃಷ್ಟಿಯಿಂದ ಶಿಶುನಾಳ ಶರೀಫರ "ಗಿರಣಿಯ ವಿಸ್ತಾರ", "ಜಟ್ಟಿಯ ಹುಳು ಎದ್ದಾವುನೋಡೋ" ಮುಂತಾದ ಪ್ರತಿಮೆಗಳು ಚಾರಿತ್ರಿಕ ಅನುಭವವನ್ನು ಪ್ರತಿನಿಧಿಕರಿಸಲು ಯತ್ನಿಸುತ್ತವೆ." ಜಾತಿ ವಿರೋಧಿ ಪ್ರಜ್ಞೆ ನವೋದಯ ಕವಿಗಳ ಸಂವೇದನೆಯಲ್ಲಿ ಬೇರೆ ಬೇರೆ ರೀತಿಯಲ್ಲಿ ಪರಿವರ್ತಿತವಾಯಿತು. ಪು.ತಿ.ನ., ಬೇಂದ್ರೆ, ಮಾಸ್ತಿಯವರು ಜಾತಿ ಪದ್ಧತಿಯ ಬಗ್ಗೆ ತಮ್ಮ ಕವನಗಳಲ್ಲಿ ಉಗ್ರ ಹೋರಾಟವನ್ನು ಸಾರದೆ ಸುಧಾರಕನ

ರೊಚ್ಚನ್ನು ಪ್ರಕಟಿಸದೆ ಮಾನವೀಯ ಇತ್ಯಾತ್ಮಕತೆಯನ್ನು ಸಾರಿದರು. ಖಂಡಿಸುವ ರೀತಿಯ ಬದಲು ಮಾನವೀಯ ಸಮಾನತೆಯನ್ನು ಆರಾಧಿಸುವ ಕ್ರಮವನ್ನು ಅವರು ಆರಿಸಿಕೊಂಡರು.

ಆದರೆ ಮನುಷ್ಯ ಮತ್ತು ಸಮಾಜದ ಏಕೀಕೃತ ಸ್ಥಿತಿಗೆ ಭಂಗ ತರುವ ಈ ರೋಗಗಳ ವಿರುದ್ಧ ಅತ್ಯಂತ ಉಗ್ರವಾಗಿ ಬಂಡಾಯವೆದ್ದವರೆಂದರೆ ಕುವೆಂಪು. ಉಳಿದವರಲ್ಲಿ ಈ ಅರಿವು ಅಮೂರ್ತ ಮಾನವ ಪ್ರೇಮವಾಗಿದ್ದರೆ ಕುವೆಂಪು ಅವರಲ್ಲಿ ಅದು ನಿರ್ದಿಷ್ಟ ಸಾಮಾಜಿಕ ಕೋಪವಾಗಿ ರೂಪುಗೊಂಡಿತು. "ಬೇಂದ್ರೆ ಬಡತನ, ಶೋಷಣೆಯನ್ನು ಕಂಡ ಕ್ರಮಕ್ಕೂ ಕುವೆಂಪು ಕಂಡ ಕ್ರಮಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಕುವೆಂಪು ಬದಲಾವಣೆಯನ್ನು ಉಗ್ರ ಧ್ವನಿಯಲ್ಲಿ ಹೇಳಿದರೆ, ಬೇಂದ್ರೆ ಅತ್ಯಂತ ಗಾಢ ನೋವಿನ ರೂಪದಲ್ಲಿ ಇದಕ್ಕೆ ಅಭಿವ್ಯಕ್ತಿ ಕೊಡುತ್ತಾರೆ."

"ಸ್ವಾತಂತ್ರ್ಯ ಬಂದ ಮೇಲೆ ಅಥವಾ ಅಧಿಕಾರ ಹಸ್ತಾಂತರವಾದ ಮೇಲೆ ನಮ್ಮ ಸಮಸ್ಯೆಗಳು ಬೇರೆ ರೀತಿಯಲ್ಲಿ ನಮ್ಮನ್ನು ಕಾಡತೊಡಗಿದವು. ನಮ್ಮ ಪ್ರಗತಿಯ ಮಾದರಿಯನ್ನು ನಾವು ಆಯ್ಕೆ ಮಾಡಿಕೊಳ್ಳಬೇಕಿತ್ತು. ಲಭ್ಯವಿದ್ದ ಮಾದರಿಗಳಲ್ಲಿ ನಮ್ಮದೆಂಬ ಮಾದರಿಯೊಂದನ್ನು ಕಟ್ಟಿಕೊಂಡೆವು. ಈ ಮಾದರಿಯ ಹಲವು ಲಕ್ಷಣಗಳಲ್ಲಿ ಪ್ರಜಾಪ್ರಭುತ್ವವೂ ಒಂದು. ವಿಚಿತ್ರವೆಂದರೆ ಪ್ರಜಾಪ್ರಭುತ್ವ ನಮ್ಮ ಚಿಂತನೆಯ ಲೋಕಗ್ರಹಿಕೆಯ ಭಾಗವಾಗಲೇ ಇಲ್ಲ. ಆಶಯದ ನೆಲೆಯಲ್ಲಿ ಸರ್ವ ಸಮಾನತೆಯನ್ನು ಒಪ್ಪಿದ ನಾವು ಆಚರಣೆಯಲ್ಲಿ ಅದಕ್ಕಿಂತ ಭಿನ್ನರಾಗಿದ್ದೆವು. ನಮ್ಮ ಕಲೆ, ಸಾಹಿತ್ಯಗಳಂತೂ ಪ್ರಜಾಪ್ರಭುತ್ವವನ್ನು ಅರಗಿಸಿಕೊಳ್ಳಲೇ ಇಲ್ಲ. ಕನ್ನಡದ ಮಟ್ಟಿಗಂತೂ ಸಾಹಿತ್ಯ ಜಗತ್ತು ಉತ್ಕೃಷ್ಟತೆಯ ಆರಾಧನೆಯನ್ನು ಮಾಡತೊಡಗಿತು. ಶ್ರೇಷ್ಠವಾದದ್ದು ಮಾತ್ರ ಗೌರವಾದದ್ದು ಎಂಬ ತಿಳುವಳಿಕೆ ಗಾಢವಾಗಿತ್ತು. ಕಲಾಕೃತಿಯಲ್ಲಿ ಸಾವಯವ ಸಮಗ್ರೀಕರಣವನ್ನು ಸಾಧಿಸಬೇಕೆಂಬ ಹಂಬಲ, ಹುತ್ತಗಟ್ಟಿದೆ. ಚಿತ್ತ ರಾಮಾವತಾರವನ್ನು ಕಟ್ಟಲಾರದೆಂಬ ಭಾವ ನಮ್ಮ ಕಲಾಜಗತ್ತನ್ನು ದಟ್ಟವಾಗಿ ಆವರಿಸತೊಡಗಿತ್ತು."

ನವೋದಯ ಕಾವ್ಯದಂತೆ ನವ್ಯಕಾವ್ಯದಲ್ಲಿಯೂ ವ್ಯಕ್ತಿ ವಿಶಿಷ್ಟ ಅಥವಾ ವ್ಯಕ್ತಿ ಕೇಂದ್ರಿತ ನೆಲೆಯಲ್ಲಿ ಅನುಭವಕ್ಕೆ ಅರ್ಥಧಾರಣೆಯಾಗುತ್ತದೆ. ಅಡಿಗರಲ್ಲಿ ಕಂಡು ಬರುವ ಸ್ವಂತಿಕೆಯ ಘಾಮ ಮುಖಕ್ಕೆ ರಾಚುವಂತದ್ದು. ಆಧುನಿಕತೆಗೆ ಅದರ ಯಾಂತ್ರಿಕ ಪ್ರಧಾನತೆಗೆ ವಿರೋಧ ವ್ಯಕ್ತಪಡಿಸುತ್ತಲೇ ಬೆಳೆದ ನವ್ಯಕವಿಗಳು ಸಮಾಜವಾದೀ ಮೌಲ್ಯಗಳಿಂದ ಬರಹಕ್ಕಿಳಿದರು. ಅಡಿಗ, ಚಿತ್ತಾಲ, ಲಂಕೇಶ್, ಬರಹಗಳು ಒಂದೆಡೆಯಾದರೆ ಎಕ್ಕುಂಡಿ, ತಿರುಮಲೇಶ್, ಶಿವಪ್ರಕಾಶ್, ಮಾರ್ಕ್ಸ್‌ವಾದೀ ನೆಲೆಯಿಂದ ಬರಹಕ್ಕಿಳಿದರೆ ಚಂದ್ರಶೇಖರ ಕಂಬಾರರು ಕಳೆದು ಹೋದ ಗ್ರಾಮ, ಸಮಾಜ ಮಾನವ ಸಂಬಂಧಗಳ ಬಗೆಗೆ ತೀವ್ರ ಸಂಕಟವನ್ನು ಬರೆದಿದ್ದಾರೆ.

ಅಡಿಗರ ಶ್ರೀರಾಮುನ ನವಮಿಯ ದಿವಸ, ವರ್ಧಮಾನ, ನೆಟ್ಟಾಲ ನೀವಿರುವಾಗ್ಗೆ, ಪ್ರಾರ್ಥನೆ ಕವನಗಳಲ್ಲಿ ಪರಂಪರೆಯ ನೆನಪುಗಳಿದ್ದರೆ, ಲಂಕೇಶರ ಅವ್ವ ಕವಿತೆ ಕನ್ನಡದಲ್ಲೇ ವಿಶಿಷ್ಟವಾದ ದುಡಿವ ವರ್ಗದ ಮಹಿಳೆಯ ಕಟು ವಾಸ್ತವ ಚಿತ್ರಣದಿಂದ ಕೂಡಿದೆ. ಶಿವಪ್ರಕಾಶರ ಕಟ್ಟಡ ನಿರ್ಮಾಣಗಾರರ ಕವಿತೆ. ಎಕ್ಕುಂಡಿಯವರ ಕೋವಿ ಮತ್ತು ರೊಟ್ಟಿ ತಿರುಮಲೇಶ್ ಅವರ ಪೆಂಪಿಯ್ಯನ ಅಂಗಿ, ಕಂಬಾರರ ಗಂಗವ್ವ ಗಂಗಾಮಾಯಿ, ಮಾವೋತ್ಸೆ ತುಂಗನಿಗೆ ಹೇಳುತೇನಕೇಳಾ, ಶಿವರುದ್ರಪ್ಪನವರ ಮುಂಬೈ ಜಾತಕ ಕೆ.ಎಸ್.ನ. ಅವರ ಗಡಿಯಾರದಂಗಡಿಯ ಮುಂದೆ, ತೆರೆದ ಬಾಗಿಲು, ನಿಸ್ಸಾರ್ ಅಹಮದ್ ಅವರ ನಗರ ನಿವಾಸಿಗಳು. ಖಾಲಿ ಸೈಟುಗಳು, ಕುರಿಗಳು ಸಾರ್ ಕುರಿಗಳು, ಗಾಂಧಿ ಬಜಾರಿನ ಬೆಳಗು, ರಾಮನ್ ಸತ್ತ ಸುದ್ಧಿ, ವಿಭಿನ್ನವಾಗಿ ಚಿಂತಿಸುತ್ತಲೇ ಜನಪರ ಧೋರಣೆಯನ್ನ ಬಿಂಬಿಸುವಲ್ಲಿ ಯಶಸ್ವಿಯಾಗಿವೆ. ಒಟ್ಟಾರೆ ನಿಲುವಿನಿಂದ ನೋಡಿದಾಗ ನವ್ಯದ ಇಡೀ ಧೋರಣೆಯನ್ನ ವಿಮರ್ಶಿಸುತ್ತ ಡಾ॥ ಬಿಳಿಮಲೆಯವರು ನವ್ಯದ ಜನಪರ ನೋಟವನ್ನ ಅಲ್ಲಗಳೆಯುತ್ತ "ಅವು ವರ್ತಮಾನವನ್ನು ತಿರಸ್ಕರಿಸುತ್ತ ಪ್ರಗತಿಯ ಚಕ್ರವನ್ನು ಹಿಂದಕ್ಕೆ ತಿರುಗಿಸುತ್ತವೆ ಎನ್ನುತ್ತಾರೆ. ಹೆಚ್ಚೆಂದರೆ ಕೆಲವೆಡೆ ಹೊಸತರೊಂದಿಗೆ ಹೊಂದಾಣಿಕೆಯಿರಬಹುದು. ಆದರೆ ಅದು ಕ್ರಾಂತಿಯಲ್ಲ ಎನ್ನುತ್ತ "ಶಂಕರ ಮೊಕಾಶಿ ಪುಣೇಕರರ ಮಾತನ್ನ ಸಮರ್ಥಿಸುತ್ತಾರೆ" ನವ್ಯವೆಂಬ ಇನ್ನೊಂದು ಕ್ರಾಂತಿ ಕನ್ನಡದಲ್ಲಿ ಆಯಿತೆಂಬುದು ಕೇವಲ ಬಾಹ್ಯ ಲಕ್ಷಣಗಳಲ್ಲಿಯೇ ಹೊರತು ಆದದ್ದು ಒಂದೇ ಕ್ರಾಂತಿ."[೨೨]

"ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ" ಎನ್ನುವ ತಾತ್ವಿಕ ಧೋರಣೆಗೆ ಬದ್ಧವಾದ ಬಂಡಾದ & ದಲಿತ ಕಾವ್ಯ ಪರಂಪರೆ ಕನ್ನಡದಲ್ಲಿ ಎಲ್ಲಾ ರೀತಿಯಿಂದಲೂ ಗಟ್ಟಿಯಾದ ಜನಪರ ಕಾವ್ಯ ಪರಂಪರೆ ಎನ್ನಬಹುದು. ವಚನಕಾರ ಮಾನವೀಯ ಎಳೆಯನ್ನ, ದಾಸರ ಸಮಾಜಪರ ಧೋರಣೆಯನ್ನು ಒಂದೆಡೆಗೆ ಬೆಸೆಯುತ್ತಲೇ ಪರಂಪರಾ ಗತ ಜನಪದ ಕಾವ್ಯ ಪರಂಪರೆಯ ಎಳೆಗಳನ್ನ ಬಳಸಿಕೊಳ್ಳುವುದರ ಜೊತೆಗೆ (ಭಾಷೆ, ಲಯ) ಮಹಾರಾಷ್ಟ್ರದ ದಲಿತ ಪ್ಯಾಂಥರ್ ಆಂಧ್ರದ ವಿಪ್ಲವ ಸಾಹಿತ್ಯ, ದಕ್ಷಿಣ ಆಫ್ರಿಕಾದ ಕಪ್ಪು ಸಾಹಿತ್ಯ, ತತ್ವಪದಕಾರರ ಸೂಫಿ ಸಂತರ ದೇಸೀಯ ಬಹುಮುಖೀ ಸಾಂಸ್ಕೃತಿಕ ನಿಲುವುಗಳೆಲ್ಲಾ ಒಟ್ಟಾಗಿ ಬೆಸೆದುಕೊಂಡವು. ಎಡಪಂಥೀಯ ಚಿಂತಕರಾದ ಮಾರ್ಕ್ಸ್, ಅಂಬೇಡ್ಕರ್, ಲೋಹಿಯಾ ಅವರ ಬದುಕು ಬರಹಗಳೂ ಪ್ರೇರಣೆ ನೀಡಿದವು. ಪೆರಿಯಾರ್, ಅವರ ವೈಚಾರಿಕ ಚಿಂತನೆಗಳೂ ಇವರ ಬರಹದ ಒತ್ತಾಸೆಯಾಗಿ ಬಂದಿವೆ. ಈ ಕಾಲದ ಮತ್ತೊಂದು ವೈಶಿಷ್ಟ್ಯವೆಂದರೆ ವಚನಕಾರರ ನಂತರ ಹಿಂದೆಂದೂ ಕಾಣದ ರೀತಿಯಲ್ಲಿ ಮತ್ತೊಮ್ಮೆ ಮಹಿಳಾ ಬರಹಗಾರ ದಂಡೇ ಇಲ್ಲಿ ಕಾಣಿಸಿಕೊಂಡಿತು. ಅಲ್ಪಸಂಖ್ಯಾತರ ಭಿನ್ನ ಭಾಷೆ, ಧರ್ಮಗಳ ಜನಪರ ನಿಲುವುಗಳೆಲ್ಲಾ ಇಲ್ಲಿ ಬರಹದ ದನಿಗಳಾದವು. ಕನ್ನಡ

ಕಾವ್ಯ ಸಂಕಲನಗಳೇ ಹೇಳುವಂತೆ ಹೊಲೆ ಮಾದಿಗರ ಹಾಡುಗಳು, ಚಂಡಾಲರ ಕೂಗು, ಗುಲಾಮಗೀತೆ, ಪ್ಯಾಂಥರ್ ಪದಗಳು, ಕಪ್ಪುಕಾವ್ಯ, ಕಾವ್ಯ ಬಂತು ಬೀದಿಗೆ, ಗೋಲಿಮಾರ್ ಬೇಟಿ ಗೋಲಿಮಾರ್, ನಾವು ಹುಡುಗಿಯರೇ ಹೀಗೇ ಮೊದಲಾದವು ಕನ್ನಡ ಕಾವ್ಯ ಲೋಕದ ವಿಭಿನ್ನ ಸಂವೇದನೆಗಳನ್ನ ಕಣ್ಣಿನ ಜೊತೆ ಜೊತೆಗೆ ಕರುಳಿನ ಮಿಡಿತವನ್ನ ತೋರುವಂತಿವೆ. ಇವುಗಳೆಲ್ಲದರ ಅಂತಿಮ ಕೇಂದ್ರವೆಂದರೆ ರಂಜಾನ್ ದರ್ಗಾರವರ ಕಾವ್ಯ ಬಂತು ಬೀದಿಗೆ ಹೇಳುವಂತೆ;

"ನಾವು ದುಡಿಯುವ ಜನ
ನಮಗೆ ಅಧಿಕಾರ ಬಂದಾಗ
ಪೋಲೀಸರನ್ನು, ನ್ಯಾಯಾಧೀಶರನ್ನು, ಮನುಷ್ಯರನ್ನಾಗಿ
ಮಾಡುತ್ತೇವೆ"

ಎಂಬುದು ಚನ್ನಣ್ಣ ವಾಲೀಕಾರ ಅವರು ಹೇಳುವಂತೆ[೨೩]

"ಯಾವ ಅಕ್ಷರದಿಂದ ಬರೆದು ಹೊಳಲಿ ನಾನು
ನಮ್ಮ ಜನರಿಗಾದ ಎದಿಯ ಬ್ಯಾನಿ
ಎಂದು ಮಿಡಿಯುವುದು.

❖

ಅಡಿ ಟಿಪ್ಪಣಿಗಳು

ಪರಿಶಿಷ್ಟ ಪರಂಪರೆ

೧. ಡಾ॥ ನಿಂಗಪ್ಪ ಮುದೇನೂರು; ಸಂಸ್ಕೃತಿ ದರ್ಶನ; ೨೦೦೫, ಸೂರ್ಯ ಪ್ರಕಾಶನ, ಪುಟ–೩, ೮೫.

೨. ಡಾ॥ ಕಾಳೇಗೌಡ ನಾಗವಾರ; ಪ್ರೀತಿ ನಿರ್ಭೀತಿ; ೧೯೮೮, ರಶ್ಮಿ ಉದ್ಯಮ ಕೇಂದ್ರ ಜಯಲಕ್ಷ್ಮಿ ಪುರಂ, ಮೈಸೂರು, ಪುಟ–೫೫.

೩. ಪ್ರೊ॥ ಹಿಚಿ ಬೋರಲಿಂಗಯ್ಯ; ತಿಮ್ಮಪ್ಪ ಗೊಂಡ ಹಾಡಿದ ಗೊಂಡರ ರಾಮಾಯಣ; ೧೯೯೯, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೨, ೧೫, ೨೮.

ಶಿಷ್ಟ ಪರಂಪರೆ

೧. ಜಿ.ಎಸ್. ಶಿವರುದ್ರಪ್ಪ; ಪರಿಶೀಲನ; ೧೯೮೨, ಶಾರದಾ ಪ್ರಕಾಶನ, ಬೆಂಗಳೂರು, ಪುಟ ೧೭, ೪೬.

೨. ಕಾಳೇಗೌಡ ನಾಗವಾರ; ಪ್ರೀತಿ ನಿರ್ಭೀತಿ ೧೯೮೮, ರಶ್ಮಿ ಉದ್ಯಮಕೇಂದ್ರ, ಜಯಲಕ್ಷ್ಮಿಪುರಂ, ಮೈಸೂರು, ಪುಟ–೭.

೩. ಎಚ್.ಎಸ್. ಶಿವಪ್ರಕಾಶ, ಮೊದಲಕಟ್ಟಿನ ಗದ್ಯ, ೧೯೯೫, ಅಭಿನವ ಪ್ರಕಾಶನ, ಬೆಂಗಳೂರು, ಪುಟ ೧೨೪.

೪. ಜಿ.ಎಚ್. ನಾಯಕ; ನಿಜದನಿ, ೧೯೮೮, ಅಕ್ಷರ ಪ್ರಕಾಶನ, ಹೆಗ್ಗೋಡು, ಪುಟ ೧೧೩.

೫. ಜಿ.ಎಂ. ಬಿರಾದಾರ; ವಿಮರ್ಶಾ ಲೇಖನಗಳು, ಸಂ. ವಿಜಯಶ್ರೀ ಸಬರದ, ೨೦೦೫, ಪ್ರಸಾರಂಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಪುಟ.೮.

೬. ಎ.ಆರ್. ಕೃಷ್ಣಶಾಸ್ತ್ರಿ; ಸರ್ವಜ್ಞ ಕವಿ; ೧೯೮೭, ಪ್ರಚಾರ ಪುಸ್ತಕ ಮಾಲೆ, ಪ್ರಸಾರಂಗ, ಮೈಸೂರು, ವಿಶ್ವವಿದ್ಯಾಲಯ.

೭. ಅರವಿಂದ ಮಾಲಗತ್ತಿ; ದಲಿತಯುಗ ಮತ್ತು ಕನ್ನಡ ಸಾಹಿತ್ಯ; ೧೯೯೯; ಚೇತನ ಬುಕ್ ಹೌಸ್, ಮೈಸೂರು, ಪುಟ. ೮.

೮. ಜಿ.ಎಚ್. ನಾಯಕ; ಬಿಡುಗಡೆ ಬೆಳ್ಳಿ; ೧೯೭೫, ಸಂ.ಹಾ.ಮಾ.ನಾ. ಪುಟ. ೫೬.

೯. ಗಿರಡ್ಡಿ ಗೋವಿಂದರಾಜು; ನವ್ಯ ವಿಮರ್ಶೆ; ಪು. ೯೯.

೧೦. ಡಿ.ಆರ್. ನಾಗರಾಜ್; ಅಮೃತ ಮತ್ತು ಗರುಡ; ೧೯೮೩, ಪುಟ. ೩೮.

೧೧. ಕುವೆಂಪು ಸಮಗ್ರ ಕಾವ್ಯ; ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ಶೂದ್ರ ಶ್ರೀನಿವಾಸ; ಲೇ. ಕುವೆಂಪು ಕವಿತೆಗಳಲ್ಲಿ ಸಾಮಾಜಿಕ ಪ್ರಜ್ಞೆ; ಸಂ. ಜಿ.ಎಸ್. ಶಿವರುದ್ರಪ್ಪ, ೧೯೮೦, ಪ್ರಸಾರಂಗ ಬೆಂಗಳುರು, ಪುಟ. ೧೩೧.

೧೩. ಸುಧಾಕರ; ಕುವೆಂಪು ಸಾಹಿತ್ಯ ಸಂವೀಕ್ಷಣೆ; ೧೯೮೮, ಸಹ್ಯಾದ್ರಿ ಪ್ರಕಾಶನ, ಮೈಸೂರು, ಪುಟ. ೧೧೦.

೧೪. ಕುವೆಂಪು; ಶ್ರೀರಾಮಾಯಣ ದರ್ಶನಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೫. ಆಧುನಿಕ ಕನ್ನಡ ಕಾವ್ಯ; ೨೦೦೪, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

೧೬. ಕನ್ನಡ ಸಾಹಿತ್ಯ ಸಂಚಯ; ೧೯೮೮, ಪಿಯುಸಿ ದ್ವಿತೀಯ ವರ್ಷದ ಪಠ್ಯ, ಬೆಂಗಳೂರು.

೧೭. ಮತಿನ; ಹಣತೆ; ೧೯೩೩, ಪುಟ. ೪೧.

೧೮. ಸಿರಿಮಲ್ಲಿಗೆ; ೧೯೮೮, ಕೆ.ಎಸ್.ನ. ಕಾವ್ಯ ಕುರಿತ ಸಂಕಲನ.

೧೯. ಜಿ.ಎಸ್. ಶಿವರುದ್ರಪ್ಪ; ಮುಂಬೈ ಜಾತಕ, ನನ್ನ ನಿನ್ನ ನಡುವೆ, ಪುಟ. ೯೦.

೨೦. ಡಾ॥ ಪುರುಷೋತ್ತಮ ಬಿಳಿಮಲೆ; ಶಿಷ್ಟ ಪರಿಶಿಷ್ಟ, ೧೯೯೨, ಮುದಿಪು ಪ್ರಕಾಶನ, ಪುಟ. ೫೫, ೧೬೦.

೨೧. ಸಂ. ಎಚ್.ಎಸ್. ರಾಘವೇಂದ್ರರಾವ್; ಶತಮಾನದ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, ಪುಟ. ೮೨೨, ೮೨೪, ೮೨೭, ೮೩೨, ೭೩೩.

೨೨. ದಸ್ತಗೀರ್ ಸಾಬ್, ದಿನ್ನಿ; ಸಾಹಿತ್ಯ ಸಲ್ಲಾಪ, ಕವಸು ಪ್ರಕಾಶನ, ರಾಯಚೂರು, ಪುಟ. ೧೩೦.

ಭಾಗ-೨

ಅಧ್ಯಾಯ-೧

ದಲಿತ ಕಾವ್ಯ ಪರಂಪರೆ ಮತ್ತು ವರ್ತಮಾನ

ದಲಿತ ಕಾವ್ಯ ಪರಂಪರೆ ಮತ್ತು ವರ್ತಮಾನ

'ದಲಿತ' ಪದ ಕುರಿತಂತೆ ಕನ್ನಡದಲ್ಲಿ ನಾನಾ ಬಗೆಯ ಅರ್ಥ ಮತ್ತು ನಿರೂಪಣೆಗಳಿವೆ. 'ದಲಿತ' ಪದವು ದಲ, ದಲತ್, ದಲಿತ ಎಂಬ ರೂಪಗಳಲ್ಲಿ ಕಾಣಿಸಿಕೊಂಡು ಇದಕ್ಕೆ ನಿಘಂಟಿನಲ್ಲಿ ಒಡೆದ, ಚೂರಾದ, ದಮನಕ್ಕೊಳಗಾದ, ರಾಶಿ, ಸೈನ್ಯ, ಸೀಳಿದ, ಪತಿತ, ಒಡೆದ, ಸೋಲಿಸಲ್ಪಟ್ಟ ತುಳಿದ, ಎಂಬೆಲ್ಲಾ ಅರ್ಥಗಳನ್ನು ಹೊತ್ತಿದೆ. ಸುಮಾರು ಎಪ್ಪತ್ತರ ದಶಕದಿಂದ ಈಚೆಗೆ ಚಾಲ್ತಿಗೆ ಬಂದ ಈ ಪದವು ಹಿಂದುಳಿದವನು, ದಮನಕ್ಕೆ ಒಳಗಾದವನು, ಶೋಷಿತ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಸ್ಥಾನಮಾನಗಳಲ್ಲಿ ಅತ್ಯಂತ ಕೆಳಸ್ಥರದಲ್ಲಿ ಗುರ್ತಿಸಲ್ಪಡುವವನು ಎಂಬ ಅರ್ಥಗಳಿವೆ.

ಅಂಬೇಡ್ಕರ್ ನಡೆಸಿದ ಸಾಮಾಜಿಕ ನ್ಯಾಯದ ಹೋರಾಟದಲ್ಲಿ ಈ ಪದವನ್ನ *Depressed* ಎಂಬ ಅರ್ಥದಲ್ಲಿ ವಿವರಿಸಿದ್ದಾರೆ. ಅವರ ಲೇಖನಗಳಲ್ಲಿ ಬಳಕೆಯಾದ ಈ ಪದವನ್ನೇ ಇಂದು 'ದಲಿತ' ಎಂಬ ಅರ್ಥದಲ್ಲಿ ನೋಡಲಾಗುತ್ತಿದೆ.

ಕನ್ನಡದಲ್ಲಿ 'ದಲಿತ' ಪದ ಕುರಿತಂತೆ ಕೆಲವರು ಮಾರ್ಕ್ಸ್‌ವಾದಿ ಹಿನ್ನೆಲೆಯಲ್ಲಿ ಮತ್ತೆ ಕೆಲವರು ಅಂಬೇಡ್ಕರ್ ಹಿನ್ನೆಲೆಯಲ್ಲಿ ಇನ್ನೂ ಕೆಲವರು ಲೋಹಿಯಾ ವಾದದ ಹಿನ್ನೆಲೆಯಲ್ಲಿ ನೋಡಿದ್ದಾರೆ. ಅಂತಹ ಕೆಲವು ಅನಿಸಿಕೆಗಳನ್ನ ಈ ರೀತಿ ನೋಡಬಹುದು.

ದೇವಯ್ಯ ಹರವೆಯವರು "ದಲಿತ ಸಾಹಿತ್ಯದ ಬಗ್ಗೆ ಇದು ಕನ್ನಡದಲ್ಲಿ ಬಹಳ ಪ್ರಾಥಮಿಕ ಹಂತದಲ್ಲಿದೆ"ಎಂದು ತಿಳಿದುಕೊಂಡಿರುವುದು ವಾಸಿ ಯಾಕೆಂದರೆ ಇದರ ಬಗ್ಗೆ ಅನೇಕ ರೀತಿಯ ವ್ಯಾಖ್ಯಾನಗಳು ಇಂದು ಹುಟ್ಟಿಕೊಂಡಿವೆ. ದಲಿತ ಸಾಹಿತ್ಯ ಪಂಪನ ಕಾಲದಿಂದಲೂ ಇತ್ತು ಎಂದು ಹಲವರು ಹೇಳಿದರೆ ಇಲ್ಲ ಇಲ್ಲ ಪ್ರಾಚೀನದಲ್ಲಿ ಸರ್ವಜ್ಞ, ಹರಿಹರ, ರಾಘವಾಂಕರು ಮಾತ್ರ ದಲಿತ ಸಾಹಿತಿಗಳೆಂದು ಕೆಲವರು ಹೇಳುವರು. ಇನ್ನೂ ಕೆಲವರು ಎಡಪಂಥೀಯರೆನಿಸಿಕೊಂಡವರು ಎಲ್ಲ ಪ್ರಗತಿಪರ ಸಾಹಿತಿಗಳೆಲ್ಲ ದಲಿತ ಸಾಹಿತಿಗಳೆಂದು ಕರೆಯುತ್ತಿದ್ದಾರೆ.

[illegible]

[illegible]

[illegible]

[illegible]

[illegible]

ದಲಿತ ಎಂದರೆ ಅಸ್ಪೃಶ್ಯ ಹಾಗೂ ಸಣ್ಣ ಪ್ರಮಾಣದಲ್ಲಿ ಅಸ್ಪೃಶ್ಯತೆಯ ಅನುಭವವಿಲ್ಲದಿದ್ದರೂ ಅತ್ಯಂತ ವೇದನೆಗೆ ಒಳಗಾದ ಚದುರಿ ಹೋಗಿರುವ ಜನಾಂಗದ ಪ್ರತಿನಿಧಿಗಳೂ ಪ್ರಗತಿಪರ ದಲಿತ ಸಂಘಟನೆಯೊಂದಿಗೆ ತಮ್ಮನ್ನು ತಾವು ಗುರ್ತಿಸಿಕೊಂಡು ತಮ್ಮ ಸಾಹಿತ್ಯ & ಸಂಘಟನೆಗಳ ಮೂಲಕ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಪ್ರಯತ್ನಪಡುವಂಥವರೂ ಆಗಿರುತ್ತಾರೆ. ಅಂದರೆ ತಲ ತಲಮಾರಿನಿಂದ ಆರ್ಥಿಕವಾಗಿ ಸಾಮಾಜಿಕವಾಗಿ ಶೈಕ್ಷಣಿಕ ಮತ್ತು ರಾಜಕೀಯವಾಗಿ ಹಿಂದುಳಿದ ಜನಾಂಗದವರು ಮಾತ್ರ 'ದಲಿತರು' ಎಂದು ಸ್ಪಷ್ಟವಾಗಿ ತಿಳಿಯಬೇಕು. ಇವರು ತಮ್ಮ ನೋವನ್ನು ಅತ್ಯಂತ ಸಮರ್ಥವಾಗಿ ಭಾಷೆಯ ಮುಖಾಂತರ ಸೃಷ್ಟಿಸುವಂಥದ್ದೇ ದಲಿತ ಸಾಹಿತ್ಯ. ಇಂಡಿಯಾದ ಸವರ್ಣೀಯ ಹಿಂದೂಗಳಿಗೂ ದಲಿತ ಹಿಂದೂಗಳಿಗೂ ಯಾವ ವ್ಯತ್ಯಾಸವಿದೆ? ಯಾವ ವ್ಯತ್ಯಾಸವಿಲ್ಲದಿದ್ದರೂ ಅತ್ಯಂತ ಅಮಾನವೀಯವಾಗಿ ದಲಿತರನ್ನು ಯಾಕೆ ಹೀಗೆ ಕಾಣಲಾಗುತ್ತಿದೆ? ಎಂಬ ಸಂಗತಿಯನ್ನ ದಲಿತ ಸಾಹಿತಿ ಅತ್ಯಂತ ಗಂಭೀರವಾಗಿ ಯೋಚಿಸುತ್ತಾನೆ.

ಹೊಸಗನ್ನಡ ಸಾಹಿತ್ಯದ ಸಂದರ್ಭದೊಳಗೆ ಇಂಡಿಯಾದ ಸಂಪ್ರದಾಯ ಬದ್ಧ ಧಾರ್ಮಿಕ ನೀತಿಯನ್ನಿಟ್ಟುಕೊಂಡು ಸಾಹಿತ್ಯವನ್ನ ವಿಮರ್ಶಿಸಿರುವ ಸಂಪ್ರದಾಯ ಶರಣ ವಿಮರ್ಶೆಯಿದೆ. ರಸಾನಂದದ ಹೆಸರಿನಲ್ಲಿ ಆಹಾ! ಓಹೋ! ಉದ್ಗಾರಗಳ ರಸ ವಿಮರ್ಶೆಯಿದೆ. ಶುದ್ಧಕಲೆ ಮತ್ತು ಶುದ್ಧ ಸಾಹಿತ್ಯದ ಹೆಸರಿನಲ್ಲಿ ಪದಗಳ ಡಂಬಾಚಾರದೊಂದಿಗೆ ಮಾಡಿದ ಪ್ರಾಯೋಗಿಕ ವಿಮರ್ಶೆಯಂಥ ಮಾನದಂಡಗಳಿವೆ. ಆದರೆ ಇವ್ಯಾವೂ ಮನುಷ್ಯನೆನಿಸಿಕೊಂಡವನ ಹತ್ತಿರಕ್ಕೆ ಹೋಗುವ ಸಾಹಿತ್ಯವನ್ನು ಸೃಷ್ಟಿಸಲು ಸಮರ್ಥವಾಗಲಿಲ್ಲ. ದಲಿತ ಸಾಹಿತ್ಯದಲ್ಲಿ ಮನುಷ್ಯ ಮತ್ತು ಆತನ ನೋವುಗಳು ಕೇಂದ್ರಬಿಂದುವಾಗುತ್ತವೆ. ಮನುಷ್ಯನ ನೋವು ಇವೆ ಸಂಕೋಲೆಯ ಘಟನೆಗಳು. ಜಾತೀಯತೆಯಿಂದ ಉಂಟಾಗುವ ಸಮಸ್ಯೆಗಳು ಈ ಕಾರಣಕ್ಕಾಗಿ ಪಡುವ ಯಾತನೆ, ಮನುಷ್ಯ ಮನುಷ್ಯರ ನಡುವಿರುವ ಅಡ್ಡಗೋಡೆಗಳು ಮತ್ತು ಅವುಗಳ ಹಿನ್ನೆಲೆ ಅವುಗಳೆಲ್ಲದರ ಇತಿಹಾಸ ಮೂಲಗಳನ್ನು ಅತ್ಯಂತ ಯಶಸ್ವಿಯಾಗಿ ಜನಪದ ಮಾಧ್ಯಮ ಮತ್ತು ಭಾಷೆಯ ಮುಖಾಂತರ ಸೃಷ್ಟಿ ಮಾಡುತ್ತಾನೆ. ಇಂಥ ಸಾಹಿತ್ಯ ಸೃಷ್ಟಿಯ ಸಂದರ್ಭದಲ್ಲಿ ರಾಗರಂಜನೆಗಿಂತ ಹೆಚ್ಚಾಗಿ ಜನಾಂಗದ ಒಟ್ಟು ಬದುಕನ್ನು ಅರ್ಥೈಸುವ ಪರಿಜ್ಞಾನ ಇದ್ದಾಗ ಮಾತ್ರ ಉದ್ದೇಶಿತ ಪರಿಣಾಮ ಉಂಟಾಗುತ್ತದೆ." ಎಂದೆಲ್ಲಾ ಹೇಳುವುದರ ಮೂಲಕ ದಲಿತ ಸಾಹಿತ್ಯ ಕಲೆಗಿಂತ ಜೀವ ಪರತೆಯನ್ನು ರಂಜನೆಗಿಂತ ವಾಸ್ತವ ಕಾಳಜಿಯನ್ನು ಹೊತ್ತು ನಿಂತ ಬಗೆಯನ್ನು ತುಂಬಾ ಸ್ಪಷ್ಟವಾಗಿ ವಿವರಿಸಿದ್ದಾರೆ.

ಒಂದು ಪಂಥವಾಗಿ ದಲಿತ ಎಂಬ ಪದವನ್ನು ಬೇರೆ ಬೇರೆ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಭಿನ್ನ ಸ್ವರೂಪದಲ್ಲಿ ಅರ್ಥೈಸಲಾಗಿದೆ. ಶೋಷಣೆಯನ್ನು ಕುರಿತಂತೆ

[illegible]

ಮಾರ್ಕ್ಸ್ ವಾದದ ಹಿನ್ನೆಲೆಯಲ್ಲಿ ಒಂದು ಬಗೆಯ ವ್ಯಾಖ್ಯಾನವಿದ್ದರೆ ಇದೇ ಶೋಷಣೆಯನ್ನು ಎಲ್ಲಾ ಜಾತಿಗೂ ಅನ್ವಯಿಸಿ ನೋಡುವ ಉದಾರ ದೃಷ್ಟಿಕೋನದ ಲೋಹಿಯಾವಾದದ ರೀತಿಯ ವ್ಯಾಖ್ಯಾನಗಳೂ ಇಲ್ಲಿವೆ. ಕೇವಲ ತಳವರ್ಗವನ್ನು ಮಾತ್ರ ಅನುಲಕ್ಷಿಸಿ ಅವರ ಮೌನ ಕಣ್ಣೀರನ್ನ ನಿತ್ಯದ ರಕ್ತದ ಹರಿವನ್ನು ಬಿಚ್ಚಿ ಮಾತಾಡುವ ಅಂಬೇಡ್ಕರ್ ವಾದದ ವ್ಯಾಖ್ಯಾನವೂ ಇಲ್ಲಿದೆ.

"ಈ ಅಂಶಗಳನ್ನೇ ಕ್ರೋಢೀಕರಿಸಿ ಅರವಿಂದ ಮಾಲಗತ್ತಿಯವರು ಈ ರೀತಿ ಹೇಳುತ್ತಾರೆ."

೧. ಶೋಷಣೆ ಎಂಬ ಪದಕ್ಕೆ ಜಾತಿ ಬೇಧವಿಲ್ಲ. ಆರ್ಥಿಕ ಸಾಮಾಜಿಕ, ರಾಜಕೀಯ ರಂಗದಲೆಲ್ಲಾ ಶೋಷಣೆಗೆ ಒಳಗಾದ ಎಲ್ಲಾ ಜನರೂ ದಲಿತರು.

೨. ಅಸ್ಪೃಷ್ಟರೂ ಸೇರಿದಂತೆ ಅಸ್ಪೃಶ್ಯತೆಯ ನೋವನ್ನು ಅನುಭವಿಸದಿದ್ದರೂ ಅಸ್ಪೃಷ್ಯರ ಹಾಗೆ ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲಿ ಶೋಷಣೆಗೆ ಒಳಗಾದ ಬಡವರೂ ದಲಿತರೆಂದು ಕರೆಯಿಸಿಕೊಳ್ಳುತ್ತಾರೆ.

೩. ಪಂಚಮರು ಅಥವಾ ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲರೂ ದಲಿತರು."[೫]

ದಲಿತರು ಯಾರು?

ಋಗ್ವೇದದಲ್ಲಿ 'ವರ್ಣ' ಎಂಬ ಪದವು ಬಣ್ಣ ಎಂಬರ್ಥದಲ್ಲಿ 'ಆರ್ಯ' ಮತ್ತು 'ದಾಸ' ವರ್ಗಗಳನ್ನು ಬೇರ್ಪಡಿಸಿ ಹೇಳುವುದಕ್ಕೆ ಬಳಕೆಯಾಗಿದೆ.

ವರ್ಣಗಳ ಗುಂಪಿಗೆ ಸೇರದೆ ಹೊರಗುಳಿದ ಜನರೇ ಚಂಡಾಲರು ಅಥವಾ ಅಸ್ಪೃಷ್ಯರು. ಇಂದಿನ ಪದದ ಪ್ರಕಾರ ದಲಿತರು. ಯಜುರ್ವೇದದಲ್ಲಿ 'ಚಂಡಾಲ'ರ ಉಲ್ಲೇಖವಿದೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಚಾಂಡಾಲರ ಸಂತತಿಯು ನಾಯಿ ಹಂದಿಗಳಂತೆ ತುಚ್ಛವಾದುದು ಎಂದಿದೆ. ಇವರು ತೀರ ನಿಕೃಷ್ಟರಾದ ಜನ. ಮೂಲತಃ ಇವರು ಯಾರು? ಈ ಜಾತಿಯ ಹುಟ್ಟು ಹೇಗೆ, ಅಸ್ಪೃಶ್ಯತೆ ಹೇಗೆ ಆರಂಭವಾಯಿತು ಎನ್ನುವುದರ ಬಗ್ಗೆ ಏಕಾಭಿಪ್ರಾಯವಿಲ್ಲದಿದ್ದರೂ ಸಹ ಡಾ॥ ಬಿ.ಆರ್. ಅಂಬೇಡ್ಕರ್‌ರವರು ಇವರ ಬಗ್ಗೆ "ಭಾರತಕ್ಕೆ ಹೊರಗಿನಿಂದ ಬಂದ ವಿದೇಶಿಯರು ದಮನ ಮಾಡಿದ ದೇಶೀಯ ಜನರೇ ಈಗಿನ ಅಸ್ಪೃಶ್ಯರೆಂದೂ ಅವರನ್ನು ಗೆದ್ದವರು ತಮ್ಮ ಕಾವಲುಗಾರರನ್ನಾಗಿ ಮಾಡಿಕೊಂಡಿದರ ಪರಿಣಾಮವೇ ಅಸ್ಪೃಶ್ಯತೆಗೆ ಕಾರಣವಾಯಿತು" ಎಂದು ಅಭಿಪ್ರಾಯಪಡುತ್ತಾರೆ. ಅಂದು ಅವರ ಮನೆಯ ಹೊರಗಿನ ಕಾವಲುಗಾರರಾಗಿದ್ದಂತಹ ಜನತೆಯೇ ನಂತರದಲ್ಲಿ ಅಸ್ಪೃಶ್ಯರಾಗಿ ಊರ ಕಾವಲುಗಾರರಾಗಿ ಊರ ಹೊರಗೆ ಇರಬೇಕಾಯ್ತು. ಆ ಕಾರಣ ಅತ್ಯಂಜ ಎಂದು

ಕರೆದರೆಂದು ಅವರು ವಾದಿಸುತ್ತಾರೆ. ಈ ವಾದಕ್ಕೆ ಪೂರಕವಾಗಿಯೇ ನಮ್ಮ ದೇಶದ ಚರಿತ್ರೆಕಾರರು ಬಹುಪಾಲು ಅಸ್ಪೃಶ್ಯರು ಭಾರತದ ಮೂಲ ನಿವಾಸಿಗಳೆಂಬುದಕ್ಕೆ ಒಪ್ಪಿಗೆ ನೀಡಿದ್ದಾರೆ.

ಆದಿಮ ದಲಿತರು

ಜಗತ್ತಿನ ಪ್ರಾಚೀನ ನಾಗರೀಕತೆಗಳಲ್ಲಿ ಸಿಂಧೂ ನಾಗರಿಕತೆಯೂ ಒಂದು. ಇಲ್ಲಿ ಮುಖ್ಯವಾಗಿ ಕೃಷಿಕರು, ವ್ಯಾಪಾರಸ್ಥರು, ಪುರೋಹಿತರು, ಸಂಗೀತ, ನೃತ್ಯ ಮೊದಲಾದ ಕಲಾವಿದರು, ತಂತ್ರಜ್ಞರು, ಲಿಪಿಕಾರರು, ಕುಶಲಕರ್ಮಿಗಳು, ನೇಕಾರರು, ಕೆಲಸಗಾರರು, ಕೂಲಿಕಾರರು, ಪಶುಪಾಲಕರು ಇದ್ದಾರೆಂದು ಡಿ.ಕೆ. ಚಕ್ರವರ್ತಿ, ಪಾಂಡೆ, ಘೋಷ ಮೊದಲಾದ ವಿದ್ವಾಂಸರು ನಾಗರೀಕತೆಯ ವಿವರಗಳನ್ನು ಒದಗಿಸುತ್ತಾರೆ.

ಸಿಂಧೂ ನಾಗರೀಕತೆಯ ಚರಿತ್ರೆಯಲ್ಲಿ ದೊರಕುವ ಮುದ್ರೆಗಳು ಧಾರ್ಮಿಕ, ಭೌತಿಕ ವಸ್ತುಗಳು, ತಾಯಿಪಂಥ, ಶೈವ ಪಂಥಗಳನ್ನು ಪ್ರಧಾನವಾಗಿ ಸೂಚಿಸುತ್ತವೆ. ಇವಾವೂ ವೈದಿಕರ ಮೊದಲ ಗ್ರಂಥವಾದ ಋಗ್ವೇದದಲ್ಲಿ ಸಿಕ್ಕಲಾರವು. ಆದರೆ ಅವೆಲ್ಲಾ ಇಂದಿಗೂ ದ್ರಾವಿಡ ಜನಕುಲಗಳಲ್ಲಿ ಉಳಿದು ಬಂದಿವೆ. ಇವುಗಳ ಅಧ್ಯಯನದಿಂದ ಸಿಂಧೂ ನಾಗರೀಕತೆಯ ಜನಕುಲಗಳೇ ಬೇಸಾಯಗಾರರು. ಪಶುಪಾಲಕರು & ದ್ರಾವಿಡ ಜನಾಂಗದವರು ಎಂಬುದು ತಿಳಿದು ಬರುತ್ತದೆ. [ಲಿಲಿಜನ್ ಎಂಡ್ ಸೊಸೈಟಿ, ನೇವಿಸ್ರಸಾನ್ ಚಟ್ಟೋಪಧ್ಯಾಯ, ೧೯೮೭]

ಮಾತೃದೈವಗಳ ಆರಾಧಕರೂ ಮಾತೃಪ್ರಧಾನ ಸಮಾಜ ವ್ಯವಸ್ಥೆ ಹೊಂದಿದವರೆಂದು ಲೋಕಾಯತದಲ್ಲಿ ದೇವಿಪ್ರಸಾದ ಚಟ್ಟೋಪಧ್ಯಾಯರು ಹೇಳುತ್ತಾರೆ. ಇಲ್ಲಿ ಬರುವ ದ್ರಾವಿಡ ಜನಾಂಗದ ಒಳಗೆ ಆದಿಮ ಬೇಸಾಯಗಾರರೇ ಮಾತೃಪ್ರಧಾನ ಸಮಾಜದವರು. ಈ ಪಂಥದವರಿಗೂ ಈಗಿನ ಭಾರತದ ದಲಿತರಿಗೂ ನಿಕಟವಾದ ಸಂಬಂಧವನ್ನು ಅನೇಕ ಮಾಹಿತಿಗಳ ಮೂಲಕ ಗುರುತಿಸಿಕೊಳ್ಳಬಹುದಾಗಿದೆ. ಹೀಗೆ ಸೇರಿದ ಜನಾಂಗವನ್ನು ಆರ್ಯ ವೈದಿಕರು, ದ್ರಾವಿಡ ಪಶುಪಾಲಕರನ್ನು ಕೀಳಾಗಿ ಕ್ಷುಲ್ಲಕವಾಗಿ ಕಂಡ ನೀಚತನಕ್ಕೆ ಉದಾ: ಏಕಲವ್ಯ, ವಾಲ್ಮೀಕಿ, ಶಂಭೂಕರಂಥ ಪ್ರಖ್ಯಾತ ಹೆಸರುಗಳೇ ಸಾಕ್ಷಿ.

ದಲಿತರು ಈ ನಾಡಿನ ಮೊದಲ ವಾಸಿಗಳು ಮತ್ತು ಕೃಷಿಕರು ಆಗಿದ್ದರೆಂಬುದಕ್ಕೆ ಕರ್ನಾಟಕದಲ್ಲಿ ಕಂಡಬರುವ ಗ್ರಾಮ ನಾಮಗಳೇ ಸಾಕ್ಷಿ.

ದಲಿತ ಚರಿತ್ರೆಯ ಪರಂಪರೆ

ಭಾರತದಲ್ಲಿ ವ್ಯಕ್ತಿಗತ ಕಥನವಾಗಿರುವ ಚರಿತ್ರೆ ಸಮಷ್ಟಿ ಸಂಕಥನವಾಗಿರುವ ಇತಿಹಾಸಗಳು ಪ್ರಭುತ್ವದ ಪಡಿಯಚ್ಚುಗಳಾಗಿವೆ. ಆರಂಭದಿಂದಲೂ ಅಗ್ರಹಾರ

[illegible]

ಸಂಸ್ಕೃತಿಯ ವಶದಲ್ಲಿರುವ ಅಕ್ಷರಗಳು ಕೆಲವ ಶೂದ್ರ ಸಮುದಾಯಗಳನ್ನು ಚರಿತ್ರೆಯಿಂದ ದೂರವೇ ಹಬ್ಬಿದವು. ಇದರಲ್ಲಿ ದಲಿತರೇ ಸಿಂಹಪಾಲು. ಹೀಗಾಗಿ ಮೊದಲಿನಿಂದಲೂ ದಲಿತರದು ಮೌನ ಚರಿತ್ರೆ. ಇದು ಮಾತಾಡಿದ್ದೇ ಅಪರೂಪ. ಅಕ್ಷರವಂತೂ ಆಗಲಿಲ್ಲ. ಆದ್ದರಿಂದ ದಲಿತರಿಗೆ ಚರಿತ್ರೆ ಇದೆಯೇ? ಎಂದು ಅಕ್ಷರಲೋಕ ಇಂದಿಗೂ ಹುಬ್ಬೇರಿಸುತ್ತಿದೆ. ಹೌದು. ಈ ನಾಡಿನ ಮೇಲೆ ನೂರಾರು ಪ್ರಭುತ್ವಗಳಿಗೆ ಹೆಗಲಾದ ದಲಿತರಿಗೆ ತಮ್ಮದೇ ಆದ ಒಂದು ಚರಿತ್ರೆಯಿಲ್ಲವೆಂದರೆ ಆಶ್ಚರ್ಯವಾಗುತ್ತದೆ. ಇದಕ್ಕೆ ಕಾರಣ ಮೌಖಿಕ ಆಕರಗಳನ್ನು ಚರಿತ್ರೆಗೆ ಬಳಸಿಕೊಳ್ಳದೇ ಇರುವುದು. ಮೌಖಿಕ ಆಕರಗಳ ಮನಸ್ಸು ಮೊದಲೇ ಮೌನ. ಇಂಥ ಮೌನಗಳ ಮೂಲಕವೇ ಇಂದು ದಲಿತರ ಚರಿತ್ರೆ ರೂಪಿಸಬೇಕಿದೆ. ಜೊತೆಗೆ ಲಿಖಿತ ಆಕರಗಳ ಒಳಗೆ ಅಡಗಿರುವ ಅನೇಕ ಮೌನಗಳನ್ನು ಮಾತಾಡಿಸಬೇಕಿದೆ. ಮುಖ್ಯವಾಗಿ ಶಾಸನ, ಸಾಹಿತ್ಯ, ಸಂಘರ್ಷಗಳು, ಕಲೆ, ಕ್ರೀಡೆ, ಕಡತ, ಕೈಫಿಯತ್ತುಗಳು; ಅಂಕಿತ, ಆಚರಣೆ, ಐತಿಹ್ಯಗಳು, ವಸ್ತು, ಘಟನೆ, ವಿಶೇಷಗಳು, ಜಾತ್ರೆ, ಉತ್ಸವ, ವಾಸ್ತುಗಳಂಥ ಹಲವು ಆಕರ ಸಾಮಾನ್ಯಗಳು ನಮ್ಮ ಮುಂದಿವೆ.[೬]

ವೇಳವಾಳಿ, ಲೆಂಕವಾಳಿ, ಗರುಡ, ಕೀಳ್ಗುಂಟೆ ಮತ್ತು ಸಿಡಿತಲೆಯಂಥ ಪ್ರಸಂಗಗಳು ಘಟಿಸಿದ್ದು ಬಹುತೇಕ ದಲಿತರಲ್ಲಿ ಬಿಟ್ಟರೆ ಶೂದ್ರ ಸಮುದಾಯಗಳಲ್ಲಿ ಬೋವಿ, ಬಿಲ್ಲರು, ಬೇಡರು ಹೊಲೆಯರು, ಮುಂಡರು, ಮುಂತಾದ ಕೆಳ ಜಾತಿಯ ಜನ ಚರಿತ್ರೆಯ ಉದ್ದಗಲಕ್ಕೂ ತಲೆಕೊಟ್ಟು ಕಲ್ಲುಗಳಾಗಿ ಊರೂರಲ್ಲಿ ನಿಂತಿದ್ದಾರೆ. "ಮನೆ ಮಗ, ಕುಲಮುದ್ದ, ಬಂಟ, ವೆಂಕ ಎಂದೆಲ್ಲಾ ಹೊಗಳಿಸಿಕೊಂಡವು ಸಾವಿರಾರು. ಆದ್ದರಿಂದಲೇ ಲೆಂಕಸಾಸರ್ವರ್ ಬಂಟ ಸಾಸಿರ್ವರ್ ಪದಗಳು ಚಾಲ್ತಿಯಲ್ಲಿವೆ. ಕವಿರನ್ನ ತನ್ನ ಗದಾಯುದ್ಧದಲ್ಲಿ ಪ್ರಸ್ತಾಪಿಸಿರುವ ತುರುಗೋಳ್ ಪೆಣ್ಬುಯ್ಯಲೋಳ್ ಎರವೆಸೆದೋಳ್, ಉರವಿನೋಳ್ ನೆಂಟನೆಡರೋಳ್ ಸಂದರ್ಭಗಳು ಸಹ ಶ್ರಮ ಸಂಸ್ಕೃತಿಯ ಸಮುದಾಯಗಳಲ್ಲಿ ಹೆಚ್ಚು ಘಟಿಸಿವೆ. ಇಲ್ಲಿ ದಲಿತರ ಪಾಲು ದೊಡ್ಡದು."[೬]

"ಬೇಡರ ವಾಲ್ಮೀಕಿ, ಅಂಬಿಗರ ವ್ಯಾಸ ಒಂದು ರೀತಿಯಿಂದ ಬೇಟೆಗಾರ. ಸಂವೇದನೆಯ ಸಮುದಾಯದವರು. ಸಹಜವಾಗಿಯೇ ಇವರಿಬ್ಬರ ಕಾವ್ಯಗಳ ಆರಂಭ ಬೇಟೆ ಸಂದರ್ಭವನ್ನು ಹೇಳುತ್ತದೆ. ಕ್ರೌಂಚ ಪಕ್ಷಿಯ ವಧೆಯಲ್ಲಿ ಬೇಡನ ಪ್ರವೇಶವಿದ್ದರೆ[೬] ಶಂತುವಿನ ಪ್ರೇಮದಲ್ಲಿ ಮತ್ಸಕನ್ಯೆಯ ಪ್ರವೇಶವಿದೆ. ಇದರರ್ಥ ತಮ್ಮ ಜನಾಂಗದ ಸಂವೇದನೆಗೆ ಸಾಹಿತಿ ಸಹಜವೆಂಬಂತೆ ಒಳಗಾಗಿರುತ್ತನೆ."

"ಅಂದು ಹೊಲೆಯ ಶಂಬುಕನ ಯೋಗಕ್ಕೆ ಧಾರ್ಮಿಕ ಜಗತ್ತು ಮತ್ತು ಬೇಡರ ಏಕಲವ್ಯನ ವಿದ್ಯೆಗೆ ಕ್ಷತ್ರಿಯ ಜಗತ್ತು ಅಲುಗಾಡಿದ್ದವು. ಆದ್ದರಿಂದಲೇ ಅವು ಶಂಬುಕನ ಕೊರಳನ್ನು, ಏಕಲವ್ಯನ ಬೆರಳನ್ನು ಕತ್ತರಿಸಿದವು." ಅಸ್ಪೃಶ್ಯರ ಹುಟ್ಟಾದದ್ದು ಆರ್ಯ. ದ್ರಾವಿಡರ ಜಗಳದ ನಂತರ

೧. ಆರ್ಯರು ದ್ರಾವಿಡರಿಗೆ ದಸ್ಯುಗಳೆಂದು ರಾಕ್ಷಸರೆಂದು ಕರೆದರು.

೨. ದ್ರಾವಿಡರ ದೇವತೆ ಶಿವ ಅಂದರೆ ರುದ್ರನಿಗೆ ಚೋರನೆಂದು ಟೀಕಿಸಿದರು.

೩. ರಾಮಾಯಣದ ಶಂಭೂಕನಿಗೆ ಶೂದ್ರನೆಂದೂ ಭಾರತದ ಏಕಲವ್ಯನಿಗೆ ನಿಷಾದನೆಂದು ಕರೆದರು.

೪. ಚಾಂಡಾಲ, ಪಂಚಮ, ಹೊಲೆಯ, ಮಾದಿಗ, ಅಂತ್ಯಜರೆಂಬ ಪದಗಳು ಆಧುನಿಕ ಕಾಲದವರೆಗೆ ಬೆಳೆಯುತ್ತಾ ಬಂದವು.

ಈ ವಿವರಗಳನ್ನು ಗಮನಿಸಿದಾಗ ಮರಾಠಿಯ ಬಾಬೂರಾವ್ ಬಾಗೂಲ ಅವರು ಹೇಳುವ "ಸಾವಿರಾರು ವರ್ಷಗಳಿಂದ ಯಾರ ಮೇಲೆ ಅನ್ಯಾಯವಾಗಿದೆಯೋ ಅಂಥ ಅಸ್ಪೃಶ್ಯರಿಗೆ ದಲಿತರೆನ್ನಬೇಕು"[೭] ಎಂಬ ಹೇಳಿಕೆ ಹೆಚ್ಚು ಅರ್ಥಪೂರ್ಣವೆನಿಸುತ್ತದೆ.

ಮಧ್ಯಯುಗದಲ್ಲಿ ಖಿಲ್ಜಿ ವಂಶದಿಂದ ಔರಂಗಜೇಬನವರೆಗೆ ದಲಿತರಿಗೆ ಆಶಾದಾಯಕ ಬೆಳಕೇ ಇರಲಿಲ್ಲ. ಮಧ್ಯಯುಗದ ಭಕ್ತಿ ಪಂಥದ ಆಸ್ತಿಕರನ್ನು ರಕ್ಷಿಸಿತಾದರೂ ಅದೂ ನಾಸ್ತಿಕರ ಕಡೆ ಮುಖಮಾಡಿ ಕರುಣೆ ತೋರಲಿಲ್ಲ. ಅಕ್ಬರನ ಕಾಲವೊಂದನ್ನು ಬಿಟ್ಟರೆ ಉಳಿದ ಎಲ್ಲಾ ಕಡೆಗೂ ದಲಿತರು ಸೇಕವರಾಗಿ, ಗುಲಾಮರಾಗಿ, ದಾಸರಾಗಿ, ಸೈನಿಕರಾಗಿ, ನರ್ತಕಿಯರಾಗಿ, ವೇಶ್ಯೆಯರಾಗಿ, ಜೀವನ ಸಾಗಿಸಬೇಕಿತ್ತು. ಅಲ್ಲಾವುದ್ದೀನ್ ಖಿಲ್ಜಿಯ ಕಾಲದಲ್ಲಿ ೫೦,೦೦೦ ಗುಲಾಮರಿದ್ದರೆ ಫಿರೋಜ ಶಹಾನ ಕಾಲದಲ್ಲಿ ೨,೦೦,೦೦೦ ಗುಲಾಮರಿದ್ದರು. ಹಿಂದೂ ರಾಜರೂ ಇದಕ್ಕೇನೂ ಹೊರತಾಗಿರಲಿಲ್ಲ. ಅಬ್ದುಲ್ ರಜಾಕ್ ಅಂದಿನ ವೇಶ್ಯಾವಾಟಿಕೆಯ ಬಗ್ಗೆ ಬಹಳ ವಿಶಾಲವಾಗಿ ಬರೆದಿದ್ದಾನೆ. ಅವರಿಗೆ ಸರ್ಕಾರದ ಮನ್ನಣೆ ನೀಡಲಾಗಿತ್ತು. ಅವರ ಮೇಲೆ ತೆರಿಗೆ ಹಾಕಲಾಗುತ್ತಿತ್ತು. ಆ ತೆರಿಗೆಯಿಂದ ಬೊಕ್ಕಸವನ್ನು ಹೆಚ್ಚಿಸಲಾಗುತ್ತಿತ್ತು. ವಿಜಯ ನಗರ ಕಾಲದಲ್ಲಿ ಗುಲಾಮ ಪದ್ಧತಿಯೂ ಇತ್ತು. ಪುರುಷ & ಸ್ತ್ರೀ ಜೀತದಾಳುಗಳಾಗಿ ಇದ್ದರೆಂದು ಶಾಸನಗಳು ಹಾಗೂ ವಿದೇಶಿ ಪ್ರವಾಸಿಗಳು ತಮ್ಮ ಹೇಳಿಕೆಯಲ್ಲೂ ವ್ಯಕ್ತಪಡಿಸಿದ್ದಾರೆ. "ಬಡವರ ಮನೆಯ ಹೆಂಗಸರು ಧನಿಕರ ಮನೆಗಳಲ್ಲಿ ಹೊಟ್ಟೆಪಾಡಿಗಾಗಿ ದುಡಿಯುತ್ತಿದ್ದರು. ಧನಿಕರು ಅಸಂಖ್ಯಾತ ಗುಲಾಮರನ್ನು ಹೊಂದಿದ್ದರು. ಎಲ್ಲೆಲ್ಲೂ ದಿವಾಳಿಯಿಂದ ಸಾಲಗಾರರು ಸಾಲಕೊಟ್ಟ ಆಸ್ತಿ ಎಂದು ಗುಲಾಮಗಿರಿಯನ್ನ ತೀರ್ಮಾನಿಸಲಾಗುತ್ತಿತ್ತು" ಎಂದು ನಿಕೋಲೋಕಂಟಿ ಬರೆದಿದ್ದಾನೆ.[೬] ಮಹಿಳೆಯರನ್ನು ದಲಿತರನ್ನು ಶೋಷಣೆಗೆ ಗುರಿಮಾಡಿದ್ದರು ಎನ್ನುವುದರಲ್ಲಿ ಸಂದೇಹವೇ ಇಲ್ಲ. ದಲಿತರು ಹುಲ್ಲು ಚಾವಣಿ ಮನೆಯಲ್ಲಿ ವಾಸಿಸುತ್ತಿದ್ದರು. ಆದರೂ ಅವರು ಸೌಹಾರ್ದ ಭಾವನೆಯಿಂದ ವರ್ತಿಸುತ್ತಿದ್ದರೆಂದು ಬಾರ್ಬೋಸನ ಪ್ರಕಾರ ತಿಳಿದು ಬಂದಿದೆ.

[illegible]

ಬಹುಮನಿ ಅರಸನ ಕಾಲದಲ್ಲಿ ಕೂಡಾ ಚಾತುರ್ವರ್ಣ ರೂಢಿಯಲ್ಲಿದ್ದು ಅದರ ಜೊತೆಗೆ ಅನೇಕ ಉಪಜಾತಿಗಳಿದ್ದವು. ದಲಿತರನ್ನ ಸುಧಾರಣೆಯತ್ತ ಕೊಂಡೊಯ್ದು ಯಾವುದೇ ಘಟನೆ ಇಲ್ಲಿ ಸಿಗದು. ಈ ಸಮಾಜದಲ್ಲಿ ವಿಜಯನಗರದಲ್ಲಿದ್ದಂತೆ ಸತಿಪದ್ಧತಿ, ಬಾಲ್ಯವಿವಾಹ, ವರದಕ್ಷಿಣೆ ಪದ್ಧತಿ ರೂಢಿಯಲ್ಲಿತ್ತು.

ಕರ್ನಾಟಕ ಇತಿಹಾಸದಲ್ಲಿ ರಾಜವಂಶದವರು ಮತ್ತು ದಲಿತರು

ಕರ್ನಾಟಕದ ಪ್ರಥಮ ಸಾಮ್ರಾಜ್ಯ ಚಾಲುಕ್ಯರದು. ಬದಾಮಿ ಚಾಲುಕ್ಯ ವಂಶದ ಪ್ರಖ್ಯಾತ ಅರಸ ಪುಲಿಕೇಶಿ ಹೆಸರಿನಲ್ಲೇ ಇರುವ ಪೊಲೆ 'ಪೊಲೆಯ' (ಹೊಲೆಯ)ದ ಸವೆದ ರೂಪ. ಪ್ರಸ್ತುತ ಬದಾಮಿ ಚಾಲುಕ್ಯರು ಹೊಲೆಯರೆಂದು ಸಾಬೀತು ಮಾಡುವ ಸಂಸ್ಕೃತದ ಚಿಕ್ಕ ಶಾಸನದ ಅರ್ಥ ಹೀಗಿದೆ:

"ಮಾತೃ ಮೂಲೀಯ ಕುಲದವರಾದ ಚಾಲುಕ್ಯರು ಹಾರೀತಿ ಎಂಬುವಳ ಪುತ್ರರೆಂದೂ ಸಪ್ತ ಮಾತೃಕೆಯರಿಂದ ಪೋಷಿಸಲ್ಪಟ್ಟವರೆಂದೂ ಹೇಳಿಕೊಳ್ಳುತ್ತಾರೆ. ಕಾರ್ತಿಕೇಯ ಸ್ವಾಮಿ ಕೃಪೆಗೆ ಪಾತ್ರರಾದವರೆಂದೂ ಹಂದಿ ಗುರುತಿನವರೆಂದೂ ತಿಳಿದಿದೆ. ಈ ಸೂಚನೆಗಳು ಆದಿವಾಸಿಗಳ ದೈವಗಳಾಗುತ್ತವೆ ಎಂಬುದು ನಿರ್ವಿವಾದ. ಚಕ್ರವರ್ತಿಗಳಾಗಿ ಬೆಳೆದ ಚಾಲುಕ್ಯರು ಬ್ರಾಹ್ಮಣರಿಂದ ಕ್ಷತ್ರಿಯ ವರ್ಣಕ್ಕೆ ಸೇರಿದವರಾಗಿದ್ದಾರೆ ಎಂದು ಕುಲದ ಬೇಸಾಯಗಾರರಾದ 'ಸಲಿಕೆಯವರು' ಎಂಬ ಕುಲದ ದಲಿತರು. ಮಾತೃಮೂಲ ಸಮಾಜದ ವ್ಯವಸ್ಥೆಯನ್ನು ಕೈಬಿಟ್ಟು ವರ್ಗ ಸಮಾಜಕ್ಕೆ ಪರಿವರ್ತನೆಗೊಂಡರು."[೬]

ಕದಂಬರು ಕನ್ನಡ ನಾಡಿನ ಮೊದಲ ಎರಡು ಪ್ರಮುಖ ರಾಜವಂಶಗಳಲ್ಲೊಂದು. ಇನ್ನೊಂದು ಗಂಗರ ವಂಶ. ಬನವಾಸಿಯ ಕದಂಬರು, ಚಾಲುಕ್ಯರಂತೆ, ಹಾರತೀ ಪುತ್ರರು. ಕದಂಬರು ಕೂಡಾ ಮಾತೃಮೂಲೀಯ ಸಮಾಜದವರೇ 'ನಾಗರು' ಇವರ ಕಡುವೈರಿಗಳಾಗಿದ್ದರೆಂದು ಇತಿಹಾಸಕಾರರ ಹೇಳಿಕೆ. 'ನಾಗರು' ದಲಿತರೆಂದು ಡಾ॥ ಬಾಬಾ ಸಾಹೇಬ ತರ್ಕಿಸಿದ್ದಾರೆ.[೬]

"ಒಂದು ಕತೆಯ ಪ್ರಕಾರ ಹಬಾಸಿಕ ಎಂಬ (ಕೊರಗ) ಹೊಲೆಯ ಕುಲದ ಅರಸ "ಮಯೂರವರ್ಮನನ್ನು ಓಡಿಸಿದ ಮಯೂರವರ್ಮನ ಅಳಿಯ ಲೋಕಾಧಿತ್ಯ ಅವರನ್ನು ಸೋಲಿಸಿ, ೩೨ ಹಳ್ಳಿಗಳಲ್ಲಿ ಅಹಿಚ್ಛತ್ರದ (ಅಹಿ=ಹಾವು) ಬ್ರಾಹ್ಮಣರನ್ನು ನೆಲೆಗೊಳಿಸಿದ.[೬]

"ಇನ್ನೊಂದು ಕತೆಯ ಪ್ರಕಾರ ಹೊಲೆಯ ಅರಸರ ವಶದಲ್ಲಿದ್ದ ಪ್ರದೇಶವನ್ನು ಮಯೂರವರ್ಮ ಗೆದ್ದುಕೊಂಡ. ಇವನೇ ಅಹಿಚ್ಛತ್ರದ ಬ್ರಾಹ್ಮಣರನ್ನು ನೆಲೆಗೊಳಿಸಿದ. ಇವರನ್ನು ನಂದ ಎಂಬ ಹೊಲೆಯ ಮುಖಂಡ ನಂದನ ಮಗ ಚಂದ್ರಸಾಯನ ಬ್ರಾಹ್ಮಣರಿಗೆ ಗೌರವ ಕೊಟ್ಟು, ತನ್ನ ಜನರನ್ನು ಗುಲಾಮರನ್ನಾಗಿ ಮಾಡಿದ."[೬]

"ಈ ವಂಶದ ಕಾಕುಸ್ಥವರ್ಮನ (ಕ್ರಿ.ಶ. ೪೨೫–೪೫೦) ಕಾಲದಲ್ಲೇ ಮೊಟ್ಟಮೊದಲ ಕನ್ನಡ ಶಾಸನ ಲಭ್ಯವಾದುದು. ಇದರಲ್ಲಿ 'ಬಟಾರಿಕುಲ'ದ ಪ್ರಸ್ತಾಪವಿದೆ. ದಶ ಮಂಡಳಿಕರ ನಾಯಕನಾಗಿದ್ದ 'ಪಶುಪತಿ' ಬಟಾರಿ ಕುಲದವ. ಈತ ಕಾಕುತ್ಥವರ್ಮನ ಅಳಿಯ. ಬಳರಿಯ ಕುಲ ಮಾತೃಮಾಲೀಯ ಕುಟುಂಬವನ್ನು ಅಥವಾ ಕುಲವನ್ನು ಹೇಳುತ್ತದೆ. ಚಿದಾನಂದ ಮೂರ್ತಿಯವರ ಪ್ರಕಾರ 'ಬಳ್ಳಾರಿ' ದಲಿತರ ದೈವವಾಗಿದೆ."[೬]

ದಲಿತ ಕಾವ್ಯದ ತಾತ್ವಿಕ ನೆಲೆಗಳು

ದಲಿತಕಾವ್ಯ ನೋವಿನ ಮಾತಾಡುತ್ತಲೇ, ಹುಟ್ಟಿಕೊಳ್ಳುತ್ತದೆ. ಇದು ಮನುಷ್ಯತ್ವವೇ ಇಲ್ಲದಿರುವವರ ನಡುವೆ ಬದುಕಬೇಕಾದ ನೋವಾಗಿರುವಂತೆಯೇ ಅಂತಹ ಪರಿಸರದಲ್ಲಿ ಮನುಷ್ಯತ್ವದ ಬೀಜ ಬಿತ್ತುವ ಸವಾಲಿನ ನೋವೂ ಆಗುತ್ತದೆ. ಸಂಕೋಲೆಗಳಿಂದ ಬಿಡಿಸಿಕೊಂಡು ಮನುಷ್ಯ ಸಹಜವಾದ ಸ್ವಾತಂತ್ರ್ಯದ ಬದುಕನ್ನು ಕಟ್ಟಿಕೊಳ್ಳುವುದೇ ದಲಿತ ಸಾಹಿತ್ಯ ಮತ್ತು ಚಳುವಳಿಗಳ ಮಹತ್ವದ ಉದ್ದೇಶವಾಗುತ್ತವೆ. ಯಾವುದೇ ಬಗೆಯ ಸ್ಥಿರೀಕರಣಗಳಿಂದ ಮುಕ್ತವಾದ ವ್ಯಕ್ತಿ ಸ್ವಾತಂತ್ರ್ಯದ ಘನತೆಯ ಬದುಕೇ ದಲಿತ ಹೋರಾಟದ ಮಹತ್ವದ ಕಾಳಜಿಯಾಗುತ್ತದೆ. ಅರವಿಂದ ಮಾಲಗತ್ತಿಯವರು ಹೇಳುವಂತೆ "ಅನುಕಂಪಕ್ಕೆ ಬದಲಾಗಿ ಚಿಂತನೆಗೆ ಪ್ರತಿ ಚಿಂತನೆಯನ್ನು ಮಾಡುವುದಕ್ಕೆ ಅವಕಾಶ ಕೊಡುವುದು ಮತ್ತು ಮಾನವ ಮಾನವರಲ್ಲಿ ಪರಸ್ಪರ ವಿರೋಧಿ ಭಾವನೆ ಬಿತ್ತದೆ ಮಾನವೀಯತೆಯ ಸೇತುವೆಯನ್ನು ಕಟ್ಟುವ ಹಂಬಲವನ್ನು ಹೊಂದಿರುವುದಾಗಿದೆ. ಸಂಪ್ರದಾಯಿಕ ಹಿತಾಸಕ್ತಿಗಳ ಕಪಿ ಮುಷ್ಟಿಯಿಂದ ಸಂಬಂಧವನ್ನು ಹೊರತೆಗೆದು ಮಾನವೀಯತೆಯ ಸಂಕಲ್ಪದೊಂದಿಗೆ ಹೊಸ ಸಮಾಜದ ಹೆರಿಗೆಯ ವಾತಾವರಣವನ್ನು ಸೃಷ್ಟಿಸುವುದಾಗಿದೆ"[೭] ಎಂಬ ವಿಶಾಲ ತಾತ್ವಿಕ ಧ್ಯೇಯಗಳನ್ನು ಒಡಲಲ್ಲಿರಿಸಿಕೊಂಡೇ ದಲಿತ ಸಾಹಿತ್ಯ ಸಂವಾದಕ್ಕೆ ತೊಡಗುತ್ತದೆ. ಸಂಬಂಧಗಳ ಮಾತಾಡುವ ಈ ವ್ಯಾಖ್ಯಾನ ಆರಂಭದ ದಲಿತ, ಸಾಹಿತ್ಯಕ್ಕೂ ಇದೇ ಸ್ವರೂಪದಲ್ಲಿ ಅನ್ವಯಿಸುವುದಿಲ್ಲವಾದರೂ ದಲಿತ ಸಾಹಿತ್ಯದ ನಂತರದ ಬೆಳವಣಿಗೆಗಳು ಈ ದಿಕ್ಕಿನೆಡೆಗೆ ಹೊರಳಿಕೊಳ್ಳುವ ಅಂಶವನ್ನು ಗುರುತಿಸಿಕೊಳ್ಳಬಹುದು.

ದಲಿತ ಸಾಹಿತ್ಯ ಆರಂಭಗೊಳ್ಳುವಾಗ ಶೋಷಣೆಯ ಅನುಭವಗಳಿಂದಾಗಿ ಕ್ರಾಂತಿಯ ಸತ್ವದಿಂದ ಸ್ಫೂರ್ತಿಗೊಂಡು ಸಿಟ್ಟಿನ, ರೊಚ್ಚಿನ ಪ್ರತಿಕಾರದ ಹಾದಿಯನ್ನ ಆಯ್ಕೆ ಮಾಡಿಕೊಳ್ಳಲೆತ್ನಿಸುತ್ತದೆ. "ದಲಿತ ಸಾಹಿತ್ಯದ ಮುಖ್ಯ ವಿಶೇಷತೆ ಎಂದರೆ: ವಸ್ತು ನಿಷ್ಠತೆ, ಸಿಟ್ಟು; ಆಕ್ರೋಶ ಮತ್ತು ಪ್ರತಿಭಟನೆ *Form* ಗಿಂತ *Content*ಗೆ ಹೆಚ್ಚು ಒತ್ತುಕೊಟ್ಟು ದಲಿತರಲ್ಲಿ ಅರಿವನ್ನು ಸವರ್ಣೀಯರಲ್ಲಿ ಅಪಮಾನವನ್ನು

ಉಂಟುಮಾಡುವುದು ಹಾಗೂ ಸಮಾಜವನ್ನು ತನ್ನ ಚಾರಿತ್ರಿಕ ಮೋಸಕ್ಕಾಗಿ ಗುರಿಮಾಡುವುದು. ಜೊತೆಗೆ ಶೋಷಣೆಯ ವಿಕೃತ ಅಡಿಪಾಯದ ಮೇಲೆ ನಿಂತ ಈ ಜಾತಿ ನಿಷ್ಟ ವ್ಯವಸ್ಥೆಯ ವಿರುದ್ಧದ ಹೋರಾಟದ ಗಟ್ಟಿ ಧ್ವನಿ"೭ ಎಂಬ ಎಸ್. ಗಣೇಶನ್‌ರವರ ಈ ವ್ಯಾಖ್ಯಾನ ಆರಂಭದ ದಲಿತ ಸಾಹಿತ್ಯದ ಚಿಂತನೆಯ ಸ್ವರೂಪವನ್ನು ಕುರಿತದ್ದಾಗಿದೆ. ಮಾರ್ಕ್ಸ್‌ವಾದವನ್ನು ತನ್ನ ಶೈದ್ಧಾಂತಿಕ ಪ್ರೇರಣೆಯನ್ನಾಗಿ ಸ್ವೀಕರಿಸುತ್ತಾ ಪ್ರತಿಕಾರವನ್ನೇ ಅಂತಿಮ ಪರಿಣಾಮವಾಗಿ ನಿರೀಕ್ಷಿಸುವ ಸಾಧ್ಯತೆಗಳೊಂದಿಗೆ ದಲಿತ ಸಾಹಿತ್ಯವನ್ನು ಕ್ರಾಂತಿಕಾರಿ [ರೆಬೆಲಿಯನ್]ಯಾಗಿಯೇ ಗುರುತಿಸುವ ಧೋರಣೆಗಳಿವೆ. ಇದಕ್ಕೆ ಅಪವಾದವಾಗಿ ಕೆಲವು ಲೇಖಕರು ಇದ್ದಾರೆ.

"ದಲಿತ ಸಾಹಿತ್ಯದಲ್ಲಿ ಮನುಷ್ಯ ಮತ್ತು ಆತನ ನೋವುಗಳು ಕೇಂದ್ರಬಿಂದುವಾಗುತ್ತವೆ. ಮನುಷ್ಯನ ನೋವು ಇವನ ಸಂಕೋಲೆಯ ಘಟನೆಗಳು ಜಾತೀಯತೆಯಿಂದ ಉಂಟಾಗುವ ಸಮಸ್ಯೆಗಳು ಈ ಕಾರಣಕ್ಕಾಗಿ ಪಡುವ ಯಾತನೆ, ಮನುಷ್ಯ ಮನುಷ್ಯನ ನಡುವಿರುವ ಅಡ್ಡಗೋಡೆಗಳು ೪ ಭಾಷೆಯ ಮುಖಾಂತರ ಸೃಷ್ಟಿ ಸಾಹಿತ್ಯದ ಮುಖೇನ ಈ ಎಲ್ಲಾ ನೋವಿನ ಚಿತ್ರವನ್ನು ದಲಿತರ ಮುಂದಿಡುತ್ತಾ ತಮ್ಮಗಳ ಮತ್ತು ತಮ್ಮ ಬದುಕಿನ ಹಿನ್ನೆಲೆಯನ್ನು ಅರಿತುಕೊಂಡು ಹೊಸ ಸಮಾಜದ ಮನುಷ್ಯನ ಜೊತೆಯಲ್ಲಿ ಹೆಜ್ಜೆಗಳನ್ನಿಡುವಂತೆ ಮಾಡುವುದು ಒಂದು ಕಡೆಯಾದರೆ ಸವರ್ಣೀಯ ಹಿಂದೂಗಳಿಗೆ ಇಂಥಾ ಚಿತ್ರಣವನ್ನು ಕೊಡುವುದರ ಮುಖೇನ ತಾವು ಮಾಡಿದ ತಪ್ಪಿನ ಅರಿವನ್ನು ಮೂಡಿಸುವುದು ಹಾಗೂ ಶೋಷಿತ ಜನತೆಯ ಜೀವನದ ಬಗ್ಗೆ ಭಯ & ಅನುಕಂಪವನ್ನು ಹುಟ್ಟಿಸುವುದು ಮತ್ತೊಂದು ಉದ್ದೇಶವಾಗಿವೆ."೮

ಶೋಷಣೆಯಷ್ಟೇ ಅಲ್ಲದೆ ದಲಿತ ಸಾಹಿತ್ಯ ಒಳಗೊಳ್ಳಬೇಕಾದ ಬದುಕಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ದಲಿತ ಸಾಹಿತ್ಯದ ನೆಲೆಗಳನ್ನು ಗುರುತಿಸುವ ಪ್ರಯತ್ನಗಳಿವೆ. "ದಲಿತ ಸಾಹಿತ್ಯದ ಕಾಲ ದಲಿತರ ಹಕ್ಕಿಗಾಗಿ, ಸಮಾಜ ಬದಲಾವಣೆಗಾಗಿ, ಸಂಘಟನೆಯನ್ನು ಕಟ್ಟಿಕೊಂಡು ಹೋರಾಡುತ್ತಿರುವ ಸಂದರ್ಭ ಇಂಥ ಸಾಮಾಜಿಕ ಸಂಘರ್ಷವೊಂದು ಸಾಹಿತ್ಯ ಕೃತಿಗೆ ಪ್ರೇರಣೆಯಾಗಿರುವುದನ್ನು ಗುರುತಿಸಬಹುದು."೯

ಗಂಗಾರಾಂ ಚಾಂಡಾಳರವರು ದಲಿತ ಸಾಹಿತ್ಯದ ಮನೋಧರ್ಮ ಈ ಕೆಳಕಂಡ ಅಂಶಗಳ ಮೇಲೆ ನಿಂತಿದೆ ಎಂದು ಹೇಳುತ್ತಾರೆ.

೧. ದಲಿತ ಸಾಹಿತಿಗಳು ತಮ್ಮ ಅಸ್ತಿತ್ವದ ಹುಡುಕಾಟದಲ್ಲಿದ್ದಾರೆ.

೨. ಸಾಹಿತ್ಯ ಸಮಾಜದ ವಿಷಮತೆ ಆಧಾರದ ಮೇಲೆ ಆಧಾರಗೊಂಡಿದೆ.

[illegible]

೩. ಇವರು ಸಾಂಸ್ಕೃತಿಕ ಬಂಡಾಯದ ಭಾಷೆಗಾಗಿ ಬರೆಯುತ್ತ ಹುಡುಕುತ್ತಿದ್ದಾರೆ.

೪. ಸಾಮಾಜಿಕ ಬಂಧನದ ಅರಿವಿನಿಂದ ಜೀವನದ ದಾರಿಯಲ್ಲಿ ಬರೆಯುತ್ತಿದ್ದಾರೆ.

೫. ಹೊಸ ಸಾಂಸ್ಕೃತಿಕ ಮೌಲ್ಯದ ಅರಿವಿಗಾಗಿ ಬರೆಯುತ್ತಿದ್ದಾರೆ.[೧೦]

ಇಡೀ ದಲಿತ ಸಾಹಿತ್ಯದಲ್ಲಿ ವಿಭಿನ್ನ ಅಭಿರುಚಿಗಳ ಭಿನ್ನ ಕಲಾವಂತಿಕೆಗಳ ಜನ ಕಾಣ ಸಿಗುತ್ತ ಹೋಗುತ್ತಿದೆ. ಇವರು ಇತರೆಲ್ಲಾ ಸಮುದಾಯಗಳಲ್ಲೂ ಇರುವವರೇ. ಆದರೂ ಇವರದೂ ಒಂದು ಅದ್ಭುತ ಜಗತ್ತು. ನಿರ್ಬಂಧನೆಗಳು ಅಡೆತಡೆಗಳು ಏನೇ ಇರಬಹುದಾದರೂ ಮನಸ್ಸಿನ ಚೇನತಶಕ್ತಿ, ಕಲಾವಂತಿಕೆಯ ಜೀವ ಸೆಲೆಯನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಇದೇ ಸಮೂಹದ ಜೀವಂತಿಕೆಯನ್ನು ಕುರಿತ "ಒಂದು ಕತೆಯ ಪ್ರಕಾರ ಭೂಮಿಯೆಲ್ಲಾ ಜಲಪ್ರಳಯವಾಗಿ ಮುಳುಗಿಕೊಂಡಾಗ ಒಂದು ಡೋಲು ಮಾತ್ರ ತೇಲುತ್ತಿರುತ್ತದೆ. ಈ ಡೋಲು ಹೊಲೆಯರು & ಇತರ ಶೂದ್ರಾತಿ ಶೂದ್ರ ಶೋಷಿತರು ತಮ್ಮ ಬದುಕಿನಲ್ಲಿ ಶೋಧಿಸಿದ ಅಮೂಲ್ಯವೂ ಅಮರವೂ ಆದ ಸೃಷ್ಟಿ ಶೀಲತೆಯ ಕಲೆಗಾರಿಕೆಯ ಜೀವಂತ ಪ್ರತೀಕವಾಗಿದೆ."[೧೧]

ಇಡೀ ಮೌಖಿಕ ಮಹಾಕಾವ್ಯ ಪರಂಪರೆಯ ವಾರಸುದಾರರಾದ ದಲಿತರ ಕಥನ ಪ್ರತಿಭೆ. ಆ ಜನ ವರ್ಗಗಳ ಅಂತರಾಳದ ಚೇತನಶಕ್ತಿಯನ್ನು ಎತ್ತಿಹಿಡಿಯುತ್ತದೆ. ಇಂತಹ ಮೌಖಿಕ ಪರಂಪರೆಯ ಪ್ರತಿಭಾ ಸಂಪನ್ನತೆ ಲಿಖಿತ ಪರಂಪರೆಯ ವಾರಸುದಾರರಾದ ದಲಿತರ ಕಥನ ಪ್ರತಿಭೆ ಆ ಜನವರ್ಗಗಳ ಅಂತರಾಳದ ಚೇತನ ಶಕ್ತಿಯನ್ನು ಎತ್ತಿ ಹಿಡಿಯುತ್ತದೆ. ಇಂತಹ ಮೌಖಿಕ ಪರಂಪರೆಯ ಪ್ರತಿಭಾ ಸಂಪನ್ನತೆ ಲಿಖಿತ ಪರಂಪರೆಯಲ್ಲೂ ವಿಭಿನ್ನವಾಗಿ ದಾಖಲಾಗಲು ಪ್ರಯತ್ನಿಸುತ್ತದೆ. "ಯಾವುದನ್ನು ಯಜಮಾನ ಸಂಸ್ಕೃತಿ ಮಾನ್ಯ ಮಾಡುವುದಿಲ್ಲವೋ ಅಂದರೆ ದಲಿತ ಬದುಕಿನ ಜೀವಂತಿಕೆಯನ್ನು ವಿಶಿಷ್ಟತೆಯನ್ನು ಅದರ ಒಡಲಾಳದಲ್ಲಿರುವ ಅನಮ್ಯತೆಯನ್ನು ಅದನ್ನು ಮೂರ್ತವಾಗಿ ಹಿಡಿದಿರುವ ದಾಖಲೆ ಮಾಡುವುದೇ ಅತ್ಯಂತ ಆಳವಾದ ಪ್ರತಿಭಟನೆಯಾಗುತ್ತದೆ."[೧೨] ಮೊದಲು ತಮ್ಮನ್ನು ವ್ಯವಸ್ಥೆ ಇತರೆಲ್ಲಾ ಮನುಷ್ಯರಂತೆ ಮನುಷ್ಯರಾಗಿ ಕಾಣಬೇಕಾದ ಅನಿವಾರ್ಯತೆಯನ್ನು ಅದರ ಬಗೆಗಿನ ಸಿಟ್ಟನ್ನು ದಲಿತ ಸಾಹಿತ್ಯ ಗರ್ಭೀಕರಿಸಿಕೊಂಡಿದೆ.

"ದಲಿತರ ಸಾಮಾಜಿಕ ಬದುಕು ದುರಂತಗಳ ಸರಮಾಲೆಯಾದರೆ ಸಾಂಸ್ಕೃತಿಕ ಬದುಕು ಚೇತೋಹಾರಿ ಜೀವಪರ ಮೌಲ್ಯಗಳಿಂದ ಕೂಡಿದೆ. ಬಡತನದಿಂದ ಬಸವಳಿದಿದ್ದರೂ ಬದುಕಿನ ಜೀವಸೆಲೆ ಎಂದೂ ಅವರಲ್ಲಿ ಬತ್ತಿಹೋಗಿರಲಿಲ್ಲ. ಬದುಕುವ ಛಲಕ್ಕಾಗಿ ಹೋರಾಟ ನಡೆಸುತ್ತಿದ್ದ ಅವರ ವೀರಗಾಥೆಯ ದಾಖಲೆಗಳಾಗಿ ದಲಿತ ಕಥೆಗಳು ಸೃಷ್ಟಿಯಾಗಿವೆ." ಕಾವ್ಯಗಳು ಹರಿದು ಬಂದಿವೆ.

ಹೊಟ್ಟೆಪಾಡಿನ ಅರ್ಥವ್ಯವಸ್ಥೆಯಲ್ಲಿ ಹೇಗೋ ಬದುಕುವ ಕದ್ದಾದರೂ ಬಾಳುವ ಉಪಾಯಗಾರರಾದ ದಲಿತರು ಮಾನವನ ಅದಮ್ಯ ಚೈತನ್ಯಕ್ಕೆ ಉದಾಹರಣೆಗಳಾಗುತ್ತಾರೆ. ಇಂತಹ ವ್ಯಕ್ತಿ ಚೈತನ್ಯವನ್ನೇ ದಲಿತ ಸಾಹಿತ್ಯದೊಳಗಿನ ಆಶಯಗಳಾಗಿ ವ್ಯಾಖ್ಯಾಸಿಸಬಹುದು.

ತನ್ನ ಜನಗಳ ಅನಕ್ಷರತೆ, ಬಡತನ, ಅಜ್ಞಾನ, ಜಡತ್ವಗಳ ನಡುವೆಯೂ ಅವರು ಒಗ್ಗೂಡಿದಾಗ ವ್ಯವಸ್ಥೆಯೊಳಗೆ ಜೀವ ವಿರೋಧಿ ವ್ಯೂಹ ಎಂದಿಗೂ ಉಳಿಯಲಾರದು. ನೊಂದ ಜನಗಳು ವ್ಯವಸ್ಥೆಯ ಯಾವುದೇ ಜಡತ್ವವನ್ನು ಸಂಕೀರ್ಣತೆಯನ್ನು ಭಗ್ನಗೊಳಿಸಿ ಬದುಕಿನ ಸ್ವಾತಂತ್ರ್ಯವನ್ನು ತಮ್ಮದಾಗಿಸಿಕೊಳ್ಳುತ್ತಾರೆ ಎಂಬ ಚೈತನ್ಯ ಶಕ್ತಿಯನ್ನು ತನ್ನ ಜನಗಳಲ್ಲಿ ದಲಿತ ಕವಿ ಗುರುತಿಸಿಕೊಳ್ಳುತ್ತಾ ಹೋಗುತ್ತಾನೆ. ತನ್ನ ಜನಗಳಲ್ಲಿನ ಅಪರಿಮಿತ ಚೈತನ್ಯಶಕ್ತಿ ಕೇವಲ ಅಜ್ಞಾನದಿಂದಾಗಿ ಮಸುಕಾಗಿದೆ. ಅರಿವಿನ ಪರಿಧಿ ವಿಸ್ತರಿಸಿದಂತೆ ಅವರಲ್ಲಿ ಸಂಚಯವಾಗುವ ಅಗಾಧಶಕ್ತಿಗೆ ವಿರುದ್ಧವಾಗಿ ಏನೂ ಉಳಿಯಲಾರದು ಎಂಬ ದೃಢವಿಶ್ವಾಸ ದಲಿತ ಕಾವ್ಯದಲ್ಲಿ ಕಂಡುಬರುತ್ತದೆ.

ನನ್ನ ಮಕ್ಕಳೊಂದುದಿನ
ಕಾಡಲಿಲ್ಲ ಬೇಡಲಿಲ್ಲ
ಆದರೂ ಬೆಳೆದರೂ
ಹುಲಿ ಹುಲಿಯಾಗಿ
ಮನಿ ಅಂಗಳದಲ್ಲಿ
ಬೀದಿ ಬೀದಿಗಳಲ್ಲಿ [ಕಪ್ಪು ಕಾವ್ಯ][೧೪] ಅ. ಮಾಲಗತ್ತಿ

ದಲಿತ ವ್ಯಕ್ತಿತ್ವಗಳನ್ನ ಹುಲಿಯಾಗಿ ಅವಾಹಿಸುವ ಪ್ರಜ್ಞೆಯೇ ಅವರೊಳಗೆ ವಿಶಿಷ್ಟ ಸಾಮರ್ಥ್ಯವನ್ನು ಕುರಿತದ್ದಾಗಿದೆ. ಬದುಕಲು ಈ ವ್ಯವಸ್ಥೆಯಿಂದ ಏನೂ ಸಿಕ್ಕದಿದ್ದರೂ ಅವರ ಸಹಜ ಸಾಮರ್ಥ್ಯದಿಂದಲೇ ಹುಟ್ಟಿಕೊಳ್ಳುವ ಪ್ರಭಾವಶಾಲಿ ವ್ಯಕ್ತಿಚೇತನವನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಬದುಕೇ ಅವರಿಗೆ ಅದನ್ನು ಕಲ್ಪಿಸಿಕೊಟ್ಟಿರುತ್ತದೆ ಎಂಬ ಚಿಂತನೆ ಇಲ್ಲಿ ಪ್ರಧಾನವಾಗುತ್ತದೆ.

ಪ್ರಜ್ಞೆಯನ್ನು ಪಡೆದುಕೊಳ್ಳುತ್ತಲೇ ಅದನ್ನು ಹಿಂದಿನ ಅನುಭವಗಳೊಂದಿಗೆ ಸಮೀಕರಿಸಿ ವ್ಯವಸ್ಥೆಗೆ ದುಃಸ್ವಪ್ನವಾಗಿ ಕಾಡುವ ವ್ಯಕ್ತಿತ್ವಗಳಾಗಿ ಪ್ರಜ್ಞೆಯನ್ನು ಪಡೆದುಕೊಂಡ ದಲಿತ ವ್ಯಕ್ತಿಚೇತನಗಳನ್ನ ದಲಿತ ಸಾಹಿತ್ಯ ಗುರುತಿಸಿಕೊಳ್ಳುತ್ತದೆ. ಇಂತಹ ಗುರುತಿಸಿಕೊಳ್ಳುವಿಕೆ ಬದಲಾವಣೆಗೆ ಒಂದು ಅಗತ್ಯವಾಗಿ ಒದಗಿ ಬರುತ್ತದೆ.

ಕಾರಣ ಗೊತ್ತಾಗದೆ
ಮುಂದೆ ದಾರಿ ತಿಳಿದಿದೆ

ಕ್ರಾಂತಿ ದಾರಿಯಲ್ಲಿ ನಡೆದು
ಹೊಸನಾಡನು ಕಟ್ಟುವೆವು
ಹೋರಾಟ ನಮ್ಮದೇ ಜಯ ನಮ್ಮದೇ [ಹೋರಾಟದ ಹಾಡುಗಳು]
ಕ.ದ.ಸಂ.ಸ. ಮೈಸೂರು

ಇಲ್ಲಿ ಇತಿಹಾಸದ ಜ್ಞಾನದಿಂದ ಅರಿವಿನಿಂದ ವರ್ತಮಾನವನ್ನು ಸಮರ್ಥವಾಗಿ ಕಟ್ಟಿಕೊಳ್ಳುವ ದಲಿತ ಪ್ರಜ್ಞೆಯ ಸಂಕಲ್ಪವನ್ನು ಪ್ರಧಾನವಾಗಿ ಗುರುತಿಸಲಾಗುತ್ತದೆ. ಇತಿಹಾಸವನ್ನು ಅರಿಯುವ ಪ್ರಜ್ಞೆಯೇ ಬದಲಾವಣೆಯ ಮಾರ್ಗವನ್ನು ತೆರೆಯುವ ಅಂಶವಾಗಿದೆ. ಹಾಗಾಗಿ ಕ್ರಾಂತಿಯ ಮುಖೇನ ವ್ಯವಸ್ಥೆಯನ್ನು ಬದಲಾಯಿಸುವವರೆಗೆ ನಮ್ಮ ಹೋರಾಟ ಮುಂದುವರೆಯುತ್ತಲೇ ಇರುತ್ತದೆ ಎಂಬ ದಲಿತ ಚೇತನದ ಕುರಿತಾದ ಆತ್ಮಪ್ರತ್ಯಯ ಪ್ರಧಾನವಾಗುತ್ತದೆ.

ನಡುಗುತ್ತೈತೆ ಇಂಡಿಯಾ ಬೊಂಬೆ
ತಲೆ ಮೇಲೆ ಹೇಲ್ಬುಟ್ಟಿ ಕೈಯಲ್ಲಿ
ಪೊರಕೆ ಹಿಡಿದ ಚಾಂಡಾಲರ ಕೂಗು ॥ಪಲ್ಲವಿ॥
ಗುಡುಗುತ್ತೈತೆ ಇಂಡಿಯಾ ಬೊಂಬೆ

ಭೂಹೀನ ಕಾರ್ಮಿಕರು ವಿಧಾನಸೌಧ ಮುತ್ತಲು
ವಿಧಾನಸೌಧ ದರೋಡೆ ರಾಣಿ ರಾಜಿಗೆ ಬರುತ್ತಿದ್ರೆ
ಕೂಲಿರೈತರೆಲ್ಲ ಹುಲಿ ಬೇಟೆಗೆ ಹೊರಟೋದ್ರು
ಕರ್ನಾಟಕ ಕಲ್ಲಿನಲ್ಲಿ ಮಳೆಯಿಂದ ಡಂಗೂರ
ಸಮತಾ ರಾಜ್ಯಕ್ಕವರು ಕೆಂಪುದಾರಿ ಹಿಡಿದರು (ಚಾಂಡಾಲರ
ಕೂಗು) ಗಂಗಾರಾಂ ಚಾಂಡಾಲ

ದಲಿತರ ಆತ್ಮಪ್ರತ್ಯಯ & ಹೋರಾಟಗಳೇ ಇಂಡಿಯಾವನ್ನು ನಡುಗಿಸಬಲ್ಲವು ಸಮತಾರಾಜ್ಯದ ಕೆಂಪುದಾರಿಗೆ ಶರಣಾಗಿ ಹೋದ ವ್ಯವಸ್ಥೆ ಕಂಡು ಕೂಲಿಕಾರ್ಮಿಕರು ರೈತರು ಮತ್ತೆ ಶಕ್ತಿವಂತರಾದರು ಎಂಬ ಧ್ವನಿ ಇಲ್ಲಿದೆ. ಆದರೆ ವಾಸ್ತವವಾಗಿ ದಲಿತರು ಏನಾಗಿದ್ದಾರೆ ಎಂಬ ನೆನಪು ಮಾತ್ರ ಮಾಸಿಲ್ಲ ಅಂತಹ ಒಂದು ಪದ್ಯ ಗೋವಿಂದಯ್ಯನವರ ಕಣ್ಣೀರ ಮಣ್ಣಲ್ಲಿ ಎಂಬುದು.

ಅಪ್ಪನಪ್ಪನ ನುಡಿಗೆ ತಲೆತೆತ್ತು
ಅತ್ತತ್ತು
ತಮ್ಮೆದೆಯ ರಕ್ತವನೆ ಹುತ್ತುತ್ತು
ಹಿಂದೂಯಿಸಮ್ ಗಾಂಧಿಯಿಸಮ್‌ಗಳ ನೆಟ್ಟು
ಕಣ್ಬಿಟ್ಟು

ಕೊತ ಕೊತ ಕುದಿದು ಕರ್‍ರಗಾದವರು
ಬರಿ ಹೆಸರಿಗೆ ಬಸುರಾದವರು ಇವರು
ನನ್ನವರು ಅವರಿವರು ಕಾಲಲ್ಲಿ ವದ್ದು ವದ್ದು
ಮಾಡಿದ್ದಕ್ಕೆ ಹೊಲೆ ಮಾದಿಗರಾದವರು (ಕಣ್ಣೀರ ಮಣ್ಣಲ್ಲಿ)
ಗೋವಿಂದಯ್ಯ

ಹೊಲೆ ಮಾದಿಗರ ಹೊಸ ತರುಣರು ಹೋರಾಟ ಮಾಡಿ ಸಮಾಜದೊಳಗೆ ಸ್ಥಾನ ಗಿಟ್ಟಿಸುವಾಗಲೂ ಹಳ್ಳಿಯ ಕಡೆ ಇನ್ನೂ ಬದಲಾಗದ ವಾಸ್ತವ ಪ್ರಪಂಚವು ಅವರಿಗೆ ಬಗೆ ಹರಿಯದ ಪ್ರಶ್ನೆಯಂತೆಯೇ ಕಾಡುತ್ತದೆ.

ನೆರಕೆಯಲ್ಲಿ ನಿರುಕಿಸಿದ
ಸಿಲವಾರದ ಬಟ್ಟಲು ಹಿಡಿದು ಹೊರಗೆ
ಕುಕ್ಕರಗಾಲು ಕೂತು ಓಸಿ
ಕಾಪಿ ಉಯ್ರಿಸೊಮ್ಯಾ ಎಂದು ಹಲುಬಿ
ಬೇಡುತ್ತಿದ್ದ ಅಪ್ಪನ ಕಂಡು ಬಿಸಿಯಾಗಿ ನಾನು
ತಳಮಳಗೊಂಡಿದ್ದು ಎಷ್ಟೋ ಸಲ

ಬ್ರಾಹ್ಮಣರಿಗೆ ಮುಕ್ತಿ ಮಾರ್ಗವೇ ಸುಲಭ!
ಹೊಲೆ ಮಾದಿಗರಿಗೆ ಹೊಟೆಲಿನ ಮಾರ್ಗವೂ ದುರ್ಲಭ?
(ಊರ ತೆಂಕಣತಜ್ಞರು) ಬಿ. ಚಿನ್ನಸ್ವಾಮಿ

ರಾಷ್ಟ್ರ ಪ್ರಾಣಿ, ಪಕ್ಷಿ, ಬಾಷೆ ಕುರಿತಾದ ಭಿನ್ನ ನೋಟಗಳು ವಿದ್ಯೆ ಎಂದರೇನು? ಎಂಬ ಪದ್ಯದೊಲುಮೆ ಕೋಲಾಟದ ಮಾದರಿ :

ಅಣ್ಣ : ಶ್ಯಾಹರ ದಾಗೋದಿದ ಶ್ಯಾಣವನಾದ ನನ ತಮ್ಮ ನಮ ರಾಷ್ಟ್ರ ಪ್ರಾಣಿಯ ಹೆಸರೇನಾ ಕೋಲೆ

ತಮ್ಮ : ಮಾಸ್ತರೇಳಿದ ಮಾತು ಪುಸ್ತಕದಾಗ ಇತ್ತು. ಹುಲಿರಾಜನೆಂದು ತಿಳಿದುಕೊಳ್ಳು ಕೋಲೆ.

ಅಣ್ಣ : ದೇಶದ ಬಿತ್ತನೆ ಕೆಲಸ ಎತ್ತಿನ ಮೇಲಿರುವಾಗ ಮಣ್ಣಿನ ಮಗ ನಮ್ಮ ಬಸವಣ್ಣ ಕೋಲೆ ಮಣ್ಣಿನ ಮಗ ನಮ್ಮ ಬಸವಣ್ಣ ಬಂಗಾರದ್ಹೋರಿ. ರಾಷ್ಟ್ರಕ್ಕೆ ರಾಜನೆಂದು ಬರೆದುಕೊಳ್ಳೊ ಕೋಲೆ.

ಅಣ್ಣ : ಪಟ್ಟಣದಾಗ ಓದಿದ ಪಂಡಿತ ನನ ತಮ್ಮ ನಮ ರಾಷ್ಟ್ರ ಪಕ್ಷಿಯ ಹೆಸರೇನಾ ಕೋಲೆ.

ತಮ್ಮ : ಮಾಸ್ತರೇಳಿದ ಮಾತು ಪುಸ್ತಕದಾಗ ಇತ್ತು ಬಣ್ಣದ ನವಿಲೊಂದು ತಿಳಿದುಕೊಳ್ಳೊ ಕೋಲೆ.

ಅಣ್ಣ : ಮೂಡಣ ಸುದ್ದಿಂಯ ಮುಂಗೋಳಿ ತತ್ತಿ ಹಾಕುವ ಕೋಳಿ ಕೆಂಗೋಳೆಂದು ಬರೆದುಕೊಳ್ಳೋ ಕೋಲೆ.

ಅಣ್ಣ : ಎಂಎ ಓದಿದ ತಮ್ಮ ಸುಮ್ಮನ್ಯಾಕ ಕುಂತಿ ನಮ್ಮ ರಾಷ್ಟ್ರ ಭಾಷೆಯ ಹೆಸರೇನಾ ಕೋಲೆ.

ತಮ್ಮ : ಪ್ರೊಫೆಸರೊಬ್ಬ ಕಲಿಸಿದ್ದು ಪುಸ್ತಕದಾಗ ಓದಿದ್ದು ಹಿಂದಿ ಹಿಂದಿ ಎಂದು ತಿಳಿದುಕೊಳ್ಳೊ ಕೋಲೆ.

ಅಣ್ಣ : ಕನ್ನಡ, ಮೊದಲಾಗಿ ಕಾಶ್ಮೀರಿ ಕಡೆಯಾಗಿ ಸರ್ವಭಾಷೆ ನಮಗೆ ಸಮನಾಗಿ ಕೋಲೆ.

ತಲೆಯ ತೆಗೆವ ಕಲೆಯುಬೇಡ
ಶತ್ರು ಆಗುವ ಚಿತ್ರ ಬೇಡ
ಜೀವ ಮಾರೋ ಜಾಹೀರಾತು
ಬೇಡವೇ ಬೇಡಾ... ತಾನಾನಾನಾ ।

(ಸಾರ ಸರಿ ಸ್ವರ ಸಂಗೀತ ರಕ್ತದ ರಂಗೋಲಿ ಆಯ್ದ ಹಾಡುಗಳು & ಕವಿತೆಗಳು)

ದಲಿತರ ಕಾವ್ಯಕ್ಕೆ ಪರಂಪರೆಯ ಹಂಗಿಲ್ಲ. ಅಲ್ಲಿಯಂತೆ ಕಥೆಗಳನ್ನು ಹೇಳುವ ಸಂಗೀತಕ್ಕೆ ಮಿಡಿಯುವ ರಾಗ ತಾಳಗಳ ಗೊಡವೆಗಳಿಲ್ಲ. ಅದಕ್ಕೇ ಬೇಕಿರುವುದು ಜೀವಂತ ಬದುಕುಗಳ ಬದಲಾವಣೆ ಮಾತ್ರ.

ಕಥೆ ಹೇಳುವುದಿಲ್ಲ ನನ್ನ ಕವನ
ಸಂಗೀತದ ಶೃತಿ ಹಿಡಿಯುವುದಿಲ್ಲ
ರಾಗತಾಳ ಮದ್ದಳೆಗಳ ರಿದಮಿಗೆ
ತಕ್ಕಂತೆ ಪದಗಳ ವರ್ಣಿಸುವುದಿಲ್ಲ

('ನನ್ನ ಕವನ': ಇಂದೂಧರ ಹೊನ್ನಾಪುರ)

ದಲಿತ ಕಾವ್ಯದೊಳಗೆ ಅಗಾಧ ಕಾವ್ಯ ಶಕ್ತಿಯೂ ಅಡಗಿದೆ ಎಂಬುದನ್ನು ಮತ್ತೆ ಮತ್ತೆ ದಲಿತ ಕಾವ್ಯಗಳು ತೋರುತ್ತವೆ. ಶಂಭುಕನ ಕುರಿತ ಮುಳ್ಳೂರು ನಾಗರಾಜರ 'ನೆಲದ ಜೋಗುಳ' ಅಂತಹ ಕಾವ್ಯಕ್ಕೊಂದು ಉದಾ:

ಕನಸುಗಳ ಮಳೆ ಬರಲು
ಬೆಂಕಿ ಮಳೆ ಕಣ್ಣಲ್ಲಿ ಯಾತಕ್ಕೊ?
ಕುದಿವ ಕನಸಿನ ಲೋಕದಕ್ಕರೆ
ಪಾರಿವಾಳ ಹಾರುತಿದೆ ಯಾತಕ್ಕೋ?
ಮೂಕ ನೋವುಗಳ ಸಾಮ್ರಾಜ್ಯಕೆ
ನರಕ ಬಂದಿದೆ ತಾಯಿ ನಾಕದಿಂದ

ಮಾಮರವು ಮರಣಗಂಬವು
ಕೋಗಿಲೆಯ ಹಾಡು ಇನ್ನೆಲ್ಲಿ ಶಿವನೆ?
ಹಸಿದ ಮನಸಿಗೆ ಸೂರ್ಯ ಚಂದ್ರರೆ
ರೆಕ್ಕೆಗಳಾಗಿರಲು ಹಾರುವುದು
ಬೇರಾವ ಕ್ಷಿತಿಜದೆಡೆಗೆ?

ಬ್ರಹ್ಮವೆಂಬುದು ಸುಮ್ಮನೆ
ಪರಬ್ರಹ್ಮವೆಂಬುದು ಸುಮ್ಮನೆ
ಅಗಣಿತ ತಾರಾಲೋಕ ಸುಮ್ಮನೆ
ಸೂರ್ಯಲೋಕ ಚಂದ್ರಲೋಕ ಸುಮ್ಮನೆ
ನಾಕ ನರಕ ಮೋಹ ಚರಕ ಸುಮ್ಮನೆ
ಎಲ್ಲಿಹುದು ಎಲ್ಲಿಹುದು ನಮ್ಮ ಮನೆ?

(ನೆಲದ ಜೋಗುಳ: ಮಳ್ಳೂರು ನಾಗರಾಜ)

ಕೆ.ಬಿ. ಸಿದ್ಧಯ್ಯನವರ 'ಬಕಾಲ' ಇಡೀ ದಲಿತ ಪರಂಪರೆಯ ನೋವು, ಸಂಕಟವನ್ನು ಹಾಡು ಮಾಡುತ್ತಲೇ ಸಂಘವ ಸೇರಿ ಗುಡುಗಾಗಿ ಗುಡುಗಬೇಕು, ಸಿಡಿಲಾಗಿ ಸಿಡಿಯಬೇಕು, ಸುರಿಮಳೆಯು ಸುರಿಯುವಾಗ ನಾವೆಲ್ಲ ಕುಣಿಯಬೇಕು ಎನ್ನುತ್ತಲೇ ತನ್ನೊಳಗೆ ಸೊಗಸಾದ ಕಾವ್ಯವನ್ನೂ ಅಡಗಿಸಿಕೊಂಡಿದೆ.

ಮೂಗುತ್ತದ ಅರಮನೆಯಲ್ಲಿ
ರಾಜ ಸರ್ಪನ ಸಾವಾಯ್ತು
ಸಾವಿಗೆ ಸದ್ದಿಲ್ಲ
ಸೈನ್ಯವಿರುವೆಯ ಮುತ್ತಿಗೆಯಾಯ್ತು **(ಬಕಾಲ: ಕೆ.ಬಿ.ಸಿದ್ಧಯ್ಯ)**

ದಲಿತ ಕಾವ್ಯ ಪರಂಪರೆಯ ಕಥನಗಳ ಕಡೆ ಕಣ್ಣು ಹಾಯಿಸುವುದಷ್ಟೇ ಅಲ್ಲ ಅದಕ್ಕೊಂದು ಹೊತಿರುವನ್ನ ಹೊಸ ವೈಚಾರಿಕ ಹಂದರವನ್ನು ನೀಡುತ್ತದೆ. ಈ ಹಿನ್ನೆಲೆಯಲ್ಲೆ ನೆಲದ ಜೋಗುಳ, ಬಕಾಲಗಳಂಥ ಕವನಗಳು ಬಂದಿವೆ ಹಾಗೇ ಬಿಡಿ ರಚನೆಗಳಲ್ಲೂ ಅಂತಹ ಮಿಂಚು ಹರಿದಾಡಿವೆ. ಉದಾ: ಸುಕನ್ಯಾ ಮಾರುತಿ ಅವರ ಅಹಲ್ಯೆ.

ನನಗೆ ಗೊತ್ತು
ಗೌತಮನ ಸರ್ಪ ಮತ್ತೆ
ಹೆಡೆಯೆತ್ತಲಾರದು
ನನ್ನೊಳಗೆ ಏನನ್ನು ಬಿತ್ತಲಾರದು
ರಾಮಸ್ಪರ್ಶಕ್ಕೆ ಶಿಲೆ
ಸ್ಫೋಟವಾಗಿದೆ ಅಷ್ಟೇ
ಹೆಣ್ಣಾಗಲಿಲ್ಲ **(ಅಹಲ್ಯೆ: ಸುಕನ್ಯಾ ಮಾರುತಿ)**

ಸಾಮಾಜಿಕ ಅಸಮಾನತೆಯನ್ನು ಅಷ್ಟೇ ಪರಿಣಾಮಕಾರಿಯಾಗಿ ಗೇಯ ಪೂರ್ಣವಾಗಿ, ಅರ್ಥಪೂರ್ಣವಾಗಿ ಪುರುಷರಷ್ಟೇ ಸಮರ್ಥವಾಗಿ ಮಹಿಳೆಯರೂ ಹೇಳಬಲ್ಲರೆಂಬುದನ್ನು ಅನಸೂಯ ಕಾಂಬಳೆಯವರು ತಮ್ಮ ಮೊದಲ ಸಂಕಲನ 'ಮುಳ್ಳು ಕಂವೆಯ ನಡುವೆ' ಕೃತಿಯಿಂದಲೇ ಸಾಬೀತು ಪಡಿಸಿದ್ದಾರೆ.

ನಿಮ್ಮ ಊಟಕೆ ಬಾಳೆ ತೋಟಕೆ ನಮ್ಮ ಬೆವರಿನ ಕಿರುನಗೆ
ನಿಮ್ಮ ರೋಷಕೆ ಬಿಡದ ದ್ವೇಷಕೆ ನಮ್ಮ ಕೋಪವು ಕತ್ತಿಯೆ
ನಿಮ್ಮ ಮಂಚಕೆ ನಿಂತ ಕಂಬಕೆ ನಮ್ಮ ಉಸಿರೇ ಆದರೆ
ನಿಮ್ಮ ಮೋಸಕೆ ಆಳುವಾಟಕೆ ನಮ್ಮ ಮಾತದು ಬೆಂಕಿಯೆ
(ನಿಮ್ಮ ಹೃದಯ ಭೀಕರ: ಅನುಸೂಯ ಕಾಂಬಳೆ)

ಸೂಜಿ ಗಾತ್ರದ ಕೊಳವೆಯಲ್ಲೂ ಮನುಷ್ಯನೊಬ್ಬನ ಹಾಡು ಹಾಡಿ ಪ್ರಸಿದ್ಧರಾದ ಸುಬ್ಬುಹೊಲೆಯಾರ್ ಊರು ಕೇರಿಗಳ ಜೀವಪರದನಿಗೆ ಸದಾ ಸ್ಪಂದಿಸುತ್ತಲೇ ಇರುವ ಕವಿ ಅವರ ಇತ್ತೀಚಿನ ಕವಿತೆ ನೋಡಿ ಹೀಗಿದೆ:

ಬಿಸಿ ಉಸಿರಿಗೆ ದಿನಕರಗಿ ಹೋಗುತ್ತಿರುವಾಗ
ಮುರಿದು ಕಟ್ಟಬೇಕು ಮಾತ
ಇಲ್ಲದಿದ್ದರೆ ಅಲ್ಲಮನೆಂಬ ಅಲ್ಲಮ ಸಿಡಿದರೂ
ಸಿಡಿಯಬಹುದು ನನ್ನಂತವರೊಳಗಿಂದ
ಕ್ರಾಂತಿ ಎಂದರೆ ಪ್ರೇಮಪತ್ರ ಬರೆಯುವ ಹುಮ್ಮಸ್ಸಿನಂತೆ
ಬತ್ತಿ ಹೋಗುವುದಿಲ್ಲ ಇದು
ಹಚ್ಚಿ ಉರಿಸುತ್ತಿರಬೇಕು ಉಸಿರೆಂಬ
ಉಸಿರಲ್ಲಿ
(ತಥಾಗತರ ಉಸಿರು ತಾರೆ ಹೋದಂತೆ:–ಸುಬ್ಬುಹೊಲೆಯಾರ್)

ಬೇರಾದ ರುಂಡದಂತಹ ಒಂದು ಸೋಮಕುಣಿತದ ವಿಶಿಷ್ಟ ಕಾವ್ಯದ ಮೂಲಕ ದಲಿತ ಕಾವ್ಯದ ಹೊಸ ದಿಕ್ಕು ವಿಸ್ತರಿಸಿದ ಕವಿ ಎಲ್. ಹನುಮಂತಯ್ಯ ಸೊಗಸಾದ ಕಾವ್ಯಾಭಿವ್ಯಕ್ತಿಗೆ ಹೆಸರಾದವರು.

ಬೆಳಕ ಬೇಡುವ ಕಪ್ಪು ಜನರಿಗೆ
ಚಂದ್ರ ಕಾಣಲಿಲ್ಲ ಈಗಲೂ
ಸೂರ್ಯ ಹುಟ್ಟಲಿಲ್ಲ

(ಕಪ್ಪು ಕಣ್ಣಿನ ಹುಡುಗಿ:-ಎಲ್.ಹನುಮಂತಯ್ಯ)

ತಮ್ಮ ಕಾವ್ಯದ ಮೂಲಕ ದಲಿತ ಕಾವ್ಯದ ಶಕ್ತಿ ಹೆಚ್ಚಿಸಿದ ಮತ್ತೊಬ್ಬ ಲೇಖಕ ಎನ್.ಕೆ. ಹನುಮಂತಯ್ಯ 'ಹಕ್ಕಿ ಮತ್ತು ಬಲೆ' ಅಂತಹ ಒಂದು ಸೊಗಸಾದ ಕಲೆಗಾರಿಕೆಯನ್ನೂ ತೋರುತ್ತದೆ.

ಹಗಲು ಇರುಳಿನ ಬಲೆಯೊಳಗೆ
ಹಕ್ಕಿ ಸಿಲುಕಿದೆ
ಪಕ್ಕದಲ್ಲೇ ಬೇಟೆಗಾರರ ಒಲೆ
ಉರಿಯುತ್ತಿದೆ

ಈಗ
ಹಾಡಲೇಬೇಕು
ಈ ಪುಟ್ಟ ಕೊಕ್ಕಿನಲಿ
ಬೇಟೆಗಾರರು ನಿದ್ರಿಸುವಂತೆ

ಈಗ
ಈ ಪುಟ್ಟ ಕೊಕ್ಕನ್ನೆ
ಖಡ್ಗವಾಗಿಸಬೇಕು
ಬಲೆ ಹರಿದು ಬಯಲು ಸೇರುವಂತೆ

(ಹಕ್ಕಿ ಮತ್ತು ಬಲೆ:-ಎನ್.ಕೆ. ಹನುಮಂತಯ್ಯ)

ಕನ್ನಡ ದಲಿತ ಕಾವ್ಯ ಇಂದು ತನ್ನ ಭಿನ್ನ ಭಿನ್ನ ರೂಪಕಗಳಿಂದ, ಹೊಸ ಹೊಸ ಬಗೆಯ ನಿರೂಪಣಾ ಕ್ರಮಗಳಿಂದ ಗಟ್ಟಿ ಹೆಜ್ಜೆಗಳನ್ನಿಟ್ಟು ಮುಂದುವರಿಯುತ್ತದೆ. ಸಿದ್ಧಲಿಂಗಯ್ಯ, ಕೆ.ಬಿ. ಸಿದ್ಧಯ್ಯ, ಮುಳ್ಳೂರು ನಾಗರಾಜ, ಎಲ್. ಹನುಮಂತಯ್ಯ, ಸುಬ್ಬುಹೊಲೆಯಾರ್, ಎನ್. ಹನುಮಂತಯ್ಯನವರಿಂದ ಹೊಸ ಹೊಸ ರೂಪ ಪಡೆಯುತ್ತಾ ಬಂದಿದೆ.

ದಲಿತ ಪ್ರಜ್ಞೆ ಪಂಪನಿಂದಲೇ ಪ್ರಾರಂಭವಾದರೂ ಅದಕ್ಕೊಂದು ಅರ್ಥಪೂರ್ಣ ಕೇಂದ್ರ ಸಿಕ್ಕಿದ್ದು ಸಿದ್ಧಲಿಂಗಯ್ಯನವರಿಂದ. ಕನ್ನಡ ದಲಿತ ಕಾವ್ಯಕ್ಕೆ ೧೨ನೇ ಶತಮಾನದ ವಚನಕಾರರ, ೧೪ನೇ ಶತಮಾನದ ನಂತರದ ತತ್ವಪದಕಾರರ ಜನಪದ ಪರಂಪರೆಯ ಪ್ರಭಾವವಿದೆ. ಹಾಗೇ ಆಧುನಿಕ ದಲಿತ ಕಾವ್ಯದ ಮೇಲೆ ಮಹಾರಾಷ್ಟ್ರದ

ದಲಿತ ಪ್ಯಾಂಥರ್ ಪ್ರಭಾವವಾಗಿರುವಂತೆ ಆಂಧ್ರದ ದಿಗಂಬರ ಕಾವ್ಯದ ಪ್ರೇರಣೆಯೂ ಆಗಿದೆ. ನಾಮದೇವಢಸಾಳ, ದಯಾಪಾವರ, ದಯಾ ಪಾವರ, ಅರುಣಕಾಂಬಳೆ ಅವರಂತೆ ಆಂಧ್ರದ ಚರಬಂಡರಾಜು, ನಗ್ನಮುನಿ, ನಿಖಿಲೇಶ್ವರ, ಭೈರವಯ್ಯ, ಜ್ವಾಲಾಮುಖಿ, ಆರುದ್ರ & ಶ್ರೀ ಶ್ರೀ ಅವರ ಪ್ರಭಾವವು ಇವರ ಮೇಲಿದೆ.

ಕನ್ನಡ ಕಾವ್ಯದಲ್ಲಿ ದಲಿತ ಕಾವ್ಯವೇ ವಿಶಿಷ್ಟವೆನಿಸಲು ಇಲ್ಲಿನ ವಸ್ತು, ಅಭಿವ್ಯಕ್ತಿಕ್ರಮ, ಜನಪದ ಲಯಗಾರಿಕೆ, ಆಡುನುಡಿಯಲ್ಲಿ ಅಡಗಿದ ಕಾವ್ಯಾತ್ಮಕ ಪದಗಳ ಸಮರ್ಥ ಬಳಕೆ ಕಾರಣವಾಗಿದೆ. ನೇರ ಮತ್ತು ಜೋರಾಗಿ ಸದ್ದು ಮಾಡುವ ಬೆಂಕಿ ಉಂಡೆಗಳಂತೆ ಸಿಡಿಯುವ ಮಂಜುಗಡ್ಡೆಯಂತೆ ರೊಚ್ಚು ಅಡಗಿಸಿಕೊಳ್ಳುವ ಬಹುರೂಪಿ ಗುಣಗಳೂ ಈ ಕಾವ್ಯದಲ್ಲಿವೆ.

ದಲಿತರಲ್ಲಿ ಕೆಲವರು ಪರಂಪರೆಯನ್ನು ಪ್ರಶ್ನಿಸಿ ಸಿಡಿದರೆ ಮತ್ತೆ ಕೆಲವರು ಮುರಿದು ಕಟ್ಟಿದ್ದಾರೆ. ಕೆಲವರು ಜಾತೀಯ ದಳ್ಳುರಿಯಿಂದ ಸಿಡಿದೆದ್ದರೆ ಮತ್ತೆ ಕೆಲವರು ಆಧುನಿಕರಣದ ಸಂಭ್ರಮದಲ್ಲಿ ಬಿಡುಗಡೆಯ ನೆನಪಾಗಿಸಿಕೊಂಡಿದ್ದಾರೆ. ಹೀಗಾಗಿ ಒಂದು ಕಾಲದಲ್ಲಿ ಉಪದೇಶಕ್ಕಾಗಿ ಸಂತೋಷಕ್ಕಾಗಿ, ಶೃಂಗಾರಕ್ಕಾಗಿ ಮೀಸಲಾಗಿದ್ದ ಕವಿತೆ ತನ್ನ ಕಲೆಗಾರಿಕೆಯನ್ನ ತೊರೆದು ಜೀವಪರವಾಗಿ ಮಾರ್ಪಟ್ಟಿತು. ಹಾಗಾಗೇ ಅದು "ಜನರು ತಿನ್ನುವ ಅನ್ನದ ಅಗುಳು ನನ್ನ ಕವನ" ಎನ್ನುವಂತಾಯಿತು. ರಾಜರ ಹಾಡಾಗದೆ ನೆಲದ ಜೋಗುಳವಾಯಿತು. ನವೋದಯದವರ ಭಾವಗೀತೆ, ನವ್ಯದವರ ಮುಕ್ತ ಛಂದಸ್ಸನ್ನು ಮುರಿದು ಕಟ್ಟುತ್ತ ಹೊಸ ರೂಪಗಳನ್ನು ಪಡೆದುಕೊಂಡಿತು. ಸಾವಿರಾರು ನದಿಯಾಯಿತು.

❖

ಅಡಿ ಟಿಪ್ಪಣಿ

೧. ಶಿವರಾಮ ಕಾರಂತ; ಅರ್ಥಕೋಶ: ಪುಟ-೨೪೭.

೨. ಪಂಡಿತ ಜೆ.ಎ. ಕವಲಿ; ಕಸ್ತೂರಿಕೋಶ: ಪುಟ-೪೭೫.

೩. ಹೆಚ್.ವಿ. ರಮಾಕಾಂತ್‌ರಾವ್; ಕನ್ನಡ-ಕನ್ನಡ ಶಬ್ದಕೋಶ: ಪುಟ-೩೭೯.

೪. ದೇವಯ್ಯ ಹರವೆ; ದಲಿತ ಸಾಹಿತ್ಯ & ಇತರ ಲೇಖನಗಳು: ಪುಟ-೭.

೫. ಅರವಿಂದ ಮಾಲಗತ್ತಿ; ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ: ಪುಟ-೫.

೬. ಸಂ. ಡಾ॥ವಿರೂಪಾಕ್ಷಿ ಪೂಜಾರಹಳ್ಳಿ; ದಲಿತರು & ಚರಿತ್ರೆ: ಪುಟ-೩೫, ೯೨.

೭. ಸರಜೂ ಕಾವ್ಯರ್; ಕನ್ನಡ ಮರಾಠಿ ದಲಿತ ಸಾಹಿತ್ಯ: ಪುಟ-೪.

೮. ಅರವಿಂದ ಮಾಲಗತ್ತಿ; ದಲಿತಸಾಹಿತ್ಯ ಚಳುವಳಿಯ ತಾತ್ವಿಕಚಿಂತನೆ: ಪುಟ-೧೦೫-೦೬.

೯. ಎಸ್. ಗಣೇಶನ್; ದಲಿತಸಾಹಿತ್ಯ ಚಳುವಳಿ: ಪುಟ-೧೨.

೧೦. ಎಲ್. ಹನುಮಂತಯ್ಯ; ದಲಿತ ಲೋಕದ ಒಳಗೆ: ಪುಟ-೭೫.

೧೧. ಗಂಗಾರಾಂ ಚಂಡಾಳ; ಕರ್ನಾಟಕ ದಲಿತ ಚಳುವಳಿ & ಬಿ.ಆರ್. ಅಂಬೇಡ್ಕರ್ ಪ್ರಭಾವ: ಪುಟ-೧೩೨, ೩೩.

೧೨. ಆರ್ಕೆ; ಸಾಹಿತ್ಯ ಸಿದ್ಧಾಂತ & ಹೋರಾಟ: ಪುಟ-೬೪.

೧೩. ರಾಜೇಂದ್ರ ಚೆನ್ನಿ; ಕನ್ನಡ ಸಾಹಿತ್ಯದಲ್ಲಿ ದೇಸೀಯತೆ: ಪುಟ-೭೬.

೧೪. ಎಲ್. ಹನುಮಂತಯ್ಯ; ಕಥಾ ಕಥನ: ಪುಟ-೩.

೧೫. ಯು.ಆರ್. ಅನಂತಮೂರ್ತಿ; ನವಿಲು: ಪುಟ-೫೨.

ಪತ್ರಿಕೆಗಳು :

೧. ತಿಂಗಳು: ಮೇ ೨೦೦೯

೨. ಮಯೂರ : ಜನವರಿ ೨೦೦೯

ಅಧ್ಯಾಯ–೨

ತೆಲುಗು ಪ್ರಜಾಕಾವ್ಯ ಪರಂಪರೆ

ತೆಲುಗಿನ ಪ್ರಜಾಕಾವ್ಯ ಪರಂಪರೆ; ಕಾವ್ಯಾತ್ಮಕ, ಸೈದ್ಧಾಂತಿಕ ವೈಶಿಷ್ಟ್ಯಗಳು

ತೆಲುಗಿನ ಕಾವ್ಯ ಪರಂಪರೆಯನ್ನು ಗಮನಿಸಿದಾಗ ಎರಡು ಪ್ರಧಾನ ಧಾರೆಗಳು ಕಂಡುಬರುತ್ತವೆ. ಒಂದು ಪ್ರಭುತ್ವದ ಓಲೈಕೆ ಮತ್ತು ಶೃಂಗಾರ ಪ್ರಧಾನ ಮಾದರಿಯದಾದರೆ ಮತ್ತೊಂದು ಪ್ರಭುತ್ವ ವಿರೋಧಿ ಮತ್ತು ಶ್ರೀಸಾಮಾನ್ಯರ ಪರವಾದ ಮಾದರಿ ಎನ್ನಬಹುದು.

"ಒಳ್ಳೆಯದೆಂಬುದು ಹೊಲೆಯನೆ ಆದರೆ ನಾನು ಹೊಲೆಯನೆ ಆಗುವೆ" ಎನ್ನುವ ಗುರುಜಾಡರ ಸಾಲಾಗಲೀ, "ಭಾವನೆಯಲ್ಲಿ ಸಾಮಾನ್ಯನ ಜೀವನ ವಲಯಗಳನ್ನು ದಾಟೆನು ಬರಹದ ಹೂದೋಟದಲ್ಲಿ ಛಂದಸ್ಸಿನ ಸಸಿಗಳನ್ನು ನಾಟೆನು" ಎಂಬ ಕುಂದುರ್ತಿಯವರ ಪ್ರತಿಜ್ಞೆಯಲ್ಲಾಗಲೀ ದಿಗಂಬರ ಕವಿಗಳು ಹೇಳುವ–

* ಮತ್ತೆ ಮತ್ತೆ ಹೇಳುತ್ತಿದ್ದೇವೆ
ಕಿವಿಯಿದ್ದರೆ ಕೇಳಿ
ಕಣ್ಣಿದ್ದರೆ ನೋಡು
ಮಿದುಳಿದ್ದರೆ ಆಲೋಚಿಸು....

* ಈ ದೇಶದಲ್ಲಿ ಈ ಭೂಗೋಳದಲ್ಲಿ ಉಸಿರಾಡುವ ಪ್ರತಿ ಮನುಷ್ಯನ ಉಳಿವಿಗಾಗಿ ತಪಿಸಿ ಆತನ ಸ್ಥಿತಿ ನೋಡಿ ಬಿಕ್ಕಿಬಕ್ಕಿ ಅತ್ತು ಹುಟ್ಟಿದ್ದು ಪ್ರವಚಿಸಿದ್ದು ಈ ಕವಿತೆ.

* ನಾವು ಪುಸ್ತಕಗಳಿಂದ ಮಾತನಾಡುವುದಿಲ್ಲ ಅನುಭವಗಳಿಂದ ಮಾತನಾಡುವ ಆಸೆ ನಮ್ಮದು.

ಹೀಗೆ ವಿದ್ವಾಂಸ ಪರವಾದ ಕಾವ್ಯವನ್ನು ಜನಸಾಮಾನ್ಯರ ಪರತಿರುಗಿಸಿದ್ದು ಸ್ವತಂತ್ರೋತ್ತರ ತೆಲುಗು ಕವಿತೆ. ನೀವೇನು ಬರೆಯುತ್ತೀರಿ? ಯಾರಿಗಾಗಿ ಬರೆಯುತ್ತೀರಿ? ಎಂದು ಪ್ರಶ್ನಿಸುತ್ತ ಶ್ರೀ ಶ್ರೀ ಅವರ ಷಷ್ಟ್ಯಬ್ದಿಯನ್ನು ವಿರೋಧಿಸಿದ್ದ ಕ್ರಾಂತಿಕಾರಿ ಯುವ ಪಡೆ ಆ ಸಮಾರಂಭದ ವಿರುದ್ಧ ಕರಪತ್ರಗಳನ್ನು ಹಂಚುತ್ತ ರೈತರೊಡನೆ, ಜನಸಾಮಾನ್ಯರೊಡನೆ ಸಾಯುಧ ಹೋರಾಟದಲ್ಲಿ ಭಾಗವಹಿಸಲು

ಕರೆಕೊಟ್ಟರು. ಇದರ ಫಲವೇ "ವಿಪ್ಲವ ರಚಯಿತಲ ಸಂಘ" ನಿರ್ಮಾಣವಾದದ್ದು. ಇದಕ್ಕೆ ತಕ್ಕಂತೆ ಅವರಿಗೆ ಒಂದುಕಡೆ ಮಾವೋ ಅವರ ಲಾಂಗ್‌ಮಾರ್ಚ್ ಹೋರಾಟ ಸ್ಫೂರ್ತಿನೀಡಿತು. ಜೊತೆಗೆ ಕಾವ್ಯಕ್ಕೆ ಸುಲಭ ನೇರಭಾಷೆ & ಜಾನಪದ ಲಯಗಳೂ ಹರಿದು ಬಂದವು. ಅತಿ ಸಾಮಾನ್ಯರನ್ನ ಒಳಗೊಂಡ ಗೇಯಕಾವ್ಯಗಳು "ಪ್ರಜಾಕಾವ್ಯ" ಎಂಬ ಪರಂಪರೆಗೆ ನಾಂದಿ ಹಾಡಿದವು.

ಭೌಗೋಳಿಕ ನೆಲೆಯಲ್ಲೇ ದೇಶವನ್ನು ನೋಡುತ್ತಿದ್ದ ಕವಿಯ ಕಣ್ಣನ್ನ "ದೇಶವೆಂದರೆ ಮಣ್ಣಲ್ಲ, ದೇಶವೆಂದರೆ ಮನುಷ್ಯರು" ಎಂಬ ಭಾವದತ್ತ ತಿರುಗಿಸಿದವು. ಶೇಷೇಂದ್ರ ಶರ್ಮಾರಿಗೆ "ನೇಗಿಲು ಹೊತ್ತ ರೈತ ಶಿಲುಬೆ ಹೊತ್ತ ಕ್ರಿಸ್ತನಂತೆಯೇ ಕಾಣುತ್ತಾನೆ."

ಪ್ರಜಾಕಾವ್ಯ ಪರಂಪರೆ:

ಕನ್ನಡ ಸಾಹಿತ್ಯ ತೆಲುಗಿನಂತೆ ಪ್ರಾಚೀನವಾದದ್ದು. ತೆಲುಗಿನ ಆದಿಕವಿ ನನ್ನಯ್ಯನಿಗೆ ಕನ್ನಡದ ಪಂಪಭಾರತವೇ ಮಾದರಿಯಾಗಿದೆ. ಭೌಗೋಳಿಕವಾಗಿ ನೋಡಿದರೆ ನಮ್ಮ ಪಂಪ ಆಂಧ್ರದ ವೆಂಗಿಪೊಳುವಿನವನು. ಹಾಗೂ ಪೊನ್ನ, ೧ನೇ ನಾಗವರ್ಮ, ದುರ್ಗಸಿಂಹ, ಬ್ರಹ್ಮಶಿವ ಇವರೆಲ್ಲರೂ ಆಂಧ್ರದ ನೆಲದಿಂದ ಬಂದವರೇ.

ಪಾಲ್ಕುರಿಕೆ ಸೋಮನಾಥನು ಕನ್ನಡ ತೆಲುಗು ಎರಡರಲ್ಲೂ ಸಮಾನ ಪಾಂಡಿತ್ಯವನ್ನು ತೋರಿರುವ ಏಕಮೇವ ಕವಿಯಾಗಿದ್ದಾನೆ. ಕನ್ನಡದಲ್ಲಿ ಸದ್ಗುರು ರಗಳೆ, ಬಸವರಾಧ್ಯ ರಗಳೆ, ಸೋಮೇಶ್ವರ ಶತಕಗಳನ್ನೂ, ತೆಲುಗಿನಲ್ಲಿ ಬಸವಪುರಾಣಮು, ಪಂಡಿತರಾಧ್ಯ ಚರಿತ್ರ, ವೃಷಾಧಿಕ ಶತಕಮುಗಳನ್ನೂ ಬರೆದಿದ್ದಾನೆ. ಈತನ ತೆಲುಗು ಬಸವಪುರಾಣವೇ ಕನ್ನಡದ ಭೀಮಕವಿಯ ಬಸವಪುರಾಣಕ್ಕೆ ಮೂಲ. ಕನ್ನಡದ ದಾಸಶ್ರೇಷ್ಠನಾದ ಹಾಗೂ ಕರ್ನಾಟಕ ಸಂಗೀತ ಪಿತಾಮಹನಾದ ಪುರಂದರದಾಸನು ತೆಲುಗಿನ ಅಣ್ಣಮಾಚಾರ್ಯ ತ್ಯಾಗರಾಜರಿಗೆ ಪ್ರೇರಣೆ ಒದಗಿಸಿದ್ದಾನೆ. ವೇಮನ ತೆಲುಗಿನ ಜನಕವಿ ಕನ್ನಡದ ಸರ್ವಜ್ಞನನ್ನು ಅನೇಕ ಬಗೆಗಳಲ್ಲಿ ಹೋಲುವಂಥ ಕವಿ. ಕನ್ನಡಕ್ಕಿಂತಲೂ ಹೆಚ್ಚು ಪ್ರಸಿದ್ಧವಾದ ಪಾಂಡಿತ್ಯ ಕಾವ್ಯವಾದ ಅಷ್ಟಾವಧಾನ, ಶತಾವಧಾನವು ತೆಲುಗಿನಲ್ಲಿ ಹೆಚ್ಚು ಪ್ರಸಿದ್ಧಿಯಾದುದು.

ಪ್ರಾಚೀನ ಕಾವ್ಯಗಳನ್ನು ಹೋಲಿಸಿನೋಡಿದಾಗ ಕನ್ನಡ ಕಾವ್ಯವು ತೆಲುಗು ಕಾವ್ಯಕ್ಕಿಂತಲೂ ಹೆಚ್ಚು ವೈವಿಧ್ಯವಾದುದು, ಸ್ವತಂತ್ರವಾದುದು ಎನ್ನಬಹುದು. ಸಂಸ್ಕೃತ ಪ್ರಭಾವದ ಚಂಪುವನ್ನ ಎರಡು ಕಾವ್ಯಗಳು ಬಳಸಿಕೊಂಡರೂ ಕನ್ನಡದಲ್ಲಿ ಅದು ೧೩, ೧೪ನೇ ಶತಮಾನದ ವೇಳೆಗೆ ಕ್ಷೀಣಿಸಿ ಹೋಯಿತು. ಭಿನ್ನಭಿನ್ನವಾದ ಸ್ವಂತದೇಶೀಯ ಛಂದಸ್ಸುಗಳ ಮೂಲಕ ಅದು ಕಾಣುವಂತಾಯಿತು ಹಾಗಾಗಿ

ಇಲ್ಲಿ ವಚನ, ಷಟ್ಪದಿ, ಸಾಂಗತ್ಯ, ತ್ರಿಪದಿ, ಸ್ವರವಚನಗಳು, ಕಾಲಜ್ಞಾನ ಚಿತ್ರಕವಿತ್ವದಂತಹ ಹೊಸಹೊಸ ಪ್ರಕಾರಗಳು ಸೃಷ್ಟಿಯಾಗಲು ಸಾಧ್ಯವಾಯಿತು.

ಆದರೆ ತೆಲುಗಿನಲ್ಲಿ ಪಾಂಡಿತ್ಯ ಪ್ರಧಾನ ಚಂಪೂ ಕಾವ್ಯವೇ ಆಧುನಿಕ ಕಾಲದವರೆಗೂ ಮುಂದುವರೆದಿದೆ. ಮತೀಯ ದೃಷ್ಟಿಯಿಂದ ನೋಡಿದಾಗಲೂ ತೆಲುಗಿನ ಮೇಲೆ ಬ್ರಾಹ್ಮಣ ಧರ್ಮವೇ ಮೇಲುಗೈ ಪಡೆದಿದೆ. ಆದರೆ ಕನ್ನಡದಲ್ಲಿ ಬ್ರಾಹ್ಮಣ ಧರ್ಮದ ಜೊತೆ ಜೊತೆಗೇ ಜೈನ, ವೀರಶೈವ ಮತಗಳೂ ಮೇಲುಗೈ ಸಾಧಿಸಿವೆ.

ಕನ್ನಡ ಕವಿಗಳ ಮನಸ್ಸನ್ನ ದೇವರು-ಧರ್ಮಗಳೇ ಆವರಿಸಿದರೆ ತೆಲಗು ಕವಿಗಳ ಮನಸ್ಸನ್ನು ಕಲೆ ಪಾಂಡಿತ್ಯ ಪ್ರದರ್ಶನ, ಚಾತುರ್ಯಗಳು ತುಂಬಿವೆ. ತೆಲುಗಿನಲ್ಲೂ ಸಾಮಾಜಿಕ ಪ್ರಜ್ಞೆಯ ದೃಷ್ಟಿಯಿಂದ ವೇಮನನ್ನು ಬಿಟ್ಟರೆ ಉಳಿದೆಲ್ಲ ರಾಜಾಶ್ರಿತ ಕಾವ್ಯವೆಲ್ಲ ನಿರುಪಯುಕ್ತವೇ. "ಆಗಿನ ಕವಿಗಳೆಲ್ಲ ಕಾವ್ಯ ಕನ್ಯೆಯಿಂದ ರಾಜಸ್ಥಾನದಲ್ಲಿ ಗೆಜ್ಜೆಕಟ್ಟಿ ಆಡಿಸಿದರು. ಅವರ ಗ್ರಂಥಗಳಿಂದ ನಡೆದ ಲೋಕಸಂಗ್ರಹದ ಕಾರ್ಯವನ್ನು ನೋಡಿದರೆ ದೊಡ್ಡ ಸೊನ್ನೆ. ಉಪದೇಶವೇ ಕಾವ್ಯ ಪ್ರಯೋಜನವಾದರೆ ಆ ಗ್ರಂಥಗಳನ್ನು ಸುಟ್ಟುಬಿಡಬೇಕಲ್ಲದೆ ಬೇರೆನಿಲ್ಲ"[೧] ಎಂದು ಕೊಡವಟಗಂಟಿ ಕುಟುಂಬರಾವ್ ಅವರು ತೆಲುಗುಕಾವ್ಯದ ರಾಜಾಶ್ರಿತ ಸಂಗತಿಯನ್ನು ನಿಂದಿಸಿದ್ದಾರೆ. "ಅವರಲ್ಲಿ ಪಾಂಡಿತ್ಯ ಬಲವಿದ್ದರೂ ಹೇಡಿತನವಿದೆ. ಮನುಷ್ಯರಂತೆ ತಲೆಯೆತ್ತಿ ತಿರುಗುವ ಉತ್ಸಾಹ ಕಾಣದು"[೨] ಎಂದು ಪ್ರಬಂಧಕಾವ್ಯವನ್ನು ಕುರಿತು ರಾಮಲಿಂಗಾರೆಡ್ಡಿಯವರು ಟೀಕಿಸಿದ್ದಾರೆ. ಕನ್ನಡ ಧಾರ್ಮಿಕ ಕಾವ್ಯದಲ್ಲಿ ಕೂಡಾ ದಾಸ್ಯ ಪ್ರಚೋದಕ ಅಂಶಗಳೇ ತುಂಬಿಕೊಂಡಿದ್ದರೂ ಜೀವನ ವಿಮುಖಧೋರಣೆಯನ್ನೇ ಆದರ್ಶವೆಂದು ಬೋಧಿಸಿದರೂ ಅದು ತನ್ನ ಒಡಲೊಳಗೆ ಮಾನವೀಯ ಗುಣಗಳನ್ನು ಶ್ರಮಿಕರ ಕಡೆಗಣಿಸಲ್ಪಟ್ಟವರ ಪರವಾದ ಪ್ರತಿಕ್ರಿಯೆಗಳನ್ನೂ ಹುದುಗಿಸಿಕೊಂಡಿದೆ ಆದರೂ ಇದನ್ನೇ ಶ್ರೇಷ್ಠ ಸಾಹಿತ್ಯ ಎಂದೂ ಹೇಳುವಂತಿಲ್ಲ. ಹೀಗೆ ಹೇಳಲಿಕ್ಕೆ ಎರಡೂ ಕಾವ್ಯಕ್ಕೆ ಆಧುನಿಕ ಸಾಹಿತ್ಯವೇ ಪ್ರವೇಶಿಸಬೇಕಾಯಿತು.

ತೆಲುಗಿನಲ್ಲಿ ಆಧುನಿಕ ಸಾಹಿತ್ಯವು ಕನ್ನಡಕ್ಕಿಂತ ಮುಂಚೆಯೇ ಪ್ರಾರಂಭವಾಗಿದೆ. ವಿರೇಶಲಿಂಗಂ ಪಂತಲು ಮೊದಲ ತೆಲುಗಿನ ಗದ್ಯ ಪ್ರಬಂಧ ಮೊದಲ ನಾಟಕ ಮೊದಲ ಪ್ರಹಸನ ರಚಿಸಿದರು. ವಿ.ಅರ್.ನಾರ್ಲಾ ಹೇಳುವಂತೆ ವೀರೇಶಲಿಂಗಂ ಆಂದ್ರದೇಶದ ಮೊಟ್ಟಮೊದಲ ಆಧುನಿಕ ವ್ಯಕ್ತಿ. ಆದರೆ ತೆಲುಗು ಕಾವ್ಯದ ನಿಜವಾದ ಆಧುನಿಕತೆ ತೆರೆದುಕೊಂಡಿದ್ದೇ ಗುರುಜಾಡ ಅಪ್ಪಾರಾವ್ ಅವರ "ಮುತ್ಯಾಲಸರಾಲು" ವಿನಿಂದ. ೧೯೧೦ರಲ್ಲಿ ಇದು ಪ್ರಕಟವಾಯಿತು.

"ನನ್ನದು ಪ್ರಜೆಗಳ ಉದ್ಯಮ

ಯಾರನ್ನೂ ಸಂತೋಷಗೊಳಿಸುವುದಲ್ಲ ಎಂಬ ಅವರ ಆಲೋಚನಾ ವಿಧಾನದಲ್ಲೇ ಹೊಸತನವಿತ್ತು. 'ಒಳ್ಳೆಯದೆಂಬುದು ಹೊಲೆಯನೇ ಆದರೆ ನಾನು ಹೊಲೆಯನೇ ಆಗುವೆ' ಎಂಬ ಮಾನವತಾ ದೃಷ್ಟಿಯಲ್ಲೇ ಆಧುನಿಕತೆ ಇತ್ತು. ಶ್ರೀ ಶ್ರೀ ಹೇಳುವಂತೆ "ಒಂದು ನೂತ್ನಾವೇಶಕ್ಕೆ ವಾಹನವನ್ನಾಗಿ ಮಾಡಿಕೊಂಡು-ಸ್ವತಂತ್ರ ಕಾವ್ಯವನ್ನ ಬಿಡುಗಡೆ ಮಾಡಿದ ಘನತೆ ಗುರುಜಾಡ ಅವರದೇ."[೩] ಗುರುಜಾಡರ ಜೊತೆಗೆ ರಾಯಪ್ರೋಲು ಸುಬ್ಬಾರಾವರನ್ನೂ ಆಧುನಿಕ ಕಾವ್ಯದ ಪಿತಾಮಹರೆಂದು ಗೌರವಿಸಲಾಗುತ್ತದೆ. ಇವರ ಮೊದಲ ಕವನಸಂಕಲನ ತೃಣಕಂಕಣಂ ೧೯೧೩ರಲ್ಲಿ ಪ್ರಕಟವಾಯಿತು. ತೆಲುಗಿನ ಆಧುನಿಕ ಕಾವ್ಯದ ಆರಂಭಸೂಚಿಯಾದ ಭಾವಕವಿತ್ವ ಗುರುಜಾಡರನ್ನ ಮತ್ತು ರಾಯಪ್ರೋಲು ಸುಬ್ಬಾರಾವರನ್ನ ಕ್ರಮವಾಗಿ ಪ್ರಾರಂಭ ಪುರುಷರೆಂದು ತಿಳಿಯಲಾಗುತ್ತದೆ. ನಂತರದಲ್ಲಿ ರೈತರ ಕವಿತೆಗಳ ದುವ್ವಾರಿ ರಾಮಿರೆಡ್ಡಿ ಖಂಡಕಾವ್ಯಗಳ ಪ್ರಸಿದ್ಧಿಯ ಗುರ್ರಂಜಾಷುವಾ, ಪ್ರಜಾಕವಿ ಎಂದು ಹೆಸರಾದ ಕಾಳೋಜಿ, ಗಿಡುಗರಾಮಮೂರ್ತಿಪಂತಲೂ ಮುಂತಾದವರಿಂದ ಕಾವ್ಯ ಆಡುಮಾತಿನ ಕಡೆಗೆ ಹೊರಳಿತು. ಚಳುವಳಿ ರೂಪ ಪಡೆಯಿತು.

> "ಮೈಮರೆತು ಮಲಗದಿರಿ ಬಡವರೇ ನಿಮ್ಮ ಬದುಕು ಭಂಡರ
> ಪಾಲಾದೀತೋ....."

ಶ್ರಮಿಕರ ಧ್ವನಿ ಇಲ್ಲದ, ಶ್ರಮಿಕರ ಪರವಿಲ್ಲದ ಗೀತೆಗಳನ್ನ ಸೋಮಾರಿ ಗೀತೆಗಳೆಂದೇ ಕರೆವ ರಮಣರೆಡ್ಡಿಯವರು ಶ್ರಮಿಕ ಪರ ಧ್ವನಿಯನ್ನು ಹೇಳುವುದು ವಾಸ್ತವವಾದೀ ನೆಲೆಯಲ್ಲೇ.

> "ಸೋಮಾರಿ ಪಾಟಲು ವಂದಲಕಂಟೇ ।
> ಆಕಲಿಗೀತಂ ಒಕಟಿ ಮೇಲಯಾ ॥"
> (ಧಮ್ಮ ಘೋಷ)[೪]
> (ಸೋಮಾರಿ ಗೀತೆಗಳು ನೂರಕ್ಕಿಂತ
> ಹಸಿವಿನ ಗೀತೆ ಒಂದೇ ಮೇಲು)
> ಶಿವಾರೆಡ್ಡಿಯವರು ವಿಪ್ಲವದ ಅನಿವಾರ್ಯತೆಯನ್ನು ಹೇಳುತ್ತಾ
> "ಧ್ವಸಂ ಚೇಯಾಲ್ಸಿನದಾನ್ನೇ ಧ್ವಸಂ ಚೇಸಿ
> ಮರೋ ಮಹತ್ತರಮ್ಮೈನದಾನ್ನಿ ಚೆಮಟತೋಕಡತಾಂ..
> ದೇನ್ನಿ ಧ್ವಂಸ ಚೇಯತಗಿಂದೋದಿ ಚೇಯಕುಂಡಾ ದೇನ್ನಿ
> ಲೊಕಪೋತೇ ನಿರ್ಮಿಸ್ರಾವು?
> ನುವ್ವತಪ್ಪಕುಂಡಾ ಧ್ವಸಂ ಚೇಯುತಗಿನ ವ್ಯಕ್ತಿವಿ"

[illegible]

ಸ್ವಂತಿಕೆಗಳನ್ನು ಮೆರೆದು ಕಾವ್ಯ ಸಮೃದ್ಧಿಯಾಯ್ತು. ಮಹತ್ತರ ಆಸ್ಥಾನಕವಿ ಎನಿಸಿಕೊಂಡ ತುಮ್ಮಲ ಸೀತಾರಾಮಮೂರ್ತಿ ಗಾಂಧೀಜಿಯ ಬಗ್ಗೆ ಒಂದು ಮಹಾಕಾವ್ಯವನ್ನೇ ಬರೆದಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ತೆಲುಗಿನಲ್ಲಿ ಛಂದಸ್ಸಿನ ಸಂಪ್ರದಾಯ ಶೀಲತೆ ಎಷ್ಟು ತೀವ್ರವಾಗಿತ್ತೋ ಅಷ್ಟೇ ತೀವ್ರವಾಗಿ ಛಂದಸ್ಸಿನ ವಿರುದ್ಧವಾದ ಪ್ರಯೋಗಗಳೂ ಆಗಿವೆ. ಶ್ಲಿಷ್ಟಾ ಮತ್ತು ಪಠಾಭಿಯವರು ಮುಕ್ತ ಛಂದಸ್ಸನ್ನ ತೆಲುಗಿನಲ್ಲಿ ಬಳಸಿದಂತೆ ಶ್ರೀ ಶ್ರೀ ಆಧುನಿಕವಾದ ಸಿಂಬಾಲಿಜಂ, ಸರ್ರಿಯಲಿಜಂಗಳನ್ನ ಬಳಸಿದರು.

ವೈಚಾರಿಕ ಕ್ರಾಂತಿಯು ಆಧುನಿಕತಯೊಡನೆಯೇ ತೆಲುಗಿನಲ್ಲಿ ಕಾಲಿಟ್ಟಿತು. ಕಟ್ಟಿ ಮುಂಚೆ ರಾಮಲಿಂಗಾರೆಡ್ಡಿ ತ್ರಿಪುರಸೇನಿ ರಾಮಸ್ವಾಮಿ ಚೌದರಿ ತೆಲುಗುಕಾವ್ಯದಲ್ಲಿ ಮಾರ್ಕ್ಸ್ ತತ್ವವನ್ನ ತಂದರು. ತ್ರಿಪುರ ಸೇನಾನಿಯವರು ಹಲವಾರು ಪ್ರಾಚೀನ ಪುರಾಣಗಳನ್ನು ಹೊಸದೃಷ್ಟಿಯಿಂದ ವಿಶ್ಲೇಷಿಸಿದರು. ಮುಂದೆ ಅಭ್ಯುದಯ ಚಳುವಳಿಗೆ ಇದು ಸಹಾಯವಾಯಿತು.

ಅಭ್ಯುದಯ

ಮಾರ್ಕ್ಸ್‌ವಾದವು ಸ್ವತಂತ್ರ್ಯ ಪೂರ್ವದಲ್ಲೇ ತೆಲುಗಿನಲ್ಲಿ ಪ್ರವೇಶಮಾಡಿತು. ಮುಂದಿನ ಕಾವ್ಯ ಸಾಹಿತ್ಯಕ್ಕೆಲ್ಲ ಒಳ್ಳೆಯ ಬುನಾದಿ ಹಾಕಿತು. ಅಖಿಲಭಾರತ ಮಟ್ಟದಲ್ಲಿ ಪ್ರೇಮಚಂದ್‌ರ ಅಧ್ಯಕ್ಷತೆಯಲ್ಲಿ ೧೯೩೬ರಲ್ಲಿ ಪ್ರಗತಿಪರ ಲೇಖಕರ ಸಂಘ ಪ್ರಾರಂಭವಾಯಿತು. ಇದೇ ಮಾದರಿಯಲ್ಲಿ ತೆಲುಗಿನಲ್ಲಿ ೧೯೪೩ರಲ್ಲಿ ಅಭ್ಯುದಯ ರಚಯುತುಲ ಸಂಘಂ (ಅರಸಂ) ಪ್ರಾರಂಭವಾಯಿತು. ಶ್ರೀ ಶ್ರೀ ಯವರು ಇದರ ನಾಯಕರು ನವಯುಗ ನಿರ್ಮಾಣಕ್ಕೆ ಶ್ರಮಜೀವಿಗಳ ಪರವಾದ ಕಾವ್ಯ ರೂಪುಗೊಂಡಿತು. ಇದಕ್ಕೆ ತಕ್ಕಂತೆ ಕವಿಗಳು ಭಾಷೆ, ವಸ್ತು, ಶೈಲಿ, ಆವೇಶ, ರೂಪ, ಧೋರಣೆಗಳ ಹೊಸತನವನ್ನು ತಂದರು. ಈ ಚಳುವಳಿಯು ಭಾವಕವಿತ್ವದ ವಿರುದ್ಧ ಬಂಡೆದ್ದು ಮೂಡಿಬಂತು. ಭಾವಕವಿತ್ವವು ವ್ಯಕ್ತಿ ನಿಷ್ಠವಾದರೆ ಅಭ್ಯುದಯ ಕವಿತ್ವವು ಸಮಾಜ ನಿಷ್ಠವಾದುದು ಇದರ ಜೊತೆಗೇ ತೆಲಂಗಾಣ ರೈತಜನರ ಬಂಡಾಯವೂ ಕವಿತೆಗಳಿಗೆ ಹೊಸ ಆವೇಶವನ್ನು ತುಂಬಿದವು. ತೆಲಂಗಾಣದ ಪ್ರಜೆಗಳ ಪರವಾಗಿ ನಿಜಾಮನ ಮತ್ತು ಜಮೀನ್ದಾರರ ವಿರುದ್ಧವಾಗಿಯೂ, ಸ್ವಾತಂತ್ರ್ಯಾನಂತರ ನಿಜಾಮನನ್ನು ಬೆಂಬಲಿಸಿದ ಸರ್ಕಾರದ ವಿರುದ್ಧವಾಗಿಯೂ, ಜನರೊಡನೆ ಸೇರಿಕೊಂಡು ಸಾಹಿತಿಗಳು ಹೋರಾಡಿದರು. ದಾಶರಥಿ, ಕಾಳೋಜಿಯಂಥವರು ನೇರವಾಗಿ ಹೋರಾಟದಲ್ಲಿ ಧುಮುಕಿದರು. ಉಳಿದ ಕವಿಗಳೂ ಜನರನ್ನು ಪ್ರೇರೇಪಿಸಿ ಕಾವ್ಯವನ್ನು ಬರೆದರು. 'ಸಾಹಿತ್ಯ ಚರಿತ್ರೆಯಲ್ಲಿ ಈ ಕಾಲವನ್ನು ಪ್ರಜಾಸಾಹಿತ್ಯಕ್ಕೆ ಬಂಗಾರದ ದಿನಗಳೆಂದು ಕರೆಯಬಹುದು.'[೫]

ಆರುದ್ರ "ತ್ವಮೇವಾಹಂ" ಕಾವ್ಯವು ತೆಲಂಗಾಣದಿಂದಲೇ ಪ್ರೇರಣೆ ಪಡೆದಿದ್ದು. ಶ್ರೀ ಶ್ರೀ ಯವರು ತೆಲುಗು ಕಾವ್ಯವನ್ನು ಇಂಡಿಯಾದಲ್ಲೇ ಅಗ್ರಸ್ಥಾನದಲ್ಲಿಡುವ ಯೋಗ್ಯತೆಯನ್ನೂ ಅದು ಹೊಂದಿದೆ ಎಂದು ಪ್ರಶಂಸಿದರು. ಕುಂದುರ್ತಿ ಆಂಜನೇಯುಲು 'ತೆಲಂಗಾಣ' ಎಂಬ ಮಹಾಕಾವ್ಯವನ್ನೇ ಬರೆದರು. ಸೋಮಸುಂದರಂ ಅವರ ವಜ್ರಾಯುಧಂ ಕೆ. ವಿ. ರಮಣಾರೆಡ್ಡಿಯವರ 'ಅಡವಿ', ಭುವನ ಘೋಷ, ಗಂಗಿನೇನಿಯವರ ಉದಯನಿ ಕೆರಟಾಲ, ಗೋಪಾಲಕೃಷ್ಣರ 'ಸಂಘರ್ಷಣ', ಸರ್ಪಯಾಗಂ, ಮುಂತಾದ ಅನೇಕ ಉತ್ತಮ ಕಾವ್ಯಕೃತಿಗಳು ಸ್ವತಂತ್ರ್ಯಾ ನಂತರವೇ ಬಂದರೂ ತೆಲಂಗಾಣ ಹೋರಾಟದ ಹಿನ್ನಲೆಯಲ್ಲಿ ಹುಟ್ಟಿದಂಥವು. ಆಗ ತೆಲುಗು ಕಾವ್ಯರಂಗದಲ್ಲಿ ಶ್ರೀ ಶ್ರೀ ಯವರ ಆಗಮನವು ಒಂದು ಹೊಸಧ್ಯಾಯವನ್ನೇ ತೆರೆಯಿತು.

ವರ್ಗ ಪ್ರಜ್ಞೆಯು ಶ್ರಮಜೀವಿಗಳ ದೃಷ್ಟಿಯಿಂದ ಭೂತಕಾಲವನ್ನೂ ವರ್ತಮಾನಕಾಲಗಳನ್ನೂ ನೋಡುವಂತೆ ಮತ್ತು ಸಮತಾವಾದದ ಆದರ್ಶದಿಂದ ಭವಿಷ್ಯ ಕಾಲವನ್ನೂ ರೂಪಿಸಿಕೊಳ್ಳುವಂತೆ ಮಾಡಲು ಅವರು ಜನತೆಗೆ ವಿನೂತನವಾದ ದೃಷ್ಟಿಯನ್ನು ತೋರಿಸಿಕೊಟ್ಟರು. ಶ್ರೀ ಶ್ರೀ ಕವಿತ್ವದಿಂದ ಮೊಟ್ಟ ಮೊದಲು ಮನುಷ್ಯರನ್ನ ಸಂಪತ್ತನ್ನ ಉತ್ಪತ್ತಿ ಮಾಡುವವರೂ, ಉತ್ಪತ್ತಿಯನ್ನೂ ಸ್ವಂತ ಮಾಡಿಕೊಳ್ಳವವರೂ ಎಂದು ಎರಡು ವರ್ಗಗಳಾಗಿ ಮಾಡಿದರು.

ಯೂರೋಪಿನಲ್ಲಿ ಮೂಡಿಬಂದ ಸರ್ರಿಯಲಿಜಂ ಅಸ್ತಿತ್ವವಾದ, ಇಮೇಜಿಜಂ, ಎಕ್ಸಪ್ರೇಷನಿಜಂ, ಫ್ಯೂಚರಿಜಂ, ಕ್ಯೂಬಿಜಂ, ಡಾಡಾಯಿಜಂ, ಮೊದಲಾದ ವಾದಗಳನ್ನ ಬಳಸಿಕೊಂಡು ಶ್ರೀ ಶ್ರೀ, ಶ್ರೀರಂಗಂ ನಾರಾಯಣಬಾಬು, ಆರುದ್ರ, ಬೈರಾಗಿ ತೆಲುಗು ಕವಿತೆಗಳಲ್ಲಿ ಕೆಲವು ಪ್ರಯೋಗಗಳನ್ನ ಮಾಡಿದ್ದಾರೆ. ಇಂತಹ ಪ್ರಯೋಗಗಳೇ ವಚನಕಾವ್ಯ ಪ್ರಕಾರಕ್ಕೆ ನಾಂದಿಯಾಯಿತು.

ವಚನಕಾವ್ಯ

೧೯೫೫ರ ಚುನಾವಣೆಯಲ್ಲಿ ಉಂಟಾದ ಕಮ್ಯುನಿಷ್ಟ ಪಕ್ಷದ ಸೋಲು ಕವಿಗಳ ಸೋಲೇ ಎಂಬಂತಾಯಿತು. ಒಂದು ಗಾಢ ನಿರಾಶೆಯ ಛಾಯೆ ಕಾವ್ಯಲೋಕವನ್ನೂ ವ್ಯಾಪಿಸಿತು. ಶ್ರೀ ಶ್ರೀ ಯಂಥ ನಾಯಕರು. ಸಿನಿಮಾಲೋಕಕ್ಕೆ ಹೊರಳಿದರು. ಆಡುನುಡಿಯನ್ನ ಬಳಸಿಯೂ ಕೂಡ ಗದ್ಯ ಸತ್ವದಲ್ಲಿಯೇ ಕಲಾವಂತಿಕೆಯನ್ನೂ ಸಾಧಿಸುವ ಹೆಚ್ಚಿನ ಜವಾಬ್ದಾರಿಯನ್ನೂ ಈ 'ವಚನಕಾವ್ಯ'ವು ಹೊರಿಸಿತು. ೧೯೪೬ರಲ್ಲಿ ನಯಾಗಾರ ಎಂಬ ವಚನಕಾವ್ಯ ಸಂಕಲನವೂ ಬಂದಿತ್ತು. ಆದರೆ ವಚನ ರೂಪಕ್ಕೆ ಮಹತ್ವ ಬಂದು ಅದೊಂದು ಚಳುವಳಿಯಾಗಿ ರೂಪುಗೊಂಡಿದ್ದು ೧೯೫೮ರಿಂದಲೇ. "ಭಾವನೆಯಲ್ಲಿ ಸಾಮಾನ್ಯನ ಜೀವನವಲಯಗಳನ್ನ ದಾಟೆನು

[illegible]

[illegible]

[illegible]

[illegible]

[illegible]

ಬರಹದ ಹೋದೋಟದಲ್ಲಿ ಛಂದಸ್ಸಿನ ಸಸಿಗಳನ್ನ ನಾಟೆನು" ಎಂದು ಪ್ರತಿಜ್ಞೆಮಾಡಿದ ಕುಂದುರ್ತಿಯವರು ವಚನ ಕಾವ್ಯಪ್ರಯೋಗದಲ್ಲಿ ಮಾಡಿದ ಕೃಷಿ ಪ್ರಶಂಸನೀಯವಾದುದು. ಅವರು ವಚನ ರೂಪದಲ್ಲಿಯೇ 'ತೆಲಂಗಾಣ' ಮಹಾಕಾವ್ಯವನ್ನು ಬರೆದರು. ತಂತ್ರಜ್ಞಾನದ ಯುಗಧರ್ಮಕ್ಕೆ ಅನುಗುಣವಾದದ್ದು ವಚನ ಕವಿತ್ವವೇ ಎಂದು ಶ್ರೀ ಶ್ರೀ ಯವರೂ ಸಾರಿದರು. ಮುಂದೆ ಜನಸಾಮಾನ್ಯರ ಕೇಂದ್ರವಾದ ಬೆಂಕಿ ಉಂಡೆಗಳ ದಿಗಂಬರ ಕಾವ್ಯ ಹುಟ್ಟಿಕೊಂಡಿತು.

ದಿಗಂಬರ ಕಾವ್ಯ

ಮತ್ತೆ ಮತ್ತೆ ಹೇಳುತ್ತಿದ್ದೇವೆ
ಕಿವಿಯಿದ್ದರೆ ಕೇಳಿ
ಕಣ್ಣಿದ್ದರೆ ನೊಡು
ಮಿದುಳಿದ್ದರೆ ಆಲೋಚಿಸು........

ಕಾವ್ಯ ಲೋಕದಲ್ಲಿ ಮತ್ತೊಮ್ಮೆ ತೀವ್ರ ಸಂಚಲನವನ್ನು ತಂದ ಪ್ರಕಾರವೇ ೧೯೬೫ರಲ್ಲಿ ಬಂದ ದಿಗಂಬರ ಕಾವ್ಯ. "ತೆಲುಗು ಸಾಹಿತ್ಯದಲ್ಲಿ ದಿಗಂಬರ ಕಾವ್ಯದ ಕಾಲ ಕೊಂಚವೇ ಆದರೂ ಈ ಕಾವ್ಯಗಳು ತೆಲುಗು ಕಾವ್ಯಕ್ಕೆ ನೀಡಿದ ಪ್ರಚೋದನೆ & ತೋರಿದ ಬದಲಾವಣೆಯಹಾದಿ ಅನನ್ಯವಾದದ್ದು. ಇವುಗಳ ನಂತರ ತೆಲುಗು ಕಾವ್ಯದ ಅಭಿವ್ಯಕ್ತಿಯ ರೀತಿಯೇ ಬದಲಾಗಿಹೋಯಿತು."[೫]

ಇವನ್ನ ಬರೆದವರ ಹೆಸರುಗಳೂ ವಿಶಿಷ್ಟ. ಅವರು ತಮ್ಮ ಮೂಲ ಹೆಸರಿಗಿಂತ ಭಿನ್ನವಾದ ಕ್ರಾಂತಿಕಾರಿ ಹೆಸರುಗಳನ್ನು ಇಟ್ಟುಕೊಂಡಿದ್ದರು. ನಗ್ನಮುನಿ, ನಿಖಿಲೇಶ್ವರ, ಚರಬಂಡರಾಜು, ಮಹಾಸ್ವಪ್ನ, ಜ್ವಾಲಾಮುಖಿ ಮತ್ತು ಭೈರವಯ್ಯ ಜಗದ ಬದಲಾವಣೆಯ ಕನಸಿನಿಂದ ಹೊರಟ ಇವರು ಹಳೆಯ, ಕೊಳೆತ ಸಮಾಜವನ್ನು ಧ್ವಂಸಮಾಡಬೇಕೆಂಬ ಆಶಯ ಹೊತ್ತವರು. ತಮ್ಮ ಸಂಕಲನಗಳನ್ನು ವಿಭಿನ್ನವಾಗಿಯೇ ಬಿಡುಗಡೆ ಮಾಡಿದರು. ಅರ್ಧರಾತ್ರಿ ಹೊತ್ತಿನಲ್ಲೊಮ್ಮೆ ಒಂದುಸಾರಿ ಒಬ್ಬ ರಿಕ್ಷಾವಾಲಾನಿಂದ, ಇನ್ನೊಮ್ಮೆ ಹೊಟೆಲ್ ಕ್ಲೀನರನಿಂದ, ಮತ್ತೊಮ್ಮೆ ಒಬ್ಬ ಬಿಕ್ಷುಕಿಯಿಂದ ತಮ್ಮ ಕಾವ್ಯಸಂಕಲನಗಳ ಬಿಡುಗಡೆ ಸಮಾರಂಭವನ್ನು ನೇರವೇರಿಸಿ ದುಃಖಿತರ ಅಸಹಾಯಕರ ಪರವಾದ ಕಾಳಜಿಯನ್ನು ತೋರಿದರು.

"ಈ ದೇಶದಲ್ಲಿ ಈ ಭೂಗೋಳದಲ್ಲಿ ಉಸಿರಾಡುವ ಪ್ರತಿ ಮನುಷ್ಯನ ಉಳಿವಿಗಾಗಿ ತಪಿಸಿ ಆತನ ಸ್ಥಿತಿ ನೋಡಿ ಬಿಕ್ಕಿಬಿಕ್ಕಿ ಅತ್ತು, ಹುಟ್ಟಿದ್ದು ಪ್ರವಚಿಸಿದ್ದು ಈ ಕವಿತೆ" ಎಂದೂ

ಒಳಿತಿಗಾಗಿ ಮನುಷ್ಯನೊಳಗಿನ ಬೆಂಕಿಯಂಥ ನಿಜವಾದ ಮನುಷ್ಯನಿಗಾಗಿ ಕಪಟವಿಲ್ಲದ ಮುಗುಳು ನಗೆ ಚಿಮ್ಮುವ ಸಮಾಜಕ್ಕಾಗಿ, ಅಹೋರಾತ್ರಿ ಆರದ ಅಗ್ನಿಯಲ್ಲಿ

[illegible]

ನಡೆದ ಆತ್ಮಗಳೊಳಗಿನಿಂದ ಗುಣುಗುಟ್ಟುವ ಧ್ವನಿಗಳು ನಾವು" ಎಂದು ತಮ್ಮ ಕಾವ್ಯವನ್ನು ಕುರಿತು ದಿಗಂಬರ ಕವಿಗಳು ಹೇಳಿಕೊಂಡಿದ್ದಾರೆ. "ದಿಗಂಬರ ಕಾವ್ಯದಲ್ಲಿ ಜ್ವಾಲಾಮುಖಿ ಹೇಳುವಂತೆ" ಅಸಹನೆಯೇ ಕವಿತ್ವಾಂಶ, ಅಶ್ಲೀಲವೇ ಅಭಿವ್ಯಕ್ತಿ, ಬೈಗುಳಗಳೇ ಸುಪ್ರಭಾತವಾಯಿತು." ಅವರಿಗೆ ಆದರ್ಶವೆಂದರೆ ಇಂಗ್ಲೆಂಡಿನ ಬೀಟ್ ಸಹೋದರರು. ಕೋಪೋದ್ರಿಕ್ತ ಯುವಕರು, ಹಸಿವಿನ ಯುಗದ ಕವಿಗಳು"[೬] ನಾವು ಪುಸ್ತಕಗಳಿಂದ ಮಾತನಾಡುವುದಿಲ್ಲ, ಅನುಭವಗಳಿಂದ ಮಾತನಾಡುವ ಆಸೆ ನಮ್ಮದು. ಎನ್ನುವ ಇವರು ಭಾವ ಕವಿಗಳಿಗೆ ಸವಾಲು ಹಾಕಿ "**ಅಭ್ಯುದಯ ಕವಿಯೇ ಮಬ್ಬುಗುಳಿಗೆ ತಿಂದು ನಿದ್ದೆ ಹೋಗಿರುವೆ**" ಎಂದು ಛೇಡಿಸಿ ಹೊಸ ಕಾವ್ಯಹ್ವಾನವಿತ್ತರು.

ಕೆ. ಕೆ. ರಂಗನಾಥಚಾರ್ಯಲು ಅವರು ತಮ್ಮ ಸಮಾಲೋಚನಂ ಕೃತಿಯಲ್ಲಿ ದಿಗಂಬರ ಕವಿಗಳ ಸಾಧನೆಗಳನ್ನು ಈ ಕೆಳಗಿನಂತೆ ಗುರ್ತಿಸಿದ್ದಾರೆ.

೧. ಸಾಮಾಜಿಕವಾಗಿ ದುರ್ಬಲವಾದ ಪರಿಸ್ಥಿತಿಗಳ ಮೇಲೆ ತೀವ್ರ ಅಸಹ್ಯ ಜನರ ಸಹನೆಯ ಬಗ್ಗೆ ವಿಪರೀತ ಅವಹೇಳನ ಭಾವ, ಸಂಪ್ರದಾಯ ಮನೋಭಾವದ ವಿರುದ್ಧ ದ್ವೇಷ ಕ್ಷೀಣಿಸುತ್ತಿರುವ ಮೌಲ್ಯಗಳ ಕಂಡು ಬಂಡಾಯ.

೨. ಅಸ್ಪಷ್ಟವಾಗಿ, ಅಯೋಮಯವಾಗಿ ಕಾಣುತ್ತಿದ್ದ ವಚನ ಕವಿತೆಯ ಅಭಿವ್ಯಕ್ತಿ ಪದ್ಧತಿಯ ವಿರುದ್ಧವಾಗಿ ಬಂಡೆದ್ದು ಹೇಳಬೇಕಾದುದನ್ನ ನೇರವಾಗಿ, ಮನಮುಟ್ಟುವಂತೆ ಹೇಳಬೇಕೆಂಬರೀತಿ.

೩. ಅದುವರೆಗೂ ಕವಿತೆಯಲ್ಲಿ ನಿಷಿದ್ಧವಿದ್ದ ಪದಪ್ರಯೋಗಗಳ ಬಳಕೆ, ಬೈಗುಳಗಳ ಸಮರ್ಥ ಬಳಕೆ ಎಗ್ಗಿಲ್ಲದ ಭಾಷಾ ಪ್ರಯೋಗ.

೪. ವಿದ್ವಾಂಸರ ಪರವಾದ ಕಾವ್ಯವನ್ನ ಜನಸಾಮಾನ್ಯರಿಗೂ ಮೀಸಲಾಗಿಟ್ಟಿದ್ದು. ಹೀಗಾಗಿ ವಿದ್ವಾಂಸರಿಗೆ ಮೀಸಲಾಗಿದ್ದ ಉಪನ್ಯಾಸಗಳು ಸಾವಿರ ಸಾವಿರ ಜನ ಬಂದು ಕೇಳುವಂತಾಯಿತು.

ಶ್ರೀ ಶ್ರೀ ಯವರು ದಿಗಂಬರ ಕವಿಗಳನ್ನು ಬೆಂಬಲಿಸಿದರು. ಅಲ್ಲದೆ ಕೆಲವು ಕವಿತೆಗಳನ್ನು ಇಂಗ್ಲಿಷಿಗೆ ಅನುವಾದ ಮಾಡಿದರು.

೧೯೬೮ ನಂತರ ದಿಗಂಬರ ಕವಿಗಳು ಚದುರಿಹೋದರೂ ಕೆಲವರು ಮುಂದೆಯೂ ಕಾವ್ಯ ಕೃಷಿ ಮುಂದುವರೆಸಿದರು. ತೆಲುಗಿನಲ್ಲಿ ಅನಂತರ ಬಂದ ಪೈಗಂಬರ ಕವಿಗಳು, ತಿರುಗುಬಡು ಕವಿಗಳು, ಇವರ ಪ್ರಬಾವದಿಂದಲೇ ಪ್ರೇರಿತರಾದರು.

ವಿಪ್ಲವ ಕಾವ್ಯ: ಆಧುನಿಕ ತೆಲುಗುಕಾವ್ಯ ಚರಿತ್ರೆಯಲ್ಲಿ ೧೯೭೦ನೇ ಇಸ್ವಿಯ ಬಹಲ ಮಹತ್ವವಾದುದು. ಸಾಮಾಜಿಕ ಕ್ರಾಂತಿಯ ಆದಾರದ ಮೇಲೆ ಸಾಹಿತ್ಯ ಚಳುವಳಿಯೊಂದು ಸ್ಪಷ್ಟ ನಿಲುವುಗಳೊಡನೆ ಅವರ್ಷದಲ್ಲಿ ರೂಪುಗೊಂಡಿತು.

ಸ್ವಾತಂತ್ರ್ಯ ಪೂರ್ವದಲ್ಲೇ ಪ್ರಾರಂಭವಾಗಿದ್ದ "ಅಭ್ಯುದಯ ರಚಯಿತಲು ಸಂಘಂ" <ಅರಸಂ> ಮಾರ್ಕ್ಸ್‌ವಾದದ ತಳಹದಿಯ ಮೇಲೆಯೇ ಬೆಳೆದಿದ್ದರೂ ತೆಲಂಗಾಣ ಹೋರಾಟದ ಕಾವು ಇಳಿದು ದೇಶದಲ್ಲಿ ಸಮಾಜವಾದಿ ಪ್ರಜಾಪ್ರಭುತ್ವವು ನೆಲೆಗೊಂಡಾಗ ತನ್ನ ಪ್ರತಿಭಟನಾ ಸಾಮರ್ಥ್ಯವನ್ನು ಕಳೆದುಕೊಂಡು ನಿಸ್ತೇಜವಾಯಿತು. ವಚನ ಕಾವ್ಯ ಚಳುವಳಿಯೂ ಅಭ್ಯುದಯ ಕಾವ್ಯದಂತೆಯೇ ಸಮತಾವಾದೀಯವಲ್ಲದ ಎಲ್ಲಬಗೆಯ ಉದಾರವಾದೀ ಧೋರಣೆಯಿಂದ ಕಾವ್ಯರಂಗದಲ್ಲಿ ವ್ಯಾಪಿಸಿತು. ಆರುದ್ರ ದಾಶರಥಿಯಂಥ ಕವಿಗಳೇ ವರ್ಗಪ್ರಜ್ಞೆಯೊಂದೇ ಕಾವ್ಯದಲ್ಲಿ ಮುಖ್ಯವಲ್ಲವೆಂದೂ, ಅನಾವಶ್ಯಕವಾಗಿ ಸರ್ಕಾರದ ಪ್ರಣಾಳಿಕೆಯ ವಿರುದ್ಧ ಹೋಗಬಾರದೆಂದೂ ಪ್ರಚಾರ ಮಾಡಹತ್ತಿದರು.

ಪಶ್ಚಿಮ ಬಂಗಾಳದಲ್ಲಿ ನಕ್ಸಲೈಟ್ ಚಳುವಳಿ ಪ್ರಾರಂಭವಾಗಿ ರೈತರು ಕೂಲಿಕಾರರು ಜಮಿನ್ದಾರರ ವಿರುದ್ದ ಹಿಂಸಾತ್ಮಕ ಹೋರಾಟ ನಡೆಸಿದರು. ಇಂಥದೇ ಹೋರಾಟವು ಆಂದ್ರದ ಶ್ರೀಕಾಕುಳಂ ಜಿಲ್ಲೆಯಲ್ಲಿ ಪ್ರಾರಂಭವಾಯಿತು. ಕ್ರಾಂತಿಕಾರಿಗಳಾದ ಎಷ್ಟೋಮಂದಿ ಮೇಧಾವಿಗಳು, ವಿದ್ಯಾವಂತರು ಹೋರಾಡುವ ಗಿರಿಜನರ ಸಹಾಯಕ್ಕೆ ಹೋಗಿ ಸೇರಿಕೊಂಡರು. ಅನೇಕ ಸಾಹಿತಿಗಳು ಹೋರಾಟದ ಕಣಕ್ಕಿಳಿದರು. ಸರ್ಕಾರವು ನಿರ್ದಯವಾಗಿ ಕ್ರಾಂತಿಯನ್ನು ಸೆದೆಬಡಿಯತೊಡಗಿತು. ಸುಬ್ಬಾರಾವ್‌ಪಾಣಿಗ್ರಾಹಿ ಎಂಬ ಕ್ರಾಂತಿಕಾರಿ ಕವಿ ಮತ್ತು ಹೋರಾಟಗಾರನನ್ನೂ ಇನ್ನೂ ಅನೇಕ ಜನರೊಡನೆ ಪೋಲಿಸರು ಗುಂಡಿಕ್ಕಿ ಕೊಂದರು. ತೆಲುಗಿನ ಕವಿಗಳಿಗೆಲ್ಲಾ ಈ ಹೋರಾಟದ ಬಿಸಿ ಮುಟ್ಟಿತು. ತಮ್ಮ ಜನಪರ ಪ್ರಜ್ಞೆಯ ಹೊಣೆಯ ಅರಿವಾಯಿತು. ೧೯೭೦ರಲ್ಲಿ ನಡೆದ ಶ್ರೀ ಶ್ರೀ ಷಷ್ಟಾಬ್ದಿ ಮತ್ತು ಸನ್ಮಾನ ಸಮಾರಂಭಗಳಲ್ಲಿ ಕ್ರಾಂತಿಕಾರಿ ಯುವಕರು ಕರಪತ್ರಗಳನ್ನು ಹಂಚಿ ದೊಡ್ಡ ಸಂಚಲನೆಯನ್ನುಂಟುಮಾಡಿದರು. "ನೀವೇನು ಬರೆಯುತ್ತೀರಿ? ಯಾರಿಗಾಗಿ ಬೆರೆಯುತ್ತೀರಿ? ಅಭ್ಯುದಯದ ಹೆಸರಿನಲ್ಲಿ ಹಣ ಮಾಡಿಕೊಳ್ಳುತ್ತಿರುವಿರಿ ಶೋಷಕ ವರ್ಗದೊಡನೆ ಸೇರಿಕೊಂಡು ನೀವು ದೇಶದ್ರೋಹಿಗಳಾಗುವಿರಿ" ಎಂದು ಮುಂತಾದ ಸಾಹಿತಿಗಳಿಗೆ ಸವಾಲು ಹಾಕಿದರು. ರೈತ ಜನರೊಡನೆ ಸಾಯುಧ ಹೋರಾಟದಲ್ಲಿ ಭಾಗವಹಿಸಲು ಕರೆಕೊಟ್ಟರು.

ಈ ಎಲ್ಲ ಬೆಳವಣಿಗೆಗಳಿಂದ ೧೯೭೦ರ ಅಕ್ಟೋಬರ್ ತಿಂಗಳಲ್ಲಿ ಖಮ್ಮಂ ಎಂಬಲ್ಲಿ "ವಿಪ್ಲವ ರಚಯಿತಲ ಸಂಘ"ವು (ವಿರಸಂ) ನಿರ್ಮಾಣಗೊಂಡಿತು. ಶ್ರೀ ಶ್ರೀ ಯವರ ಅಧ್ಯಕ್ಷತೆಯಲ್ಲಿ ಪ್ರಥಮ ಅಧಿವೇಶನ ನಡೆಯಿತು. ಕುಟುಂಬರಾವು, ರಾ.ವಿ.ಶಾಸ್ತ್ರಿ, ಕೆ.ವಿ.ರಮಣಾರೆಡ್ಡಿ ಮುಂತಾದವರೆಲ್ಲ ವಿರಸಂದಲ್ಲಿ ಸೇರಿದರು. ೧೩ ಅಂಶಗಳ ಒಂದು ಪ್ರಣಾಳಿಕೆಯನ್ನು ಈ ಸಭೆಯಲ್ಲಿ ವಿರಸಂ ಸ್ವೀಕರಿಸಿತು. ಅನೇಕ ಕವಿಗಳು ಮತ್ತು ಮೇಧಾವಿಗಳು ರೈತರ ಸಾಯುಧ ಹೋರಾಟವನ್ನು ಬೆಂಬಲಿಸಿ

ಸಾಹಿತ್ಯ ರಚನೆ ಮಾಡುತ್ತ ತಮ್ಮ ನುಡಿಯನ್ನು ನಿರೂಪಿಸಿದರು. ಅನೇಕ ಕವಿಗಳು ಜೈಲುವಾಸ ಅನುಭವಿಸಿದರು. ಕೆ.ವಿ.ಆರ್., ವರೆ ವರೆ ರಾವ್ ಚರಬಂಡರಾಜು, ಗದ್ದರ್, ಶಿವಸಾಗರ್, ವಂಗಬಡು ಪ್ರಸಾದರಾವ್, ನಗ್ನಮುನಿ ಮುಂತಾದವರ ಸಾಮಾಜಿಕ ಚೈತನ್ಯವು ಅವರ ಕಾವ್ಯ ಚೈತನ್ಯದೊಡನೆ ಸಮರ್ಥವಾಗಿ ಅಭಿವ್ಯಕ್ತಿಗೊಂಡಿತು. ಸೃಜನ, ಪ್ರಭಾಂಜನ, ವಿದ್ಯಲ್ಲತ, ಅರುಣತಾರ, ಪಿಲುಪು ಮೊದಲಾದ ಸಾಹಿತ್ಯ ಪತ್ರಿಕೆಗಳು ವಿರಸಂನ ಪ್ರಚಾರಕಾರ್ಯ ಮಾಡಿದವು. ವಿರಸಂ ಪ್ರಕಟಿಸಿದ ಝುಂಝು, ಮಾರ್ಚ್, ಲೇ ಕವನ ಸಂಕಲನಗಳು ವಿಪ್ಲವದ ಸ್ವರೂಪವನ್ನು ಅದ್ಭುತವಾಗಿ ಪ್ರತಿನಿಧಿಸುತ್ತವೆ.

೧೯೭೦ರಿಂದ ೧೯೮೦ರ ವರೆಗಿನ ಒಂದು ದಶಕವು ವಿಪ್ಲವ ಕಾವ್ಯದಿಂದ ಸಮೃದ್ಧವಾಗಿದೆ. "ಶ್ರೀಶ್ರೀ ಸುಬ್ಬರಾವು, ಪಾಣಿಗ್ರಾಹಿ, ಶಿವುಡು, ಚರಬಂಡರಾಜು, ನಗ್ನಮುನಿ, ಗದ್ದರ್, ವಂಗಬಡು ಪ್ರಸಾದರಾವ್, ಕೆ.ವಿ.ರಮಣಾರೆಡ್ಡಿ, ಲೋಚನ, ಅಶೋಕರಂಥ ಕವಿಗಳ ವಿಪ್ಲವ ರಚನೆಗಳಿಂದ ಈ ದಶಕವು (೧೯೭೦-೧೯೮೦) ವಿಪ್ಲವ ಕವಿಗಳದೇ ಎಂಬ ಭಾವವನ್ನುಂಟು ಮಾಡಿದೆ. ವಿಪ್ಲವವಾದಿಗಳಿಗೆ ಚೀನಾದಲ್ಲಿ ಮಾವೋ ನಡೆಸಿದ "ಲಾಂಗ್ ಮಾರ್ಚ್" ಹೋರಾಟವು ಮಾರ್ಗದರ್ಶಿ ಎನಿಸಿತು. ದಬ್ಬಾಳಿಕೆಯ ವಿರುದ್ಧ ಸಾಯುಧ ಹೋರಾಟವನ್ನು ಅವರು ಸಾರಿದರು. ದೇಶದ ಸಮಾಜದ ವ್ಯವಸ್ಥೆಯ ಸಮಗ್ರ ಮಾರ್ಪಾಟಿಗೆ ಇದೇ ಮಾರ್ಗ ಎಂದು ತೀರ್ಮಾನಿಸಿದರು. ಶ್ರೀಕಾಕುಳಂ ಹೋರಾಟವನ್ನು ನಿಧಾನವಾಗಿ ವಿಸ್ತರಿಸುತ್ತ ಆ ಗುರಿಯನ್ನು ಸಾಧಿಸಬೇಕೆಂಬ ಮಹತ್ವಾಕಾಂಕ್ಷೆ ಅವರದಾಗಿತ್ತು. ಇದಕ್ಕೆ ಅನುಕೂಲವಾಗುವ ರೀತಿಯಲ್ಲಿ ಕಾವ್ಯ ರಚನೆಯೂ ನಡೆಯಿತು. ಅದರಲ್ಲಿ ಸ್ಪಷ್ಟವಾದ ಗುರಿಯ ತಾತ್ವಿಕ ಚಿಂತನೆ ಹೋರಾಟದ ಆವೇಶ, ಹೋರಾಟದ ಸಮಸ್ಯೆಗಳ ವಿವೇಚನೆ, ಸುಲಭ ನೇರ ಭಾಷೆ ಮತ್ತು ಜಾನಪದ ಸತ್ವಗಳು ಎದ್ದುಕಾಣುತ್ತವೆ. ಜಾನಪದ ಮುಟ್ಟುಗಳನ್ನು ಮತ್ತು ಭಾಷೆಯನ್ನು ವ್ಯಾಪಕವಾಗಿ ಬಳಸಿಕೊಳ್ಳಲಾಯಿತು. ಅತಿ ಸಾಮಾನ್ಯ ಜನರ ಕಾವ್ಯವಾದ 'ಪ್ರಜಾಕಾವ್ಯ' ಪ್ರಕಾರಕ್ಕೆ ಇದು ಸುಗ್ಗಿಯ ಕಾಲವೆನ್ನಬಹುದು. ಪಾಣಿಗ್ರಾಹಿ, ಶಿವುಡು, ಚರಬಂಡರಾಜು, ವಂಗಬಡು ಮತ್ತು ಗದ್ದರ್ ಇವರು ಉತ್ತಮ ಮಟ್ಟದ ಪ್ರಜಾಕಾವ್ಯವನ್ನು ನೀಡಿದ್ದಾರೆ. ಶ್ರೀ ಶ್ರೀ ಯವರೂ ಕೂಡ ಜಾನಪದ ಶೈಲಿಯ ಕಾವ್ಯವನ್ನು ಬರೆದರು. ಒಟ್ಟಿನಲ್ಲಿ ವಿರಸಂ, ಸಾಹಿತ್ಯವೆಂದರೆ ಕವಿಗಳಿಗೆ ಎನ್ನುವಂತೆ ಕಾವ್ಯದ ಸಮೃದ್ಧಿಯಾಯಿತು.

ಸಮಾಜಪರ ಎಂಬ ಕಾವ್ಯಧೋರಣೆಯಲ್ಲಿ ವಿಪ್ಲಕಾವ್ಯ ತೀವ್ರತರವಾಗಿ ಸ್ಪಂದಿಸಿದೆ. ಕವಿ ಸಮಾಜ ಶೋಷಣೆಯ ವಿರುದ್ಧ ನೇರವಾಗಿ ಹೋರಾಡಬೇಕೆಂಬ ಧ್ವನಿ ಅದರದ್ದು. ಮಾರ್ಕ್ಸ್, ಲೆಲಿನ್, ಮಾವೋ ಮುಂತಾದವರ ವಿಚಾರಧಾರೆಯನ್ನು ಅದು ಅನುಸರಿಸುತ್ತದೆ. ಸಮಾಜಕ್ಕಾಗಿಯೇ ಕಾವ್ಯ ಎಂಬುದು ಇವರ ಮುಖ್ಯ

ಧೋರಣೆ. ಕಾವ್ಯ ಸತ್ವವು ಒಂದು ಆಯುಧದಂತೆ ಒಂದು ಮಾಧ್ಯಮದಂತೆ ಇದನ್ನು ವ್ಯಕ್ತಿನಿಷ್ಠ ಕವಿಯಾಗಲೀ, ಸಮಾಜನಿಷ್ಠ ಕವಿಯಾಗಲೀ ತಮಗೆ ಯೋಗ್ಯ ಕಂಡಂತೆ ಬಳಸಿಕೊಳ್ಳಬಹುದು ಎನ್ನುತ್ತಾರೆ.

ಪ್ರಜಾಕಾವ್ಯ ಧೋರಣೆಗಳು

ಸ್ವತಂತ್ರ್ಯಾನಂತರ ದೇಶದ ಪರಿಸ್ಥಿತಿ ಸುಧಾರಿಸದೆ ಮೊದಲಿನಂತೆ ಕೆಡುತ್ತಲೇಹೋಯಿತು. ಸಮಾಜದ ಅತಿ ತಳವರ್ಗದ ಜನರ ಸ್ಥಿತಿ ಸುಧಾರಿಸಲಿಲ್ಲ. ಇಂಥ ಸಂದರ್ಭದಲ್ಲಿ ಬಂದ ದಿಗಂಬರ ಕವಿಗಳು ಕಾವ್ಯವನ್ನು ಹೊಸ ಕ್ರಾಂತಿಯ ಅಸ್ತ್ರವಾಗಿ ಬಳಸಿದರು. ದೇಶವನ್ನು, ಸಮಾಜವನ್ನು, ಜನರನ್ನು ತಮ್ಮದೇ ದೃಷ್ಟಿಯಲ್ಲಿ ನೋಡಿದರು. ಉದಾಹರಣೆಗೆ ಚರಬಂಡರಾಜು ಹೀಗೆ ದೇಶನೋಡುತ್ತಾರೆ.

"ಒಂಟಿಮೀದ ಗುಡ್ಡಲತೋ ಜಂಡಾಲು ಕುಟ್ಟಿಂಚಿ ವಿವಸ್ತ್ರ ಮೈ ಊರೇಗುತುನ್ನ ದೀನತ್ವಂ ನೀದಿ"[೭]

(ಮೈ ಮೇಲಿನ ಬಟ್ಟೆಯನ್ನು ರಾಷ್ಟ್ರಧ್ವಜವನ್ನಾಗಿ ಹೋಲಿಸಿ ಬೆತ್ತಲೆಯಾಗಿ ತಿರುಗುತ್ತಿರುವ ದೀನತ್ವ ನಿನದು) ಎನ್ನುವಲ್ಲಿ ಭಾರತದ ನಿರ್ಗತಿಕರ ಚಿತ್ರವೇ ನೆನಪಿಗೆ ಬರುವಂತಿದೆ. ನಿಖಿಲೇಶ್ವರ ದೃಷ್ಟಿಯಲ್ಲಿ

"ನಾದೇಶಂ ನಾಕು ಮಿಗಿಲ್ಚಿನ ।
ಮಹಾಸಮಸ್ಯಲು ಉರಿತಾಡು ॥"[೮]
(ನನ್ನ ದೇಶ ನನಗುಳಿಸಿದ್ದು, ಮಹಾಸಮಸ್ಯೆಗಳು ಮತ್ತು
ನೇಣುಹಗ್ಗ)

ದೇಶವನ್ನು ಭೌಗೋಳಿಕ ಹಿನ್ನಲೆಯಲ್ಲಿ ಗ್ರಹಿಸುವ ರಮ್ಯವಾದಿಗಳಿಗೆ ದೇಶವೆಂದರೆ ವಿಂಧ್ಯ, ಹಿಮಾಚಲ, ಯಮುನಾ ಗಂಗೆ, ಆದರೆ ಕವಿ ಗುಜಾಡರಿಗೆ

ದೇಶಮಂಟೆ ಮುಟ್ಟಿಕಾದೋಯ್
ದೇಶಮಂಟೆ ಮನುಷಲೋಯ್
(ದೇಶವೆಂದರೆ ಮಣ್ಣಲ್ಲ ದೇಶವೆಂದರೆ ಮನುಷ್ಯರು)

ದೇಶದ ಸಂಪತ್ತು ನಿಜವಾಗಿ ಸೇರಬೇಕಾದದ್ದು ದುಡಿವ ಜನರಿಗೆ ಆದರೆ ಅದು ಶೋಷಕರಿಗೆ ಸಿಗುತ್ತಿದೆ. ಆದ್ದರಿಂದ ಭಾರತಮಾತೆ ಕಣ್ಣೀರು ಸುರಿಸುತ್ತಿದ್ದಾಳೆ ಎನ್ನುತ್ತಾರೆ ಶೇಷೇಂದ್ರಶರ್ಮ.

"ಕಾನಿ ತಲ್ಲೀ । ನೀ ಪೊಲಾಲ್ಲೋ ಧಾನ್ಯಂ ಕೂಲೀಲಕೋಸಂ
ಎಡುಸ್ತೊಂದಿ ಗುಂಡೆ ಕನ್ನೀಟಕೋಸಂ ಎಡುಸ್ತುಂದಿ ॥"[೯]

(ಆದರೆ ತಾಯೀ ನಿನ್ನ ಹೊಲಗಳಲ್ಲಿ ಧಾನ್ಯಗಳು ಕೂಲಿಯವರಿಗಾಗಿ ಅಳುತ್ತಿವೆ. ಗುಂಡಿಗೆ ಕಣ್ಣೀರಿಗಾಗಿ ಅಳುತ್ತಿವೆ.)

ಶೇಷೇಂದ್ರ ಶರ್ಮರಿಗೆ ಭಾರತದ ನೇಗಿಲುಹೊತ್ತ ರೈತ ಶಿಲುಬೆ ಹೊತ್ತ ಕ್ರಿಸ್ತನಂತೆ ಕಾಣುತ್ತಾನೆ. ಹಾಗೇ ಈ ದೇಶದ ದೀನರ ಸ್ಥಿತಿಯನ್ನು ಅವರು ಹೀಗೆ ಹೇಳುತ್ತಾರೆ.

"ಇಕ್ಕಡ ಗರ್ಭಂಲೋ ಉನ್ನಶಿಶುವು ಗರ್ಭಂಲೋನೇ
ಉಂಡಿಪೋವಾಲಿ ಈ ದೇಶಂಲೋ ವಚ್ಚಿ ಆಕಲಿ ಅನಿ
ಎಡಿಸ್ತೇ ಪುಟ್‌ಪಾತಲು ಚೂಪಿಸ್ತಾರು ಪೋಲಾಲುಕಾದು"[೧೦]

(ಇಲ್ಲಿ ಗರ್ಭದೊಳಗಿನ ಶಿಶುವು ಗರ್ಭದೊಳಗೇ ಇದ್ದುಬಿಡಬೇಕು. ಈ ದೇಶದೊಳಗೆ ಬಂದು ಹಸಿವು ಎಂದು ಅತ್ತರೆ ಪುಟ್‌ಪಾತ್‌ಗಳನ್ನ ತೋರಿಸುತ್ತಾರೆ ಹೊಲಗಳನ್ನಲ್ಲ)

ಕುಂದುರ್ತಿ ಆಂಜನೇಯಲು ಇಲ್ಲಿಯ ಭೀಕರ ಬದುಕನ್ನು ಹೀಗೆ ಹೇಳುತ್ತಾರೆ.

"ಇದಿನಾ ದೇಶಂ ಅನಿಚೆಪ್ಪುಕೋಡಾನಿಕೆ ಸಿಗ್ಗುಗಾವುಂದಿ
ಜೀವಿತಂ ಮುಖಂ ನಿಂಡುಗಾ ಪೂಸಿನ
ಮಸಿ ಬೊಗ್ಗುಗಾವುಂದಿ"[೧೧]

(ಇದು ನನ್ನ ದೇಶವೆಂದು ಹೇಳಿಕೊಳ್ಳಲಿಕ್ಕೆ ನಾಚಿಕೆಯಾಗುತ್ತದೆ. ಬದುಕು ಮುಖದ ತುಂಬಾ ಮಸಿ ಬಳಕೊಂಡಂತಿದೆ)

ಇಲ್ಲಿಯ ಜನ ಇಲ್ಲಿಯ ಮನೆ ಮನಗಳನ್ನ ಕುರಿತು ಹೀಗೇ ಹೇಳುತ್ತಾರೆ. ಕುಂದುರ್ತಿ ಆಂಜನೇಯಲು

"ತಪ್ಪು ತ್ರಾಗಿ ನಿಪ್ಪುಲುತ್ರೊಕ್ಕಿ ॥
ತೈತಕ್ಕಲಾಡೇ ಕೋತಲಂ
ಚೀಕಟಿನೇ ಕಟ್ಟಿಂಚುಕುನ್ನಯಿಲ್ಲು
ದ್ವೇಷಾಗ್ನಿ ಬೆಡ್‌ಲೈಟುದೀಪಂ
ಪಕ್ಕವಾಡಿಮೀದ ಪಗಬಡುತುನ್ನ ಕುಕ್ಕಿಮಂಚಂ......

(ತಪ್ಪನು ಕುಡಿದು ಬೆಂಕಿಯ ತುಳಿದು, ಥೈ ತಕ್ಕ ಕುನಿಯುವ ಕೋತಿಗಳು, ಕತ್ತಲೆಯಿಂದಲೆ ಕಟ್ಟಿಕೊಂಡ ಮನೆ, ದ್ವೇಷಾಗ್ನಿಯೇ ಬೆಡ್‌ಲೈಟು, ಪಕ್ಕದವನ ಮೇಲೆ ಹಗೆಸಾಧಿಸುವ ಮಲಗುವ ಮಂಚ)

ಮೇಲು ಕೀಳುಗಳಿರುವ ಸಮಾಜದಲ್ಲಿ ಎಲ್ಲರೂ ಶವಗಳಂತೆ ಬದುಕುತ್ತಿದ್ದಾರೆ ಎಂಬ ಚಿತ್ರಣವನ್ನ ನಗ್ನಮುನಿ ಕೊಟ್ಟಿದ್ದಾರೆ. –

"ಶವಾಲು ಶವಾಲು.... ರೋಡ್ಲಮೀದ ಕಂಕರ ರಾಳ್ಳುಗಾಶವಾಲು
ಇಳ್ಳನೇ ಚಿಲ್ಲಪೆಂಕುಲ ಬೊಮ್ರರಿಳ್ಳಲೊ....
ಮುರುಕಿ ಚದುವಲು ಪ್ರವಹಿಂಚೇ ಸ್ಕೂಳ್ಳಲೋ ಶವಾಲು
ಗೊಂಗಳ್ಳಲೋ...ಅಂಗಳ್ಳಲೋ...ಆಸುಪತ್ರಲೋ
ದಿಸಪೊಲಶವಾಲು । ದಿಕ್ಕುಲೀನಿ ಶವಾಲು ।
ರಾಬಂದುಲ ವಿಲಕ್ಷನ್ಲ ವಾಗ್ದಾನಾಲ್ನಿ ನಮ್ಮಿ
ಪೀಲ್ಚಿ ಪೀಪ್ಪಯಿಪೋಯಿನ ಶವಾಲು
ಮೆತುಕ್ಕಿ ಮಾನಾನ್ನಿ ಆಮ್ಮುಕುನಿ
ಕುಳ್ಳಿ ಕಂಪು ಗೊಡುತುನ್ನ ರಾಮರಾಜ್ಯಂಲೋ ಶವಾಲು"[೧೨]
ರೈಳ್ಳಲೋ ಬಸ್ಸಲೊ ಗುಂಪುಲುಗುಂಪುಲುಗಾ ಗುಟ್ಟಲು
ಗುಟ್ಟಲುಗಾ ಕುಕ್ಕಬಡ್ಡ ಶವಾಲು...ಮುಲುಗುಲು"

ನಮ್ಮ ಕೊಳೆತ ಸಂಸ್ಕೃತಿಯ ಫಲವಾಗಿ ಬೆಳೆದ ಒಬ್ಬ ನಿರ್ಗತಿಕನನ್ನ ಕಂಡು ನಗ್ನಮುನಿಯವರು ಹೀಗೆ ಹೇಳುತ್ತಾರೆ.

"ಈಗಲೂ ದೋಮಲೂ ಚೀಮಲೂ ಚೀಮಿಡೀ। ಇವಿನಾಬಾಲ್ಯಂ"
"ನಾಕಿಪ್ಪಡು ಆಕಸ್ಮಾತ್ತುಗಾ ಮೇಡಲ ಸಂಸ್ಕಾರಂ
ಚದುವುಲ ಸಂಸ್ಕಾರಂ ಎಟ್ಲಾವೊಸ್ತುಂದಿ"[೧೨]

(ನೊಣ, ದೋಮೆ, ಇರುವೆ ಕೆಸರು ಇವು ನನ್ನ ಬಾಲ್ಯ" "ನನಗೀಗ ಆಕಸ್ಮಾತ್ತಾಗಿ ಮಹಡಿಗಳ ಸಂಸ್ಕಾರವಾಗಲೀ ಓದಿನ ಸಂಸ್ಕಾರವಾಗಲೀ ಹೇಗೆ ಬರುತ್ತದೆ")

ಈ ದೇಶದ ಬೆನ್ನೆಲುಬಾದ ರೈತನನ್ನ ಕುರಿತು ಬೋಯಿ ಭೀಮನ್ನ-

"ಈಶ್ವರನಿಗೆ ಒಂದೇ ಎತ್ತು । ರೈತನಿಗೆ ಎರಡೆತ್ತು
ವಿಷ್ಣುವಿಗೆ ಒಂದೇ ಚಕ್ರ । ರೈತನಿಗೆ ಎರಡು ಚಕ್ರ
ಬ್ರಹ್ಮ ಚತುರ್ಮುಖ । ರೈತನು ಬಹುಮುಖ"[೧೩] ಎಂದು
ಹಾಡುತ್ತಾನೆ.

ವಂಗಬಡು ಪ್ರಸಾದರಾವು ಅವರು ರೈತನ ಮನಸ್ಥಿತಿಯನ್ನ ಹೀಗೆ ಚಿತ್ರಿಸಿದ್ದಾರೆ.

"ಸಟ್ಟಕೂಡಲಾ ಪಿಟ್ಟ ತನ್ನಿಂದಾ
ಓಕೂಲಿರೈತಾ ಸೂಡಬೋತೆ ಈಗ ನಿನ್ನೂ ಎಗರಿದನ್ನಿಂದಾ
ಗಟ್ಟಿಮೀದ ಗಿರಕಿಪುವ್ವಾ ।
ನಿನ್ನ ಚೂಸಿ ಕುನುಕುನವ್ವಾ ಪಚ್ಚಗಡ್ಡೀ ಪಲಕರಿಂಚಿದಾ

ಓ ಕೂಲಿ ರೈತಾ । ಎದ್ದು ನಿನ್ನು ಎಕ್ಕರಿಂಚಿದಾ ॥
ಸಿರಸುಮೀದಾ ಸೂರ್ಯುಡೆಕ್ಕ । ಅಗ್ಗಿನಿಪ್ಪುಲುವೆರಗುತುಂಟೆ
ಕಡುಪುಲೋನ ಆಕಲೇಸಿಂದಾ । ಓ ಕೂಲಿ ರೈತಾ"[೧೪]

(ಬಡ ರೈತನನ್ನು ನೋಡಿ ನೊಣ ಹಾರಿ ಒದೆಯಿತಂತೆ, ಹುಲ್ಲಮೇಲಿನ ಹೂವೂ ಅಣಕುನಗೆ ನಕ್ಕಿತಂತೆ, ಎತ್ತುಕೆಕ್ಕರಿಸಿತಂತೆ, ಕಟ್ಟಿರುವೆ ಕಚ್ಚಿತಂತೆ, ಮೇಲಿನ ಸೂರ್ಯ ಬೆಂಕಿಕೆಂಡ ಸುರಿಸಿದನಂತೆ.

'ಸಿರಿಮಲ್ಲೆ ಸೆಟ್ಟುಕಿಂದ ಲಚ್ಚುಮಮ್ಮೊ, ಲಚ್ಚುಮಮ್ಮಾ' ಎಂಬ ಕೂಲಿಹೆಣ್ಣುಮಗಳ ಬಡಬದುಕಿನ ಕೊರೆ-ಕೊರಗುಗಳ ಚಿತ್ರದಲ್ಲಿ ಹಳ್ಳಿ ಬಡಸ್ತ್ರೀಯರ ಪ್ರತಿನಿಧಿಯನ್ನು ಗದ್ದರ್ ರೂಪಿಸಿದ್ದಾರೆ.

"ನಾಟ್ಲೇಸಿ ನಾಟ್ಲೇಸಿ ನಡುಮುಲೇ ಇರಿಗೇನಾ?
ನೆತ್ತಂತಾ ಮಾಸಿಂದಿ ರೈಕಂತ ಚಿನಿಗಿಂದಿ
ಚಲಿಗಂಜಿ ಬೋಸುಕುನಿ ಸಪ್ಪದೇ ಮಿಂಗುತೇ
ಗಾಡ್ಪೊಚ್ಚಿ ಗುಡಿಸೆಂತ ಗಾಲಿಕೆಗರಿ ಪೋಯೆ
ಚಲಿಗಾಲಿ ವಚ್ಚಿಂದಿ ಚಾಪ ಚಂಪುಲುಲೇವು
ದಸರ ಪಂಡುಗ ವೊಚ್ಚೆ ದಮ್ಮಿಡಿಚೇತುಲಲೇದು
ದೀಪಾವಳಿ ವಚ್ಚಿ ದೀಪಂತ ಲೇದಾಯೆ
ಬತುಕಂತ ಶಿವರಾತ್ರಿ ಅಮವಾಸೆ"[೧೫]

(ಸಸಿಹಚ್ಚಿ ಸಸಿಹಚ್ಚಿ ಸೊಂಟ ಮುರಿದಿದೆ, ನೆತ್ತಿಯೆಲ್ಲ ಮಾಸಿದೆ, ರವಿಕೆಯೆಲ್ಲಾ ಹರಿದಿದೆ, ಚಳಿಗಂಜಿ ಹೊದ್ದುಕೊಂಡು ಸಪ್ಪದನ್ನೇ ನುಂಗುವಿ. ಬಿರುಗಾಳಿ ಬಂದು ಗುಡಿಸಲೀ, ಗಾಳಿಗೆ ಹಾರಿ ಹೋಯಿತು. ಚಳಿಗಾಳಿ ಬಂದಿತು ಚಾಪೆ ಬೆಳದಿಂಗಳೂ ಇಲ್ಲ, ದಸರಾಹಬ್ಬ ಬಂತು ದಮ್ಮಡಿಯೂ ಕೈಯಲ್ಲಿಲ್ಲ, ದೀಪಾವಳಿ ಬಂತು ದೀಪವೂ ಇಲ್ಲ. ನಿನ್ನ ಬದುಕೆಲ್ಲಾ ಶಿವರಾತ್ರಿ ಅವಾಸೆ)

ಜಾಷವಾ ಅವರು –

ನಿಮ್ಮ ಜಾತುಲ ಕನ್ನಡಿ ನೀರದಮಲು
ಪಿಡುಗುಲ್ಲೆ ದೇಶಮುನು ಕಾಲ್ಚಿಮೇಯನು

(ನಿನ್ನ ಜಾತಿಯವರ ಕಣ್ಣೀರ ಮೋಡಗಳು ಸಿಡಿಲುಗಳಾಗಿ ದೇಶವನ್ನು ಸುಟ್ಟು ಹಾಕುತ್ತವೆ)

ಶ್ರೀ ಅಜಂತಾರವರುಒಂದು ಅರ್ಧರಾತ್ರಿಯ ನಗರವನ್ನು ಚಿತ್ರಿಸಿರುವ ರೀತಿ ನಗರದ ರಕ್ಷಸೀ ತಾಂಡವದ ತುಳಿತಕ್ಕೆ ಸಿಕ್ಕ ಮಂದಿಯ ದುಸ್ಥಿತಿಯನ್ನ ತೆರೆದು ತೋರಿಸುತ್ತದೆ.

గుడిసెల్లో వెన్నెల్లో కార్మికులు కన్నీళ్ళు ఆరుచిట్టుకున్నిరు
కటకటాల మధ్య శూన్యంలో ఖైదీలు ఆకాశయానం
చేస్తున్నారు పేవ్‌మెంట్ మీద బిక్షుకులు
వాల్‌పోస్టర్ కప్పుకున్నారు పడపుగదెలో
విషవస్త్రాలు విసర్జించారు ఆశ్రుసిక్త మైన వక్షోజాలను
భద్రంగా గోడలకు వేలాడదీసుకున్నారు–రాజలు
రాక్షసలు రాజకీయవేత్తలు సామాన్యలు సజ్జనలు అందరూ
నిద్ర పోతున్నారు.

(ಗುಡಿಸಲು ಬೆಳದಿಂಗಳಲ್ಲಿ ಕಾರ್ಮಿಕರು ಕಣ್ಣೀರು ಒಣಹಾಕಿದ್ದಾರೆ. ಜೈಲಿನ ಕಟಕಟೆಯ ಮಧ್ಯಶೂನ್ಯದಲ್ಲಿ ಖೈದಿಗಳು ಆಕಾಶಯಾನ ಮಾಡುತ್ತಿದ್ದಾರೆ. ಪೇವಮೆಂಟ್ ಮೇಲೆ ಬಿಕ್ಷುಕರು ವಾಲ್‌ಪೋಸ್ಟರುಗಳನ್ನೂ ಹೊದ್ದುಕೊಂಡಿದ್ದಾರೆ. ವೇಶ್ಯೆಯರು ವಿಷವಸ್ತ್ರಗಳ ವಿಸರ್ಜಿಸಿ ಕಣ್ಣೀರು ತೊಯ್ದ ರವಿಕೆಗಳ ಗೋಡೆಗೆ ತೂಗುಬಿಟ್ಟಿದ್ದಾರೆ. ರಾಜರು, ರಾಕ್ಷಸರು, ರಾಜಕೀಯವೇತ್ತರು, ಸಾಮಾನ್ಯರು, ಸಜ್ಜನರು ಎಲ್ಲರೂ ನಿದ್ರೆಗಿಳಿದಿದ್ದಾರೆ.)

ಓಟು ಕೊಡುವ ರೈತರನ್ನೆದ್ದೇಳಿಸಿ ಎಂ.ಕೆ.ಸುಗಮಬಾಬು ವ್ಯಂಗ್ಯವಾಗಿ ಹೀಗೆ ಹಾಡಿದ್ದಾರೆ.

ఓటయ్య ఓటయ్య రైతన్నా ।
దొంగల కి ఓటయ్య కూలన్నా ।
తెల్ల తెల్లగొచ్చి వాటేసుకుంటారు ।
తీయ తీయ్యమని పేమమాట సెబుతారు ।
బంజర్లు పంచుతామంటారు రాజులు ।
కూలీలు పెంచుతామంటారుబాబులు
పేదోల్ల మంచికే నడుం కట్టారయ్య
పన్నులతోయిల్లుకు కప్పులేత్తారయ్య
మంతిరిపదవులు గెల్సి పెడతాయి ఓట్లు
తర్వాత కక్కలూ పడవూలే మనపాట్లు[17]

(ನಾಯಕರು ಬೆಳ್ಳಬೆಳ್ಳಗೆ ಬಂದು ಬಣ್ಣಬಣ್ಣದ ಮಾತುಗಳಿಂದ ಬಂಜರುಗಳನ್ನು ಹಂಚುತ್ತೇವೆ. ಕೂಲಿಯನ್ನು ಹೆಚ್ಚಿಸುತ್ತೇವೆ. ಬಡವರ ಉದ್ಧಾರಕ್ಕೆ ನಡುಕಟ್ಟಿದ್ದೇವೆಂದು ಹೇಳುತ್ತ ವೋಟು ಗಿಟ್ಟಿಸುತ್ತಾರೆ. ವೋಟುಗಳಿಂದ ಅವರೇನೋ ಮಂತ್ರಗಳಾಗುತ್ತಾರೆ. ಆದರೆ ಹೊಲಸುಗಳಲ್ಲಿ ಕೊಳೆಯುವುದೇ ವೋಟುದಾರರ ಗತಿ)

ಮತೀಯ ವ್ಯವಸ್ಥೆಯನ್ನು ವಿಡಂಬಿಸುತ್ತ ಬೋಯಿಭಿಮನ್ನ ಹೀಗೆ ಹೇಳುತ್ತಾರೆ.

ಈ ಗುಡುಲನ್ನೀ ಮಟ್ಟವಿ
ಈ ದೇವಳ್ಳಂತಾ ಮಿಣುಗುರುಲು ।
ಈ ಮತಾಲನ್ನೀ ದೊಂಗಲ ಗುಹಲು
ಈ ಮನುಷುಲು ಬುರ್ರಲೇನಿ ಬೊಮ್ಮಲು ॥[೧೭]

(ಈ ಗುಡಿಗಳೆಲ್ಲಾ ಮಣ್ಣು. ಈ ದೇವರುಗಳೆಲ್ಲಾ ಮಿಂಚುಹುಳುಗಳು. ಈ ಮತಗಳೆಲ್ಲಾ ಕಳ್ಳರ ಗವಿಗಳು. ಈ ಮನುಷ್ಯರೆಲ್ಲಾ ತಲೆ ಇಲ್ಲದ ಗೊಂಬೆಗಳು)

ವಾರ್ಗ್ಗಂ ವೆಂಕಟೇಶ್ವರ ರಾವ್ ಹಿಂದಿನ ರಾಜರ ಧರ್ಮದ ಗತದ ಹಿರಿಮೆಯನ್ನು ಹಿಯಾಳಿಸುತ್ತ ಹೇಳಿರುವ ಮಾತು ಅಮೂಲ್ಯವಾಗಿವೆ.

ರಾಜು ದೋಚೆಪ್ರಜನು ಪೂಜಾರಿದೋಚೆನು
ನಿನ್ನ ಮುನ್ನಡಮಕ ಅನ್ನಿಚೋಟ್ಲೀ
ನಿಲುವು ದೋಪಿಡೊಕಟಿ ನಿನ್ನ ಮೊನ್ನಟಗೊಪ್ಪು [೧೭]

(ರಾಜನು ದೋಚಿದ ಪ್ರಜೆಗಳನ್ನು ಪೂಜಾರಿ ದೋಚಿದ ನಿನ್ನೆ ಮೊನ್ನೆಯವರೆಗೆ ಎಲ್ಲಕಡೆಗೆ ಹಗಲು ದರೋಡೆಯೊಂದೆ ನಿನ್ನೆ ಮೊನ್ನೆಯ ಹಿರಿಮೆ)

ಜಾತ್ಯಾತೀತ ಭಾರತ ಎಂದು ಸಾರುವ ಆಧುನಿಕ ಯುಗದಲ್ಲೂ ಸರ್ಕಾರದ ರಚನೆ ಕಾರ್ಯಾಚರಣೆಗಳ ರೀತಿಯೇ ಜಾತೀಯತೆಯನ್ನು ಇನ್ನಷ್ಟು ತೀವ್ರಗೊಳಿಸುತ್ತ ಬಂದಿರುವುದೊಂದು ಕೆಟ್ಟ ವಿಪರ್ಯಾಸ. ಇದನ್ನು ಅದ್ದೆಪಲ್ಲಿ ರಾಮಮೋಹನರಾವ್ ಚೆನ್ನಾಗಿ ಬಣ್ಣಿಸಿದ್ದಾರೆ.

"ಧನಾನ್ನಿ ಐಹಿಕ ಜೀವನಾನ್ನಿ । ತ್ಯಜಿಂಚಾಲನಿ ಬೋದಿಂಚೇ ಸನ್ಯಾಸಿ।
ತನ ಕುಲಂವಾಳ್ಳ ಭುಜಾಲಮೀದ ಊರೇಗುತೂ ಲೋಕಾನ್ನಿ ಉದ್ಧರಿಸ್ತುನ್ನಾಡು।
ಲೇಚಿಪೋಯಿನ ಅಡದಿ ತನಕುಲಂವಾಡಿತೋ । ಲೇಚಿಪೋಲೇದನಿ
ಕುಮಲಿಕುಮಿಲಿ ಈ ದೇಶಪ್ಪೈರುಡು ಏಡುಸ್ತುನ್ನಾಡು। ದೇಶ ಸಂಪದ
ದೋಚುಕುನೇ ಪಟ್ಟು ಬಡಿದಾರು ತನಕುಲ
ಸಮುದ್ರಾನಿಕೆ । ಪೂರ್ಣ ಚಂದ್ರುಡೈ ವಿರಾಜಿಲ್ಲು ತುನ್ನಾಡು ।
ಕುಲಂ ಪೋಗು ಚೇಸಿನ ಓಟ್ಲ ಗುಟ್ಟಲಮೀದ ಕೂರ್ಚುನ್ನ ದೇಶ ನಾಯಕುಡು।
ಕುಲರಹಿತ ರಾಜ್ಯಾಂಗ ನಿರ್ಮಾಣಂಚಲೋ ಪ್ರಮುಖಪಾತ್ರ ವಹಿಸ್ತುನ್ನಾಡು[೧೮]

(ಹಣವನ್ನ ಐಹಿಕ ಜೀವನವನ್ನ ತ್ಯಜಿಸಬೇಕೆಂದು ಬೋಧಿಸುವ ಸನ್ಯಾಸಿ ತನ್ನ ಕುಲದವರ ಆಶ್ರಯದಲ್ಲಿ ಊರೂರು ಸುತ್ತುತ್ತ ಲೋಕವನ್ನು ಉದ್ಧರಿಸುತ್ತಿದ್ದಾನೆ. ಓಡಿಹೋದ ಹೆಂಡತಿ ತನ್ನಕುಲದವನೊಂದಿಗೆ ಓಡಿಹೋಗಲಿಲ್ಲವಲ್ಲ ಎಂದು ಬಿಕ್ಕಿಬಿಕ್ಕಿ

[illegible]

ಅಳುತ್ತಿದ್ದಾನೆ ಈ ದೇಶದ ಪೌರ, ದೇಶಸಂಪತ್ತನ್ನ ದೋಚುವ ಪಟ್ಟಭದ್ರರು ತಮ್ಮ ಕುಲಸಮುದ್ರಕ್ಕೆ ಪೂರ್ಣಚಂದ್ರರಂತೆ ವಿರಾಜಿಸುತ್ತಿದ್ದಾರೆ. ಕುಲಗಳ ಆಧಾರದ ಮೇಲೆಯೇ ನಿಂತ ಓಟಿನ ಗುಂಪಿನಮೇಲೆ ಕುಳಿತ ದೇಶದ ನಾಯಕ ಕುಲರಹಿತ ರಾಜ್ಯಾಂಗ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾನೆ)

ಸುಗಮ ಬಾಬು ಕುಲ-ಮತಗಳ ವಿಷಯವನ್ನು ಕುರಿತು ಹಳ್ಳಿಗರ ಮಾತಿನಲ್ಲೇ ಸುಂದರವಾಗಿ ಹಾಡಿದ್ದಾರೆ.

ಕುಲಮಂಟೆ ಕತ್ತಿರಾ । ಮತಮಂಟೆ ಮತ್ತುರಾ
ಕುಲಮತಾಲ ಆಟಲು । ಪೇನಾಲಿಕು ಮುಪ್ಪುರಾ
ಉಲ್ಲೋಲ್ಲು ಲೇನೋಲ್ಲು ।ರೊಂಡೇ ಕುಲಾಲುರಾ
ಲೇನೇಪೋಲ್ಲು ಸೇಸೆಪೋಲ್ಲು ರೊಡೇ ಮತಾಲುರಾ ।[೧೯]

(ಕುಲವೆಂದರೆ ಕತ್ತಿಕಣೋ । ಮತವೆಂದರೆ ಮತ್ತು ಕಣೋ ಕುಲಮತಗಳ ಆಟಗಳು ಬಡವರಿಗೆ ಮುಪ್ಪುಕಣೋ ಉಳ್ಳವರು ಇಲ್ಲದವರು ಎರಡೇ ಕುಲಗಳು ಕಣೋ ತಿನ್ನುವವರು ಮಾಡುವವರು ಎರಡೇ ಮತಾಕಣೋ)

ಜನರ ಶ್ರಮಶಕ್ತಿಯ ಸಂಕೇತ ಕಾವ್ಯವಾದ ಗೊರಿಲ್ಲಾದಲ್ಲಿ ಶೇಷೇಂದ್ರಶರ್ಮರು ಜನರ ಜಡತೆಯನ್ನು ಕಂಡು "ತಮ್ಮುಡಾ ನೀ ಗಾಯಲ ದೈನ್ಯಾನ್ನಿ ಚೂಡಲೇಕುನ್ನಾನು ಕಾನೀ ನೀ ಆತ್ಮ ತಿರಗಬಡದನೇ ನಾಬಾಧಾ... ನೀಕುದಾಹಂ ವೇಸ್ತುಂದಾ ಚೆಪ್ಪು. ಒಕಸಮುದ್ರಮೋ ನೀ ಮುಂದು ಪೆಡತಾ ಕಾನೀ ನೀಕು ದಾಹಂಲೇದೇ. ನೀಕು ತೃಷ ಲೇದೇ ದೇನಿಕೋಸಮೋ ಅದೇ ನಾ ನಿರಾಶ. ಅದೇ ನಾ ಸರ್ವ ಸ್ವಪ್ನಾಲ ಸಮಾಧಿ. ನುವುದೊಂಗ ದೇವತಲಕು ಪುಜಾರಿಗಾ ನೀ ಯಾತ್ರಮುಗಿದ್ದಾಂ ಅನುಕುನ್ನಾವು ಅಂದುಕೇ ನಾ ಕ್ರೋಧಾಗ್ನಿ"[೯]

(ತಮ್ಮಾ ನಿನ್ನ ಗಾಯಗಳ ದೈನ್ಯವನ್ನು ನೋಡಲಾರೆ ಆದರೆ ನಿನ್ನಾತ್ಮ ತಿರುಗಿ ಬೀಳದಲ್ಲಾ ಎಂಬುದೇ ನನ್ನಬಾಧೆ. ನಿನಗೆ ದಾಹವಾಗುತ್ತದೆಯೋ? ಹೇಳು ಒಂದು ಸಮುದ್ರವನ್ನೇ ನಿನ್ನ ಮುಂದೆ ತಂದಿಡುತ್ತೇನೆ. ಆದರೆ ನಿನಗೆ ದಾಹವಿಲ್ಲವಲ್ಲಾ ಎಂಬುದೇ ನನ್ನ ನಿರಾಸೆ. ನನ್ನ ಸರ್ವಸ್ವಪ್ನಗಳ ಸಮಾಧಿ. ಕಳ್ಳ ದೇವರುಗಳಿಗೆ ಪೂಜಾರಿಯಾಗಿ ನಿನ್ನ ಯಾತ್ರೆ ಮುಗಿಸಬೇಕೆಂದಿರುವೆ. ಅದಕ್ಕೆ ನನ್ನ ಕ್ರೋಧಾಗ್ನಿ)

ಸಿ. ನಾರಾಯಣ ರೆಡ್ಡಿಯವರು ಜನಶಕ್ತಿಯನ್ನು ಕುರಿತು –

"ಜನ ಹೃದಯಂ ನಿದ್ರಿಂಚೇ । ಜ್ವಾಲಾಮುಖಿ
ಜನ ಹೃದಯಂ ಜಡಧಿಲೋ ಬಡಬಾಳಿಖಿ
ಒಕ್ಕಮಾಟು ಜ್ವಾಲಾಮುಖಿ । ಒಳ್ಳುವಿಂಚೆದೂಕಿಂದಾ
ಆಗವು ಖಿಲ್ಲಾ ಗೋಡಲು । ಆಗವು ಬಂಗರು ಮೋಡಲು॥[೧೯]

(ಜನ ಹೃದಯವು ನಿದ್ರಿಸುವ ಜ್ವಾಲಾಮುಖಿಯಂತೆ ಜನಹೃದಯವು ಕಡಲೊಳಗಿನ ಬಡಬಾನಲದಂತೆ ಒಂದು ಮಾತಿನ ಜ್ವಾಲಾಮುಖಿ ಮೈತೆಗೆದು ನುಗ್ಗಿತೋ ಯಾವ ಕೋಟೆಗೋಡೆಗಳೂ ತಡೆಯಲಾರವು. ಯಾವ ಬಂಗಾರದ ಮಹಲುಗಳೂ ತಡೆಯಲಾರವು)

ಶ್ರಮಜೀವಿ ಚಮಟ ಬಿಂದುವುಲೋ
ಆಣಿಮುತ್ಯಮೂ ಉಂದಿ । ಅಗ್ನಿ ಗೋಳಮೂ ಉಂದಿ
ಪೀಡಿತುನಿ ವೇಡಿ ನಿಟ್ಟೂರ್ಪುಲೋ
ಪಾವುಯಾಯಿ ಮುಲುಗೂ ಉಂದಿ ।
ಚಕಮಕಿ ರಾಯಿ ಮಿಣುಗುರೂ ಉಂದಿ ।
ಬ್ರತುಕಂಟೇ ನಿಪ್ಪುಲು ಕಕ್ಕಡಮೂ ಕಾದು
ಕನ್ನೀಳ್ಳು ಕನುಗುಡ್ಲಲೋ ಕಕ್ಕಡಮೂಕಾದು
ಬ್ರತುಕುಂಟೆ ಉದ್ದೀಪ್ತ ಚೈತನ್ಯಂ
ಜಲವಿದ್ಯುತ್ತು ತ್ತೊ ದಾನಿ ಬಾಂಧವ್ಯಂ ।
ಬ್ರತುಕಂಟೇ ವರ್ಷಾ ಮೇಘಂ
ಬೀಳ್ಳತೋ ಏಳ್ಳತೋ ದಾನಿ ಅನುಬಂಧಂ" [೨೦]

ಶ್ರಮಜೀವಿಯ ಬೆವರಹನಿಯಲ್ಲಿ ಅಣಿಮುತ್ತು ಇದೆ ಅಗ್ನಿಗೋಳವೂ ಇದೆ. ಪೀಡಿತರ ಬಿಸಿನಿಟ್ಟುಸಿರಲ್ಲಿ ಪಾರಿವಾಳದ ಮುಲುಗೂ ಇದೆ. ಚಕಮಿಕಿ ಕಲ್ಲಕಿಡಿಯೂ ಇದೆ. ಬದುಕೆಂದರೆ ಉದ್ದಿಪ್ತ ಚೈತನ್ಯ ಜಲ ವಿದ್ಯುತ್ತಿನೊಡನೆ ಅದರ ಬಾಂಧವ್ಯ ಬದುಕೆಂದರೆ ಮಳೆಮೋಡ ಬಯಲುಗಳೊಡನೆ ಹೊಳೆಗಳೊಡನೆ ಅದರ ಅನುಬಂಧ)

ದೇವರು ಧರ್ಮಗಳನ್ನು ನಂಬಿ ಹಾಳಾದ ಹಿಂದಿನ ತಲೆಮಾರಿಗಿಂತ ವಿಜ್ಞಾನವನ್ನು ನಂಬಿ ಉದ್ಧಾರವಾಗುವ ಹಂಬಲವುಳ್ಳ ನವಮಾನವ ಪ್ರಕೃತಿಯ ಶಕ್ತಿಗಳ ಮೇಲೆ ತನ್ನ ವಿಜಯು ಸಾಧಿಸಿ ಪ್ರಗತಿ ಮಾರ್ಗವನ್ನು ಸುಲಭಮಾಡಿಕೊಂಡಿದ್ದಾನೆ. ಅವನ ಆತ್ಮವಿಶ್ವಾಸವನ್ನು ಕುರಿತು ವರವರರಾವ್ ಹೀಗೆ ಹೇಳಿದ್ದಾರೆ.

"ಈ ಜನರೇಷನ್ ಜನರೇಟರ್ಲೋಂಚಿ
ಜನ್ಮಿಂಚಿನ ವಿದುತ್ತುನು ನೇನು ನೇನುಮೆಲುಗುತುನ್ನಾನು
ನೇನು ವೆನುಕಟಿ ದೀಪಲ್ಲಾ ಗಾಲಿಲೋ
ದೇವಿಣ್ಣಿ ನಮ್ಮುಕೊನಿ ಪುಟ್ಟಲೇದು
ನೇನು ಅಣುವುನು ಆಡಿಂಚಿ
ಪರಮಾಣುವುತೋ ಪಾಡಿಂಚಗಲನು
ಪ್ರಪಂಚ ಪ್ರಗತಿ ಸಾಧಿಂಚಗಲನು"[೨೧]

(ಈ ಜನರೇಷನ್ ಜನರೇಟರ್‌ನಿಂದ ಹುಟ್ಟಿದ ವಿದ್ಯುತ್ತು ನಾನು ನಾನು ಬೆಳಗುತ್ತಿದ್ದೇನೆ. ನಿನ್ನಿನ ಗಾಳಿಯೊಳಗಿನ ದೀಪದಂತೆ ದೇವರನ್ನು ನಂಬಿಕೊಂಡು ಹುಟ್ಟಲಿಲ್ಲ ಅಣುವನ್ನೂ ಆಡಿಸಿ ಪರಮಾಣುವಿನೊಡನೆ ಹಾಡಿಸಬಲ್ಲೆ. ಪ್ರಪಂಚ ಪ್ರಗತಿ ಸಾಧಿಸಬಲ್ಲೆ)

ಇಂತಹ ಶೋಷಿತರ ಆಕಾಂಕ್ಷೆಗೆ ಹಾಡಾದಂತೆ ರೆಂಟಾಲ ಗೋಪಾಲಕೃಷ್ಣ ಹೇಳುತ್ತಾರೆ.

"ಮೇಮಂತಾ ನೀಡಲೋನಿ ಮಾನವುಲಂ
ನಿಷ್ಠ ದರಿದ್ರ ಪರಾಯಣಲಂ ಬಾಧಿತುಲಂ ಪಾಲಿತುಲಂ
ಕ್ಷದ್ಭಾಧಾ ಪೀಡಿತುಲಂ । ಮಾಬ್ರತುಕುಲು । ಮಹಾರಾಜಲು
ತಿನಿಪಾರೇಸಿನ ವಿಸ್ತರಾಕುಲ
ಮಾ ಆತ್ಮುಲು ಕಲವಾರಲ ಕಾಳ್ಳಕ್ರಿಂದ ।
ನಲಿಗಿನ ಪೂರೇಕುಲು... ಚರಿತೆ ಮಮ್ಮುದೇಷಿಂಚಿಂದಿ
ಗತಂ ಮಮ್ಮುಕಾಟುವೇಸಿಂದಿ
ಪ್ರಸ್ತುತಂ ಭಯ ಪಡುತುನ್ನದಿ
ಭವಿಷ್ಯತ್ತೇ ಮಾಕು ಮಿಗಿಲಿಯುನ್ನದಿ"[೨೨]

(ನಾವೆಲ್ಲಾ ನೀರೂ ಇಲ್ಲದ ಮಾನವರು, ದಟ್ಟದರಿದ್ರರು, ಬಾಧಿತರು, ಪೀಡಿತರು. ನಮ್ಮ ಬದುಕುಗಳು ರಾಜರು ತಿಂದೊಗೆದ ಪತ್ರೊಳಿ ಎಲೆಗಳು ನಮ್ಮಾತ್ಮಗಳು ಉಳ್ಳವರ ಕಾಲಕೆಳಗೆ ನಲುಗಿದ ಹೂವೆಸಳುಗಳು... ಚರಿತ್ರೆ ನಮ್ಮನ್ನು ದ್ವೇಷಿಸಿದೆ. ಗತಕಾಲ ನಮ್ಮನ್ನ ಕಚ್ಚಿದೆ. ವಾಸ್ತವ ಭಯ ಬೀಳಿಸುತ್ತಿದೆ ಭವಿಷ್ಯವೊಂದೇ ನಮಗುಳಿದಿರುವುದು)

ಜನತೆಯಲ್ಲಿ ಅವಿನಾಭಾವ ಸಂಬಂಧವನ್ನ ತೋರುವ ಶೇಷೇಂದ್ರಶರ್ಮರು ಜನರನ್ನು ತಮ್ಮೊಡನೆ ಬರಲು ಕರೆಯುತ್ತಾರೆ.

"ನಾಗೊಂತು ನಾಪ್ರಜಲಕು ದಾನಂ ಚೇಶಾನು ನಾಜಾತೇ ನಾ
ಭಾಷಣಕು ಪ್ರಾಣವಾಯುವು. ನಾ ದೇಶಂ ನಾ ಶಿಲ್ಪಾನಿಕೆ
ಆಯುವು. ನೇನು ರಕ್ತ ಪ್ರವಕ್ತನು... ಝುಂಝಾ ಮಾರುತಾನ್ನಿ"[೨೩]

(ನನ್ನ ಕೊರಳನ್ನು ನನ್ನ ಜನರಿಗೆ ದಾನ ಮಾಡಿದ್ದೇನೆ. ನನ್ನ ದೇಶವೇ ನನ್ನ ಭಾಷಣಕ್ಕೆ ಪ್ರಾಣವಾಯುವು. ನನ್ನ ಶಿಲ್ಪಕ್ಕೆ ಆಯುವು. ರಕ್ತ ಪ್ರವಕ್ತ..... ಝುಂಝು ಮಾರುತ)

ಕಷ್ಟಗಳ ಭಾರತಕ್ಕೆ ಕುಸಿದು ಝುರ್ಝುರಿತವಾಗಿ ನಿರಾಶೆಯನ್ನು ತಳೆದಿರುವ ಬಡವನಿಗೆ ಕಾಮಿಶೆಟ್ಟಿಯವರು

"ರಕ್ತಾಶ್ರುವಲ್ನಿ ರಾಲ್ಚುಕುಂಟೂ
ಗತಮಂತಾ ಗಡಿಚಿಪೋಯಿಂದಿ । ಇಹ ಸ್ತಬ್ಧತಪನಿಕಿರಾದು ।
ಇಹಾವ್ರತ ಅಕ್ಕರಿಕುರಾದು ।
ಸ್ವಾರ್ಥಂಗುಂಡೆಲ್ಲೋ ಶೂಲಾಲುಗುಚ್ಚು
ಚೇಕಟಿ ವೇರುಲ್ನಿ ನಿಪ್ಪುತೇ ಕಾಲ್ಚು"[೨೪]

(ಇಲ್ಲಿಯವರೆಗೂ ರಕ್ತ ಅಶ್ರುಗಳನ್ನು ಸುರಿಸುತ್ತ ಕಳೆದ ಕಾಲ ಹಿಂದಾಗಿದೆ. ಸ್ತಬ್ದತೆ, ಆವ್ರತೆಗಳು ಕೆಲಸಕ್ಕೆ ಬರುವುದಿಲ್ಲ. ಸ್ವಾರ್ಥದ ಗುಂಡಿಗೆಯಲ್ಲಿ ಶೂಲಗಳನ್ನೂ ಚುಚ್ಚು. ಕತ್ತಲು ಬೇರುಗಳನ್ನು ಬೆಂಕಿಯಿಂದ ಸುಡು)

ಶಿವಾರೆಡ್ಡಿಯವರು ತೀವ್ರ ವಿಪ್ಲವನ್ನು ವ್ಯಕ್ತಮಾಡುತ್ತ

"ದ್ವಸಂ ಚೇಯಾಲ್ಸಿನದಾನ್ನೇ ದ್ವಸಂ ಚೇಸಿ
ಮರೋ ಮಹತ್ತರಮೈನದಾನ್ನಿ ಚೆಮಟಿತೋ ಕಡತಾಂ.....
ದೇನ್ನಿ ದ್ವಸಂ ಚೇಯಕುಂಡಾ । ದೇನ್ನಿ ನಿರ್ಮಿಸ್ತಾವು?
ಧ್ವಸಾ ಚೇಯುತಗಿಂದೇದಿ ಲೋಕಪೋತೇ ನೀರೇಲೋಕಂಲೋ
ನುವ್ವ ತಪ್ಪಕುಂಡಾ ಧ್ವಸಂ ಚೇಯ ತಗಿನ ವ್ಯಕ್ತಿವಿ"[೨೫]

(ದ್ವಂಸ ಮಾಡಬೇಕಾದದ್ದನ್ನೇ ದ್ವಸಂ ಮಾಡಿ ಮತ್ತೊಂದು ಮಹತ್ತರವಾದದ್ದನ್ನು ಬೆವರಿನಿಂದ ಕಟ್ಟುತ್ತೇನೆ... ಯಾವುದನ್ನೂ ಧ್ವಂಸ ಮಾಡದೇ ಯಾವುದನ್ನೂ ನಿರ್ಮಿಸುವೆ? ದ್ವಂಸ ಮಾಡುವುದು ಯಾವುದೂ ಇಲ್ಲದಿದ್ದರೆ ನಿನಗೀ ಲೋಕದಲ್ಲಿ ನೀನೇ ದ್ವಂಸ ಮಾಡಬೇಕಾದ ವ್ಯಕ್ತಿ) ಸಮಾಜದ ವರ್ಗ

ಬೇಧಗಳು ಇಲ್ಲವಾಗಬೇಕು. ದಲಿತರು ಶೋಷಣಾ ವಿಮುಕ್ತರಾಗಬೇಕು ಎಂದು ನಾವು ಬಯಸಿದರೆ ಸಂಘರ್ಷಣೆ ತಪ್ಪಿದ್ದಲ್ಲ. ಆದ್ದರಿಂದ ಶೋಷಕ ದುಷ್ಟಶಕ್ತಿಗಳನ್ನು ಧ್ವಂಸಮಾಡಬೇಕು. ಧ್ವಂಸ ಮಾಡದೇ ಶಾಂತಿ ಸಹನೆಯಿಂದಲೇ ನವಸಮಾಜವನ್ನು ತರುತ್ತೇವೆಂಬುದು ಮೂರ್ಖತನ ಮತ್ತು ಅಪಾಯಕಾರಿ ನಿಲುವು. ಅಂಥವರನ್ನು ಧ್ವಂಸ ಮಾಡಬೇಕೆಂಬಷ್ಟು ರೊಚ್ಚು ಶಿವಾರೆಡ್ಡಿಯವರದು.

ವಿಪ್ಲವವನ್ನು ಉಸಿರಾಗಿಸಿಕೊಂಡ ನಗ್ನಮುನಿ ಪರಂಪರಾಗತ ಶಾಂತಿ ಸಾತ್ವಿಕತೆಗಳಾಗಲೀ, ಅಹಿಂಸಾವಾದವಾಗಲಿ, ಸೌಜನ್ಯತೆಯಾಗಲೀ ಸಮಾಜ ಮಾರ್ಪಾಡಿಗೆ ಉಪಯೋಗಕ್ಕೆ ಬರುವುದಿಲ್ಲ ಎಂಬ ಅಂಶವನ್ನು ಹೇಳುತ್ತ ವಂದಿಸಿದರೆ ಕಬ್ಬುರಸವನ್ನು ಕೊಡುವುದಿಲ್ಲ. ವಂದಿಸಿದರೆ ವಿಷಸರ್ಪ ಕಚ್ಚದೆ ಬಿಡುವುದಿಲ್ಲ ಎನ್ನುತ್ತಾರೆ.

ತೂರ್ಪುಗಾಳಿ ಸಂಕಲನದ ಅಹಿಂಸೆ ಎಂಬ ಕವನದಲ್ಲಿ

"ಈ ನಾಯಕರ...ವ್ಯಾಪಾರಿಗಳ...ಜಮಿನ್ದಾರರ...ಬಿಜಿನೆಸ್‌ಮೆನ್‌ಗಳ ಬಲಹೀನರ ರಕ್ತಮಾಂಸ ತಿನ್ನುವ । ಈ ರಾಕ್ಷಸರ ಕ್ಷಮಿಸಿ । ಪುರಾಣ ಕೇಳುತ್ತ ನಿದ್ದೆ ಮಾಡಿದರೆ ಆರ್ಥಿಕ ಅಸಮಾನತೆ ತೊಲಗದು । ಈ ದರೋಡೆ ಬದಲಾಗದು" ಎಂದು ಮುಲಾಜಿಲ್ಲದೆ ಹೇಳುತ್ತಾರೆ. ಸಮಾಜದ ದುರ್ಬಲರಲ್ಲಿ ರೊಚ್ಚು ಮೂಡಲೇಬೇಕು. ದುಷ್ಟರನ್ನು ಶಿಕ್ಷಿಸಲು ಹಿಂಸೆ ಅನಿವಾರ್ಯ ಎಂಬುದು ಅವರ ನಿಲುವು.

"ದವಡೆಯ ಝಾಡಿಸಿ ಹೊಡೆದರೆ । ಹಲ್ಲುದುರಬೇಕು
ಮೊಣಕಾಲಿಂದ ತಿವಿದರೆ । ತೊಡೆ ಮುರಿಯಬೇಕು
ಮುಷ್ಟಿಯಿಂದ ಗುದ್ದಿದರೆ । ಹೆಗಲು ಮುರಿಯಬೇಕು
ಹೊಟ್ಟೆಯಲ್ಲಿರಿದರೆ । ಕರುಳು ಕಿತ್ತಿ ಬಯಲಿಗೆ ಬರಬೇಕು ।

ಶತಾಬ್ದಗಳು ಕಣ್ಣೀರಿನಿಂದ ತೊಯ್ದು ನೆಲದಲೆಲ್ಲಾ ರಕ್ತ ಚಿಮ್ಮಬೇಕು" ಎಂಬ ರೋಷ ಅವರದು.

ದೇಶವನ್ನು ನಗರ, ಗ್ರಾಮ, ಭೂಮಿ, ನದಿ, ಸಂಪತ್ತು ಎಂದೆಲ್ಲಾ ವಿಂಗಡಿಸಿ ಎಲ್ಲವೂ ತಮ್ಮದೆನ್ನುವ ಅವರ ತಿಳುವಳಿಕೆಯನ್ನೇ ಬುಡಮೇಲುಮಾಡುವಂತೆ ಶ್ರಮಜೀವಿ ವರ್ಗ ಪ್ರಜ್ಞಾವಂತರಾಗಿದ್ದಾರೆ. ಈಗ ಅವು ದುಡಿವವರದು. ಅಂದರೆ ತಮ್ಮದೆನ್ನುವ ಕಾಲ ಬಂದಿದೆ. ಹಾಗೆ ಪಡೆಯುವ ಬಲಬೇಕು ಅಂತಹಬಲಕುರಿತು ಗಿರೀಶಂ ಎಂಬ ಕವಿ ಹೀಗೆ ಹೇಳಿದ್ದಾರೆ.

"ಬಲಂ ಕಾವಾಲಿ ಬಲಮೇ ಕಾವಾಲಿ । ಪ್ರಯೋಗಿಂಚೇ ಬಲಾನ್ನಿ
ಬಟ್ಟಿ ಫಲಿತಂ ಉಂಟುಂದಿ । ಇಷ್ಟೇ ಮುಂದುನಿ ಬಟ್ಟಿ
ವ್ಯಾದಿಲೋ ಗುಣಂ ಕನಿಪಿಸ್ತುಂದಿ"[೨೬]

(ಬಲಬೇಕು, ಬಲವೇ ಬೇಕು, ಪ್ರಯೋಗಿಸುವ ಬಲದ ಮೇಲೆ ಫಲವಿರುತ್ತದೆ. ಕೊಡುವ ಔಷಧಿ ಮೇಲೆ ರೋಗದ ಗುಣ ಕಂಡುಬರುತ್ತದೆ)

ಚರಬಂಡರಾಜು ಅವರು ಭಾರತಮ್ಮನನ್ನ ಕುರಿತು
"ಚಡನು ಚಂಪಕಪೋತೇ
ಮನಮು ಚಡಿಪೋತಾಮುಚೇಡ ಪುರುಗುಲ ನೀಡ ಚೇರನೀಕಮ್ಮಾ।
ಪಂಟಮೀದ ಆಶ ಜಾರನೀಕಮ್ಮಾ । [೨೭]

ಕೇಡನ್ನ ಕೊಲ್ಲದೇ ಹೋದರೆ ನಾವೇ ಕೆಡುತ್ತೇವೆ,

ಒಟ್ಟಾರೆ ತೆಲಗು ಕವಿಗಳು ವಾಸ್ತವತೆಯ ಸರಿಯಾದ ತಿಳುವಳಿಕೆ ಇಟ್ಟುಕೊಂಡೂ ಜನರಲ್ಲಿ ತಮ್ಮ ಸ್ಥಿತಿಯ ಕಾರಣಗಳನ್ನು ಅರಿಯುವಂತೆ ಮಾಡಲು

ಸಮಾಜ ಶೋಷಕ ದುಷ್ಟಶಕ್ತಿಗಳ ವಿರುದ್ಧ ಬಂಡಾಯವೇಳುವಂತೆ ಮಾಡಲು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಜನರಲ್ಲಿ ಜಾಗೃತಿ ತರಲು ಹೆಣಗಿದ್ದಾರೆ. ಕ್ರಾಂತಿಯ ಹೋರಾಟಗಳಲ್ಲಿ ತಾವೂ ಭಾಗವಹಿಸಿದ್ದಾರೆ. ತೆಲಂಗಾಣ & ಶ್ರೀಕಾಕುಳಂ ರೈತಹೋರಾಟಗಳು ತೆಲುಗುಕಾವ್ಯವನ್ನು ಶ್ರೀಮಂತವಾಗಿಸಿವೆ. ಈ ಹಿನ್ನಲೆಯಲ್ಲಿ ಕೆಲವು ಕವಿಗಳಂತೂ ಸಾಯುಧ ಹೋರಾಟವೇ ಸಮಗ್ರ ಸಾಮಾಜಿಕ ಪರಿವರ್ತನೆಗೆ ಸಾಧನ ಎಂಬಹಂತಕ್ಕೂ ಬಂದುಮುಟ್ಟಿದ್ದಾರೆ. ನಮ್ಮ ಬಂಡಾಯ & ದಲಿತ ಕಾವ್ಯದ ಜನಪದ ಲಯಗಳನ್ನು ನೋಡಿದಾಗ ತೆಲುಗಿನ 'ಪ್ರಜಾಕಾವ್ಯ' ಎಂಬ ವಿಶಿಷ್ಟ ಪ್ರಕಾರವೇ ನೆನಪಿಗೆ ಬರುತ್ತದೆ. ಜನಸಾಮಾನ್ಯರಿಗಾಗಿ, ಜನರ ಪ್ರೇರಣೆಗಾಗಿ, ಜನಪದ ಭಾಷೆ ಮತ್ತು ಲಯಗಾರಿಕೆಯಲ್ಲಿ ಬರೆದ ಉತ್ತಮ ಕಾವ್ಯಗಳವು. ಶ್ರೀಶ್ರೀ ಯವರೂ ಈ ಪ್ರಕಾರದೊಂದಿಗೆ ದನಿಗೂಡಿಸಿದ್ದು ಮತ್ತೊಂದು ವೈಶಿಷ್ಟ್ಯ. ತೆಲುಗಿನ ಪ್ರಜಾಕಾವ್ಯದ ಮಾದರಿಯಲ್ಲಿ ಬೇಂದ್ರೆ, ಕಂಬಾರರ ನಂತರ ಸಿದ್ಧಲಿಂಗಯ್ಯ, ವಾಲೀಕಾರ, ಕೆ.ಬಿ.ಸಿದ್ಧಯ್ಯ, ಚಂದ್ರಶೇಖರ ತಾಳ್ಯ, ಲಕ್ಷ್ಮೀಪತಿ ಕೋಲಾರ, ಬಿ.ಟಿ.ಲಲಿತನಾಯ್ಕ, ಅನಸೂಯ ಕಾಂಬಳೆ ಮೊದಲಾದವರನ್ನೂ ಗುರ್ತಿಸಬಹುದಾಗಿದೆ.

ತೆಲುಗು ಸ್ವತಂತ್ರ್ಯೋತ್ತರ ಕಾವ್ಯದ ಅತಿಪ್ರಧಾನವಾದ ನೆಲೆಗಟ್ಟೆಂದರೆ ಮಾರ್ಕ್ಸ್‌ವಾದವೇ. ಕನ್ನಡದ ದಲಿತ ಬಂಡಾಯದ ಚಳುವಳಿಗಳಿಗೆ ಮಾರ್ಕ್ಸಿಜಂ ಒಳ್ಳೆಯ ಬೆಂಬಲ ಬದಗಿಸಿದೆ ಎನ್ನಬಹುದು. ಜನಪರ ಹೋರಾಟಗಳು ತೆಲುಗು ಕವಿಗಳನ್ನು ನಿರ್ಮಿಸಿದವು. ಜೈಲು ಕಷ್ಟನಷ್ಟ ಬಲಿದಾನಗಳಿಗೂ ಈಡುಮಾಡಿದವು. ಆ ಪ್ರಮಾಣಕ್ಕೆ ಹೋಲಿಸಿದಾಗ ಕನ್ನಡ ಕವಿಗಳ ಹೋರಾಟ ತೀವ್ರವಾಗಿಲ್ಲವಾದರೂ ಅಲ್ಲಲ್ಲಿನ ಹೋರಾಟಗಳು ಕನ್ನಡಕವಿಗಳಿಗೆ ದಾರಿ ನೀಡಿವೆ ಎನ್ನಬಹುದು.

❖

[illegible]

[illegible]

ಅಡಿ ಟಿಪ್ಪಣಿ

೧. ಕೊಡವಂಟಿ ಕುಟುಂಬರಾವು : ಸಾಹಿತ್ಯ ಪ್ರಯೋಜನಂ. ಪುಟ–೨೬

೨. ರಾಮಲಿಂಗಾರೆಡ್ಡಿ : ಕವಿತ್ವ ತತ್ವ ವಿಚಾರಮು. ಪುಟ–೨೫

೩. ಕಡಿಯಾಲ ರಾಮ ಮೋಹನರಾಯ್: ತೆಲುಗುಕವಿತಾವಿಕಾಸಂ. ಪುಟ–೧

೪. ಕೆ. ವಿ. ರಮಣರೆಡ್ಡಿ : ಅಡವಿ ಪುಟ–೭

೫. ಕಡಿಯಾಲ ರಾಮ ಮೋಹನರಾಯ್ : ತೆಲುಗು ಕವಿತಾ ವಿಕಾಸಂ. ಪುಟ–೯೨–೩೨೫

೬. ಗುರುಮೂರ್ತಿ ಪೆಂಡಕೂರು: ಸಮಗ್ರ ದಿಗಂಬರ ಕಾವ್ಯ. ಪು೧–೯, ೧೦.

೭. ಚರಬಂಡರಾಜು : ದಿಗಂಬರ ಕವುಲು

೮. ನಿಖಿಲೇಶ್ವರ : ದಿಗಂಬರ ಕವಲು

೯. ಶೇಷೇಂದ್ರಶರ್ಮ : ಬಿಂದುವು, ಸಿಂಧುವು. ಪುಟ–೫೯

೧೦. ಶೇಷೇಂದ್ರಶರ್ಮ : ನಾದೇಶಂ ನಾಪ್ರಜಲು. ಪುಟ–೧–೩೯

ಆಧುನಿಕ ಮಹಾಭಾರತಂ. ಪುಟ–೯೭

೧೧. ಕುಂದುರ್ತಿ : ಕುಂದುರ್ತ್ತಿ ಕೃತುಲು. ಪುಟ–೫೯೩, ೫೬೨

೧೨. ನಗ್ನ ಮುನಿ : ತೂರ್ಪುಗಾಲಿ. ಪುಟ–೩೩,೪

೧೩. ಬೊಯಿ ಭೀಮನ್ನ : ಗುಡೆಲು ಕಾಲಿಪೊತುನ್ನೈ. ಪುಟ–೭೭–೩೬

೧೪. ವಂಗಬಡು ಪ್ರಸಾದರಾವ್ : ಪುಲಿಕೇಶ. ಪುಟ–೭

೧೫. ಗದ್ದರ್ ಪಾಟಲು : ಸಿರಮಲ್ಲೆ ಸೆಟ್ಟಿಕಿಂದ, ಪುಟ–೭

೧೬. ಎಂಕೆ. ಸುಗಮಬಾಬು : ಸೂರಿಡು ಪುಟ–೧೪–೯

೧೭. ವಾರ್ಲಂ ವೆಂಕಟೇಶ್ವರಾವು : ನವಯುಗಾಲಬಾಟ ಪುಟ-೨೮

೧೮. ಅದ್ದೆಪಲ್ಲಿ ರಾಮಮೋಹನರಾವ್ : ರಕ್ತಸಂಧ್ಯ ಪುಟ-೩೦

೧೯. ಸಿ. ನಾರಾಯಣ ರೆಡ್ಡಿ : ದಿವ್ವೆಲು ಮುವ್ವಲು ಪುಟ-೭೬

೨೦. ಸಿ. ನಾರಾಯಣ ರೆಡ್ಡಿ : ಮಂಟಲೂ ಮಾನವುಡೊ ಪು. ೩೬

೨೧. ವರ ವರ ರಾವ್ : ಜೀವವಾಡಿ ಪುಟ-೩

೨೨. ರೆಂಟಾಲಗೋಪಾಲಕೃಷ್ಣ : ಸರ್ಪಯಾಗಂ ಪುಟ-೩೦

೨೩. ಶೇಷೇಂದ್ರಶರ್ಮ : ನಾದೇಶಂ ನಾ ಪ್ರಜಲು ಪುಟ-೪೪

೨೪. ರಾಮಿಶೆಟ್ಟಿ : ಕ್ರಾಂತಿ ಕಾಗಡಾವೆಲಿಗಿಂಚು ಪು.೪

೨೫. ಶಿವಾರೆಡ್ಡಿ : ದ್ವಂಸಂ ಪುಟ-೧

೨೬. ಗಿರೀಶಂ : ಪ್ಲಸ್ ಮೈನಸ್ ಪುಟ-೭೦

೨೭. ಚೆರಬಂಡರಾಜು : ಕವಿತಲುಪಾಡಲು ಪುಟ-೧೨,

ಭಾಗ-೩

ಅಧ್ಯಾಯ-೧

ಸಿದ್ಧಲಿಂಗಯ್ಯನವರ ಸಾಹಿತ್ಯ ಮತ್ತು ಗ್ರಹಿಕೆಯ ಹಲವು ನೆಲೆಗಳು

ಸಿದ್ಧಲಿಂಗಯ್ಯನವರ ಸಾಹಿತ್ಯ ಗ್ರಹಿಕೆಯ ಹಲವು ನೆಲೆಗಳು

ಕವಿ, ನಾಟಕಕಾರ, ಸಂಶೋಧಕ, ವಿಮರ್ಶಕ, ಹೋರಾಟಗಾರ ಹೀಗೆ ನಾನಾ ರೂಪಗಳಲ್ಲಿ ಕಾಣಿಸಿಕೊಂಡಿರುವ ಸಿದ್ಧಲಿಂಗಯ್ಯನವರು, ಬೆಂಗಳೂರಿನ ಕನ್ನಡ ಅಧ್ಯಯನಕೇಂದ್ರದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರು. ಪುಸ್ತಕ ಪ್ರಾಧಿಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ರಾಜಕಾರಣದಲ್ಲಿಯೂ ವಿಧಾನಪರಿಷತ್ತಿನ ಸದಸ್ಯರಾಗಿ ಗುರುತಿಸಿಕೊಂಡಿದ್ದ ಸಿದ್ಧಲಿಂಗಯ್ಯನವರು ಅಖಿಲಕರ್ನಾಟಕ ದಲಿತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಕೊಳೆಗೇರಿಯುಶಾಲೆ, ರಾತ್ರಿಶಾಲೆಗಳಲ್ಲಿಯೂ ಉಪನ್ಯಾಸಕರಾಗಿ ದುಡಿದ ಸಿದ್ಧಲಿಂಗಯ್ಯನವರು ತಮ್ಮ ಪ್ರತಿಭೆ ಪಾಂಡಿತ್ಯಕ್ಕಾಗಿ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡಮಿ, ರಾಜ್ಯಸಾಹಿತ್ಯ ಅಕಾಡಮಿ ಹಾಗೂ ಜನಪದ ಮತ್ತು ಯಕ್ಷಗಾನ ಅಕಾಡಮಿಯ ಸದಸ್ಯರಾಗಿ ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಉದ್ದಕ್ಕೂ ನೋವುಂಡ ಜನರ, ಅಸಹಾಯಕರ ಪರವಾದ ದನಿಯಾದ ಸಿದ್ಧಲಿಂಗಯ್ಯನವರು ಮೂಲಭೂತವಾಗಿ ಕವಿ ಎಂದೇ ಪ್ರಸಿದ್ಧರು. ಕಾವ್ಯ, ನಾಟಕ, ವಿಚಾರ, ವಿಮರ್ಶೆ, ಸಂಶೋಧನೆ. ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೆಲಸ ಮಾಡಿದ ಇವರು ಒಳ್ಳೆಯ ಭಾಷಣಕಾರರೂ ಹೌದು. ಬಾಲ್ಯದಿಂದಲೂ ಕೇಳುಗರನ್ನ ಮಂತ್ರಮುಗ್ಧಗೊಳಿಸಬಲ್ಲ ಚತುರತೆ. ಹೊಸ ಹೊಸ ಆಲೋಚನೆಗಳನ್ನು, ವಿಚಾರಗಳನ್ನು, ವೈಚಾರಿಕ ಸಂಗತಿಗಳನ್ನು ಅತ್ಯಂತ ತರ್ಕಬದ್ಧವಾಗಿ, ತಿಳಿಹಾಸ್ಯದೊಂದಿಗೆ ಮಾತನಾಡಬಲ್ಲ ಸಿದ್ಧಲಿಂಗಯ್ಯ ತಮ್ಮ ಕವಿತೆಗಳನ್ನ ಅಷ್ಟೇ ಸೊಗಸಾಗಿ ನಿವೇದಿಸಬಲ್ಲರು. ಎಂತಹ ಗಹನವಿಚಾರವೇ ಆಗಿರಲಿ ಅದನ್ನ ಕೇಳುಗರಿಗೆ ಅದರ ಅರ್ಥ ಮತ್ತು ಆಶಯಗಳನ್ನ ಸುಲಭವಾಗಿ ತಿಳಿಸಬಲ್ಲ ಕೆಲವೇ ಕೆಲವು ವಿದ್ವಾಂಸರಲ್ಲಿ ಸಿದ್ಧಲಿಂಗಯ್ಯ ಒಬ್ಬರು ಎನ್ನಬಹುದು.

ಹಲವು ನೋಟಗಳ ಸಿದ್ಧಲಿಂಗಯ್ಯನವರ ಭಿನ್ನ ನೆಲೆಗಳನ್ನ ವಿಚಾರ, ನಾಟಕ, ವಿಮರ್ಶೆ ಮತ್ತು ಸಂಶೋಧನೆ ಎಂದು ವಿಂಗಡಿಸಿಕೊಂಡು ಇಲ್ಲಿ ವಿವರಿಸಲಾಗುವುದು ಅನಂತರ ಕಾವ್ಯವನ್ನೇ ಪ್ರಧಾನ ಅಧ್ಯಾಯವನ್ನಾಗಿ ವಿಂಗಡಿಸಿಕೊಂಡಿರುವುದರಿಂದ ಇಲ್ಲಿ ಅವರ ಆತ್ಮಕತೆಗಳಾದ ಊರುಕೇರಿ–ಭಾಗ–೧ ಮತ್ತು ಭಾಗ–೨ರ ಮುಖ್ಯ ಸಂಗತಿಗಳನ್ನು ಗಮನಿಸಲಾಗುವುದು. ಇಲ್ಲಿನ ಈ ಕ್ರಮ ಸಿದ್ಧಲಿಂಗಯ್ಯನವರ ಸೃಷ್ಟಿಯ ವಿಸ್ತಾರ ಮತ್ತು ಭಿನ್ನತೆಗಳನ್ನ ಗುರ್ತಿಸುವುದಾಗಿದೆಯೇ ಹೊರತು ಪ್ರತಿ ನೋಟಗಳನ್ನ

ಆಳವಾಗಿ ಮತ್ತು ಸೂಕ್ಷ್ಮವಾಗಿ ನೋಡುವುದಲ್ಲ ಹಾಗಾಗಿ ಇಲ್ಲಿನ ನೋಟ ಸ್ಥೂಲವಾದುದೇ ವಿನಃ ಸೂಕ್ಷ್ಮ ಮತ್ತು ಆಳವಾದ ಚರ್ಚೆ ಇಲ್ಲಿಲ್ಲ ಏಕೆಂದರೆ ಅವುಗಳೆಲ್ಲದರ ಆಳವಾದ ಚರ್ಚೆಗಳು ಪ್ರಬಂಧದ ವಿಸ್ತಾರವನ್ನ ಹಿಗ್ಗಿಸಬಲ್ಲವು ಇಲ್ಲವೇ ಮತ್ತೊಂದೊಂದು ಸಂಶೋಧನಾ ಪ್ರಬಂಧಗಳಿಗೆ ಸರಕಾಗುವಷ್ಟು ವಸ್ತುವಾಗಬಲ್ಲವು.

ಅವತಾರಗಳು : ಈ ಕೃತಿಯ ಮುನ್ನುಡಿಯಲ್ಲಿ ಸಿದ್ಧಲಿಂಗಯ್ಯನವರು ಇದರ ಹುಟ್ಟನ್ನ ಕುರಿತು:- ಅವತಾರಗಳು ಕೃತಿ ಮೂಡಿ ಬಂದ ಬಗೆ ವಿಶಿಷ್ಟವಾಗಿದೆ. ಎಸ್. ಮಾಲತಿಯವರು "ಸಮದಾಯ ವಾರ್ತಾಪತ್ರದ' ಸಂಪಾದಕಿಯಾಗಿದ್ದರು. ಅವರು ತಮ್ಮ ಪತ್ರಿಕೆಗೆ ಏನನ್ನಾದರೂ ಬರೆಯುವಂತೆ ಕೋರಿದರು. ನಾನು ಅಳುಕಿನಿಂದಲೇ ಒಂದು ಲೇಖನವನ್ನು ಬರೆದೆ. ಆ ಲೇಖನ ಆಗಿನ ನನ್ನ ನಂಬಿಕೆ, ಚಿಂತನೆಗಳ ಪ್ರತಿಬಿಂಬವಾಗಿತ್ತು. ಲೇಖನದ ಗುಣಮಟ್ಟದ ಬಗ್ಗೆ ಅನುಮಾನ ಇದ್ದುದರಿಂದ ಇದನ್ನು ಕಾಮ್ರೇಡ್ ಮಾಲತಿಯವರಿಗೆ ಕೊಡದೆ ಹಾಗೇ ಇಟ್ಟುಕೊಂಡಿದ್ದೆ. ಒಂದು ದಿನ ಧೈರ್ಯಮಾಡಿ ಈಗ ಇಲ್ಲವಾಗಿರುವ ಕನ್ನಡದ ಶ್ರೇಷ್ಠ ವಿಮರ್ಶಕ, ಚಿಂತಕ, ಡಾ॥ ಡಿ. ಆರ್. ನಾಗರಾಜ್‌ರಿಗೆ ತೋರಿಸಿದೆ. ಅವರು ಸಾದ್ಯಂತವಾಗಿ ಓದಿ, 'ಇದಕ್ಕಿಂತ ಚೆನ್ನಾಗಿ ಬರೆಯಲು ಸಾಧ್ಯವಿಲ್ಲ' ಎಂಬ ಅಭಿಪ್ರಾಯ ನೀಡಿದರು. ಅವರು ಪ್ರಾಮಾಣಿಕವಾಗಿ ಹೇಳಿದರೋ, ಸ್ನೇಹದ ಕಾರಣಕ್ಕೆ ಹೇಳಿದರೋ ನನಗೆ ತಿಳಿಯದು. ಆದರೆ ಇದರಿಂದ ನನ್ನಲ್ಲಿ ಉತ್ಸಾಹ ಮೂಡಿತು. ಮಾಲತಿಯವರು ಈ ಲೇಖನವನ್ನು ಸಂತೋಷದಿಂದ ಪ್ರಕಟಿಸಿದರು. ಓದುಗರ ಪ್ರತಿಕ್ರಿಯೆ ಚೆನ್ನಾಗಿತ್ತು. ಪ್ರತಿ ಸಂಚಿಕೆಗೂ ಆ ಬಗೆಯ ಲೇಖನ ಬರೆಯಲು ಸಂಪಾದಕಿ ಸೂಚಿಸದರು. ಹೀಗೆ ಬರೆದ ಲೇಖನಗಳ ಸಂಕಲನವೇ ಈ ಕೃತಿ. ಇದಕ್ಕಾಗಿ ಎಸ್. ಮಾಲತಿಯವರಿಗೆ, ದಿವಂಗತ ಡಿ. ಆರ್. ನಾಗರಾಜ್ ಅವರಿಗೆ, ಸಮುದಾಯ ತಂಡಕ್ಕೇ ನನ್ನ ಹೃತ್ಪೂರ್ವಕ ಕೃತಜ್ಞತೆಗಳು' ಈ ಕೃತಿಗೆ 'ಅವತಾರಗಳು' ಎಂಬ ಹೆಸರನ್ನು ಸೂಚಿಸಿದವರು. ಡಾ। ಕಾಳೇಗೌಡ ನಾಗವಾರ ಅವರು. ಹಾಗೇ "ಅವತಾರಗಳು ಕೃತಿ ಕುರಿತಂತೆ ಅವತಾರಗಳು ಕೃತಿಯಲ್ಲಿ ದಾಖಲಾಗಿರುವ ಘಟನೆಗಳು ನಾನೇ ಸೃಷ್ಟಿಸಿ ಬರೆದವುಗಳಲ್ಲ. ಅವು ಜನರ ಹೇಳಿಕೆಗಳು. ಜನಪದ ವೃತ್ತಗಳು ನೀಡಿದ ಮಾಹಿತಿಗಳು ಕೆಲವನ್ನು ನಾನೇ ಕಣ್ಣಾರೆ ನೋಡಿ ಬರೆದಿದ್ದೇನೆ." ಎಂತಲೂ ಹೇಳಿದ ಅವರು "ಅವತಾರಗಳು ಕೃತಿ ಓದುಗರಲ್ಲಿ ಬಗೆಬಗೆಯ ಪ್ರತಿಕ್ರಿಯೆಯುನ್ನು ಮೂಡಿಸಿದೆ ದೇವರಲ್ಲಿ ನಂಬಿಕೆಯುಳ್ಳವರೂ ಇಲ್ಲಿಯು ಬರವಣಿಗೆಯನ್ನೆ ಓದಿ ನಕ್ಕಿದ್ದಾರೆ. ರಾಜ್ಯದ ಉನ್ನತ ಪೋಲೀಸ್ ಅಧಿಕಾರಿಗಳಲ್ಲಿ ಒಬ್ಬರಾದ ಶ್ರೀ ಕೆಂಪಯ್ಯನವರನ್ನು ನಾನು ಮೊದಲಸಲ ಬೇಟಿ ಮಾಡಿದಾಗ ಅವರು ನನ್ನನ್ನು ನೋಡಿದ ಕೊಡಲೇ ಮುಖದಲ್ಲಿ ನಗೆ ತಂದುಕೊಂಡರು. ಅದು ಎದ್ದು ಕಾಣುವ ನಗೆ. ನಾನು ಕುತೂಹಲಗೊಂಡೆ. ಅವತಾರಗಳು ಕೃತಿಯ ಒಂದು

ಘಟನೆ ನೆನಪಾಗಿ ನಗುಬಂತೆದು ಅವರು ಹೇಳಿದರು. "ಈ ದಕ್ಷ, ದಿಟ್ಟ ಪೋಲಿಸ್ ಅಧಿಕಾರಿ ಅವತಾರಗಳು ಕೃತಿಯನ್ನು ಓದಿದ್ದಾರೆಂದು ತಿಳಿದು ನನಗೆ ಪರಮ ಸಂತೋಷವಾಯಿತು. ಒಬ್ಬ ಬರಹಗಾರ ಬದುಕಿನಲ್ಲಿ ಇದಕ್ಕಿಂತ ಹೆಚ್ಚಿನದೇನನ್ನು ಬಯಸಬಲ್ಲ?" ಎಂದು ಕೃತಿ ಪ್ರಭಾವಿಸಿದ ನೆಲೆಯನ್ನು ಇಲ್ಲಿ ನೀಡಿದ್ದಾರೆ. ಹಾಗೇ ತಮ್ಮ ಒಳಗಿನ ಸ್ವಭಾವ ಸಹಜ ಬರಹಗಾರನನ್ನ ಕುರಿತಂತೆ "ನಾನು ಸಮುದಾಯ ವಾರ್ತಾಪತ್ರದಲ್ಲಿ ದೇವತೆಗಳನ್ನು ಗೇಲಿಮಾಡಿ ಬರೆಯುತ್ತಿದ್ದದನ್ನು ನನ್ನ ಡಾಕ್ಟರೇಟ್ ಪದವಿಯ ಸಂಶೋಧನಗೆ ಮಾರ್ಗದರ್ಶಕರಾಗಿದ್ದ ಗುರುಗಳಾದ ಡಾ॥ ಜಿ. ಎಸ್. ಶಿವರುದ್ರಪ್ಪನವರು ಓದಿದ್ದರೆಂದು ಕಾಣುತ್ತದೆ. ಒಮ್ಮೆ ಅವರು ನನಗೆ ದೇವರುಗಳನ್ನು ಗೇಲಿಮಾಡುವುದಕ್ಕಿಂತ ಸಾಂಸ್ಕೃತಿಕವಾಗಿ, ಗಂಭೀರವಾಗಿ ಚಿಂತಿಸಿ ಎಂದು ಹೇಳಿದರು. ನಾನು 'ನೀವು ಹೇಳಿದಂತೆ ಮಾಡುತ್ತೇನೆ ಸರ್' ಎಂದು ಒಪ್ಪಿಕೊಂಡೆ. ಆದರೆ ನನ್ನ ಹುಟ್ಟುಗುಣವಾಗ ಗೇಲಿಬುದ್ದಿ ಬದಲಾಗಲಿಲ್ಲ. ಅದು ಹಾಗೇ ಮುಂದುವರೆದು ಅವತಾರಗಳು ಎಂಬ ಕೃತಿಯ ರೂಪವನ್ನೇ ಧರಿಸಿ ನಿಂತಿತು. ಡಾ॥ ಜಿ. ಎಸ್. ಶಿವರುದ್ರಪ್ಪನವರು ಏನೆಂದುಕೊಂಡರೋ ಎಂಬ ಅಳುಕು ನನ್ನಲ್ಲಿತ್ತು. ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ 'ಸಾಹಿತ್ಯ ವಾರ್ಷಿಕದಲ್ಲಿ ಅವತಾರಗಳು ಕೃತಿಯನ್ನೇ ವಿಮರ್ಶೆ ಮಾಡುವ ಕೆಲಸ ಅವರದೇ ಆಯಿತು. ಅವತಾರಗಳು ಕೃತಿಯನ್ನ ಓದಿದ ನಂತರ ಅವರಿಗೆ ಏನನ್ನಿಸಿತೊ ವ್ಯಕ್ತಿತ್ವದಲ್ಲೂ ವಿಮರ್ಶೆಯಲ್ಲೂ ನಿಷ್ಠೂರವಾದಿಯಾದ ಡಾ॥ ಜಿ. ಎಸ್. ಎಸ್. ಪ್ರೋತ್ಸಾಹದಾಯಕ ಮಾತುಗಳನ್ನು ಬರೆದರು."

ಅವತಾರಗಳು ಕೃತಿ ಒಂದರ್ಥದಲ್ಲಿ ಜನಸಮುದಾಯದೊಳಗಣ ಬದುಕಿನ ನಾನಾಗುಣಗಳನ್ನ ತೋರುವ ಕೃತಿ ಶ್ರಮಿಕ ಸಮುದಾಯದಲ್ಲಿ ಏಕೆ ಹೇಗೆ ದೇವರುಗಳು ಬರುತ್ತವೆ. ಬಂದ ದೇವರ ಮಾತು, ಆಚಾರ, ಜನರನ್ನು ನಂಬಿಸಲು ಬಳಸುವ ಭಿನ್ನ ಭಿನ್ನ ತಂತ್ರಗಳು. ಪಡೆವ ತೊಂದರೆಗಳು, ಎದುರಿಸುವ ಜಗಳಗಳು, ಅದರಿಂದ ಬೀಳುವ ಲಾತು, ಸ್ಟೇಷನ್ನಿಗೂ ಹೋಗಬೇಕಾದ ಪ್ರಸಂಗ ಹೀಗೆ ಅವತಾರಗಳು ಕೂಡಾ ಜನಸಾಮಾನ್ಯರ ಒಳಗಿನ ದಶಾವತಾರಗಳಂತಿದೆ. ಹಸಿವು ಮತ್ತು ಗೌರವ ಎಂಬ ಎರಡು ಕಾರಣಕ್ಕಾಗೇ ಹುಟ್ಟಿಕೊಂಡ ಇಲ್ಲಿನ ದೇವರುಗಳು ಒಮ್ಮೆ ಮನೋರಂಜನೆಗಳನ್ನು ಒದಗಿಸುತ್ತದೆ. ಮತ್ತೊಮ್ಮೆ ಜನರ ಮೌಢ್ಯ, ಅಜ್ಞಾನಗಳನ್ನು ಅನಾವರಣಗೊಳಿಸುತ್ತದೆ. ಈ ಎರಡರ ಜಾಣ ಬೆಸುಗೆಯೇ ಈ ಕೃತಿ ಎನ್ನಬಹುದು.

ಇಲ್ಲಿ ಕರ್ನಾಟಕದ ಗ್ರಾಮೀಣ ಮತ್ತು ಪಟ್ಟಣದ ಪ್ರದೇಶಗಳಲ್ಲಿ ಕಂಡುಬರುವ ವಿವಿಧ ಬಗೆಯ ಜನಪದ ದೇವರುಗಳ ಸತ್ಯ, ಅಸತ್ಯಗಳನ್ನು ಒರೆಗೆ ಹಚ್ಚುವ ಮೋಸ ನಕಲಿತನಗಳನ್ನು ಬಯಲಿಗೆಳೆಯುವ ಗೇಲಿಗುಣವಿದೆ. ದೇವರ ಅಸ್ತಿತ್ವವನ್ನು

ಕುರಿತಂತೆ ನಿಷ್ಠೂರವಾಗಿ ವಿಮರ್ಶಿಸುವ ಕೃತಿ ಇದಲ್ಲ. ಸುಳ್ಳು ಪೊಳ್ಳುಗಳನ್ನ ಹಾಸ್ಯದ ಎಳೆಯಿಂದಲೇ ವಿಮರ್ಶಿಸುವ ಗುಣ ಇಲ್ಲಿನದು. ಹಳ್ಳಿ ದೇವರ ಸಾಹಸಗಳು, ಓಡುವ ದೇವತೆ, ಕೊರಳು ಬಳಸುವ ದೇವರು, ಕಳ್ಳಿ ತಿನ್ನುವ ಗಡ್ಡಾಂಜನೇಯ ಬಯಲಾದ, ಲಾತ ತಿನ್ನುವ ದೇವರುಗಳು ಮುಂತಾದ ಅಧ್ಯಾಯಗಳಿಂದ ಜನ ಸಂಸ್ಕೃತಿಯ ಬಗೆ ಬಗೆಯ ಚಿತ್ರಗಳನ್ನ ಬರೆದು ತೋರಿಸುವ ವಿಶಿಷ್ಟ ಪ್ರಕಾರವಿದು. ಇಲ್ಲಿರುವುದು ಮಾನವೀಯ ಸಮಾಜ.

ಊರುಕೇರಿಗಳಲ್ಲಿ ಮನೆಮಾಡಿಕೊಂಡ ಈ ದೇವರುಗಳು ಜನದ ಅಜ್ಞಾನ, ದಾರಿದ್ರ್ಯ ಮತ್ತು ಕುರುಡುತನಗಳನ್ನ ಬಳಸಿಕೊಂಡು ಗೇಲಿಗೆಬ್ಬಿಸಿದ್ದಾರೆ. ದೇವರುಗಳಲ್ಲಿ ಕಂಡುಬರುವ ವರ್ಗಬೇಧಗಳು, ಏಕವಚನ ಬಹುವಚನ ಪದಪ್ರಯೋಗಗಳು, ಜಾತಿಬೇಧಗಳು, ತರತಮಗಳು ನಮ್ಮ ಸಮಾಜದ ತದ್ರೂಪದಂತೆಯೇ ಇವೆ. ದೇವರುಗಳಿಗೆ ಸಂಬಂಧಿಸಿದ ಪೂಜೆಗಳು, ಆಚರಣೆಗಳು, ಹಬ್ಬಗಳು, ಜಾತ್ರೆಗಳು, ಅಲ್ಲೆಲ್ಲಾ ಇರುವ ಜ್ಞಾನ, ಅಜ್ಞಾನ, ನಿಗೂಢಸತ್ಯಗಳನ್ನ ಕವಿ ಇಲ್ಲಿ ದಾಖಲಿಸಿದ್ದಾರೆ.

ಗ್ರಾಮದೇವತೆಗಳು : ಡಾ॥ ಸಿದ್ಧಲಿಂಗಯ್ಯನವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ ಒಪ್ಪಿಸಿದ ಮಹಾಪ್ರಬಂಧ. ೭ ಅಧ್ಯಾಯಗಳಿರುವ ಈ ಮಹಾ ಪ್ರಬಂಧವು ಜನಪದ ದೈವಗಳ ಅಧ್ಯಯನಕ್ಕೆ ಒಳ್ಳೆಯ ಆಕರವಾಗಿದೆ. ಈ ಮಹಾಪ್ರಬಂಧವು ಗ್ರಾಮದೇವತೆಗಳ ಅಧ್ಯಯನದ ಅಗತ್ಯವನ್ನೂ ಇಂತಹ ಅಧ್ಯಯನಗಳ ಶಕ್ತಿ ಮತ್ತು ದೌರ್ಬಲ್ಯಗಳನ್ನು ಅವರು ಸಮರ್ಪಕವಾಗಿ ವಿಶ್ಲೇಷಿಸಿದ್ದಾರೆ. ಗ್ರಾಮದೇವತೆಯ ಪರಿಕಲ್ಪನೆಯನ್ನು ಅವರು ವರ್ಗೀಕರಣದಿಂದ ನೋಡಿದ್ದಾರೆ. ಹೀಗಾಗಿ ಇಲ್ಲಿ ರಾಷ್ಟ್ರೀಯದೇವತೆಗಳು, ಪ್ರಾಂತೀಯ ದೇವತೆಗಳು ಮತ್ತು ಸ್ಥಳೀಯದೇವತೆಗಳು ಎಂಬ ಪ್ರಭೇದಗಳು ಮಾತ್ರ ಚರ್ಚಾಸ್ಪದವಾದುದು. ಈ ಮಹಾಪ್ರಬಂಧದ ನಾಲ್ಕನೆಯ ಅಧ್ಯಾಯದಲ್ಲಿ ಸಿದ್ಧಲಿಂಗಯ್ಯನವರು ನೀಡಿದ ದೈವಗಳ ಕುರಿತಾದ ಪುರಾಣ ಮತ್ತು ಐತಿಹ್ಯಗಳ ಸಂಗ್ರಹ ವಿಶ್ಲೇಷಣೆಗಳು ಸಂಶೋಧಕರ ಶ್ರಮ ಮತ್ತು ಬೌದ್ಧಿಕ ಸಾಮರ್ಥ್ಯದ ಸಂಕೇತವಾಗಿದೆ. ಐದನೆಯ ಅಧ್ಯಾಯದಲ್ಲಿ ನೀಡಲಾದ ಆಚರಣೆಗಳ ಕುರಿತಾದ ವಿವರಣೆಯು ಕೂಡ ತುಂಬ ಸಮೃದ್ಧವಾಗಿವೆ. ಈ ಎಲ್ಲಾ ಮಾಹಿತಿಗಳನ್ನಾಧರಿಸಿ ಆರನೆಯ ಅಧ್ಯಾಯದಲ್ಲಿ ಅವರು ಗ್ರಾಮದೇವತೆಗಳ ವಿಶಿಷ್ಟತೆಯನ್ನು ಸಮರ್ಪಕವಾಗಿ ನಿರೂಪಿಸಿದ್ದಾರೆ. ಕಟ್ಟಳೆಗಳ ಉಲ್ಲಂಘನೆ, ಪ್ರತಿಭಟನೆ, ಜನೋಪಕಾರ, ನ್ಯಾಯನೀಡಿಕೆ, ಶಿಕ್ಷೆ ಮೊದಲಾದ ವಿಷಯಗಳು ಇಲ್ಲಿ ಚರ್ಚಿಸಲಾಗಿದೆ.

ಸಾಮಾನ್ಯವಾಗಿ ಇಂಥ ಕ್ಷೇತ್ರಗಳಲ್ಲಿ ಕೆಲಸ ಮಾಡುವವರು ಬಾವುಕರಾಗಿ, ವಿಷಯಗಳನ್ನು ಸರಳೀಕರಿಸಿ ಮಂಡಿಸುವುದುಂಟು. ಆದರೆ ಸಿದ್ಧಲಿಂಗಯ್ಯನವರು ಅಂಥ ಭಾವುಕತೆಗೆ ಬಲಿಬೀಳದೆ, ಆಧುನಿಕರಣಗೊಂಡ ಸಮಾಜದಲ್ಲಿ ಈ ದೈವಗಳು

ಯಾವ ಬಗೆಯ ಕೆಲಸಗಳನ್ನು ನಿರ್ವಹಿಸುತ್ತವೆ? ಜನರ ಯಾವ ಅಗತ್ಯಗಳನ್ನು ಅವು ಪೂರೈಸುತ್ತವೆ? ಎಂದು ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ. ಗ್ರಾಮದೇವತೆಯ ಅವಸಾನದೊಂದಿಗೆ ಕೆಳವರ್ಗದ ಸಂಸ್ಕೃತಿಯ ಅವಸಾನವಾಗುವ ಅಪಾಯ ಇದ್ದೇಇದೆ. ವೈವಿಧ್ಯವನ್ನು ವೈಶಿಷ್ಟಗಳನ್ನು ಹೊಂದಿರುವ ಈ ಸಂಸ್ಕೃತಿಯನ್ನು ಅದರ ಜನವಿರೋಧಿ ಆಶಯಗಳನ್ನು ದೂರಮಾಡಿ ಉಳಿಸಿಕೊಳ್ಳುವ ಅಗತ್ಯ ಇಂದು ಹೆಚ್ಚಾಗಿದೆ ಎಂಬ ಅವರ ಮಾತು ಗಂಭೀರವಾದ ಸಾಂಸ್ಕೃತಿಕ ಕಾಳಜಿಯಿಂದ ನಿಷ್ಪನ್ನಗೊಂಡಿದೆ. ಕರ್ನಾಟಕ ಜನಪದ ದೈವಗಳ ಬಗೆಗೆ ಮೊದಲಬಾರಿಗೆ ಈ ಕೃತಿಯು ಅತ್ಯಂತ ಉಪಯುಕ್ತವಾದ ಮಾಹಿತಗಳನ್ನ ನೀಡಿದೆ ಮತ್ತು ವಿಶ್ಲೇಷಣೆಯನ್ನು ನಡೆಸಿದೆ.

ಸಿದ್ಧಲಿಂಗಯ್ಯನವರ ಅಧಯ್ಯನ ಕೇವಲ ಸಂಗ್ರಹದ ಸ್ವರೂಪ ಮೀರಿ, ವಿಶ್ಲೇಷಣೆಯ ನೆಲೆಯಲ್ಲಿ ರೂಪಿತವಾಗಿರುವುದರಲ್ಲಿ ಈ ಕೃತಿಯ ಮಹತ್ವವಿದೆ. ಸ್ಥಳೀಯ ಅಧ್ಯಯನದ ಸಂಗ್ರಹವನ್ನು ಕೃತಿ ಸಾಕಷ್ಟು ನೀಡುತ್ತದೆಯಾದರೂ ಆಯಾ ಸಮಾಜದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸಂದರ್ಭದಲ್ಲಿ ಅವನ್ನು ಗ್ರಹಿಸಿ ವಿಶ್ಲೇಷಿಸುವುದರಿಂದ ಇದು ಕನ್ನಡದ ಇತರ ಅನೇಕ ಜಾನಪದ ಅಧ್ಯಯನ ಕೃತಿಗಳಿಗಿಂತ ಭಿನ್ನ. ಸಂಶೋಧನೆಯ ಸಾಂಪ್ರದಾಯಿಕ ವಿಧಾನದಿಂದ ಹೊರಬಂದ ಎನ್. ಎನ್. ಭಟ್ಟಾಚಾರ್ಯರ 'ಭಾರತೀಯ ಮಾತೃ ದೇವತೆಗಳು' ಅಧ್ಯಯನದ ಪ್ರಭಾವ ಸಿದ್ಧಲಿಂಗಯ್ಯನವರ ಮೇಲಾಗಿರುವುದು ಸ್ಪಷ್ಟ. ವಾಮಚಿಂತನೆ, ಜಾತಿನೆಲೆಗಳ ಗ್ರಹಿಕೆ ಒಂದಕ್ಕೊಂದು ಪುಷ್ಟಿ ನೀಡುತ್ತ ಇಲ್ಲಿನ ಅಧ್ಯಯನಕ್ಕೊಂದು ಒಳನೋಟ ನೀಡಿದೆ.

ಗ್ರಾಮದೇವತೆಯ ಪರಿಕಲ್ಪನೆಯನ್ನು ಸಿದ್ಧಲಿಂಗಯ್ಯ ವಿಸ್ತರಿಸುವ ಕ್ರಮ ಎಡನಿಲುವಿನದು. ಎಂಗೆಲ್ಸ್‌ನ 'ಆಸ್ತಿ ಮತ್ತು ಕುಟುಂಬಗಳ ಉಗಮ' ಕೃತಿಯನ್ನೋದಿದವರಿಗೆ ಈ ಚಿಂತನೆಯ ಬೀಜವೆಲ್ಲಿಯವೆಂಬುದನ್ನು ಗ್ರಹಿಸಲು ಕಷ್ಟವಾಗದು. ಆದರೆ ಪ್ರಪಂಚದ ಅನೇಕ ಆಚರಣೆಗಳ ಹಿನ್ನೆಲೆಯಲ್ಲಿ ಈ ಪರಿಕಲ್ಪನೆಯನ್ನವರು ವಿಸ್ತರಿಸುವ ಕ್ರಮ ಗ್ರಾಮದೇವತೆಗಳನ್ನು ಗ್ರಹಿಸುವ ಶ್ರಮದ ಮಂಡನೆಯಾಗಿ ಬೆಳೆದು ಬಂದು ಸೃಜನಶೀಲ ಅನುಭವವಾಗುತ್ತದೆ. ಎಂತಲೇ ಕೃತಿ ಕೇವಲ ಮಾಹಿತಿ ದಾಖಲೆಯಾಗದೆ ಸಂಶೋಧನಾಕ್ರಮದ ಅನುಭವವಾಗಿ ಮಾರ್ಪಡುತ್ತದೆ.

ಪ್ರಸ್ತುತ ಅಧ್ಯಯನವನ್ನೆ ಐದು ಹಂತದಲ್ಲಿ ಗ್ರಹಿಸುತ್ತಾರೆ. ಆಹಾರ ಸಂಗ್ರಹಣೆ, ಬೇಟೆ, ಪಶುಪಾಲನೆ, ಕೃಷಿ, ಕೈಗಾರಿಕೆ.

ಗ್ರಾಮದೇವತೆಗಳ ಕುರಿತ ಪುರಾಣ ಐತಿಹ್ಯಗಳಲ್ಲಿ ಅನೇಕ ಆಕರ್ಷಕ ವರ್ಗ, ಜಾತಿ ಸಂಬಂಧದ ನೆಲೆಗಳ ಕತೆಗಳನ್ನು ಸಿದ್ಧಲಿಂಗಯ್ಯ ಸಂಗ್ರಹಿಸಿದ್ದಾರೆ. ಮಾರಮ್ಮ

ಕುರಿತ ಕತೆಗಳಲ್ಲಿ ದೇಶದ ಜೀವನ ವಿಧಾನಕ್ಕೂ ಪೌರಾಣಿಕ ಸಂದರ್ಭಗಳ ನಮ್ಮ ನಂಬಿಕೆಗಳಿಗೂ ಸೂಕ್ಷ್ಮ ಒಳನೋಟಗಳನ್ನು ನೀಡಿದ್ದಾರೆ. ಸಂಶೋಧಕರು ಹೆಣ್ಣನ್ನು ಜೀವೋತ್ಪತ್ತಿಯ ಅಂಗವಾಗಿ, ಎಲ್ಲ ಚೈತನ್ಯದ ಮೂಲಶಕ್ತಿಯಾಗಿ ತಿಳಿದಿದ್ದಾರೆ. ಸಮಾಜದ ಬೆಳವಣಿಗೆಯ ಮೊದಲ ಹಂತದಲ್ಲಿಯೇ ಮಾತೃಧರ್ಮದ ಕೇಂದ್ರ ಸ್ಥಾನದಲ್ಲಿದ್ದವಳು ಹೆಣ್ಣು. ಮಾತೃ ಪ್ರಧಾನ ವ್ಯವಸ್ಥೆಯು ಪ್ರಪಂಚದ ಯಾವುದೇ ಭಾಗಕ್ಕಿಂತಲೂ ಹೇರಳವಾಗಿದ್ದಿತು. ಹೆಣ್ಣಿನ ಗರ್ಭಧಾರಣೆ ಮತ್ತು ಭೂಮಿಯ ಸಸ್ಯಧಾರಣೆ ಇವೆರಡಕ್ಕೂ ಸಾಮ್ಯತೆಯನ್ನು ಕಂಡುಕೊಂಡ ಆದಿಮಾನವ, ಹೆಣ್ಣು ಮತ್ತು ಭೂಮಿ ಇವೆರಡೂ ಪೂಜ್ಯವಸ್ತುಗಳೆಂದು ಭಾವಿಸಿದ. ಕೃಷಿಯ ಆರಂಭ. ಚರಿತ್ರೆಯಲ್ಲಿ ಹೆಣ್ಣಿನ ಸ್ಥಾನಮಾನಗಳನ್ನು ಗಮನಾರ್ಹವಾಗಿ ಮಾಡಿತಲ್ಲದೆ ಅನೇಕ ಸ್ತ್ರೀ ದೇವತೆಗಳ ಹುಟ್ಟಿಗೆ ಕಾರಣವಾಯಿತು.

ಮಾರಿದೇವತೆಯ ಆಚರಣೆಯೆಂದರೆ ಮಳೆಬೆಳೆ ಸಂತಾನಾಭಿವೃದ್ಧಿ ಮತ್ತು ಯುದ್ಧ ಪೂರ್ವದ ಹಿಂಸಾತ್ಮಕ ಹೋರಾಟದ ತಯಾರಿ ಆಗಿರುತ್ತಿತ್ತು. ಆದರೆ ಕಾಲಾನಂತರದಲ್ಲಿ ಮಾರಿ ಹಬ್ಬಕ್ಕೆ ಯಜ್ಞ ವಿಧಿಯ ಸ್ವರೂಪವಲ್ಲದೆ ಅನೇಕ ಆರ್ಯ ಪುರಾಣದ ಕಥೆಗಳ ಸೇರ್ಪಡೆ ಆದವು. ಲೇಖನ ಸ್ವರೂಪದಲ್ಲಿ ಅಲ್ಲಲ್ಲಿ ಪ್ರಕಟವಾಗುತ್ತಿದ್ದ ಮಾರಿದೇವತೆಯ ಅಧ್ಯಯನಕ್ಕೆ ತಮ್ಮ ನಿಬಂಧದಲ್ಲಿ ಒಂದು ವೇದಿಕೆಯನ್ನು ಕಲ್ಪಿಸಿ, ಮುಂದಿನ ವಿದ್ವಾಂಸರಿಗೆ ಇದೊಂದು ಆಧಾರಗ್ರಂಥವಾಗುವಂತೆ ಸಿದ್ಧಲಿಂಗಯ್ಯನವರು ಕೃತಿಯನ್ನು ಪ್ರಕಟಿಸಿದ್ದಾರೆ.

ನಾಟಕ : ನಾಟಕೀಯ ಗುಣ ಸಿದ್ಧಲಿಂಗಯ್ಯನವರ ಬರಹದ ಬಹುಮುಖ್ಯ ಗುಣ 'ಕತ್ತೆ ಮತ್ತು ಧರ್ಮದ' ಕವಿತೆಯಲ್ಲೇ ನಾವು ಇಂತಹ ಗುಣವನ್ನ ಗಮನಿಸಬಹುದು. ಇದು ಅವರ ಅವತಾರಗಳು ಕೃತಿಯಲ್ಲೂ ಪ್ರಧಾನವಾದ ಅಂಶವಾಗಿದೆ. ಅಂತಲೇ ಸಿದ್ಧಲಿಂಗಯ್ಯ ಹಲವು ನಾಟಕಗಳಿಗೆ ಹಾಡು ಬರೆಯುತ್ತಲೇ ತಾವೂ ನಾಟಕ ಬರೆದರು ಅವುಗಳಲ್ಲಿ ಮುಖ್ಯವಾದುದೇ ಏಕಲವ್ಯ ಇದರ ಜೊತೆಗೆ ಅವರು ಪಂಚಮ ಮತ್ತು ನೆಲಸಮ ಎಂಬ ನಾಟಕಗಳನ್ನೂ ಬರೆದಿದ್ದಾರೆ. ಸಿದ್ಧಲಿಂಗಯ್ಯನವರ ಏಕಲವ್ಯಕ್ಕೆ ಇತಿಹಾಸವನ್ನ ಮುರಿದು ಕಟ್ಟುವ ಗುಣವಿದೆ. ಐತಿಹಾಸಿಕವಾದುದನ್ನ ವಾಸ್ತವ ಪ್ರಜ್ಞೆಗೆ ಅಳವಡಿಸಿ ನೋಡುವ ಗುಣವಿದೆ. ಬಹುಶಃ ಇವರಿಗೆ ಇಂತಹ ನೋಟ ಟಿ. ಪಿ. ಕೈಲಾಸಂ ಮತ್ತು ಕುವೆಂಪು ಅವರಿಂದಲೇ ಸಿಕ್ಕಿದೆ. ಇಂತಹ ನೋಟದಿಂದಲೇ ನಮ್ಮ ಕನ್ನಡ ಸಾಹಿತ್ಯದಲ್ಲಿ ನಾಟಕಕಾರರಾಗಿ ಹೆಸರು ಮಾಡಿದವರು ಲಂಕೇಶ್, ಕಾರ್ನಾಡ್ ಮತ್ತು ಎಚ್. ಎಸ್. ಶಿವಪ್ರಕಾಶ್.

ಸಿದ್ಧಲಿಂಗಯ್ಯನವರ ಏಕಲವ್ಯ ಹಳೆಯ ಕರ್ಮ ಸಿದ್ಧಾಂತದಿಂದ ಬಂದವನಲ್ಲ ಬದಲಾಗಿ ಆಧುನಿಕ ಮಾರ್ಕ್ಸ್‌ವಾದ ಮತ್ತು ಅಂಬೇಡ್ಕರ್ ಸಿದ್ಧಾಂತಗಳಿಂದ ಹುಟ್ಟಿದವನು. ಅಲ್ಲಿ ವರ್ಗ ದೃಷ್ಟಿ ಪ್ರಧಾನವಾದರೆ ಇಲ್ಲಿ ಸಮತಾ ದೃಷ್ಟಿ

ಪ್ರಧಾನವಾಗಿವೆ. ಅಲ್ಲಿ ಉಳ್ಳವರು ಮುಖ್ಯರಾದರೆ ಇಲ್ಲಿ ಶ್ರಮಿಕರು ಮುಖ್ಯವಾಗುತ್ತಾರೆ ಅಂತಲೇ ಈ ನಾಟಕ ನಾಗರೀಕ ಮತ್ತು ಕಾಡಿನ ಸಮುದಾಯಗಳ ವೈಚಾರಿಕ ಭಿನ್ನತೆಗಳನ್ನ ಗುರುತಿಸುತ್ತದೆ.

ದಲಿತ ಮತ್ತು ಬಂಡಾಯದ ಈ ದಶಕಗಳಲ್ಲಿ ನಾಟಕ ಪ್ರಕಾರವು ಹೆಚ್ಚು ಹೆಸರು ಮಾಡಿದೆ. ಹವ್ಯಾಸಿ ರಂಗಭೂಮಿ, ಬೀದಿ ನಾಟಕಗಳಂತಹ ಪ್ರಯೋಗಶೀಲ ಮನಸ್ಸುಗಳು ಈ ಪ್ರಕಾರವನ್ನ ಮನೋರಂಜನೆಯ ಆಚೆಗೆ ವೈಚಾರಿಕ ಎಚ್ಚರವನ್ನ ಬಿತ್ತುವ ಸಾಮಾಜಿಕ ಚಳುವಳಿಯನ್ನ ರೂಪಿಸುವ ಪ್ರಧಾನ ಅಸ್ತ್ರವಾಗಿಯೂ ಬಳಸಿಕೊಂಡಿವೆ. ಈ ನೆಲೆಯಲ್ಲಿ ಸಿ. ಜಿ. ಕೃಷ್ಣಸ್ವಾಮಿ, ಸಿ. ಬಸವಲಿಂಗಯ್ಯ, ಪ್ರಸನ್ನ, ಟಿ. ಎನ್. ಸೀತಾರಾಂ, ಜನಾರ್ಧನ ಮೊದಲಾದವರು ತಮ್ಮದೇ ಹೆಸರು ಮಾಡಿದ್ದಾರೆ.

ಬೆಲ್ಚಿ, ಪತ್ರೆ ಸಂಗಪ್ಪನಕೊಲೆ, ಕುದುರೆಮೋತಿ ನಾಟಕಗಳು ವಾಸ್ತವ ಘಟನೆಗಳನ್ನಾಧರಿಸಿ ರಚನೆಯಾದರೆ ಕಾವ್ಯ, ಕಥೆ, ಕಾದಂಬರಿ ಆಧರಿಸಿದ ನಾಟಕಗಳೂ ಮತ್ತೊಂದು ರೀತಿಯ ಪ್ರಯೋಗಗಳಾಗಿವೆ. ಕುಸುಮಬಾಲೆ, ಒಡಲಾಳ, ಬೇಲಿ ಮತ್ತು ಹೊಲ. ಕತ್ತೆ ಮತ್ತು ಧರ್ಮ, ಅಲ್ಲೇ ಕುಂತವರೇ ಮೊದಲಾದವು.

ಸಿದ್ಧಲಿಂಗಯ್ಯನವರು ನಾಟಕರಚನೆಯನ್ನ ಕುರಿತು "ನಾನು ನಾಟಕಗಳನ್ನು ರಂಗಭೂಮಿಗೋಸ್ಕರ ಪ್ರಯೋಗ ಮಾಡಲಿಕ್ಕಾಗಿ ರಚಿಸಿದ್ದು. 'ಸಮುದಾಯದ' ಪ್ರಸನ್ನ ಅವರು ನಾವು ನಾಟಕ ಆಡುತ್ತೇವೆ ಒಂದು ನಾಟಕ ಬರೆದುಕೊಡಿ ಅಂತ ಕೇಳಿದಾಗ 'ಪಂಚಮ' ನಾಟಕ ಬರೆದುಕೊಟ್ಟೆ. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಸಮುದಾಯದವರು ಕೇಳಿದ್ದಕ್ಕೆ 'ನೆಲಸಮ' ನಾಟಕವನ್ನು ಬರೆದುಕೊಟ್ಟೆ. ಆರ್. ನಾಗೇಶ್‌ರವರು ಕೇಳಿದ್ದಕ್ಕಾಗಿ 'ಏಕಲವ್ಯ' ನಾಟಕವನ್ನು ಬರೆದುಕೊಟ್ಟೆ. ಒಂದು ಸೀನ್ ಬರೆದುಕೊಟ್ಟು ನಟರೆಲ್ಲ ಪ್ರಾಕ್ಟೀಸ್ ಮಾಡುತ್ತಿದ್ದಾಗ ಅಲ್ಲೆ ಕುಳಿತು ಅದನ್ನು ನೋಡುತ್ತಿದ್ದ ಹಾಗೇ ಮುಂದಿನ ಸೀನ್ ಬರೆದು ಕೊಡುತ್ತಿದೆ"[೩] ಎಂದು ಹೇಳಿಕೊಂಡಿದ್ದಾರೆ.

"ಆಯಾ ಲೇಖಕರ ಅನುಭವಾತ್ಮಕ ಹಿನ್ನೆಲೆಯಲ್ಲಿ ಪೌರಾಣಿಕ ಪಾತ್ರಗಳು ಸಾಮಾಜಿಕ ಮೌಲ್ಯಗಳನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಬಳಕೆಯಾಗಿವೆ. ಈ ನೆಲೆಯಲ್ಲಿ ಏಕಲವ್ಯ, ಶಂಬೂಕ, ತ್ರಿಶಂಕು, ಅಹಲ್ಯೆ, ಊರ್ಮಿಳೆ, ದ್ರೌಪದಿ, ಸೀತೆ, ಶಕುಂತಲೆ, ಮುಂತಾದ ಪಾತ್ರಗಳು ಹೊಸಚಿಂತನೆಗಳ ಮುಖೇನ ಮಾನವೀಯ ನೆಲೆಯಲ್ಲಿ ಅಭಿವ್ಯಕ್ತಗೊಂಡಿವೆ."[೪] "ಪುನರ್ ವ್ಯಾಖ್ಯಾನವೆಂಬುದು ಪುರಾಣದಂಥ ಸಿದ್ಧ ವಸ್ತುವನ್ನು ತನಗಿಷ್ಟ ಬಂದಂತೆ ಬಳಸಿಕೊಳ್ಳುವ ಸೃಜನಶೀಲ ಲೇಖಕನ ಸ್ವಾತಂತ್ರ್ಯ ಮಾತ್ರ ಅಲ್ಲ; ತಮ್ಮ ಕಾಲದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಲೇಖಕರು ಮತ್ತೆ ಮತ್ತೆ ಮಾಡುವ ತಾತ್ವಿಕ ಪ್ರಯತ್ನವಾಗಿದೆ."[೫]

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಏಕಲವ್ಯ ಹೆಚ್ಚು ತಾತ್ವಿಕ ಜಿಜ್ಞಾಸೆಗೆ ಒಳಗಾದ ಪೌರಾಣಿಕ ಪಾತ್ರ. ಕುವೆಂಪು ಅವರ ಬೆರಳ್‌ಗೆ ಕೊರಳ್, ಗೋವಿಂದ ಪೈ ಅವರ ಹೆಬ್ಬೆರಳು, ಕೈಲಾಸಂ ಅವರ ಪರ್ಪಸ್, ಸತ್ಯಾನಂದ ಪಾತ್ರೋಟ ಅವರ ಮತ್ತೊಬ್ಬ ಏಕಲವ್ಯ ಮೊದಲಾದ ನಾಟಕಗಳು ಏಕಲವ್ಯನನ್ನ ವಸ್ತುವನ್ನಾಗಿರಿಸಿಕೊಂಡು ರಚಿಸಿದ ಭಿನ್ನ ಮಾದರಿಗಳಾಗಿವೆ.

ಸಿದ್ಧಲಿಂಗಯ್ಯನವರ ಏಕಲವ್ಯ ನಾಟಕವು ದಲಿತರ ಎಚ್ಚೆತ್ತ ಪ್ರಜ್ಞೆಯ ಹೋರಾಟದ ರೂಪವಾಗಿ ಮೂಡಿರುವುದು. ಈ ನಾಟಕ ಯಕ್ಷಗಾನ, ದೊಡ್ಡಾಟಗಳ ಮಾದರಿಯಲ್ಲಿ ಕರ್ನಾಟಕದ ಉದ್ದಗಲಕ್ಕೂ ವ್ಯಾಪಿಸಿ ಯಶಸ್ವಿ ಪ್ರಯೋಗವನ್ನು ಕಂಡಿದೆ.

ಅಧಿಕಾರಶಾಹಿ ವ್ಯವಸ್ಥೆ ಹೇಗೆ ತನ್ನ ಕಪಿಮುಷ್ಟಿಯಲ್ಲಿ ಇಡೀ ಸಾಮಾಜಿಕ ಬದುಕನ್ನ ಬಂಧಿಸಿದೆ ಮತ್ತು ನಿಯಂತ್ರಿಸುತ್ತದೆ ಎಂಬುದನ್ನ ಈ ನಾಟಕ ತಿಳಿಸುತ್ತದೆ.

ಶ್ರೇಣಿಕೃತ ಜಾತಿ ಆಧಾರಿತ ಸಾಮಾಜಿಕ ವ್ಯವಸ್ಥೆಯ ಸ್ಪಷ್ಟ ಅರಿವಿದ್ದ ಏಕಲವ್ಯನ ಸೋದರಮಾವ " ನಿನ್ನ ಆಸೆ ನೋಡಿ ನನಗೂ ಸಂತೋಷ ಏಕಲವ್ಯ ಆದರೆ ದ್ರೋಣಾಚಾರ್ಯರು ನಿನಗೆ ಇದ್ಯೆ ಕಲಿಸಲ್ಲ. ನೀನು ಅಲ್ಲಿಗೆ ಹೋದರೆ ಅವರಿಗೆ ಸೂತಕ. ಇನ್ನೂ ಇದ್ಯೆ ಕಲಿಸ್ತಾರ, ಬ್ಯಾಡ" ಎನ್ನುತ್ತಾನೆ. ದ್ರೋಣರು ಕೂಡಾ "ಏಕಲವ್ಯ ನಿನ್ನ ಕನಸು ನನಸಾದರೆ ಲೋಕದ ದುರಂತಕ್ಕೆ ನಾಂದಿಯಾಗುತ್ತದೆ. ನಿನಗೆ ಗುರು ಮುಖೇನ ವಿದ್ಯೆ ಕಲಿಸಲು ಶಾಸ್ತ್ರ ಸಮ್ಮತಿಯಿಲ್ಲ ನಿನ್ನನ್ನ ಶಿಷ್ಯನನ್ನಾಗಿ ಸ್ವೀಕರಿಸಲು ನನಗೆ ಸಾಧ್ಯವಿಲ್ಲ" ಇದಕ್ಕೇ ಪ್ರತಿಯಾಗಿ ಏಕಲವ್ಯ "ಪೂಜ್ಯರೇ... ಕೀಳು ಕುಲದಲ್ಲಿ ಹುಟ್ಟಿದ ತಪ್ಪಿಗೆ ಜೀವನಪೂರ್ತಿ ನಾನು ಈ ವಿದ್ಯೆಯಿಂದ ದೂರವಾಗಬೇಕೆ?" ಎಂದು ಪ್ರಶ್ನಿಸಿದ್ದಕ್ಕೆ ದ್ರೋಣರು "ಈ ಬಗೆಯ ಅಸಮಾನತೆ ನಿಸರ್ಗದಷ್ಟೇ ಸಹಜ. ಏಕಲವ್ಯ ಎಲ್ಲ ಮರಗಳೂ ಸಮವಾದ ಎತ್ತರಕ್ಕೆ ಬೆಳೆಯಲಾರವು. ಎಲ್ಲ ಬಂಡೆಗಳು ಒಂದೇ ಗಾತ್ರ ಇರಲಾರವು. ಪೂರ್ವಜನ್ಮದ ಪಾಪಪುಣ್ಯಗಳಿಗನುಗುಣವಾಗಿ ಮನುಷ್ಯ ಮೇಲು ಕೀಳು ಜಾತಿಗಳಲ್ಲಿ ಹುಟ್ಟುತ್ತಾನೆ. ಈ ಜನ್ಮದಲ್ಲಿ ಪಾಲಿಗೆ ಬಂದ ವೃತ್ತಿಯನ್ನು ನಿಷ್ಕಾಮದಿಂದ ನಿರ್ವಹಿಸಿದರೆ ಮುಂದಿನ ಜನ್ಮದಲ್ಲಿ ಒಳ್ಳೆಯದಾಗುತ್ತದೆ" ಹೀಗೆ ಮೇಲುಕೀಳಿನ ಕರ್ಮ ಸಿದ್ಧಾಂತದ ಕುತಂತ್ರಗಳನ್ನೆ ಸಿದ್ಧಲಿಂಗಯ್ಯ ತಣ್ಣಗೇ ನೀಡಿದ್ದಾರೆ.

ಈ ನಾಟಕ ಜಾತಿ ವ್ಯವಸ್ಥೆಯನ್ನು ವಿರೋಧಿಸುವುದರೊಂದಿಗೆ ವರ್ಗ ವ್ಯವಸ್ಥೆಯನ್ನು ವಿರೋಧಿಸುತ್ತದೆ. ಇದನ್ನ ಏಕಲವ್ಯನ ಮಾತುಗಳಲ್ಲಿ ನೋಡಬಹುದು. "ಕರ್ಣ ನನಗೂ ನಿನಗೂ ಹೋಲಿಕೆಯೆಲ್ಲಿ? ನೀನೀಗ ಸೂತಪುತ್ರನಲ್ಲ. ಅದನ್ನ ಮೀರಿ ಬೆಳದಿದ್ದೀಯ. ಈಗ ಅಂಗಾಧಿಪತಿ, ಆದರೆ ನಾನಿನ್ನೂ ಬೇಡ. ಅದಕ್ಕಾಗಿಯೇ

[illegible]

ಕೌರವರು, ಪಾಂಡವರಿಬ್ಬರ ಹಿತಾಸಕ್ತಿಗಳು ನನಗೆ ಬೇರೆಯಾಗಿ ಕಾಣುತ್ತಿಲ್ಲ. ಸುಯೋಧನ ನಿನ್ನನ್ನೂ ಒಪ್ಪಿಕೊಂಡಿದ್ದಾನೆ. ಇಡೀ ಸೂತಕುಲವನ್ನಲ್ಲ, ಸೂತಕುಲ ಹಿಂದೆ ಇದ್ದ ಸ್ಥಿತಿಯಲ್ಲಿಯೇ ಇದೆ. ದುರ್ಯೋಧನನ ಆಶ್ರಯದಲ್ಲಿ ನೀನು ಮಾತ್ರ ಬೆಳೆದೆ. ನೀನು ನಿನ್ನೆ ಕುಲದವರನ್ನೂ ಕಣ್ಣು ತುಂಬ ನೋಡಿಲ್ಲ. ಅವರೊಡನೆ ಒಡನಾಟ ಮಾಡಿಲ್ಲ. ಬೆಸ್ತವ ಮೈ ವಾಸನೆಯಿಂದ ದುರ್ಯೋಧನ ಹತ್ತುಗಾವುದ ದೂರ ಓಡುವ ಸ್ಥಿತಿಯಲ್ಲಿದ್ದೀಯೇ ನನ್ನ ಮಾತು ಸುಳ್ಳೆ ದಾನಶೂರ. ನನಗೆ ಎರಡೂ ಶಕ್ತಿಗಳೂ ಒಂದೇ. ಅವರವರ ಸ್ವಾರ್ಥಕ್ಕಾಗಿ ಬಡಿದಾಡುತ್ತಿದ್ದಾರೆ. ಇವರಿಬ್ಬರ ಕಚ್ಚಾಟದಲ್ಲಿ ನಾವೇಕೆ ಬಲಿಪಶುವಾಗಬೇಕು."

ಸಿದ್ಧಲಿಂಗಯ್ಯನವರು ದಲಿತ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದ ಕಾರಣ ಆ ಎಲ್ಲ ಚಳುವಳಿಗಳ ಆಳವಾದ ಅನುಭವದ ಪ್ರಾಮಾಣಿಕ ಪ್ರತಿಭಟನೆಯ ಸ್ವರೂಪವನ್ನು ಈ ನಾಟಕದಲ್ಲಿ ಕಾಣಬಹುದಾಗಿದೆ. ಕಾಡಿನ ಮತ್ತು ನಾಡಿನ ಮಧ್ಯೆ ನಡೆದ ಸಂಘರ್ಷದ ಕಥೆಯಾಗಿ ಏಕಲವ್ಯನ ಬದುಕು ಸಿದ್ಧಲಿಂಗಯ್ಯನವರಿಗೆ ಗೋಚರವಾಗಿದೆ. ಕಾಡು ಪ್ರತಿನಿಧಿಸುವ ನಿಸರ್ಗ ಸಹಜ ಮುಗ್ದತೆ ಮತ್ತು ಸರ್ವಜೀವ ಚೈತನ್ಯವನ್ನು ಕಾಪಾಡುವ ಭರವಸೆಯನ್ನು ಏಕಲವ್ಯ ಮತ್ತವನ ಸಹಚರರು ಪ್ರತಿನಿಧಿಸಿದರೆ, ನಗರ ನಾಗರೀಕತೆಯ ಸ್ವಾರ್ಥ ಅಹಂಕಾರ ಮತ್ತು ಕ್ರೌರ್ಯದ ಸಾಕಾರವಾಗಿ ರಾಜ ಮತ್ತವನ ಅನುಚರ ವರ್ಗ ಕಾಣಿಸಿಕೊಳ್ಳುತ್ತದೆ. ಕೇವಲ ವೈಯಕ್ತಿಕ ನೆಲೆಯಿಂದ ಹುಟ್ಟಿದ ಅಭಿಮಾನ ಛಲ ಮತ್ತು ಹೊಟ್ಟೆಕಿಚ್ಚಿನಿಂದಾಗಿ ಸಂಭವಿಸಿದ ಮಹಾಭಾರತದ ಯುದ್ಧ ಇದಾವುದಕ್ಕೂ ಸಂಬಂಧವಿಲ್ಲದ ಸಾವಿರಾರು ಸೈನಿಕರನ್ನು ಬಲಿತೆಗೆದುಕೊಳ್ಳುವ ಬಗೆಗೆ ನಾಟಕಕಾರರ ತಿರಸ್ಕಾರವಿದೆ. ಆದರೆ ಏಕಲವ್ಯನು ಸಾಧಿಸ ಹೊರಟ ಬಿಲ್ವಿದ್ದೆ ಲೋಕಕಲ್ಯಾಣಕ್ಕಾಗಿ ತನ್ನ ನಾಡಿನ ರಕ್ಷಣೆಗಾಗಿ ಮೀಸಲಾದ ವಿದ್ಯೆ. ಪ್ರೀತಿ ಪಾತ್ರರನ್ನು ನೋಡಿ ವಿದ್ಯೆಯನ್ನು ಕಲಿಸ ಬೇಕೆನ್ನುವ ನಂಬಿಕೆಯಿರುವ ಹಿಂದೂ ಪರಂಪರೆಯಲ್ಲಿ ಕ್ಷತ್ರಿಯರಿಗೂ ಬೇಡರಿಗೂ ಇರುವ ಈ ವ್ಯತ್ಯಾಸ ವ್ಯಂಗ್ಯಪೂರ್ಣವಾಗಿದೆ.

ಬಲಗೈ ಹೆಬ್ಬೆರಳನ್ನು ಕತ್ತರಿಸಿಕೊಟ್ಟ ಏಕಲವ್ಯನು ಮುಂದೆ ಎಡಗೈಯಲ್ಲಿ ಬಿಲ್ಲು ಹಿಡಿದು ಕ್ರಾಂತಿಯ ದುಂದುಬಿ ಮೊಳಗಿಸಿದನೆಂಬ ನಾಟಕಕಾರರ ಕಲ್ಪನೆ ಧ್ವನಿಪೂರ್ಣವಾಗಿದೆ. ಮುಂದೆ ಕುರುಕ್ಷೇತ್ರ ಯುದ್ಧ ನೆಡೆದಾಗ ಏಕಲವ್ಯನು ಕೌರವ ಪಕ್ಷದಲ್ಲಿದ್ದು ಕಾದಿದನೆಂಬ ಮಹಾಭಾರತದ ಕಥೆಯನ್ನೆ ಸಿದ್ಧಲಿಂಗಯ್ಯ ಬದಲಾಯಿಸಿದ್ದಾರೆ. ದಲಿತರ ಎಚ್ಚೆತ್ತ ಪ್ರಜ್ಞೆ ಮತ್ತು ಹೋರಾಟದ ಮನೋಧರ್ಮವನ್ನೆ ಪೋಷಿಸುವುದಕ್ಕಾಗಿ ಅವರು ಇಲ್ಲಿ ಏಕಲವ್ಯನನ್ನೇ ಬಳಸಿದ್ದಾರೆ. ಏಕಲವ್ಯ ಇಲ್ಲಿ ಕೌರವ ಪಾಂಡವರ ದಾಸನಾಗದೆ ಅನ್ಯಾಯದ ವಿರುದ್ಧ. ಇಲ್ಲದವರ ಪರವಾಗಿ ಹೋರಾಟ ಮಾಡಬೇಕೆನ್ನುತ್ತಾನೆ.

ಪಂಚಮ: ಪಂಚಮ ಎಂಬುದು ಈ ನಾಟಕದಲ್ಲಿ ಬರುವ ಕ್ರಾಂತಿಕಾರಿ ಯುವಕನ ಹೆಸರು. ಈ ನಾಟಕವು ಎರಡು ರೀತಿಯಲ್ಲಿ ಇದರ ಶೀರ್ಷಿಕೆಯನ್ನೆ ಧ್ವನಿಸುತ್ತದೆ. ಈ ನಾಟಕದಲ್ಲಿ ಸಂದರ್ಶನಕ್ಕೆ ಬರುವ ಐದು ಜನ ದಲಿತ ಅಭ್ಯರ್ಥಿಗಳನ್ನು ತೋರುವ ಅರ್ಥ ಒಂದಾದರೆ ಪಂಚಮರು ಎಂದು ಕರೆಯಲ್ಪಡುವ ಶ್ರೇಣಿಕೃತ ಸಮಾಜದ ದಲಿತರು ಎಂಬ ಅರ್ಥ ಮತ್ತೊಂದು.

"ಸಮಾಜಕಲ್ಯಾಣ ಇಲಾಖೆಯ ಹರಿಜನೋದ್ಧಾರ ಮಂಡಲಿಯು ವಿದ್ಯಾವಂತ ದಲಿತರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವುದಕ್ಕಾಗಿ ನಡೆಸುವ ಸಂದರ್ಶನವನ್ನು ವಸ್ತುವಾಗುಳ್ಳ ಈ ನಾಟಕವನ್ನು ಒಂದೇ ದೃಶ್ಯದಲ್ಲಿ ಕಟ್ಟಿಕೊಡಲಾಗಿದೆ."

ಪಂಚಮ ನಾಟಕಕ್ಕೆ ಪ್ರೇರಣೆಯಾದ ಬೆನ್‌ಕಾಲ್ಡ್‌ವೆಲ್ ಅವರ ಜಾಬ್ ನಾಟಕದ ಸಂದರ್ಶನ ತಂತ್ರವನ್ನೇ ಇಲ್ಲೂ ಅಳವಡಿಸಲಾಗಿದೆ. ಎಂಬುದಾಗಿ ಸ್ವತಃ ನಾಟಕಕಾರರೋ ಹೇಳಿಕೊಂಡಿದ್ದಾರೆ. ನಾಟಕವು ವಾಸ್ತವವನ್ನ ಹಾಸ್ಯ ಮತ್ತು ವ್ಯಂಗ್ಯ ಪೂರ್ಣ ಮಾತುಗಳಿಂದಲೇ ಚರ್ಚಿಸುತ್ತಾ ಹೋಗುತ್ತದೆ. ಹಯವದನರಾವ್ ಪಾತ್ರವನ್ನೇ ನೋಡಿ "ಕುಡುಕನನ್ ಮಕ್ಳು ಬಂದ್ಬಿಟ್ಟವೆ, ನಮ್ ತಲೆ ತಿನ್‌ತವೆ ಸಾರ್, ಏನೋ ರಿಜರ್‌ವೇಷನ್ ಕನ್‌ಸೆಷನ್ ಅಂತ ಡಿಗ್ರಿ ಮಾಡ್ಬಿಟ್ಟವೆ. ತಲೇಲಿ ಏನೂ ಇರಲ್ಲಾ... ಅನ್‌ಕಲ್ಚರ್ಡ್ ಜನಗಳು, ಕೊಳಕು ಜನಗಳು, ಛೇ...ಆಫೀಸ್‌ನಲ್ಲಿ ಹೆಂಗ್ ನೆಡ್ಕೋಬೇಕು ಅನ್ನೋ ಕಾಮನ್‌ಸೆನ್ಸ್ ಇಲ್ಲ. ಶೂದ್ರು ಮುಂಡೇವು. ಚಾಂಡಾಲರ್ರು (ಪ್ರೇಕ್ಷಕರನ್ನು ಉದ್ದೇಶಿಸಿ) ಕರೀ ನಾಯೀನ ಬಿಳಿ ನಾಯ್ ಮಾಡೋಕಾಗುತ್ತೇನ್ರೀ ಐದು ಬೆರಳೂ ಒಂದೇ ಸಮಾ ಇರೋಕಾಗುತ್ತೇನ್ರಿ, ಏನೋ? ಈ ಹಾಳ್ ಸರ್ಕಾರ ನಮ್ ಹೆಣ ತೆಗೆಯುತ್ತೆ. ನೋಡಿ ಈ ಹೊಲೆಮಾದಿಗರು ತಂಗಳ್ ತಿಂದು ಬಂದ್ ಬಿಟ್ಟವೆ. ಮ್ಯಾನರ್ಸ್ ಗೊತ್ತಿಲ್ಲ. ಎಷ್ಟ್ ಡಿಗ್ರೀ ಮಾಡಿದ್ರೇನು ಚಾಂಡಾಲ್ರು ಚಾಂಡಾಲ್ರೇ" ಇಲ್ಲಿ ದಲಿತನೊಬ್ಬನ ವಿದ್ವತ್ತು ಸವರ್ಣೀಯರಿಗೆ ಮೀಸಲಾತಿಯ ವಿದ್ವತ್ ಆಗಿ ಬಿಡುತ್ತದೆ.

ದಲಿತ ಯುವಕರೂ ನವಬ್ರಾಹ್ಮಣರಂತೆ ವರ್ತಿಸುವ ರೀತಿಯನ್ನೂ ಶೇಷಾದ್ರಿಯ ಪಾತ್ರದಲ್ಲಿ ಗುರ್ತಿಸಿದ್ದಾರೆ. ಪ್ರಜ್ಞಾವಂತ ದಲಿತ ಸಮುದಾಯ ಬ್ರಾಹ್ಮಣೀಕರಣಗೊಳ್ಳುತ್ತ, ತಮ್ಮ ನೆಲೆಗೆ ತಾವೇ ಶತೃಗಳಾಗುವ ತಮ್ಮ ಸಮುದಾಯಗಳಿಂದಲೇ ದೂರ ಉಳಿಯುವ ರೀತಿಯನ್ನೆ ವಿಷಾದದಿಂದಲೇ ಚಿತ್ರಿಸಿದ್ದಾರೆ. ಇಲ್ಲಿ ಶೇಷಾದ್ರಿ ತಂದೆ ತಾಯಿಗಳನ್ನೇ 'ನಾಯಿಗಳು' ಅನಾಗರಿಕರು ಎಂದು ನಿಂದಿಸುತ್ತಾನೆ.

ಗಾಂಧಿದಾಸ್ ಪಾತ್ರದ ಮೂಲಕ ದಲಿತರ ದಾಸತನವನ್ನೆ ಹೇಳುತ್ತಲೇ ದಲಿತರು ಕಟ್ಟಿಕೊಳ್ಳುತ್ತಿರುವ ಹುಸಿಮೌಲ್ಯವನ್ನೇ ಬಿಚ್ಚಿಬಿಡುತ್ತಾರೆ. "ನಾವು ಈಗ ಮಾಡ್ರನ್ ಸಾರ್, ಮಟನ್, ಡ್ರಿಂಕ್ಸ್, ಇಂಟರ್‌ನ್ಯಾಷನಲ್ ಫುಡ್ ಆಗಿರೋದ್ರಿಂದ

ನಾವು ಇಂಟರ್ ನ್ಯಾಷನಲ್ ಸಿಟಿಜನ್ಸ್ ಆಗಬೇಕು ಅಂತ ಈಗ ಅವನ್ನೆಲ್ಲಾ ಪ್ರಾಕ್ಟೀಸ್ ಮಾಡ್ತಾ ಇದ್ದೀವಿ ಸಾ"

ದಲಿತರು ಸೂಕ್ತ ರಾಜಕೀಯ ಪ್ರಜ್ಞೆಯೂ ಇಲ್ಲದಂತಿದ್ದಾರೆ ಎಂಬುದಕ್ಕೆ "ಯಾವಾಗಾದ್ರು ಓಟ್‌ಗೆ ನಿಂತಿದ್ದರೇನ್ರಿ?" ಎಂಬ ಹಯವದನರಾವ್ ಪ್ರಶ್ನೆಗೆ ಉತ್ತರವಾಗಿ ಗಾಂಧಿದಾಸ್" ಛೆ ಛೆ ಛೇ ನನ್ ಲೈಫ್‌ನಲ್ಲಿ ಕ್ಯಾನ್‌ವಾಸ್ ಮಾಡಿದ್ದೇನೇ ವರ್ತು ನಾನೇ ಕಾಂಟೆಸ್ಟ್ ಮಾಡಿಲ್ಲ ಸಾರ್" ಎನ್ನುತ್ತಾನೆ. ಇಲ್ಲಿ ಜನಸಾಮಾನ್ಯರ ಆಸೆ ಹೆಂಡ, ಸೀರೆ, ಪಂಚೆ ಎಂಬುದನ್ನ ವ್ಯಂಗ್ಯವಾಗಿ ಹೇಳಿದ್ದಾರೆ. ಇಡೀ ನಾಟಕ ಅದರ ಈ ಹಾಡನ್ನೇ ಧ್ವನಿಸುತ್ತದೆ.

ದಾರಿಯಾವುದೋ
ಸರಿ ದಾರಿಯಾವುದೋ
ಕತ್ತಲೆಯಲ್ಲಿ ಮುಳುಗಿದ ಜನಕೆ
ಸುತ್ತಲು ಸಾವನು ಕಾಣುವ ಜನಕೆ
ಕರುಣೆಯ ಸರಪಳಿ ಕೊಲ್ಲುವ ಜನಕೆ
ಬಿಡುಗಡೆಯನ್ನು ನೀಡುವ ಒಂದು
....

ನೆಲಸಮ : ಈ ನಾಟಕವು ತುರ್ತುಪರಿಸ್ಥಿತಿ ಸಂದರ್ಭವನ್ನ ಕುರಿತ ನಾಟಕವಾಗಿದೆ. "ತುರ್ತು ಪರಿಸ್ಥಿತಿಯನ್ನು ಒತ್ತಾಯ ಪೂರ್ವಕವಾಗಿ ದೇಶದ ಮೇಲೆ ಏರಿದ ಅಂದಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿ ತನ್ನ ಮಗ ಸಂಜಯಗಾಂಧಿಯೊಟ್ಟಿಗೆ ಸೇರಿ, ದೆಹಲಿಯ ಟರ್ಕ್ ಮನ್ ಗೋಟ ಪ್ರದೇಶದ ಸಮೀಪದಲ್ಲಿದ್ದ ಕೊಳಚೆ ಪ್ರದೇಶದ ಸಾವಿರಾರು ಗುಡಿಸಲುಗಳನ್ನು ಬುಲ್‌ಡೋಜರ್ ಮೂಲಕ ಕೆಡವಿ, ಅಲ್ಲಿ ವಾಸವಾಗಿದ್ದ ಗುಡಿಸಲುವಾಸಿ ಬಡಜನರ ಮೇಲೆ ನಡೆಸಿದ ಅಮಾನವೀಯ ಕ್ರೌರ್ಯದ ಚಿತ್ರಣ ಈ ನಾಟಕದಲ್ಲಿ ವ್ಯಕ್ತಗೊಂಡಿದೆ. ರಾಜಕಾರಣ ಮತ್ತು ಅಧಿಕಾರಶಾಹಿವರ್ಗ ಜನಸಾಮಾನ್ಯರ ಅಂತರಂಗವನ್ನು, ಅವರ ಬೀಸಣೆಯನ್ನು ಕಿಂಚಿತ್ತು ಅರಿಯದಿದ್ದಾಗ ಆಗುವ ಅನಾಹುತ ಮಾನವ ವಿರೋಧಿಯಾದುದು ಎಂಬುದು ನಾಟಕದಿಂದ ಸ್ಫೋಟಿಸುತ್ತದೆ"[3]

ನಾಟಕದಲ್ಲಿ ಬರುವ ಮಹಾರಾಣಿ ಚಂದ್ರಮ್ಮ ಮತ್ತು ವಿಜಯ ಪಾತ್ರಗಳನ್ನು, ಇಂದಿರಾಗಾಂಧಿ ಮತ್ತು ಸಂಜಯಗಾಂಧಿಯೊಟ್ಟಿಗೆ ಸಮೀಕರಿಸಿ ಚಿತ್ರಿಸಲಾಗಿದೆ.

ಬಡವರ ಜೋಪಡಿ ನೆಲಸಮವಾದ
ನೋವಿನ ಕಥೆಕೇಳಿ
ದುಡಿಯುವ ಜನಗಳ ಪ್ರಾಣವು ಹೋದ
ಗೋಳಿನ ಕಥೆಕೇಳಿ

ಎಂದು ಆರಂಭವಾಗುವ ಇಲ್ಲಿನ ನಾಟಕ ಮಾರ್ಕ್ಸ್‌ವಾದದ ತಾತ್ವಿಕತೆಯನ್ನು ಪ್ರಧಾನ ಅಭಿವ್ಯಕ್ತಿಯನ್ನಾಗಿಸಿ ಕೊಂಡಿರುವ ಈ ನಾಟಕವು, ನಗರದ ಶ್ರೀಮಂತರ ಹಾಗೂ ಕೊಳಗೇರಿಯ ಬಡಜನರ ಬದುಕಿನ ನಡುವಿನ ಸಂಘರ್ಷವನ್ನು ತೆರೆದಿಡುತ್ತದೆ. ತುರ್ತುಪರಿಸ್ಥಿತಿಯ ಕಾಲದಲ್ಲಿ ನಗರದ ತೋರಿಕೆಯ ದೇಶಾಭಿಮಾನದ ಹಿಂದಿನ ತಣ್ಣನೆಯ ಕ್ರೌರ್ಯ ಹೇಗಿತ್ತು ಎಂಬುದನ್ನ ತೆರೆಯುತ್ತವೆ. ಈ ಸಂಭಾಷಣೆಗಳು:

ವಿಜಯ: ಏನೇ ಆಗಲಿ, ನಮ್ಮ ದೇಶದ ಸೌಂದರ್ಯವನ್ನ ಈ ಗುಡಿಸಲುಗಳು ಹಾಳು ಮಾಡುತ್ತಿವೆ. ವಿದೇಶಿಯರು ಇಂಡಿಯಾದ ಅಂದಚಂದವನ್ನು ನೋಡಲು ಬಂದರೆ ಅವರ ಕಣ್ಣಿಗೆ ಮೊದಲು ಬೀಳುವ ಈ ಮೂಟೆ ಹೊರುವ ಕೊಳಕು ನನ್ಮಕ್ಳಿಂದ ಇಡೀ ದೇಶಕ್ಕೆ ಅವಮಾನ. ಮೊದಲು ನಾವು ಇವರನ್ನ ಮುಗಿಸಬೇಕು.

ಚೆನ್ನ : ....ತಾಜ್ ಮಹಲ್, ಕೆಂಪುಕೋಟೆಯಂಥ ನಾಡಿನಲ್ಲಿ ಬಡವರು ಇರಲೇಬಾರದು.

ವಿಜಯ : ಅಮ್ಮ, ವಿದೇಶಿಯರು ಇಂಡಿಯಾದಲ್ಲಿ ಪ್ರವಾಸ ಮಾಡುವಾಗ ಬಡವರನ್ನೆಲ್ಲಾ ಮನೆಯಲ್ಲಿ ಕೂಡಿ ಬೀಗಹಾಕಬೇಕು. ಅಥವಾ ಅವರನ್ನು ನಗರದಿಂದ ಹೊರಗೆ ಓಡಿಸಬೇಕು. ಇಲ್ಲದಿದ್ದರೆ ಈ ದೇಶದ ಮಾನಮರ್ಯಾದೆ ಸರೀಕರ ಮುಂದೆ ಹರಾಜಾಗುತ್ತದೆ.

ಮಹಾರಾಣಿ : ....ಬಡವರ ಬಗ್ಗೆ ಭಾಷಣ ಮಾಡಲು ಮೈಕು ಇರಬೇಕು. ಬಡವರು ಇರಬೇಕು ಬಡವರ ಸುತ್ತ ಬಂದೂಕುಧಾರಿ ಪೋಲಿಸ್ ಇರಬೇಕು. ನನ್ನ ಭಾಷಣಕ್ಕೆ ಗಳಿಗೆ ಗಳಿಗೆಗೆ ಚಪ್ಪಾಳೆ ಇರಬೇಕು. ಚಪ್ಪಾಳೆ ತಟ್ಟದ ಬಡವರ ತಟ್ಟಲು ಕೆಲವರು ಇರಬೇಕು.

ಇಡೀ ನಾಟಕವು ಮತ್ತೆ ತನ್ನ ಸಿದ್ಧಾಂತವನ್ನ ಈ ಹಾಡಿನ ಮೂಲಕವೇ ಅಭಿವ್ಯಕ್ತಿಸುವಂತಾಗಿದೆ.

"ಗುಡಿಸಲು ಬೀಳುವಾಗ ಬಂಗಲೆ ನಗುತಿದ್ದೊ
ನಮ್ಮೂರ ಮೇರಿ ಹೆಣತುಂಬಿ । ಹರಿಯಿತು
ರಕ್ತದ ಕೋಡಿ ಊರೆಲ್ಲ.
ಬಡವರ ಹೆಸರೇಳಿ ಪಟ್ಟಕೆ ಬಂದೋರು
ಬಡವರ ಚಟ್ಟವ ಕಟ್ಟೇಸಿ । ಮಣ್ಮಾಡಿ
ಗುಡಿಸಲುಗಳ ನುಂಗಿ ನಗುತಾರೆಲ್ಲೊ

ತುಳಿಯುವ ಜನರನ್ನೂ ಸುಮ್ಮನೆ ಬಿಡಲಾರೊ
ಮನೆಮನೆ ಮುಂದಲ ಗಿಡದಲ್ಲಿ । ನಾವೆಲ್ಲ
ಬರುತೀವಿ ಕೆಂಪನೆ ಹೂವಾಗಿ.

ಹಕ್ಕಿನೋಟ : ಇದು ಸಿದ್ಧಲಿಂಗಯ್ಯನವರ ವಿಮರ್ಶಾಕೃತಿ. ಕವಿತೆ, ಕುರಿತು, ನಾಟಕ ಹಾಗೂ ಗದ್ಯವನ್ನ ಒಳಗೊಂಡ ಒಟ್ಟು ೧೩ ಲೇಖನಗಳ ಸಂಗ್ರಹವಿದು. "ಎರಡು ಕಾರಣಗಳಿಗಾಗಿ 'ಹಕ್ಕಿನೋಟ' ಒಂದು ಮುಖ್ಯವಾದ ಪುಸ್ತಕವಾಗಿವೆ. ಮೊದಲನೆಯದು, ಇಲ್ಲಿನ ಲೇಖನಗಳ ಹಿಂದಿರುವ ಸ್ಪಷ್ಟವೂ, ಖಚಿತವೂ ಆದ ತಾತ್ವಿಕ ನಿಲುವು. ಎರಡನೆಯದು, ಗಹನವಾದ ವಿಷಯವನ್ನು ವಿಷಯದ ಗಹನತೆಗೆ ಊನಬರದಂತೆ, ಸಾಮಾನ್ಯ ಅಕ್ಷರಸ್ಥರಿಗೂ ಮನದಟ್ಟಾಗುವಂತೆ ಹೇಳಲು ಸಿದ್ಧಲಿಂಗಯ್ಯನವರು ರೂಢಿಸಿಕೊಂಡಿರುವ ಸರಳವು, ಸುಲಲಿತವೂ ಆದ ಭಾಷೆ"[೨] ಎಂಬ ಓ. ಎಲ್. ನಾಗಭೂಷಣಸ್ವಾಮಿ ಅವರ ಅಭಿಪ್ರಾಯ ಮುಖ್ಯವಾದುದಾಗಿದೆ.

ಸಿದ್ಧಲಿಂಗಯ್ಯನವರು ಈ ಕೃತಿಯಲ್ಲಿ ಸಾಹಿತ್ಯ, ಸಮಾಜ, ಸಂಸ್ಕೃತಿ, ಜನಪದ ಆಚರಣೆ ಹಾಗೂ ವ್ಯಕ್ತಿಗತ ಸಾಮಾಜಿಕ ಮೌಲ್ಯಗಳನ್ನು ವಿಮರ್ಶಾತ್ಮಕ ನೆಲೆಯಲ್ಲಿ ವಿವೇಚಿಸಿದ್ದಾರೆ. 'ಸಾಹಿತ್ಯಾಭಿವ್ಯಕ್ತಿಯಲ್ಲಿ ಸಾಮಾನ್ಯ ಮನುಷ್ಯ' ಎಂಬ ಲೇಖನ ಸಾಮಾಜಿಕ ಮತ್ತು ಸಾಹಿತ್ಯಿಕ ಜಗತ್ತು ಹೇಗೆ ಸಾಮಾನ್ಯ ನನ್ನ ಕಡೆಗಣಿಸಿದೆ ಏಕೆ ಸಾಮಾನ್ಯ ಮನುಷ್ಯನಿಗೆ ಬೆಲೆ ಬರಬೇಕಿದೆ ಎಂಬ ಅಂಶವನ್ನ ತಾರ್ಕಿಕವಾಗಿ ಅವಲೋಕಿಸಿದ್ದಾರೆ. ವಚನಕಾರರು, ಕನಕದಾಸರು, ಜನಪದ ಸಾಹಿತ್ಯವನ್ನೇ ಅವರು ಇದರ ಆಕರವಾಗಿ ಸೊಗಸಾಗಿ ಬಳಸಿಕೊಂಡಿದ್ದಾರೆ. ಒಟ್ಟಾರೆ ಈ ಲೇಖನ ಕನ್ನಡ ಸಾಹಿತ್ಯವನ್ನ ಪುನರ್ ಮೌಲ್ಯೀಕರಣ ಮಾಡುವ ದೃಷ್ಟಿಯಂತಿದೆ.

ಜನಪದ ಸಾಹಿತ್ಯವನ್ನು ಕುರಿತು ಸಿದ್ಧಲಿಂಗಯ್ಯನವರ ವಿಮರ್ಶಾದೃಷ್ಟಿ, ಖಚಿತ ನಿಲುವಿನದಾಗಿವೆ. ಜನಪದ ಸಾಹಿತ್ಯಧ್ಯಯನದ ಸೀಮಿತ ವ್ಯಾಖ್ಯಾನಗಳನ್ನು ತಿರಸ್ಕರಿಸುತ್ತಲೇ "ನನಗೆ ಜಾನಪದ ಬೇಕು. ಯಾಕೆಂದರೆ, ಅಲ್ಲಿ ದಲಿತ ಸಂಸ್ಕೃತಿಯೊಂದರ ಶೋಧನೆಗೆ ಅವಕಾಶ ಇದೆ. ಸಮಾಜದ ಬಹುಸಂಖ್ಯಾತರಲ್ಲಿ ಸ್ವಾಭಿಮಾನವನ್ನು ಹುಟ್ಟಿಸುವ ಸಂಪತ್ತು ಅದರಲ್ಲಿ ಅಡಗಿದೆ. ಈ ಸಾಹಿತ್ಯ ದುಡಿಯುವ ವರ್ಗದ್ದು. ದುಡಿಮೆಯ ಜೊತೆಗೇನೆ ಹಾಡುಗಳು, ಕಥೆಗಳು ಸೃಷ್ಟಿಯಾದವು. ಜನಗಳ ಕಷ್ಟಕೋಟಲೆಗಳ ದಾಖಲೆ ಇದು. ಉಂಡೊಟ ಉಂಡಂಗೆ ಕಂಡ ಕನಸ ಕಂಡಂಗ" ಹೇಳುವುದು ಇದರ ಲಕ್ಷಣ.[೬] ಎಂಬುದಾಗಿ ತಮ್ಮ ಧೋರಣೆಯನ್ನ ಸ್ಪಷ್ಟ ಪಡಿಸುತ್ತಾರೆ.

ಸಂಸ್ಕೃತಿಯ ಅಧ್ಯಯನದ ಬಗೆಗೆ ಹೊಸ ಆಲೋಚನಕ್ರಮ ಹಾಗೂ ಸೈದ್ಧಾಂತಿಕ ನಿಲುವುಗಳು ಎಪ್ಪತ್ತರ ದಶಕದಲ್ಲಿ ಶ್ರಮಮೂಲ ಅರಿವಿನಿಂದ

[illegible]

[illegible]

[illegible]

[illegible]

[illegible]

ಸಂಘರ್ಷಕ್ಕಿಳಿದಿವೆ. "ದೇಸೀಯ ಬಹುಸಮಾಜ ಮತ್ತು ಬಹುಸಂಸ್ಕೃತಿಯನ್ನೆ ಹಿಂದೂ ಎಂದು ಕರೆದು, ಅವುಗಳ ಮೇಲೆ ಏಕ ಸಮಾಜ ಮತ್ತು ಬಹುಸಂಸ್ಕೃತಿಯನ್ನು ಹಿಂದೂ ಎಂದು ಕರೆದು, ಅವುಗಳ ಮೇಲೆ ಏಕಸಮಾಜ ಮತ್ತು ಬಹುಸಂಸ್ಕೃತಿಗಳಿಂದ ಬಂದ ಬರಹಗಾರರು ಆಮಿಷಗಳಿಂದಲೇ ಕೀಳಿರಿಮೆಯಿಂದಲೋ ತಮ್ಮ ಸಂಸ್ಕೃತಿಯನ್ನು ಆಧೀನ ಸಂಸ್ಕೃತಿ, ಪರ್ಯಾಯ ಸಂಸ್ಕೃತಿ ಎಂದೆಲ್ಲಾ ಹೆಸರಿಸುವ ಪ್ರತಿಷ್ಠಿತರ ಮಾತಿಗೆ ಒಪ್ಪುವುದು ಒಂದು ವಿಪರ್ಯಾಸ. ಸಂಸ್ಕೃತಿ ಸಂಸ್ಕೃತಿಯೇ, ಅದರಲ್ಲಿ ಮೇಲು-ಕೀಳು ಎಂಬುದಿಲ್ಲ. ಇಂಥ ಆರೋಪಗಳನ್ನು ನಿರಾಕರಿಸುತ್ತಾ, ಕೆಳವರ್ಗಗಳಲ್ಲಿ ಜಾಗೃತಿ ಮೂಡಿದ ಕೆಲವರು ಪ್ರಜ್ಞಾವಂತರಾಗಿ ಪ್ರತಿಭಟಿಸುತ್ತಲೇ ಬಂದಿದ್ದಾರೆ. ಆದರೆ ಪ್ರತಿಭಟನೆಯ ದನಿಗಳು ಸಂಸ್ಕೃತೀಕರಣ ಮತ್ತು ಬ್ರಾಹ್ಮಣೀಕರಣ ಪ್ರಲೋಭನೆಗಳಿಂದ ತೀವ್ರತೆಯನ್ನೂ ಕಳೆದುಕೊಂಡು ದುರ್ಬಲವಾಗುತ್ತಲೇ ಇವೆ! ಎಂಬ ಅಭಿಪ್ರಾಯವು ಒಟ್ಟು ಜನಸಂಸ್ಕೃತಿಯ ಬಗೆಗೆ ಲೇಖಕರಿಗಿರುವ ಕಾಳಜಿಯನ್ನು ಸ್ಪಷ್ಟ ಪಡಿಸುತ್ತದೆ.

ಒಟ್ಟಾರೆ ಸಾಹಿತ್ಯ, ಸಮಾಜ, ಸಂಸ್ಕೃತಿ, ಜನಪದ, ಅಸ್ಪೃಶ್ಯಲೋಕ ಮೊದಲಾದ ಸಮಾಜಮುಖಿ ನೋಟಗಳಿರುವ ಇಲ್ಲಿನ ಲೇಖನಗಳು ಅಂಬೇಡ್ಕರ್ ಮತ್ತು ಮಾರ್ಕ್ಸನ ಚಿಂತನೆಗಳ ಆಧಾರದ ಮೇಲೆ ಸಿದ್ಧಲಿಂಗಯ್ಯನವರು ತಮ್ಮ ವಿಚಾರಗಳನ್ನ ರೂಪಿಸಿಕೊಂಡಿದ್ದಾರೆ.

ಸಿದ್ಧಲಿಂಗಯ್ಯನವರ ಸದನದ ಭಾಷಣಗಳು: ದೊಡ್ಡ ಹುಲ್ಲೂರು ರುಕ್ಕೋಜಿಯವರು ಸಂಪಾದಿಸಿದ ಈ ಕೃತಿ "ಮೇಷ್ಟ್ರು ೧೨ ವರ್ಷಗಳುದ್ದಕ್ಕೂ ವಿಧಾನ ಪರಿಷತ್ತಿನ ಪ್ರತಿಯೊಂದು ಅಧಿವೇಶನದಲ್ಲೂ -ಹಿಂದುಳಿದವರ ಎಲ್ಲಾ ಬಗೆಯ ಸಮಸ್ಯೆಗಳನ್ನೂ ಪ್ರಶ್ನೆಗಳ ಬಾಣಗಳನ್ನಾಗಿಸಿಕೊಂಡು ಆಳುವವರ ಆತ್ಮಸಾಕ್ಷಿಗೆ ಗುರಿಯಿಡುತ್ತಾ ಅತ್ಯಂತ ಛಲದಿಂದ ಹೋರಾಟ ಮಾಡಿದ್ದಾರೆ. ಅವುಗಳಲ್ಲಿ ಮೊದಲ ೬ ವರ್ಷಗಳ ಅವಧಿಯಲ್ಲಿನ (ಎರಡನೇಯ ಅವಧಿಯ ಭಾಷಣಗಳ ಭಾಗ-೨ ಇನ್ನೂ ಪ್ರಕಟವಾಗಿಲ್ಲ) ಉಳಿದಿದ್ದ ಭಾಷಣಗಳಲ್ಲಿ ಮುಖ್ಯವೆನಿಸಿದ ಕೆಲವನ್ನು ಆಯ್ದು ಕೊಂಡು ಅವು ಹೊಂದುವಂಥ ಅಧ್ಯಾಯಗಳೀಗ ಸೇರಿಸಿರುವುದಲ್ಲದೆ, ಪರಿಶಿಷ್ಟ ಜಾತಿ/ವರ್ಗಕ್ಕೆ ಸಂಬಂಧಿಸಿದ ಹತ್ತು ಗಂಭೀರ ಪ್ರಶ್ನೋತ್ತರಗಳನ್ನು ಆರಂಭಿಕ ಟಿಪ್ಪಣಿ ಸಹಿತ ಪ್ರತ್ಯೇಕ ಅಧ್ಯಾಯದಲ್ಲಿ ಕೊಡಲಾಗಿದೆ."[೭] ಎಂದು ಈ ಪುಸ್ತಕದ ಸ್ವರೂಪವನ್ನ ಹೇಳಿದ್ದಾರೆ. ಜೊತೆಗೆ "ನನಗೆ ತಿಳಿದ ಮಟ್ಟಿಗೆ ಇದುವರೆಗೆ ಬಂದಿರುವ ಈ ಬಗೆಯ 'ಸದನದ ಭಾಷಣಗಳ' ನಾಲ್ಕೈದು ಪುಸ್ತಕಗಳಲ್ಲಿ ಇದೊಂದೇ ಮರುಮುದ್ರಣ ಗೊಳ್ಳುತ್ತಿರುವುದು. ಇದು, ಕವಿಗಳಾದ ಡಾ॥ ಸಿದ್ಧಲಿಂಗಯ್ಯನವರು ಶಾಸಕರಾಗಿಯೂ ಸಾಧಿಸಿಕೊಂಡ ಯಶಸ್ಸನ್ನು ಹೇಳುತ್ತದೆ. ಈ ಪುಸ್ತಕ ರಾಜಕಾರಣಿಗಳಿಗೆ ಮಾದರಿಯಾಗಿದೆ; ನೂತನ ಶಾಸಕರಿಗೆ ದಾರಿದೀಪದಂತಿದೆ; ರಾಜಕೀಯಾಸಕ್ತರಿಗೆ

ಆದರ್ಶವಾಗಿದೆ; ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ಪಠ್ಯದಂತಿದೆ."[೬] ಇಲ್ಲಿ ಮತ್ತೆ ಅದೇಚಿತ್ರ. ನಾವೆಲ್ಲಾ ನೋಡುತ್ತಿದ್ದ ಸಿದ್ಧಲಿಂಗಯ್ಯನವರು ತಮ್ಮ ಕಾವ್ಯ ನಾಟಕಗಳಲ್ಲಿ ಹೇಳುತ್ತಿದ್ದ ಅದೇ ಕರ್ನಾಟಕ, ಹಸಿವು, ಬಡತನ, ಅನಾರೋಗ್ಯ, ಅನ್ಯಾಯ, ಶೋಷಣೆ, ದಬ್ಬಾಳಿಕೆ, ವಂಚನೆಗಳು ತುಂಬಿತುಳುಕುತ್ತಿರುವ ಹೆಮ್ಮೆಯ ಕರ್ನಾಟಕ. ಹೇಗೆ ಬದಲಾಗಬೇಕೆಂದು ಎಲ್ಲರೂ ಬಯಸುತ್ತಿರುವೆವೋ ಆ ಕರ್ನಾಟಕ. ಸದನದ ಹಲವಾರು ಸದಸ್ಯರು ಅದರಲ್ಲೂ ಹಿರಿಯರನೇಕರು ಇಲ್ಲಿನ ಕೆಲವು ಭಾಷಣಗಳ ಬಗ್ಗೆ ಸದನದಲ್ಲೇ ಒಪ್ಪಿಕೊಂಡಿರುವಂತೆ "ಸಿದ್ಧಲಿಂಗಯ್ಯನವರು ಪ್ರಸ್ತಾಪಿಸಿರುವ ವಿಷಯಗಳು ಸದನದ ೪೦ ವರ್ಷಗಳ ಇತಿಹಾಸದಲ್ಲಿ ಎಂದೂ ಚರ್ಚೆಗೆ ಬಂದಿರಲಿಲ್ಲ?" ಎಂಬುದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ.

ಇಲ್ಲಿನ ಪ್ರತಿಯೊಂದು ಭಾಷಣದ ಹಿಂದೆ ಸಾವಿರಾರು ಜನರ ಕಂಬನಿಯಿದೆ. ಬಡ ಅಂಗನವಾಡಿ ಮಹಿಳೆಯರ ಸೆರಗಿನಕೆಂಡವಾಗಿರುವ ಕ್ರೌರ್ಯದ ವಿವರಣೆಯಿದೆ. ಕುಗ್ರಾಮ ಬೆಟ್ಟಸಾಲುಗಳಿಂದ ತಂದ ಉರಿವ ಬೆಂಕಿಯಿದೆ. ದ್ರೋಹ ಮಾಡುತ್ತಿರುವವರ ಬಗ್ಗೆ ಇಲ್ಲಿ ಪ್ರಕಟವಾಗಿರುವ ಆಕ್ರೋಶಕ್ಕೆ ಶಾಂತವೇರಿಯವರ ಗಂಟಲಿನ ಕಿಚ್ಚು ಬಗೆಯುವ ಉಗ್ರತೆಯಿಲ್ಲ. ಹಾಗೇಯೆ ಟಿ. ಆರ್ ಶಾಮಣ್ಣನವರ ಶುದ್ಧ ನಯಗಾರಿಕೆಯ ತಂಪೂ ಇಲ್ಲ. ಇಲ್ಲಿರುವುದು ಇವೆರಡರ ನಡುವಿನ ಸಂಶೋಧಕನ ನಿವೇದನೆ, ಇದಕ್ಕೆ ಉದ್ವೇಗದಿಂದ ಹರಿದು ಹಾಯುವ ಹರಿತವಿಲ್ಲದಿದ್ದರೂ ಕಾದ ಅಲಗಿನ ಬಿಸಿಯಿದೆ. ನಿರ್ಗತಿಕ ಮಕ್ಕಳ ಮಧ್ಯಾಹ್ನದ ಹಾಲಿಗೆ ನೀರು ಬೆರಸುವ ಪ್ರಾಮಾಣಿಕರನ್ನು, ರಸ್ತೆ ಗುಡಿಸುವವರ ಮಂಕರಿ ಪೊರಕೆಗಳನ್ನೂ ಲಪಟಾಯಿಸುವ 'ನಿಸ್ಪೃಹ'ರನ್ನ ಸದನಕ್ಕೆ ತೋರಿಸಿಕೊಡುವ ಮಾತುಗಾರಿಕೆಯಲ್ಲಿ ಕಾವ್ಯವನ್ನು ಮೀರಿದ ಜೀವಂತಿಕೆ ಹೊಮ್ಮಿದೆ. ಪರಿಣಾಮದ ದೃಷ್ಟಿಯಿಂದ ಈ ಪುಸ್ತಕದ ಮಹತ್ವ ಎರಡು ಕವನ ಸಂಕಲನಕ್ಕಿಂತಲೂ ದೊಡ್ಡದು.

ಸದನದ ಭಾಷಣಗಳ ಕೆಲ ಟಿಪ್ಪಣಿಗಳನ್ನ ಇದಕ್ಕೆ ಸಾಕ್ಷಿಯೆಂಬಂತೆ ನೋಡೋಣ. ಜಾತಿ ವಿನಾಶ ಕುರಿತ ಅಂತರ್ಜಾತಿ ವಿವಾಹ ಕುರಿತಂತೆ "ಜಾತಿ ವಿನಾಶ ಆಗಬೇಕು, ಇಲ್ಲದಿದ್ದರೆ ದೇಶನಾಶ ಖಂಡಿತ ಎಂದು ಎಲ್ಲರೂ ಹೇಳುತ್ತಾರೆ. ಆದರೆ ವಸ್ತುಸ್ಥಿತಿ ಹೇಗಿದೆ ಅಂದರೆ ದಿನೇ ದಿನೇ ಜಾತಿಭಾವನೆಗಳು ಗಟ್ಟಿಗೊಳ್ಳುತ್ತವೆ. ಹಿಂದೆ ಅಜ್ಞಾನ ಮೌಢ್ಯದ ಕಾರಣದಿಂದ ಪೋಷಿತವಾದ ಜಾತಿಗಳು ಈಗ ಪ್ರಜ್ಞಾಪೂರ್ವಕವಾಗಿ, ಕುತರ್ಕಗಳ ಮುಸುಕಿನಲ್ಲಿ ಸತ್ವಯುತವಾಗಿ ಬೆಳೆಯುತ್ತಿವೆ. ದುರಂತ ಎಂದರೆ ಜಾತೀಯತೆಯ ಭೀಕರ ಅಪಾಯಗಳನ್ನು ಗ್ರಹಿಸಬೇಕಾದ ವಿದ್ಯಾವಂತ ಜನಾಂಗದಲ್ಲಿ ದೇಶಪ್ರಜ್ಞೆಗಿಂತ ಹೆಚ್ಚಾಗಿ ಜಾತಿಪ್ರಜ್ಞೆಯೇ ಜಾಗೃತವಾಗುತ್ತಿದೆ. ಎಲ್ಲರೂ ತಮ್ಮ ಸಾಮಾಜಿಕ ಪ್ರತಿಷ್ಠೆ, ಆರ್ಥಿಕ ಭದ್ರತೆಗಾಗಿ ತಮ್ಮ ಜಾತಿಯನ್ನು ಅಪ್ಪಿಕೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ.

ಇಂತಹ ಸಂದರ್ಭದಲ್ಲಿ ಜಾತಿ, ಮತ, ಪಂಥಗಳನೆಲ್ಲಾ ತಿರಸ್ಕರಿಸಿ ಪ್ರೀತಿ ಮತ್ತು ಮಾನವೀಯತೆಗಳೇ ಬದುಕಿಗೆ ಬೆಳಕು ತೋರುವ ದೀವಿಗೆಗಳು ಎಂದು ನಂಬಿ ಅಂತರ್ಜಾತಿ ವಿವಾಹವಾದವರ ಪಾಡೇನು? ಇವರ ಮಕ್ಕಳು ಮುಂದೆ ಯಾವ ಜಾತಿ, ಧರ್ಮಕ್ಕೆ ಸೇರುತ್ತಾರೆ?

ಅಂತರ್ಜಾತಿ ವಿವಾಹವಾದ ಕಾರಣಕ್ಕಾಗಿಯೇ ಸಮಾಜದ ಎಲ್ಲರಿಂದ ಕುಹಕ, ನಿಂದನೆ, ಅಪಹಾಸ್ಯಕ್ಕೀಡಾಗಿ ಬದುಕುತ್ತಿರುವ ಈ ಜಾತ್ಯಾತೀತ ಜನರನ್ನು ಸರ್ಕಾರ ಗೌರವಿಸಬೇಕು. ಇವರ ಮಕ್ಕಳ ಭವಿಷ್ಯಕ್ಕೆ ನೆರವಾಗಲು ಶಿಕ್ಷಣ ಉದ್ಯೋಗಗಳಲ್ಲಿ ಮೀಸಲಾತಿ ನೀಡುವುದರ ಮುಖಾಂತರ ಇವರ ನೆರವಿಗೆ ಬರಬೇಕು. ಎಂಬುದು ಈ ಖಾಸಗಿ ಮಸೂದೆ ಮಂಡನೆಯ ಹಿಂದಿನ ಆಶಯ. ಅಲ್ಲಲ್ಲಿ ವಿಚಾರವಾದಿಗಳ ಮಟ್ಟದಲ್ಲಿ ಮಾತ್ರ ಚರ್ಚೆಯಾಗುತ್ತಿದ್ದ ಈ ವಿಷಯವನ್ನು ವಿಧಾನಮಂಡಲದಲ್ಲಿ ಮಸೂದೆಯನ್ನಾಗಿ ಮಂಡಿಸಿ ನಾಲ್ಕು ಅಧಿವೇಶನಗಳಲ್ಲಿ ಹಟ ಹಿಡಿದು ಚರ್ಚಿಸಿ ಸುದೀರ್ಘಗವಾಗಿ ಹೋರಾಡಿದ ಪ್ರಯತ್ನ ಬಹುಶಃ ದೇಶದಲ್ಲಿಯೇ ಪ್ರಥಮ ಎನ್ನಬಹುದು."[೭]

ಸಿದ್ಧಲಿಂಗಯ್ಯನವರ ಈ ಭಾಷಣದಲ್ಲಿ ಕಾವ್ಯ, ವಿಚಾರಪ್ರಜ್ಞೆ ಮಾನವೀಯತೆಗಳ ಮಿಶ್ರಣವಿದೆ. "ಜಾತಿ ಪದ್ಧತಿ ವಿರುದ್ಧ ನಮ್ಮ ದೇಶದಲ್ಲಿ ದೊಡ್ಡ ಚಳುವಳಿಗಳು ಆಗಿವೆ. ಈ ಸಂದರ್ಭದಲ್ಲಿ ಕೆಲವು ಮಹಾನ್ ವ್ಯಕ್ತಿಗಳ ನೆನಪನ್ನು ಮಾಡಿಕೊಳ್ಳುವುದು ಸೂಕ್ತ ಎನಿಸುತ್ತದೆ. ಜಗತ್ತಿನಲ್ಲಿ ಮೊಟ್ಟ ಮೊದಲ ಬಾರಿಗೆ ಭಗವಾನ್ ಬುದ್ಧ ಜಾತಿಯ ಪರಿಕಲ್ಪನೆಯನ್ನು ಪ್ರಶ್ನೆ ಮಾಡಿದ. ಬಸವಣ್ಣನವರು ಜಾತಿಯ ಪರಿಕಲ್ಪನೆಯನ್ನು ಪ್ರಶ್ನೆ ಮಾಡಿದರಷ್ಟೇ ಅಲ್ಲ. ಅಂತರ್ಜಾತಿ ವಿವಾಹಕ್ಕೆ ಕರ್ನಾಟಕದ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ಪ್ರೋತ್ಸಾಹಕೊಟ್ಟು ದೊಡ್ಡ ಕ್ರಾಂತಿಯನ್ನೆ ಮಾಡಿದರು. ಬ್ರಾಹ್ಮಣ ಕನ್ಯೆಯನ್ನು ಅಸ್ಪೃಶ್ಯ ವರನಿಗೆ ವಿವಾಹ ಮಾಡಿಸಿ, ಸಮಾಜದ ಪೊಳ್ಳು ನಂಬಿಕೆಗೆ ಕೊಡಲಿ ಪೆಟ್ಟನ್ನು ಕೊಟ್ಟರು. ಬಸವಣ್ಣನವರು ಮತ್ತೆ

"ಮಡಿವಾಳನೆಂಬೆನೇ ಮಾಚಯ್ಯನ
ಮಾದಾರನೆಂಬೆನೇ ಚನ್ನಯ್ಯನ
ಡೋಹಾರನೆಂಬೆನೇ ಕಕ್ಕಯ್ಯನ
ಆನು ಹಾರವನೆಂದರೇ, ಕೂಡಲ
ಸಂಗಯ್ಯ ನಗುವನಯ್ಯ......"

ಎಂದು ಹೇಳಿದರು. ಇದನ್ನು ನಾವು ಯಾರೂ ಗಮನಿಸಲಿಲ್ಲ. ಗಮನಿಸುವವರು ಸಂಪೂರ್ಣವಾಗಿ ಮರೆತಿದ್ದಾರೆ. ಇದರಿಂದ ಆ ಮಹಾನ್ ವ್ಯಕ್ತಿಗೆ ಅಪಚಾರ ಮಾಡಿದ್ದೆವೆಂದು ಹೇಳಬಹುದು.

ಕನಕದಾಸರು ಮೊಟ್ಟಮೊದಲ ಬಾರಿಗೆ ನನ್ನನ್ನು ಯಾರಾದರೂ ಯಾವ ಜಾತಿ ಎಂದು ಕೇಳಿದರೆ 'ಮನುಜ ಜಾತಿ' ಎಂದು ಹೇಳುತ್ತೇನೆಂದು ಅವರ ಕೀರ್ತನೆಯಲ್ಲಿ ಹೇಳಿದ್ದಾರೆ. ಇದು ಬಹುದೊಡ್ಡ ಬಂಡಾಯದ ಮಾತು. ರಾಷ್ಟ್ರಕವಿ ಕುವೆಂಪು ಅವರು, ನಾವೆಲ್ಲರೂ ವಿಶ್ವಮಾನವರಾಗಬೇಕು. "ಮನುಜ ಮತ, ವಿಶ್ವಪಥ" ಎಂದು ಕರೆಕೊಟ್ಟರು. ನಾವು ಕುವೆಂಪು ಅವರ ಅಭಿಮಾನಿಗಳಾಗಿದ್ದರೂ ಕೂಡ ಅವರು ಹೇಳಿದ ಈ ವಿಚಾರದಲ್ಲಿ ವಿಶ್ವ ಒಂದೇ ಎಂಬ ತತ್ವದಲ್ಲಿ ಅಭಿಮಾನ ಬೆಳೆಸಿಕೊಳ್ಳಲಿಲ್ಲ. ನಮ್ಮ ಶ್ರೇಷ್ಠ ಕವಿ ಗೋಪಾಲಕೃಷ್ಣ ಅಡಿಗ ಅವರು 'ನಾವೆಲ್ಲಾ ಒಂದೇ ಜಾತಿ, ಒಂದೇ ಮತ, ಒಂದೇ ಕುಲ. ನಾವು ಮನುಜರು. ನರರ ನಡುವಿನ ಅಡ್ಡ ಗೋಡೆಗಳನು ಕುಟ್ಟಿ ಕೆಡಹುವೆವು. ನಾವು ವೀರ ರುದ್ರರು" ಎಂದು ಹೇಳಿದರು. ಆದರೆ ಆ ಹುಮ್ಮಸ್ಸು ಅಡಿಗರಲ್ಲಿ ಉಳಿಯಿತೇ ವಿನಹ ಇಡೀ ಜನತೆಯಲ್ಲಿ ಮಾನಸಿಕ ಬದಲಾವಣೆ ಮಾತ್ರ ಆಗಲಿಲ್ಲ.

ಹಾಗೆ ನೋಡಿದರೆ ವೇದಗಳ ಕಾಲದಲ್ಲಿ ಕೂಡ ಜಾತೀಯತೆ ಇರಲಿಲ್ಲ. ಇದು ಶುರುವಾದದ್ದು ಪುರಾಣಗಳ ಕಾಲಕ್ಕೆ. ಸಗೋತ್ರ ವಿವಾಹಪದ್ಧತಿ ಯಾವಾಗ ಎಲ್ಲಿ ಶುರುವಾಯಿತೋ ಅಲ್ಲಿಂದ ಜಾತೀಯತೆ ಶುರುವಾಯಿತು. ಭಿನ್ನ ಮತಗೋತ್ರ ವಿವಾಹಪದ್ಧತಿ ಇದ್ದಾಗ ಜಾತೀಯತೆ ಇರಲಿಲ್ಲ. ಆ ಕಾಲದಲ್ಲಿ ವಶಿಷ್ಠ ಮತ್ತು ಅರುಂದತಿ ಮದುವೆ ಆದರು. ಸಮಾಜದ ಕಟ್ಟಕಡೆಯ ಹೆಣ್ಣುಮಗಳು ಸಮಾಜದ ಮೇಲುವರ್ಗದ ಒಬ್ಬ ಪುರುಷನೊಡನೆ ಆದ ಮದುವೆಯೇ ಪರಾಶರ ಮತ್ತು ಮತ್ಸ್ಯಗಂಧಿ ಮದುವೆ. ಇವುಗಳೆಲ್ಲಾ ಈ ಕಾಲದಲ್ಲೇ ನಡೆದಿವೆ.

ಒಂದು ಕುತೂಹಲಕರ ಅಂಶವೆಂದರೆ, ನಮ್ಮ ಎಲ್ಲ ದೇವತೆಗಳೂ ಅಂತರ್ಜಾತಿ ವಿವಾಹ ಆಗಿರುವುದು. ಸ್ವಜಾತಿ ವಿವಾಹ ಆಗಿರುವ ದೇವರುಗಳು ತುಂಬಾ ಕಡಿಮೆ. ಶಿವ, ಕೃಷ್ಣ ಅಂತರ್ಜಾತಿ ವಿವಾಹ ಆಗಿದ್ದಾರೆ. ಮೇಲುಕೋಟೆ ಚಲುವನಾರಾಯಣಸ್ವಾಮಿ ಕೇವಲ ಅಂತರ್ಜಾತಿ ಅಲ್ಲ. ಅಂತರ್ಮತೀಯ ವಿವಾಹ ಆಗಿದ್ದಾರೆ. ಚಲುವನಾರಾಯಣಸ್ವಾಮಿ ಮುಸ್ಲಿಂ ಮಹಿಳೆಯನ್ನು ಮದುವೆ ಆದುದನ್ನು ನಾವು ನೋಡಿದ್ದೇವೆ. ಬಿಳಿಗಿರಿರಂಗಯ್ಯ ಕೂಡ ಅಂತರ್ಜಾತಿ ಮದುವೆ ಆಗಿದ್ದಾನೆ. ಅಂದರೆ ದೇವತೆಗಳೆಲ್ಲರೂ ಅಂತರ್ಜಾತಿ ಮದುವೆ ಆಗಿರುವಾಗ, ಆ ದೇವತೆಗಳನ್ನು ನಾವು ಪೂಜೆ ಮಾಡುವುದಕ್ಕೆ ಮಾತ್ರ ಇಟ್ಟುಕೊಂಡು ಅವರುಗಳ ಆದರ್ಶವನ್ನು ತಿರಸ್ಕಾರ ಮಾಡಿದ್ದೇವೆ. ಈ ವಿಷಯವನ್ನು ಏಕೆ ಹೇಳುತ್ತಿದ್ದೇನೆಂದರೆ, ಅಂತರ್ಜಾತಿ ವಿವಾಹ ನಮ್ಮ ಸಂಸ್ಕೃತಿಯಲ್ಲಿ ಅಂತರ್ಗತವಾಗಿದೆ. ಇದು ಹೊಸ ವಿಚಾರ ಅಲ್ಲ. ನಮ್ಮ ಸಂಸ್ಕೃತಿಯ ಒಂದು ಪ್ರಾಚೀನ ಭಾಗ. ಇದನ್ನು ನಾವು ಮುಂದುವರೆಸಿಕೊಂಡು ಹೋಗಬೇಕು. ಈ ಆಧುನಿಕ ಕಾಲದಲ್ಲಿ ಸ್ವಾಮಿ ವಿವೇಕಾನಂದರು, ಮಹಾತ್ಮಗಾಂಧೀಜಿಯವರು ರಾಮಮನೋಹರ ಲೋಹಿಯಾ ಅವರು ಮತ್ತು ಡಾ॥

ಅಂಬೇಡ್ಕರ್ ಅವರು ಇದನ್ನೇ ಪ್ರತಿಪಾದನೆ ಮಾಡಿದರು. ಲೋಹಿಯಾ ಮತ್ತು ಅಂಬೇಡ್ಕರ್ ಅವರುಗಳು ಈ ದೇಶ ಜಾತೀಯತೆಯಿಂದ ರೋಗಗ್ರಸ್ತವಾಗಿದ್ದು ಇದನ್ನು ಪಾರು ಮಾಡಬೇಕಾದರೆ ಅಂತರ್ಜಾತಿ ವಿವಾಹಗಳಿಂದ ಮಾತ್ರ ಸಾಧ್ಯ ಎಂದು ಹೇಳಿದ್ದಾರೆ. "ಸಿದ್ಧಲಿಂಗಯ್ಯನವರು ಈ ರೀತಿ ವಿವಾಹವಾದವರನ್ನ ಬಂಡಾಯಗಾರರು ಎಂದು ಕರೆದಿದ್ದಾರೆ. ಗಿರಿಜನರ ದುರಂತ ಬದುಕನ್ನ ಕುರಿತು "ಪ್ರಾಣಿಪಕ್ಷಿಗಳು ಹುಳುಹುಪ್ಪಟೆ, ಕ್ರಿಮಿಕೀಟಗಳು, ಗಿಡಮರಗಳು, ಪಾಚಿ ಹಾವಸೆಗಳ ನಡುವೆ ಹೇಗೆ ಶತಶತಮಾನಗಳಿಂದ ಬಿಡಿಸಲಾಗದ ಸಾವಯವ ಸಂಬಂಧ ಇತ್ತೋ ಅದೇ ರೀತಿ ಕಾಡಿನಲ್ಲಿ ವಾಸಿಸುತ್ತಿದ್ದಂತಹ ಗಿರಿಜನರಿಗೂ ಇವೆಲ್ಲವುಗಳ ಮೇಲೆ ಅವಲಂಬನೆ ಇತ್ತು. ಆದರೆ ಇಂದು ಏನಾಗಿದೆ ಅಂದರೆ ಅರಣ್ಯ ಸಂರಕ್ಷಿಸುವ ನೆಪದಲ್ಲಿ ನೂರಾರು ತಲೆಮಾರುಗಳಿಂದ ಕಾಡಿನಲ್ಲಿ ವಾಸಸುತ್ತಿದ್ದ ಗಿರಿಜನರನ್ನು ಅವರ ಮೂಲನೆಲೆಯಿಂದ ಒಕ್ಕಲೆಬ್ಬಿಸುವ ಕಾರ್ಯ ನಡೆಯುತ್ತಿದೆ ಇದರಿಂದಾಗಿ ಕಾಡಿನ ಹೊರತಾದ ಪ್ರದೇಶದ ಕಟ್ಟಲೆ, ಕಾನೂನುಗಳು, ವ್ಯವಸಾಯ, ಸಂಪ್ರದಾಯ ಮುಂತಾದುವುಗಳ ಬಗ್ಗೆ ಏನೇನೂ ಅರಿಯದ ಗಿರಿಜನರ ಬದುಕು ಅತ್ಯಂತ ಯಾತನಾಮಯ ಸ್ಥಿತಿ ತಲುಪಿದೆ.

ನಾಗರೀಕ ಸಮಾಜದ ಬೆರಗೇ ಗೊತ್ತಿಲ್ಲದ ಗಿರಿಜನರಿಗೆ ಕಾನೂನಿನ ಸರಳುಗಳು ಉರುಳುಗಳಾಗಿ ಹಿಂಸಿಸುತ್ತಿವೆ. ಕಾಡಿನಲ್ಲಿ ಸಮೃದ್ಧ ಜೀವನ ನಡೆಸಿಕೊಂಡು ಬದುಕಿದ ಈ ಜನರನ್ನ ಅರಣ್ಯ ಸಂರಕ್ಷಣೆಯ ಹೆಸರಿನಲ್ಲಿ ಹಸಿವು, ಬಾಯಾರಿಕೆಗಳಿಂದ ನರಳಿ ಸಾಯುವಂತೆ ಮಾಡಿರುವುದನ್ನು 'ಪರಿಸರ ಪ್ರೇಮ' ಎಂದು ಕರೆಯಬೇಕೆ"[೨] ಎಂಬ ಪ್ರಶ್ನೆ ಗಮನಾರ್ಹವಾದುದು. ನಮ್ಮಿಂದ ಅವರಿರಲಿ ಅವರಿಂದ ನಾವು ಕಲಿಯುವಂಥದ್ದು ಬಹಳಷ್ಟು ಇದೆ. ಎನ್ನುತ್ತ ಮಧ್ಯಪ್ರದೇಶದ ಜಾತಿ ಬುಡಕಟ್ಟು ಜನರ ವಿವರ ನೀಡಿದ್ದಾರೆ. "ಆ ಜನಾಂಗದ ಬಗ್ಗೆ ಅಭ್ಯಾಸವನ್ನು ಮಾಡುವುದಕ್ಕೆ ಹೋದಾಗ ಆ ಜನರ ದೇವತೆಗಳನ್ನು ನೋಡಿದೆ. ಆ ದೇವತೆಗಳು ತಲೆಯ ಮೇಲೆ ಬಾಂಡ್ಲಿ ಹೊತ್ತಿರುವುದನ್ನು, ಪೊರಕೆ ತೆಗೆದುಕೊಂಡು ಗುಡಿಸತಕ್ಕದ್ದನ್ನು, ಗುದ್ದಲಿ ಸನಿಕೆಗಳನ್ನು ಹಿಡಿದುಕೊಂಡು ಹೋಗತಕ್ಕಂಥ ಚಿತ್ರಗಳನ್ನು ಗಮನಿಸಿ "ಇದು ಕಾರ್ಮಿಕರ ಚಿತ್ರ ಇದ್ದಹಾಗೆ ಇದೆ; ದೇವತೆಗಳ ಚಿತ್ರ ಇದ್ದ ಹಾಗೆ ಇಲ್ಲ ಎಂದು ನನಗೆನ್ನಿಸುತ್ತದೆ." ಎಂದು ಅವರಿಗೆ ಹೇಳಿದೆ. ಅದಕ್ಕೆ ಅವರು "ಸ್ವಾಮಿ, ಯಾರೇ ಆಗಲಿ ಜೀವನ ಮಾಡಲಿಕ್ಕೆ ಕೆಲಸ ಮಾಡಲೇಬೇಕು. ದುಡಿಯಲೇ ಬೇಕು. ಆದ್ದರಿಂದ ಈ ವಿಷಯದಲ್ಲಿ ದೇವರನ್ನು ಕೂಡ ನಾವು ಬಿಟ್ಟಿಲ್ಲ. ಅವರಿಗೂ ಏನಾದರೂ ಒಂದು ಕೆಲಸವನ್ನು ಕೊಟ್ಟಿರುತ್ತೇವೆ." ಎಂದು ಹೇಳಿದರು. ಆದ್ದರಿಂದ ದುಡಿಯುವ ವರ್ಗದ ದೇವತೆಗಳನ್ನು ಇಟ್ಟುಕೊಂಡಿರುವಂಥ ಗುಡ್ಡಗಾಡು ಜನರ ಸಂಸ್ಕೃತಿ ಇದೆಯಲ್ಲ. ಅದು ನಮ್ಮ ಶಿಷ್ಟ ಸಂಸ್ಕೃತಿಗಿಂತ ಅತ್ಯಂತ ಶ್ರೇಷ್ಠವಾದುದು.

ಬಸವಣ್ಣನವರು ಹೇಳಿದ ಕಾಯಕವೇ ಕೈಲಾಸ ತತ್ವವನ್ನು ನಿಜವಾಗಿ ಆಚರಣೆಯಲ್ಲಿ ತಂದಿರುವಂಥವರು ಅವರು ಇದನ್ನು ನಾವು ಅಂದರೆ ಶಿಷ್ಟ ಸಮಾಜದ ನಾಗರಿಕರು ಯೋಚನೆ ಮಾಡಬೇಕು. ಗಿರಿಜನರಿಗೆ ಕಲಿಸಬೇಕು, ಅವರನ್ನು ತಿದ್ದಬೇಕು, ಅವರ ದುರಭ್ಯಾಸಗಳನ್ನು ಕಡಿಮೆ ಮಾಡಬೇಕು ಇತ್ಯಾದಿಯಾಗಿ ಹೇಳದೆ ಅವರಿಂದ ಕಲಿಯಬೇಕಾದ್ದು ಕೂಡಾ ಬಹಳ ಇದೆ ಎಂಬುದನ್ನು ತಿಳಿದುಕೊಳ್ಳಬೇಕು."[೭] ಅಗ್ನಿಶಾಮಕ ಇಲಾಖೆಯ ಸಮಸ್ಯೆ ಕುರಿತು ಮಾತನಾಡುತ್ತ "ಈ ಜನ ದಿನವೊಂದಕ್ಕೆ ೧೫ ರಿಂದ ೧೯ ಗಂಟೆಗಳ ಕಾಲ ದುಡಿವ ಪರಿಸ್ಥಿತಿ ಇದೆ. ಅಗ್ನಿಶಾಮಕರ ಇಂಥ ದುಡಿಮೆಯಿಂದ ಎಂತಹ ಚಿಂತಾಜನಕಸ್ಥಿತಿ ಉಂಟಾಗಿದೆ ಅಂದರೆ ೬ ತಿಂಗಳಾದರೂ ಇವರಿಗೆ ಮಕ್ಕಳನ್ನು ನೋಡುವ ಭಾಗ್ಯ ಇಲ್ಲ. ಬಿಸಿ ಊಟ ಮಾಡುವ ಯೋಗ ಇಲ್ಲ.

ಇನ್ನೂ ಅಗ್ನಿಶಾಮಕದಳದಲ್ಲಿನ ಶೇಕಡ ೨೫ರಷ್ಟು ಭಾಗ ನೌಕರರು ಅವರ ಅಧಿಕಾರಿಗಳ ಮನೆಯಲ್ಲಿ ಮನೆ ಆಳುಗಳಾಗಿ ಕೆಲಸ ಮಾಡುತ್ತಿದ್ದಾರೆ. ಈ ಅಧಿಕಾರಿಗಳಿಗೆ ಸರ್ಕಾರಿ ನೌಕರರನ್ನ ಅವರ ಮನೆ ಆಳುಗಳನ್ನಾಗಿ ದುಡಿಸಿಕೊಳ್ಳಲು ಯಾವ ನಿಯಮದಲ್ಲಿ ಅವಕಾಶವಿದೆ?" ಎಂದು ಪ್ರಶ್ನಿಸುತ್ತಾರೆ. ಅವರ ಈ ಕಾಳಜಿಯಿಂದ ಸರ್ಕಾರಿ ಜೀತಪದ್ಧತಿ, ಶೋಷಣೆತಪ್ಪಿ ರಾಜ್ಯದ ನೂರಾರು ಅಗ್ನಿಶಾಮಕ ಕುಟುಂಬಗಳು ನೆಮ್ಮದಿಯ ಉಸಿರು ಬಿಡುವಂತಾಗಿದೆ. ಜನಪರ ಕಾಳಜಿಯ ಸಿದ್ಧಲಿಂಗಯ್ಯನವರು ಹೀಗೇ ಅಂಗನವಾಡಿ ಕಾರ್ಯಕರ್ತೆಯರು, ಖಾಸಗಿ ಕಾರ್ಖಾನೆಗಳಲ್ಲಿ ಕಾರ್ಮಿಕರ ದುಸ್ಥಿತಿ ಪೌರಕಾರ್ಮಿಕರ ದುರಂತದ ಪ್ರಶ್ನೆಗಳು ಒಂದೆಡೆಯಾದರೆ ಕನ್ನಡ ಭಾಷೆ, ಹರಾಳು ಗ್ರಾಮದ ದಲಿತರ ಮೇಲಿನ ಹಲ್ಲೆ, ಕನ್ನಡ ಸಂಸ್ಕೃತಿ ಇಲಾಖೆಯಲ್ಲಿನ ವರ್ಗವ್ಯವಸ್ಥೆ, ಪರಿಶಿಷ್ಟ ಪ್ರತಿಭಾವಂತರ ನೇರನೇಮಕಾತಿಗಳು ಒಂದೆಡೆಯಾದರೆ ಅತ್ಯಂತ ಕುತೂಹಲಕಾರಿಯಾದ ದೆಹಲಿಯ ಕರ್ನಾಟಕ ಭವನದ ಬಿಳಿಯಾನೆಗಳ ಖರ್ಚು ವೆಚ್ಚ ಮತ್ತು 'ದಾಡಿಬಿಟ್ಟ ಅಪರಾಧ!' ಎಂಬ ಸಂಗತಿ ಕೇಳಿದಾಗಲಂತೂ ಅಶ್ಚರ್ಯಗೊಂಡು "ಪೋಲಿಸರು ಅಥವಾ ಸರ್ಕಾರದವರು ದಾಡಿಬಿಡುವುದು ಅಪರಾಧವೆಂದು ಹೇಳುವುದಾದರೆ ನಾನು ಮಾನ್ಯ ಸದಸ್ಯರಾದ ನಾಡಗೌಡರೂ ಕೂಡ ಜೈಲಿಗೆ ಹೋಗಬೇಕಾಗುತ್ತದೆ. ನಮ್ಮ ಸರ್ಕಾರ ಅಥವಾ ಪೋಲಿಸ್ ಅಧಿಕಾರಿಗಳಿಗೆ ಯುಕ್ತಾಯುಕ್ತ ವಿವೇಚನೆ ಇಲ್ಲ ಎಂಬುದಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ. ಚಾಲಕ ದಾಡಿಬಿಟ್ಟಿದ್ದಾನೆ ಮತ್ತು ನೀಟಾಗಿಲ್ಲ ಎನ್ನುವ ಕಾರಣಕ್ಕೆ ಅಟೋಚಾಲಕನನ್ನ ಬಂಧಿಸುವ ಮೊಕದ್ದಮೆ ಹೂಡುವ ಅಧಿಕಾರವನ್ನು ಸರ್ಕಾರ ಯಾವಾಗ ಕೊಟ್ಟಿತು? ಎಂದು ದಾಡಿಗೂ ಮಾನ್ಯತೆ ಇರಬೇಕೆಂದು ಪ್ರಶ್ನೆಸಿದ್ದಾರೆ. ಹಾಗೇ ದಿನಗೂಲಿ ನೌಕರರ ಖಾಯಮಾತಿ ಬಗ್ಗೆ, ಬ್ಯಾಕ್‌ಲಾಗ್ ಹುದ್ದೆ ಬಗ್ಗೆ, ಹೀಗೆ ಅನೇಕ ಸಾರ್ವಜನಿಕ ಸಮಸ್ಯೆಗಳ ಬಗೆಗಿನ ಸ್ಪಂದನೆಗಳನ್ನ ಈ ಕೃತಿಯಲ್ಲಿ ಕಾಣಬಹುದು.

ಊರುಕೇರಿ : ಇದು ಕನ್ನಡದ ಜನಪ್ರಿಯ ಆತ್ಮಕಥೆ. ಆತ್ಮಕಥೆ ಏಕಕಾಲಕೆ ಒಂದು ಸಮಾಜದ ಸಾಂಸ್ಕೃತಿಕ ಬದುಕಿನ ಚಾರಿತ್ರಿಕ ದಾಖಲೆಯೂ ಹೌದು. ಹಾಗೇ ಲೇಖಕನು ಬೆಳೆದು ಬಂದ ಸಾಮಾಜಿಕ ಕಥನವೂ ಹೌದು.

ಭಾರತೀಯ ಸಾಹಿತ್ಯ ಸಂದರ್ಭದಲ್ಲಿ ಆತ್ಮಕಥಾ ಸಾಹಿತ್ಯ ಪ್ರಕಾರವು ಸಾಮಾಜಿಕ ಪರಿಸರದ ಮೇಲೆ ಕ್ರಾಂತಿಕಾರಿ ಪರಿಣಾಮವನ್ನು ಉಂಟುಮಾಡಬಲ್ಲದು ಎಂಬುದನ್ನು ಮರಾಠಿ ದಲಿತ ಆತ್ಮಕಥೆಗಳು ಸಾಧ್ಯವಾಗಿಸಿವೆ. ದಲಿತ ಆತ್ಮಕಥೆಗಳು ಆತ್ಮಕಥಾ ಪರಿಕಲ್ಪನೆಯ ಬಗೆಗೆ ಬೆಳೆದುಬಂದಿದ್ದ ಸಂಪ್ರದಾಯಿಕ ವಿನ್ಯಾಸವನ್ನು ಛಿದ್ರಗೊಳಿಸಿದ ಶರಣಕುಮಾರ ಲಿಂಬಾಳೆ ಅವರ 'ಅಕ್ರಮ ಸಂತಾನ' ಲಕ್ಷ್ಮಣ ಗಾಯಕವಾಡರ 'ಉಚಲ್ಯಾ', ದಾದಾಸಾಹೇಮಲ್ಹಾರಿಮೇರೆಯವರ 'ಗಬಾಳ' ಮೊದಲಾದ ಆತ್ಮಕಥೆಗಳು ಶೋಷಿತರ ಅಗಾಧ ಶಕ್ತಿಯನ್ನ ಅಭಿವ್ಯಕ್ತ ಪಡಿಸಿವೆ. ಜೊತೆಗೆ ಕಾವ್ಯದಷ್ಟೆ ಪ್ರಖರವಾಗಿ ಆತ್ಮಕಥೆಗಳಲ್ಲಿಯೂ ಶೋಷಕ ವ್ಯವಸ್ಥೆಯ ವಿರುದ್ಧ ಆಕ್ರೋಶ-ಸಿಟ್ಟು ವ್ಯಕ್ತಗೊಂಡಿರುವುದನ್ನು ಕಾಣಬಹುದು.

ಕನ್ನಡದಲ್ಲಿ ಅರವಿಂದ ಮಾಲಗತ್ತಿಯವರ 'ಗೌರ್ಮೆಂಟ್ ಬ್ರಾಹ್ಮಣ', ಸಿದ್ಧಲಿಂಗಯ್ಯನವರ 'ಊರುಕೇರಿ' ತಂಬಾಡಿರಾಮಯ್ಯನವರ 'ಮಣೆಗಾರ', ಕೆ. ಗೋವಿಂದರಾಜು ಅವರ 'ಮನವಿಲ್ಲದವರ ಮಧ್ಯೆ' ಲಕ್ಷ್ಮಣ್ ಅವರ 'ಸಂಬೋಳಿ' ಮೊದಲಾದ ಆತ್ಮಕಥೆಗಳನ್ನ ನೋಡಬಹುದು.

ಕನ್ನಡ ದಲಿತ ಆತ್ಮಕಥೆಗಳಲ್ಲಿ ಮರಾಠಿಯ ಆತ್ಮಕಥೆಗಳಂತೆಯೇ ಕೆಲವರಲ್ಲಿ ವ್ಯವಸ್ಥೆಯ ವಿರುದ್ಧ ಸಿಟ್ಟು, ಆಕ್ರೋಶ ಕಂಡುಬರುತ್ತವೆ. ಆದರೆ ಕನ್ನಡದ ಎರಡನೆಯ ದಲಿತ ಆತ್ಮಕಥೆ ಊರುಕೇರಿಯು "ತಮ್ಮ ಕವನಗಳಲ್ಲಿ ರೊಚ್ಚಿನ ಭಾಷೆಯನ್ನ ಬಳಸುವ ಸಿದ್ಧಲಿಂಗಯ್ಯ ಇಲ್ಲಿ ಯಾವ ರೋಷವನ್ನು ಪ್ರಕಟಿಸದೆ mater of fact ಎನ್ನುವಂತೆ ಸಾಮಾನ್ಯ ಸಂಗತಿಗಳನ್ನು ಹೇಳಿಕೊಂಡು ಹೋಗುವ ದನಿಯಲ್ಲಿ ಮಾತನಾಡುವುದೇ ಕೃತಿಯ ಶಕ್ತಿಯನ್ನು ಹೆಚ್ಚಿಸುತ್ತಿದೆ." ಈಗಾಗಲೇ ಹಲವು ಮುದ್ರಣಗಳನ್ನು ಕಂಡಿರುವ ಊರುಕೇರಿಯನ್ನು ಪಾವಣ್ಣನ್ ಎಂಬುವರು 'ಊರುಂಚೇರಿ' ಎಂಬುದಾಗಿ ತಮಿಳು ಭಾಷೆಗೆ ಅನುವಾದಿಸಿದ್ದು, ಅಲ್ಲಿಯೂ ಕೂಡಾ ಎರಡು ಮುದ್ರಣವನ್ನು ಕಂಡಿದೆ. ಊರುಕೇರಿಯು ಪುಸ್ತಕರೂಪದಲ್ಲಿ ಬರುವುದಕ್ಕೂ ಮೊದಲು ಅನಂತಮೂರ್ತಿಯವರ ಋಜುವಾತು ಪತ್ರಿಕೆಯಲ್ಲಿ, ಲಂಕೇಶರ ಲಂಕೇಶ್ ಪತ್ರಿಕೆಯಲ್ಲಿ ಬಿಡಿಬಿಡಿಯಾಗಿ ಕಾಣಿಸಿಕೊಂಡಿತ್ತು. ಕೇಂದ್ರ ಸಾಹಿತ್ಯ ಅಕಾಡೆಮಿಯು ೨೦೦೩ರಲ್ಲಿ ಊರುಕೇರಿ ಆತ್ಮಕಥೆಯನ್ನು ಎಸ್. ಆರ್ ರಾಮಕೃಷ್ಣ ಅವರಿಂದ ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿ ಪುಸ್ತಕ ರೂಪದಲ್ಲಿ ಹೊರತಂದಿದೆ.

ಸಿದ್ಧಲಿಂಗಯ್ಯನವರು ತಮ್ಮ ಆತ್ಮಕಥೆಗೆ ಇಟ್ಟಿರುವ ಹೆಸರು ಅವರ ಸೂಕ್ಷ್ಮ ಸಂಶೋಧಕನ ಮನಸ್ಸಿನ ಸಾಕ್ಷಿಯಂತಿದೆ. ಇಲ್ಲಿ ಊರು ಕೇರಿಗಳ ನಡುವಿನ

ಕಥನಗಳೇ ನೋವಿನ, ಹಾಸ್ಯದ, ವಿಷಾದದ, ವಿಡಂಬನೆಯ, ವ್ಯಂಗ್ಯದ, ನೆನಪಿಸಿಕೊಳ್ಳುತ್ತ ಸಾಗುವ ಪ್ರಯಾಣಿಕನ ಪ್ರಯಾಣದಂತೆ ಎಳೆಎಳೆಯಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಒಮ್ಮೊಮ್ಮೆ ಹಳ್ಳಿಯ ಮತ್ತೊಮ್ಮೆ ನಗರದ ಸಮಾಜಗಳನ್ನ ಬಿಡಿಸಿ ತೋರಿಸುವ ಈ ಆತ್ಮಕಥೆ" ಬಡತನದ ನೋವಿನ ಕತೆಯೂ ಅಲ್ಲ. ಸಾಧನೆಗಳ ಚರಿತ್ರೆಯೂ ಅಲ್ಲ. ತಾನು ಬೆಳೆದು ದೊಡ್ಡವನಾದ ಬಗೆಯನ್ನು ದಾಖಲಿಸುವ ಹಂಬಲವೂ ಇಲ್ಲಿಲ್ಲ. ಸೃಜನಶೀಲ ಮನಸ್ಸು ಬಡತನದಲ್ಲಿ ಹೊರಳಾಡುತ್ತಲೇ ಅದನ್ನು ಗೆಲ್ಲುತ್ತ, ಅಪಮಾನ ಅನುಭವಿಸುತ್ತಲೇ ಅದರ ವಿರುದ್ಧ ಹೋರಾಟದ ಮನೋಭಾವವನ್ನು ಬೆಳೆಸಿಕೊಳ್ಳುತ್ತ ಸಮಾಜದ ವಾಸ್ತವ ಸ್ಥಿತಿಯನ್ನು ಒಪ್ಪಿಕೊಳ್ಳುತ್ತಲೇ ಅದಕ್ಕೆ ಮುಖಾಮುಖಿಯಾಗುತ್ತ ಸುತ್ತಲಿನ ಪರಿಸರಕ್ಕೆ ಆರೋಗ್ಯ ಪೂರ್ಣವಾಗಿ ಸ್ಪಂದಿಸಿದ ಕಥನವಿದು. ಸಾಮಾನ್ಯವಾಗಿ ಆತ್ಮಕಥೆಯಲ್ಲಿ 'ನಾನು' ಕೇಂದ್ರವಾಗಿ ಅದರ ಸುತ್ತ ವಿವರಗಳು ಬೆಳೆಯುತ್ತವೆ. ಆದರೆ ಊರುಕೇರಿಯಲ್ಲಿ 'ನಾನು' ಎಂಬ 'ಅಹಂ' ಇಲ್ಲ ಬದಲಾಗಿ 'ನಾನು' ಎಂಬ ಅಸ್ತಿತ್ವವನ್ನು ಕಂಡುಕೊಳ್ಳುವ ಪ್ರಕ್ರಿಯೆಯ ಕಥನವಾಗಿ ಇದು ಮುಖ್ಯ ಆಗುತ್ತದೆ"[೯] "ಜನಾಂಗವಾದ ಇರುವ ಸಮಾಜದಲ್ಲಿ ಒಬ್ಬ ಅಸ್ಪೃಶ್ಯ ವ್ಯಕ್ತಿ ತನ್ನ ಆತ್ಮಕಥೆ ಬರೆದಾಗ ಅದು ಒಬ್ಬ ವ್ಯಕ್ತಿಯ ಕಥನವಾಗಿರುವುದಿಲ್ಲ. ಇಡೀ ಒಂದು ಸಮುದಾಯವೇ ಚರಿತ್ರೆಯಲ್ಲಿ ಪಟ್ಟ ಅಪಮಾನದ, ಬದುಕುಳಿಯಲು ಮಾಡಿದ ಸೆಣಸಾಟದ ಕಥನವಾಗಿರುತ್ತದೆ. ಜತೆಯಲ್ಲೇ ಅದು ಸಂಪ್ರದಾಯಿಕ ಸಮಾಜ ಒಂದರ ಒಳಗಿನ ಅಮಾನವೀಯತೆ....ಕ್ರೌರ್ಯಗಳ ಕಥನ ಕೂಡ ಆಗಿರುತ್ತದೆ"[೧೦] ಎಂಬ ನರಹಳ್ಳಿ ಬಾಲಸುಬ್ರಮಣ್ಯಂ ಅವರ ಮತ್ತು ರಹಮತ್ ತರೀಕೆರೆಯವರ ಹೇಳಿಕೆಗಳು ದಲಿತ ಜಗತ್ತಿನ ಒಟ್ಟು ಚಿತ್ರವನ್ನ ಕಟ್ಟುವಂತಿವೆ. ನರಹಳ್ಳಿ ಬಾಲಸುಬ್ರಮಣ್ಯಂ ಅವರು 'ಊರುಕೇರಿ'ಯನ್ನ ಪರಿಚಯಿಸುತ್ತ ಇದು "ಜನರಿಗೆ ತಿಳುವಳಿಕೆ ನೀಡುವ ಹಂಬಲವಾಗಲೀ ಇತರರಿಗೆ ತನ್ನ ನೋವನ್ನು ತೋಡಿಕೊಳ್ಳಬೇಕೆಂಬ ಮನೋಭಾವವಾಗಲೀ ಇಲ್ಲಿಲ್ಲ. ಅಥವಾ ತನ್ನ ಸಾಧನೆಯನ್ನ ಹೆಮ್ಮೆಯಿಂದ ಹಿಂತಿರುಗಿ ನೋಡುವ ಬಗೆಯೂ ಇದಲ್ಲ. ಸೃಜನಶೀಲ ಮನಸ್ಸಿಗೆ ಸಹಜವಾದ ಕುತೂಹಲ, ಜಡವಾಗದ ಸೂಕ್ಷ್ಮ ಸಂವೇದನೆ ಹಾಗೂ ವಿಶಿಷ್ಟ ಎನ್ನ ಬಹುದಾದ ತುಂಟತನದ ಮೂಲಕ ತನ್ನನ್ನು ತಾನು ಕಂಡುಕೊಳ್ಳುವ, ತನ್ಮೂಲಕ ಒಂದು ಜನಾಂಗವನ್ನ ಒಂದು ತಲೆಮಾರನ್ನು ಪರಿಚಯಿಸುವ ಪ್ರಯತ್ನ ಇಲ್ಲಿದೆ."[೯] ಊರುಕೇರಿಯಲ್ಲಿ ಮಾಗಡಿ, ಮಂಚನಬೆಲೆ, ಅವ್ವೇರಹಳ್ಳಿ ಬೆಂಗಳೂರು ನಗರದ ಕೊಳಚೆ ಪ್ರದೇಶವಾಗಿದ್ದ ಶ್ರೀರಾಂಪುರದ. ಪರಿಸರ, ಕೌಟುಂಬಿಕ ವಿವರಗಳು, ಶಿಕ್ಷಣ, ವಿದ್ಯಾರ್ಥಿನಿಲಯದ ಪ್ರಸಂಗಗಳು, ಹೋರಾಟಗಳು, ರಾತ್ರಿಶಾಲೆ, ಸಾಂಸ್ಕೃತಿಕ ಚಟುವಟಿಕೆಗಳು, ಮಹತ್ವಪೂರ್ಣ ವ್ಯಕ್ತಿಸಂಪರ್ಕಗಳ ಪ್ರಸಂಗಗಳು, ಹಾಸ್ಯ ಪ್ರಸಂಗಗಳು, ಕಿಲಾಡಿತನಗಳು, ಸೊಗಸಾಗಿ ಅಭಿವ್ಯಕ್ತವಾಗಿವೆ. ಸಿದ್ಧಲಿಂಗಯ್ಯನವರ ಗದ್ಯ ಬರವಣಿಗೆ,

ತೇಜಸ್ವಿಯವರ ಗದ್ಯದಂತೆ ಸೊಗಸಾಗಿ ಓದಿಸಿಕೊಂಡು ಹೋಗುವ ಗುಣ ಹೊಂದಿರುವಂತದ್ದು.

ಜಮೀನ್ದಾರಿ ಕ್ರೌರ್ಯವನ್ನ ತಣ್ಣಗೆ ನೀಡುವ ಬಾಲ್ಯದ ಪ್ರಸಂಗದಿಂದ ಪ್ರಾರಂಭವಾಗುವ ಇವರ ಆತ್ಮಕಥೆ ದಟ್ಟವಾದ ನೋವು ಮತ್ತು ಸಂಕಟದ ಸ್ಥಾಯೀಗುಣವನ್ನ ಸ್ಥಾಪಿಸಿದನಂತರ ಆ ಅನುಭವಗಳನ್ನ ಅನಂತರ ವಿನೋದ, ಕಿಟಕಿ, ಕಿಲಾಡಿತನಗಳ ಭಿನ್ನ ಭಿನ್ನ ಆವರಣಗಳಿಂದ ಉದ್ದಕ್ಕೂ ಸ್ಥಾಪಿಸುತ್ತ ಹೋಗಿದ್ದಾರೆ. ಅವುಗಳೆಂದರೆ ಕಿಲಾಡಿಮಾವನ ಎಮ್ಮೆ ಪ್ರಸಂಗ, ಭಯಸ್ತಗಂಡ ಮನೆಮೇಲೇರಿ ಕುಳಿತುಕೊಳ್ಳುವ ಪ್ರಸಂಗ, ಕೀಟಲೆ ಬಿಡಿಸುತ್ತೇನೆಂದು ಶನಿದೇವರ ಪೂಜಾರಿ ಕಿರೀಟವಿಟ್ಟರೆ ಕಿರೀಟವನ್ನೇ ಹೊತ್ತು ಓಡುವ ಪ್ರಸಂಗ, ಎಕ್ಸಟ್ರಾ ಮುದ್ದೆ, ಬಿಳಿಗಿರಿ ರಂಗಯ್ಯನವರ ಆಗಮದ ಪ್ರಸಂಗಗಳು, ಸ್ಮಶಾನವಾಸಮತ್ತು ಕವಿತೆ ಕಟ್ಟುವ ಪ್ರಸಂಗಳು, ರಾಚಯ್ಯ, ಬಸವಲಿಂಗಯ್ಯ, ಡಿ.ಆರ್.ನಾಗರಾಜ್, ಕಾಳೇಗೌಡ ನಾಗವಾರ, ಕರಿಗೌಡ ಬೀಚನಹಳ್ಳಿ, ಶೂದ್ರಶ್ರೀನಿವಾಸ, ಕಲ್ಗುಡಿ, ಪೊಲಂಕಿ, ಜಿ.ಎಸ್.ಶಿವರುದ್ರಪ್ಪ ಮೊದಲಾದವರೊಂದಿಗಿನ ಬೇರೆ ಬೇರೆ ತೆರನ ಸನ್ನಿವೇಶಗಳು ಊರುಕೇರಿ ಭಾಗ–ಎರಡರಲ್ಲಿನ ಇಕ್ಬಾಲ್, ಯಶವಂತ ಚಿತ್ತಾಲ, ಕನ್ನಡ ಪದದ ಮೇರೆ ಮೀರಿದ ಅಭಿಮಾನ ತೋರುವ ಸಾಹಿತ್ಯ ಸಮ್ಮೇಳನ "ಕಾ.ಚ.ರಾಮಣ್ಣ" ಪ್ರಸಂಗ, ರೈಲ್ವೆ ಪ್ರಯಾಣದ 'ಡಿದ್ ಲಿಂಗ್ ಡಿ", ಸಾಲದ ಮಗು, ವಿವಾಹ ವಿಳಂಬ ಹೆತ್ತವರಿಗೆ ಏಟು, ಒಲವೇ ನಮ್ಮ ಬದುಕು, ಬಾನಂದೂರು ಕೆಂಪಯ್ಯನವರ ಬಳಿ ಇದ್ದ ಕಳ್ಳಬೆಕ್ಕು, ಇವೆಲ್ಲ ಒಂದು ಬಗೆಯ ವಿವರಗಳ ಶೈಲಿಯನ್ನ ಹೇಳಿದರೆ ರೈಲ್ವೆ ಹಳಿಯ ಮೇಲೆ ನಡೆಸಿದ ಚಳುವಳಿಯಲ್ಲಿ ತಮಿಳರ ಗೋವಿಂದರಾಜು ಬಲಿಯಾದ ಪ್ರಸಂಗ, ಹೋರಾಟದ ಸಾಗರದಲ್ಲೊಂದು ಹನಿ ಪ್ರಸಂಗದಲ್ಲಿ ಕವಿಗಳು ಮೆರವಣಿಗೆ ಉದ್ದಕ್ಕೂ ಮಗುವನ್ನ ಎತ್ತಿಕೊಂಡು ಹೋದ ಪ್ರಸಂಗ, ಬೂಸಾ ಚಳುವಳಿ ಮತ್ತೊಂದು ಬಗೆಯ ಚಿತ್ರವನ್ನ ಕಟ್ಟಿಕೊಡುತ್ತವೆ. ಇದರ ನಡುವೆ ಬಾರ್‌ನಲ್ಲಿ ಗುರುಗಳ ಮುಂದಾಲೋಚನೆ, ದೂರದರ್ಶನದಲ್ಲಿ ಕಾವ್ಯವಾಚನ, ಹೋಟೇಲ್‌ನಲ್ಲಿ ಅನಾಮಿಕನೊಬ್ಬ ತರಕಾರಿ ಮಾರುವವನೆಂದು ಹೇಳಿದ ಪ್ರಸಂಗ, ಕವಿಗಳು ಕಲ್ಗುಡಿ ಮನೆಗೆ ಹೋದಾಗ ಕಳ್ಳರೇ ಅತಿಥಿಯಾಗಿ ಬರುವ ಪ್ರಸಂಗವೆನ್ನುವ ಮಾದರಿಗಳು ಈ ಪುಸ್ತಕಗಳಿಗೆ ಮತ್ತೊಂದು ರೀತಿಯ ಸೊಗಸುಗಾರಿಕೆಯನ್ನ ತಂದಿತ್ತಿವೆ. ಡಿ.ಆರ್.ನಾಗರಾಜ್ ಅವರು ಗುರ್ತಿಸಿರುವಂತೆ "ಸಿದ್ಧಲಿಂಗಯ್ಯನವರ ಆತ್ಮಕಥೆಯಲ್ಲಿ ದಲಿತ ಲೇಖಕರ ಕೃತಿಗಳಲ್ಲಿ ನಾವು ನಿರೀಕ್ಷಿಸಬಹುದಾದ ಅನೇಕ ಅಂಶಗಳಿವೆ. ಬಡತನ, ರೊಚ್ಚು, ಅವಮಾನ, ಇತ್ಯಾದಿಗಳೆಲ್ಲಾ ಇವೆ. ಆದರೆ ಇಡೀ ಕೃತಿಯಲ್ಲಿ ಹೊಸದಾದ, ಅನಿರೀಕ್ಷಿತವಾದ ಒಂದು ಮುಖ್ಯಾಂಗವೂ ಇದೆ. ಅದು ಬಡತನ ಮತ್ತು ಹಿಂಸೆಯ ಬಗ್ಗೆ ಭೀತಿಯ ಗೈರುಹಾಜರಿ, ಈ ಕೃತಿಯ ವಸ್ತು ದಲಿತಕೃತಿಗಳಿಗೆ ಸಾಮಾನ್ಯವಾದದ್ದು, ಸಹಜವಾದದ್ದು. ಆದರೆ, ಈ ವಸ್ತುವನ್ನು

ನಿರ್ವಹಿಸುವ ಧ್ವನಿ ಭಿನ್ನವಾದದ್ದು, ಚೇತೋಹಾರಿಯಾದದ್ದು. ಬಡತನ, ಜಾತಿ ಅವಮಾನದ ಭೀತಿಗಳಿಂದ ದಲಿತ ಕಥೆ ಸುಳ್ಳು. ಆದರೆ ಅವನ್ನ ಪ್ರತಿಭೆಯಲ್ಲಿ ಲೇಖಕ ಗೆಲ್ಲುತ್ತಾನೆ ಎಂಬ ಮಾತು ನಿಜ. ತಮ್ಮ ಬದುಕಿನಲ್ಲಿನ ಹಸಿವು, ಅವಮಾನಗಳನ್ನು ಕೊಂಚ ವಕ್ರೀಕರಣಗೊಳಿಸುವ ಮೂಲಕ ಕವಿ ಸಿದ್ಧಲಿಂಗಯ್ಯ ಅವನ್ನು ದಾಟುವ ಮಾರ್ಗಗಳನ್ನು ತೋರಿಸುತ್ತಾರೆ." "ಸಿದ್ಧಲಿಂಗಯ್ಯನವರ ವಿಶಿಷ್ಟತೆ ಅವರ ಶೈಲಿಯಲ್ಲಿದೆ. ಇಲ್ಲಿ ಅತ್ಯಂತ ಬುದ್ಧಿವಂತ ತುಂಟನೊಬ್ಬನ ವ್ಯಂಗ್ಯ, ಪ್ರಬಂಧ ಧ್ವನಿ. ಇತ್ಯಾದಿಗಳನ್ನು ಬಳಸಿ ಹೊಸ ಬಗೆಯ ಆತ್ಮ ಪ್ರತಿಮೆಗಳನ್ನು ಸೃಷ್ಟಿಸುತ್ತಿದ್ದಾನೆ. ಆ ಸಂಜೆಯೇ ಈ ಕೃತಿ" "ಅಕ್ಷರ–ಚಿಂತನ" ವಾಾಲೆಯಲ್ಲಿ ಬರುವುದು ಸೂಕ್ತವೆಂದು ತೀರ್ಮಾನಿಸಿದೆ. "ಅಕ್ಷರ–ಚಿಂತನ" ಹೊಸ ರೀತಿಯ ಆತ್ಮವಿಶ್ವಾಸ, ಆತ್ಮವ್ಯಾಖ್ಯಾನಗಳನ್ನು ಸೃಷ್ಟಿಸುವ ಕೆಲಸದಲ್ಲಿ ತೊಡಗಿದೆ. ಭಾರತವು ನಾಗರೀಕತೆಯಾಗಿ ಪಶ್ಚಿಮದ ಎದುರಿಗೆ ಹೊಸರೀತಿಯ ಆತ್ಮವಿಶ್ವಾಸವನ್ನು ಸೃಷ್ಟಿಸಿಕೊಳ್ಳಬೇಕು. ಭಾರತೀಯ ಸಮಾಜದಲ್ಲಿ "ಅವಮಾನಿತ" ವರ್ಗಗಳು, "ಪರಾಜಿತ" ಗುಂಪುಗಳು ಪ್ರತಿಷ್ಠಿತರ ಎದುರಿಗೆ ಹೊಸರೀತಿಯ ಆತ್ಮವಿಶ್ವಾಸವನ್ನು ಸೃಷ್ಟಿಸಿಕೊಳ್ಳಬೇಕು ಮತ್ತು ಇವೆರಡೂ ಪರಸ್ಪರ ಸಂಬಂಧವಿರುವ ಸಾಂಸ್ಕೃತಿಕ ರಾಜಕಾರಣದ ಪ್ರತಿಕ್ರಿಯೆ. ಈ ದೃಷ್ಟಿಯಿಂದ "ಊರುಕೇರಿ"ಯಲ್ಲಿ ದಲಿತ ವ್ಯಕ್ತಿತ್ವವನ್ನೂ ಹೊಸ ರೀತಿಯಲ್ಲಿ ಪ್ರತಿಮೀಕರಿಸುವ ಪ್ರಯತ್ನವಿದೆ. ಈ ರೀತಿಯ ಧ್ವನಿ ಬಹುಪಾಲು ಬಂಡಾಯ.ದಲಿತ ಲೇಖಕರಿಗೆ ಸಾಧ್ಯವಾಗದ್ದು."

ಇನ್ನೂ ನೋವಿನ ಪುಟವೊಂದು ಈ ಊರುಕೇರಿಯ ಆರಂಭದಲ್ಲೇ ಇದೆ. ಇದನ್ನ ಅನೇಕರು ಗುರುತಿಸಿದ್ದಾರೆ ಕೂಡ. "ಕೇರಿಯಲ್ಲಿ ಕೊನೆಯ ಮನೆ ನಮ್ಮದು. ನಮ್ಮ ಮನೆಗೂ ಕೊನೆಯಲ್ಲಿ ಇನ್ನೊಂದು ಮನೆ ಇತ್ತೇನೊ? ಅದರ ಭಾವಣಿ ಕುಸಿದು ಮೂರು ನಾಲ್ಕು ಅಡಿ ಎತ್ತರದ ಮಣ್ಣಿನ ಗೋಡೆ ಮಾತ್ರ ಉಳಿದಿತ್ತು. ನಾನಲ್ಲದೆ ಬೇರೆ ಮನೆಗಳ ಹುಡುಗರು ಆ ಮೋಟುಗೋಡೆಯ ಮೇಲೆ ನಿಂತು ದೂರಕ್ಕೆ ಕಣ್ಣು ಹಾಯಿಸಿ ಕೆಲಸಕ್ಕೆ ಹೋಗಿರುವ ಅಪ್ಪ ಅವ್ವರನ್ನು ಹುಡುಕುತ್ತಿದ್ದೆವು. ಮನೆಗೆ ಬೇಗ ಬರಬೇಕೆಂದು ಕೆಲವು ಸಲ ಹೆತ್ತವರಿಗೆ ಕೂಗಿ ಹೇಳುತ್ತಿದ್ದೆವು. ಕೂಗು ಅವರಿಗೆ ಕೇಳಿಸಿತ್ತಿತ್ತೋ ಇಲ್ಲವೋ ನಾವು ಅವರಿಗೆ ಕಾಣಿಸುತ್ತಿದ್ದೆವೋ ಇಲ್ಲವೋ ಅದು ನಮಗೆ ಗೊತ್ತಿರಲಿಲ್ಲ. ಈ ಮೋಟುಗೋಡೆಗೆ ಐನೂರು ಆರುನೂರು ಅಡಿ ಅಂತರದಿಂದ ಐನೋರ ಜಮೀನು ಪ್ರಾರಂಭವಾಗುತ್ತಿತ್ತು. ಆ ಜಮೀನಿನಲ್ಲಿ ಐನೋರ ಚಂದವಾದ ಮನೆ, ದೊಡ್ಡದಾದ ಪಂಪ್‌ಸೆಟ್ ಬಾವಿ ಇದ್ದವು. ಆ ಬಾವಿಯಿಂದ ಅವರ ಹೊಲಗದ್ದೆಗಳಿಗೆ ನೀರು ಹರಿಯುತ್ತಿತ್ತು. ನಮ್ಮ ಕೇರಿಯ ಜನಕ್ಕೆ ಕುಡಿಯಲು ನೀರು ಸಿಕ್ಕರೆ ಅದೇ ದೊಡ್ಡ ಸಂಗತಿ. ನಮ್ಮ ಜನ ಸ್ವಲ್ಪ ದೂರದಲ್ಲಿದ್ದ ಹೂವಿನ ತೋಟದ ಪಕ್ಕದ ಬಾವಿಯಿಂದ ನೀರು ತರುತ್ತಿದ್ದರು.

ಎಂದಿನಂತೆ ಹುಡುಗರೆಲ್ಲ ನಮ್ಮ ಪಕ್ಕದ ಮನೆಯ ಮೋಟುಗೋಡೆಯ ಮೇಲೆ ನಿಂತು ಅಪ್ಪ, ಅವ್ವಂದಿರನ್ನು ಕೂಗುತ್ತಿದ್ದಾಗ ಒಂದು ನೋಟ ಕಾಣಿಸಿತು. ಐನೋರ ಹೊಲದಲ್ಲಿ ಇಬ್ಬರು ಮನುಷ್ಯರ ಹೆಗಲಮೇಲೆ ನೊಗಹೂಡಿ ಮತ್ತೊಬ್ಬ ಗದ್ದೆ ಉಳುತ್ತಿದ್ದರು. ನೊಗಹೊತ್ತ ಆ ಇಬ್ಬರು ಮನುಷ್ಯರು ಎತ್ತುಗಳಂತೆ ಮುಂದೆ ಹೋಗುತ್ತಿದ್ದರೆ ಮೂರನೆಯವನು ಹಿಂದಿನಿಂದ ಚಾಟಿ ಬಾರಿಸುತ್ತ ಉಳುಮೆ ಮಾಡುತ್ತಿದ್ದ ದೃಶ್ಯ ಮೋಜಿನಂತೆ ಕಾಣುತ್ತಿತ್ತು. ಆದರೆ ನೊಗಹೊತ್ತಿದ್ದ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬ ನನ್ನ ಅಪ್ಪ ಎಂದು ಗೊತ್ತಾದ ಕ್ಷಣದಿಂದ ನನ್ನಲ್ಲಿ ವಿಚಿತ್ರವಾದ ಸಂಕಟ ಶುರುವಾಯಿತು. ಹುಡುಗರಿದ್ದ ಜಾಗಕ್ಕೇ ಬಂದ ಕೆಲವು ಹೆಂಗಸರು 'ಪಾಪ ದ್ಯಾವಣ್ಣನಿಗೆ ಎಂಥ ಕಷ್ಟ ಬಂತು' ಎಂದದ್ದು ನನ್ನ ಕಿವಿಗೆ ಬಿದ್ದು ಮನಸ್ಸಿನ ನೋವು ಇಮ್ಮಡಿಯಾಯಿತು. ಗದ್ದೆಯಲ್ಲಿ ಎತ್ತಾಗಿ ದುಡಿದ ಅಪ್ಪ ಸಂಜೆ ಮನೆಗೆ ಬಂದಾಗ ಅವ್ವ ಅವನ ಭುಜಕ್ಕೆ ಎಣ್ಣೆ ಕಾಯಿಸಿ ಹಚ್ಚುತ್ತಿದ್ದಳು."

ಕವಿ ಸಿದ್ಧಲಿಂಗಯ್ಯನವರ ಈ ಬಾಲ್ಯಕಾಲದ ನಿರೂಪಣೆ ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲೂ ಉಳಿದುಕೊಂಡಿದ್ದ ಭೀಕರ ವರ್ಗ ತಾರತಮ್ಯವನ್ನು ಶೋಷಣೆಯನ್ನು ನಮ್ಮ ಮುಂದೆ ತೆರೆದಿಡುತ್ತದೆ. ಊರುಕೇರಿ ಭಾಗ ಎರಡರ ವಿಶೇಷವೆಂದರೆ ಈ ಪ್ರಬಂಧದ ಬಹುಮುಖ್ಯ ವ್ಯಕ್ತಿಗಳಾದ ಸಿದ್ಧಲಿಂಗಯ್ಯನವರು ತೆಲುಗಿನ ಮಹಾಕವಿ ಶ್ರೀಶ್ರೀ ಅವರನ್ನ ಬೇಟಿಯಾದ ಪ್ರಸಂಗ ಬಂಡಾಯ ಸಮ್ಮೇಳನಕ್ಕೆ ಬಂದಿದ್ದ ಶ್ರೀಶ್ರೀ "ಸಮ್ಮೇಳನವನ್ನು ಉದ್ಘಾಟನೆ ಮಾಡಿ ಅವರು ಅಂದು ಅದ್ಭುತವಾಗಿ ಮಾತನಾಡಿದರು. ಶ್ರೀಶ್ರೀ ಭಾರತದ ಶ್ರೇಷ್ಠ ಕ್ರಾಂತಿಕಾರಿ ಕವಿ. ಅವರು ಬಂಡಾಯ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಲು ಮದ್ರಾಸಿನಿಂದ ಬಂದಿದ್ದರು. ನಾನು ಅವರ ಬಗ್ಗೆ ಕೇಳಿದ್ದೆ, ಓದಿದ್ದೆ ನೋಡಿರಲಿಲ್ಲ. ಹಿಂದಿನ ದಿನವೇ ಬಂದ ಅವರು ಸತ್ಕಾರ್ ಹೊಟೇಲ್‌ನಲ್ಲಿ ಇಳಿದು ಕೊಂಡಿದ್ದರು. ನಾನು ಸಮ್ಮೇಳನದ ದಿನ ಬೆಳಗ್ಗೆಯೇ ಅವರನ್ನು ನೋಡಲು ಅವರ ಹೋಟೆಲಿನ ಕೊಠಡಿಗೆ ಹೋದೆ. ತುಂಬ ವಯಸ್ಸಾಗಿದ್ದ ಶ್ರೀಶ್ರೀ ಅವರ ಆರೋಗ್ಯ ಅಷ್ಟೊಂದು ಚೆನ್ನಾಗಿರಲಿಲ್ಲ. ಒಂದು ಹಳೆಯ ಸ್ವೆಟರನ್ನು ತೊಟ್ಟು ಮಂಚದ ಮೇಲೆ ಕುಳಿತಿದ್ದರು. ಬೆಳಗ್ಗೆಯೇ ಅವರು ಮದ್ಯಸೇವಿಸಿದ್ದಂತಿತ್ತು. ಕವಿಗಳು ಉದ್ಘಾಟನಾ ಭಾಷಣ ಹೇಗೆ ಮಾಡುತ್ತಾರೆ ಎಂದು ನನಗೆ ಭಯವಾಯಿತು. ಸಭೆಗೆ ಆಗಮಿಸಿ ವೇದಿಕೆ ಏರುತ್ತಿದ್ದಂತೆಯೇ ಶ್ರೀಶ್ರೀ ಚುರುಕಾದರು. ಅದ್ಭುತವಾದ ಉದ್ಘಾಟನಾ ಭಾಷಣ ಮಾಡಿದರು. ಅವರು ಕರ್ನಾಟಕಕ್ಕೇ ಬಂದು ಬಂಡಾಯ ಸಾಹಿತಿಗಳನ್ನು ಹರಸಿದ್ದು

ಬಹಳ ಹೆಮ್ಮೆಯ ವಿಚಾರ. ಮದ್ರಾಸಿಗೆ ಹೋಗಿ ಶ್ರೀಶ್ರೀಯವರನ್ನು ಸಮ್ಮೇಳನಕ್ಕೆ ಕರೆದು ತಂದವರು ಪ್ರೊ.ನಗರಿ ಬಾಬಯ್ಯನವರು.”[೧೧]

ಮೂಲತಃ ಕವಿಗಳೆಂದೇ ಪ್ರಸಿದ್ಧಿ ಪಡೆದಿರುವ ಸಿದ್ಧಲಿಂಗಯ್ಯನವರು ಸಾಹಿತ್ಯದ ಇತರ ಪ್ರಕಾರಗಳಲ್ಲಿಯೂ ಈಗಾಗಲೇ ಗುರ್ತಿಸಿರುವಂತೆ ಕೆಲಸ ಮಾಡಿದ್ದಾರೆ. ಮತಾಂತರ ಎಂಬ ಕಥೆ, ರಸಘಳಿಗೆಗಳು ಎಂಬ ಪ್ರಬಂಧವನ್ನು ರಚಿಸಿದ್ದಾರೆ. ಹತ್ತು ಹಲವು ಬಿಡಿಲೇಖನಗಳನ್ನ ಬರೆದಿದ್ದಾರೆ ಬೆಂಗಳೂರು ವಿಶ್ವವಿದ್ಯಾಲಯದ ಸಾಹಿತ್ಯ ವಾರ್ಷಿಕದಲ್ಲಿ. ಜಾನಪದ ಲೇಖನಗಳು, ಜಾನಪದವನ್ನು ಜನಪರವನ್ನಾಗಿ ಅಧ್ಯಯನ ಮಾಡಿರುವ ಡಾ.ಸಿದ್ಧಲಿಂಗಯ್ಯ ಅವರು ಸಾಹಿತ್ಯ ಮತ್ತು ಜಾನಪದ ಸಂಬಂಧವನ್ನು ಶೋಷಿತ ವರ್ಗಗಳ ಹೋರಾಟದ ದಾರಿಗಳನ್ನು ಕಂಡುಕೊಳ್ಳಲು ಸಮರ್ಥವಾಗಿ ಬಳಸಿದವರು. ಜನಪದ ಆರಾಧನೆಗಳು ಸಮಾಜ ಮುಖಿಯಾಗಿ ಕೆಲಸ ಮಾಡುವ ಬಗೆಗಳನ್ನು ಅನ್ವೇಷಣೆ ಮಾಡಿದವರು ಸಾಹಿತ್ಯ, ಸಂಸ್ಕೃತಿ, ಮತ್ತು ಸಮಾಜ ಎನ್ನುವ ಮೂರು ನೆಲೆಗಳಲ್ಲಿ “ಜನಸಂಸ್ಕೃತಿ” ಎಂಬ ಪುಸ್ತಕವನ್ನೆ ಹೊನ್ನಾರುಮಾಲೆ ಮಾಲಿಕೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದೆ. ಇಲ್ಲಿನ ಲೇಖನಗಳು ಪರಸ್ಪರ ಅಂತರ ಸಂಬಂಧಿಯಾಗಿರುವುದರ ಜೊತೆಗೆ ಸಮಗ್ರ ಕ್ರಾಂತಿಗೆ ತಳಹದಿಯಾಗಿವೆ. ದಲಿತ, ವಚನ, ಬಂಡಾಯ ಮತ್ತು ಜನಪದ ಸಾಹಿತ್ಯಗಳನ್ನು ಒಂದೆಡೆ ಸೇರಿಸಿ ಸಾಹಿತ್ಯ ಎನ್ನುವ ಪರಿಕಲ್ಪನೆಯನ್ನು ಇಲ್ಲಿ ವಿಸ್ತರಿಸಲಾಗಿದೆ. ಆರಾಧನೆಗಳು ಮತ್ತು ಆಚರಣೆಗಳು ದಲಿತರ ಸಂಸ್ಕೃತಿಯ ಜೊತೆಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದು ಅದರೊಳಗಿನ ಮಾನವೀಯ ಮೌಲ್ಯಗಳ ಕುರಿತು ಚಿಂತನೆ ನಡೆಸಲಾಗಿದೆ. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯ ಭದ್ರಬುನಾದಿಯಲ್ಲಿ ಜಾತ್ಯಾತೀತತೆ, ಅಸ್ಪೃಶ್ಯತೆ. ದಲಿತರ ದುರಂತಗಳನ್ನ ಅನಾವರಣ ಮಾಡಲಾಗಿದೆ. ಅವರ ಭಾಷಣಗಳೂ ಕೂಡಾ ಮನುಷ್ಯಪರ ಕಾಳಜಿಯುಳ್ಳ ಕವಿ ಸಮಾಜಕ್ಕೆ ಹೇಗೆ ಸ್ಪಂದಿಸುತ್ತವೆ ಎಂಬುದನ್ನ ಸಾಬೀತು ಮಾಡುವಂತಿವೆ. ಒಟ್ಟಾರೆ ಸಿದ್ಧಲಿಂಗಯ್ಯನವರ ಸಾಹಿತ್ಯದ ಗ್ರಹಿಕೆಯ ಹಲವು ನೆಲೆಗಳು ಜನಪರ ಕಾಳಜಿ ಎಂಬ ಸ್ಥಾಯೀ ನೆಲೆಯಲ್ಲಿ ನಿಂತು ಭಿನ್ನ ಭಿನ್ನ ರೂಪಗಳ ಸಂಚಾರಿ ಭಾವಗಳೊಂದಿಗೆ ಹರಿದಾಡುವಂತಿವೆ.

❖

ಕೊನೆ ಟಿಪ್ಪಣಿ

೧. ಅವತಾರಗಳು : ನನ್ನ ಮಾತು. ಡಾ. ಸಿದ್ಧಲಿಂಗಯ್ಯ ಪುಟ–೨

೨. ಬಡವರ ನಗುವಿನ ಶಕ್ತಿ: ಸಂ. ಎಚ್. ದಂಡಪ್ಪ, ಲೇಖನ–ಸಿ.ಪಿ.ಸಿದ್ಧಾಶ್ರಮ ಪುಟ–೧೦೬, ೨೫೭.

೩. ತನುಮುಟ್ಟದ ಮುನ್ನ: ಡಾ. ಅಪ್ಪಗೆರೆ ಸೋಮಶೇಖರ, ಪುಟ–೧೯, ೧೨೮.

೪. ಆಧುನಿಕ ಕನ್ನಡ ನಾಟಕ: ಲೇಖಕ. ಕೆ. ಮರುಳುಸಿದ್ಧಪ್ಪ. ಪುಟ–೧೧೨.

೫. ಕನ್ನಡ ಸಾಹಿತ್ಯ ಪುನರ್ ಮೌಲ್ಯೀಕರಣ–೪: ಲೇಖಕ–"ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಪುರಾಣ. ಲೇಖಕ –ರಹಮತ್ ತರೀಕೆರೆ. ಪುಟ–೧೮೨.

೬. ಹಕ್ಕಿನೋಟ: ಡಾ. ಸಿದ್ಧಲಿಂಗಯ್ಯ. ಪುಟ–೨.

೭. ಡಾ.ಸಿದ್ಧಲಿಂಗಯ್ಯನವರ ಸದನದ ಭಾಷಣಗಳು: ಸಂ. ದೊಡ್ಡ ಹುಲ್ಲೂರು ರುಕ್ಕೋಜಿ. ಪುಟ–೭,೨೭, ೬೧, ೨೭೫.

೮. ಹೊಸಗನ್ನಡ ಸಾಹಿತ್ಯ ಚರಿತ್ರೆ: ಎಲ್. ಎಸ್. ಶೇಷಗಿರಿರಾವ್.

೯. ಸಾಹಿತ್ಯ ಸಂಸ್ಕೃತಿ: ಡಾ.ನರಹಳ್ಳಿ ಬಾಲಸುಬ್ರಮಣ್ಯ, ಪುಟ–೧೩೮, ೧೩೯.

೧೦. ದಲಿತ ಮಾರ್ಗ: ಸಂ: ಅರವಿಂದ ಮಾಲಗತ್ತಿ, ಲೇಖಕ : ರಹಮತ್ ತರೀಕೆರೆ, ಪುಟ–೩೯೨.

೧೧. ಊರುಕೇರಿ ಭಾಗ–೨: ಡಾ. ಸಿದ್ಧಲಿಂಗಯ್ಯ, ಲೇಖಕ: ಡಿ.ಆರ್.ಎಸ್, ಪುಟ–೧೮೦, ೧೧೪.

೧೨. ಏಕಲವ್ಯ: ಡಾ. ಸಿದ್ಧಲಿಂಗಯ್ಯ.

೧೩. ಪಂಚಮ ಮತ್ತು ನೆಲಸಮ: ಡಾ. ಸಿದ್ಧಲಿಂಗಯ್ಯ.

೧೪. ಗ್ರಾಮದೇವತೆಗಳು: ಡಾ.ಸಿದ್ಧಲಿಂಗಯ್ಯ, ಪುಟ–೩೦.

ಅಧ್ಯಾಯ-೨

ಶ್ರೀಶ್ರೀ ಅವರ ಸಾಹಿತ್ಯ ಮತ್ತು ಗ್ರಹಿಕೆಯ ಹಲವು ನೆಲೆಗಳು

ಶ್ರೀ ಶ್ರೀ ಅವರ ಸಾಹಿತ್ಯ ಮತ್ತು ಗ್ರಹಿಕೆಯ ಹಲವು ನೆಲೆಗಳು

ಶ್ರೀ ಶ್ರೀ ತೆಲುಗು ಸಾಹಿತ್ಯದಲ್ಲಿ ಮಹಾಕವಿ ಎಂದು ಹೆಸರಾದವರು. ತೆಲುಗು ಸಾಹಿತ್ಯ ಚರಿತ್ರೆಯ ದಿಕ್ಕನ್ನೇ ಬದಲಿಸಿದ ಅಪರೂಪದ ಸಾಹಿತಿಗಳಲ್ಲೊಬ್ಬ. ಜನಿಸಿ ಎಪ್ಪತ್ತೇಳು ವರ್ಷಗಳ ಕಾಲ ತನ್ನ ಜನ್ಮದಿನವು ತಪ್ಪೆಂದು ತಿಳಿಯದೇ ಬದುಕಿದವನು. ಆತನ ಜನ್ಮದಿನ ೧೫-೪-೧೯೧೦ ಆಗಬಹುದು ಅಥವಾ ೩೦-೪-೧೯೧೦ ಆಗಬಹುದು. ಆತ ಮಾತ್ರ ತಾನು ೨-೧-೧೯೧೦ ಎಂದು ನಂಬಿದ್ದನು. ಇದೊ ಶ್ರೀ ಶ್ರೀ ಎಂದು ಪ್ರಸಿದ್ಧರಾದ ಶ್ರೀರಂಗಂ ಶ್ರೀನಿವಾಸರಾವು ಅವರ ಜನ್ಮ ವಿಶೇಷ.

ಒಬ್ಬ ಸಂಶೋಧಕನ ಪ್ರಕಾರ ಶ್ರೀ ಶ್ರೀ ಸಾಧಾರಣ ನಾಮ ಸಂವತ್ಸರ ಚೈತ್ರ ಶುದ್ಧ ಷಷ್ಠಿಯಂದು (೧೫-೪-೧೯೧೦) ಶ್ರೀ ರಾಮನವಮಿಗೆ ಮೂರು ದಿನ ಮೊದಲು ಸೂರ್ಯೋದಯ, ಉಷ ಸಂಧ್ಯಾಕಾಲದಲ್ಲಿ. ಆದ್ರಾ ನಕ್ಷತ್ರದಲ್ಲಿ ಜನಿಸಿದರು. ಆತನ ಜನನ ಕಾಲದ ಬಗ್ಗೆ ಅನಂತ ಎನ್ನುವವರು ಪರಿಶ್ರಮದಿಂದ ಮುನಿಸಿಪಾಲಿಟಿ ಮತ್ತು ಇತರ ಮೂಲಗಳಲ್ಲಿ ದೊರೆತ ಆಧಾರಗಳಿಂದ ಖಾತ್ರಿಯಾಗಿ ತಿಳಿದಿರುವೆನೆನ್ನುತ್ತಾರೆ. ವಿಶಾಖಪಟ್ಟಣ ಪುರಸಭೆಯವರ ಪ್ರಕಾರ ಶ್ರೀ ಶ್ರೀ ೩೦-೪-೧೯೧೦ ಜನಿಸಿದರೆಂದು ವಿರಸಂ ಎಂದ. ಆತನ ತಂದೆ ಪೊಡಿ ಪೆದ್ದಿ ವೆಂಕಟರಮಣಯ್ಯ ಮತ್ತು ತಾಯಿ ಅಪ್ಪಲಕೊಂಡ. ಆತನನ್ನು ಶ್ರೀರಂಗಂ ಸೂರ್ಯನಾರಾಯಣ ಎಂಬುವವರು ದತ್ತು ತೆಗೆದುಕೊಂಡಿದ್ದರಿಂದ ಮನೆತನದ ಹೆಸರು ಬದಲಾಯಿತು. ಅವರು ಹದಿನೆಂಟು ತಿಂಗಳ ಮಗುವಾಗಿರುವಾಗಲೇ ತಾಯಿ ತೀರಿದರು. ತಂದೆ ಸುಭದ್ರಮ್ಮನನ್ನು ವರಿಸಿದರು.

ಶ್ರೀನಿವಾಸರಾವು ಮತ್ತು ಅವರ ಮಲತಾಯಿ ಸುಭದ್ರಮ್ಮ ಅವರ ನಡುವಿನ ವಾತ್ಸಲ್ಯಭಿಮಾನ ಸಂಬಂಧಗಳು ಅಜೀವ ಪರ್ಯಂತ ಗಟ್ಟಿಯಾಗಿದ್ದವು.[೧]

ಪ್ರಭವ: ಶ್ರೀ ಶ್ರೀ ಮೊದಲ ಕೃತಿ "ವಿಶ್ವರೂಪಸಂದರ್ಶನ" ಎಂಬ ಹೆಸರಿನಲ್ಲಿ ಪರಿಪುಂಡಾ ತನ್ನ ಪತ್ರಿಕೆ ಸ್ವಶಕ್ತಿಯಲ್ಲಿ ಪ್ರಕಟಿಸಿದರು. ಪರಿಪುಂಡಾ ಪ್ರಭಾವದಿಂದ ಶ್ರೀ ಶ್ರೀ ೧೯೨೬ರಲ್ಲಿ ಕವಿತಾ ಸಮಿತಿಯ ಸದಸ್ಯರಾದರು. ಇಂಟರ್ ಓದುತ್ತಿರುವಾಗ ಹಳೆಯ ಛಂದಸ್ಸಿನಲ್ಲಿ ರಚಿಸಿದ 'ಪ್ರಭವ' ಎಂಬ ಕಾವ್ಯವನ್ನು ಮೂರು ಭಾಗಗಳಲ್ಲಿ

ಪ್ರಕಟಿಸಿದರು. ಆ ಕಾಲದಲ್ಲಿ ಅವರ ಮೇಲೆ ವಿಶ್ವನಾಥ ಸತ್ಯನಾರಾಯಣ ದೇವುಲಪಲ್ಲಿ ಕೃಷ್ಣಶಾಸ್ತ್ರಿ ಮತ್ತು ಕವಿಕೊಂಡಲ ವೆಂಕಟ್ರಾಮ ಅವರ ಪ್ರಭಾವವಾಯಿತು. ಅಂದು ಭಾವ ಕವಿತ್ವದ ಏಕಚಕ್ರಾಧಿಪತ್ಯ ನಡೆದಿತ್ತು. ಆಗಲೇ ಅವರೊಬ್ಬ ಶಕ್ತಿಶಾಲಿಕವಿ ಎಂದು ಗುರುತಿಸಲ್ಪಟ್ಟರು.

ಶ್ರೀ ಶ್ರೀ ತಮ್ಮ ಆತ್ಮಕಥೆ "ಅನಂತಂ"ನಲ್ಲಿ ಕವಿತೆಯ ಆರಂಭವಾದುದರ ಬಗ್ಗೆ ಹೇಳುತ್ತ ಅಂದಿನ ಗೇಯುತೆಯುನ್ನ ಕಾಲ್ಪನಿಕತೆಯುನ್ನ ನೆನಪು ಮಾಡಿಕೊಂಡಿದ್ದಾರೆ. (ಪುಟ-೧೭೮)

"ತಲಲೋ ಪುಟ್ಟಿ
ಕಲಲೋ ಪರಗಿ
ಉದ್ರೇಕಂತೋ ನಿಂಡಿ
ಉನ್ಮಾದಂಲೋ ಪಂಡಿ....
....
....
ನೀನೇದೋ ಎದೋ ಆಲೋಕಿಸ್ತು
ಕಡಲಿಲೋ ಕಡವಲಾ ಕದಲ್ತೂ ಉಂಟೆ......

....
....
ನೀಲೋಪಲ ನೀಲೋತ್ಪಲ
ನೀಲೋಪಲ ನಿಶ್ಶಬ್ದಂ:
ನಿಶ್ಶಬ್ದವು ಚೀಕಟಿಲೊ
ನೀ ಕೇಕಿಕು ಮಂಗಳಂ"

ಎಂಬ ಕವಿತೆಗಳ ತುಣುಕುಗಳನ್ನ ಉದಾಹರಿಸಿದ್ದಾರೆ. ಶ್ರೀನಿವಾಸರಾವು ಮತ್ತು ಅವರ ಮಲತಾಯಿ ಸುಭದ್ರಮ್ಮ ಅವರ ನಡುವಿನ ವಾತ್ಸಲ್ಯಾಭಿಮಾನ ಸಂಭಂದಗಳು ಆಜೀವ ಪರ್ಯಂತ ಗಟ್ಟಿಯಾಗಿದ್ದವು. ಅವರ 'ಪ್ರಭವ' ಎಂಬ ಕವನ ಸಂಕಲನವು ಆಕೆಗೆ ಅರ್ಪಿತವಾಗಿದೆ.

ಶ್ರೀ ಶ್ರೀ ಬರಹವನ್ನ ತಮ್ಮ ೮ನೇ ವರ್ಷದಿಂದಲೇ ಆರಂಭಿಸಿದ್ದಾರೆ. ಅವರು ಸುಲಕ್ಷಣಸಾರ ಎಂಬ ಛಂದೋಗ್ರಂಥವನ್ನು ಅಭ್ಯಸಿಸಿ ಕಾವ್ಯರಚನೆಯಲ್ಲಿ ತೊಡಗಿದರೆಂದು ಹೇಳಿಕೊಂಡಿದ್ದಾರೆ. ಆರನೇ ತರಗತಿಯಲ್ಲಿ ರುವಾಗಲೇ "ವೀರ-ವಿಜಯಸಿಂಹ" ಎಂಬ ಕಾದಂಬರಿಯನ್ನ ಬರೆದರಂತೆ. ಆದರೆ ಅದರ ಹಸ್ತ ಪ್ರತಿ ಸಿಕ್ಕಿಲ್ಲ. ಮುಂದಿನ ೫ವರ್ಷದಲ್ಲಿ "ಪರಿಣಯ ರಹಸ್ಯ" ಎಂಬ

ಕಾದಂಬರಿಯನ್ನು ಬರೆದರೆಂದು ಹೇಳಿಕೊಂಡಿದ್ದಾರೆ. ಶ್ರೀ ಶ್ರೀ ಅವರಿಗೆ ಬಾಲ್ಯದಿಂದಲೂ ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ. ತೆರೆಗೆ ಸನಿಹದಲ್ಲಿ ಕೂತು ಸಿನಿಮಾ ನೋಡುವುದು ಅಭ್ಯಾಸವಾಯಿತು. ೧೯೨೯ರಿಂದಲೇ ಅವರಿಗೆ ಕನ್ನಡಕ ಅನಿವಾರ್ಯವಾಯಿತು. ಚಿಕ್ಕವರಿದ್ದಾಗ ತನ್ನ ಮೇಲೆ ಪ್ರಭಾವ ಬೀರಿದ ಕಾವ್ಯ ವ್ಯಕ್ತಿತ್ವಗಳನ್ನು ಕುರಿತು ಶ್ರೀ ಶ್ರೀ ತಮ್ಮ "ಅನಂತಂ"ನಲ್ಲಿ "ಕೃಷ್ಣ ಶಾಸ್ತ್ರಿ ಜ್ಞಾಪಕಾಲು" ಎಂಬ ಭಾಗದಲ್ಲಿ ಹೀಗೆ ಬರೆದುಕೊಂಡಿದ್ದಾರೆ. "ನನ್ನ ಬಾಲ್ಯದೊಳಗೆ ಪದ್ಯ ರಚನೆಯನ್ನ ಪ್ರಾರಂಭಿಸಿದಾಗ ನನ್ನ ಮೇಲೆ ಎರಡು ಬಲವಾದ ಪ್ರಭಾವಗಳಾಗಿ ಕೆಲಸ ಮಾಡಿವೆ. ಒಂದು ಕೃಷ್ಣಶಾಸ್ತ್ರಿ, ಎರಡನೆಯದು ವಿಶ್ವನಾಥರದು. ಇವರ ಬಲೆಯಿಂದ ಬಯಲಿಗೆ ಬೀಳಲಿಕ್ಕೆ ನನಗೆ ಸುಮಾರು ಹತ್ತು ವರ್ಷಗಳು ಹಿಡಿದವು."[೨] ಜೊತೆಗೆ ಆ ಹೊತ್ತಿನ ಕವಿತೆಯನ್ನ ಕವಿಸೂರ್ಯ ಕೃಷ್ಣಶಾಸ್ತ್ರಿ ಹೇಗೆ ಬರೆಸಿದರೆಂದು ಒಂದು ಉದಾಹರಣೆ ಸಹಿತ ಶ್ರೀ ಶ್ರೀ ಇಲ್ಲಿ ನೀಡಿದ್ದಾರೆ.

> "ಅಸಲು ಶ್ರಾವಣ ಮಾಸ ಮಧ್ಯಮ್ಮುನಂದು
> ಕುರಿಸಿತೀರಾಲಿ ವರ್ಷಾಲು, ಕೊಂಚೆ ಕೊಂಚೆ
> ಮೇನಿ ರಾಲಾಲಿ, ತುಂಪರಲೇನಿ, ಕಾನಿ
> ಉಕ್ಕ ಮಾತ್ರ ಮೇಮಾತ್ರಮೂ ಉಂಡರಾದು"

(ಜೈಲುಲೋ ಶ್ರಾವಣಂ)

> "ಅಸಲು ಶ್ರಾವಣಮಾಸ ಮಧ್ಯದಂದು
> ಬೀಳಲೇ ಬೇಕು ಮಳೆ. ಸ್ವಲ್ಪ ಸ್ವಲ್ಪ
> ವೆಂದು ಸುರಿಯಬೇಕು ತುಂತುರಾಗಿ, ಆದರೆ
> ಧಗೆ ಮಾತ್ರ. ಎಷ್ಟೂ ಕೂಡಾ ಇರಬಾರದು"

(ಜೈಲೊಳಗೆ ಶ್ರಾವಣ)

"ಅವು. ನನ್ನ ಹೆಂಡತಿ ಹೊಸದಾಗಿ ಬಾಳುವೆಗೆ ಬಂದ ದಿನಗಳು. ಆಗಲೇ ಕೃಷ್ಣಶಾಸ್ತ್ರಿ ಹೊಸದಾಗಿ ವಿಶಾಖಪಟ್ಟಣಕ್ಕೆ ಬಂದಿದ್ದರು. ನಾನು ಮನೆಬಾಗಿಲು ತೊರೆದು ಕೃಷ್ಣಶಾಸ್ತ್ರಿ ಸುತ್ತ ಉಪಗ್ರಹದಂತೆ ತಿರುಗುತ್ತಿದ್ದೆ. ಸುಮಾರು ವಾರದ ನಂತರ ನಾನು ತಿರುಗಿ ಬಂದಾಗ ಅಪ್ಪ "ಕವಿತೆಯನ್ನ, ಕವಿಗಳನ್ನ ಮೆಚ್ಚುವುದು ಒಳ್ಳೆಯದೇ ಆದರೆ ಮನೆಯಲ್ಲಿನ ಹೆಂಡತಿ ಕುರಿತು ಆಲೋಚಿಸುವುದು ಒಳ್ಳಯವೇನೊ" ಎಂದು ಮೆಲ್ಲಗೆ ತರಾಟೆಗೆ ತೆಗೆದುಕೊಂಡರು ಎಂದಿದ್ದಾರೆ. ಆಗ ಭಾವ ಕವಿತೆಯನ್ನ ಏಕೆ ಮೆಚ್ಚಿಕೊಂಡೆವೊ ನಮಗೆ ನಾವೇ ಮೆಚ್ಚುಗೆಯನ್ನ ಹೇಳಿಕೊಳ್ಳಲಾಗದೆ ಮಾನಸಿಕವಾಗಿ ಹೊರಹೊರಗೇ ಬೆಳೆಸಿಕೊಂಡೆವು" ಎನ್ನುತ್ತಾರೆ.

"ಓದು ಮುಗಿಸಿ ಶ್ರೀ ಶ್ರೀ ೧೯೩೦ರಲ್ಲಿ ವಿಶಾಖಪಟ್ಟಣಕ್ಕೆ ಮರಳಿದರು. ಅರವತ್ನಾಲ್ಕು ದಿನ ಟೈಫಾಯ್ಡ್ ಪೀಡಿತರಾಗಿ ಮಲಗಿದರು. ಆಗ ಚಿಕಿತ್ಸೆ ನೀಡಿದ

ಡಾ. ಸಿ. ಮಲ್ಲಿಕಾರ್ಜುನ ರಾವ್ ಉರುಫ್ ಮಲ್ಲಿಕ್ ಅವರು ತಮ್ಮ ಆತ್ಮವೃತ್ತದಲ್ಲಿ ಪದೇ ಪದೇ ನೆನಸಿದ್ದಾರೆ. ಅದಕ್ಕೆ ಮತ್ತೊಂದು ಕಾರಣವೂ ಇದೆ. ಟೈಫಾಯ್ಡ್ ಜೊತೆಗೆ ಅವರಿಗಿದ್ದ ಭಾವ ಕವಿತಾಭಿಮಾನವೂ ಮಾಯವಾಯಿತಂತೆ. ಅದು ಪ್ರಪಂಚದಾದ್ಯಂತ ಆರ್ಥಿಕವಾಗಿ ದುಸ್ಥಿತಿಯು ಕಾಲ. ಅನ್ನಕ್ಕಾಗಿ ಜನರು ಆಕ್ರಂದಿಸುತ್ತಿದ್ದ ಆ ದುಷ್ಕಾಲದಲ್ಲಿ ಶ್ರೀ ಶ್ರೀ ಮಾನಸಿಕವಾಗಿ, ಆರ್ಥಿಕವಾಗಿ ಮತ್ತು ದೈಹಿಕವಾಗಿ ನಾನಾ ಕಷ್ಟಗಳ ಪಾಲಾದರು. ಕೆಲವರ ಸಲುವಾಗಿ ಒಮ್ಮೆ ಖರಗಪುರ–ಕಲ್ಕತ್ತ ನಡುವೆ ಒಮ್ಮೆ ಇಪ್ಪತ್ತು ಮೈಲು ರೈಲು ಹಳಿಗಳ ಮೇಲೆ ನಡೆಯಬೇಕಾಯಿತು. ಆ ದಯನೀಯ ಕಾಲದಲ್ಲಿಯೇ ಅವರ ಮಹಾಪ್ರಸ್ಥಾನವು ಬಹುತೇಕ ರೂಪು ತಳೆಯಿತು."[೧]

ಮಹಾಪ್ರಸ್ಥಾನಂ: "ಮಾನವನೇ ನನ್ನ ಸಂದೇಶ, ಮನುಷ್ಯನೇ ನನ್ನ ಸಂಗೀತ" (ಮಾನವುಡೇ ನಾ ಸಂದೇಶಂ, ಮನುಷ್ಯಡೇ ನಾ ಸಂಗೀತಂ) ಎಂದು ಧ್ವನಿ ಎತ್ತಿ ಹೇಳಿದ ಮಹಾ ಕವಿ ಶ್ರೀ ಶ್ರೀ. ೧೯೩೧ರೊಳಗೆ ಬಿ. ಎ. ಪೂರ್ತಿಮಾಡಿ ಎ.ವಿ.ಎಸ್. ಕಾಲೇಜಿನೊಳಗೆ ಲ್ಯಾಬ್ ಡೆಮಾನಿಸ್ಟ್ರೇಟರ್ ಆಗಿ, ಮದ್ರಾಸು, ಆಂಧ್ರಪ್ರದೇಶದೊಳಗೆ ಲೈಬ್ರರಿ ಅಸಿಸ್ಟೆಂಟಾಗಿ ವಿವಿಧ ಉದ್ಯೋಗಗಳನ್ನು ಮಾಡಿದ, ತನ್ನ ಸ್ವಂತ ಚಂಚಲತೆಯಿಂದ ಎಲ್ಲಿಯೂ ನಿಲ್ಲದೆ ಕೊನೆಗೆ ಸಿನಿಮಾರಂಗದಲ್ಲಿ ಸ್ಥಿರವಾದವರು ಶ್ರೀ. ಶ್ರೀ.

ತೆಲುಗು ಕವಿತೆಯನ್ನ ಮತ್ತೊಂದು ದಿಕ್ಕಿಗೆ ತಿರುಗಿಸಿದ ಮಹಾಕವಿ ಶ್ರೀ ಶ್ರೀ. ಮಹಾಪ್ರಸ್ಥಾನಂ ೧೯೫೦ರೊಳಗೆ ಪುಸ್ತಕರೂಪ ಪಡೆಯಿತು.

ಮಹಾಪ್ರಸ್ಥಾನವನ್ನ ಕುರಿತು ಛಲಂ ಹೀಗೆ ಬರೆಯುತ್ತಾರೆ. "ದಿಕ್ಕುಗಳನ್ನ, ದೇವರುಗಳನ್ನ, ಅಧಿಕಾರಿಗಳನ್ನ ನಿಲ್ಲಿಸಿ ಪ್ರಶ್ನೆ ಮಾಡೋ ಶ್ರೀ ಶ್ರೀ ಪದ್ಯಗಳು ಅನ್ನೋ ಅಭಿಮಾನ ಛಲಂಗಿದೆ. ಈ ಮುದಿ ಪ್ರಪಂಚಕ್ಕಾಗಿ ಶ್ರೀ ಶ್ರೀ. ನೆತ್ತರು ಮತ್ತು ಕಣ್ಣೀರನ್ನ ಕಲಸಿ ಹೊಸ ಟಾನಿಕ್ಕು ಮಾಡಿದ್ದಾರೆ" ಎನ್ನುತ್ತಾರೆ.

ಹೃದಯ ಎಲ್ಲಿ ಕಂಪಿಸುವುದೋ ಆ ಕಂಪನಕ್ಕೆ ಮಾತಿನ ರೂಪ ನೀಡುವ ಸಾಮರ್ಥ್ಯ ಆತನಿಗೇ ಗೊತ್ತು. ಮಾತುಗಳನ್ನ ಕತ್ತಿಗಳಾಗಿ, ಈಟಿಗಳಾಗಿ, ಉರಿವ ಬೆಂಕಿಯಾಗಿ ಮಾರ್ಪಡಿಸುವ ಕಲೆ ಆತನಿಗೇ ಗೊತ್ತು. ಈ ಪದ್ಯಗಳನ್ನ ಓದುತ್ತಿದ್ದರೆ ಇವು ಮಾತುಗಳಲ್ಲ, ಅಕ್ಷರಗಳಲ್ಲ. ಉದ್ರೇಕಗಳು, ಬಾಧೆಗಳು, ಯುದ್ಧಗಳು ಆತನ ಹೃದಯದೊಳಗಿಂದ ಡೈರಕ್ಟಾಗೇ ಕಳಿಸಿದ ಉತ್ಸಾಹಗಳು, ನೆತ್ತರ ಕಾಲುವೆಗಳು ಅನಿಸುತ್ತದೆ. ಏಕೆಂದರೆ

ಕಿಷ್ಣಶಾಸ್ತ್ರಿ ತನ್ನ ಬಾಧೆಯನ್ನ ಎಲ್ಲರರೊಳಗೂ ಮಿಡಿಸಿದರೆ ಶ್ರೀ ಶ್ರೀ ಎಲ್ಲರ ಬಾಧೆಗಳನ್ನ ತನ್ನೊಳಗೇ ಮಿಡಿಕಿಸುತ್ತಾನೆ.

ಕಿಷ್ಣಶಾಸ್ತ್ರಿಯ ಬಾಧೆ ಪ್ರಪಂಚಕ್ಕೆ ಬಾಧೆ. ಪ್ರಪಂಚದ ಬಾಧೆಯಲ್ಲಾ ಶ್ರೀ ಶ್ರೀ ಬಾಧೆ.

ಹಳೆಯ ಪದಗಳನ್ನ, ವರ್ಣನೆಗಳನ್ನ, ಕಲ್ಪನೆಗಳನ್ನ ಛಂದಸ್ಸು, ಉಪಮಾನಗಳ ಪದ್ಧತಿಗಳನ್ನ, ಆಚಾರಗಳನ್ನ ಕವಿತೆಯೊಳಗಿಂದ, ಜೀವನದೊಳಗಿಂದ ಇನ್ನೂ ಮತ್ತೆ ಬಾರದಂಥೆ ಕಾಣದಂತೆ ಅವನ್ನೆಲ್ಲಾ ಹೊಡೆದು ಹೊರಹಾಕಿದ್ದಾರೆ ಶ್ರೀಶ್ರೀ.

"ಧ್ವಂಸಂ ಚೇಸಿ ರೋಡ್ಡು ಚೇಸ್ಯಾನು
ಪದಂಡಿ ಮುಂದಕು ಪದಂಡಿ ತ್ರೋಸುಕು"

ಅನ್ನುತ್ತಿದ್ದಾನೆ. ಶ್ರೀಶ್ರೀ.

ಸಮುದ್ರ ಸ್ಫೂರ್ತಿಯಿಲ್ಲದೆ ಶ್ರೀಶ್ರೀ ಕವಿತ್ವ ಇಲ್ಲ. ಹಾಗೇ ಸಮುದ್ರ ಚಲನೆಯಲ್ಲಿರುವ ರುದ್ರ ರಮಣೀಯ ಚಲನಶಿಲತೆ ಆತನ ಕವಿತೆಗೆ ಒದಗಿದೆ.

ಹೊತ್ತಲ್ಲದ ಹೊತ್ತಿನಲಿ
ಇಲ್ಲ ಸಲ್ಲದ ವಾಂಛೆಗಳಿಂದ
ದಾರಿಯಿಲ್ಲದ ದಾರಿಯಲಿ
ಅಗೋಚರಾಕಾಂಕ್ಷೆಯಿಂದ
ಏತಕ್ಕೋಸ್ಕರ ಪದೇ ಪದೇ
ತಡಕಾಡುವೆ?
ಹಸಿವಿನಿಂದ ಅಯಾಸದಿಂದ
ಚಡಪಡಿಸುವೆ?
ಶ್ರೀನಿವಾಸರಾವ್? **(ದೇನಿಕೊರಕುನಿ)**

ಕಡಲ ಶ್ರುತಿಯ ನಿರಂತರತೆಯಲ್ಲಿಯೇ (ಮದ್ರಾಸಿನಲ್ಲಿ ಆತ ಮನೆ ಮಾಡಿದ್ದ ಅದಕ್ಕಾಗಿಯೆ) ಸಾಹಿತ್ಯದ ದಡದಲ್ಲಿ ಹರಡಿದ ಸಾಮಾಜಿಕ ಉದ್ದೇಶಕ್ಕಾಗಿ, ಜನರಿಗಾಗಿ, ಚರಿತ್ರೆಯ ಮುಂದುವರಿಕೆಗಾಗಿ ಎಂತಹ ಚರಿತ್ರೆಯೆಂದರೆ;

ನೈಲು ನದಿಯ ನಾಗರೀಕತೆಯಲಿ
ಸಾಮಾನ್ಯನ ಜೀವನ ಎಂಥಾದ್ದು
ತಾಜ್ ಮಹಲ್ ನಿರ್ಮಾಣಕ್ಕೆ
ಕಲ್ಲು ಹೊತ್ತ ಕೂಲಿಗಳ್ಯಾರು?
ಸಾಮ್ರಾಜ್ಯದ ದಂಡಯಾತ್ರೆಯಲಿ
ಸಾಮಾನ್ಯರ ಸಾಹಸ ಎಂಥಾದ್ದು?
ಅರಸನೇರಿದ ಪಲ್ಲಕ್ಕಿ ಅಲ್ಲವೋ
ಅದನ್ನು ಹೊತ್ತ ಬೋಯಿಗಳ್ಯಾರು? **(ದೇಶ ಚರಿತ್ರಲು)**

ನಮ್ಮ ಕಣ್ಣಿಗೆ ತೆರೆ ಮರೆಯಲ್ಲಿದ್ದ ಚರಿತ್ರೆಯನ್ನು ಈಚೆಗೆ ತೆಗದು ಸಾಮಾನ್ಯನ ಜೊತೆ ಗುರುತಿಸಿಕೊಂಡು ಚರಿತ್ರೆಯನ್ನು ಮುನ್ನೆಡುಸುವವನಿಗಾಗಿ ನಿರಂತರವಾಗಿ ಹೋರಾಡಿದ ಕವಿ ಶ್ರೀಶ್ರೀ. ಕವಿ ಎಂದರೆ ಜನರಿಂದ ದೂರವಿರುವವನಲ್ಲ. ನಮ್ಮ ಜೀವನದಲ್ಲಿ ಮಿಳಿತವಾಗಿರುವವನು ಎಂಬುದನ್ನು ಶ್ರೀಶ್ರೀ ನಿರೂಪಿಸಿದ.

ವಿಶ್ವ ತೆಲುಗು ಸಮ್ಮೇಳನದ ಸಂದರ್ಭದಲ್ಲಿ ಅದನ್ನು ವಿರೋಧಿಸಿದ ಶ್ರೀ ಶ್ರೀ ಬಂಧಿತನಾದ. ಆ ಸಮಯಕ್ಕೆ ಜಲಗಂ ವೆಂಗಳರಾವ್ ಮುಖ್ಯಮಂತ್ರಿ, ಗೃಹಮಂತ್ರಿಯಾಗಿದ್ದಾಗ ಶ್ರೀಕಾಕುಳಂ ರೈತ ಹೋರಾಟವನ್ನ ದಮನಿಸಿದ ವೆಂಗಳರಾವ್‌ಗೂ, ಸ್ಪೆಯಿನ್ ಅಂತರ್ಯುದ್ಧ ಕಾಲದಲ್ಲಿ ಸರ್ವಾಧಿಕಾರಿಯಾಗಿದ್ದ ಫ್ರಾಂಕೋಗು ಚಾರಿತ್ರಿಕ ಸಾಮ್ಯಗಳಿವೆ ಎನ್ನುತ್ತಾರೆ ನಗರಿ ಬಾಬಯ್ಯ. ಅಂತಹ ಸರ್ವಾಧಿಕಾರದ ನಿರಂಕುಶತ್ವವನ್ನು ವಿರೋಧಿಸಿದ ಹೊಸ ಪರಂಪರೆ ಶ್ರೀಶ್ರೀಯದ್ದಾಗಿದೆ.

ಎಲೆಲೋ ಮುಖ್ಯಮಂತ್ರಿ–ಇಂದಿರಮ್ಮ
ನ ಬಾಜಾ ಭಜಂತ್ರಿ!
ಎಲೆಲೋ ವೆಂಗಳ ಬಚ್ಚಾ–ಜಿಗಣೆ ನಿನ್ನ
ಹೆಸರೆಂದರೇ ತಲೆನೋವು–ಲುಚ್ಚಾ! **(ದೂದಿಪುಲಿ ಮೀದ ಪುಟ್ರ)**

ಜನರ ಹೋರಾಟಗಳು ಯಾವುದೇ ಇರಲಿ ಅದರೊಂದಿಗೆ ಒಂದಾಗಿರಲು ಪ್ರಯತ್ನಿಸಿದ್ದಾನೆ ಶ್ರೀ ಶ್ರೀ. ದುಡಿವ ಜನರ ಸಂಪರ್ಕದಲ್ಲಿರುವಾಗಲೇ ಕವಿತ್ವಕ್ಕೆ ಸಾರ್ಥಕತೆ ಬರುತ್ತದೆಂದು ನಂಬಿದ್ದಾನೆ. ಹೊಸ ಕವಿತೆಗೆ ವಸ್ತುಗಳು ಯಾವುವೆಂದು ಸೂಚಿಸಿ ಋಕ್ಕುಗಳನ್ನು ರಚಿಸಿ "ಪ್ರಪಂಚವೊಂದು ಪದ್ಮವ್ಯೂಹ ಕವಿತ್ವವೊಂದು ತೀರದ ದಾಹ" ಎಂದು ಘೋಷಿಸಿದ್ದಾನೆ.

ಒಟ್ಟು ೪೦ ಕವಿತೆಗಳಿರುವ ಈ ಪುಸ್ತಕವೇ ಶ್ರೀಶ್ರೀಗೆ ಮಹಾಕವಿ ಪಟ್ಟವನ್ನ ನೀಡಿತು ಹೊಸ ಭಾಷೆ, ಛಂದಸ್ಸು, ಧೋರಣೆಗಳಿಂದ ಇದು ತೆಲುಗು ಕಾವ್ಯಕ್ಕೆ ಹೊಸ ರಕ್ತ ತುಂಬಿತು. ಭಾಷೆಯನ್ನ ಕುರಿತಂತೆ ಶ್ರೀಶ್ರೀ "ಗ್ರಾಂಥಿಕ ಭಾಷೆ ಕಾವ್ಯ ರಚನೆಗೆ ಕೆಲಸಕ್ಕೆ ಬಾರದೆನ್ನುವುದು ನನ್ನ ಗಟ್ಟಿ ನಂಬಿಗೆ. ಆ ಭಾಷೆಯಲ್ಲಿ ಮಹೋತ್ಕೃಷ್ಟವಾದ ಕವಿತ್ವ ಇದೆಯೆಂದು ಒಪ್ಪಿಕೊಳ್ಳುತ್ತಲೇ ಈ ನಂಬಿಕೆಯನ್ನಿಲ್ಲಿ ಪ್ರವಚಿಸುತ್ತಿರುವೆ. ಅದು ಗುತ್ತಿಗೆದಾರರ ಭಾಷೆ. ಅವರ ಪ್ರಯೋಜನವನ್ನು ರಕ್ಷಿಸುವುದಕ್ಕೆ ಮಾತ್ರವೇ ಅದು ಉಪಯೋಗಕ್ಕೆ ಬರುತ್ತದೆ. ಆಡುಭಾಷೆ ಜನರ ಭಾಷೆ! ಸಮತಾವಾದ ವ್ಯವಸ್ಥೆಯಲ್ಲಿಯೆ ಪ್ರಜಾಪ್ರಭುತ್ವ ಪರಾಕಾಷ್ಠೆಗೆ ತಲುಪುತ್ತದೆಂದು ಒಪ್ಪಿಕೊಂಡರೆ ಜನರ ಭಾಷೆಯಲ್ಲೆ ಪ್ರಜಾಪ್ರಭುತ್ವ ಕವಿತೆ ಇರಬೇಕೆಂದು ಬೇರೆ ಹೇಳುವ ಅಗತ್ಯವಿಲ್ಲ"[೩] ಎಂದಿದ್ದಾರೆ.

[illegible]

೧೯೪೨ರಲ್ಲಿ ಮತ್ತೆ ಮದ್ರಾಸಿನ ಆಕಾಶವಾಣಿ ಕೇಂದ್ರದಲ್ಲಿ ಶ್ರೀಶ್ರೀಗೆ ನೌಕರಿ ದೊರೆಯಿತು. ಕೊಂಚ ಕಾಲದಲ್ಲಿಯೇ ಡೆಲ್ಲಿಗೆ ಅವರನ್ನ ವರ್ಗಾಯಿಸಲಾಯಿತು. ಕೇವಲ ನಾಲ್ಕು ತಿಂಗಳು ಮಾತ್ರ ಅವರು ವಾರ್ತೆಗಳನ್ನ ಓದಿದರು. ತನ್ನ ಉದ್ಯೋಗಧರ್ಮದಂತೆ ಸ್ಟಾಲಿನ್ ಗ್ರಾಡ್ ಕವನವನ್ನು ವರ್ಣಿಸಿದ ಕಾರಣ, ಇವರು ಗಾಂಧೀ ವಾದಿಯೆಂದು ಆರೋಪ ಹೊರಿಸಿ ಕೆಲಸದಿಂದ ತೆಗೆದರು. ಮತ್ತೊಮ್ಮೆ ನೌಕರಿಗಾಗಿ ಬೀದಿ ಸುತ್ತಾಟ, ಆಗ ಅವರು ಅಲಹಬಾದ್, ಕಲ್ಕತ್ತ, ವಿಜಯನಗರ, ವಿಶಾಖ ಪಟ್ಟಣಗಳಲ್ಲಿ ಸುತ್ತಾಡಿದರು. ಕೊನೆಗೆ ಲಖನೌ ಮಿಲಿಟರಿ ಕಂಟೋನ್ಮೆಂಟಿನಲ್ಲಿ ಲ್ಯಾಬ್ ಅಸಿಸ್ಟೆಂಟ್ ಕೆಲಸ ಸಿಕ್ಕಿತು. ಆದರೆ ಮಲೇರಿಯಾ ಪದೇ ಪದೇ ಪೀಡಿಸಿತು. ಸಹೋದ್ಯೋಗಿಯ ಸಲಹೆಯಂತೆ ಮದ್ಯಪಾನ ಚಟ ಅಂಟಿಕೊಂಡಿತು. ಮಿಲಿಟರಿ ಅಧಿಕಾರಿಯೊಬ್ಬರು ಅವರನ್ನ ಕಮ್ಯುನಿಸ್ಟ್ ಎಂದು ಕೆಲಸದಿಂದ ತೆಗೆದುಹಾಕಿದರು.

ಮುಂದೆ ಅವರು (ಅರಸಂ) ಅಭ್ಯುದಯ ರಚಯಿತುಲಿ ಸಂಘದ ಅಧ್ಯಕ್ಷರಾದರು. ರಂಗಸಾಧಕರಾದರು. ಪಾತ್ರ ಮಾಡಿದರು ನಾಟಕದ ಸ್ಕ್ರಿಪ್ಟ್ ಬರೆದರು. ಚಲನಚಿತ್ರರಂಗಕ್ಕೇ ಬಂದು 'ಡಬ್ಬಿಂಗ್‌ಕಿಂಗ್" ಎಂದು ಹೆಸರಾದರು.

ಈ ಶತಮಾನದ ಮಧ್ಯಭಾಗದಲ್ಲಿ ಶ್ರೀಶ್ರೀ ಮಹಾಕವಿಯಾಗಿ ಮೇಧಾವಿಯಾಗಿ ಪ್ರಸಿದ್ಧರಾದರು. ಎಲ್ಲಾ ರಂಗದಲ್ಲಿಯೂ ಅವರಿಗೆ ಅಭಿಮಾನಿಗಳು ಸಿಕ್ಕರು. ಅವರ ಎಡಪಕ್ಷ ಪ್ರೀತಿಯು ನಾಡಿನ ಗಡಿಯಾಚೆಯೂ ವಿದಿತವಾದದ್ದರಿಂದ ಕಮ್ಯುನಿಸ್ಟ್ ಚೈನಾ ಅವರನ್ನು ಆಹ್ವಾನಿಸಿತು. ಆದರೆ ಆಗಿನ ಮದ್ರಾಸ್ ಮುಖ್ಯಮಂತ್ರಿ ಶ್ರೀ ರಾಜಾಜಿ ಅವರನ್ನು ಗಡಿದಾಟದಂತೆ ನೋಡಿಕೊಂಡರು. ಆಗ ಶ್ರೀ ಶ್ರೀ ರಾಜಕೀಯ ವ್ಯಂಗ್ಯದಿಂದ ಕೂಡಿದ ಕಾರ್ಟೂನ್ ಕವಿತೆಗಳನ್ನು ಬರೆದರು.

ಶ್ರೀ ಶ್ರೀ ಯವರ ರೇಡಿಯೋ ನಾಟಕ ಸಂಪುಟ ೧+೧ = ೧

"೧+೧ = ೧" ಎಂಬ ಶೀರ್ಷಿಕೆಯ ನಾಟಕ ಸಂಪುಟಕ್ಕೂ ಮೊದಲು 'ಮರೋ ಪ್ರಪಂಚಂ' ಎಂಬ ಹೆಸರಿನಲ್ಲಿ ೧೯೫೪ ಮತ್ತು ೧೭೫೬ರಲ್ಲಿ ಎರಡು ಮುದ್ರಣಗಳು ಬಂದಿವೆ. ಈ ಎರಡರೊಳಗೆ ೧೨ ನಾಟಕಗಳಿವೆ. ಮೂರನೇ ಮುದ್ರಣಕ್ಕೆ ಶ್ರೀ ಶ್ರೀ ಹೆಸರು ನೀಡಿದ್ದಾರೆ. ಇದಕ್ಕೆ ಉದಾಹರಣೆಯನ್ನು ನೀಡಿದ್ದಾರೆ.

"ನೀಲೋನೇನೂ
ನಾಲೋ ನೀವೂ
ಕಲಿಸಿ
ವೆರಿಸಿ
ಒಕಟಿ"

[illegible]

[illegible]

[illegible]

[illegible]

[illegible]

. . .

. . .

(ನಿನ್ನೊಳಗೆ ನಾನೂ
ನನ್ನೊಳಗೆ ನೀನೂ
ಕಲೆತು
ಬೆರೆತು
ಒಂದು.)

"ಅಂದ್ರೆ ಇದರ ಅರ್ಥ : ಹೌದು / ಅಲ್ಲ
ಒಳ್ಳೆಯದು / ಕೆಟ್ಟದ್ದು, ಬೆಳಕು / ಕತ್ತಲು
ಸಾವು / ಬದುಕು, ಮನುಷ್ಯ / ದೇವರು ಎಲ್ಲಾ ಒಂದೇ ಅಂತ"

"ಈ ಏಕ ಯಾರೊ ಅಲ್ಲ ಮಾನವ, ಆತನೇ ಸತ್ಯ. ಆತನೇ ನಿತ್ಯ. ಅಂದರೆ ಈಶ್ವರನು, ಪರಸ್ಪರ ಪ್ರೇಮಮಯ, ಮಾನವರೆಲ್ಲಾ ಸಮಾನವಾಗುತ್ತಾರೆ. ಪ್ರತಿ ಮನುಷ್ಯ ಎರಡನೆಯವನೊಳಗೆ ತನ್ನನ್ನು ದೇವರನ್ನು ಕಾಣುತ್ತಾರೆ. ಆದ್ದರಿಂದ ಪ್ರಪಂಚದೊಳಗೆ ವೈಷಮ್ಯಗಳಿಗೆ, ವೈಕಲ್ಯಕ್ಕೆ ಜಾಗವಿಲ್ಲ" "ಈ ಆಲೋಚನಾಧೋರಣೆ ಅವರ ಚರಮರಾತ್ರಿ ಕಥೆಯೊಳಗೆ ನಮಗೆ ಕಾಣಿಸುತ್ತದೆ. ಇದಕ್ಕೆ ಅನುಗುಣವಾಗಿಯೇ ಹೆಸರು ಬದಲಿಸಿದ್ದಾನೆ ಶ್ರೀಶ್ರೀ"[೪] ಎನ್ನುತ್ತಾರೆ. ಚಲಸಾನಿಪ್ರಸಾದ್. ಇದರೊಳಗೆ ಒಟ್ಟು ೨೨ ನಾಟಕಗಳಿವೆ.

ಇಲ್ಲಿ ಪತ್ರಿಕೆಯಲ್ಲಿ ಬಂದ ನಾಟಕಗಳಿವೆ. ರೇಡಿಯೋ ನಾಟಕಗಳಿವೆ. "ಬೆಂಡಯ್ಯಗಾರಿ ಗದಿ" ಅನ್ನುವ ನಾಟಕವನ್ನ ಕುರಿತಂತೆ ಶ್ರೀಶ್ರೀಯವರೇ "ಬಹಳ ಒಳ್ಳೆ ನಾಟಕವಾಗುತ್ತದೆಂದು ಉತ್ಸಾಹದಿಂದ ಹೇಳುತ್ತಿದ್ದರೆಂದು ಪ್ರಸಾದ್ ಹೇಳುತ್ತಾರೆ. ಅದರೊಳಗೆ ಒಂದು ಪಾತ್ರ ಚಂದ್ರಚುಕ್ಕೆಗಳು ಅನ್ನುತ್ತಾರೆ. ಸಮುದ್ರದಾಟಿ ಅಮೇರಿಕಾಕ್ಕೆ ಹೋದಾಗ ಶ್ರೀಶ್ರೀ ಈ ನಾಟಕವನ್ನು ೩ ಅಂಕದೊಳಗೆ ಬರೆದಿದ್ದಾರೆ. ಬೆಂಡಯ್ಯಗಾರಿ ಗದಿಯಲ್ಲಿ ಮೂರು ಗೋಡೆಗಳಿವೆ ನಾಲ್ಕನೇ ಗೋಡೆ ಪ್ರೇಕ್ಷಕರೇ ಇಂತಹ ಪ್ರಯೋಗಗಳು ಇದರೊಳಗೆ ಎಷ್ಟೋ ಇದ್ದಾವೆ.'ಕನೇಟಿ ರಾತ್ರಿ' ಕಥೆಯನ್ನು 'ಗುಮಾಸ್ತನ ಕನಸು' ಎಂಬ ನಾಟಕವನ್ನಾಗಿಸಿದ್ದಾನೆ. 'ವಿದೂಷಕನ ಆತ್ಮಹತ್ಯೆ' ನಾಟಕವು ಖಡ್ಗಸೃಷ್ಟಿ ಕವಿತಾಸಂಕಲನದ ಒಂದು ಕವಿತೆ. ಶ್ರೀಶ್ರೀ ಸಾಮಾನ್ಯರಂತಿದ್ದರೂ ಕವಿಯಾಗಿ ಕಲಾಕಾರನಾಗಿ ಅಸಾಮಾನ್ಯರಾಗಿದ್ದರು. ಸಂಪ್ರದಾಯ ರೀತಿಗಿಂತಲೂ ಆಧುನಿಕ ಯಂತ್ರ ಲೋಕವನ್ನು ಅವರು ಬಯಸುತ್ತಿದ್ದರು. ಹಾಗಾಗಿ ಅವರ ಮಾತಿನಲ್ಲಿ ಮತ್ತು ಕವಿತ್ವದಲ್ಲಿ ಛಲಂ ಹೇಳಿದ *Economy of words and thoughts* ಬರಲು ಸಾಧ್ಯವಿದೆ.

ಇಲ್ಲೆಲ್ಲಾ ಶ್ರೀಶ್ರೀ ಕವಿ. ಕಥೆಗಾರ, ನಾಟಕಕಾರ, ಇವಕ್ಕೂ ಹೆಚ್ಚು ಇವು *intellectual* ನಾಟಕಗಳು, ಇವುಗಳೊಳಗೆ ಶ್ರೀಶ್ರೀ *thicker*ನ ಆಗಿ *philosopher*ರಾಗಿ *Scientist* ಆಗಿ ಕಾಣಿಸುತ್ತಾರೆ. ಮರೋ ಪ್ರಪಂಚದಲ್ಲಿ ಬಂಡವಾಳಶಾಹಿಯನ್ನ ವ್ಯವಹಾರಿಕ ದೃಷ್ಟಿಕೋನವನ್ನ ಚಿತ್ರಿಸಿದ್ದಾರೆ. "ವಿರಕ್ತಿ ಒಕ್ಕಟೇ ಈ ನಾಟಿ ಜೀವಿತಂ ಮಿಗಿಲ್ಚಿಂದಿ" ಅಂತ ಕೂಡಾ ಹೇಳುತ್ತಾರೆ. ಆದರೆ ಅದೊಂದು ಪಾತ್ರದ ಮೂಲಕ ಎಂಬುದೇ ವಿಶೇಷ. ಶ್ರೀಶ್ರೀ ಭಗವದ್ಗೀತೆಯ ಕರ್ಮ ಸಿದ್ಧಾಂತವನ್ನು ಇಲ್ಲಿ ಪ್ರಶ್ನಿಸಿದ್ದಾರೆ. "ಚತುರ್ರಸಂ" ನಾಟಕದಲ್ಲಿ ಮಾನವರು ಮರಣವನ್ನು ಜಯಿಸುತ್ತಾರೆಂದು ಬರೆದಿದ್ದಾರೆ. ಶ್ರೀ ಶ್ರೀ ಯಾವಾಗಲೋ ಅಲ್ಲ. ಈಗಲೇ, ಎಲ್ಲೋ ಅಲ್ಲ. ಇಲ್ಲೇ ಮಾನವ ಕುಟುಂಬ ಅಂತಾ ರಾಜಕೀಯ ಸ್ವಾತಂತ್ರ್ಯವನ್ನು, ಆರ್ಥಿಕ ಸ್ವಾತಂತ್ರ್ಯವನ್ನು ಅನುಭವಿಸುತ್ತ ಮಾನಸಿಕ ಸ್ವಾತಂತ್ರ್ಯ ಸಾಧಿಸಲಿಕ್ಕೆ ಪ್ರಯತ್ನಿಸಲಾಗಿದೆ. ಅಮೃತವನ್ನ ಎಲ್ಲರಿಗೂ ಹಂಚಿದಾಗಲೇ ಈ ಸ್ವಾತಂತ್ರ್ಯ ಸಾಧ್ಯವಾಗುತ್ತದೆ. ಇದರೊಳಗೆ ನಾಲ್ಕೆ ಪಾತ್ರಗಳಿವೆ. ವಿಜ್ಞಾನಿ, ರಾಜಕಾರಣಿ, ಕವಿ, ಕಲಾವಿದ. ೧೯೯೯ ಡಿಸೆಂಬರ್ ೩೧ರಂದು ಅಮೃತ ಸೇವಿಸಿ ೩೦ ವರ್ಷದವರಾಗಿ ಹೋಗಿಬಿಡುತ್ತಾರೆ. ಚಂದ್ರಮಂಡಲದಿಂದ ತಂದ ಅಮೃತವನ್ನ ಐಕ್ಯರಾಜ್ಯಸಮಿತಿ ಮೂಲಕ ಪ್ರಪಂಚ ಪ್ರಜೆಗಳಿಗೆಲ್ಲ ಆಗುತ್ತದೆ. ಇದೇ ಇದರ ಕಥಾವಸ್ತುವು.

"ಔದು ನಿಜ....ಔದು ನಿಜ

....

ನೀವೆಂದದ್ದು ನಿಜ....ನಿಜ!"

ಎಂಬ ಶ್ರೀಶ್ರೀ ಕವಿತೆಯನ್ನೇ ಚಲಸಾಪ್ರಸಾದ್ ಅವರು ನಾಟಕ ಕುರಿತು ಉದಾಹರಿಸುತ್ತಾರೆ,.

ವಾರಂ ವಾರಂ : ಇದು ಶ್ರೀ ಶ್ರೀ ಅವರ ವಿಭಿನ್ನ ಬರಹಗಳನ್ನ ಒಂದೆಡೆ ತಂದ ಸಂಕಲನ. ಇಲ್ಲಿ ವಿಚಾರ ವಿಮರ್ಶೆ ಇದೆ. ಅನುವಾದಗಳಿವೆ. ಉಕ್ತಿಗಳಿವೆ. ಆಯಾ ಕ್ಷಣಕ್ಕೆ ಬರೆದ ಶ್ರೀಶ್ರೀಯವರ ಹೇಳಿಕೆಗಳಿವೆ, ಚಮತ್ಕಾರಗಳಿವೆ, ಪೋಟೋ ವ್ಯಾಖ್ಯಾ ಇದೆ. ಅತಿ ಹೆಚ್ಚಿನ ಭಾಗ ಪದಬಂಧಗಳಿವೆ. ಅಧಿವಾಸ್ತವಿಕತೆ, ಲೋಕ ಕಥೆಯೊಳಗಿನ ಕಥೆ. ತರದ ಮಿನಿ ಬರಹಗಳ ಜೊತೆ "ಮಾನವಡಿ ಮೊಗಂ" ಎಂಬ ಮಿನಿ ಲೇಖನವೂ ಇದೆ. ಇದರೊಳಗೆ "ನಾಕು ದೇವುಡಿಮೀದ ನಮ್ಮಕಂ ಉಂದೋ ಲೇದೋ ನಿಕರಂಗ ಚಪ್ಪಲ್ಗೇಕ ಪೊತ್ತುನ್ನಾನು ಗಾನಿ ಮಾನವುಡಿ ಮೀದ ಮಾತ್ರಂ ಅಚಂಚಲ ವಿಶ್ವಾಸಂ ಉಂದನಿ ನಿಶ್ಚಯಂಗಾ ವಕ್ಕಾಣಿಸ್ತುನ್ನಾನು." ಎನ್ನುತ್ತಾರೆ. ಮನಿಷಿ ಮೊಗಂ ಚಾಲು ನಾಕು" ಎನ್ನುತ್ತಾರೆ. ಹಾಗೇ ಚರ್ಚಿಲ್, ಹಿಟ್ಲರ್, ಸ್ಟಾಲಿನ್ ಎನ್ನುವ ಚಿತ್ರಗಳನ್ನ ನೆನೆಯುತ್ತಲೇ ಬೋದಿಲೇರ್ ನನ್ನ

ಉದಾಹರಿಸುತ್ತಲೇ ಮನುಷ್ಯರು ರಾತ್ರಿಯಾದೊಡನೆ ಏಕೆ ಬದಲಾಗುತ್ತಾರೆ? ಎಂದು ಪ್ರಶ್ನಿಸುತ್ತಾರೆ. ಆರೋಗ್ಯವಂತರು ಕತ್ತಲಿಗೆ ನಿದ್ರೆ ಅನ್ನೋ ಕೀಲಿ ಹಾಕಿಬಿಟ್ಟರೆ ಉಳಿದವರೆಲ್ಲಾ ಅದರ ಸಮಸ್ಯೆಯೊಳಗೇ ಸಿಕ್ಕು ನಲುಗುತ್ತಾರೆ ಎನ್ನುತ್ತಾರೆ. ಹೀಗೆ ಸಲಹ, ಸಂಗ್ರಾವಾಲು, ಸಮಾವೇಶಾಲು, ಅದ್ದಂ ಮುಂದು ಪ್ರಾರ್ಥನಾ, ಮದ್ವನಿಷೇದಂಮಂಚಿದೊ ಮುಂಚಿದೆ! ಮೊದಲಾದ ೨೨ ಲೇಖನಗಳಿವೆ. ಇವೆಲ್ಲಾ ಆ ಕ್ಷಣಕ್ಕೆ ಹುಟ್ಟಿದ ಚಿಕ್ಕ ಚಿಂತನೆಗಳೇ ವಿನಃ ಅಂತಹ ಗಾಢ ಪರಿಣಾಮ ಬೀರುವ ವಿಶಿಷ್ಟ ಬರಹಗಳೇನಲ್ಲ. ಇದರೊಳಗೆ 'ಆನಂದಮಯ ಜೀವಿತಂ' ಎನ್ನುವ ಚಕೋವ್‌ನ ಅನುವಾದವಿದೆ. ಹಾಗೇ ಗುರುವು ಎಂಬ ಎಂ. ಛಲಪತಿ ಅವರ ಇಂಗ್ಲಿಷ್ ಪುಸ್ತಕ 'ಗಾಂಧಿ ಅಂಡ್ ನೆಹ್ರೂ' ಎಂಬ ಪುಸ್ತಕದ ಮೊದಲ ಅಧ್ಯಾಯದೊಳಗಿನ ಎರಡು ಪ್ಯಾರಾಗಳ ಅನುವಾದವಿದೆ. ಮುಂದಿನ ಭಾಗದಲ್ಲಿ 'ಫಕೀರೋಫ್ಯಾರೋಶ್ ಪಲುಕುಲು' ಎನ್ನುವ ಸಿನಿಮಾ ಕುರಿತ ಶ್ರೀ ಶ್ರೀ ಬರಹಗಳಿವೆ. ಈ ಹೆಸರಿನಿಂದ ಪ್ರತಿವಾರ ಮದ್ರಾಸಿನಿಂದ ಸಿನಿಮಾ ವಿಶೇಷಗಳನ್ನು ಬರೆದ ಬರಹಗಳಿವು. ಇಲ್ಲಿ ಅವರೇ ಹೇಳಿಕೊಳ್ಳುವಂತೆ "ಇಲ್ಲಿ ಮಹಾ ಸಿನಿಮಾ ತಾರೆಯರ ಮನೆಯ ಬೆಕ್ಕು ದೊಡ್ಡಾಗಿದೆ ಎಂಬ ಹಸಿ ಬರಹಗಳಲ್ಲ ಹಾಗೇ ಸಿನಿಮಾ ರಂಗದಲ್ಲಿ ನಡೆಯುತ್ತಿರುವ ದುರಾಚಾರಗಳನ್ನೆಲ್ಲಾ ತೋರಿಸಿ ಶುದ್ಧಗೊಳಿಸುವ ಹಠವೂ ಇದಕ್ಕಿಲ್ಲ"[೫] ಹಾಗೇ ಇದರೊಳಗೆ ಛಾಟೋಕ್ತಿ, ಉವಾಚಗಳು, ಚಮತ್ಕಾರಗಳು ಮೊದಲಾದ ಚುಟುಕು ಬರಹಗಳ ಜೊತೆಗೆ ಪದಬಂಧಗಳಿವೆ. ಒಟ್ಟು ಸಾಹಿತ್ಯ ದೃಷ್ಟಿಯಿಂದ ಈ ಕೃತಿ ಅಷ್ಟು ಪ್ರಮುಖ ಕೃತಿ ಎಂದು ಅನಿಸದಿದ್ದರೂ ಈ ಕೃತಿಯ ಸಂಪಾದನಾಕಾರರು ಮಾತ್ರ "ಕವಿತೆಯಂತೆ ಗದ್ಯದೊಳಗೂ ಪ್ರಯೋಗ ಮಾಡಿದ ಸಾಹಸಿ ಶ್ರೀ ಶ್ರೀ ಎನ್ನುತ್ತ ಮಾತಿನ ತಳುಕನ್ನ, ಬೆಳಕನ್ನ, ಮೆರುಗನ್ನ, ಮಿಂಚನ್ನ ಇದರೊಳಗೆ ನಮ್ಮ ಮುಂದೆ ಶ್ರೀ ಶ್ರೀ ತೋರುತ್ತಾರೆ" ಎಂದೇ ಸಂಭ್ರಮಿಸಿದ್ದಾರೆ.

ವ್ಯುವ್‌ಲು ರಿವಿವ್‌ಲು : ಈ ಪುಸ್ತಕದೊಳಗೆ ಪುಸ್ತಕ ಪರಿಚಯಗಳು, ಸಮೀಕ್ಷೆಗಳು ಇವೆ. ಶ್ರೀಶ್ರೀ ಎಷ್ಟೋ ಜನರಿಗೆ ಬರೆದ ಮುನ್ನುಡಿಗಳಿವೆ. ಎಲ್ಲೆಲ್ಲೋ ಮುನ್ನುಡಿ ಬರೆದ ವಿಮರ್ಶೆಗಳಿವೆ.

ಶ್ರೀಶ್ರೀ ಮೊಟ್ಟಮೊದಲಿಗೆ ಬರೆದ ಇಂದ್ರಗಂಟಿ ಹನುಮಶಾಸ್ತ್ರಿಗಳ "ತೆಲುಗುವೀಣಾ" ಪುಸ್ತಕದಿಂದ (೧೯೩೪) ಹಿಡಿದು ಕೊನೆಯ ವಿಮರ್ಶೆ 'ರವಿಶಾಸ್ತ್ರೀಯಂ" ೧೯೮೩ವರೆಗೆ ಈ ಪುಸ್ತಕದ ಲೇಖನಗಳ ವಿಸ್ತಾರವಿದೆ.

ಶ್ರೀ ಶ್ರೀ ಪರಿಚಯ ಮಾಡುವುದರ ಮೂಲಕ ಎಷ್ಟೋ ಯುವಕವಿಗಳನ್ನ, ಲೇಖಕರನ್ನ ಪ್ರೋತ್ಸಾಹಿಸಿದ್ದಾರೆ. ಅವರ ಮುಖ್ಯ ಉದ್ದೇಶ ಕೂಡಾ ಅದಾಗಿತ್ತು.

ಎರಡನೇ ಭಾಗದ ಸಮೀಕ್ಷೆಗಳಲ್ಲಿ ಸಮಾಜದ ಕಾಳಜಿ, ಸಾಮಾಜಿಕ ಪ್ರಯೋಜನಗಳು ಕಂಡು ಬರುತ್ತವೆ. ಆದ್ದರಿಂದ ಆ ಸಮೀಕ್ಷೆಗಳೊಳಗೆ ಸಹಜವಾಗಿಯೇ ವಿಮರ್ಶಕ ಕಂಡು ಬರುತ್ತಾನೆ. ಸಮಾಜವಾದದ ನೋಟ ಕಂಡುಬರುತ್ತದೆ. ಆದರೆ ಆರಂಭದಿಂದ ಕೊನೆವರೆಗಿನ ಲೇಖನಗಳ ದಾಖಲೆಗಳು ಇಲ್ಲಿಲ್ಲ. 'ವ್ಯೂವ್'ನ ಕೆಲವು ಲೇಖನಗಳ ಸ್ಥೂಲ ವಿವರವನ್ನ ಈ ರೀತಿ ನೋಡಬಹುದು. 'ಕವಿತಾ ಪರಿಚಯಂ' ಎಂಬ ಕಿರುಲೇಖನವು ೧೯೩೬ 'ಮಾನವ' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇಲ್ಲಿ ಅವರು ಕೆಲ ಕವಿಗಳನ್ನ ಪರಿಚಯಿಸಿದ್ದಾರೆ. ಅವರಲ್ಲಿ ಮೊದಲಿಗರು "ವಿಶ್ವನಾಥ ಸತ್ಯನಾರಾಯಣ : ಇವರು ಕವಿ, ವಿಮರ್ಶಕ, ಕಾದಂಬರಿಕಾರ, ನಾಟಕಕಾರ, ಲೇಖಕ, ಸಂಪ್ರದಾಯಿಕ ನೋಟದ ಇವರು ಆಧುನಿಕತೆಯ ಬದ್ಧ ವಿರೋಧಿ ಎಂದು ಹೆಸರಾದವರು. ರಾಮಾಯಣ ಕಲ್ಪವೃಕ್ಷಂ ಎನ್ನುವ ಮಹಾಕಾವ್ಯ ಬರೆದವರು ಹಾಗೇ ಮೇಯ ಪಡಗಲು, ಏಕವೀರ, ಕಿನ್ನರ ಸಾನಿ ಹಾಡುಗಳು ಅವರ ಪ್ರಸಿದ್ಧ ರಚನೆಗಳು ಇವರ ಬಗ್ಗೆ ಬರೆಯುತ್ತ ಶ್ರೀ ಶ್ರೀ "ಈ ದಿನ ತೆಲುಗು ಪದ್ಯಗಳನ್ನ ಬರೆವ ಕವಿಗಳೊಳಗೆ ವಿಶ್ವನಾಥ ಸತ್ಯನಾರಾಯಣರದು ಪ್ರಥಮ ಶ್ರೇಣಿ. ಭಾವ ಪರವಶರೆಲ್ಲಾ ಇವರಿಗೆ ಮೊದಲ ಸ್ಥಾನವನ್ನೇ ನೀಡುತ್ತಾರೆ.

ಮಳೆಯಂತ ಪದ್ಯಗಳೊಳಗೆ ಇವರು ಭೂಮಿಯನ್ನ, ಆಕಾಶವನ್ನ, ತೆಲುಗನ್ನ, ಸಂಸ್ಕೃತವನ್ನ ಒಂದೇ ಲಯದಲ್ಲೇ ಹೆಜ್ಜೆ ಹಾಕಿಸುತ್ತಾರೆ. ಇವುಗಳೊಳಗೆ ಶ್ರೀನಾಥನ ಸೀಸ ಪದ್ಯಗಳನ್ನ ನೆನಪು ಮಾಡುತ್ತ ವ್ಯಕ್ತಿತ್ವ ಕೆಡಿಸಿಕೊಳ್ಳದ ರಚನೆಗಿಳಿಯುತ್ತಾರೆ.

ಸತ್ಯನಾರಾಯಣರು ಕವಿಗಳೊಳಗೆ 'ಪ್ರಾಚೀನರು' ಇವರ ಪದ್ಯಗಳು ಮಹಾಬಲಿಪುರದ ಕಲ್ಲು ಗೋಪುರಗಳು."[೬] ಎಂದು ಕುಟುಕುತ್ತಾರೆ.

ಈ ಚುಟುಕು ಲೇಖನದಲ್ಲಿರುವ ತೀವ್ರ ವ್ಯಂಗ್ಯ ಪ್ರಖರ ನೋಟಗಳು ಅವರ ನಿಷ್ಠೂರ ವಿಮರ್ಶೆಗೆ ಸಾಕ್ಷಿ ಎಂಬಂತಿವೆ.

ಹಾಗೇ ಈ ಭಾಗದಲ್ಲಿ ಕವಿ ಕೊಂಡಲಿ ವೆಂಕಟರಾವು (ಕವಿ, ಕಥೆಗಾರ) ರಾಯಪ್ರೋಲು ಸುಬ್ಬರಾವು (ಪಂಡಿತ, ಕವಿ, ಭಾವಕವಿತ್ವದ ಆದಿಕವಿ), ವಸುರಾಯಕವಿ, ಇವರ ನಿಜವಾದ ಹೆಸರು ಪಡ್ಡಾದಿ ಸುಬ್ಬಾರಾಯುಡು. (ಇವರು ಬರೆದ 'ಚಿಂತಾಮಣಿ ಶತಕಂ' ಒಳ್ಳೆ ಭಕ್ತಿ ಕವಿತೆಗಳಲ್ಲಿ ಹೆಸರು ಮಾಡಿದೆ) ಇವರೆಲ್ಲರ ಸ್ಥೂಲ ನೋಟವನ್ನ ಈ ಚುಟುಕು ಬರಹದಲ್ಲಿ ಕಾಣಬಹುದು.

'ನಾಗೊಡವ' ಎನ್ನುವ ಲೇಖನವು ತೆಲಂಗಾಣ ಕಾವ್ಯ ಬರೆದ ಕಾಳೋಜಿ ನಾರಾಯಣರಾವು (೧೯೧೪) ಅವರನ್ನ ಕುರಿತದ್ದು

“ಅನ್ಯಾಯವನ್ನೆದಿರಿಸುವವನು
ನನಗೆ ಆರಾಧ್ಯನು
ಅನ್ಯಾಯವು ಕೊನೆಗೊಂಡರೆ
ನನ್ನ ಗೊಡವೆಗೆ ಮುಕ್ತಿ ಪ್ರಾಪ್ತಿ”

ಎಂದು ಬರೆವ ಕಾಳೋಜಿ ಗಾಂಧೀವಾದಿ, ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಜೈಲು ಸೇರಿದವರು, 'ನಾಗೊಡವ' ಎಂಬ ಹೆಸರಿನಲ್ಲಿ ೮ ಸಂಪುಟಗಳ ಬೃಹತ್ ಕವಿತಾ ರಾಶಿಯನ್ನ ನೀಡಿದವರು. ಇವರನ್ನ ಕುರಿತಂತೆ “ಕಾಳೋಜಿ ನಿಖಿಲಾಂಧ್ರ ಕವಿ. ಅದರೊಳಗೆ ಯಾವ ಸಂದೇಹವಿಲ್ಲ. ಆತನಿಗೆ ತೆಲಂಗಾಣ ತುದಿಗಳು ಗೋಡೆಗಳಾಗಿ ಎದುರುನಿಂತಿವೆ. ಆತ ತನ್ನ ಖಂಡಕಾವ್ಯ ಸಂಪುಟಕ್ಕೆ “ನನ್ನ ಗೊಡವೆ” ಅಂತ ಹೆಸರಿಟ್ಟಿದ್ದಾನೆ. ಅದೇ ಕವಿ ಪ್ರತಿಭೆ. ಅದೇ ಕವಿ ಹೇಳಬೇಕಾದುದು ಇದು ಗೊಡವೆಯಂತೆ ಕಾಣುವಂತೆಯೇ ಓದುಗರಿಗೆ ಇದು ತಮ್ಮ ಗೊಡವೆಯಂತೆಯೇ ಅರ್ಥವಾಗುತ್ತದೆ. ಇದು ವಿಶಾಲಜಗತ್ತು ಪ್ರಜೆಗಳೆಲ್ಲರ ಗೊಡವೆ. ಇದು ನಾವು ಮನನ ಮಾಡಿಕೊಳ್ಳಬೇಕಾದ ಪುಸ್ತಕ. ಎಂದು ಸೊಗಸಾದ ವಿಮರ್ಶೆ ಮಾಡಿದ್ದಾರೆ.

ಯುದ್ಧದೊಳಗೆ ಫ್ರಾನ್ಸು ಕವಿಗಳೆಲ್ಲಾ ದಿಕ್ಕಾಪಾಲಾಗಿ ಓಡಿಹೋದಾಗ ಲೂಯಿ ಆರಗಾನ್ ಅನ್ನುವವನೊಬ್ಬನೇ ದೇಶದೊಳಗೆ ನಿಂತು ಮಹಾಪ್ರಜೆಗಳ ವಿಶ್ವಾಸ ಹೆಚ್ಚಿಸುವ ಗೀತೆಗಳನ್ನ ಬರೆದನು. ಕಾಳೋಜಿ ಲೂಯಿ ಆರಗಾನ್ ತರದವರು. ಹಾಗೇ ಯಾರಿಗೂ ತಿಳಿಯದಂತೆ ಅಜ್ಞಾತವಾಗಿಕೊಂಡೇ ತೆಲಂಗಾಣ ಮೂಕಜೀವಿಗಳ ಹೃದಯಗಳನ್ನ ಪ್ರತಿಬಿಂಬಿಸಿದ್ದಾರೆ. ಈ ಪುಸ್ತಕವನ್ನ ಪ್ರಶಂಸಿಸುವದಕ್ಕೆ (೧೯೫೩) ನನಗೆಷ್ಟೋ ಸಂತೋಷವಿದೆ”[೬] ಎಂದಿದ್ದಾರೆ.

ಈ ವಿಮರ್ಶೆಯಲ್ಲಿ ಶ್ರೀಶ್ರೀ ಅವರ ದೃಷ್ಟಿಕೋನ ಮತ್ತು ಕಾಳಜಿಗಳು ಕಂಡು ಬರುತ್ತವೆ ಜೊತೆಗೆ ಅವರ ವಿಸ್ತಾರವಾದ ಓದು ಮತ್ತು ಕಾಲ್ಪನಿಕ ದೃಷ್ಟಿಕೋನವು ಕಂಡುಬರುತ್ತದೆ.“ ಅಂಗಾರವಲ್ಲರಿಕಿ ಪರಿಚಯಂ” ಅನ್ನುವ ಲೇಖನ ಕೆ.ವಿ.ರಮಣಾರೆಡ್ಡಿಯವರನ್ನ ಕುರಿತದ್ದು. ಕವಿ, ಲೇಖಕ, ವಿಮರ್ಶಕ, ಚಿತ್ರಕಾರ, ಅಡವಿ, ಭುವನ ಘೋಷ, ಅಂಗಾರವಲ್ಲರಿ, ಎರ್ರ ಪಿಡಿಕಿಲಿ, ಜೈಲುಕೋಕಿಲ, ಸೂರಿಡು ಮಾವಾಡು, ಎನ್ನುವ ಕವಿತಾ ಸಂಕಲನಗಳನ್ನು ಬರೆದವರು. ದುವ್ವೂರಿ ರಾಮಿರೆಡ್ಡಿ, ಗುರುಜಾಡ, ಶ್ರೀಶ್ರೀ ಅವರ ವಿಮರ್ಶನಾ ಗ್ರಂಥ ಬರೆದವರು. ೧೯೫೫ರೊಳಗೆ 'ಅರಸಂ' ಪುನರ್ಜೀವನಕ್ಕೆ ಕೃಷಿಗೈದವರು. ೧೯೭೦ರಲ್ಲಿ 'ವಿರಸಂ' ಸಂಸ್ಥಾಪಕ, ಕಾರ್ಯದರ್ಶಿ, ಅಖಿಲ ಭಾರತ ವಿಪ್ಲವ ಸಾಂಸ್ಕೃತಿಕ ಸಮುಖ್ಯದ ಸಂಸ್ಥಾಪಕ ಕಾರ್ಯದರ್ಶಿಯೂ ಹೌದು.

"ಸಮಾಜದೊಳಗೆ ಬದಲಾವಣೆಯನ್ನ ಸಹಿಸಲಾರದವರು, ಬದಲಾವಣೆಯನ್ನ ಆಹ್ವನಿಸುವವರು ಇರುವಂತೆಯೇ ಕವಿಗಳೊಳಗೂ ಕೂಡಾ ಎರಡು ಬಗೆಯ ಬರಹಗಾರರು ಇರುತ್ತಾರೆ. ಇದರೊಳಗೆ ಎರಡನೆಯವರಲ್ಲಿ ಮೊದಲ ಶ್ರೇಣಿಯ ಬರಹಗಾರನೇ ಶ್ರೀರಮಣಾರೆಡ್ಡಿ." ಎಂದು ಆರಂಭಗೊಂಡ ಈ ಲೇಖನವು ಹೇಗೆ ಪ್ರಜಾಕವಿಗಳಲ್ಲಿ ಗುರುಜಾಡರು ಮುಖ್ಯರಾದರೂ ಸಂಪ್ರದಾಯಿಕರು ಅವರನ್ನ ಮುಖ್ಯ ಅನ್ನಲಾರರು ಎಂಬುದನ್ನ ತೀವ್ರವಾಗಿ ಖಂಡಿಸುತ್ತ ಹೇಗೆ ಗುರುಜಾಡರವರು, ರಮಣಾ ರೆಡ್ಡಿಯಂತವರು ಮುಖ್ಯರಾಗುತ್ತಾರೆ ಎಂದು ಉಚಿತವಾಗಿ ಚಿಂತಿಸಿದ್ದಾರೆ" ಆಧುನಿಕಾಂದ್ರ ಕವಿತೆಗಳೊಳಗೆ ಅಭ್ಯುದಯ ಕವಿತ್ವದ ಮೂಲಸ್ಥಂಭಗಳಲ್ಲಿ ಒಬ್ಬರೆಂದು ಮೊಟ್ಟ ಮೊದಲ ಬಾರಿಗೆ 'ಅಡವಿ' ಅನ್ನುವ ಖಂಡಕಾವ್ಯ ಸಂಪುಟದಿಂದ ಇವರು ಉದ್ಯಮ ನಿರ್ಮಾಣದೊಳಗೆ ಒಬ್ಬ ಅಗ್ರಗಣ್ಯರಾಗಿ ನಿಂತಿದ್ದಾರೆ. ಸಮಕಾಲೀನ ಸಾಮಾಜಿಕ ವ್ಯವಸ್ಥೆಯನ್ನ ಅರಣ್ಯದಂತೆ ಗುರ್ತಿಸಿ ಅದರೊಳಗೆ ನಾಗರೀಕತೆಯ ಸ್ಥಾನವನ್ನ ಸುಂದರರಾಜಮಾರ್ಗವೆಂದು ಕರೆದವರು. ಆ ದಿನದಿಂದ ಇಂದಿನವರೆಗೂ ರಮಣಾರೆಡ್ಡಿ ಕವಿತ್ವವು ಸಾಂಪ್ರದಾಯಿಕವಾದ ಅಡವಿಯಂತಹ ಮನಸ್ಥಿತಿಗೆ ಕೊಡಲಿ ಪೆಟ್ಟು. ನಾಗರೀಕ ಮಾನವನಿಗೆ ಹೊಸಬೆಳಕು, ಎನ್ನುತ್ತಲೇ ರಮಣರೆಡ್ಡಿಯನ್ನ ಕೇಳಿನೋಡಿ "ನೀವು ವಿಶ್ವಾಸಿಸುತ್ತಿರುವ ಸತ್ಯಕ್ಕಾಗಿ, ಸಂಘಟನೆಯ ವ್ಯವಸ್ಥೆಗಾಗಿ, ಸಾಂಸ್ಕೃತಿಕ ಜೀವನಕ್ಕಾಗಿ ಹೋರಾಡಿದ ವೀರರನ್ನ ಅನುಸರಿಸುತ್ತೀರಾ? ಅಂತ 'ಓ ಖಂಡಿತಾ! ಅವರ ಹಾಗೇ ಜೀವಿಸಲಿಕ್ಕೆ ಸಿದ್ಧ. ಅವರ ಹಾಗೇ ಮರಣಿಸಲು ಸಿದ್ಧ" ಅಂತಾರೆ. ಇದರಲ್ಲಿ ಯಾವ ಸಂದೇಹವೂ ಬೇಡ." ಎಂಬುದೇ ಶ್ರೀ ಶ್ರೀ ನಿಲುವು. ಆದ್ದರಿಂದಲೇ ಅವರು ಮತ್ತೆ ಮತ್ತೆ ಹೇಳುವುದು ರಮಣಾರೆಡ್ಡಿ ಕವಿತ್ವ ನವ್ಯ ಮಾನವನ ಅಭ್ಯುದಯಕ್ಕೆ, ದಿವ್ಯಮಾರ್ಗ.

ವಿರಸಂನವರು ಒಟ್ಟಾಗಿ ಕಲೆತು "ಲೇ" ಎನ್ನುವ ಕವನ ಸಂಕಲನವನ್ನ ಮುದ್ರಿಸಿದರು. ಅದರ ಮುನ್ನುಡಿಯನ್ನ ಶ್ರೀಶ್ರೀ ಬರೆದಿದ್ದಾರೆ. ಅದರ ಕೆಲ ವಿವರವನ್ನ ಈ ರೀತಿ ನೋಡಬಹುದು. " ಈ ದಿನ ತಿರುಪತಿ ಕವಿಗಳು ಮುದ್ರಿಸಿದ ಕವಿತಾ ಸಂಕಲನ" "ಲೇ" ಇದರೊಳಗೆ ಎಷ್ಟೋ ಬಗೆಯ ಗೀತೆಗಳಿವೆ. (ಎಲ್ಲಾ ಒಂದೇತರನಾದವು. ಅನ್ನೋ ಜನವಿದ್ದಾರೆ. ಆದರೆ ಅವರದು ಚೌಕಾಬಾರ ವಿಮರ್ಶೆ)

ಸ್ಥೂಲದೃಷ್ಟಿಗೆ ಎಲ್ಲಾ ಒಂದೇತರ ಕಂಡುಬರುತ್ತವೆ. ಚಿಕ್ಕವರೆಲ್ಲ ಒಂದೇ ರೀತಿ ಕಾಣುವಂತೆ! ಹಾಗೇ ನೀಗ್ರೋಗಳು, ಹಾಗೇ ಬಿಳಿಯರು, ಆದರೆ ಯಾವ ಇಬ್ಬರು ಕವಿಗಳು ಒಂದೇ ತರ ಇರಲಾರರು ಎಂಬುದು ನಿಜವಾದ ಸತ್ಯ. ಯಾವ ಇಬ್ಬರು ಮನುಷ್ಯರೂ (ಅವರು ಕವಿಗಳಾದರೂ ಸರಿ) ಒಂದೇ ರೀತಿ ಇರರು. ಹಾಗೂ ಯಾವ ಎರಡು ಗೀತೆಗಳೂ (ಒಬ್ಬ ಕವಿ ಬರೆದರೂ ಕೂಡ) ಒಂದೇ ತರ ಇರವು.

[illegible]

ಸಂಕಲನವನ್ನೆಲ್ಲಾ ಓದಿದ ಮೇಲೆ ನಮ್ಮ ಚೌಕಾಬಾರ ವಿಮರ್ಶಕರಂತಾರೆ ನಾನು ಊಹಿಸಬಲ್ಲೆ "ಆಫ್ಟರಾಲ್, ಇದರೊಳಗೆ ಏನಿದೆ? ಯಾವ ಪುಟ ತೆರೆದರೂ, ಹೊಡಿ, ಕೊಲ್ಲು, ಸಾಯಿಸು ಅಂತಲೇ! ಇವರ ಕವಿತಾ ಸಾಮಾಗ್ರಿಯಲ್ಲಾ ರಕ್ತ, ಬೆಂಕಿ, ಬಾಕು, ಬಂದೂಕು, ಹಸಿವು ದಾರಿದ್ರ್ಯಗಳು ಇವೇ ಅಲ್ಲವೆ?"

"ಭಾವುಕ ಕವಿತೆಯ ಸಾಮಾಗ್ರಿ ಮೇಲೆ ಕೂಡಾ ಇಂತಹ ವಿಮರ್ಶೆಗಳೇ ಕೇಳಬಹುದು ಬೆಳದಿಂಗಳು, ಸವಿ, ಹೂಗಳು, ಪ್ರೇಯಸಿ, ಪ್ರಣಯ, ವಿರಹ, ಇಷ್ಟೇ ಅಲ್ಲವೇ!" ಅಂತ. ಪತನಾವಸ್ಥೆಯೊಳಗಿನ ಜಮೀನ್ದಾರಿ ಕವಿತೆ ಮೇಲೆ ಬಂದ ತಿರುಗು ಬಾಟು ಕವಿತೆಯೇ ಭಾವಕವಿತೆ ಅಂತ ಈ ದಿನ ನಾವು ಸುಲಭವಾಗಿ ಗುರ್ತಿಸಬಲ್ಲೆವು! ಸಾಹಿತ್ಯ ಪರಿಣಾಮಗಳನ್ನೂ ಸಾಮಾಜಿಕ ಪರಿಸ್ಥಿತಿಯೊಳಗೆ ಸಮನ್ವಯಿಸಿ ಚಾರಿತ್ರಿಕ ದೃಕ್ಪಥದೊಳಗೆ ಸಮೀಕ್ಷಿಸುವಂತವನೇ ಸದ್ವಿಮರ್ಶಕ. ಆತನೇ ಮಾರ್ಕಿಸ್ಟು ವಿಮರ್ಶಕ! ಸಂದೇಹವಿಲ್ಲ."[೬]

ಹೀಗೆ ಕೃತಿಯ ಮುನ್ನುಡಿಯ ನೆಪದಲ್ಲೇ ಶ್ರೀಶ್ರೀಯವರು ಸಾಹಿತ್ಯ, ಸಾಹಿತ್ಯದ ದೃಷ್ಟಿಕೋನ, ನಿಜವಾದ ವಿಮರ್ಶಕ ಮತ್ತು ಆತನ ಸಾಮಾಜಿಕ ಹೊಣೆಗಾರಿಕೆಯನ್ನ ಕುರಿತು ಚಿಂತಿಸಿದ್ದಾರೆ.

ಇದೇ ಹಾದಿಯಲ್ಲಿ ಅತ್ಯಂತ ತೀವ್ರವಾಗಿ ವಿಪ್ಲವಂ ವರ್ದಿಲ್ಲಾಲಿ, ರಕ್ತಂ ವಾಡೇ ಸಮಯಂ (ರಕ್ತಗಾನಂ) ಸಂಕಲನಗಳ ಮುನ್ನುಡಿಗಳಿವೆ. ಇಲ್ಲೆಲ್ಲಾ ಪೋಲಿಸರ ಮೇಲೆ ಅವರನ್ನ ಅನುಸರಿಸುವ ಇನ್‌ಪರ್‌ಮರ್ ಮೇಲೆ ತೀವ್ರವಾಗಿ ಸಿಡಿಯುತ್ತ ಪೋಲಿಸರಿಗೆ ಉಗುರು ಹಲ್ಲುಗಳಿವೆಯೋ ವಿನಃ ಮಿದುಳು ಮತ್ತು ಮನಸ್ಸುಗಳಿಲ್ಲ, ಅವಿಲ್ಲದ ಅವರು ಒಳ್ಳೆ ವಿಮರ್ಶಕರು ಹೇಗಾದಾರು? ಎಂದು ಪ್ರಶ್ನಿಸುತ್ತಾರೆ.

ನಗ್ನ ಮುನಿಯ "ತೂರ್ಪುಗಾಲಿ" ಸಂಕಲನಕ್ಕೆ ಮುನ್ನುಡಿ ಬರೆಯುತ್ತ "ಇದು ನಿಸ್ಸಂದೇಹವಾಗಿ ವಿಪ್ಲವ ಸಾಹಿತ್ಯದ ಯುಗ. ವಿಪ್ಲವ ಬರಹಗಾರರ ಸಂಘ ಆವಿರ್ಭವಿಸಬಹುದೆಂಬ ನಿರೀಕ್ಷೆ ಇದೆಯೇ ವಿನಃ ಇನ್ನೂ ಪ್ರಾರಂಭವಾಗಿಲ್ಲ. "ವಿರಸಂ" ನಿರ್ಮಾಣವಾಗಲು ಮೊದಲಿಂದ ಕುಟುಂಬರಾವು, ರಾ.ವಿ.ಶಾಸ್ತ್ರಿ ಕಥೆಗಳನ್ನು ಬರೆಯುತ್ತಿದ್ದಾರೆ. ಪಾಣಿಗ್ರಾಹಿ ಕತ್ತಿ ಬೀಸುತ್ತಿದ್ದಾನೆ. ಅರಣ್ಯದೊಳಗೆ ಅಜ್ಞಾತಯೋಧರು ಅಗ್ನಿಗಾನ ಮಾಡುತ್ತಿದ್ದಾರೆ. ಆಸ್ಥಾನಕವಿಗಳು, ವಿಶ್ವವಿದ್ಯಾಲಯದ ಗುಳ್ಳೆನರಿಗಳಿಗೆ ಈ ವಿಪ್ಲವ ಕವಿತೆಗಳು ತಾಕಲಾರವು. ಅಭ್ಯುದಯ ಕವಿತ್ವವೇ ಎಲ್ಲಾ ಸಮಸ್ಯೆಗಳನ್ನ ಪರಿಷ್ಕರಿಸುವುದೆಂದು ಗುಳ್ಳೆನರಿಗಳು ಪತ್ರಿಕೆಗಳಲ್ಲಿ ಬರೆಯಬಹುದು. ವಿಪ್ಲವ ಸಾಹಿತ್ಯವನ್ನ ಪ್ಯಾಸಿಸ್ಟ್ ಕವಿಗಳ ಮಾತುಕೇಳಿ ಸರ್ಕಾರ ನಿಷೇಧಿಸಬಹುದು. ಈ ಕವಿಗಳನ್ನ ನಿರ್ಭಂಧಿಸಬಹುದು. ಆದರೂ ನಿಲ್ಲದಂತೆ ಪ್ರವಹಿಸುತ್ತದೆ "ತೂರ್ಪುಗಾಲಿ"

ಎನ್ನುತ್ತಾರೆ. ಕವಿತ್ವವೆಂಬುದು ಕೇವಲ ಭಾವಗಳಲ್ಲ ಎನ್ನುತ್ತ ನಗ್ನಮುನಿ is one of our finest masters of the prose poem."[6] ಎನ್ನುತ್ತಾರೆ.

ಬಂದೂಕು ಸಾಹಿತ್ಯಕ್ಕೆ ಮುನ್ನುಡಿಯಾಗಿರುವ "ಮಜಂದಾರಿ" ಲೇಖನ ಕೂಡಾ ಇದೇ ರೀತಿಯದು. "ಈ ದಿನದ ಸಾಹಿತ್ಯದ ಚೈತನ್ಯವೇ ಕೆಂಪು ಬಣ್ಣ. ಇದು ಯುವಕರ ಹೃದಯದೊಳಗೆ ಉರಿಯುತ್ತಿರುವ ಅಗ್ನಿಜ್ವಾಲೆ. ಎನ್ನುವ ಶ್ರೀಶ್ರೀ ಅಧಿಕಾರವನ್ನ ನಡೆಸುವುದು ಆಯುಧವಾದರೆ ಆ ಅಧಿಕಾರವನ್ನ ನಾಶಮಾಡುವುದು ಕೂಡಾ ಆಯುಧವೇ ಅನ್ನುತ್ತಾರೆ.

ಆಳುವ ವರ್ಗ ಸವಿಯಾಗಿ ಮಾತಾಡುತ್ತದೆ. ಚುನಾವಣೆ ಸಮಯದಲ್ಲಿ ವಾಗ್ದಾನಗಳ ಮಳೆ ಸುರಿಯುತ್ತದೆ. ಅಂಗೈಯೊಳಗೇ ಸ್ವರ್ಗವನ್ನ ತೋರಿಸಲಾಗುತ್ತದೆ. ಪ್ರಜೆಗಳ ಅಜ್ಞಾನವೇ ಅವರ ಆಸ್ತಿ, ಹಾಗಾಗಿ ಅದನ್ನ ಅವರು ಪರಿಪರಿಯಾಗಿ ಬಳಸಿಕೊಳ್ಳುತ್ತಾರೆ. ಆ ಅಜ್ಞಾನವನ್ನ ಯಥಾಸ್ಥಿತಿಯಲ್ಲಿಡಲು ಪ್ರಯತ್ನಿಸುತ್ತಾರೆ. ನಮ್ಮ ಪಾಠಶಾಲೆಗಳೊಳಗೆ ಸಿಗುವ ಓದಾಗಲೀ, ನ್ಯಾಯಾಲಯದೊಳಗೆ ಸಿಗುವ ನ್ಯಾಯಕ್ಕಾಗಲೀ ಈ ಅಜ್ಞಾನವೇ ಮೂಲಾಧಾರ" ಎಂದು ವಾಸ್ತವ ಬಗೆದು ತೋರುತ್ತಾರೆ.

"ಇದು ಅಂಧಕಾರ ಇದರ ಮೇಲೆ ಚೈತನ್ಯ ಸಾಹಿತ್ಯ ತನ್ನ ಕಾಂತಿರೇಖೆಗಳನ್ನ ಪ್ರವಹಿಸುತ್ತದೆ. ಆಗ ನಿಷೇಧ ಎಂದು ಅರಚುತ್ತದೆ ಪ್ರಭುತ್ವ, ನಿರ್ಭಂಧ ಅಂತ ಕಿರುಚುತ್ತದೆ. ಆಗಲೇ ಬಂದೂಕುಗಳ ಪ್ರಯೋಗವಾಗುತ್ತದೆ. ಕೆಂಪುಬಾವುಟ ಬೀಸುತ್ತದೆ. ಹಳೆಯ ಅಧಿಕಾರ ಪತನವಾಗುವುದೇ ಆಗ. ಹೊಸ ಸೂರ್ಯ ಉದಯವಾಗುವುದೇ ಆಗ. ಎಂದು ಅಪ್ಪಟ ಸಾಯುಧ ಹೋರಾಟವನ್ನ ಬೆಂಬಲಿಸುತ್ತಾರೆ. ಶ್ರೀಶ್ರೀಯವರ ನೋಟ ಹೇಗಿತ್ತು ಎಂಬುದಕ್ಕೆ ಬುರ್ರಾ ವೆಂಕಟನಾಗೇಶ್ವರರಾವ್ ಅನ್ನುವ ಯುವಕವಿಗೆ 'ಮೇಧಾವಿ ಕವಿ' ಎಂಬ ಸಂಕಲನ ಓದಿ ಬರೆದ ಕಾರ್ಡೊಂದರಲ್ಲಿ ಅವರು ತೆಲುಗು ಕವಿತಾ ಜಗತ್ತು ಹೇಗಿದೆ ಮತ್ತು ಕವಿಯ ಮುಖ್ಯನಿಲುವು ಏನಾಗಿರಬೇಕು ಎಂಬುದನ್ನ ವಿವರಿಸಿದ್ದಾರೆ. ಈ ದಿನದ ತೆಲುಗು ಸಾಹಿತ್ಯದೊಳಗೆ ನಾಲ್ಕು ಧೋರಣೆಗಳು ಸ್ಪಷ್ಟವಾಗಿ ಕಾಣಿಸುತ್ತವೆ ಇವೆಂದರೆ.

೧) ಪುರಾಣ ಕವಿತೆ

೨) ಭಾವ ಕವಿತೆ

೩) ಅಭ್ಯುದಯ ಕವಿತೆ

೪) ವಿಪ್ಲವ ಕವಿತೆ.

ಹೀಗೆ ವಿವರಿಸುತ್ತ "ಪುರಾಣಭೋರಣೆ ಬಿಟ್ಟು ಉಳಿದವೆಲ್ಲಾ ನಿಮ್ಮ ಕಾವ್ಯದೊಳಗೆ ಕಂಡುಬರುತ್ತವೆ. ಭಾವಕವಿತ್ವದ ಪ್ರಭಾವದೊಳಗಿಂದಲೂ ನೀವು ಹೊರಬರಬೇಕೆಂಬುದೇ ನನ್ನ ಸಲಹೆ" ಎಂದಿದ್ದಾರೆ. ಇದು ಶ್ರೀಶ್ರೀಯವರ ಮುಖ್ಯ ನೋಟವೆನ್ನಬಹುದು. ಒಟ್ಟು ಅರವತ್ತೆರಡು ಲೇಖನಗಳಿರುವ ಈ ಭಾಗದ ಕೆಲವು ವಿವರಗಳನ್ನ ಮಾತ್ರ ಗಮನಿಸಲಾಗಿದೆ. ಹಾಗೇ "ರಿವಿವ್ಯ" ಎನ್ನುವ ಭಾಗ ಪುಸ್ತಕ, ನಾಟಕ, ಸಿನಿಮಾ ಕುರಿತ ವಿಮರ್ಶನ ಭಾಗವಾಗಿವೆ. ೩೦ ಪುಸ್ತಕಗಳು, ೬ ನಾಟಕಗಳು, ೫ ಸಿನಿಮಾ ಲೇಖನಗಳು ಇಲ್ಲಿವೆ. ಇಲ್ಲಿ ಆಯ್ದ ಕೆಲವು ಲೇಖನಗಳ ಮೂಲಕ ಶ್ರೀಶ್ರೀ ಅವರ ಪರಿಶೀಲನಾ ವಿಧಾನವನ್ನ ಸ್ಥೂಲವಾಗಿ ಗಮನಿಸಬಹುದು.

"ಝುಂಝು" ಕವಿತಾ ಸಂಕಲನಕ್ಕೆ ಬರೆದ ವಿಮರ್ಶೆ ಝುಂಝಾ ಕವಿತಾ ಸಂಕಲನ ಸಂಪಾದಕ ಕೆ.ವಿ. ರಮಣಾರೆಡ್ಡಿ ೧೯೭೦ರೊಳಗೆ ಖಮ್ಮಂನೊಳಗೆ ಜರುಗಿದ ವಿರಸಂ ಮೊದಲ ಮಹಾಸಭದೊಳಗೆ ಈ ವಿಮರ್ಶೆ ಪ್ರಕಟವಾಗಿದೆ. ಕೆಲವು ತಿಂಗಳೊಳಗೇ ಮರುಮುದ್ರಣಕೂಡಾ ಆಗಿದೆ. ರಷ್ಯಾದೊಳಗೆ ಒಂದು ಕವಿತಾ ಸಂಪುಟ ಪ್ರಕಟವಾದರೆ ಅದರ ಪ್ರತಿಗಳನ್ನೆಲ್ಲಾ ಕೆಲವು ಸಮಯದೊಳಗೇ ಕೊಂಡು ಬಿಡುತ್ತಾರೆಂಬುದು ಎಲ್ಲರಿಗೂ ಗೊತ್ತು. ಝುಂಝಾ ಮೊದಲ ಮುದ್ರಣದ ಪ್ರತಿಗಳು ಕೆಲವು ದಿನದೊಳಗೇನೇ ಮುಗಿದವೆನ್ನುವುದು ಗರ್ವದ ವಿಷಯ.

ವಿರಸಂ ಮೇಲೆ ಒಂದು ದೊಡ್ಡ ಬಾಧ್ಯತೆ ಇದೆ. ಇನ್ನು ನೂರಕ್ಕೆ ೭೦ ಭಾಗ ನಿರಕ್ಷರಿಗಳಾಗಿ ಇರುವವರಿಗೆ ಎಂತಹ ಸಾಹಿತ್ಯ ನೀಡಬೇಕೆಂದು ವಿರಸಂ ಪರೀಕ್ಷಿಸಬೇಕಾದ ಸಮಸ್ಯೆ. ನನ್ನ ಮಟ್ಟಿಗೆ ನಾನು ಎರಡು ಸೂತ್ರಗಳನ್ನ ಪ್ರತಿಪಾದಿಸುತ್ತಿದ್ದೇನೆ. ಒಂದು ಭಗವಂತ ಎನ್ನುವ ಆದರ್ಶದ ಮೇಲೆ ಬಿಡದ ಯುದ್ಧ. ಎರಡು ಸ್ವಂತ ಆಸ್ತಿ ಅನ್ನೋ ಮಮಕಾರವನ್ನ ಎಲ್ಲರ ಹೃದಯದೊಳಗಿಂದ ತೊಲಗಿಸುವುದು. ಈ ಎರಡೂ ನಡೆದಾಗಲೇ ಈ ಪ್ರಪಂಚ ಸರಿಯಾಗುತ್ತದೆ. ಶ್ರೀಶ್ರೀ ಪ್ರಕಾರ ಮಾರ್ಕ್ಸಿಸ್ಟು ಲೆನಿಸ್ಟು ಮಾರ್ಗವೇ ಮಾನವಜಾತಿಗೆ ದೃವತಾರೆ. ಈ ಮಾರ್ಗದೊಳಗೆ ಮಾನವನನ್ನ ಮತ್ತಷ್ಟು ಮುಂದಕ್ಕೆ ತರುತ್ತೇನೆ ಅನ್ನುತ್ತಾನೆ ಮಾವೊ" ಎಂದು ಹೇಳುತ್ತಾರೆ.

"ಕವಿತಾ ವಿಪ್ಲವಾಲಪೈ ಓ ರಿಪೋರ್ಟು" ಅನ್ನುವ ಲೇಖನವು ಅಮುದ್ರಿತವಾದ ಶ್ರೀಶ್ರೀ ಲೇಖನ ಇದು ಶ್ರೀ ವಾಲ್ಬೇರು ನಾರಾಯಣರಾವು ಎನ್ನುವವರು ಬರೆದ phd ಮಹಾಪ್ರಬಂಧ ಕುರಿತ ವಿಮರ್ಶೆ. ಈ ಮಹಾಪ್ರಬಂಧವನ್ನ ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸಿದ ಶ್ರೀಶ್ರೀಯವರು ವಿಪ್ಲವ ಅಂದರೇನು? ವಿಪ್ಲವ ಬೆಳದದ್ದು, ವಿಪ್ಲವ ಯುಗವಾಗಿದ್ದನ್ನ ಕುರಿತು ಇಲ್ಲಿ ಹೇಳಿದ್ದಾರೆ. ಈ ಮಹಾಪ್ರಬಂಧದ ಮಿತಿಯನ್ನ ಅತ್ಯಂತ ಪ್ರಬುದ್ಧವಾಗಿ ವಿಶ್ಲೇಷಿಸಿದ್ದಾರೆ. ಹೇಗೆ ಪ್ರತಿಕ್ರಿಯೆಗಳೇ ಪ್ರತಿಭಟನೆಗಳಲ್ಲ ಎನ್ನುತ್ತ ಪುರಾಣ ವಿಪ್ಲವವನ್ನು ಭಾವಕವಿತೆಯ

[illegible]

ವಿಪ್ಲವವನ್ನು ಅವರು ವಿಪ್ಲವವೆಂದು ಗುರ್ತಿಸುವುದಿಲ್ಲ. ಗುರುಜಾಡರನ್ನೇ ವಿಪ್ಲವದ ಆದ್ಯ ಕವಿ ಎಂದು ಕರೆಯಬೇಕೆನ್ನುವ ಶ್ರೀಶ್ರೀಯವರು ಈ ಲೇಖಕ ಗಿಡಗು ಅವರನ್ನ ಏಕೆ ಸೇರಿಸಿಕೊಳ್ಳಲಿಲ್ಲವೋ ತಿಳಿಯದು? ಎಂದಿದ್ದಾರೆ.

ಮುಂದೆ ಭಾವಕವಿತಾ ವಿಪ್ಲವದಲ್ಲಿ ರಾಯಪ್ರೋಲು, ಅಬ್ಬೂರಿಯವರ ರಚನೆಗಳನ್ನ ಒಪ್ಪುತ್ತಲೇ ಭಾವಕವಿಗಳು ಹೇಗೆ ಸಮಾಜದಿಂದ ಪಲಾಯನ ವಾದದೆಡೆಗೆ ಬರುತ್ತಾರೆ ಎಂದು ಸೂಕ್ಷ್ಮವಾಗಿ ವಿವರಿಸಿದ್ದಾರೆ.

"ದಿಗಿರಾನು ದಿಗಿರಾನು
ದಿವಿನುಂಚಿ ಭುವಿಕಿ"

(ಇಳಿದು ಬಾರೆನು ಇಳಿದು ಬಾರೆನು
ಸ್ವರ್ಗದಿಂದ ಭೂಮಿಗೆ)

ಆದ್ದರಿಂದ ಒಟ್ಟಾರೆ ಇವರ ಪ್ರತಿಭಟನೆಗಳು ಉದಾರವಾದಿ ದೃಷ್ಟಿಕೋನಗಳಿಂದಲೇ ಕೂಡಿವೆ ಎನ್ನುತ್ತಾರೆ.

ಮುಂದಿನ ಅಧ್ಯಾಯ "ಅಭ್ಯುದಯ ವಿಪ್ಲವ" ಇದು ನಿಜವಾಗಲೂ ತೆಲುಗು ಸಾಹಿತ್ಯದಲ್ಲಿ ನಡೆದ ಶಾಸ್ತ್ರೀಯವಾದ ವಿಪ್ಲವ. ಭಾವಕವಿತ್ವದ ದಿನಗಳೊಳಗೆ ಆನಂದವೇ ಕಾವ್ಯದ ಪರಮಾರ್ಥ ಅಂದುಕೊಳ್ಳುತ್ತಿದ್ದ ನೋಟ ಹಿಂದೆ ಬಿದ್ದು ಸಾಮಾಜಿಕ ಪ್ರಯೋಜನವೇ ಕಾವ್ಯದ ಪರಮಾರ್ಥ" ಎಂಬ ಸೂಕ್ತಿ ಇಲ್ಲಿ ಚಾಲ್ತಿಗೆ ಬಂತು.

ಮುಂದಿನ ದಿಗಂಬರ ವಿಪ್ಲವ ಇಲ್ಲಿ ಕವಿ ಆರು ಜನರ ಒಟ್ಟುಕಾವ್ಯ ನೋಡುವುದಕ್ಕಿಂತ ವಿಪ್ಲವದ ಆಧಾರ ಸ್ಥಂಭಗಳಾದ ಮಾರ್ಕಿಸ್ಟ್ ಬರಹಗಾರರಾದ ೩ ಜನರೇ ವಿಪ್ಲವಕ್ಕೆ ಆಧಾರಸ್ಥಂಭಗಳೆನ್ನುತ್ತಾರೆ. ಅವರೆಂದರೆ ಚರಬಂಡರಾಜು, ಜ್ವಾಲಾಮುಖಿ ಮತ್ತು ನಿಖಿಲೇಶ್ವರ. ಜೊತೆಗೆ ನಿಜವಾದ ವಿಪ್ಲವ ಸಾಹಿತ್ಯವೆಂದರೆ ಸರ್ಕಾರ ನಿಷೇಧಿಸಿದ ಮಾರ್ಚ್ ಕವಿತಾ ಸಂಕಲನ, ಝುಂಝು ಕವಿತಾ ಸಂಕಲನ ವಿರಸಂ ಮುದ್ರಿಸಿದ ಮೊದಲ ಕಥಾಸಂಕಲನ "ಇಪ್ಪುಡು ವೀಸ್ತುನ್ನಗಾಲಿ" ಎಂದು ಹೇಳುತ್ತಾರೆ.

"ವ್ಯವಸ್ಥಲೋನಿ ದುರ್ಮಾರ್ಗಲಕು ಸಾಕ್ಷಿಭೂತಂ ಆಸುಪತ್ರಿ ಗೀತಂ" ಅನ್ನುವ ಲೇಖನ ಕೆ. ಶಿವಾರೆಡ್ಡಿಯವರ ಆಸ್ಪತ್ರಿಗೀತಕ್ಕೆ ಬರೆದ ವಿಮರ್ಶೆ. ಕೆ. ಶಿವಾರೆಡ್ಡಿ ಕವಿ, ವಿಪ್ಲವ ಹೋರಾಟದ ಪ್ರೋತ್ಸಾಹಕ, ರಕ್ತಂ, ಸೂರ್ಯಡು, ಚರ್ಯ, ಭಾರಮಿತಿ, ಮೋಹನಾ ಓ ಮೋಹನಾ ಸಂಕಲನಗಳ ಕರ್ತೃ. ಮೊದಲ ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡಮಿ ಬಹುಮಾನ ಪಡೆದ ಪ್ರತಿಭಾವಂತ. ಇವರನ್ನ ಕುರಿತು

"ಸುಪ್ರಸಿದ್ಧ ಕವಿ" ಕೆ.ಶಿವಾರೆಡ್ಡಿ ಗೀತಮೋ ಒಕ ಸಮುದ್ರ" ಎನ್ನುತ್ತ ಇದು ಆಸ್ಪತ್ರೆಗೀತ ಇದರೊಳಗಿನ ಆಸ್ಪತ್ರಿ ಮಾಮೂಲು ಆಸ್ಪತ್ರೆ ಅಲ್ಲ. ಪ್ರಸ್ತುತ ವ್ಯವಸ್ಥೆಗೆ ಈ ಸಮಾಜಕ್ಕೆ ಪ್ರತೀಕವಾಗಿ ನಾವು ನೋಡಬೇಕಾಗಿದೆ ಎನ್ನುತ್ತಾರೆ.

ಪೂರ್ಣ ಆಸ್ಪತ್ರೆಗೇ ರೋಗಬಂದಿದೆ. ಇಲ್ಲಿ ಆರೋಗ್ಯವಿಲ್ಲ, ಆನಂದವಿಲ್ಲ, ಯಾವಾಗಲಾದರೂ ಆನಂದ ಸಿಗುವುದೆಂಬ ಆಶೆ ಕೂಡಾ ಇಲ್ಲ. ಮೇಲೆ ಮಾತ್ರ ಬೆಳ್ಳಗೆ ಕಾಣಿಸುತ್ತಿದೆ.

"ತೆಲ್ಲದನಂ ಶಾಂತಿಕಿಗುರ್ತಂಟಾರು
ತೆಲ್ಲದನಂ ಪವಿತ್ರತಕು ಪ್ರತೀಕಂಟಾರು
ಅಂಟೇ ಕವಿ ಮಾತ್ರಂ ಅಂಗೀಕರಿಂಚಡು.
ತೆಲ್ಲದನಂ ಓಡಿಪೋಯಿ ಚೇತುಲೆತ್ತಟಾನಿಕಿ
ತೆಲ್ಲಗಾ ಪೆರಗುತುನ್ನದೋಪಿಡಿನಿ ದಾಯಡಾನಿಕೆ
ಪನಿಕಿ ವಸ್ತುಂದನಿ ತೆಗೇಸಿ ಚಬುತಾಡು ಕವಿ."

"ಬಿಳಿಬಣ್ಣ ಶಾಂತಿಗೆ ಗುರ್ತೆನ್ನುತ್ತಾರೆ
ಶ್ವೇತತೆ ಪವಿತ್ರತೆಗೆ ಪ್ರತೀಕವೆನ್ನುತ್ತಾರೆ
ಅಂದರೆ ಕವಿ ಮಾತ್ರ ಒಪ್ಪಿಕೊಳ್ಳಲಾರ
ಬಿಳಿತನ ಸೋತುಹೋದವ ಕೈಯೆತ್ತಿ ನಿಲ್ಲಲಿಕ್ಕೆ
ಬೆಳ್ಳಗೆ ಬೆಳೆಯುತ್ತಿರುವ ದರೋಡೆಯನ್ನ ಸ್ವೀಕರಿಸಲಿಕ್ಕೆ
ಕೆಲಸಕ್ಕೆ ಬರುತ್ತದೆಂದು ಜೋರಾಗಿ ಹೇಳುತ್ತಾನೆ ಕವಿ."

ಶ್ರೀ ಶ್ರೀ ಉಪನ್ಯಾಸಾಲು : ಒಟ್ಟು ಹನ್ನೊಂದು ವಿಭಾಗಗಳಿರುವ ಇದರಲ್ಲಿ ಸಾಹಿತ್ಯೋದ್ಯಮ, ಆಂದ್ರೋದ್ಯಮ, ಆಂಧ್ರದ ಮದ್ಯಂತರ ಚುನಾವಣೆ, ರಾಜಕೀಯ ಉದ್ಯಮ, ಪೌರಹಕ್ಕು, ಪ್ರಪಂಚ ತೆಲುಗು ಮಹಾಸಭೆಗಳು, ಮನೆ ಮತ್ತು ಹೊರಗೆ ಎಂಬ ವಿಭಾಗಗಳ ಜೊತೆಗೆ ಇಂಗ್ಲಿಷ್ ಲೇಖನಗಳೂ ಸೇರಿಕೊಂಡಿವೆ. ಈ ಪುಸ್ತಕ ಕುರಿತಂತೆ ಸಂಪಾದಕ ಚಲಸಾನಿ ಪ್ರಸಾದ್ ಅವರು "ಶ್ರೀ ಶ್ರೀ ಉಪನ್ಯಾಸಗಳ ಸಂಪುಟವನ್ನೆಲ್ಲಾ ಕೆಲವರು ಚಪ್ಪರಿಸಬಹುದು. ಹೌದು ಮತ್ತೆ ಶ್ರೀಶ್ರೀ ಮೊದಮೊದಲು ಒಬ್ಬ ಒಳ್ಳೇ ಉಪನ್ಯಾಸಕನಾಗಿರಲಿಲ್ಲ. ಅವರ ಮಾತೇ ಸ್ಪಷ್ಟವಾಗಿ ಕೇಳದು. ನಾಲ್ಕು ಜನರೊಂದಿಗೆ ಸೇರಿ ಮಾತಿಗಿಳಿದರೆ ಏನಾದರೂ ಎಂಥಾದ್ದಾದರೂ ಹೇಳಬಲ್ಲರು. ವೇದಿಕೆ ಏರಿದರೆ ಮಾತ್ರ ದ್ವನಿ ಬೆಳಗಲಾರದು, ಕಾಲುಗಳು ನಡುಗುವುದಿಲ್ಲ ಆದರೆ ಮತ್ತೆ ಮತ್ತೆ ನೀರು ಕುಡಿಯುತ್ತಾರೆ. ಕೇಳುವವರನ್ನ ಕಟ್ಟಿಹಾಕುವಂತೆ ಸ್ಪಷ್ಟವಾಗಿ, ಶ್ರವ್ಯವಾಗಿ, ಸ್ವಚ್ಛವಾಗಿ, ಸಮಗ್ರವಾಗಿ ಮಾತಾಡಲಾರರು ಶ್ರೀಶ್ರೀ" ಎಂಬ ಹೇಳಿಕೆಗಳನ್ನ ಆನಂತರ ಹಂತಹಂತವಾಗಿ ದಾಟಿ ಬಂದವರು ಶ್ರೀಶ್ರೀ.

ವಿರಸಂ ಸ್ಥಾಪನೆಯಾದ ಮೇಲೆ ಶ್ರೀಶ್ರೀ ಅದುವರೆಗಿಂತ ಹೆಚ್ಚಾಗಿ ತೆಲುಗು ಪ್ರದೇಶಗಳನ್ನೆಲ್ಲಾ ತಿರುಗತೊಡಗಿದರು. ಬಹಿರಂಗ ಸಭೆಯೊಳಗೆ ಬಿಡದಂತೆ ಪಾಲ್ಗೊಂಡರು. ನಿರರ್ಗಳವಾಗಿ ಮಾತಾಡಹತ್ತಿದ್ದರು. ಉಪನ್ಯಾಸಗಳಿಗೆ, ಅನಿವಾರ್ಯ ಕಾರಣದಿಂದಾದ ಅಭ್ಯಾಸ ಅವರಲ್ಲಿ ಮಾತಿನ ನಿರಂತರತೆ ತಂತು ಈ ಶತಾಬ್ದಿ ತೆಲುಗು ಸಾಹಿತ್ಯ ಬದಲಾವಣೆಯ ಪ್ರತಿ ಹಂತದಲ್ಲೂ ಶ್ರೀ ಶ್ರೀ ಇದ್ದಾರೆ. ಅಂತಲೇ "ಈ ಶತಾಬ್ದಿ ನನ್ನದು" ಎಂದಿದ್ದಾರೆ ಶ್ರೀಶ್ರೀ. ಅವರು ಸಾಹಿತ್ಯ ಉದ್ಯಮಕ್ಕೆ ಮಾತ್ರ ಪರಿಚಯವಾಗಲಿಲ್ಲ. ಆಂಧ್ರದ ಜನಹೋರಾಟಗಳಲ್ಲಿ, ಪೌರಹಕ್ಕುಗಳ ಸಂಘಟನೆಯಲ್ಲಿ, ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ತಿರುಗಿದ್ದಾರೆ. ಈ ಎಲ್ಲಾ ತಿರುಗಾಟಗಳ ಅನುಭವ ಈ ಉಪನ್ಯಾಸಗಳೊಳಗೆ ನಮಗೆ ಸಿಗುತ್ತದೆ. ಒಟ್ಟಾಗಿ ನೋಡಿದಾಗ ಇದೊಂದು ಉಪನ್ಯಾಸಗಳ ಸಂಪುಟ. ಆದರೆ ಇದರೊಳಗೆ ಇರುವವೆಲ್ಲಾ ಉಪನ್ಯಾಸಗಳಲ್ಲ. ಬರೆದುಕೊಂಡು ಓದಿದ ಪ್ರಸಂಗಗಳು, ಬರೆದು ಕಳಿಸಿದ ಸಂದೇಶಗಳೂ ಇದರೊಳಗಿವೆ. ಶ್ರೀಶ್ರೀ ಅಂತರಂಗದ ನುಡಿಗಳು, ಪತ್ರಿಕಾ ಪ್ರಕಟಣೆಗಳೂ ಇದರೊಳಗಿವೆ. ತಾನು ನಂಬಿದ ತತ್ವಸಿದ್ಧಾಂತಗಳಿಗಾಗಿ ಹೀಗೆ ಊರೂರು ತಿರುಗಿ ಬಹಿರಂಗ ಸಭೆಗಳಲ್ಲಿ ಕಾಣಿಸಿಕೊಂಡ ಮಹಾಕವಿಗಳು ತುಂಬಾ ವಿರಳವೆನ್ನುತ್ತ ಹೀಗೆ ತಿರುಗಿದ ಮಹಾಕವಿಗಳು ವಯಕೊವಸ್ಕಿ, ನೆರೂಡಾನಂತಹವರು ಮಾತ್ರ ಎನ್ನುತ್ತಾರೆ."೭

ಈ ಪುಸ್ತಕದ ಕೆಲವು ಉಪನ್ಯಾಸಗಳನ್ನ ನೋಡುತ್ತಲೇ ಒಟ್ಟು ಶ್ರೀ ಶ್ರೀ ದೃಷ್ಟಿಕೋನವನ್ನು ಗ್ರಹಿಸಬಹುದು. "ಸಾಹಿತ್ಯಂ ಎಂದುಕು? ಎವರಿಕಿ?" ಅನ್ನುವ ಲೇಖನ ಈಗಾಗಲೇ ಗುರ್ತಿಸಿರುವಂತೆ ಜನಸಾಮಾನ್ಯರ ಒಲವನ್ನ ಕುರಿತದ್ದು ಸಂಪ್ರದಾಯ ಮತ್ತು ಬಂಡವಾಳಶಾಹಿಯ ಜೀವ ವಿರೋಧಿ ನಿಲುವನ್ನ, ಪ್ರತಿಗಾಮಿ ಧೋರಣೆಯನ್ನ ಖಂಡಿಸುತ್ತ ಅದಕ್ಕೆ ಸಾಮ್ಯವಾದವೇ ಮದ್ದು ಎಂದು ನಂಬಿಕೆ ಇಟ್ಟು ಮಾತನಾಡಿದ ಲೇಖನ. ಅದು "ಸಾಮಾಜಿಕ ಜೀವನ ಇರದಿದ್ದರೆ ಸಾಹಿತ್ಯ ಎಂಬುದೇ ಇರಲಾರದು. ಈ ಸಂಗತಿಯನ್ನ ನೆನಪಿಟ್ಟುಕೊಂಡರೆ ಸಾಹಿತ್ಯ ಏಕೆ? ಯಾರಿಗೆ? ಎಂಬ ಎರಡು ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ. ಏಕೆಂದರೆ ಸಾಮಾಜಿಕಾಭಿವೃದ್ಧಿಯು ಯಾರಿಗೆಂದರೆ ಪ್ರಜೆಗಳಿಗಂತಲೇ.

ಆದರೆ ಈ ಸಮಸ್ಯೆಗಳು ಇಷ್ಟು ಸಲುಭವಾಗಿ ಸೂಕ್ಷ್ಮವಾಗಿ ಪರಿಷ್ಕಾರವಾಗಿ ಹೋಗುವಂತವು ಅಲ್ಲ, ಅಭೀವೃದ್ಧಿ ಅಂದರೆ ಏನು? ಪ್ರಜೆಗಳೆಂದರೆ ಯಾರು? ಅನ್ನುವ ಪ್ರಶ್ನೆಗಳು ಮತ್ತೆ ಹುಟ್ಟುತ್ತವೆ. ಅವುಗಳಿಗೆ ಉತ್ತರಿಸುವ ಪ್ರಯತ್ನದೊಳಗೆ ಮತ್ತೆ ಕೆಲವು ಹೊಸ ಪ್ರಶ್ನೆಗಳು ಎದುರಾಗುತ್ತವೆ.

ಈ ಬರೆಯುತ್ತಿರುವ ಬರಹಗಳೆಲ್ಲಾ ಅಭಿವೃದ್ಧಿಗೆ ಮಾರ್ಗವಾಗಿವೆಯಾ? ಈಗ ಬರೆಯುತ್ತಿರುವವೆಲ್ಲಾ ಪ್ರಜೆಗಳ ಸೌಖ್ಯಕ್ಕಾಗೇ ಬರುತ್ತವೆಯಾ? ಅಸಲು ಸಾಹಿತ್ಯದಿಂದ

ಪ್ರಜೆಗಳೆಷ್ಟು ಸುಖವಾಗಿದ್ದಾರೆ? ನೂರಕ್ಕೇ ೯೦ ಭಾಗ ನಿರಕ್ಷರಿಗಳಾದ, ದಾರಿದ್ರ್ಯರಾದ ಪ್ರಜೆಗಳಿಗೆ ನಿಮ್ಮ ಮಾತುಗಳು, ಪದ್ಯಗಳು, ಕಥೆಗಳೂ ಹೇಳಿಕೆಗಳೂ ಅವರ ಕಿವಿ ಮುಟ್ಟುತ್ತವೆಂದು ನೀವು ನಂಬುತ್ತೀರಾ? ಅಂತಹ ಅವಕಾಶವಿಲ್ಲದ ಮೇಲೆ ಇನ್ನು ನಿಮ್ಮ ಸಾಹಿತ್ಯ ಏಕೆ?"[೭] ಎಂದು ಪ್ರಶ್ನಿಸುವ ಶ್ರೀಶ್ರೀ. "ಕೆಲವು ಪ್ರತಿಬಂಧಕಗಳು ಅಡ್ಡವಾಗಿರುವುದರಿಂದ ಪ್ರಜೆಗಳು ಸಾಹಿತ್ಯ ಸಭೆಗಳಿಗೆ ಈ ದಿನ ದೂರವಾಗುತ್ತಿದ್ದಾರೆ. ಆ ಪ್ರತಿಬಂಧಕಗಳನ್ನ ತೊಲಗಿಸಿದರೆ ಸಾಹಿತ್ಯಕ್ಕೆ ಪ್ರಜೆಗಳ ಆದರ ದೊರಕುತ್ತದೆ. ಎಲ್ಲಿ ಸಾಹಿತ್ಯ ಸಭೆಗಳು ನಡೆದರೂ ತಂಡೋಪತಂಡವಾಗಿ ಜನ ಬರುತ್ತಾರೆ. ಜನ ಹೀಗೆ ಬರುತ್ತಿರುವುದೇ ಅವರೊಳಗಿರುವ ತೀವ್ರ ಆಕಾಂಕ್ಷೆಗೆ ನಿದರ್ಶನ. ಆ ಆಕಾಂಕ್ಷೆ ತೃಪ್ತಿಗೊಳಿಸದೆ ಹೋದರೆ ಆ ಪ್ರಮಾದವು ಬರಹಗಾರರದೇ ಆಗುತ್ತದೆ." ಎನ್ನುವ ಶ್ರೀಶ್ರೀ ಪ್ರಭುಗಳು ಜನರ ಅಜ್ಞಾನವನ್ನೇ ಬಂಡವಾಳ ಮಾಡಿಕೊಂಡು ಅಂಥಹ ವ್ಯವಸ್ಥೆಯನ್ನೇ ಸದಾ ಕಾಪಾಡಿಕೊಳ್ಳಬಯಸುತ್ತಾರೆ. ಶಿಕ್ಷಣ, ರಕ್ಷಣೆ, ನ್ಯಾಯ ಎಂಬ ಮೂಲಕೇಂದ್ರಗಳು ಅವರ ಕೈಕೆಳಗಿರುವುದರಿಂದ ಪ್ರಜೆಗಳ ಅಂಧಕಾರವನ್ನ ಓಡಿಸುವ ಜವಾಬ್ದಾರಿ ಲೇಖಕರಿಗೇ ಇದೆ ಎನ್ನುತ್ತಾರೆ. ಹಣ ಬಲ ಮತ್ತು ಖಂಡ ಬಲಗಳು ಶಾಶ್ವತ ಅಲ್ಲ ಜ್ಞಾನಬಲವೇ ಶಾಶ್ವತ ಆದ್ದರಿಂದ ನಮ್ಮ ಲೇಖಕರು ಜನರನ್ನ ಎಚ್ಚರಿಸಬೇಕಿದೆ ಎನ್ನುತ್ತಾರೆ. ಏಕೆಂದರೆ ಕಾಲ ಬದಲಾಗಿದೆ ಇಂದು ನಾಲ್ಕುಜನರ ಮದ್ಯೆ ಕುಳಿತು ನಾಲ್ಕು ಪದ್ಯ ಓದಲಾರ ಕವಿ. ಬದಲಿಗೆ ನಾಲ್ಕು ಸಾವಿರ ಜನರ ಮುಂದೆ ಮೈಕಿನಲ್ಲಿ ತನ್ನ ಸಂದೇಶ ನೀಡುತ್ತಾನೆ. ಈ ದಿನ ನಮಗೆ ಇಷ್ಟವೋ ಕಷ್ಟವೋ ಯಂತ್ರಯುಗ ನಮಗೆ ದಕ್ಕುತ್ತಿದೆ. ನಮ್ಮೊಳಗೆ ನಾವು ಹೊಡೆದಾಡಿಕೊಂಡು ಯಂತ್ರಗಳಿಗೆ ದಾಸರುಗಳಾಗಿ ಇವುಗಳಿಗೆ ಬಲಿಯಾಗಿ ಹೋಗುವುದೋ, ಇಲ್ಲಾ ನಾವು ಎಲ್ಲಾ ಒಂದೇ ಕುಟುಂಬ ಅಂದುಕೊಂಡು ಒಂದು ನಿರ್ಧಾರಕ್ಕೆ ಬಂದು ಈ ಯಂತ್ರಗಳನ್ನೇ ನಮ್ಮ ದಾಸನನ್ನಾಗಿ ಮಾಡಿಕೊಂಡು ನಮ್ಮ ಜೀವನವನ್ನ ಇನ್ನೂ ವೈಭವವಾಗಿ, ಸೌಖ್ಯವಂತವಾಗಿ, ಅನುಭವಿಸಬಹುದೇ? ಅನ್ನೋ ಪ್ರಶ್ನೆಗೆ ಎರಡು ಉತ್ತರಗಳಿರುತ್ತವೆ ಅಂತ ನಾನೆನ್ನಲಾರೆ" ಎನ್ನುತ್ತಾರೆ ಶ್ರೀಶ್ರೀ ಸಾಹಿತ್ಯ ಯಾರಿಗೆ? ಏಕೆ? ಎಂಬ ಚರ್ಚೆ ಅರಸಂ ಮಹಾಸಭೆಯೊಳಗೆ ಮಾಡಿದ ಅಧ್ಯಕ್ಷ ಭಾಷಣವೆನ್ನುವುದೊಂದು ವಿಶೇಷ.

ಕವಿತೆಯನ್ನ ಕುರಿತಂತೆ "ಕವಿತಾಯಾತ್ರ" ಎನ್ನುವ ಕಿರು ಉಪನ್ಯಾಸ ಇಂತಿದೆ "ಕವಿತೆಯೊಳಗಿನ ಸ್ವರೂಪ ಬೇಧಗಳಿಂದಾಗಿ ಕೆಲವರು ತತ್ವಬೋಧೆಗಳನ್ನು ಕೂಡಾ ಆಪಾದಿಸಿ ಕವಿತೆಯನ್ನ ವಿವಾದಾಸ್ಪದ ವಸ್ತುವನ್ನಾಗಿ ಮಾಡುತ್ತಿದ್ದಾರೆ. ಕವಿತ್ವ ಪದ್ಯರೂಪದೊಳಗೆ ಕಟ್ಟದೆ ನಾನು ಆ ಪದ್ಯ ರೂಪವನ್ನೇ ಬದಲಿಸಿ ಬಿಟ್ಟಿದ್ದೇನೆಂದು ನನ್ನ ಮೇಲೆ ಒಂದು ಅಪವಾದವಿದೆ. ಪದ್ಯದ ಸ್ವರೂಪ ನೆನ್ನೆಯ ತನಕ ಒಂದುರೀತಿಯಿದ್ದ ಪದ್ಯ ಈ ದಿನ ಮತ್ತೊಂದು ರೂಪದೊಳಗೆ ಬೆಳಗುತ್ತಿದೆ ಈ

ಸ್ವರೂಪ ಬೇಧ ಬಾಹ್ಯಬೇಧ ಮಾತ್ರವೇ. ಅಂದಿಗೂ ಇಂದಿಗೂ ಕವಿತೆಯ ಪ್ರಯೋಜನವಾಗಲೀ, ಕವಿತೆಯ ಅಂತರಂಗವಾಗಲೀ ಒಂದೇ.

ತೆಲುಗರು ರಸಿಕರು, ಅವರು ಪದ್ಯ ಓದುವ ಕ್ರಮವನ್ನ ಪ್ರಪಂಚ ಕಲಿತುಕೊಳ್ಳಬೇಕಿದೆ.

ಕವಿತೆಗೆ ಸ್ವರೂಪ, ಭಾವ ಎರಡು ಪ್ರಧಾನ ಅಂಶಗಳು ಕವಿತೆಯನ್ನ ಪ್ಯೂರ್ ಪೊಯಟ್ರಿ ಅಂತ, ಅಪ್ಲಯಡ್ ಪೊಯಟ್ರಿ ಅಂತ ಎರಡು ರೀತಿಯಲ್ಲಿ ವಿಭಜಿಸುತ್ತಾರೆ. ಕವಿತೆ ನಿರ್ಮಾಣವಾಗುವ ಅನುಭೂತಿಯನ್ನ, ಪೂರ್ವರಂಗವನ್ನ ಪ್ಯೂರ್‌ಪೊಯಟ್ರಿ ಅಂದರೆ ಕವಿತೆ ಬರೆದ ನಂತರ ಅವನ್ನ ಪ್ರಜೆಗಳಿಗೆ ನಿವೇದಿಸುವುದೇ "ಅಪ್ಲೈಡ್ ಪೊಯಟ್ರಿ" ಎಂಬ ಶ್ರೀಶ್ರೀ ನಿರೂಪಣೆ ಮೆಚ್ಚುವಂತಿದೆ.

ವಿಶಾಲಾಂಧ್ರ ಸಂಸ್ಕೃತಿ ಸಭೆಯು ರಾಜಮಂಡ್ರಿಯಲ್ಲಿ ಜರುಗಿದಾಗ ಅಲ್ಲಿನ ಎರಡನೇ ದಿನದ ಗೋಷ್ಠಿಯಲ್ಲಿ "ಆಧುನಿಕ ಸಾಹಿತ್ಯಂ" ಎಂಬ ಚರ್ಚೆಯಲ್ಲಿ ಮಾತಾಡಿದ ಮಾತುಗಳೂ ಶ್ರೀಶ್ರೀಯವರ ಸೂಕ್ಷ್ಮ ಮತ್ತು ಆಳವಾದ ಸಾಹಿತ್ಯದ ನೋಟವನ್ನ ಜನಪರ ಕಾಳಜಿಯನ್ನ ತೋರುವಂತಿವೆ. ಅವರಿಗೆ "ಆಧುನಿಕ ಅಂದೊಡನೆ ತಕ್ಷಣ ಕಂಡು ಬರುವವರೆಂದರೆ ಗುರುಜಾಡ, ಕುಂದಕೂರಿ. ಆದರೆ ಕೆಲವರು ಆಧುನಿಕ ಅಂದರೆ ಬದುಕಿರುವ, ಪ್ರಾಚೀನವೆಂದರೆ ಸತ್ತುಹೋಗಿರುವ ಎಂದು ಪ್ರಮಾದಕರವಾಗಿ ಯೋಚಿಸುತ್ತಾರೆ ಎನ್ನುತ್ತಲೇ ಕವಿಗಳ ವಯಸ್ಸು ೬೦ ಆದರೂ ಬಾಲ್ಯದ ತುಂಟಾಟ ಕಂಡುಬರುತ್ತದೆ. ಷಷ್ಠಿಪೂರ್ತಿ ವಯಸ್ಸಾದರೂ ಭಾವಕವಿತೆಯನ್ನೆ ಬೆಂಬಲಿಸುತ್ತಾರೆ ಎಂದು ಕುಟುಕುತ್ತಲೇ ವಿಶ್ವನಾಥ ಮಹಾಪ್ರತಿಭಾವಂತರೇ. ಅವರು ಜನರಬಳಿಗೆ ಹೋಗಲಾಗುತ್ತಿಲ್ಲ. ಪ್ರಾಚೀನಕಾಲದ ಒಳ್ಳೆತನ ನೋಡುವುದೇ ಅವರಿಗೆ ಅಭ್ಯಾಸವಾಗಿಬಿಟ್ಟಿದೆ. ಅವರು ಒಳ್ಳೆಯವರಾದ್ದರಿಂದ ಅವರಿಗೆ ಕೆಟ್ಟವು ಕಾಣಲಾರವು. ಎಂದು ಅತ್ಯಂತ ಸೂಕ್ಷ್ಮವಾಗಿ ಕವಿಯ ಹೊಣೆಗಾರಿಕೆಯನ್ನ ಪ್ರಶ್ನಿಸಿದ್ದಾರೆ. ಅದಕ್ಕೆ ಸಾಕ್ಷಿಯಾಗಿ ಶ್ರೀಶ್ರೀ. ಚೈನಾ ಬರಹಗಾರರು ಸಮಾಜದೊಳಗಿನ ಪ್ರತಿವರ್ಗದೊಳಗೂ ಪ್ರವೇಶಿಸಿ, ಅವರ ಸ್ಥಿತಿಗತಿಗಳನ್ನೂ, ಒಳ್ಳೆಯದು ಕೆಟ್ಟದ್ದನ್ನು ಅಭ್ಯಾಸಮಾಡಿ ಬರೆಯುತ್ತಾರೆಂದು ಹೇಳುತ್ತಾರೆ.

ನಾವು ಕಾದಂಬರಿ ರಚನೆಯೊಳಗೆ ಹಿಂದೆ ಬಿದ್ದಿದ್ದೇವೆ. ಎಲ್ಲ ದೇಶದವರೂ ಪ್ರಜೆಗಳ ಸಮಗ್ರ ಜೀವನವನ್ನ ಸಾವಿರಾರು ಪುಟಗಳಲ್ಲಿ ಕಾದಂಬರಿಗಳಲ್ಲಿ ಹಿಡಿದಿಡುತ್ತಿದ್ದಾರೆ. ನಮ್ಮವರು ಹಠಬಿದ್ದು ಹತ್ತು ಪುಟ ಬರೆಯಲಾರದವರಾಗಿದ್ದಾರೆ. ನಮ್ಮ ಕೃಷಿ ಬೆಳೆಯಬೇಕಿದೆ ಎನ್ನುತ್ತಾರೆ. ಹಾಗೇ ಈ ದಿನ ರಂಗದೊಳಗೆ ಇರುವುದು ಸಹಜೀವನವಾ ಸರ್ವನಾಶವಾ? ಅನ್ನುವುದೇ ಸಮಸ್ಯೆ. ಎನ್ನುತ್ತ ನಮ್ಮೊಳಗೆ ವನ್ಯಮೃಗಗಳ ಪರಸ್ಪರ ಹಿಂಸಾ ಸಿದ್ಧಾಂತ ಕೆಲಸಕ್ಕೆ ಬಾರದು. ಇರುವೆಗಳ ಸಹಕಾರ

ಸಿದ್ಧಾಂತ ನಮ್ಮ ವಿಧಾನವಾಗಬೇಕು. ಅದೇ ಅಭಿವೃದ್ಧಿಯ ವಿಧಾನವೆನ್ನುತ್ತ ಸಾಹಿತ್ಯ ಸಮಾಜ ಮತ್ತು ಅದರ ಅಭಿವೃದ್ಧಿಯನ್ನ ಅರ್ಥಬದ್ಧವಾಗಿ ನೋಡಿದ್ದಾರೆ.

"ಕವಿತ್ವಮು, ಛಂದಸ್ಸು" ಎಂಬುದೊಂದು ಕವಿತಾ ರಚನೆ ಕುರಿತ ಸರಳ ಮತ್ತು ಅಷ್ಟೇ ಪರಿಣಾಮಕಾರಿಯಾದ ಮಾತು. ಇದು ಬಳ್ಳಾರಿಯ ರಾಘವಾಚಾರ್ಯರ ಬಳಿ ಹೇಳಿದ (ಅನಂತಪುರದೊಳಗೆ ನಾಟಕೋತ್ಸವಕ್ಕೆ ಹೋದಾಗ) ಮಾತು, ಯಾರೋ ಹಳೆಯ ಛಂದಸ್ಸನ್ನ ಸಂಪೂರ್ಣ ನಾಶಮಾಡಿದ್ದಾರೆ ಎಂದಾಗ ಅವರಿಗೆ ನೀಡಿದ ಸಮಾಧಾನವಾಗಿದೆ ಈ ಮಾತು "ಕವಿತೆಗೆ ಛಂದಸ್ಸು ಅನ್ನುವುದು ವಾಹನ, ಪೂರ್ವಕಾಲದೊಳಗೆ ರಾಜರಿಗೆ ರಥಗಳು ಇರುತ್ತಿದ್ದವು. ಅವುಗಳ ಚಕ್ರಗಳೇ ಬೇರೆ. ಅವುಗಳಿಗೆ ಕುದುರೆಗಳನ್ನ ಕಟ್ಟಿ ಓಡಿಸುತ್ತಿದ್ದರು. ಆಗಿನ ರೋಡುಗಳು ಅಂತವು. ಆ ನಂತರ ಈ ವಾಹನಗಳು ಬದಲಾಗುತ್ತಾ ಬಂದವು. ರಥಗಳು ಮಾಯವಾಗಿ ಎತ್ತಿನ ಬಂಡಿಗಳು ಬಂದಿವೆ. ಜಟಕಾಬಂಡಿ ಬಂದಿವೆ. ಸೈಕಲ್ಲು, ರಿಕ್ಷಾಗಳು ಬಂದಿವೆ. ಮೋಟಾರುಗಳು ಬಂದಿವೆ. ಮೋಟಾರುಗಳಿಗೆ ರಬ್ಬರು ಚಕ್ರಗಳನ್ನ ಹಾಕಿದ್ದಾರೆ. ಅದಕ್ಕೆ ಸರಿಯಾಗಿ ಟಾರುರೋಡುಗಳನ್ನು ಹಾಕಿಸುತ್ತಿದ್ದಾರೆ. ರಾಜರ ಕಾಲದಂತ ರಥಗಳು ಹೋದವೆಂದು ಬಾಯಿ ಬಡಕೊಳ್ಳುವವರೂ ಇರಬಹುದು. ಆದರೆ ನಾವು ಬಸ್ಸಿನೊಳಗೆ ಕುಳಿತುಕೊಂಡು ಪ್ರಯಾಣ ಮಾಡುತ್ತಿದ್ದೇವೆ. ನನ್ನ ಕವಿತೆಯೂ ಕೂಡಾ ಈ ಬಸ್ಸು ಯುಗದೊಳಗೇ ಇದೆ, ನಾವು ಇನ್ನು ವಿಮಾನದೊಳಗೂ, ರಾಕೇಟಿನೊಳಗೂ ಪ್ರಯಾಣ ಮಾಡಬೇಕಾಗಿದೆ. ವಿಮಾನಗಳ, ರಾಕೆಟ್ಟುಗಳ ಯುಗ ಕವಿತ್ವದೊಳಗೆ ಇನ್ನೂ ಬರಬೇಕಾಗಿದೆ. ನನ್ನ ಕವಿತೆಯು ಬಸ್ಸು ಯುಗದೊಳಗೇನೋ ಇದೆ. ಆದ್ದರಿಂದ ಕಾಲಕ್ಕನುಗುಣವಾಗಿ ಛಂದಸ್ಸು ಕವಿತೆ ಅಲ್ಲ, ಕವಿತೆಗೆ ಛಂದಸ್ಸು ವಾಹನ. ವಾಹನ ಅನೇಕ ರೀತಿಗಳಲ್ಲಿವೆ.

ಆಂಧ್ರರಿಗೆ ಪದ್ಯವೆಂದರೆ ಇಷ್ಟವೆನ್ನೋ ಸಂಗತಿ ನನಗೆ ಗೊತ್ತು. ಬೆಂಗಾಲಿಗಳಿಗೆ ರಸಗುಲ್ಲಾ ಹೇಗೋ, ಹಾರವರಿಗೆ ಇಡ್ಲಿಸಾಂಬಾರು ಹೇಗೋ, ಆಂಧ್ರರಿಗೆ ಪದ್ಯ ಆ ರೀತಿಯದು. ಶ್ರೀ ಬಳ್ಳಾರಿ ರಾಘವ ಪದ್ಯ ಓದಬೇಕೆನ್ನುತ್ತಾರೆ. ಪದ್ಯದೊಳಗೆ ಕವಿತ್ವ ಮುಖ್ಯ ಅನ್ನೋ ಸಂಗತಿ ಮರೆಯಬಾರದು"[೭]

ಹೋಲಿಕೆಯ ಮೂಲಕ ಮಾತಾಡುವಲ್ಲಿ ಶ್ರೀ ಶ್ರೀ ಸಿದ್ಧಹಸ್ತರು. ಹೋಲಿಕೆಯ ಮೂಲಕವೇ ಅವರು ಸಿದ್ಧಾಂತವನ್ನೂ ತೋರಬಲ್ಲರೆಂಬುದಕ್ಕೆ ಸಣ್ಣ ಉದಾಹರಣೆ "ಕೋಡಿಗುಡ್ಡಾ? ಆಮ್ಲೆಟಾ?" ಅನ್ನುವ ಮಾತು. ಇಲ್ಲಿ ಶ್ರೀಶ್ರೀ, ಕೋಳಿಮೊಟ್ಟೆ ಬೇಕಾ? ಆಮ್ಲೆಟು ಬೇಕಾ? ತಿಳಿದುಕೊಳ್ಳಿ. ಆಮ್ಲೆಟು ಬೇಕೆಂದರೆ ಕೋಳಿಮೊಟ್ಟೆಯನ್ನು ಹೊಡೆಯಲೇ ಬೇಕು. ಆಸ್ತಿ ಅನ್ನುವ ಪ್ರಾಥಮಿಕ ಹಕ್ಕು ಇರುವ ತನಕ ಸಾಮ್ಯವಾದ ಬರಲಾರದು." ಎನ್ನುತ್ತಾರೆ.

"ತೆಲುಗುಲೋ ಚಿನ್ನಕಥಾ" ಎಂಬ ಲೇಖನವು ವಿಶಾಖ ಪಟ್ಟಣದೊಳಗೆ ಕಾಳಿಪಟ್ನಂ ರಾಮಾರಾವು ಅವರ ಯಜ್ಞಕಥಾ ಸಂಪುಟವನ್ನ ಬಿಡುಗಡೆ ಮಾಡುತ್ತ ಹೇಳಿದ ಮಾತುಗಳಿವು. "ಸಣ್ಣಕಥೆಗೆ ತಮ್ಮ ಮಿನಿಕಥೆ, ಪ್ರಪಂಚದ ಸಾಹಿತ್ಯದೊಳಗೆ ಮಿನಿಕಥೆಗೆ ಅಸಲು ತೆಲುಗಿನವನೇ ಆದಿಪುರುಷ ಎನ್ನುತ್ತೇನೆ. ರಾಮಾಯಣವನ್ನೆಲ್ಲಾ ! ಕಟ್ಟಿದ, ಕೊಂದ, ತಂದ, (ಕಟ್ಟೆ, ಕೊಟ್ಟೆ, ತೆಚ್ಚೆ) ಎಂಬ ಮೂರು ಅಕ್ಷರಗಳಲ್ಲೇ ಹೇಳಿ ಮೊದಲ ಪ್ರಯತ್ನ ಮಾಡಿದವನೇ ತೆಲುಗ.

ಸಣ್ಣ ಕಥೆಗಳಿಗೆ ತೆಲುಗಿನೊಳಗೆ ಬಹುಶಃ ಗುರುಜಾಡರೇ ಮೊದಲಿರಬೇಕು. " ದೇವುಡು ಚೇಸಿನ ಮನುಷ್ಯುಲ್ಲಾರ..." ಅನ್ನುವ ಗುರುಜಾಡರ ಕಥೆಯೇ ಎಲ್ಲಾ ಕಥೆಗಳಲ್ಲಿ ಅತ್ಯಂತ ಗಮನಿಸಬೇಕಾದ್ದು. ಕಥಾರಚನೆಗೆ ಟೆಕ್ನಿಕ್ ಮುಖ್ಯವೇ ಹೊರತು ಅದೇ ಸರ್ವಸ್ವವಲ್ಲ. ಕಥಾರಚನೆಯೊಳಗೆ ಅದರ ಪ್ರಾಧಾನ್ಯತೆ ಇದ್ದರೂ ಕಥಾವಸ್ತುವೇ ಪ್ರಾಣ. ಕಾಳಿಪಟ್ನಂ ರವಿಶಾಸ್ತ್ರಿಯವರು ಮಾಡುತ್ತಿರುವ ಕೆಲಸವೇ ಅದು."೭

"ನೇಟಿ ಕಾಲವು ಕವಿತ್ವಂ" ಅನ್ನುವ ಲೇಖನವು ೧೯೭೪ ಸೆಪ್ಟಂಬರ್‌ನಲ್ಲಿ ತಿರುಪತಿಯಲ್ಲಿ ವಿರಸಂ ೭ನೇ ಮಹಾಸಭೆಯೊಳಗೆ ಮಾತಾಡಿದ ಮಾತು.

"ಈ ಚರ್ಚೆಯೊಳಗೆ ನಾನು unschedule ಆಗಿ (ಕಾರ್ಯಕ್ರಮದೊಳಗೆ ಇಲ್ಲದಿದ್ದರೂ) ಪ್ರವೇಶಿಸಿರುವೆ.

ಚರ್ಚೆಗಳನ್ನ ಕೇಳಿ ನಾನೇ ವಿಷಯವನ್ನು ಕೋರಿಕೊಂಡಿದ್ದೇನೆ.

"೧೯ನೇ ಶತಮಾನದವರೆಗೆ ನಿನ್ನೆಯ ಕವಿತ್ವ. ಆನಂತರದ ಕಾಲವೇ ಇಂದಿನ ಕವಿತ್ವ ಅಂತ ನಾನೇಳುತ್ತೇನೆ. ಮುನ್ನೋಟವಿರುವ ಕವಿಗಳು ವೃದ್ಧ ಕವಿಗಳು ಕೂಡಾ, ಮುಂದಿನ ಕಾಲದ ಕವಿತ್ವವನ್ನ ಬರೆಯುತ್ತಿದ್ದಾರೆ. ೧೯ನೇ ಶತಾಬ್ದಿಯವರೆಗೆ ಹಾರ್ಸ್ ಪವರ್ ಸ್ಪೀಡ್‌ನೊಳಗೆ ಬರೆಯಲಿಲ್ಲ. ೨೦ನೇ ಶತಮಾನದ ಕವಿತೆಯೊಳಗೆ ರಾಕೆಟ್ ಸ್ಪೀಡಿದೆ. ಆಕಾಶದೊಳಗೆ ಹೋಗುತ್ತಿದ್ದರೆ ಮೆಲ್ಲಗೆ ಹೋಗುತ್ತಿದ್ದೇವೆ ಅನಿಸುತ್ತದೆ. ಆದರೆ ಸ್ಪೀಡಿದೆ. ಸ್ಪೀಡಿಗೆ ಸಂಬಂಧಿಸಿದವು ರಥಗಳೂ, ಜಟಕಾಗಳಂತವು ನಮ್ಮ ಸೀಸ, ಉತ್ಪಲ, ಚಂಪಕಮಾಲಾ ಪದ್ಯಗಳು.

ಆದಿಕಾಲದೊಳಗೆ ಮಹಾಕವಿತೆಯು ಸಂಸ್ಕೃತ ಭಾಷೆಯೊಳಗೆ ಬಂದಿದೆ ಎನ್ನುತ್ತಾರೆ. ಈ ಯುಗದೊಳಗೆ ಸ್ಪ್ಯಾನಿಷ್ ಭಾಷೆಯೊಳಗೆ ಒಳ್ಳೆಯ ಕವಿತೆ ಬಂದಿದೆ. ಈ ಭಾಷೆಯೊಳಗೆ ಅದು ಅರಳುತ್ತಿದೆ ಅಂತ ನಾನೆನ್ನುತ್ತೇನೆ.

ಕಾಳಿದಾಸನ ನಂತರ ಒಳ್ಳೆ ಕವಿಗಳು ಇಲ್ಲವೆಂದರು ಈ ಕಾಲದ ಕವಿತೆಯೊಳಗೆ ಯುವಕರು ನಾಳೆಯ ದೃಷ್ಟಿಯಿಂದ ಬರೆಯುತ್ತ ಅದನ್ನೇ ಕವಿತೆಯಂತೆ, ನಿರ್ವಹಿಸುತ್ತಿದ್ದಾರೆ. ಹಿಂದಿನ ದಿನಗಳೊಳಗೆ. ಬಗೆಬಗೆಯ ಸಂಸ್ಥಾನಗಳಿದ್ದವು. ಈಗಿನ

ಗಾಳಿ, ನೀರು, ಭೂಮಿ, ಹೇಗೋ ಕವಿತೆಯೂ ಹಾಗೇ ಉಪಯೋಗಕರವಾಗಿ ಇರಬೇಕೆಂದು ಅನ್ನುತ್ತಾರೆ. ಸಮಾಜ ಬದಲಾಗಬೇಕಂತಾರೆ, ಆದ್ದರಿಂದ ೧೯ನೇ ಶತಮಾನದ ಕೆಳಗೆ ಇದ್ದ ಸಾಹಿತ್ಯ ಬಂಡವಾಳಶಾಹಿ ಬೂರ್ಜ್ವಾ ಸಂಸ್ಕೃತಿಯದ್ದು ಆನಂತರದೆಲ್ಲಾ ಶ್ರಮಿಕ ಸಂಸ್ಕೃತಿಗೆ ಸೇರಿದ್ದು. ವಿರಸಂ ಬಂದಮೇಲೆ ಶ್ರಮ ಸಂಸ್ಕೃತಿಯನ್ನ ಪ್ರತಿಬಿಂಬಿಸುವ ರಚನೆಗಳು ಬಂದಿವೆ. ಜನಪದ ಗೇಯ ಛಂದಸ್ಸಿನೊಳಗೆ ಗದ್ದರ್, ವಂಗಬುಡು, ಚರಬಂಡರಾಜು ಒಳ್ಳೆಯ ಕವಿತೆ ಬರೆಯುತ್ತಿದ್ದಾರೆ."[೬]

ಹೀಗೆ ಶ್ರೀಶ್ರೀಯವರ ಧೋರಣೆ ಪ್ರಜಾಪರವಾಗಿ ಸಾಮಾನ್ಯರ ಅಭಿವೃದ್ಧಿ ಪರವಾಗೇ ನಿಲ್ಲುತ್ತದೆ. ಪೌರಹಕ್ಕು, ಸಿನಿಮಾ ನೋಟ, ಭಾಷಾ ಸಂಘಟನೆ, ಯುವಜನಸಭಾ ಮೊದಲಾದ ಕಡೆಗೆಲ್ಲಾ ಅವರ ಈ ನೋಟವೇ ಕೇಂದ್ರವಾಗಿದೆ. ಶ್ರೀಶ್ರೀಗೆ ಕ್ರಾಂತಿಯ ಮೇಲೆ ನಂಬುಗೆ. ಮಾರ್ಕ್ಸವಾದದ ಮೇಲೆ ಪ್ರೀತಿ ಹೆಚ್ಚು. ಉದ್ದಕ್ಕೂ ಎರಡು ವಿಷಯ ಕುರಿತೇ ಅವರು ಕರೆ ನೀಡುತ್ತಾ ಬಂದಿರುವುದನ್ನ ಅವರ ಈ ಪುಸ್ತಕ ತೋರಿಸಿಕೊಡುತ್ತದೆ. ನಕ್ಸಲ್ ಹೋರಾಟ ಕುರಿತೂ ಅವರ ಬೆಂಬಲವಿದೆ. "ವ್ಯವ್‌ಲು ರಿವಿವ್‌ಲೂ" ಅನ್ನುವ ಪುಸ್ತಕದ ಬೆನ್ನುಡಿಯಲ್ಲಿ "ಈ ನಾಡು ಅನ್ನಿ ಭಾಷಾ ನಿಘಂಟುವುಲೋನಿಕೆ ಒಕಕೊತ್ತ ಮಾಟ ಪ್ರವೇಶಿಂಚಿದಿ- ನಕ್ಸಲೈಟ್, ಪದಿಮಂದಿ, ಪದಿವಂದಲಮಂದಿ, ವೆಯ್ಯ ಮಂದಿ, ಲಕ್ಷ ಮಂದಿನಿ ಈ ಪೇರುಪಟ್ಟಿ ಚೆಂಪಿನಾ ಈ ಮಾಟನಿಮಾತ್ರಂ ಎವರೂ ತುಡಿಚಿ ಪೆಟ್ಟಲೇರು" ಎಂದೇ ಬರೆಯುತ್ತಾರೆ.

ಖಡ್ಗಸೃಷ್ಟಿ : ೧೯೪೦-೪೫ರಲ್ಲಿ ಬರೆದು ೧೯೬೬ರಲ್ಲಿ ಪ್ರಕಟವಾದ ಮತ್ತೊಂದು ಸಂಪುಟ. ಖಡ್ಗಸೃಷ್ಟಿ, ಈ ಸಂಪುಟದಲ್ಲಿ ಅವರ ಅಧಿವಾಸ್ತವಿಕ ರಚನೆ ಅನುವಾದಗಳು ಅಸಂಪೂರ್ಣ ಕಾವ್ಯವಾದ ಸದಸತ್ಸಂಶಯಂ ಇವೆ. ಈ ಸಂಪುಟಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಮತ್ತು ಸೋವಿಯತ್ ಲ್ಯಾಂಡ್ ನೆಹರು ಬಹುಮಾನ ಬಂದಿವೆ. ಆದರೆ ಸಂಪುಟವನ್ನ ಸರಿಯಾಗಿ ಸಂಪಾದಿಸಿಲ್ಲ. ರಚನೆಗಳು ಕಾಲಾನುಕ್ರಮವಾಗಿ ಇಲ್ಲ. ಇದು ಶ್ರೀಶ್ರೀಗೆ ಕಮ್ಯುನಿಜಂನಲ್ಲಿದ್ದ ಬದ್ಧತೆಗೆ ಕನ್ನಡಿ ಹಿಡಿಯುತ್ತದೆ.

ಚರಮರಾತ್ರಿ : ಶ್ರೀಶ್ರೀ ಗದ್ಯ ಗ್ರಂಥಗಳಲ್ಲಿ ಚರಮರಾತ್ರಿ ಎಂಬ ಕಥಾಸಂಕಲನ ವಿಶಿಷ್ಟ. ಅಲ್ಲಿಯೂ ಅವರು ತನ್ನ ಅನಿಸಿಕೆಗಳನ್ನು ಆದರ್ಶಗಳನ್ನೂ ಅಭಿವ್ಯಕ್ತಿ ಮಾಡಲು ಅವರು ಉಪಯೋಗಿಸಿದ ಗದ್ಯ ಶೈಲಿಯು ಅವಶ್ಯಕತೆಗಿಂತ ಹೆಚ್ಚು ಕಾವ್ಯಾತ್ಮಕ. ಈ ಗದ್ಯವು ಸಿಂಗಲ್‌ಪನ್ನಾ ಕವಿತ್ವವೆಂದು ಅವರೇ ಹೇಳಿದ್ದಾರೆ.

ಅನಂತಂ : ೧೯೪೫-೧೯೮೬ ಅವಧಿಯಲ್ಲಿ ಧಾರಾವಾಹಿಯಾಗಿ ಅಸಂಪೂರ್ಣಗೊಂಡು ಅರ್ಧದಲ್ಲೇ ನಿಂತುಹೋದ ಆತ್ಮಕಥೆ ಅನಂತಂ

ಆಕರ್ಷಕವಾಗಿದೆ. ಶ್ರೀ ಶ್ರೀ 'ಆತ್ಮಹತ್ಯೆ' ಮಾಡಿಕೊಳ್ಳುವ ಅನೇಕ ಪದ್ಧತಿಗಳಲ್ಲಿ ಆತ್ಮ ಚರಿತ್ರೆ ಬರೆಯುವುದೂ ಒಂದು ಎಂದು ಬಣ್ಣಿಸಿದ್ದಾರೆ. ಕಾಲಕ್ರಮವಿಲ್ಲದೇ ಪುನರುಕ್ತಿ ಮತ್ತು ವಿಷಯಾಂತರದಿಂದ ಕೂಡಿದ ಈ ವೃತ್ತಾಂತವು ಶ್ರದ್ಧಾಸಕ್ತಿಯಿಂದ ಓದುವವರನ್ನು ಗೊಂದಲಕ್ಕೀಡುಮಾಡುತ್ತದೆ.

ಮುಚ್ಚು ಮರೆಯಿಲ್ಲದ ಅವರ ಸ್ವಭಾವವು ಅಚ್ಚರಿಗೊಳಿಸುತ್ತದೆ. ಸಾಮಾಜಿಕ ರಾಜಕೀಯ ಮತ್ತು ಸಾಹಿತ್ಯಕ ವಿಷಯಗಳಿಗೆ ಅನೇಕ ಉತ್ತರಗಳು ಅವರ ಲೋಪದೋಷಗಳು ಈ ಕೃತಿಯಲ್ಲಿ ಬಿಚ್ಚು ಮನಸ್ಸಿನಿಂದಲೇ ತೆರೆದುಕೊಂಡಿವೆ.

"ತರಲಿ ಪೋಯಿನ ಕ್ಷಣಂ" ಎಂಬ ಬೆನ್ನುಡಿ ಕೂಡಾ ವಿಶಿಷ್ಟವಾದುದು. "ಸರೇ ಮರಣಿಸಿದೆನು, ನನಗೆ ೧೯೯೦ರೊಳಗೆ ಸತ್ತು ಬಿಡಬೇಕು ಅಂತ ಇದೆ. ಬಹುಶಃ ವಿಮಾನ ಅಪಘಾತದೊಳಗೋ, ಇಲ್ಲಾ ನೀರಿನ ಗಂಡಾಂತರದೊಳಗೋ? ಅದು ಇದು ಆಗದೇ ಹೋದರೆ ನೆಲದ ಮೇಲೆಯೇ ಕಾಲಧರ್ಮದಂತೆ ಸಾಯಬೇಕು.

ನನ್ನ ಶವದ ಸುತ್ತಲೂ ಬಹಳ ಜನ ಸೇರಿ ಅಳುತ್ತಿದ್ದಾರೆ. ಏಕೆ ಅಳುತ್ತಾರೆ, ಈಗ ಏನಾಗಿದೆಯೆಂದು ಅಂತ ನಾನೆಷ್ಟು ಜೋರಾಗಿ ಅರಚುತ್ತಿದ್ದರೂ ಯಾರಿಗೂ ನನ್ನ ಮಾತು ಕೇಳಿಸಲಾರವು. "ಆನಂತರದ ಕಾರ್ಯಕ್ರಮ ಕುರಿತು ಆಲೋಚಿಸಿದೆನು" ನನ್ನನ್ಯಾರೋ ದಹಿಸಬೇಕೆಂದರು. ಅದೇನು ಬೇಡ ಎಂದೆನು. ಜಾತಿಗೆ ಸಂಬಂಧಿಸಿದ ವಿಧಿವಿಧಾನಗಳಿಗೆ ನನ್ನ ಕಳೇ ಬರವನ್ನ ಅಂಕಿತಗೊಳಿಸಲು ನಾನು ಸುತರಾಂ ಅಂಗೀಕರಿಸಲಿಲ್ಲ.

ಸುತ್ತ ಸೇರಿದ ಜನರೊಳಗೆ ಕೆಲವರಿಗೆ ನಾನೊಂದು ಸಾರೆ ಬರೆದ ಮರಣಶಾಸನ ಜ್ಞಾಪಕವಾಯಿತು. ಅದರೊಳಗೆ ನಾನು "ನಾನು ಸತ್ತು ಹೋದಮೇಲೆ ಮಾಡಬೇಕಾದ ಮೊಟ್ಟಮೊದಲ ಕೆಲಸವೆಂದರೆ ನನ್ನ ಶವವನ್ನ ವಿಶಾಖಪಟ್ಟಣದೊಳಗಿನ ಕಿಂಗ್‌ಜಾರ್ಜ್ ಆಸ್ಪತ್ರೆಗೆ ನೀಡಬೇಕು" ಅಂತ ಬರೆದಿದ್ದೆನು. ಆ ನಂತರ ನಡೆಯಬೇಕಾದ ಕೆಲಸ ಅಲ್ಲಿರುವ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳೊಳಗಿನ ನಿರೀಶ್ವರವಾದಿ ವಿದ್ಯಾರ್ಥಿಗಳ ಸಮ್ಮುಖದೊಳಗೆ ನಡೆಯಬೇಕೆಂದು ನನ್ನ ಆಕಾಂಕ್ಷೆ.

ಅತ್ತು ಅತ್ತು ಸುಮ್ಮನಾದವರು, ಸುಮ್ಮನಾದರೂ ಅಳುತ್ತಿರುವವರು ಅವರಿನ್ನೂ ಅಳುತ್ತಲೇ ಇದ್ದಾರೆ. ಅಳಲಿಬಿಡಿ ನನಗೇನೂ ಅಭ್ಯಂತರವಿಲ್ಲ. ಪತ್ರಿಕೆಯವರು ಏನುಬೇಕೂ ಅದನ್ನ ಬರಕೊಳ್ಳುತ್ತಿದ್ದಾರೆ. ಬರೆದುಕೊಳ್ಳಲಿ ಬಿಡಿ ನನಗೇನೂ ಅಭ್ಯಂತರವಿಲ್ಲ.

ವಿರಸಂ ನವರು ನನ್ನನ್ನ ಹೊಗಳುತ್ತಿದ್ದಾರೆ. ನನ್ನ ಶವದ ಮೇಲೆ ಕೆಂಪು ಬಾವುಟ ಹೊದಿಸಿದ್ದಾರೆ. ನನ್ನ ಮಗನೇ ಬಂದು ತನ್ನ ಕೈಯೊಳಗಿಂದಲೇ ಕೊಳ್ಳಿ ಇಡಬೇಕು ಅನ್ನುತ್ತಿದ್ದಾನೆ. ಇದು ಅವನಿಗೆ ಹುಟ್ಟಿದ ಬುದ್ಧಿಯಲ್ಲವೆಂದು ಕೊಳ್ಳುತ್ತೇನೆ. ಯಾರೋ ಮಾಡಿದ ಟ್ಯೂಷನ್ ಆದರೂ ಅದಕ್ಕೊಂದು ಅವಕಾಶವಿಲ್ಲ ಅನ್ನುತ್ತಾನೆ. ಶ್ರೀಶ್ರೀ" ಎಂಬ ಸ್ವಾತಿ ಪತ್ರಿಕೆಯಲ್ಲಿ(೧೯೭೯) ಬರೆದುಕೊಂಡ ಲೇಖನವೇ ಈ ಪುಸ್ತಕದ ಬೆನ್ನುಡಿಯಾಗಿದೆ.

ಈ ಕೃತಿಯ ಆರಂಭದಲ್ಲಿ. "ಈಗ ನಾವು ೨೦ನೇ ಶತಮಾನದೊಳಗೆ ಇದ್ದೇವೆ. ಈ ಶತಮಾನ ನನ್ನದು! ನಾನು ೧೯೧೦ರೊಳಗೆ ನಾನು ಹುಟ್ಟಿದೆ. ಮೂರು ಬಾರಿ ಮೃತ್ಯುವಿನೊಂದಿಗೆ ಹೋರಾಡಿ ಗೆದ್ದೆನು. ೧೯೧೮ರೊಳಗೆ ಮೊದಲ ಗೀತೆ ಬರೆದನು (ಗಣ, ಯತಿ, ಪ್ರಾಸಗಳೆಂದರೆ ಏನೆಂದರೆ ತಿಳಿಯಲಾಗದೇ!) ೧೯೨೦ರೊಳಗೆ ಮೊದಲ ಕಾದಂಬರಿ (ವೀರಸಿಂಹ ವಿಜಯ ಸಿಂಹಾಲು) ಬರೆದು ಬಿಸಾಕಿದೆ. ೧೯೨೫ರೊಳಗೆ ಮೊದಲ ಕಾದಂಬರಿ (ಪರಿಣಯ ರಹಸ್ಯಂ) ಮುದ್ರಣವಾಯಿತು. ಅದರ ಪ್ರತಿಗಳು ಈಗ ಇಲ್ಲ ವಿಶಾಖಪಟ್ಟಣ ಹಿಂದೂ ರೀಡಿಂಗ್ ರೂಮ್ ಲೈಬ್ರರಿಯೊಳಗೆ ಇವೆ.

೧೯೨೮ರೊಳಗೆ ಮೊದಲ ಖಂಡಕಾವ್ಯ ಸಂಪುಟ (ಪ್ರಬವ) ನಮ್ಮ ತಂದೆಯವರು ನೀಡಿದ ಹಣದೊಳಗೆ ರಾಜಮಂಡ್ರಿ ಸರಸ್ವತಿ ಪವರ್ ಪ್ರೆಸ್‌ನೊಳಗೆ ಮುದ್ರಣ ಮಾಡಿಸಿದೆ.

೧೯೩೦ರೊಳಗೆ ನಾನು ೬೩ ದಿನಗಳು ಟೈಫಾಯಿಡ್ ಜ್ವರದಿಂದ ಬಳಲಿದೆ. ಜೀವ ಮೃತ್ಯುವಿನೊಂದಿಗೆ ಹೇಗೆ ಹೋರಾಡುತ್ತದೋ ಸ್ವಯಂ ಅನುಭವವಾಯಿತು. (" ಇನ್ನು ಲಾಭವಿಲ್ಲ" ಎಂದು ನನ್ನನ್ನ ಮಂಚದಿಂದ ಕೆಳಗೆ ಇಳಿಸಿದ್ದು ನನಗಿನ್ನೂ ಜ್ಞಾಪಕವಿದೆ.) ಇದು ನನ್ನ ಎರಡನೇ ಸಾವು. ೧೯೩೫ರೊಳಗೆ ಮಾನಸಿಕ ಆಸ್ಪತ್ರೆಯಲ್ಲಿದ್ದುದ್ದು ನನ್ನ ಮೂರನೇ ಸಾವು. ಮೊದಲ ಬಾರಿ ನಾನು ಹುಟ್ಟಿದ ತಿಂಗಳೊಳಗೇ ಸಾಯಬೇಕಿತ್ತು. ನಮ್ಮ ಬಂಧುವೊಬ್ಬರು ಬೆಂಕಿ ಚುರಕಿಯಿಂದ ಸುಟ್ಟು ನಾಟಿ ವೈದ್ಯ ನೀಡಿ ನನ್ನನ್ನು ಬದುಕಿಸಿದರಂತೆ. ಇದಕ್ಕೆ ಗುರ್ತಿನಂತೆ ನನ್ನ ಬೆನ್ನ ಮೇಲೆ ಭುಜದ ಮೇಲೆ ಕೈಯ ಮಣಿಕಟ್ಟಿನ ಮೇಲೆ ಮಚ್ಚೆಗಳಿವೆ.

೧೯೩೦ರ ತನಕ ತೆಲುಗು ಸಾಹಿತ್ಯ ನನ್ನ ನಡೆಸಿತು. ಆನಂತರದಿಂದ ಅದನ್ನ ನಾನು ನಡೆಸುತ್ತಿದ್ದೇನೆ. ಆಗಿನಿಂದ ತೆಲುಗು ಸಾಹಿತ್ಯ ಚರಿತ್ರೆ ಶ್ರೀ ಶ್ರೀ ಸ್ವಯ ಚರಿತ್ರ. ಈ ಶತಾಬ್ದದ ಆರಂಭದೊಳಗೆ ಜಮೀನ್ದಾರಿ ಕವಿತೆಯ ಮೇಲೆ ಭಾವಕವಿತ್ವ ಎದುರು ಬಿದ್ದಿದೆ. ಸಣ್ಣವನಿದ್ದಾಗಿನಿಂದ ಎದುರು ಬೀಳುವ ಮನಸತ್ವದಿಂದ ನಾನು ಭಾವಕವಿತ್ವವನ್ನ ಮನಸ್ಫೂರ್ತಿಯಾಗಿ ಸ್ವೀಕರಿಸಿದೆನು.

೧೯೨೫ರಿಂದ ೫೦ರ ತನಕ ನಡೆದ ೨೫ವರ್ಷದ ಭಾವಕವಿತ್ವದ ಮೇಲೆ, ಯುವ ಕವಿಗಳ ಪ್ರತಿಭಟನೆ ನಡೆಯಿತು. ಈ ಕಾಲದೊಳಗೇ ೨ನೇ ಪ್ರಪಂಚ ಮಹಾಯುದ್ಧ ಆರಂಭವಾಗುವುದು, ಮುಗಿಯುವುದು, ನಮಗೆ ಸ್ವತಂತ್ರ್ಯ ಸಿಗುವುದು ನಡೆಯಿತು. ಸ್ವತಂತ್ರ್ಯ ಬಂದ ಹೊಸದರೊಳಗೆ "ಭಾವಕವಿತ್ವ ಒಕ ಶವ ಪರೀಕ್ಷ" ಅನ್ನೋ ಲೇಖನ ಬರೆಯಬೇಕೆಂದು ನಾನು ಬಹಳ ಒದ್ದಾಡಿದೆ. ಲೇಖನ ಬರೆಯಲಿಲ್ಲವಾದರೂ ಭಾವಕವಿತೆ ಮಾತ್ರ ಸಾಹಿತ್ಯ ರಂಗದಿಂದ ನಿಷ್ಕ್ರಮಿಸಿತು.

ಹಾಗೆ ನಿಷ್ಕ್ರಮಿಸಿದ ಭಾವಕವಿತ್ವದ ಸ್ಥಾನವನ್ನ ಅಭ್ಯುದಯ ಕವಿತೆಯು ಆಕ್ರಮಿಸಿತು. ಆಕ್ರಮಿಸಿ ಈ ಹೊಸ ಕವಿತೆ ಏನು ಸಾಧಿಸಿತು? ಈ ಪ್ರಶ್ನೆಗೆ ನನಗಿಂತಲೂ ನನ್ನ ಕವಿತೆ ಸಹೋದರ ಸೋಮಸುಂದರ್ ಸುಂದರವಾದ, ಸಮಗ್ರವಾದ ಉತ್ತರ ನೀಡಬಲ್ಲ. ನಾನಿಲ್ಲಿ ಹೇಳುವುದು ಒಂದೇ ಒಂದು ವಿಷಯ ಮಾತ್ರ. ಅಭ್ಯುದಯ ತೆಲುಗು ಸಾಹಿತ್ಯದೊಳಗೆ ಗ್ರಾಂಥಿಕ ಭಾಷೆಗೆ ಶಾಶ್ವತ ಆಹ್ವಾನವನ್ನ ನೀಡಿತು. ಕಾದಂಬರಿಂಯೊಳಗೆ, ನಾಟಕದೊಳಗೆ, ಪತ್ರಿಕಾಸಂಪಾದಕೀಯದೊಳಗೆ, ರೇಡಿಯೋ ಪ್ರಸಾರಂಗದೊಳಗೆ ಸರ್ವತಾ ವ್ಯವಹಾರಿಕ ಭಾಷೆಯಲ್ಲಿ ವಿಜಯ ಪತಾಕೆಯನ್ನ ಹಾರಿಸಿತು. ಕವಿತೆಯೊಳಗೆ ಗಣಬದ್ಧ ಛಂದಸ್ಸುಗಳ ಪ್ಯೂಡಲಿಜಂ'ನ ಒಡೆದಾಗ ಮಾತ್ರಾ ಛಂದಸ್ಸುಗಳ ಪ್ರಜಾ ಸ್ವಾಮ್ಯವನ್ನು ಸ್ಥಾಪಿಸಲು ಸಾಧ್ಯ. ಆ ದಿನಗಳೊಳಗೇ ನಾನು–

"ನೇನು ಸೈತಂ
ಪ್ರಪಂಚಾಗ್ನಿಕಿ
ಸಮಿಧನೊಕ್ಕಟಿ....
ಆಹುತಿಚ್ಚಾನು...."

"ನಾನು ಸಹಿತ
ಪಪಂಚಾಗ್ನಿಗೆ
ಸಮಿತ್ತು ಒಂದನು
ಆಹುತಿ ನೀಡಿದೆ !"

ಅಂತ ಸಿಂಗಲ್ ಪನ್ನಾ ಕವಿತೆಗಳನ್ನ ಬರೆಯುತ್ತಿದ್ದರೆ ಅಬ್ಬೂರಿ ರಾಮಕೃಷ್ಣ ಅವರು ಹಾಸ್ಯ ಕವಿತೆಯನ್ನ ಉದಾಹರಿಸುತ್ತಿದ್ದರು.

ಶೇಕಡಾ ೭೫ರ ನಿರಕ್ಷರಿಗಳ ಮೇಲೆ ಶೇಕಡಾ ೨೫ ಅಕ್ಷರಗಳು ಶೇಕಡಾ ೯೦ರ ದರಿದ್ರರ ಮೇಲೆ ಶೇಕಡಾ ೧೦ರ ಶ್ರೀಮಂತರು ಆಳ್ವಿಕೆ ನಡೆಸುವ ವ್ಯವಸ್ಥೆ ಇದು.

೧೯೭೦ರೊಳಗೆ ನನ್ನ ಷಷ್ಠಿಪೂರ್ತಿ ನಡೆಯಿತು. ಆಗಲೇ ತೆಲುಗು ಸಾಹಿತ್ಯ ಒಂದು ದೊಡ್ಡ ಬದಲಾವಣೆ ಕಂಡಿತು. ಆ ವರ್ಷವೇ ವಿಪ್ಲವ ಬರಹಗಾರರ ಸಂಘ ಸ್ಥಾಪನೆಯಾಯಿತು. ಅದಕ್ಕೆ ನನ್ನನ್ನ ಅಧ್ಯಕ್ಷರನ್ನಾಗಿ ಮಾಡಿದವರಿಗೆಲ್ಲಾ ನನ್ನ ಧನ್ಯವಾದಗಳು.

ಭಾರತಕ್ಕೆ ರಾಷ್ಟ್ರಪತಿ ಆಗುವುದಕ್ಕಿಂತಲೂ ವಿರಸಂ ಅಧ್ಯಕ್ಷ ಆಗುವುದೇ ನನಗೆ ಮಹದಾನಂದಕರ. ತೆಲುಗು ಕವಿತಾ ರಂಗದೊಳಗೂ, ಕಥಾರಂಗದೊಳಗೂ, ವಿಪ್ಲವ ಬರಹಗಾರರು ಪ್ರಕಾಶಮಾನರಾಗಿ ಮುನ್ನುಗ್ಗುತ್ತಿದ್ದಾರೆ.

ಈ ಶತಮಾನದ ಆರಂಭದಿಂದ ನಮ್ಮ ಸಮಾಜ ನಮಗೆ ಅನಂತದೊಳಗೆ ಕಾಣಿಸುತ್ತಿದೆ. ಜೀವನದ ವಾಸ್ತವಿಕತೆ ನೇರವಾಗಿ ನಮ್ಮ ಕಣ್ಣಿಗೆ ಕಟ್ಟುತ್ತಿದೆ. 'ಅನಂತಂ'. ಯಾರ್ಯಾರೋ ಯಂತಂತೋ ವ್ಯಕ್ತಿಗಳು ನಮಗೆ ಇದರೊಳಗೆ ಕಂಡು ಬರುತ್ತಿದ್ದಾರೆ. ಈ ವ್ಯಕ್ತಿಗಳ ಹಿಂದಿರುವ ಸಾಮಾಜಿಕ ಶಕ್ತಿಗಳ ಚಿತ್ರಣ ಅನಂತದೊಳಗೆ ನಮಗೆ ಕಂಡುಬರುತ್ತದೆ."

ವಿಶಾಖ ಪಟ್ಟಣದ ಮಡಿಲೊಳಗೆ, ಶ್ರಮಿಕರ ವಿಪ್ಲವ ಶಾಲೆಯೊಳಗೆ, ಶ್ರೀಶ್ರೀ ಬೆಳೆದಿದ್ದಾನೆ. ಅವುಗಳೆಂದಿಗೂ ಕೂಡಾ ಏಗಿದ್ದೇನೆ ಅನ್ನುತ್ತಾನೆ ಶ್ರೀಶ್ರೀ.

"ಅನಂತಂ" ಶ್ರೀಶ್ರೀ ಸ್ವಯಂ ಚರಿತ್ರೆ. ಶ್ರೀಶ್ರೀ ಜೀವನಕಥೆ. ಶ್ರೀಶ್ರೀ ಕವಿತಾ ಜೀವನ. ಶ್ರೀಶ್ರೀ ಜೀವನದ ಕಾವ್ಯ"[೮] ಎಲ್ಲವೂ ಇಲ್ಲಿ ಗೋಚರಿಸುತ್ತವೆ.

ಅನಂತಂ ಒಂದು ಕಡೆ ಕುಳಿತು ಸಿಹಿಯಾಗಿ ಬರೆದ ಬರಹವಲ್ಲ. ಯಾವ್ಯಾವಗೋ ಬರೆದರೋ ಆಗಾಗ ಮುದ್ರಣಗೊಂಡ ಬರಹಗಳ ಸಂಕಲನವಿದು. ೧೯೫೦ಕ್ಕಿಂತ ಮುಂಚೆ ಬಹಳ ಕಮ್ಮಿ ಬರೆದರು. ಇದರ ಹೆಚ್ಚು ಭಾಗ ೧೯೭೫–೧೯೭೭ರೊಳಗೆ ಪ್ರಜಾತಂತ್ರ ಪತ್ರಿಕೆಯೊಳಗೆ ಬಂತು. ನಂತರ ೧೯೭೯–೮೦ರೊಳಗೆ ಸ್ವಾತಿ ಮಾಸ ಪತ್ರಿಕೆಯೊಳಗೆ ಮತ್ತೆ ಶುರುವಾದ ಬರಹವಿದು. ಹಾಗೇ ಬೇರೆ ಸಂದರ್ಭ ಗಳೊಳಗೂ ಬರೆದ ಬರಹಗಳಲ್ಲಿ ಕೆಲವನ್ನ ಇಲ್ಲಿ ಸೇರಿಸಿಕೊಂಡಿದ್ದಾರೆ. ಆ ವಿವರಗಳನ್ನು ಶ್ರೀಶ್ರೀ ಇಲ್ಲಿ ನೀಡಿದ್ದಾರೆ.

ಮತ್ತೊಂದು ಮಾತೆಂದರೆ "ಅನಂತಂ" ಒಂದು ಕ್ರಮದೊಳಗೆ ಕೂಡಾ ಬರೆದಿಲ್ಲ. ಶ್ರೀಶ್ರೀಯವರ ಪತ್ರಗಮನಿಸಿ ಇದರ ಸಂಪಾದಕರಾದ ಚಲಸಾನಿ ಪ್ರಸಾದ್‌ರವರೇ ಇದಕ್ಕೆ ಒಂದು ವ್ಯವಸ್ಥಿತ ರೂಪನೀಡಲು ಪ್ರಯತ್ನಿಸಿದ್ದಾರೆ ಎನ್ನಬಹುದು.

"ಅನಂತಂನಲ್ಲಿ ಶ್ರೀಶ್ರೀ ನಾಚಿಕೆಯಿಲ್ಲದೇ ತನ್ನ ದುಶ್ಚಟಗಳ ಕುರಿತು ಬರೆದಿರುವರು. ವ್ಯಭಿಚಾರದಿಂದ ಸುಖರೋಗ ಪೀಡಿತರಾದರು. ಬಾಲ್ಯದಲ್ಲಿಯೇ

ಮಿತ್ರರೊಂದಿಗೆ ಸೇರಿ ಊರು–ತೇರು ಜಾತ್ರೆಗಳಲ್ಲಿ ಹುಡುಗಿಯರೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ. ಪುಣ್ಯಕ್ಷೇತ್ರವಾದ ಶ್ರೀರಂಗದಲ್ಲಿ ವ್ಯಭಿಚಾರ ಮಾಡಿ ತನ್ನನ್ನು ತಾನೇ ಪ್ರಶಂಸಿಸಿಕೊಂಡಿದ್ದಾರೆ. ತನಗೆ ಉದ್ಯೋಗ ನೀಡುವ ಯಾರೊಂದಿಗೇ ಆಗಲಿ ವ್ಯಭಿಚಾರ ಮಾಡುವೆಯಾ? ಎಂದು ಕೈ ಹಿಡಿದವಳನ್ನೂ ಕೇಳಿದರೆ ಆಕೆ ಅಂಗೀಕರಿಸಿದಳೆಂದು ದಾಖಲಿಸಿದ್ದಾರೆ. ಒಮ್ಮೆ ಕುಡಿತದ ಅಪರಾಧದ ಮೇಲೆ ಅರೆಸ್ಟಾಗಿ ಮದ್ರಾಸಿನ ಜೈಲೊಂದರಲ್ಲಿ ಒಂದು ರಾತ್ರಿ ಕಳೆದಿದ್ದಾರೆ. ಕೆಲದಿನ ಹಗಲೆಲ್ಲಾ ರಮ್ಮು ಕುಡಿಯುತ್ತಾ ಕಾಲಕ್ಷೇಪ ಮಾಡಿ, ಗಿಂಡಿಯಲ್ಲಿ ಕುದುರೆ ರೇಸಿಗೆ ತಪ್ಪದೇ ಹಾಜರಾಗಿದ್ದಾರೆ. ಒಂದಲ್ಲ ಹತ್ತಾರು ಸಲ ತಾನು ನಿರೀಶ್ವರವಾದಿಯೆಂದು ಹೇಳಿದ್ದಾರೆ. ಆದರೆ ತನ್ನ ಮಗನ ಉಪನಯನವನ್ನ ತಿರುಮಲೆಯಲ್ಲಿ ಶಾಸ್ತ್ರೀಯವಾಗಿ ನಡೆಸಿದ್ದಾರೆ. ದಿಲ್ಲಿಯಲ್ಲಿ ನಡೆದ ೫೦ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರಿಗೆ ಸನ್ಮಾನಿಸಿ ನೆನಪಿಸಿ ಕಾಣಿಕೆ ನೀಡಿದರೆ, ಆಗಲೇ ಅವನ್ನು ಬಿಚ್ಚಿನೋಡಿ ಅದರಲ್ಲಿದ್ದ ಕೃಷ್ಣ ವಿಗ್ರಹವನ್ನು ಕಣ್ಣಿಗೊತ್ತಿಕೊಂಡರು. ಒಂದುರೀತಿಯಲ್ಲಿ ಅವರು ಜಹಾಂಗೀರನಂತೆ ಪರಸ್ಪರ ವಿರುದ್ಧ ವರ್ತನೆಗಳ ಜೀವ."[೭] ಎಂಬಂತಿದೆ ಈ ಆತ್ಮಕಥನ.

ಕೊನೆ ಟಿಪ್ಪಣಿ

೧. ಬೂದರಾಜು ರಾಧಾಕೃಷ್ಣ : ಮಹಾ ಕವಿ ಶ್ರೀಶ್ರೀ: ಕನ್ನಡಕ್ಕೆ ಗುರುಮೂರ್ತಿ ಪೆಂಡಕೂರು; ಸಾಹಿತ್ಯ ಅಕಾಡೆಮಿ, ೨೦೦೫. ಪುಟ : ೮-೯-೬೦

೨. ಶ್ರೀಶ್ರೀ : ಅನಂತಂ : ವಿಶಾಲಾಂಧ್ರ ಪಬ್ಲಿಷಿಂಗ್ ಹೌಸ್ : ೨೦೦೦ : ಪುಟ-೮೩

೩. ಮಹಾಪ್ರಸ್ಥಾನ, ಮತ್ತೊಂದು ಪ್ರಸ್ಥಾನ : ಶ್ರೀ ಶ್ರೀ ಆಯ್ದ ಕವನಗಳು, ಅನುವಾದ : ಎಚ್.ಎಸ್ ಶಿವಪ್ರಕಾಶ್, ಬಿಜಗೆರೆ ಜಯಪ್ರಕಾಶ್, ರಾಘವೇಂದ್ರರಾವ್; ಸಾಹಿತಿಮಿತ್ರರು ೧೯೯೧, ಬೆಂಗಳೂರು ಪು-೭.

೪. ೧+೧ = ೧: ಶ್ರೀಶ್ರೀ ನಾಟಕಗಳು : ಸಂ: ಚಲಸಾನಿ ಪ್ರಸಾದ್ ೧೯೬೪ ಪುಟ-೭.

೫. ವಾರಂ ವಾರಂ : ಶ್ರೀಶ್ರೀ ಸಾಹಿತ್ಯ ಸರ್ವಸ್ವಂ-೬: ಸಂ: ಚಲಸಾನಿ ಪ್ರಸಾದ್, ೨೦೦೦ ಪುಟ-೬೭.

೬. ವ್ಯೂವ್‌ಲು ರಿವಿವ್ಯುಲು : ಶ್ರೀಶ್ರೀ : ಸಂ. ವಿರಸಂ ೧೯೯೨, ಪುಟ-೧೬-೨೭-೪೯-೫೨

೭. ಶ್ರೀಶ್ರೀಉಪನ್ಯಾಸಾಲು : ಸಂ: ಚಲಸಾನಿ ಪ್ರಸಾದ್ ೧೯೯೦ : ಪುಟ-೫--೨೨-೪೯-೫೬-೮೫

೮. ಅನಂತಂ : ಸಂ: ಚಲಸಾನಿ ಪ್ರಸಾದ್, ೨೦೦೦ ಪುಟ-೮.

ಅಧ್ಯಾಯ–೩

ಸಿದ್ಧಲಿಂಗಯ್ಯನವರ ಕಾವ್ಯಾಭಿವ್ಯಕ್ತಿಯ ಅನನ್ಯತೆ

ಸಿದ್ಧಲಿಂಗಯ್ಯನವರ ಕಾವ್ಯಾಭಿವ್ಯಕ್ತಿಯ ಅನನ್ಯತೆ

ದಲಿತೇತರರು ಕನ್ನಡ ಸಾಹಿತ್ಯದ ಪರಂಪರೆಯೊಳಗೆ ತಮ್ಮನ್ನು ತಾವು ಸುಲಭವಾಗಿ ಗುರುತಿಸಿಕೊಂಡ ಹಾಗೆ ದಲಿತರು ಇಡೀ ಕನ್ನಡ ಸಾಹಿತ್ಯ ಪರಂಪರೆಯನ್ನ ನಮ್ಮ ಪರಂಪರೆ ಎಂದು ಅಭಿಮಾನದಿಂದ ಕರೆದುಕೊಳ್ಳುವುದು ಕಷ್ಟ. ಹಾಗೇಯೇ ಆ ನಂಟನ್ನೂ ಪಟ್ಟನೆ ಕಡ್ಡಿ ಮುರಿದ ಹಾಗೆ ಮುರಿದುಕೊಳ್ಳುವುದು ಕಷ್ಟ. ಪರಂಪರೆ ಎಂದ ಕೂಡಲೇ ಅದೊಂದು ಕಾಲ ಪ್ರವಾಹ ಈ ಕಾಲ ಪ್ರವಾಹದೊಳಗೆ ಕಸ–ಕಡ್ಡಿ ಗಲೀಜು ಹಾಗೆ ಪ್ರಾಣಕ್ಕೆ ಅವಶ್ಯವಾದ ನೀರು ಕೂಡಾ ಇರುತ್ತವೆ. ಈ ನೀರು ಅನ್ನುವುದು ಭಾಷೆ, ಜನಪರ ಮೌಲ್ಯ, ಜೀವಪರ ಧಾರ್ಮಿಕ ನಂಬುಗೆಗಳೂ, ಸಂಸ್ಕೃತಿ, ಪುರಾಣ, ಮಿತ್‌ಗಳು ಎಲ್ಲವೂ ಅಡಗಿವೆ. ನೀರನ್ನು ಸೋಸಿ–ಆರಿಸಿ ಕುಡಿಯುವ ಕೆಲಸವನ್ನು ಯಾವುದೇ ಬಗೆಯ ಹೊಸ ಚಳುವಳಿ ಪಂಥ ಮಾಡಲೇ ಬೇಕಾಗುತ್ತದೆ.

ಈ ಸೋಸಿ–ಆರಿಸಿ–ಕುಡಿಯುವ ಕೆಲಸವನ್ನ ದಲಿತ ಸಾಹಿತ್ಯ–ದಲಿತ ಸಾಹಿತ್ಯದ ಚಿಂತಕರು ಮಾಡುತ್ತಲೇ ಬರುತ್ತಿರುವುದು ಈಗ ನಮ್ಮ ಕಣ್ಣ ಮುಂದಿದೆ. ಶ್ರೀ ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು 'ಬೂಸಾ' ಎಂದು ಕರೆದಿದ್ದರ ಹಿಂದೆ ಇಡಿಯಾಗಿ ಪರಂಪರೆಯನ್ನು ದಿಕ್ಕರಿಸುವ ಮಾತಿದ್ದರೂ ಅವರು ಹನ್ನೆರಡನೆಯ ಶತಮಾನ ಕುರಿತು ಒಲವಿನ ಮಾತಾಡಿದ್ದಾರೆ. ಈ ಒಲವು ಪುನಃ ಪರಂಪರೆಯ ಜೊತೆ ನೆಂಟಸ್ತಿಕೆಯನ್ನು ಬೆಳಸುವ ಕೆಲಸವೆ!"[1]

"ಇಡೀ ಸಾಹಿತ್ಯ ಪರಂಪರೆ ಕನ್ನಡವೇಕೆ ಇಡೀ ಭಾರತೀಯ ಸಾಹಿತ್ಯ ಪರಂಪರೆಯ ಮೂಲಕರ್ತೃಗಳು ನಿಮ್ಮ ವರ್ಗದವರು ಎಂದು ಹೇಳುವ ಮಾದಾರ ಚೆನ್ನಯ್ಯ:–

> ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ
> ದೂರ್ವಾಸ ಮಚ್ಚಿಗ, ಧದೀಚಿ ಕೀಲಿಗ
> ಕಸ್ಯಪ ಕಮ್ಮಾರ, ರೋಮಜ ಕಂಚುಗಾರ
> ಕೌಂಡಿಲ್ಯ ನಾವಿದ ನೆಂಬುದನರಿದು
> ಮತ್ತೆ ಕುಲ ಉಂಟೆಂದು ಛಲಕ್ಕೆ ಹೋರಲೇತಕ್ಕೆ

ಇಂತಿ ಸಪ್ತಋಷಿಯರುಗಳೆಲ್ಲರೂ
ಸತ್ಯದಿಂದ ಮುಕ್ತರಾಮದನರಿಯದೆ
ಅಸತ್ಯದಲಿ ನಡೆದು
ವಿಪ್ರರು ನೀವು ಘನವೆಂದು ಹೋರುವ
ಹೊತ್ತು ಹೋಕರ ಮಾತೇಕೆ– (ಮಾದಾರಚೆನ್ನಯ್ಯ)

ಇದು ಮಾದಾರ ಚೆನ್ನಯ್ಯ ತನ್ನ ಕುಲದ ಹಿನ್ನೆಲೆಯಲ್ಲಿ ಪರಂಪರೆಯನ್ನು ಮರುಹೊಂದಿಸುವ ಮೂಲಕ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡುತ್ತವೆ. ಯಾವ ಪರಂಪರೆಯನ್ನು ದಿಕ್ಕರಿಸುತ್ತೇವೆಯೋ ಆ ಪರಂಪರೆಯಲ್ಲಿಯೇ ಕೆಲ ಸ್ವೀಕಾರಾರ್ಹ ಅಂಶಗಳೂ ಇಲ್ಲವೆಂಬ ತಿಳುವಳಿಕೆ ಕೂಡ ಬಂಡಾಯಗಾರನಿಗೆ ಅವಶ್ಯ."

ಪರಂಪರೆ ಅಂದಕೂಡಲೆ ನಾವು ಶಿಷ್ಟ ಪರಂಪರೆಯೊಂದನ್ನೇ ನಮ್ಮ ಪರಂಪರೆಯೆಂದು ಆತುರದಿಂದ ವಿಮರ್ಶೆಗೆ ತೊಡಗುತ್ತೇವೆ. ಶಿಷ್ಟ ಪರಂಪರೆಗೆ ವಿರುದ್ಧವಾದ ಪರಿಶಿಷ್ಟ ಪರಂಪರೆಯೊಂದು ಲಿಖಿತ ಕಾವ್ಯಕ್ಕೆ ಸಮಾನಾಂತರವಾಗಿ ವೌಖಿಕವಾಗಿ ಕಾಲ ಪ್ರವಾಹದಲ್ಲಿ ಸಾಗಿ ಬಂದಿರುವುದನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇದು ಉಪಸಂಸ್ಕೃತಿಗಳ ಒಂದು ಅನನ್ಯಲೋಕ. ಲಿಖಿತಕಾವ್ಯ ತನ್ನ ಒಳಕ್ಕೆ ಬರಮಾಡಿಕೊಳ್ಳಲೊಪ್ಪದ ಎಲ್ಲಾ ಸಂವೇದನೆಗಳು, ವಿಚಾರಗಳು ಮೌಖಿಕ ಪರಂಪರೆಯಲ್ಲಿ ವಿಜೃಂಭಿಸಿವೆ. ದಲಿತರು, ಆಶಾವಾದದಿಂದ ಎದುರು ನೋಡುವ ಪರಂಪರೆ ಇದು. ಮಂಟೆಸ್ವಾಮಿ, ಮಲೆಯ ಮಹದೇಶ್ವರ, ಮರುಳಸಿದ್ಧ, ಉತ್ತಪ್ಪ, ಜುಂಜಪ್ಪ, ಬಕಾಲ, ದಕ್ಷಾ ಇತ್ಯಾದಿ ಉಪೇಕ್ಷಿತ ಜಾತಿಯ ನಾಯಕರೆಲ್ಲಾ ವಿಜೃಂಭಿಸುವ ಕಾವ್ಯವಿದು. ಕನ್ನಡ ಸಾಹಿತ್ಯ ಅಂದಾಗ ನಾವು ಇದನ್ನು ಸಾಹಿತ್ಯ ಎಂದು ಎದುರುಗೊಂಡಾಗ ದಲಿತರಿಗೊಂದು ದೊಡ್ಡ ಪರಂಪರೆ ಗುಪ್ತಗಾಮಿನಿಯಾಗಿ ಹರಿದು ಬಂದಿರುವುದು ಗಮನಕ್ಕೆ ಬರುತ್ತದೆ. ದಲಿತರ ಆಯ್ಕೆಗಳಲ್ಲಿ ವ್ಯತ್ಯಾಸವಿರಬಹುದು. ನಗರ ಕೇಂದ್ರಿತ ಪ್ರದೇಶದಿಂದ ಬಂದ ಸಿದ್ಧಲಿಂಗಯ್ಯನವರು ಮಾರ್ಕ್ಸ್‌ವಾದಕ್ಕೆ ಒಲಿದು ಪದ್ಯವನ್ನೇ ತಮ್ಮ ಮಾಧ್ಯಮವನ್ನಾಗಿ ಆಯ್ಕೆ ಮಾಡಿಕೊಂಡಿರುವುದು ದೇವನೂರು ಅವರು ಗ್ರಾಮೀಣ ಪ್ರದೇಶದಿಂದ ಬಂದು ಲೋಹಿಯಾ ವಾದವನ್ನು ಅಪ್ಪಿಕೊಂಡು ಗದ್ಯವನ್ನು ತಮ್ಮ ಮಾಧ್ಯಮವನ್ನಾಗಿ ಆಯ್ಕೆ ಮಾಡಿಕೊಂಡದ್ದು ಅವರವರ ದೃಷ್ಟಿಗಳಲ್ಲೂ ಅನಿವಾರ್ಯವೂ ಮತ್ತು ಸರಿಯಾದ ಆಯ್ಕೆಗಳೂ ಆಗಿರಬಹುದು.

ಅಧುನೀಕರಣ ಮಾತ್ರವೇ ದಲಿತರಿಗೆ ಬಿಡುಗಡೆಯ ಮಾರ್ಗ ಎಂದವರು ಡಾ॥ ಅಂಬೇಡ್ಕರ್. ಈ ಮೂಲ ಚಿಂತನೆಗಳೇ ದಲಿತರ ಬರಹಗಳಲ್ಲಿ ವಿವಿಧ ವಿನ್ಯಾಸಗಳಾಗಿ ಅನುಭವ ದ್ರವ್ಯವಾಗಿ ಅಭಿವ್ಯಕ್ತಿ ಪಡೆದಿವೆ. ಸಿದ್ಧಲಿಂಗಯ್ಯ, ಅರವಿಂದ

ಮಾಲಗತ್ತಿ, ಮುನಿ ವೆಂಕಟಪ್ಪ, ಮ.ನ. ಜವರಯ್ಯ ಎಲ್. ಹನುಮಂತಯ್ಯ, ಮುಳ್ಳೂರ ನಾಗರಾಜ, ಇಂದೂಧರ ಹೊನ್ನಾಪುರ, ಗಂಗಾರಾಂ ಚಂಡಾಳ, ಕೆ.ಬಿ.ಸಿದ್ಧಯ್ಯ, ಹೂಸೂರ ಮುನಿಶಾಮಪ್ಪ, ಜಂಬಣ್ಣ ಅಮರಚಿಂತ, ಬಿ. ಚಿನ್ನಸ್ವಾಮಿ, ಗೋವಿಂದಯ್ಯ, ಸುಬ್ಬು ಹೊಲೆಯಾರ್, ಕೆ. ರಾಮಯ್ಯ ಇವರ ಕಾವ್ಯದ ಮೂಲ ಆಶಯ ಪರಂಪರೆ ಕುರಿತ ತೀವ್ರ ವಿರೋಧ. ಯಾವ ಯಾವ ಮಾದರಿಗಳಲ್ಲಿ ನಮೂನಿಗಳಲ್ಲಿ ಅಭಿವ್ಯಕ್ತಿ ಪಡಕೊಂಡಿದೆ ಎಂಬುದನ್ನು ಸೋದಾಹರಣವಾಗಿ ಚರ್ಚಿಸಲು ಹೋಗುವ ಅವಶ್ಯಕತೆ ಇಲ್ಲ.

ಆಶ್ಚರ್ಯವೆಂದರೆ ಹೀಗೆ ಆರಂಭದಲ್ಲಿ ಪರಂಪರೆಯನ್ನು ವಿರೋಧಿಸುತ್ತಿದ್ದ ದಲಿತಕಾವ್ಯ ಈಚಿನ ವರ್ಷಗಳಲ್ಲಿ ತನ್ನದೇ ಆದ ಒಂದು ಪರ್ಯಾಯ ಪರಂಪರೆಯೊಂದನ್ನು ನಿರ್ಮಿಸಿಕೊಳ್ಳುವ ತವಕ ಪ್ರಕಟಿಸುತ್ತಿದೆ. ಭೂತಕಾಲವನ್ನು ಶಾಪ ಎಂದು ತಿಳಿದಿದ್ದ ದಲಿತರು ಅಲ್ಲಿಯೂ ಮರೆಮಾಡಲ್ಪಟ್ಟ ಇನ್ನೊಂದು 'ಭೂತ' ಅಡಗಿರುವುದನ್ನು ಕಾಣತೊಡಗಿದರು."

ದಲಿತ ಪದ್ಯಗಳನ್ನು ಗಮನಿಸಿದರೆ ಇಲ್ಲಿ ದಲಿತ ಜನಾಂಗದ ಅನುಭವಗಳು ಆಕ್ರೋಶಗಳಾಗಿ ಸಿಡಿದಿವೆ. ಸಂಘಟನೆ, ಹೋರಾಟ ಮೊದಲಾದ ಕ್ರಿಯಾತ್ಮಕ ಕ್ರಿಯೆಯತ್ತ ಮುಖಮಾಡಿವೆ. ಹೀಗಾಗಿ ದಲಿತ ಕಾವ್ಯ ಇಡೀ ಕನ್ನಡ ಕಾವ್ಯ ಜಗತ್ತಿಗೇ ಸಡ್ಡು ಹೊಡೆದು ಹೋರಾಟಗಳನ್ನೇ ಹಾಡು ಮಾಡಿದಂತವು. ಹಾಗಾಗಿ ಇವು ಓದುವ ಕವಿತೆಗಳಲ್ಲ ಬಹುತೇಕ ಹಾಡುವ ಕವಿತೆಗಳು. ಒಂದುರೀತಿಯಲ್ಲಿ ಭಕ್ತಿ ನಿವೇದನೆ ಮಾಡುತ್ತಿದ್ದ, ನಡುಗನ್ನಡ ಕವಿತೆಗಳಂತೆ, ಆನಂದದ ನಿವೇದನೆ ಮಾಡುತ್ತಿದ್ದ ನವೋದಯದ ಪ್ರಕೃತಿ ಕವಿತೆಗಳಂತೆ ಇವು ತಮಗಾದ ನೋವನ್ನ, ಅವಮಾನವನ್ನ, ಸಂಕಟ ಮತ್ತು ಸಿಟ್ಟುಗಳನ್ನ ನಿವೇದಿಸಿಕೊಳ್ಳುವ ಕವಿತೆಗಳಿವು.

"ದಲಿತ ಸಾಹಿತ್ಯ ೯೦ರ ದಶಕದಲ್ಲಿ ತನ್ನ ಪರ್ಯಾಯ ನೆಲೆಗಳನ್ನು ಹುಡುಕಿಕೊಂಡದ್ದು ಈಗ ಚರಿತ್ರೆ. ದಲಿತ ಮತ್ತು ಬಂಡಾಯದ ನಡುವೆ ಅಂತಹ ಅಂತರವೇನಿಲ್ಲ. 'ದಲಿತ' ಅನನ್ಯತೆಯಾದರೆ 'ಬಂಡಾಯ' ಅವರ ಆಶಯವಾಗಿತ್ತು. ಕಳೆದ ಮೂವತ್ತು ವರ್ಷಗಳ ಹಿನ್ನೆಲೆ ಹೊಂದಿರುವ ಕನ್ನಡದ ದಲಿತ ಸಾಹಿತ್ಯ ಅದ್ಭುತ ಸಾಧನೆ ಮಾಡಿದೆ. ಹಲವು ಚಳುವಳಿಗಳನ್ನು ಸಂಘಟಿಸಿದೆ. ಅನೇಕ ಹೋರಾಟಗಳನ್ನು ರೂಪಿಸಿದೆ. ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ಅಸಮಾನತೆಯ ವಿರುದ್ಧ ಸಂಘರ್ಷ ಸಾರಿದೆ. ಒಟ್ಟಾರೆ ಶತಶತಮಾನಗಳಿಂದಲೂ ತನ್ನ ಮೇಲಾದ ಮಾಯದ ಗಾಯಗಳನ್ನು ನೆನಪಿಸಿಕೊಂಡಿದೆ. ಆ ಗಾಯದ ನೋವುಗಳನ್ನು ಸಾಹಿತ್ಯವಾಗಿಸಿದೆ. ಇಂಥ ಚಾರಿತ್ರಿಕ ಒತ್ತಡಗಳ ನಡುವೆ ಹುಟ್ಟಿಕೊಂಡ ಕನ್ನಡ ದಲಿತ ಸಾಹಿತ್ಯಕ್ಕೆ ತನ್ನದೆ ಆದ ರೂಪ, ಸ್ವರೂಪ, ಸಿದ್ಧಾಂತ, ಸಂಘರ್ಷ ಸಾಮರಸ್ಯದ ಸ್ವರೂಪಗಳಿವೆ. ಇವು ಪಕ್ಕದ ಮರಾಠಿ, ತೆಲುಗು, ದಲಿತ ಸಾಹಿತ್ಯವನ್ನು ಮೂರನೆಯ ರಾಷ್ಟ್ರದ ಕಪ್ಪು ಸಾಹಿತ್ಯವನ್ನು ನೆನಪಿಸುತ್ತವೆ."[೧]

"ದಲಿತ ಕಾವ್ಯ ಕಣಜ, ಏಕಲವ್ಯ, ಶಂಬೂಕ, ಅಹಲ್ಯೆ, ರೇಣುಕೆಯರ ಆಕೃತಿಗಳನ್ನು ತನಗೆ ಮೂಲ ನೆಲೆಯಾಗಿ ಚೈತನ್ಯದ ಸೆಲೆಯಾಗಿ ತೆಗೆದುಕೊಂಡಿದೆ. ಅದೇ ಸಂದರ್ಭದಲ್ಲಿ ದ್ರೋಣ, ಅರ್ಜುನ, ಜಮದಗ್ನಿ, ಗೌತಮರ ಆಕೃತಿಗಳನ್ನು ಛಿದ್ರಿಸಿದೆ."[೨]

ಇದುವರೆಗಿನ ಚರಿತ್ರೆಯ ಬಗ್ಗೆ ದಲಿತಕಾವ್ಯಕ್ಕೆ ತುಂಬಾ ಸಿಟ್ಟಿದೆ. ಏಕೆಂದರೆ ಯಾರಿಂದಲೊ ಬರೆಯಲ್ಪಟ್ಟ ಆ ಚರಿತ್ರೆಯಲ್ಲಿ ತನ್ನ ಸಮುದಾಯದ ಯಾವ ಸಂವೇದನೆಯೂ ದಾಖಲಾಗದಿರುವುದು ಈ ಸಿಟ್ಟಿಗೆ ಕಾರಣ. ಆದರೂ ಆ ಚರಿತ್ರೆಯಲ್ಲಿ ಸೇರದ ತನ್ನದೇ ಆದ ಕೆಲಸ್ಫೂರ್ತಿಗಳಿವೆ. ಅಂಬೇಡ್ಕರ್ ಅಂತಹ ಸ್ಫೂರ್ತಿಸೆಲೆ.

ದಲಿತ ಕಾವ್ಯಕ್ಕೆ ವಾಸ್ತವ ಯಾವಾಗಲೂ ನಿಂತು ನೆನಪಿಸಿಕೊಳ್ಳುವ ನೋವಿನ ಗತದ ಅನುಭವಗಳಾಗಿವೆ. ಇದು ಬರೀ ಕಾವ್ಯ ಮಾತ್ರ ಅಲ್ಲ ಇಲ್ಲಿ ದಲಿತ ಸಂಘರ್ಷ ಸಮಿತಿ ಇದೆ. ಬಂಡಾಯಕಾವ್ಯದ ಕಾವು ಇದೆ. ಜೊತೆಗೆ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್‌ದ ಪ್ರಭಾವವಾಗಿರುವಂತೆ ಅಂದ್ರದ ದಿಗಂಬರ ಕಾವ್ಯದ ಪ್ರೇರಣೆಯೂ ದೊರಕಿದೆ.

"ಆಧುನಿಕ ದಲಿತ ಕಾವ್ಯವು ಡಿ. ಗೋವಿಂದದಾಸ ಅವರಿಂದ ಪ್ರಾರಂಭವಾಗಿದ್ದರೂ ಕೂಡ ಅದು ಚಳುವಳಿಯ ಕಾವ್ಯವಾಗಿ ಮೊಟ್ಟ ಮೊದಲು ಪ್ರಕಟವಾದದ್ದು ಡಾ.ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' ಕವನ ಸಂಕಲನದ ಮೂಲಕವೆಂಬ ಸಂಗತಿಯನ್ನು ಗಮನಿಸಬೇಕಾಗುತ್ತದೆ."[೩]

ಅನೇಕ ದಲಿತ ಕವಿಗಳ ಮೇಲೆ ಜನಪದದ ದಟ್ಟ ಪ್ರಭಾವವಾಗಿವೆ. ಜನಪದದ ಲಯಗಾರಿಕೆ, ನುಡಿಗಟ್ಟನ್ನು ಕಸಮಾಡಿ ದಲಿತ ಕವಿಗಳು ತಮ್ಮ ಕಾವ್ಯೋದ್ದೇಶಕ್ಕಾಗಿ ದುಡಿಸಿಕೊಂಡಿದ್ದಾರೆ. ಆದರೆ ಯಥಾಸ್ಥಿತಿಯನ್ನು ಒಪ್ಪಿಕೊಂಡು ಬದುಕನ್ನು ಬಂದಂತೆ ಸ್ವೀಕರಿಸುವ ಜಾನಪದರಿಗೂ ಅಸಮಾನತೆಯ ವ್ಯವಸ್ಥೆಯ ವಿರುದ್ಧ ಬಂಡೆದ್ದು ಚಳುವಳಿ ಹೂಡಿದ ದಲಿತ ಕವಿಗಳಿಗೂ ಮೂಲಭೂತ ವ್ಯತ್ಯಾಸಗಳಿವೆ.

ಕವಿ ಸಿದ್ಧಲಿಂಗಯ್ಯ : ಕವಿ ಸಿದ್ಧಲಿಂಗಯ್ಯನವರ ಕುರಿತಂತೆ ಕೆಲವರ ಮಾತುಗಳ ಮೂಲಕವೇ ಅವರ ಕಾವ್ಯಲೋಕಕ್ಕೆ ಪ್ರವೇಶಿಸುವುದು ಸುಲಭವಾಗಬಹುದು

ಪ್ರೀತಿ ಕ್ರಾಂತಿಯಕವಿ (ಡಾ. ವಿವೇಕ ರೈ)

"ಅವರು ಎರಡೂಕಡೆಗಳಲ್ಲಿ ಕವಿಯೂ ಹೌದು, ಶಾಸಕರೂ ಹೌದು. ಶಾಸಕರೆಂದರೆ ಶಾಸನ ಮಾಡುವವರಲ್ಲ; ಬದಲಾಗಿ ಬಡತನ ನೋವಿನ ಎಲ್ಲ ಜನವರ್ಗದ ಕಷ್ಟಗಳಿಗೆ ಸ್ಪಂದಿಸುವವರು. ಪರಿಹಾರದ ದಾರಿಗಳನ್ನು ಹಸನು

[illegible]

ಮಾಡುವವರು. ಶಾಸಕರ ಭವನದಲ್ಲಿ ಅವರ ಕೋಣೆ ಸದಾ ನೂರಾರು ಬಡವರ ಆಶ್ರಯ ತಾಣವಾಗಿತ್ತು. ಕವಿಗಳು ತಮ್ಮ ಕಿಸೆಯಿಂದಲೇ ಹಣಕೊಟ್ಟು ಕಾಫಿ ತಿಂಡಿ ತರಿಸಿ, ಊಟಕೊಟ್ಟು ಅವರ ಮನವಿಗಳನ್ನು ಟೈಪು ಮಾಡಿಸಿ, ಅವುಗಳ ಪರಿಹಾರದ ಮಾರ್ಗಗಳನ್ನು ತೋರಿಸಿಕೊಡುತ್ತಿದ್ದರು. ಅವರ ಕೆಲಸಕ್ಕಾಗಿ ತಮ್ಮ ವೇಳೆ, ಹಣ ಮತ್ತು ಮನಸ್ಸನ್ನು ಮೀಸಲಾಗಿಟ್ಟಿದ್ದರು. ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಹಗಲು ರಾತ್ರಿ ಚಿಂತೆಯಿಲ್ಲದೆ ಜನರೊಡನೆ ಬೆರೆಯುತ್ತಿದ್ದರು. ಕಷ್ಟ ಸುಖ ವಿಚಾರಿಸುತ್ತಿದ್ದರು. ಇವೆಲ್ಲವನ್ನು ಕವಿಮನಸ್ಸಿನಿಂದ ಮಾಡುತ್ತಿದ್ದರು. ಅನೇಕ ಸಮಸ್ಯೆಗಳಿಗೆ ಸೃಜನಶೀಲ ಪರಿಹಾರಗಳನ್ನು ಕಂಡುಕೊಳ್ಳುತ್ತಿದ್ದರು. ಇಷ್ಟೆಲ್ಲ ಮಾಡಿದ ಬಳಿಕವೂ ತಾವು ಯಾವ ಸೋಗು, ಪ್ರದರ್ಶನ, ತೋರಿಕೆ ಇಲ್ಲದೆ ಬಹಳ ಸಹಜವಾಗಿ ನಿರಾಳವಾಗಿ ಇರುತ್ತಿದ್ದರು. ಒಬ್ಬ ತತ್ತ್ವಜ್ಞಾನಿಯ ಶಾಂತತೆ ಎಲ್ಲ ಸಂದರ್ಭಗಳಲ್ಲಿಯೂ ಸಿದ್ಧಲಿಂಗಯ್ಯನವರಲ್ಲಿ ನಾನು ಕಂಡ ಅಪೂರ್ವ ಶಕ್ತಿ.

ತಮ್ಮ ಆಕಾರವಾಗಲೀ, ವೇಷಭೂಷಣವಾಗಲೀ ಅವರಿಗೆ ಘನತೆಯನ್ನು ತಂದುಕೊಡುವ ಸಾಧನಗಳಲ್ಲ. ಅವರ ಚಿಂತನೆ, ಧೋರಣೆ, ನೇರಮಾತು ಮತ್ತು ನಿರ್ಧಾರ ಇವು ಗೊಮ್ಮಟ ಗಾತ್ರದವು. ಹಾಗಾಗಿ ಅವರು ಮನುಷ್ಯರನ್ನು ಬಹಳ ಸೂಕ್ಷ್ಮವಾಗಿ ಮಾಪನ ಮಾಡಬಲ್ಲವರಾಗಿದ್ದರು. ಜನರ ಶಕ್ತಿ ಹಾಗೂ ಮಿತಿಗಳನ್ನು ಕೆಲವೇ ಕ್ಷಣಗಳಲ್ಲಿ ಗ್ರಹಿಸುವ ಅದ್ಭುತಶಕ್ತಿ ಕವಿಗಳದ್ದು. ಸಿದ್ಧಲಿಂಗಯ್ಯನವರೊಂದಿಗೆ ಸ್ವಲ್ಪಕಾಲ ಕಳೆಯುವುದೆಂದರೆ ನಮ್ಮ ಮಿದುಳನ್ನು ಸ್ವಚ್ಛಗೊಳಿಸಿದಂತೆ ಅಲುಗಾಡಿಸಿದಂತೆ. ಸಿಟ್ಟು ಮತ್ಸರ ಇಲ್ಲದೆಯೂ ಮನುಷ್ಯ ಇರಬಹುದು ಎನ್ನುವ ಬೆರಗಿಗೆ ಸಿದ್ಧಲಿಂಗಯ್ಯ ಒಂದು ರೂಪಕ. ಕ್ರಾಂತಿ ಮತ್ತು ಪ್ರೀತಿಯನ್ನು ಅಭಿನ್ನವೆಂದು ತಿಳಿದ ಮತ್ತು ಬದುಕುತ್ತಿರುವ ಕವಿ ಗೆಳೆಯ ಸಿದ್ಧಲಿಂಗಯ್ಯ ಬೆಳೆಯುತ್ತಲೇ ಮಗುವಾಗುತ್ತ ಹೋಗುವ ನಮ್ಮ ನಡುವಿನ ಒಂದು ಅದ್ಭುತ."[೨]

ಹೋರಾಟದ ಕಿಚ್ಚು ಆರದಿರಲಿ: (ಡಾ.ಸುಭಾಷ್ ಭರಣಿ)

"ಬಹುಶಃ ಕರ್ನಾಟಕದಲ್ಲಿ ಅತಿ ಹೆಚ್ಚು ಜನರಿಗೆ ತಲುಪಿಸುವ ಸಾಮಾಜಿಕ ಜಾಗೃತಿಯ ಹಾಡುಗಳನ್ನು ಬರೆದ ಜನಪರ ಕವಿಯೆಂದರೆ ಡಾ. ಸಿದ್ಧಲಿಂಗಯ್ಯನವರೇ ಎಂಬುದು ನನ್ನ ಅಭಿಪ್ರಾಯ. ಅದರಲ್ಲೂ ತುರ್ತುಪರಿಸ್ಥಿತಿಯ ನಂತರದ ದಿನಗಳಲ್ಲಂತೂ ನಾಡಿನ ಹಳ್ಳಿಹಳ್ಳಿಗಳಲ್ಲಿ ಸಿದ್ಧಲಿಂಗಯ್ಯನವರ ಹಾಡುಗಳಿಲ್ಲದೆ ಯಾವುದೇ ದಲಿತ ಸಮಾರಂಭಗಳು ನಡೆಯುತ್ತಲೇ ಇರಲಿಲ್ಲ. ಈ ದಲಿತ ಕವಿಯ ಹಾಡುಗಳನ್ನ ಹಾಡುತ್ತಲೇ ನಮ್ಮಲ್ಲಿ ಎಷ್ಟೋ ಮಂದಿ ಹಾಡುಗಾರರೂ ಕೂಡ ರೂಪುಗೊಂಡರೆಂದರೆ ಅವರ ಪ್ರಭಾವ ಮತ್ತು ಪ್ರಸಿದ್ಧಿ ಎಷ್ಟೆಂದು ನಾವು ಊಹಿಸಬಹುದಾಗಿದೆ.

ನನಗೆ ತಿಳಿದ ಮಟ್ಟಿಗೆ ಕನ್ನಡದಲ್ಲಿ ಕೈಲಾಸಂ ಅವರ ನಂತರ ಆ ಪ್ರಮಾಣದ ಹಾಗೂ ಉತ್ತಮ ಅಭಿರುಚಿಯ ಹಾಸ್ಯ ಪ್ರಜ್ಞೆಯುಳ್ಳ ಲೇಖಕ ಭಾಷಣಕಾರರು ಖಂಡಿತ ಸಿದ್ಧಲಿಂಗಯ್ಯನವರೇ.

ಕಾವ್ಯದಲ್ಲಿ ಸಿದ್ಧಲಿಂಗಯ್ಯನವರು ಖಂಡಿತವಾಗಿಯೂ ಒಬ್ಬ ಟ್ರೆಂಡ್ ಸೆಟ್ಟರ್ ಎಂದೇ ನಾನಂತೂ ಭಾವಿಸಿದ್ದೇನೆ.

ವಿಧಾನಪರಿಷತ್ತಿನ ಸದಸ್ಯರಾಗಿ ಮಾಡಿರುವ ಪ್ರಜ್ಞಾವಂತಿಕೆಯ ಸಾಧನೆಗಳು ಕೂಡ ಅವರ ಜನಪರ ಕಾಳಜಿಗಾಗಿ ಕನ್ನಡಿ ಹಿಡಿಯುವಂತಿದೆ. ದಲಿತ ಸಮುದಾಯದ ಬಗ್ಗೆ ವಿಶೇಷವಾಗಿಯೂ, ಎಲ್ಲಾ ಶೋಷಿತ ವರ್ಗಗಳ ಪರವಾದ ನೆಲೆಗಳಿಂದಲೂ ಸಿದ್ಧಲಿಂಗಯ್ಯನವರು ಹಲವರ ಗಮನ ಸೆಳೆಯುವಂತಹ ಅಭಿವೃದ್ಧಿಗೆ ಪೂರಕವಾಗುವಂತಹ ಕಾಯಿದೆ ಕಾನೂನುಗಳಿಗೆ ಕಾರಣರಾಗಿದ್ದಾರೆ."[೨]

"ಜಾತಿ ಹಾಗೂ ವರ್ಗಗಳೆರಡರಲ್ಲಿಯೂ ಅತೀ ತಳಭಾಗದಲ್ಲಿದ್ದ ಅವರು ಎಲ್ಲನೋವು, ಅವಮಾನ ಹಾಗೂ ಆತಂಕಗಳನ್ನೂ ಸ್ವತಃ ಅನುಭವಿಸಿದವರು. ಅವರು ಕವಿ ಹೃದಯ ಹೊಂದಿದವರಾಗಿದ್ದರಿಂದ ಇಡೀ ಜಗತ್ತಿನ ತುಳಿತಕ್ಕೆ ಒಳಗಾದ ಎಲ್ಲ ಸಮುದಾಯಗಳ ನೋವಿನ ಕವಿತೆಗಳನ್ನು ರಚಿಸಿದರು. ಅವುಗಳಲ್ಲಿ ೭೫ರಲ್ಲಿ ಪ್ರಕಟವಾದ ಹೊಲೆ ಮಾದಿಗರ ಹಾಡು, ೭೯ರಲ್ಲಿ ಪ್ರಕಟವಾದ ಸಾವಿರಾರು ನದಿಗಳು ೮೫ರಲ್ಲಿ ಪ್ರಕಟವಾದ ಕಪ್ಪುಕಾಡಿನ ಹಾಡು, ೨೦೦೦ರಲ್ಲಿನ ಹೊಸಕವಿತೆಗಳು ಪ್ರಮುಖವಾದವುಗಳು."

–ಡಾ. ಬಾಬುರಾವ್ ಮುಡಬಿ

"ಎಪ್ಪತ್ತರ ದಶಕದ ಆದಿಯಲ್ಲಿ ದೇವರಾಜ ಅರಸು ಸರ್ಕಾರ ಅಸ್ತಿತ್ವದಲ್ಲಿತ್ತು. ಆಗ ಘೋರ್ಪಡೆ ಅವರು ಹಣಕಾಸು ಸಚಿವರಾಗಿದ್ದರು. ಅವರು ವಿಧಾನಸೌಧದಲ್ಲಿ ಹಣಕಾಸು ಬಜೆಟ್‌ನ್ನು ಮಂಡಿಸುತ್ತಿರುವಾಗ ಸಿದ್ಧಲಿಂಗಯ್ಯನವರ ಮುಖಂಡತ್ವದಲ್ಲಿ ವಿಧಾನಸೌಧದ ಗ್ಯಾಲರಿಯಲ್ಲಿ ಕರಪತ್ರವನ್ನು ತೂರಿ "ಜನ ವಿರೋಧಿ ಬಜೆಟ್‌ಗೆ ದಿಕ್ಕಾರ" ಎಂದು ಕೂಗಿ ದಸ್ತಗಿರಿಗೆ ಒಳಗಾಗಿದ್ದುಂಟು. ಇಂತಹ ಧೈರ್ಯ, ಆತ್ಮವಿಶ್ವಾಸ, ಮುನ್ನೋಟ ಆಗಲೇ ಸಿದ್ಧಲಿಂಗಯ್ಯನವರಿಗೆ ಮತ್ತು ಅವರ ಗೆಳೆಯರಿಗೆ" ಇತ್ತು.

ಕರಿಗೌಡ ಬೀಚನಳ್ಳಿ : ಸಹಪಾಠಿ ಸಿದ್ಧಲಿಂಗಯ್ಯ

"ಅವರ ಕವಿತೆಗಳಲ್ಲಿ ಆಕ್ರೋಶ ವ್ಯಕ್ತವಾದರೂ ಅದು ವೈಯಕ್ತಿಕವಾದ ಆಕ್ರೋಶ, ಸಿಟ್ಟಾಗಿರಲಿಲ್ಲ. ಮನುಷ್ಯ ಸಂಬಂಧಗಳನ್ನು ಬೆಸೆಯುವ ಜಾತಿ, ಅಸ್ಪೃಶ್ಯತೆ ತೊಡೆದು ಹಾಕುವುದರತ್ತ ಅವರ ಕಾವ್ಯ ಹೆಜ್ಜೆ ಹಾಕಿತ್ತು. "ಒಂದೊಂದು ಜೀವದಲ್ಲಿ ಎದೆಯಂತರಾಳದಲ್ಲಿ ಅಡಗಿಹುದು ಪರಿಶುದ್ಧ ಧರ್ಮಸತ್ವ" ಎಂಬ ಕಾವ್ಯದ

ಸಾಲುಗಳನ್ನು ಅವರು ಬರೆದಿದ್ದಾರೆಯೇ ಹೊರತು ಇಂತಹ ಜೀವಪರವಾದ ಧರ್ಮಕ್ಕೆ ಆಪತ್ತು ಬಂದಾಗ ಮಾನವತೆ ಎಚ್ಚೆತ್ತುಕೊಳ್ಳಬೇಕೆಂದು ಆಶಿಸುವ ಕಾವ್ಯವನ್ನು ಸೃಷ್ಟಿಸಿದ್ದಾರೆಯೇ ಹೊರತು; ವ್ಯಕ್ತಿ ದ್ವೇಷವನ್ನು ಪ್ರಕಟಿಸುವ ಯಾವ ಕವಿತೆಯನ್ನು ಸಿದ್ಧಲಿಂಗಯ್ಯನವರು ಬರೆದಂತೆ ನನಗೆ ಕಂಡಿಲ್ಲ. ಅವರ ಕವಿತೆಗಳು ವ್ಯಕ್ತಿ ನಿರಪೇಕ್ಷ ಅಭಿವ್ಯಕ್ತಿಯ ಬಲಿಷ್ಠ ಪ್ರತಿಮೆಗಳಾಗಿವೆ. ಅಸ್ಪೃಶ್ಯತೆ ಮತ್ತು ಅಸಮಾನತೆ ಮೇಲೆ ಜೀವಿಸುವ ಸಮುದಾಯದ ಒಂದು ಸಾಂಸ್ಕೃತಿಕ ನೆಲೆಯನ್ನು ಅವರ ಕಾವ್ಯ ನಿರ್ಮಿಸಿದೆ. ಅವರ ಈ ನಿರ್ಮಿತ ಪ್ರತಿಭೆ ಎಲ್ಲ ದಲಿತ ಸಮುದಾಯವನ್ನು ಒಗ್ಗೂಡಿಸುವ, ಒಂದೇ ದನಿಯಲ್ಲಿ ಕೂಗುವ ತೀವ್ರ ಸಾಮರ್ಥ್ಯವನ್ನು ಅನನ್ಯತೆಯನ್ನು ಪಡೆದಿವೆ."[೨]

ಸಿದ್ಧಲಿಂಗಯ್ಯನವರ ಚಿಂತನೆ ಮತ್ತು ಹೋರಾಟದ ರೂಪಕ: (ಶೂದ್ರ)

"ಸುಮಾರು ಎರಡು ದಶಕಗಳ ಕಾಲದಲ್ಲಿ ಸಿದ್ಧಲಿಂಗಯ್ಯ ಕರ್ನಾಟಕದ ಸಾವಿರಾರು ವಿದ್ಯಾವಂತ ಮತ್ತು ಅವಿದ್ಯಾವಂತ ಮನಸ್ಸುಗಳಿಗೆ ಚೇತೋಹಾರಿಯಾಗಿ ನಿಂತರು. ಈ ಕಾರಣಕ್ಕಾಗಿಯೇ ಅವರ 'ಹೊಲೆಮಾದಿಗರ ಹಾಡು' ಕವನ ಸಂಕಲನ ಒಟ್ಟು ದಲಿತ ಚಳುವಳಿಗೆ 'ಮ್ಯಾನಿಫೆಸ್ಟೋ' ಪಾತ್ರವನ್ನು ನಿರ್ವಹಿಸಿತ್ತು. ಈ ಕೃತಿಯಿಂದ ವಿದ್ಯಾವಂತ ಯುವ ಮನಸ್ಸುಗಳು 'ನಾವು ಆ ರೀತಿಯಲ್ಲಿ ಬರೆಯಬೇಕು ಎಂದು ಕನಸು ಕಂಡರು. ಹಾಗೆಯೇ ಮೊದಲಬಾರಿಗೆ ಅಕ್ಷರ ಕಲಿತ ಮೇಲ್ವರ್ಗದವರಿಗೆ ಹೀಗೂ ಬರೆಯಲು ಮತ್ತು ಯೋಚಿಸಲು ಸಾಧ್ಯವಾ? ಎಂಬ ಪ್ರಶ್ನೆಯನ್ನು ಮುಂದಿಟ್ಟವು. 'ಹೊಲೆ ಮಾದಿಗರ ಹಾಡು' ಸಂಕಲನದ ಬಹುತೇಕ ಕವನಗಳನ್ನು ಶೂದ್ರದಲ್ಲಿ ಪ್ರಕಟಿಸುತ್ತಿದ್ದಾಗ ವಿಚಿತ್ರವಾದ ಉದ್ಗಾರಗಳನ್ನು ಎದುರಿಸಿದ್ದೇನೆ. ವೈಯಕ್ತಿಕವಾಗಿ ಅರಿಯುವ ದೃಷ್ಟಿಯಿಂದ ನನಗೆ ತುಂಬ ಅನುಕೂಲವಾಯಿತು.

ಸಿದ್ಧಲಿಂಗಯ್ಯ ಕವಿಯಾಗಿ ಮತ್ತು ಹೋರಾಟಗಾರನಾಗಿ ಬೆಳೆಯುವುದರ ಜೊತೆಗೆ ಅದ್ಭುತ ಭಾಷಣಕಾರರಾಗಿ ಬೆಳೆದರು. ನಮ್ಮ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ಇವರಷ್ಟು ವ್ಯಂಗ್ಯವನ್ನು ವಿಡಂಬನೆಯನ್ನು ಕಲಾತ್ಮಕವಾಗಿ ರೂಢಿಸಿಕೊಂಡ ಬೇರೆಯವರನ್ನ ಕಂಡಿಲ್ಲ."[೨]

ಸಿದ್ಧಪುರುಷ: (ಡಾ.ಬಾನಂದೂರು ಕೆಂಪಯ್ಯ)

"ಅಕ್ಕ ವೆಂಕಮ್ಮನ ಜೊತೆ ಆಗಾಗ್ಗೆ ಅವರ ಮಗ ಬಂದು ಹೋಗುತ್ತಿದ್ದ. ಅವನು ಶ್ರೀರಾಮಪುರದ ಸರ್ಕಾರಿ ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದ. ಈ ಹುಡುಗನ ಹೆಸರು ಸಿದ್ಧಲಿಂಗಯ್ಯ! ಇಂದಿನ ಪ್ರಸಿದ್ಧಕವಿ ಲೇಖಕ, ಮಾಜಿ ಶಾಸಕ, ಬೆಂಗಳೂರು

ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ. **ಬುದ್ಧ-ಬಸವ-ಅಂಬೇಡ್ಕರ್ ಮತ್ತು ಕಮ್ಯೂನಿಷ್ಟ್ ಸಿದ್ಧಾಂತಗಳನ್ನು** ಮೈಗೂಡಿಸಿಕೊಂಡ ಮಹತ್ವದ ಸಿದ್ಧಪುರುಷ. ಅಸಮಾನತೆಯ ವಿರುದ್ಧ ಸದಾ ಸಿಡಿದೇಳುವ ಕ್ರಾಂತಿಕಾರಿ. ಡಾ॥ ಸಿದ್ಧಲಿಂಗಯ್ಯ"[೨]

ದಲಿತ ಸಂಘರ್ಷ ಸಮಿತಿಯ ಪ್ರಮುಖ ಪಾತ್ರಧಾರಿಗಳಲ್ಲಿ ಸಿದ್ಧಲಿಂಗಯ್ಯನವರು ಒಬ್ಬರು. ಇದರ ಏಳ್ಗೆಗೆ ದುಡಿದವರಲ್ಲಿ ಅವರೂ ಒಬ್ಬರು. **ಸಿದ್ಧಲಿಂಗಯ್ಯನವರ ಹಾಡುಗಳನ್ನು ದಲಿತ ಸಂಘರ್ಷ ಸಮಿತಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಹಾಡಿ ಧ್ವನಿ ಮೊಳಗಿಸಿದವು. ಇಂತಹ ಕ್ರಾಂತಿಯ ವೇದಿಕೆಗಳಲ್ಲಿ ನನ್ನಂತಹ ಜನಪದ ಹಾಡುಗಾರರು ಬೆಳೆಯಲು ಅವಕಾಶ ದೊರಕಿತು.** ಆ ಕಾಲದ ದಲಿತ ಬುದ್ಧಿಜೀವಿಗಳಲ್ಲಿ ಸಿದ್ಧಲಿಂಗಯ್ಯನವರು ಅಂಬೇಡ್ಕರ್ ವಾದಿಯಲ್ಲ. ಅವರು ಕಮ್ಯುನಿಸ್ಟ್ ಎಂದು ಮಾತನಾಡಿಕೊಳ್ಳುತ್ತಿದ್ದರು. ಆ ಕಾಲಕ್ಕೇ ಇದು ವ್ಯಾಪಕ ಚರ್ಚೆಯಾಗಿತ್ತು. ಕಮ್ಯುನಿಸಂ ಮತ್ತು ಅಂಬೇಡ್ಕರಿಜಂ ಎರಡನ್ನು ಸ್ಥೂಲವಾಗಿ ಅಧ್ಯಯನ ಮಾಡಿ ಭಾರತೀಯ ಸಮಾಜದ ದಲಿತ ಸಮುದಾಯಕ್ಕೆ ಹೇಗೆ ಮುಕ್ತಿ ದೊರೆಯಬಹುದೆಂದು ವಿನೂತನ ರೀತಿಯಲ್ಲಿ ಯೋಚಿಸಿದ್ದು ನನಗೆ ನೆನಪು."[೨]

ವಿನಯ ಸಂಪನ್ನ: (ಮೂಡ್ನಾಕೂಡು ಚಿನ್ನಸ್ವಾಮಿ)

ಇವರನ್ನು ಅಜಾತಶತ್ರು ಎಂದರೆ ಕ್ಲೀಷೆಯಾಗಿ ಬಿಡಬಹುದು. ಇವರನ್ನು ದ್ವೇಷಿಸಲು ಅಸೂಯೆ ಪಡಲು ಕಾರಣವೇ ಇಲ್ಲವೆನ್ನುವಷ್ಟು ಬರಿದು ಅವರ ಬಂಡವಾಳ. ಈಗಲೂ ಕೆ.ಆರ್ ಮಾರುಕಟ್ಟೆಯ ಬಸ್‌ನಿಲ್ದಾಣದಲ್ಲಿ ಬಸ್ಸಿಗಾಗಿ ಕಾದು ನಿಲ್ಲ ಬಲ್ಲ ಸಾಮಾನ್ಯರಲ್ಲಿ ಸಾಮಾನ್ಯ. ಇವರೊಬ್ಬ ಅಸಮಾನ್ಯರ ಶ್ರೀಸಾಮಾನ್ಯ. ಕೀರ್ತಿ, ಹಣ, ಗಣ್ಯತ್ವಗಳಿಂದ ಮೈ ಕೊಡವಿಕೊಂಡು ಏಳುವುದು ಅಷ್ಟು ಸುಲಭವಲ್ಲ. ಅಂಥ ಸ್ಥಿತಪ್ರಜ್ಞತೆಯನ್ನು ಪಡೆಯಲು ಅವರು ಬದುಕಿನಲ್ಲಿ ಕಂಡುಂಡ ಕಷ್ಟಗಳೆಷ್ಟೋ. ಎನಗಿಂತ ಕಿರಿಯರಿಲ್ಲ ಎಂಬುದು ಅವರ ಅಂತರಂಗದ ನಿಲುವು. ಈ ಪ್ರತಿಮೆಯನ್ನು ಅವರು ತಮ್ಮ ದೇಹದಾರ್ಢ್ಯಕ್ಕೆ ಆರೋಪಿಸಿಕೊಂಡು ಸುತ್ತಲಿನವರನ್ನು ನಗಿಸಬಲ್ಲರು."[೨]

ಡಾ. ಚಂದ್ರಶೇಖರಕಂಬಾರ : "ಗೆಳೆಯ ಸಿದ್ಧಲಿಂಗಯ್ಯನ ಈ ಕವನಗಳ ಧಾಟಿ, ಧೋರಣೆ, ಶಬ್ದಕೋಶ, ಇಡಿಯಾಗಿ ಕನ್ನಡಕ್ಕೇ ಹೊಸದು ಭಾಷೆ ಈ ಥರ ಪಾರದರ್ಶಕವಾಗಬಹುದೆಂದು ತೋರಿಸಿ ಕೊಟ್ಟವನೇ ಅವನು. ಇವು ಕನ್ನಡಕ್ಕೆ ಹೊಸ ಆಯಾಮ ನೀಡಿದ ಕವಿತೆಗಳು."

ದೇವನೂರು ಮಹಾದೇವ : "ಕನ್ನಡ ಕಾವ್ಯ ಮುದಿಯಾಗಿ ಸತ್ತಿತು ಅನ್ನುವಷ್ಟರಲ್ಲಿ ಅಲ್ಲೇ ಹೊಸ ಚಿಗುರು ಕಾಣಿಸಿಕೊಂಡಿದೆ. ಅದು ಸಿದ್ಧಲಿಂಗಯ್ಯನವರ "ಹೊಲೆ ಮಾದಿಗರ ಹಾಡು" ಹೊಸ ಜಗತ್ತಿನಿಂದ ಎದ್ದ

ದನಿಯೆಂಬ ಕಾರಣಕ್ಕಾಗೊ ಏನೋ ಅನೇಕ ಸಾಹಿತ್ಯೇತರ ಸಮಸ್ಯೆಗಳಿಗೆ ಈ ಪುಟ್ಟ ಪುಸ್ತಕ ಉತ್ತರ ಕೊಡುತ್ತದೆ. ಎಷ್ಟೋ ಚರ್ಚೆ ಥಿಯರಿಗಳಿಗೆ ಸಿಲುಕದ ನಿಜವನ್ನು ಹೊಲೆಮಾದಿಗರ ಹಾಡು ತೋರಿಸಿಕೊಡುತ್ತದೆ. ಹೊಲೆಮಾದಿಗರ ಹಾಡು ಇಪ್ಪತ್ತನೆ ಶತಮಾನದ ಜಾನಪದ ಕಾವ್ಯ ಎನ್ನುವಂತಿದೆ. ಇದು ಹೊಸ ನೆಲದ ಮೊಳಕೆ. ಕಡೆಗಣಿಸಲ್ಪಟ್ಟ ಜಗತ್ತಿನ ಸಾಂಕೇತಿಕ ದನಿ. ಫಲವತ್ತು ತನವನ್ನು ಅದರ ಹುಟ್ಟಿನಲ್ಲೇ ಹುದುಗಿಸಿ ಕೊಂಡಂಥದು."[೨]

ಕವಿ ಸಿದ್ಧಲಿಂಗಯ್ಯನವರು ಈವರೆಗೆ ಒಟ್ಟು ನಾಲ್ಕು ಕವನ ಸಂಕಲನಗಳನ್ನು ಹೊರತಂದಿದ್ದಾರೆ. ಹೊಲೆಮಾದಿಗರ ಹಾಡು (೧೯೭೫), ಸಾವಿರಾರು ನದಿಗಳು (೧೯೭೯), ಕಪ್ಪುಕಾಡಿನಹಾಡು ಮತ್ತು ಮೂರೂ ಕವನ ಸಂಕಲನಗಳನ್ನು ಒಳಗೊಂಡಂತೆ ಹೊಸಕವಿತೆಗಳನ್ನು ಸೇರಿಸಿ ಮೆರವಣಿಗೆ (೨೦೦೦) ಎಂಬ ಸಮಗ್ರ ಕವನ ಸಂಕಲನವನ್ನು ಹೊರತಂದಿದ್ದಾರೆ.

ಸಿದ್ಧಲಿಂಗಯ್ಯನವರು ಕನ್ನಡದ ಪ್ರಸಿದ್ಧ ಕವಿಯೂ ಹೌದೆಂಬುದಕ್ಕೆ ಸಾಕ್ಷಿ ಎಂಬಂತೆ ಅವರ ಅನೇಕ ಕವಿತೆಗಳು ಇತರ ಭಾಷೆಗಳಿಗೂ ಅನುವಾದಗೊಂಡಿವೆ. ತೆಲುಗು, ತಮಿಳು, ಮರಾಠಿ ಭಾಷೆಗಳಲ್ಲದೆ ಅವು ಬಂಗಾಳಿ, ಹಿಂದಿ, ಇಂಗ್ಲಿಷ್ ಭಾಷೆಗೂ ಅನುವಾದಗೊಂಡಿವೆ.

ಬಾಲ್ಯದಿಂದಲೂ ಅವರಲ್ಲಿ ಕವಿತೆ ಚಿಗುರೊಡೆಯುತ್ತಿತ್ತು ಎಂಬುದನ್ನ ಅವರ 'ಊರುಕೇರಿ' ಆತ್ಮಕಥನವೇ ಹೇಳುತ್ತದೆ. ಹಾಸ್ಟಲ್‌ನಲ್ಲಿ ಮುದ್ದೆಕುರಿತು ಬರೆದ ಪದ್ಯ. ಬಿಳಿಗಿರಿ ರಂಗಯ್ಯನವರಿಗೆ ಓದಲು ನೀಡಿದ ಪದ್ಯಗಳೆಲ್ಲ ಅವರ ಆರಂಭಿಕ ರಚನೆಗಳು. ಸ್ಮಶಾನ ಮತ್ತು ಗ್ರಂಥಾಲಯಗಳು ಅವರಲ್ಲಿ ಕವನಗಳನ್ನ ತುಂಬು ಆಸಕ್ತಿಯಿಂದ ಓದುವ, ಬರೆಯುವ ಹವ್ಯಾಸ ಬೆಳಸಿದವು. ಅಂದಿನ ಕವಿತೆಗಳನ್ನು ಅವರು 'ಶಿಶುಗೀತೆಗಳು' ಎಂಬುದಾಗಿ ಕರೆದುಕೊಂಡಿದ್ದಾರೆ. ಅನಂತರದ ಅವರ ಓದು, ಪರಿಸರ, ಮತ್ತು ಹೋರಾಟಗಳು ಅವರಲ್ಲಿ ಕನ್ನಡದ ಕಾವ್ಯದ ದಿಕ್ಕನ್ನೇ ಬದಲಿಸುವ ಶಕ್ತಿಶಾಲಿ ಕವಿತೆಗಳ ಹುಟ್ಟಿಗೆ ಕಾರಣವಾದವು.

ಹೊಲೆ ಮಾದಿಗರ ಹಾಡು:

೭೦ರ ದಶಕವು ಕನ್ನಡ ಸಾಹಿತ್ಯಿಕ ಕಾಲದಲ್ಲಿ ಅನೇಕ ಕ್ರಾಂತಿಕಾರಕ ಬದಲಾವಣೆಯನ್ನು ತಂದಕಾಲ. ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ವಲಯಗಳಲ್ಲಿ ಹೊಸ ಸಂಕ್ರಮಣಗಳನ್ನು ತಂದಕಾಲ. ಒಟ್ಟು ಪರಂಪರೆಯನ್ನೇ ಆತ್ಮ ವಿಮರ್ಶೆಗೆ ಹಚ್ಚಿದಕಾಲ. ದಲಿತ ಸಂಘರ್ಷ ಸಮಿತಿ ಎಂಬ ಹೋರಾಟದ ಸಂಘಟನೆ ಹುಟ್ಟಿಕೊಂಡ ಈ ಕಾಲದಲ್ಲೆ ಸಿದ್ಧಲಿಂಗಯ್ಯನವರ ಬೆಂಕಿ ಉಂಡೆಯಂತಹ

ಸಿಟ್ಟಿನ ಜ್ವಾಲೆಗಳ ಕವನ ಸಂಕಲನ 'ಹೊಲೆ ಮಾದಿಗರ ಹಾಡು' ಪ್ರಕಟಗೊಂಡಿತು. ಡಾ.ಲಿಂಗದೇವರು ಹಳೆಮನೆಯವರು ಹೇಳುವಂತೆ "ಹಿಂದುಳಿದ ಜನಾಂಗದಿಂದ ಸಾಮಾಜಿಕ ಮನ್ನಣೆಗೆ ಸಮಾನತೆಗೆ ಅನರ್ಹರೆಂದು ಪರಿಗಣಿಸಲ್ಪಟ್ಟಿದ್ದ ಗುಂಪಿನಿಂದ ಸಿಡಿದೆದ್ದು ಈ ಸಮಾಜದಲ್ಲಿ ಅನ್ಯಾಯದ ವಿರುದ್ಧ ಹೋರಾಡುವುದಕ್ಕೆ ಸಿದ್ಧರಾಗಿ ನಿಂತ ಅನೇಕ ದಲಿತ ಯುವಕರು ಸಾಹಿತ್ಯ ಹಾಗೂ ಸಾಹಿತ್ಯೇತರ ಕ್ಷೇತ್ರಗಳಲ್ಲಿ ದುಡಿಯ ತೊಡಗಿದರು. ಹೀಗೆ ದುಡಿಯ ತೊಡಗಿದ ಹುಡುಗರ ಬಾಯಾಗಿ ನಿಂತ ಖ್ಯಾತಿ ಸಿದ್ಧಲಿಂಗಯ್ಯನವರಿಗೆ ಸಲ್ಲುತ್ತದೆ"[೨]

ಕನ್ನಡ ಕಾವ್ಯಜಗತ್ತು ಹಲವು ಬಾರಿ ತನ್ನ ದಿಕ್ಕನ್ನ ಬದಲಿಸುತ್ತಾ ಹೊಸ ಹೊಸ ರೂಪ ಪಡೆಯುತ್ತಾ ಹೋಗಿರುವುದನ್ನ ಕನ್ನಡ ಸಾಹಿತ್ಯ ಚರಿತ್ರೆ ಸಾಕ್ಷಿ ನೀಡುತ್ತದೆ. ಆಧುನಿಕ ಕಾಲದಲ್ಲಿ ಕುವೆಂಪು, ಬೇಂದ್ರೆ, ಅಡಿಗ, ಕಂಬಾರರ ನಂತರ ಸಿದ್ಧಲಿಂಗಯ್ಯ ಅಂತಹ ಛಾಪು ಮೂಡಿಸಿದ ಕವಿ. ಇವರ 'ಹೊಲೆಮಾದಿಗರ ಹಾಡು' ಕವನ ಸಂಕಲನದ ಹೆಸರೇ ಹೊಸದು ಯಾರೂ ತುಳಿಯದ ಹಾದಿಯ ನಿರ್ಮಾಣ ಅಷ್ಟು ಸುಲಭ ಅಲ್ಲ. ಅಂತಹ ಸಾಹಸಿ ಸಿದ್ಧಲಿಂಗಯ್ಯನವರು. ಕಾವ್ಯಕೇಂದ್ರಕ್ಕೆ ಹೊಲೆಮಾದಿಗರನ್ನ ತಂದ ಕೀರ್ತಿ ಅವರಿಗೇ ಸಲ್ಲಬೇಕು. "ದಲಿತ ಬರಹಗಾರ ಸಿದ್ಧಲಿಂಗಯ್ಯ ಈ ಇಂಡಿಯಾ ಶೋಷಿತ ಜನರನ್ನ ಪ್ರತಿನಿಧಿಸುವಂತೆ, ಅದರಲ್ಲೂ ಅತ್ಯಂತ ಹಿಂಸೆಗೆ ಗುರಿಯಾದ ಅಸ್ಪೃಶ್ಯರ ಮುಖವಾಣಿಯಂತೆ, ತಮ್ಮ ಬಂಡಾಯ ಕವನ ಸಂಕಲನವನ್ನು ನಿರ್ಭಯವಾಗಿ, ಸ್ವಾಭಿಮಾನದ ಸಿಡಿಲದನಿಯಲ್ಲಿ, ಅಮೇರಿಕಾದ ಕಪ್ಪು ಜನರು ತಮ್ಮನ್ನು ಆತ್ಮಪ್ರತ್ಯಯದಲ್ಲಿ ಕರಿಯರು– Blacks – ಎಂದುಕೊಂಡಂತೆ ಹೊಲೆಮಾದಿಗರ ಹಾಡು ಎಂದು ಕೂಗಿದ್ದಾರೆ. ಅವರು ತಮ್ಮನ್ನು ತಾವು ದೈನ್ಯದಲ್ಲಿ 'ಹರಿಜನರು' ಎಂದು ಹಲ್ಲು ಕಿರಿಯಲಿಲ್ಲ. ಸ್ವಾಭಿಮಾನದ ಸಿಡಿಲಿನಲ್ಲಿ 'ಹೊಲೆಮಾದಿಗ' ಎಂದು ಹಲ್ಲು ಕಡಿದಿದ್ದಾರೆ. ಎಂಬ ಪೋಲಂಕಿ ರಾಮಮೂರ್ತಿ ಅವರ ಮಾತುಗಳು, ಸಿದ್ಧಲಿಂಗಯ್ಯನವರ ಸ್ವಾಭಿಮಾನದ ಅಭಿವ್ಯಕ್ತಿ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಹೇಗೆ ಗರಿಗೆದರಿದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸುತ್ತವೆ. ಸಿದ್ಧಲಿಂಗಯ್ಯನವರು ಈ ಸಂಕಲನದ ಹಲವು ಕವಿತೆಗಳನ್ನು ೧೯೭೦ರಲ್ಲೇ ಬರೆದಿದ್ದರು. ಸಮಯ ಸಿಕ್ಕಾಗ ತಮ್ಮ ಸ್ನೇಹಿತರ ಮುಂದೆ ಈ ಕವಿತೆಗಳನ್ನು ಓದಿಹೇಳುತ್ತಿದ್ದರು. ಕವಿತೆಗಳನ್ನು ಕೇಳಿದ್ದ ಕೆಲವು ಗೆಳೆಯರು : 'ಇವು ಕ್ರಾಂತಿಕಾರಿ ಕವಿತೆಗಳು' ಇವನ್ನು ಪೋಲಿಸರಿಗೆ ತೋರಿಸಿದರೆ ತೊಂದರೆ ಆಗುತ್ತದೆ' ಎಂದು ಹೆದರಿಸಿದ್ದರು. ಒಮ್ಮೆ ಶೂದ್ರ ಶ್ರೀನಿವಾಸರು ಈ ಕವಿತೆಗಳನ್ನು ಓದಿಸಿ ಕೇಳಿ ಮೆಚ್ಚಿಕೊಂಡು, ೧೯೭೨-೭೩ರ ಅವಧಿಯಲ್ಲಿ ತಮ್ಮ 'ಶೂದ್ರ' ಪತ್ರಿಕೆಯಲ್ಲಿ 'ಹೊಲಗೇರಿ ಸಿದ್ಧಲಿಂಗಯ್ಯ' ಎಂಬ ಹೆಸರಿನಲ್ಲಿ ಕವಿತೆಗಳನ್ನು ಪ್ರಕಟಿಸಿದರು. ಪತ್ರಿಕೆಯಲ್ಲಿ ಕವಿತೆಗಳನ್ನು ಓದಿದ ಪರಿಚಿತರು ಸಿದ್ಧಲಿಂಗಯ್ಯನವರ ತಂದೆಗೆ 'ನಿಮ್ಮ

ಮಗ ಕ್ರಾಂತಿಕಾರಿ ಪದ್ಯಗಳನ್ನು ಬರೆದಿದ್ದಾನೆ. ಇದು ಪೋಲಿಸರಿಗೆ ಗೊತ್ತಾದರೆ ಅವನನ್ನು ಜೈಲಿಗೆ ಹಾಕುತ್ತಾರೆ' ಎಂದು ಹೆದರಿಸಿದರು. ಭಯಭೀತರಾದ ಇವರ ತಂದೆ ಮನೆಗೆ ಬಂದು ಕೈಗೆ ಸಿಕ್ಕ ಕೆಲವು ಪದ್ಯಗಳನ್ನು ಸುಟ್ಟುಹಾಕಿದರು. ಉಳಿದ ಪದ್ಯಗಳು ಹಾಗೂ ಅನಂತರದಲ್ಲಿ ಸಿದ್ಧಲಿಂಗಯ್ಯನವರು ಬರೆದ ಕವಿತೆಗಳನ್ನು ಓದಿ ಉತ್ಸುಕರಾದ ಕಿ. ರಂ. ನಾಗರಾಜ್, ಕಾಳೇಗೌಡ ನಾಗವಾರ, ಡಿ. ಆರ್.ನಾಗರಾಜ್ ಅವರು ಸೇರಿ ಮುಂಗಾರು ಪ್ರಕಾಶನದಲ್ಲಿ 'ಹೊಲೆಮಾದಿಗರ ಹಾಡು' ಸಂಕಲನವನ್ನು ಪ್ರಕಟಮಾಡಿದರು. ಕವಿ ಸಿದ್ಧಲಿಂಗಯ್ಯನವರು ತಮ್ಮ ಮೊದಲ ಈ ಕೃತಿಯನ್ನು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕೊಲೆಯಾದ ಗೆಳೆಯ ಹಾಗೂ ಸಮಾಜಮುಖಿ ಹೋರಾಟಗಾರ 'ಬಸವರಾಜು' ಅವರಿಗೆ ಅರ್ಪಿಸಿರುವುದು ಅರ್ಥಪೂರ್ಣವಾಗಿದೆ. ಒಂದು ವಾರದಲ್ಲೆ ಸಾವಿರಾರು ಪ್ರತಿಗಳು ಖರ್ಚಾದವು. ಹೀಗೆ ಆ ಸಂದರ್ಭದಲ್ಲಿ ಒಂದು ವಾರದಲ್ಲೆ ಒಂದು ಸಾವಿರ ಪ್ರತಿ ಖರ್ಚಾಗಿರುವುದು ಕನ್ನಡ ಸಾಹಿತ್ಯದ ಇತಿಹಾಸದಲ್ಲೆ ಅಪರೂಪವಾಗಿದೆ. ಪುಸ್ತಕ ಮಾರಾಟದಿಂದ ಬಂದ ಹಣದಲ್ಲಿ ಸ್ವಲ್ಪ ಹಣವನ್ನು ಕಾಳೇಗೌಡ ನಾಗವಾರ ಅವರು ರಾಯಲ್ಟಿ ಎಂದು ಸಿದ್ಧಲಿಂಗಯ್ಯನವರಿಗೆ ಕೊಟ್ಟರು. ಆ ಹಣದಿಂದ ಸಿದ್ಧಲಿಂಗಯ್ಯನವರು ಹಾಸ್ಟೆಲಿನಲ್ಲಿ ಉಳಿದಿದ್ದ ತಮ್ಮ ಊಟದ ಬಿಲ್ಲನ್ನು ಕಟ್ಟಿದರು."[೩]

ಮೇಲಿನ ಹೇಳಿಕೆಯು ಸಿದ್ಧಲಿಂಗಯ್ಯನವರ ಒಳಗಿನ ಶಕ್ತಿಯನ್ನು ಅವರ ಮಾನವೀಯ ಸ್ಪಂದನವನ್ನು ಸೂಚಿಸುತ್ತಲೇ ಅವರ ಬದುಕಿನ ದೀನ ಸ್ಥಿತಿಯನ್ನು ಬೆಟ್ಟು ಮಾಡಿ ತೋರುವಂತಿದೆ.

ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ತನ್ನ ಹೆಸರೇ ಸೂಚಿಸುವಂತೆ ದಲಿತರ ಶೋಷಣೆಯ ಕಥನವನ್ನು, ಸ್ವಾಭಿಮಾನವನ್ನು ಎದುರು ಬೀಳುವ ತನವನ್ನು ಕಟ್ಟಿಕೊಂಡು ನಿಂತಂತಿದೆ. ಇಲ್ಲಿ ಮನುಷ್ಯರಾಗಿ ಬಾಳಬೇಕೆಂಬ ಅಸ್ಪೃಶ್ಯರ ಎದೆಯಾಳದ ನೋವಿದೆ. ಹೊಲೆಮಾದಿಗರ ಶೋಷಿತ ಬದುಕೇ ಇಲ್ಲಿ ಕಾವ್ಯವಾಗಿದೆ. ತಾವು ಬಾಲ್ಯದಿಂದಲೂ ಅನುಭವಿಸಿದ ಹಸಿವು, ಬಡತನ, ನೋವು ಮತ್ತು ಹಿಂಸೆಗಳ ತೀವ್ರತೆಯೇ ಇಲ್ಲಿ ಕಾವ್ಯವಾಗಿದೆ.

ನಡುಗನ್ನಡ ಸಾಹಿತ್ಯದಲ್ಲಿ ಹಾಡುವ ಗದ್ಯ ಎಂಬ ಪ್ರಕಾರದಿಂದ ವಚನ ಸಾಹಿತ್ಯವೆಂಬ ವಿಶಿಷ್ಟ ಪ್ರಕಾರ ಹುಟ್ಟಿ ಕನ್ನಡ ಸಾಹಿತ್ಯದಲ್ಲಿ ಹೊಸತನವನ್ನು ತಂದಂತೆ ಹೊಸಗನ್ನಡ ಸಾಹಿತ್ಯದಲ್ಲಿ ಸಿದ್ಧಲಿಂಗಯ್ಯನವರ ಮೂಲಕ ಮತ್ತೊಮ್ಮೆ ಹಾಡುವ ಗದ್ಯ ಕನ್ನಡ ಕಾವ್ಯಕ್ಕೆ ಹೊಸತನ್ನು ತಂದುಕೊಟ್ಟಿವೆ. ಕವಿ ಸಿದ್ಧಲಿಂಗಯ್ಯನವರೇ ಹೇಳುವಂತೆ 'ಇವು ಹಾಡುಗಳು ಎಂದು ಮತ್ತೊಮ್ಮೆ ಹೇಳುತ್ತಿದ್ದೇನೆ, ಗಟ್ಟಿಯಾಗಿ, ಲಯಬದ್ಧವಾಗಿ ಹಾಡಿದಾಗ, ಓದಿಕೊಂಡಾಗ ಮಾತ್ರ ನನ್ನ ರಚನೆಯ ಉದ್ದೇಶ ಸ್ಪಷ್ಟವಾಗುತ್ತದೆ."[೪]

"ಸಿದ್ಧಲಿಂಗಯ್ಯನವರ ಹಾಡು ಒಂದು ಜನಾಂಗವನ್ನು ಕಟ್ಟಿದೆ. ಕೇವಲ ಜೈವಿಕ ಪಾತಳಿಯ ಮೇಲೆ ಜೀವಿಸುತ್ತಿರುವ ಜನಾಂಗಕ್ಕೆ ಒಂದು ಸಾಂಸ್ಕೃತಿಕ ನೆಲೆಯನ್ನು ಕಟ್ಟಿಕೊಟ್ಟಿದೆ. ಈ ಹಾಡು ಕೇವಲ ಒಂದು ಜನಾಂಗವನ್ನಲ್ಲ ವಿಶ್ವದ ಎಲ್ಲಾ ದಲಿತರನ್ನು ಒಂದುಗೂಡಿಸುವ ಸಾಮರ್ಥ್ಯವನ್ನು ಪಡೆದಿವೆ. ತನಗೆ ವಿರುದ್ಧವಾದದ್ದರ ಬಗ್ಗೆ ಆಕ್ರೋಶವಿದ್ದರೂ ತನ್ನ ನೋವಿನ ಅನನ್ಯತೆಯ ಬಗ್ಗೆ ಅಭಿಮಾನವಿದೆ. ಬೇಕೆಂದೇ ಈ ನೋವು ಜೋರಾದ ದನಿಯಲ್ಲಿ, ಉತ್ಪ್ರೇಕ್ಷೆಗಳು ತುಂಬಿರುವ ಭಾಷೆಯಲ್ಲಿ ಅಭಿವ್ಯಕ್ತವಾಗುತ್ತದೆ. ನೋವು ಅಸಹನೀಯವಾಗಿರುವುದರಿಂದ ಧ್ವನಿಗಾಗಲಿ, ಮೆಲುಮಾತಿಗಾಗಲಿ ಇಲ್ಲಿ ಅವಕಾಶವಿಲ್ಲ. ಉಳ್ಳವರ ಸಾಂಸ್ಕೃತಿಕ ಮೌಲ್ಯಗಳನ್ನು ನಿರಾಕರಿಸುವ ಮಟ್ಟಿಗೆ ನೋವು ತೀಕ್ಷ್ಣವಾಗಿದೆ."[೫] ಎಂಬ ಕೀರ್ತಿನಾಥ ಕುರ್ತಕೋಟಿಯವರ ಅಭಿಪ್ರಾಯವು, ಸ್ಫೋಟಗುಣವುಳ್ಳ ವಿಶ್ವದ ನೊಂದವರಿಗೆ ಅನ್ವಯವಾಗಬಲ್ಲ ಸಿದ್ಧಲಿಂಗಯ್ಯನವರ ಕಾವ್ಯದ ನೆಲೆಗಳನ್ನ ತೋರಿಸುತ್ತದೆ.

"ಇದರಲ್ಲಿನ ಕವಿತೆಗಳಲ್ಲಿ ಸ್ಫೋಟಿಸುತ್ತಿರುವ ರೊಚ್ಚು ಈ ದೇಶದ ಇತಿಹಾಸದ ಒಂದು ಭಾಗವೆಂಬುದನ್ನು ಮರೆಯಬಾರದು. ಮತ್ತು ಆ ರೊಚ್ಚನ್ನು ಹಾಗೆ ಅಭಿವ್ಯಕ್ತಿಸಲು ಸಿದ್ಧಲಿಂಗಯ್ಯನವರಿಗೆ ಹಕ್ಕಿದೆ."[೬] ಎಂಬ ಜಿ. ಎಸ್. ಶಿವರುದ್ರಪ್ಪನವರ ಮಾತುಗಳು ಈ ಕವಿತೆಗಳನ್ನ ಬೆಲೆಗಟ್ಟುವಲ್ಲಿ ಮಹತ್ವವಾಗಿವೆ ಎನ್ನಬಹುದು. ಅಲ್ಲದೆ ಲಿಂಗದೇವರು ಹಳೆಮನೆ ಅವರು" ಇಲ್ಲಿಯ ಕವನಗಳಲ್ಲಿ ಕವಿ ತುಂಬಾ ಆಶಾವಾದಿ ಎಂಬುದು ವ್ಯಕ್ತವಾಗುತ್ತದೆ. ದಲಿತ ವರ್ಗದವರು ಎಚ್ಚೆತ್ತಿದ್ದಾರೆ. ಧರ್ಮದೇವರುಗಳೆಂಬ ಸೋಗಿನ ಆಳವನ್ನು ಅರಿತಿದ್ದಾರೆ. ಶ್ರೀಮಂತರ ಸೊಕ್ಕನ್ನು ಖಂಡಿತ ಮುರಿಯುತ್ತಾರೆ ಎಂಬ ಆಸೆ ಈ ಸಂಕಲನದಲ್ಲಿ ಕಂಡು ಬರುತ್ತವೆ. ಅಲ್ಲದೆ ಮೊದಲ ಸಂಕಲನದಲ್ಲಿ ಕಂಡುಬಂದಂತಹ ದ್ವಿತೀಯ ವ್ಯಕ್ತಿಯನ್ನು ಹುರಿದುಂಬಿಸುವ ಘೋಷಣೆಗಳಿಗಿಂತ ಕವಿ ಎಲ್ಲಾ ಅನುಭವಗಳ ಒಂದು ಭಾಗವಾಗಿ ಕಂಡುಬರುತ್ತಾನೆ. ಹೊರಗಿನಿಂದ ನಿಂತು ಮಾಡಿಸುವುದಕ್ಕಿಂತ ಕ್ರಾಂತಿಯ ಒಂದು ಭಾಗವಾಗುವುದನ್ನು, ಕ್ರಾಂತಿಯ ಪೂರ್ವಭಾವಿ ಹಂತಗಳ ಸಿದ್ಧತೆಯನ್ನು ಅರ್ಥಮಾಡಿಕೊಂಡು ಹೇಳುವುದನ್ನು ಇಲ್ಲಿಯ ಕವನಗಳು ತೋರಿಸುತ್ತವೆ. ಕಾವ್ಯ ಅಂತರ್ಮುಖಿಯೂ ಆಗದೆ, ಪರಕೀಯವೂ ಆಗದೆ ಜೀವನಿಷ್ಠವಾಗುತ್ತವೆ." ಎಂಬ ಅಭಿಪ್ರಾಯ ಸೊಗಸಾಗಿದೆ.

ಹೊಲೆ ಮಾದಿಗರ ಹಾಡು

ಸಿದ್ಧಲಿಂಗಯ್ಯನವರು ಮಾನವೀಯ ಸ್ಪಂದನದ ಕವಿ ಎಂಬುದಕ್ಕೆ ಸಾಕ್ಷಿ ಎಂಬಂತೆ ಅವರ 'ನನ್ನ ಜನಗಳು' ಕವಿತೆ ಇದೆ. ಈ ಕವಿತೆ ಅವರೊಳಗಿರುವ ಮಾರ್ಕ್ಸ್‌ವಾದಕ್ಕೆ ಮುಖವೆಂಬಂತಿದೆ. ರೈತರ, ಕೂಲಿಕಾರ್ಮಿಕರ, ಗಾರೆಕೆಲಸಗಾರರ, ಗಣಿಗಳಲ್ಲಿ ದುಡಿಯುವವರ ಬದುಕಿನ ಕಷ್ಟಗಳೆಲ್ಲ ಇಲ್ಲಿ ಹಾಡಾಗಿ ಹರಿದಿವೆ.

ಈ ಕವಿತೆ ಉಳ್ಳವರ ಮತ್ತು ಇಲ್ಲದವರ ನಡುವಿನ ಅಂತರವನ್ನ ಹೇಳುತ್ತಲೇ ಶೋಷಿತರ ಮುಗ್ಧತನವನ್ನು ಶೋಷಕರ ತಣ್ಣನೆಯ ಕ್ರೌರ್ಯವನ್ನು ಚಿತ್ರಿಸಿದೆ.

ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು
ವದೆಸಿಕೊಂಡು ವರಗಿದೋರು ನನ್ನ ಜನಗಳು
ಕಾಲುಕಯ್ಯಿ ಹಿಡಿಯೋರು ಕೈ ಮಡಗಿಸಿಕೊಳ್ಳೋರು
ಭಕ್ತರಪ್ಪ ಭಕ್ತರೋ ನನ್ನ ಜನಗಳು.

ಈ ಕವಿತೆಯ ಮೊದಲೆರಡು ಸಾಲುಗಳು ಶೋಷಿತರ ಬಗೆಗೆ ಕರುಣೆಯನ್ನ ಅಪೇಕ್ಷಿಸಿದರೆ ನಂತರದ ಎರಡು ಸಾಲುಗಳು ಅವರ ಮೌಢ್ಯವನ್ನು ತೆರೆಯುತ್ತದೆ.

ಇದೇ ನೆಲೆಯಲ್ಲಿ "ಬಿಸಿಲಿನಲ್ಲಿ ಬೇಯೋರು ನನ್ನ ಜನಗಳು." "ತಳಾದಿಗೆ ಸಿಕ್ಕಿದೋರು ನನ್ನ ಜನಗಳು" ಒಳಗೊಳಗೇ ಅತ್ತೋರು ನನ್ನ ಜನಗಳು" ಎಂದು ಶ್ರಮಿಕ ಜನರ ಸ್ಥಿತಿಯನ್ನ ಹೇಳುತ್ತಲೇ ಅಂತಿಮವಾಗಿ ಅವರ ಆ ಸ್ಥಿತಿಗೆ ಕಾರಣವೇನು ಎಂಬುದಕ್ಕೆ ಕಾರಣವನ್ನು ಹುಡುಕುತ್ತಾರೆ. ಅದೇನೆಂದರೆ.

"ಹೇಳಿದಂತೆ ಕೇಳುತಾರೆ ನನ್ನ ಜನಗಳು
ಗಾಳಿಯಲ್ಲೆ ಬಾಳುತಾರೆ ನನ್ನ ಜನಗಳು"

ಎಂಬ ಭಾವ. ಈ ಜನಕೊಂದು ಕನಸಿದೆ ಅದೆಂದರೆ "ಭಾಷಣಗಳ ಬೆಂಕಿಯಲ್ಲಿ ಬೆಂದು ಬೂದಿಯಾಗುವುದು" ಇದು ಇಂದಿಗೂ ಇರುವ ಶ್ರಮಿಕರ ವಾಸ್ತವ ಸ್ಥಿತಿಯೂ ಹೌದು. ಅವರ ಕನಸುಗಳು ಹೊಸಹೊಸ ವೇದಿಕೆಗಳಲ್ಲಿ ಅರಳುತ್ತವೆ ಅವರ ಸ್ಥಿತಿಮಾತ್ರ ಹಾಗೇ ಬೆಂದು ಬೂದಿಯಾಗುವತ್ತ ಹೋಗುತ್ತವೆ. ಆದರೆ ಈ ಜನಮಾತ್ರ ಆ ಭಾಷಣಕಾರರ ನಡೆಯ ಸುರಕ್ಷತೆಗಾಗಿ "ಬೂಟು ಮೆಟ್ಟು ಹೊಲೆಯುತ್ತಾರೆ" ಎಂಬ ವ್ಯಂಗ್ಯವೂ ಇಲ್ಲಿದೆ.

'ಒಂದು ಮೂಳೆಯ ಹಾಡು' ಕವಿತೆಯ ಹೆಸರೇ ಹೊಸದು. ಜೀವ ಜಗತ್ತಿನ ಚಾರಿತ್ರಿಕ ಸಿಟ್ಟನ್ನ ಒಂದು ನಿರ್ಜೀವ ಮೂಳೆ ಹಾಡುವುದು ಈ ಕವಿತೆಯ ವಿಶೇಷ. ಇಲ್ಲಿನ ಅಕ್ರೋಶದ ಹಿಂದೆ ಶೋಷಿತ ಸಮುದಾಯಗಳ ನೋವಿನ ಕೊರಳಿದೆ. ಇಡೀ ವ್ಯವಸ್ಥೆಯನ್ನೇ ದಹಿಸಿ ಧ್ವಂಸಗೊಳಿಸುವ ಕಡು ಸಿಟ್ಟಿದೆ. ಜಿ.ಪಿರಾಜರತ್ನಂ ಶೈಲಿಯನ್ನ ನೆನಪಿಸುವ ಈ ಕವಿತೆ ಕೊರಗುತ್ತ, ಕೂಗುತ್ತ ಕೊನೆಗೊಂದು ಸಲ ಸಿಡಿಯುವುದು ಹೀಗೆ.

ಎಷ್ಟುದಿನಾ ಈ ಮಟ್ಕೋಸಿಗಳಾಟ?
ಸಿಡಿತಿನಿ ಬಾಂಬ್ ಸಿಡ್ದಂಗೆ.
ಇವು ಸಿಂಗಾರ, ಸೋಪ ಗಾಜು ಲೈಟು ಎಲ್ಲಾ

ಪುಡಿಪುಡಿ ಆಗಂಗೆ
ನನ್ ಮ್ಯಾಲ್ ನಿಂತ್ಕಂಡು ತುಳೀತಿರೋ ಈ ಬಂಗ್ಲೆ
ಕೈಳೀಕ್ ಬೀಳಂಗೆ
ಸೌದೆ ಸಿಗದಂಗ್ ಸಿಗಿತಿನಿ, ಸವ್ಕಾರಿಮಯ್ಯಾ
ಕಳ್ಳು ಪಚ್ಚೆ ಬಗಿತಿನಿ, ಕುಟ್ಟಿನಿ
ಗುಂಟ್ಮೂಳೆ ಕೊಬ್ಬ
ಕುಡಿತಿನಿ ಗಟಗಟನೆ, ಹೆಂಡ ಕುಡ್ದಂಗೆ
ಸವ್ಕಾರಿ ರಕ್ತಾನ
ನಾ ಮೂಳೆ, ನಾ ಇಂಗೇ ಇರಲ್ಲ
ಕೂಗ್ತಿನಿ, ಸಿಡಿತಿನಿ, ಮನುಷ ಆಯ್ತಿನಿ

"ಶೋಷಿತನು ಮನುಷ್ಯನಾಗುವುದು ಮನುಷ್ಯತ್ವದ ಸಮಾಜವನ್ನು ನಿರ್ಮಿಸುವುದು. ಶೋಷಕರಿಗೂ ಮಾನವೀಯತೆಯ ಅರಿವನ್ನು ಮೂಡಿಸುವುದು ಸಿದ್ಧಲಿಂಗಯ್ಯನವರ ಕ್ರಾಂತಿಕಾವ್ಯದ ಉದ್ದೇಶವಾಗಿದೆ. ಜಾತಿ ಸಮಾಜವನ್ನು ಮಾನವೀಕರಣಗೊಳಿಸುವುದರ ಜೊತೆಗೆ ತಾವೂ ಕೂಡ ಅಂತಃಕರಣವುಳ್ಳ ಮನುಷ್ಯರು ಎಂಬುದನ್ನು ಸಾಬೀತು ಪಡಿಸುತ್ತವೆ ಈ ಮೇಲಿನ ಸಾಲುಗಳು"೩

ಒಂದು ಮೂಳೆಯ ಹಾಡುವಿನಂತಹ ಪದ್ಯಗಳು ಈ ದೇಶದ ಒಬ್ಬೊಬ್ಬ ಹೊಲೆಮಾದಿಗನ ಜೀವಸ್ತೋತ್ರವಾಗಿದೆ. ಎಂಬುದನ್ನು ಮನಗಾಣ ಬೇಕಿದೆ. ತಳಾವಿಗೆ ಸಿಕ್ಕಿರೋ ಮೂಳೆ ಕಡೆಗೊಂದು ದಿನ ಮನುಷ್ಯ ಆಗೋ ಬಯಕೆ ಇವತ್ತಿನದಲ್ಲ. ಐಷರಾಮಿ ವ್ಯಕ್ತಿಗಳಿಗೆ ಸಿಕ್ಕಿ ಸಮಾಧಿಯಾಗಿರುವ ಮೂಳೆಗಳ ಆಶಯ–ಮನುಷ್ಯನಾಗುವ ಆಶಯ ಇಂದಿನ ಬಹಳಷ್ಟು ಕ್ರಾಂತಿಕಾರಿಗಳ ಆಶಯ. ಈ ಆಶಯ ಸಫಲವಾಗುವುದೇ ಕ್ರಾಂತಿಕಾರಿ ಸಿಡಿತದಿಂದ ಎಂಬ ಧ್ವನಿ ಇಲ್ಲಿದೆ.

'ಸಿದ್ಧಲಿಂಗಯ್ಯನವರ ಕವಿತೆಗಳಲ್ಲಿ ರೊಚ್ಚು ಆಕ್ರೋಶಗಳೇ ತುಂಬಿವೆ ಕಲೆಯಿಲ್ಲ' ಎಂಬ ಆರೋಪಗಳು ಇವೆ. ಆದರೆ ಇದು ಹುರುಳಿಲ್ಲದ್ದು. ಶೋಷಿತರ ಸ್ಥಿತಿಗತಿಗಳನ್ನ ಅವಮಾನಗಳನ್ನ, ನೋವನ್ನ ಹೇಗೆ ಹೇಳಬೇಕು? ಎಂಬ ಪ್ರಶ್ನೆಯನ್ನೇ ಅವರಿಗೆ ಹಾಕಬೇಕಾಗುತ್ತೆ." ಇದರಲ್ಲಿ ಆಕ್ರೋಶವಿದೆ ಎಂಬುದು ನಿಜ ಅದು ತೀರಾ ಸಹಜವಾಗಿದೆ ಮತ್ತು ಚಾರಿತ್ರಿಕವಾಗಿಯೂ ಸಮರ್ಥನೀಯವಾಗಿದೆ. ಶತಶತಮಾನಗಳ ಕಾಲ ಅಮಾನವೀಯ ಹಿಂಸೆ, ಅತ್ಯಾಚಾರ ಹಾಗೂ ಶೋಷಣೆಗೆ ಒಳಗಾದವನು ಮೊಟ್ಟಮೊದಲ ಬಾರಿಗೆ ಬಾಯಿ ಪಡೆದಾಗ ಅವರ ಅಭಿವ್ಯಕ್ತಿಯಲ್ಲಿ ಯಾತನೆಯ, ಆಕ್ರೋಶದ ಪ್ರತಿಭಟನೆಯ ದನಿಯಲ್ಲದೆ, ಕೇವಲ ಸೌಂದರ್ಯವನ್ನು ನಿರೀಕ್ಷಿಸ ಬಹುದೇ? ಆತನ ದನಿ ಹಾಗಿರುವುದಕ್ಕೆ ಅವನು ತೇಲಿಬಂದ ಚರಿತ್ರೆಯೇ ಕಾರಣ. ಅವನ ಅನುಭವಗಳೇ ಕಾರಣ. ಎರಡನೆಯದಾಗಿ ಅದು ಇನ್ನೂ

ಕಲೆಯಾಗಿಲ್ಲ ಅನ್ನವುದಾದರೆ, ಅದು ಕಲೆ ಅಲ್ಲ ಎಂದು ಆಕ್ಷೇಪಿಸಲು ನೀವು ಬಳಸುವ ಮಾನದಂಡಗಳು ಯಾವುವು ಎಂದು ಪ್ರಶ್ನಿಸಬೇಕಾಗುತ್ತದೆ. ನೇರವಾಗಿ, ಶೋಷಣೆ ಮಾಡುವವರನ್ನು ಉದ್ದೇಶಿಸಿ ಬರೆದ ಈ ಪ್ರತಿಭಟನೆಯ ಕಾವ್ಯ ಶೋಷಕರ ಪಾಲಿಗೆ ಭಯೋತ್ಪಾದಕವೂ, ಅವರ ಪಾಪಪ್ರಜ್ಞೆಯನ್ನು ಕೆಣಕುವಂಥದೂ ಆಗಿ ಕಂಡರೆ ಆಶ್ಚರ್ಯವಿಲ್ಲ. ಅಂಥವರಿಗೆ ಅದು 'ಕಲೆಯಾಗಿ' ಕಂಡಿತಾದರೂ ಹೇಗೆ?"[೭]

"ಒಂದು ಜನಾಂಗವನ್ನು ಎರಡು ರೀತಿಯಲ್ಲಿ ಕಟ್ಟಲು ಸಾಧ್ಯ. ಒಂದು, ರಾಜಕೀಯ ಸಂಕಲ್ಪದ ಮೂಲಕ, ಎರಡು ಸಾಹಿತ್ಯದ ಪ್ರತಿಭಾ ಸಂಕಲ್ಪದ ಮೂಲಕ. ಇವೆರಡೂ ಒಂದರೊಳಗೊಂದು ಹರಿಯುತ್ತವೆ ಎನ್ನುವುದು ಸತ್ಯ. ರಾಜಕೀಯ ಸಂಕಲ್ಪದ ಮೂಲಕ ನಿರ್ಮಾಣವಾದ ಜನಾಂಗ ತನಗೆ ಅಗತ್ಯವಿರುವ ಸಾಂಸ್ಕೃತಿಕ ರೂಪಗಳನ್ನು ಸೃಷ್ಟಿಸಿಕೊಳ್ಳುತ್ತದೆ ಹಾಗೂ ಸಾಹಿತ್ಯ ಸಂಕಲ್ಪ ಕೂಡಾ ತನಗೆ ಸಾಧ್ಯವಿರುವ ರಾಜಕೀಯ ಕ್ರಿಯೆಯ ಮಾದರಿಗಳನ್ನು ಸೃಷ್ಟಿಸಿಕೊಳ್ಳುತ್ತದೆ. ಈ ತತ್ವದ ಹಿನ್ನೆಲೆಯಲ್ಲಿ ಸಿದ್ಧಲಿಂಗಯ್ಯನವರ ಕಾವ್ಯದ ರೂಪು ರೇಖೆಗಳು ಇನ್ನಷ್ಟು ಉಜ್ವಲವಾಗುತ್ತವೆ." ಎಂಬ ಡಿ.ಆರ್ ನಾಗರಾಜ ಅವರ ಮಾತುಗಳು ಸಿದ್ಧಲಿಂಗಯ್ಯನವರ ಕವಿತೆಗಳಿಗೆ ಒಳ್ಳೆಯ ನೋಟ ನೀಡುವಂತಿವೆ.

"ಒಂದು ಪದ" ಕವಿತೆ ಕನ್ನಡ ಕಾವ್ಯ ಲೋಕವನ್ನೇ ಅಲ್ಲಾಡಿಸುವಂತಹ ರೋಷ ಆವೇಶವನ್ನ ಹೊಂದಿದ್ದು ಇಂದಿಗೂ ಕನ್ನಡಕಾವ್ಯ ಬದಲಾವಣೆಯ ತಿರುಗಳಲ್ಲಿ ಈ ಪದ್ಯಕ್ಕೊಂದು ಮಹತ್ವದ ಸ್ಥಾನವಿದೆ. ಕವಿ ಸಿದ್ಧಲಿಂಗಯ್ಯ ತಮ್ಮ ಕಾವ್ಯದ ಮೂಲಕ ಎಪ್ಪತ್ತರ ದಶಕದ ರಾಜಕೀಯ ವ್ಯವಸ್ಥೆಯನ್ನ ಚರ್ಚೆಗೊಳ ಪಡಿಸಿದ್ದಾರೆ. ರಾಜಕಾರಣಿಗಳ ಸೋಗಲಾಡಿತನ ಕಂಡು ಸಿಡಿದಿದ್ದಾರೆ. ಅಷ್ಟೇ ಅಲ್ಲ ರಾಜಕಾರಣಿ ಎಂಬ ಕೇಂದ್ರಕ್ಕೆ ಪ್ರವೇಶಿಸುವ ಮೊದಲು ಇಡೀ ವ್ಯವಸ್ಥೆ ಅಂದರೆ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಗಳೂ ಹೇಗೆ ದಲಿತರನ್ನ ನಡೆಸಿಕೊಂಡಿವೆ ಎಂಬುದನ್ನ ಕನ್ನಡಿ ಹಿಡಿದಂತೆ ತೋರಿಸಿದ್ದಾರೆ. ಅಂದಿನ ದಲಿತ ಲೋಕದ ನೈಜ ಸ್ಥಿತಿ ಎಂಬಂತಿದೆ ಈ ಕವಿತೆ.

"ಇಕ್ರಲಾ ವದೀರ್ಲಾ
ಈ ನನ್ ಮಕ್ಕಳ ಚರ್ಮ ಎಬ್ರಲಾ
ದೇವ್ರು ಒಬ್ನೇ ಅಂತಾರೆ
ಓಣಿಗೊಂದೊಂದ್ ತರಾ ಗುಡಿ ಕಟ್ಟವ್ರೆ
ಎಲ್ಲಾರು ದೇವ್ರ ಮಕ್ಕು ಅಂತಾರೆ
ಹೊಲೇರ್ನ ಕಂಡ್ರೆ ಹಾವ್ ಕಂಡಂಗಾಡ್ತಾರೆ
ಹೊಟ್ಲು ಬಾವಿ, ಮನೆ ಯಾವುದ್ಕೂ ಸೇರ್ಸಲ್ವಲ್ರೋ

ನಮ್ ಹೇಲ್ ತಿನ್ನೋ ನಾಯ್ನ ಕ್ವಾಣೆವಳಿಕೆ ಬುಟ್‌ಕತ್ತಾರೆ
ನಾವ್ ಬೆಳದಿದ್ ತಿಂತಾರೆ ನಾವ್ ದುಡಿದಿದ್ ತಗತ್ತಾರೆ
ನಾವ್ ಮಾತ್ರ ಬ್ಯಾಡಾ
ಹೊಲೇರು, ಮಾದುಗ್ರು ಅನ್ನೊ ಬದ್ಲು, ಹರಿಜನಾ
ಅಂತ ಕರ್ದು ನಗ್ತಾರಲ್ಲಪ್ಪೋ
ನಮ್ಯಾಲೆ ಮೀಟಿಂಗ್ ಮಾಡ್ತಾರೆ, ಕಾನೂನ್ ಮಾಡ್ತಾರೆ
ನಮ್ಮ ಯಸ್ರೇಳಿ ಹಾರ ಹಾಕ್ತಾರೆ, ಹಾಕುಸ್ಕತ್ತಾರೆ
ನಮ್ಮುನ್ನ ಉದ್ದಾರ ಮಾಡ್ತೀವಿ ಅಂತ ಪೇಪ್ರೇಲಿ
ಮೈಕೇಲಿ ಜೋರಾಗಿ ಕೂಗ್ತಾ ಅವ್ರಲ್ಲಪ್ಪೋ
ನಾವ್ ಮಾತ್ರ ಇಸ್ಕೋಲ್‌ಗೋಗಂಗಿಲ್ಲ ಜೀತಕ್ಕೋಗ್ಬೇಕು
ತಲೆ ಎತ್ತಾಂಗಿಲ್ಲ–ಬಗ್ಗುಸ್ಬೇಕು
ಈ ನನ್ ಮಕ್ಳು ಕಳ್ಳಾಟ ಆಡ್ತಾ ಅವ್ರೆ ಅದಕ್ಕೋನೆ
ಇಕ್ರಲಾ ವದೀರ್ಲಾ ಈ ಸೂಳೇ ಮಕ್ಳ ಮೂಳೇ ಮುರೀರ್ಲಾ
ಗುಡಿಸಲುಗಳು ಗುಡುಗುತಿವೆ ಬಂಗಲೆಗಳು ನಡುಗುತಿವೆ
ಎಲ್ಲೆಲ್ಲಿಯು ಮೊಳಗುತಿದೆ ನವಕ್ರಾಂತಿಯ ಗಾನ
ಮತಗಳು ಹತವಾಗುತಿವೆ ಜನಪಥಗಳು ಮೂಡುತಿವೆ
ಅಸಮಾನತೆ ಆಗುತ್ತಿದೆ ಕ್ರಾಂತಿಗೆ ಸೋಪಾನ
ರೈಲು ನಿಲುವ ತಾಣದಲ್ಲಿ ಭಾರ ಹೊತ್ತ ರಟ್ಟೆಯಲಿ
ತೊಟ್ಟಿಕ್ಕಿದ ಬೆವರಿನ ಹನಿ ಬೆಂಕಿಯಾಗಿ ಸಿಡಿದು
ಬಡ ಜನಗಳ ಕಣ್ದೆರೆಸಿ ಶೋಷಕರನು ಕಂಗೆಡಿಸಿ
ಕೆಂಗಿಡಿಗಳ ಕಾರುತ್ತಿದೆ ಘೋರಾರ್ಭಟವಾಗಿ

"ಗುಡಿಸಲುಗಳು ಗುಡುಗುತ್ತಿವೆ" ಎಂದು ಆರಂಭವಾಗುವ ಈ ಕವಿತೆ "ಸುಲಿದವರನು ಸುಲಿವದಿನ ಬಂದಿತೆಂದು ಹಿಗ್ಗುತಿದೆ, ಸುಡುಗಾಡಿನ ಬಿರುಗಾಳಿಯು ಕ್ರಾಂತಿಗೀತೆ ಹಾಡಿ" ಎಂದು ಕೊನೆಗೊಂಡಿದೆ. ತಕ್ಷಣಕ್ಕೆ ಕುವೆಂಪು ಅವರ ಕಲ್ಕಿ ಪದ್ಯವನ್ನ ನೆನಪಿಸುವ ಈ ಕವಿತೆ ಶೋಷಿತ ಸಮುದಾಯ ಮೊದಲಬಾರಿಗೆ ಶೋಷಣೆಯ ವಿರುದ್ಧ ಎದ್ದು ನಿಲ್ಲುವ, ಸಿಡಿವ ಸಂಕೇತವಾಗಿದೆ. ಇಲ್ಲಿವರೆಗೂ ಬಂಗಲೆಗಳು ಗುಡಿಸಲುಗಳನ್ನ ತುಳಿಯುತ್ತಿದ್ದವು. ಆದರೆ ಇಲ್ಲಿ ಗುಡಿಸಲ ಎಚ್ಚೆತ್ತ ಆರ್ಭಟಕ್ಕೆ ಬಂಗಲೆಗಳು ಕುಸಿಯತೊಡಗಿವೆ. ತೆಲುಗು ದಲಿತ ಕವಿ ಬೋಯಿ ಭೀಮನ್ನ ಅವರ "ಗುಡಿಸಲು ಕಾಲಿಪೋತುನ್ನೈ" ಎಂಬ ಕವಿತೆಯನ್ನು ಈ ಕವಿತೆ ನೆನಪು ಮಾಡುತ್ತವೆ. ಈ ಕವಿತೆಯನ್ನ ಕುರಿತಂತೆ ಡಾ. ನೀಲಮ್ಮನವರು "ಅಸಮಾನತೆಯ ವಿರುದ್ಧದ ಪ್ರತಿಭಟನೆಯ ಸಾಮಾಜಿಕ ಚಳುವಳಿಯ ಸ್ವರೂಪವನ್ನು ಈ ಸಾಲುಗಳು ಕಟ್ಟಿಕೊಡುತ್ತವೆ. ಇಂತಹ ಅದ್ಭುತವಾದ ಶಬ್ದಗಳು, ಜನಪದ

ಸತ್ವದ ವಿಶಿಷ್ಟತೆ, ಪ್ರತಿಮೆಗಳ ಹೊಸತನದಿಂದಾಗಿ ಸಿದ್ಧಲಿಂಗಯ್ಯನವರ ಕಾವ್ಯಭಾಷೆ ಹರಿತ ಖಡ್ಗದಂತೆ ಕೆಲಸ ಮಾಡಿದೆ."[೨]

'ಗಳ್ಡಗಳು' ಕವಿತೆಯು ಜೀತಗಾರಿಕೆಯ ಸಾಲದ ಶೋಷಣೆಯ ನೋವುಂಡು ನಲುಗಿ ಹೋಗಿರುವ ದಲಿತನೊಬ್ಬನ ಆರ್ತಧ್ವನಿ. ಮೇಲಿನವರ ಶೋಷಣೆ ದಬ್ಬಾಳಿಕೆ, ಅಸಹನೀಯವೆನಿಸಿದಾಗ ಅಸಹಾಯಕನಾದ ದಲಿತ ಶೋಷಕರನ್ನು ಕುರಿತು:

"ನಾನ್ ಹ್ಯಣ ನನ್ ಸುಟ್ಬುಡಿ
ಬರೇ ಉಸುರ್‌ಕೊಟ್ ಓಡಾಡುಸ್ ಬ್ಯಾಡಿ
ಕೂಲೀಗ್ ಕರೀಬ್ಯಾಡಿ ದುಡಿಯಾಕ್ಯಳೀ ಬ್ಯಾಡಿ
– – – – – – – – –
– – – – – – – – –
ಜೀತ್ ಸಾಲ ಬಡ್ಡಿ ಚಪ್ಪಡಿ ಏರಿ, ಅಪ್ಪಚ್ಚಿ
ಮಾಡಿ ಆಡ್ಕಂಡ್ ನಗಬ್ಯಾಡಿ.
ದಯಾ ತುಂಬಿರೋ ನಿಮ್‌ಕ್ವಲೆಗಡುಕ್ತನ
ನಯಾತುಂಬಿರೋ ನಿಮ್ ಮಾತ್‌ಗಾರ್ಕೆ
ವಳಗ್ಯಲ್ಲ ಕ್ವಳ್ತು ಹುಳಾ ಬಿದ್ದಿರೋ ನೀವು
ಏನೂ ಬ್ಯಾಡ"

ಎಂಬುದಾಗಿ ಅಂಗಲಾಚಿ ಬೇಡಿಕೊಳ್ಳುವ ದೈನ್ಯತೆ ಶೋಷಕರನ್ನ ಗಳ್ಡಗಳಿಗೆ ಸಮೀಕರಿಸಿ ಮನುಷ್ಯರನ್ನು ಕಿತ್ತು ತಿನ್ನುವ ಅವರ ಕ್ರೂರತೆಯನ್ನು ಪರಿಚಯಿಸಿದ್ದಾರೆ. ನಗರಗಳಲ್ಲಿನ ಕೊಳಚೆ ಪ್ರದೇಶದ ಶ್ರಮಿಕ ಜನರ ಬದುಕಿನ ಸ್ಥಿತಿಗತಿಯನ್ನು ಸಹ ಈ ಕವಿತೆ ಕಟ್ಟಿಕೊಡುತ್ತದೆ. ಶೋಷಕರು ಅಸಹಾಯಕರ ಮೇಲೆ ನಡೆಸುವ ದೌರ್ಜನ್ಯ, ಉರಿಯುವ ಬೆಂಕಿಗಿಂತಲೂ ತೀಕ್ಷ್ಣವಾದುದು ಎಂಬುದು ಈ ಕವಿತೆಯ ನಿಲುವಾಗಿದೆ. ಸಿದ್ಧಲಿಂಗಯ್ಯನವರು ತಮ್ಮ ಕಾವ್ಯದ ಮೂಲಕ ಕನ್ನಡ ಸಾಹಿತ್ಯಕ್ಕೆ ಶೋಷಣೆಯ ವಿವಿಧತೆಯ ಮುಖವಾಡಗಳನ್ನು ಅದರ ಭಿನ್ನ ಆಯಾಮಗಳನ್ನು ವಸ್ತುನಿಷ್ಠವಾಗಿ ಪರಿಚಯಿಸಿರುವುದು ಈ ಬಗೆಯ ಕವಿತೆಗಳಿಂದ ತಿಳಿಯುತ್ತದೆ.

ಶೋಷಿತರ ಬದುಕಿನಲ್ಲಿ ನೆಮ್ಮದಿಯ ವಾತಾವರಣ ಸೃಷ್ಟಿಯಾಗಬೇಕಾದರೆ ಶೋಷಕರನ್ನ ಕಾನೂನಿನ ಶಿಕ್ಷೆಗೆ ಒಳಪಡಿಸಿದಾಗ ಮಾತ್ರ ಸಾಧ್ಯ ಎಂಬುದು 'ಹಬ್ಬ' ಕವಿತೆಯ ಆಶಯವಾಗಿವೆ. ಶೋಷಕರ ಆರ್ಭಟ ಇಲ್ಲವಾದ ದಿನ ದಲಿತರ ಜೀವನದಲ್ಲೂ ಹಬ್ಬದ ವಾತಾವರಣ ಸೃಷ್ಟಿಯಾಗುತ್ತದೆ. ಕಾರ್ಲ್‌ಮಾರ್ಕ್ಸ್ ಸಿದ್ಧಾಂತ ಇಲ್ಲಿ ನಿರೂಪಣೆಯಾಗಿದೆ.

ಸುಲ್ಗೆ ಮಾಡೋ ಮೋಸಗಾರ
ಬಡ್ಡೀ ಮಕ್ಕಳ್ನ ಕ್ರಾಂತಿಕಾರಿಗಳ ಕೋರ್ಟಿಗೆಳಿತೀನಿ
ಮಾರ್ಕ್ಸ್‌ನಿಂದ ಜಡ್ಜ್‌ಮೆಂಟ್‌ಕೊಡುಸ್ತೀನಿ
ಅವುರ್ಗೆ ಪಾಸಿ ಆಯ್ತದೆ
ತಾತ ಮುತ್ತಾತನ ಕಾಲ್ದಿಂದ ಜೀವತೇದೋರು
ಕೋರ್ಟ್ನಂಗಳದ ತುಂಬ ನಿಂತ್ಕಂಡು
ಕ್ಯಾಕಾ ಹಾಕಿ ಕುಣೀತರೇ
ಸುಲ್ದೋರ್ನ ಸುಲಿಯೋ ದಿನ ಅದು
ಅವತ್ತು ದಲಿತರ ಹಬ್ಬ.

ಈ ಹಬ್ಬ ದಲಿತರ ಕನಸು ಇಂತಹ ಕನಸು ಇಂದಿನದ್ದಲ್ಲ ಅದಕ್ಕೊಂದು ಪರಂಪರೆಯೇ ಇದೆ. ೧೨ನೇ ಶತಮಾನದಿಂದಲೂ ಇಂತಹ ಕನಸು ಮತ್ತು ಹಬ್ಬದ ದಿನಕ್ಕಾಗಿ ಈ ನಾಡಿನ ದಲಿತ ಬಲಿಯಾಗುತ್ತಲೇ ಇದ್ದಾನೆ. ಆದರೆ ಕನಸುಮಾತ್ರ ನಿಂತಿಲ್ಲ.

'ಕನ್ನಡವ್ವನಿಗೆ' ಕವಿತೆ ನಾಡಗೀತೆಯು ಕನ್ನಡನಾಡಿನ ಸಂಭ್ರಮದ ಇತಿಹಾಸವನ್ನ ಮರುಪ್ರಶ್ನಿಸುತ್ತಲೇ ವಿಜಯನಗರ ಸಾಮ್ರಾಜ್ಯದ ಹುಳುಕನ್ನ ಹೇಳುತ್ತದೆ.

ಸೂಳೆಯರಿಲ್ಲದ ನಾಡೊಂದು ನಾಡೆ?
ಹದವಾದ ಚರ್ಮವ ಹರಾಜಿಗಿಟ್ಟು ಜನವ ಬದುಕಿಸಿದ
ಕರ್ನಾಟಕ ರತ್ನ ಸಿಂಹಾಸನಾಧೀಶ್ವರ
ಕನಸಿನಲಿ ಕಂಡು ಸಲುಗೆಯ ಮಾತಾಡಿದವಳೆ
ನಿನ್ನ ಕೀರ್ತಿ ಕಡಿಮೆಯೇನೆ?

ಎಂಬಲ್ಲಿ ತೀವ್ರತರ ವ್ಯಂಗ್ಯವಿದೆ ಹಾಗಾಗೇ ಕವಿ ಇಲ್ಲಿ ಕೊನೆಗೆ "ಯಂಗೆ ಕಯ್ಯೆತ್ತಿ ಮುಗಿಯಲೆ ನಿಂಗೆ?" ಎಂದು ಪ್ರಶ್ನಿಸಿದ್ದಾರೆ.

"ಅಡುಗೂಲಜ್ಜಿಯ ಕಥೆ" ಕವಿತೆಯು ಎಪ್ಪತ್ತರ ದಶಕದ ಆಡಳಿತ ಸರ್ಕಾರದ ರಾಜಕಾರಣದ ವ್ಯಂಗ್ಯ, ವಿಡಂಬನೆಯನ್ನು ಕುರಿತದ್ದಾಗಿದೆ. ಅಂದಿನ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರನ್ನ ಕವಿ ಅಡುಗೂಲಜ್ಜಿಗೆ ಸಮೀಕರಿಸಿ ಚಿತ್ರಿಸಿದ್ದಾರೆ. ದಲಿತ ಸಾಹಿತ್ಯ ಚಳುವಳಿಯ ಒಟ್ಟು ಆಶಯ ಮತ್ತು ಧೋರಣೆಗಳಲ್ಲಿ ಜನವಿರೋಧಿ ರಾಜಕಾರಣದ ವಿರುದ್ಧ ಪ್ರತಿಭಟನೆಯ ಅಸ್ತ್ರವನ್ನು ಝುಳಪಿಸುವುದೂ ಒಂದಾಗಿದೆ. ಇದರಿಂದಾಗಿ ರಾಜಕಾರಣದ ವಲಯದಲ್ಲಿ ಒಂದುಬಗೆಯ ಅತಂಕಕಾರಿ ವಾತಾವರಣ ಸೃಷ್ಟಿಯಾದದ್ದು ವಾಸ್ತವಸಂಗತಿ. ಅಂದಿನ ಸರ್ವಾಧಿಕಾರಿ ಕಾಂಗ್ರೆಸ್ ಸರ್ಕಾರದ ಆಡಳಿತ ವ್ಯವಸ್ಥೆಯೊಳಗಿದ್ದ ಕೊಳಕು ಮಂಡಲದಂತಹ ರಾಜಕಾರಣಿಗಳ

ಜೀತಗಾರಿಕೆಯನ್ನು: ಪ್ರಜಾವಿರೋಧಿ ಸರ್ಕಾರದ ಎಲ್ಲ ಅವಿವೇಕಗಳಿಗೆ ಬೆಂಗಾವಲಾಗಿ ನಿಂತಿದ್ದೆ ಅವರ ಸಣ್ಣತನಗಳನ್ನು ಕವಿ ಹೀಗೆ ಟೀಕಿಸಿದ್ದಾರೆ"[3]

ಅಪರೂಪದ ಕಾರೊಂದು ಹಿಮಾಲಯದಿಂದ
ದಬಕ್ಕನೆ ಕೈಳೀಕ್ ಬಿದ್ದು ಇತ್‌ಕಡೀಕ್ ಬತ್ತಾ ಅದೆ
ಅದರ್ವಳಗೆ ಅಡುಗೂಲಜ್ಜಿ ಕುಂತವ್ಳೆ. ಅರೀದ್ದುಡುಗ ಅದನ್ನೊಡುಸ್ತದೆ
ಕಚ್ಚೇ ಬೊಜ್ಜು ಟೋಪಿಯೋರು ಅದರಿಂದೆ ಜೈಕಾರ ಕ್ಯಾಕ್ ಹಾಕ್ಯಂಡ್
ಓಡೋಡ್ ಬತ್ತಾ ಅವ್ರೆ. ಕೆಟ್ರೆ ರಿಪೇರಿ ಮಾಡ್ಕಂಡು
ನಿಂತ್ರೆ ನೂಕ್ಕಂಡು ದಿಗ್ವಿಜಯಕ್ವಂಟವ್ರೆ
ಕಾಲುಂಗುರ ಮಾತ್ರ ಕಂಡೋರು ಕಾರ್‍ನ ಅಲ್ಲಲ್ಲೇ ನಿಲ್ಸಿ
ಹಾರ ಹಾಕಿ ಅಡ್ ಬೀಳ್ತಾರೆ. ಇತ್ತ ಮೂಡಣಕ್ಕೆ ವಂಟಾಗ
ದ್ವಣ್ಣೇ ತಿರುಗ್ಸೋರ್‍ನ ಕಾಯಸ್ಥರ್‍ನ ಹಿಂದೂಕ್ ನೂಕಿ
ಕಾರುಗ್ ದಾರಿ ಮಾಡ್ಕೋಡ್ತಾರೆ.........

ಶೋಷಿತರ ಬದುಕಿನಲ್ಲಿ ನೆಮ್ಮದಿಯ ವಾತಾವರಣ ಸೃಷ್ಟಿಯಾಗಬೇಕಾದರೆ ಶೋಷಕರನ್ನು ಕಾನೂನಿನ ರೀತ್ಯ ಶಿಕ್ಷೆಗೆ ಒಳಪಡಿಸಿದಾಗ ಮಾತ್ರ ಸಾಧ್ಯ ಎಂಬುದು "ಹಬ್ಬ" ಕವಿತೆಯ ಆಶಯವಾಗಿದೆ. ಅಸ್ಪೃಶ್ಯತಾಚರಣೆ ಕಾನೂನು ಬಾಹಿರ ಎಂಬ ನಿಯಮ ಇದ್ದಾಗಲೂ ಪ್ರಸ್ತುತದಲ್ಲಿ ಶೋಷಣೆಯ ದೌರ್ಜನ್ಯಗಳು ಜೀವಂತವಾಗಿವೆ. ಶೋಷಕರ ಆರ್ಭಟ ಇಲ್ಲವಾದ ದಿನ ದಲಿತರ ಜೀವನದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗುತ್ತದೆ, ಎಂಬುದು "ಹಬ್ಬ" ಕವಿತೆಯ ನಿಲುವು. ಮಾರ್ಕ್ಸ್‌ಸಿದ್ಧಾಂತದ ಮೇಲೆ ನಂಬಿಕೆ ಇಟ್ಟಿರುವ ಕವಿ ಆ ಸಿದ್ಧಾಂತದಿಂದಲೇ ವಿಮೋಚನೆ ಸಾಧ್ಯ ಎನ್ನುತ್ತಾರೆ.

ಸುಲ್ಗೆ ಮಾಡೋ ಮೋಸಗಾರ
ಬಡ್ಡೀ ಮಕ್ಕಳ್ನ ಕ್ರಾಂತಿಕಾರಿಗಳ ಕೋರ್ಟಿಗೆಳೀತೀನಿ
ಮಾರ್ಕ್ಸ್‌ನಿಂದ ಜಡ್ಜ್‌ಮೆಂಟ್‌ಕೊಡುಸ್ತೀನಿ
ಅವುರ್‍ಗೆ ಪಾಸಿ ಆಯ್ತದೆ
ತಾತ ಮುತ್ತಾತನ ಕಾಲ್ದಿಂದ ಜೀವತೇದೂರು
ಕೋರ್ಟ್ನಂಗಳದ ತುಂಬ ನಿಂತ್ಕಂಡು
ಕ್ಯಾಕಾ ಹಾಕಿ ಕುಣೀತರೇ
ಸುಲ್ದೋರ್‍ನ ಸುಲಿಯೋ ದಿನ ಅದು
ಅವತ್ತು ದಲಿತರ ಹಬ್ಬ.

ಈ ಸಂಕಲನದ ಇನ್ನೊಂದು ವಿಶೇಷ ಕವಿತೆ "ಕನ್ನಡವ್ವನಿಗೆ" ಇದುವರೆಗಿನ ನಾಡಪದ್ಯಗಳಲ್ಲಿ ವರ್ಣನೆ ಮತ್ತು ಜೈಕಾರಗಳೇ ತುಂಬಿ ರಂಜಿಸುವ ಸಾಲುಗಳ

ನಡುವೆ ಈ ಕವಿತೆ ಭಿನ್ನವಾಗಿ ನಿಲ್ಲುತ್ತದೆ ಕಾರಣ ಇಲ್ಲಿ ಕವಿ ಪ್ರಶ್ನೆ ಮಾಡುತ್ತಾರೆ ಸಂತೋಷ" ಎಂದರೆ "ಜನರ ಸಂತೋಷ" ಮುಖ್ಯ ಎಂದು ಸಾಮಾನ್ಯರ ಸುಖವಿಲ್ಲದ ನಾಡನ್ನ ಸುವರ್ಣಯುಗ ಎಂದು ಹೇಗೆ ಕರೆಯಲಿ ಎಂದು ಪ್ರಶ್ನಿಸುವ ರೀತಿ ಮೆಚ್ಚುಗೆಯಾಗುತ್ತದೆ. ಇಲ್ಲಿನ ವ್ಯಂಗ್ಯ ಗಮನಿಸಿ:

ಸೂಳೆಯರಿಲ್ಲದ ನಾಡೊಂದು ನಾಡೆ?
ಹದವಾದ ಚರ್ಮವ ಹರಾಜಿಗಿಟ್ಟು ಜನವ ಬದುಕಿಸಿದ
ಕರ್ನಾಟಕ ರತ್ನ ಸಿಂಹಾಸನಾಧೀಶ್ವರ
ಕನಸಿನಲಿ ಕಂಡು ಸಲುಗೆಯ ಮಾತಾಡಿದವಳೆ
ನಿನ್ನ ಕೀರ್ತಿ ಕಡಿಮೆಯೇನೆ?

"ಬೀಳು" ಕವಿತೆ ಕರುಳು ಕಿವುಚುವ ಬಡತನದ ಸ್ವರೂಪವನ್ನ ಹೇಳುವಂತದ್ದು ಹಸಿವು, ಗೋಳು ದುಃಖಗಳು ಹೆಣ್ಣಿಗೆ ಹೇಗೆ ಬಾಳುವೆಗೆ ಧಿಕ್ಕಾರ ಹೇಳಿಸುತ್ತವೆ ಎಂಬ ವಾಸ್ತವವನ್ನೇ ಕವಿ ಇಲ್ಲಿ ಹಾಡು ಮಾಡಿದ್ದಾರೆ. ಸಾಮಾನ್ಯರ ಪರ ಜನಪರ ಕವಿ ಸಿದ್ಧಲಿಂಗಯ್ಯನವರ ಕಾಳಜಿಯನ್ನ ಇಂತಹ ಚಿಕ್ಕ ಚಿಕ್ಕ ನೋಟಗಳಿಂದಲೂ ಗುರ್ತಿಸಬಹುದು.

ಅನ್ನವಿಲ್ಲದ ಹೆಣ್ಗೆ ಕುಂಕುಮವು ಕೇಡು
ಹಣೆಯಲ್ಲಿ ಬೆವರಹನಿ ಮಿನುಗುತ್ತಿತ್ತು
ಉಟ್ಟ ಸೀರೆಯ ಸೆರಗು ಎತ್ತೆತ್ತಲೋ ಏರಿ
ಬಡತನದ ಬಾವುಟವು ಹಾರುತ್ತಿತ್ತು.

ಇಂತಹದ್ದೇ ಇನ್ನೊಂದು ನೋಟ "ನಾವು" ಕವಿತೆಯಲ್ಲಿದೆ. ಇಲ್ಲಿ ಸಾಮಾನ್ಯರೂ ಸಿಡಿಯುವ ಸಾಲಾಗಿದ್ದಾರೆ.

ಕೂಳಿಲ್ಲದೆ ಕೊರಗುವವರು
ನಾವು ಹಸಿದ ಹುಲಿಗಳು
ಮೇಲಿರುವರ ಸುಳ್ಳು ಸುಲಿದು
ನೆಗೆಯಲಿರುವ ಕಲಿಗಳು
– – – – –
– – – – –
ಉಪದೇಶವು ನಮಗೆ ಬೇಡ
ನಮಗೆ ಬೇಕು ಅನ್ನವು
ಗುರುವು ಗಿರುವು ನಮಗೆ ಬೇಡ
ಬೇಕು ವಸತಿ ವಸನವು.

"ಅಂಬೇಡ್ಕರ್" ಕವಿತೆ ಸಿದ್ಧಲಿಂಗಯ್ಯನವರೊಳಗಿನ ಚರ್ಚೆಯನ್ನ ಮಾನವೀಯ ಪ್ರಶ್ನೆಯನ್ನ ಮಾರ್ಕ್ಸ್‌ವಾದೀ ಚಿಂತನೆಯನ್ನ ಒಟ್ಟು ಮಾಡಿ ಹೇಳಿದ ಕವಿತೆ ಕನ್ನಡದ ಬಹು ಚರ್ಚಿತ ಕವಿತೆಗಳಲ್ಲಿ ಇದೂ ಒಂದು ಎನ್ನಬಹುದು. ಅವರು ಅಂಬೇಡ್ಕರನ್ನ ನೋಡುವ ಕ್ರಮವೇ ಮಹತ್ತಾಗಿದೆ.

ನಾಡ ನಡುವಿನಿಂದ ಸಿಡಿದ
ನೋವಿನ ಕೂಗೇ
ಆಕಾಶದ ಅಗಲಕ್ಕೂ
ನಿಂತ ನೆಲವೆ.

ಕೋಟಿ ಕೋಟಿ ಕಪ್ಪು ಜನರ
ಮೊಟ್ಟ ಮೊದಲ ಮಾತೇ
ನೀರಿನಾಚೆ ಮೋಡದಾಚೆ
ಮೊಳಗಿದಂಥ ಘೋಷವೆ.

ಹೀಗೆ ಭೂಮಿ, ಆಕಾಶ, ನೀರು ನೆಲವನ್ನೆಲ್ಲಾ ಆಕ್ರಮಿಸುವ ವ್ಯಕ್ತಿತ್ವದ ಅಂಬೇಡ್ಕರರನ್ನು ಬೃಹತ್ ಆಲದಮರಕ್ಕೆ ಹೋಲಿಸುವ ಪರಿ ಸೊಗಸಾಗಿದೆ. ಆಲವೇ ಬೇರೆ ಬೇರೆ ಅರ್ಥ ಸೂಚಿಸುವ ಬಹುದೀರ್ಘ ಬಾಳುವ ಏಕಮುಖವಾಗದೆ ಅನೇಕ ಮುಖಗಳಾಗಿ ವಿಸ್ತರಿಸುವ ಶಕ್ತ ಉದಾಹರಣೆಯಾಗಿಸಿದ್ದಾರೆ ಹಾಗಂತ ಕವಿ ಆರಾಧಕರು ಮಾತ್ರವಾಗಿಲ್ಲ ಅವರೊಳಗಿನ ಮಾರ್ಕ್ಸ್ ಅವರನ್ನ ಪ್ರಶ್ನಿಸುವಂತೆಯೂ ಮಾಡಿದ್ದಾನೆ.

ಮಹರಾಷ್ಟ್ರದ ಮಣ್ಣಿನಲ್ಲಿ
ಮೂಡಿಬಂದ ಗುಡುಗು ಸಿಡಿಲೆ
ಮಳೆಯನೇಕೆ ತಾರಲಿಲ್ಲ
ಮಿಂಚು ಮಾಯ ಅಷ್ಟೆಯೆ?

ಅಂಬೇಡ್ಕರ್ ಹೋರಾಟ ಭೂಮಿಗಾಗಿ, ನೀರಿಗಾಗಿ ವಸತಿಗಾಗಿ ಇದ್ದದ್ದು ನಂತರ ಧರ್ಮದ ಕಡೆ ವಾಲಿದ್ದು ಕವಿಗೆ ತೃಪ್ತಿತಂದಿಲ್ಲ. ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳು ಇನ್ನೇನು ಗಟ್ಟಿಗೊಳ್ಳಬೇಕು ಎನ್ನುವಾಗಲೇ ಅಂಬೇಡ್ಕರ್ ಧರ್ಮದ ಕಡೆ ವಾಲಿದ್ದನ್ನ ಅವರು ಈ ರೀತಿ ಪ್ರಶ್ನಿಸುತ್ತಾರೆ ಜೊತೆಗೆ

ಕಪ್ಪುಕ್ಕಿನ ಕೋಳಗಳನು
ಕಡಿದು ಎಸೆದ ವಜ್ರವೆ
ಬಂಗಾರದ ಕೋಳವೊಕ್ಕ
ಮಹಾ ಬೌದ್ಧ ಬಿಕ್ಷುವೆ

ಧರ್ಮಾತೀತ ಮಾನವೀಯತೆಯನ್ನ ಬಯಸುವ ಕವಿ ಸಿದ್ಧಲಿಂಗಯ್ಯನವರಿಗೆ 'ಬಂಗಾರದ ಕೋಳವೊಕ್ಕ ಬೌದ್ಧ ಬಿಕ್ಷುವಾಗಿ' ಕಂಡಿರುವುದರಲ್ಲಿ ಅಶ್ಚರ್ಯವಿಲ್ಲ ಛಲ, ಅಭಿಮಾನಗಳಿಂದ ಹೋರಾಟಕ್ಕಿಳಿದ ವ್ಯಕ್ತಿ ಧರ್ಮಕ್ಕಿಳಿದು ಶಾಂತಿಧೂತನಾಗಿದ್ದು ಕವಿಗೆ ದೊಡ್ಡ ಪೆಟ್ಟಂತೆ ಕಂಡಿದೆ. ಹೋರಾಟದ ಆ ಎರಡೂ ಮತ್ತೆ ಯಾರಲ್ಲಿ ಹುಡುಕಲಿ ಎಂಬ ಪ್ರಶ್ನೆಯನ್ನೆ ಕವಿ ಇಲ್ಲಿ ಇಟ್ಟಿದ್ದಾರೆ.

ಮಲಗಿದ್ದವರ ಕೂರಿಸಿದೆ
ನಿಲಿಸುವವರು ಯಾರೋ?
ಛಲದ ಜೊತೆಗೆ ಬಲದ ಪಾಠ
ಕಲಿಸುವವರು ಯಾರೋ?

ಇಡೀ ಸಂಕಲನಕ್ಕೆ ಅಂತಿಮ ಮುದ್ರೆಯಂತೆ ಇದು ಸಿದ್ಧಲಿಂಗಯ್ಯನವರ ಧ್ವನಿಯೆಂಬಂತೆ "ಹಾವುಗಳೇ ಕಚ್ಚಿ" ಕವಿತೆ ಇದೆ.

ಆಕಾಶವ ಎತ್ತಿ ನಿಲಿಸಿ
ನೀಲಿಯಾಗಿ ನಿಂತವರೆ
ಕಪ್ಪು ನೆಲವ ಕೆಂಪು ಮಾಡಿ
ಬಾಳೆಯಾಗಿ ಅರಳಿದವರೆ.

ಇಲ್ಲಿನ ಒಂದೊಂದು ಪದವು ಅದ್ಭುತ ಎನ್ನುವಂತಿವೆ. ಭೂಮಿ ಮತ್ತು ಆಕಾಶದ ಸಂಬಂಧ ಜೀವ ಮತ್ತು ಜಲ ಸಂಬಂಧದಂತೆ, ಅನ್ನ ಮತ್ತು ನೀರಿನ ಮೂಲದಂತೆ ಇಲ್ಲಿ ದುಡಿವ ಜನರಿದ್ದಾರೆ. ಅದೂ ನೀಲಿಯಾಗಿ ಅಂದರೆ ಲೋಕೋದ್ಧಾರಕ್ಕೆ ವಿಷವೇರಿ ನಿಂತಂತೆ ವಿಷಾದ ಭರಿತರಾದವರಿಗೆ ಕವಿ ಇನ್ನೂ ತಾಳ್ಮೆ ಸಾಕು ನೀವು ತಿರುಗಿ ಬೀಳಿ ಎಂಬಂತೆ ಕರೆಕೊಡುತ್ತಾರೆ.

ಯಜಮಾನರ ಬೆತ್ತಗಳಿಗೆ
ಭುಜ ಬೆನ್ನನ್ನು ತೆತ್ತವರೆ
ಬಂದೂಕದ ತುದಿಗೆದೆಯನು
ಒಡ್ಡುವವರೆ ಬನ್ನಿರಿ
ಮಂತ್ರಗಳಲಿ ಮಲಗಿದವರೆ ಸತ್ಯಗಳಲಿ ಸತ್ತವರೆ
ಕಿಚ್ಚುಗಳೇ ಕೆರಳಿ
ಎಚ್ಚರವನು ತಪ್ಪಿದವರೆ ಮಚ್ಚರವನು ಮುಚ್ಚಿದವರೆ
ಹಾವುಗಳೇ ಕಚ್ಚೆ

ಬೆವರಿಗಾಗಿ ಬದುಕನ್ನ ಬಲಿಕೊಡುವುದಿನ್ನು ಸಾಕು ಪ್ರತಿಫಲಕ್ಕಾಗಿ ಎಚ್ಚರಾಗಬೇಕು, ಧರ್ಮ, ಪುರಾಣಗಳ ಪರಂಪರೆಯ ಮಬ್ಬುಕಳಕೊಂಡು, ನೋವು

ಅಪಮಾನಗಳ ತಾಳ್ಮೆ ಬಿಟ್ಟು ಮತ್ತೆ ಸಿಡಿವ ಕಚ್ಚುವ ಹಾವಾಗಬೇಕು ಎಂದು ಕರೆ ಕೊಡುತ್ತಾರೆ. ಹಸುವನ್ನ, ಮೊಲ, ಮೇಕೆಗಳನ್ನ, ಕೋಣಗಳನ್ನ ದಲಿತರಿಗೆ ಸಂಕೇತಿಸುತ್ತಿದ್ದ ಚಿತ್ರಗಳ ನಡುವೆ ಇದು ತೀರಾ ಹೊಸದಾದ ಸಂಕೇತವಾಗಿದೆ.

ಸಿದ್ಧಲಿಂಗಯ್ಯನವರ "ಸಾವಿರಾರು ನದಿಗಳು" ೧೯೭೯ರಲ್ಲಿ ಪ್ರಕಟವಾದ ಎರಡನೇ ಸಂಕಲನ ಇಲ್ಲಿ ಕವಿ ಕವಿತೆ, ಕಥನಕವಿತೆ ಮತ್ತು ಖಂಡಕವಿತೆಗಳೆಂಬ ಮೂರೂ ಪ್ರಕಾರಗಳನ್ನ ದುಡಿಸಿಕೊಂಡಿದ್ದಾರೆ.

"ಸಾವಿರಾರು ನದಿಗಳು" ಶೀರ್ಷಿಕೆಯ ಕವಿತೆಯೇ ಬಹುಚರ್ಚಿತ, ಮೆಚ್ಚುಗೆ ಪಡೆದ ಸಿದ್ಧಲಿಂಗಯ್ಯನವರ ಕವಿತೆಗಳಲ್ಲೊಂದು. ಈ ಕವಿತೆ ಕನ್ನಡದ ಪರಂಪರಾಗತ ಕವಿತೆಗಳೆಂದಿಗೂ ಸಂವಾದ ಮಾಡ ಬಯಸುವಂತಿವೆ. ಬೇಂದ್ರೆಯವರ ಇಳಿದು ಬಾ ತಾಯಿ, ಕಂಬಾರರ ಗಂಗವ್ವ ಗಂಗಾಮಾಯಿ ಮತ್ತು ಸಾವಿರಾರು ನದಿಗಳು ಭಿನ್ನ ಭಿನ್ನ ಪರಿಸರವನ್ನ ಭಾರತದ ಭಿನ್ನ ಭಿನ್ನ ಸಾಂಸ್ಕೃತಿಕ ನೋಟಗಳನ್ನ ನೀಡುವ ಕವಿತೆಗಳಾಗಿವೆ. ಬೇಂದ್ರೆ ಕವಿತೆ ಋಷಿ ಸಾದೃಶ್ಯ ಜಗತ್ತಿನ ಪಾವಿತ್ರವನ್ನ ಹೇಳಿದರೆ ಕಂಬಾರರ ಕವಿತೆ ಕಲುಷಿತಗೊಂಡ ನಗರದ ಅಪಾವಿತ್ರ ಭಾರತವನ್ನ ತೋರಿಸುತ್ತದೆ. ಈ ಎರಡೂ ಲೋಕ ದಾಟಿ ಸಿದ್ಧಲಿಂಗಯ್ಯನವರ ಸಾವಿರಾರು ನದಿಗಳು ಕವಿತೆ ಅಧೋಲೋಕದ ಅಸ್ಪೃಶ್ಯ ಜಗತ್ತಿನ ವಿವರ ನೀಡುತ್ತದೆ.

"ಸಿದ್ಧಲಿಂಗಯ್ಯನವರ ಕಾವ್ಯ ನಮ್ಮ ಕಾವ್ಯ ಪರಂಪರೆಯನ್ನೇ ಅಲುಗಾಡಿಸಿದ ಶಕ್ತಿಯನ್ನು ಪಡೆದು ಕೊಂಡಿರುವಂತಹದ್ದು ಎಂದು ಈ ಮೊದಲೇ ಹೇಳಿದೆ. 'ಕಾವ್ಯಂ ಆನಂದಾಯ' ಎನ್ನುವ ನಮ್ಮ ಭಾರತೀಯರ, ಅಷ್ಟೇಕೆ, ಪಾಶ್ಚಾತ್ಯ ಸಾಂಪ್ರದಾಯಿಕ ದೃಷ್ಟಿಕೋನವನ್ನೇ ಮೊತ್ತ ಮೊದಲ ಬಾರಿಗೆ ಅಲುಗಾಡಿಸಿದ ಚಾರಿತ್ರಿಕ ಶಕ್ತಿ ಈ ಕವನಗಳಿಗಿವೆ.

ಇಲ್ಲಿಯುವರೆಗೆ ಕಾವ್ಯವನ್ನು ಒಂದು 'ಆಸ್ವಾದನೆ' ಎಂದು ನಂಬಿದ್ದ ಮನೋಭಾವವನ್ನು ಬದಲಾಯಿಸಿ ಅದೊಂದು ಕ್ರಿಯೆ ಎನ್ನುವ 'ಹೊಸ ದಿಗಂತ'ವನ್ನು ಈ ಕಾವ್ಯದ ಮೂಲಕ ಸಿದ್ಧಲಿಂಗಯ್ಯ ತೋರಿದರು. ಎಂಬ ಬಗ್ಗೆ ಎರಡು ಮಾತಿಲ್ಲ. ಈ ಹಿನ್ನೆಲೆಯಲ್ಲಿ ಅವರ ಕಾವ್ಯದ ಒಟ್ಟು ಬೆಳವಣಿಗೆಯನ್ನು ಗಮನಿಸುತ್ತ ಹೋದರೆ 'ಹೊಲೆಮಾದಿಗರ ಹಾಡಿನಿಂದ' ಕಪ್ಪು ಕಾಡಿನವರೆಗೆ ಆಂತರಿಕವಾಗಿ ಸೂಕ್ಷ್ಮವಾದ ಬದಲಾವಣೆಗಳಾಗಿರುವುದೂ ಕಂಡು ಬರುತ್ತದೆ. ಈ ಬರವಣಿಗೆಯನ್ನ ಸಾಮೂಹಿಕದಿಂದ ವೈಯಕ್ತಿಕದೆಡೆಗೆ ಎಂದು ಅಲ್ಲಿ ಗುರುತಿಸಲಾಗಿದೆ.

ಸಿದ್ಧಲಿಂಗಯ್ಯನಂತಹ ಒಬ್ಬ ದಲಿತನ ಕಾವ್ಯದ ಮೂಲ ನೆಲೆ ನೋವು ಮತ್ತು ಸಿಟ್ಟುಗಳೇ ಅದನ್ನು ಸಾಂಸ್ಕೃತಿಕವಾಗಿ ಹೇಳುವುದಿದ್ದರೆ ಸವರ್ಣಿಯರು ಈ ವರೆಗೆ ಕಾಪಾಡಿಕೊಂಡು ಬಂದ ಅಸಮಾನತೆಯೇ. ಹಾಗಾದುದರಿಂದ 'ಕಾವ್ಯಂ ಆನಂದಾಯ' ಎನ್ನುವುದು ದಲಿತ ಸಾಹಿತ್ಯಕ್ಕೆ 'ಅಲ್ಲದ' ವ್ಯಾಖ್ಯೆಯಾಗುತ್ತದೆ."[೨೯]

ಹೋರಾಟಕ್ಕಾಗಿ ರಚಿತವಾದ ಹಾಡುಗಳಿಗೆ ಬೇಕಾದ್ದು ಕಲಾತ್ಮಕತೆ ಅಲ್ಲ ಪರಿಣಾಮಕಾರಿಯಾಗಿ ನಿವೇದಿಸುವ ಮಾದರಿ ಮತ್ತು ಹೊಣೆಗಾರಿಕೆ ಅಂತಹ ಸ್ಪಷ್ಟ ಮತ್ತು ಖಚಿತ ಹಾಡುಗಳನ್ನ ಸಿದ್ಧಲಿಂಗಯ್ಯ ಬಿತ್ತಿದ್ದಾರೆ ಆ ಮೂಲಕ ದಲಿತ ಸಾಹಿತ್ಯಕ್ಕೊಂದು ಹೊಸ ಫಸಲು ನೀಡಿದ್ದಾರೆ ಎನ್ನಬಹುದು.

"ಸಾವಿರಾರು ನದಿಗಳು" ಸಂಕಲನದಲ್ಲಿ ಹೋರಾಟದ ವ್ಯಾಪ್ತಿ ಹಿಗ್ಗಿದೆ. ಹೋರಾಟವೆನ್ನುವುದು ಸಾಗರೋಪಾದಿಯಾದುದು ಎಂಬ ನೆಲೆಯೊಂದಿಗೆ ಅದಕ್ಕೆ ಸಾವಿರಾರು ನದಿಗಳು "ಸೇರ ಬೇಕೆನ್ನುವ ಆಶಯವೂ ಇಲ್ಲಿದೆ. ಏಕೆಂದರೆ ಹನಿಗೂಡಿಹಳ್ಳ ಹಳ್ಳಗೂಡಿ ನದಿ, ನದಿಗಳು ಸೇರಿ ಸಮುದ್ರ! ಸಾವಿರಾರು ನದಿಗಳು ಕವನದ ಈ ಸಾಲುಗಳನ್ನು ನೋಡಬಹುದು:

ಕಪ್ಪು ಮುಖ ಬೆಳ್ಳಿಗಡ್ಡ ಉರಿಯುತ್ತಿರುವ ಕಣ್ಣುಗಳು
ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು ಅವರು ಕುಣಿವ ಹುಚ್ಚಿಗೆ
ಇರುವೆಯಂತೆ ಹರಿವ ಸಾಲು ಹುಲಿಸಿಂಹದ ದನಿಗಳು
ದಿಕ್ಕಾರ ದಿಕ್ಕಾರ ಅಸಮಾನತೆಗೆ
ದಿಕ್ಕಾರ ದಿಕ್ಕಾರ ಶ್ರೀಮಂತರ ಸೊಕ್ಕಿಗೆ
ಲಕ್ಷಾಂತರ ನಾಗರುಗಳು ಹುತ್ತ ಬಿಟ್ಟು ಬಂದಂತೆ
ಊರ ತುಂಬ ಹರಿದರು
ಪಾತಾಳಕೆ ಇಳಿದರು
ಆಕಾಶಕೆ ನೆಗೆದರು
ಬೀದಿಯಲ್ಲಿ ಗಲ್ಲಿಯಲ್ಲಿ
ಬೇಲಿ ಮೆಳೆಯ ಮರೆಗಳಲ್ಲಿ
ಯಜಮಾನರ ಹಟ್ಟಿಯಲ್ಲಿ ಧಣಿಕೂರುವ ಪಟ್ಟದಲ್ಲಿ
ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು.

ಕವಿ ಶಕ್ತನಾದಾಗ ಅನ್ಯಾಯದ ವಿರುದ್ಧ ಪ್ರತಿಭಟಿಸುವ ಕೆಂಡಕಾರುವ ಕವನಗಳು ಹೆಚ್ಚು ಕಲಾತ್ಮಕವಾಗುತ್ತವೆ ಎಂಬುದಕ್ಕೆ ಈ ಪದ್ಯ ಒಂದು ಉದಾಹರಣೆ.

ಈ ಕವನಕ್ಕೆ ಮಧ್ಯವರ್ತಿ ವ್ಯಾಖ್ಯಾನಕಾರನ ಅಗತ್ಯವಿಲ್ಲ ಎಂದು ಹೇಳುವ ಡಾ. ಪುರುಷೋತ್ತಮ ಬಿಳಿಮಲೆಯವರು "ಕವನ ಸರಳವಾಗಿದೆ ಮತ್ತು ಕವನದುದ್ದಕ್ಕೂ ಲಯಬದ್ಧವಾದ ಪುಟ್ಟ ಪುಟ್ಟ ಸಾಲುಗಳಿವೆ. ಇವುಗಳಿಂದಲೇ ಇಲ್ಲಿ ತೀವ್ರವಾದ ಪರಿಣಾಮವನ್ನ ಸಾಧಿಸಲು ಯತ್ನಿಸಲಾಗಿದೆ. ಕಪ್ಪುಮುಖ, ಬೆಳ್ಳಿಗಡ್ಡ ಮತ್ತು ಉರಿಯುತ್ತಿರುವ ಕಣ್ಣುಗಳು ಜನರು ಬೆಟ್ಟದಂತೆ ಬಂದು ರೊಚ್ಚಿನಿಂದ

ಕುಣಿದಾಗ ಭೂಕಂಪನದ ಅನುಭವವಾಗುತ್ತದೆ. ಇರುವೆಯ ಶಿಸ್ತು ಮತ್ತು ಹುಲಿ, ಸಿಂಹಗಳ ಗರ್ಜನೆಯನ್ನು ತಮ್ಮದಾಗಿಸಿಕೊಂಡಿರುವ ಈ ಜನರು ಶ್ರೀಮಂತರ ಸೊಕ್ಕು ಮತ್ತು ಅಸಮಾನತೆಯ ವಿರುದ್ಧ ದಿಕ್ಕಾರ ಕೂಗುತ್ತಾರೆ. ಹುತ್ತ ಬಿಟ್ಟು ಹೊರಬಂದ ನಾಗರಗಳಂತೆ ಊರ ತುಂಬ ಹರಿದಾಡಿದ ಈ ಜನ ಆಕಾಶ-ಪಾತಾಳಗಳನ್ನು ಮೆಟ್ಟಿ ನಿಲ್ಲುತ್ತಾರೆ. ಕವನವು ಈ ಹಂತದಲ್ಲಿ ಕ್ರಾಂತಿಕಾರಿಗಳ ಕ್ರಿಯಾಶೀಲತೆಯನ್ನು ಮುನ್ನೆಲೆಗೆ ತರುತ್ತದೆ. ಅವರು ಎಲ್ಲೆಲ್ಲೂ ನೀರಿನಂತೆ ನಿಲ್ಲುತ್ತಾರೆ. ತನ್ನ ಮಟ್ಟವನ್ನು ಯಾವಾಗಲೂ ಸಮಾನತೆಯ ನೆಲೆಯಲ್ಲಿಯೇ ಕಾಯ್ದುಕೊಳ್ಳುವ ನೀರನ್ನು ಇಲ್ಲಿ ಉಪಮೇಯಾಗಿ ಬಳಸಿಕೊಂಡಿರುವುದು ಅತ್ಯಂತ ಉಚಿತವಾಗಿದೆ"

"ಬೆಲ್ಚಿಯ ಹಾಡು" ಕವಿತೆಯು ವಾಸ್ತವ ಘಟನೆಯನ್ನು ಆಧರಿಸಿ ಬರೆದ ಕವಿತೆಯಾಗಿದೆ. ಕೂಲಿಯಾಳುಗಳನ್ನು ಅಲ್ಲಿನ ಪಟ್ಟಭದ್ರ ಹಿತಾಸಕ್ತಿಯ ಭೂಮಾಲಿಕರು ಜೀವಂತವಾಗಿ ಸುಟ್ಟರು. ಮನುಷ್ಯನ ಕಗ್ಗೊಲೆಯ ಈ ವಿಕೃತಿಯನ್ನು ವಿರೋಧಿಸಿ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯು ಬೃಹತ್ ಹೋರಾಟವನ್ನ ನಡೆಸಿತು. ಈ ಪ್ರತಿಭಟನಾ ಮೆರವಣಿಗೆಯನ್ನು ಸಂಘಟಿಸಿದ ಪ್ರಮುಖರಲ್ಲಿ ಕವಿ ಸಿದ್ಧಲಿಂಗಯ್ಯ ಒಬ್ಬರು. ಆ ಹೋರಾಟದ ಪರಿಣಾಮವೇ ಈ ಕವಿತೆಯಾಗಿದೆ.

ದೊಡ್ಡ ಗೌಡರ ಬಾಗಲೀಗೆ
ನಮ್ಮ ಮೂಳೆಯತ್ವಾರಣ
ನಮ್ಮ ಜನಗಳ ಕಾಲುಕಯ್ಯಿ
ಕಂಬ ಅವರ ಹಟ್ಟಿಗೆ
– – – – – –
ಯಾವ ಪಾಪವ ಮಾಡಲಿಲ್ಲ
ಯಾರ ತಲೆಯನು ಹೊಡೆಯಲಿಲ್ಲ
ಕರಗಿ ನಮ್ಮಯ ಬಾಳಕತ್ತಲು
ಕಾಣಲಾರವೆ ಹಗಲನು.

ಎಂದು ಜೀವ ಪರವಾಗಿ ಮಿಡಿದ ಈ ಕವಿತೆ ಜನರ ಮನದಾಳಕ್ಕಿಳಿದಿದೆ ಹೋರಾಟದ ಹಾಡಾಗಿ ಊರೂರ ನೆಲವ ದಾಟಿದೆ.

ಇತಿಹಾಸದುದ್ದಕ್ಕೂ ಯಾವ ಬಗೆಯ ಪ್ರತಿಭಟನೆಯನ್ನು ವ್ಯಕ್ತಪಡಿಸದೆ, ಉಳ್ಳವರ ಕಾಲ ತುಳಿತಕ್ಕೆ ಸಿಕ್ಕಿ ಕರಗಿ ಹೋಗಿದ್ದ ಶೋಷಿತ ಸಮುದಾಯ, ಒಮ್ಮೆಲೆ ತುಳಿಯುವವರ ವಿರುದ್ಧ ಹೋರಾಟದ ಸೆಲೆಗಳಾಗಿ ರೇಂಕರಿಸುತ್ತಿದ್ದುದನ್ನು ಪ್ರತ್ಯಕ್ಷನಾಗಿ ಕಂಡ ಕವಿ ತನ್ನಲ್ಲುಂಟಾದ ಅತ್ಯಾಶ್ಚರ್ಯವನ್ನು ಈ ರೀತಿಯಾಗಿ ಹೊರಹೊಮ್ಮಿಸಿದ್ದಾರೆ. "ಕೆಂಪುಸೂರ್ಯ" ಕವಿತೆಯಲ್ಲಿ.

ಎಲ್ಲಿದ್ದರೋ ಅವರು ಯಂಗಿದ್ದರೊ ಅವರು
ಎಚ್ಚೆತ್ತ ಸಿಂಹಗಳು ನನ್ನ ಜನರು
ಎಷ್ಟು ಲೋಕದ ಕನಸಕಾಣುತ್ತಿದ್ದರೊ ಅವರು
ಎದ್ದ ಬಿರುಗಾಳಿಗಳು ನನ್ನ ಜನರು.

ಕವಿ ಪ್ರತಿಭಟನಕಾರರ ಬಂಡಾಯದ ಸ್ವರೂಪವನ್ನು 'ಎಚ್ಚೆತ್ತ ಸಿಂಹ' ಮತ್ತು 'ಬಿರುಗಾಳಿಯ' ಸಂಕೇತವಾಗಿ ಚಿತ್ರಿಸಿರುವುದು ಔಚಿತ್ಯವೆನಿಸುತ್ತದೆ. ಈ ಸಂಕೇತಗಳು ದಲಿತ ಚಳವಳಿಯ ಪ್ರಖರತೆಯನ್ನು ಕಟ್ಟಿಕೊಡುತ್ತವೆ. ಹಾಗೇ ಈ ಕವಿತೆಯಲ್ಲಿ ಇಂದಿರಾ ಕಾಂಗ್ರೇಸ್‌ನ ಸರ್ಕಾರವು ಬಡಜನರ ಹಸಿವನ್ನ ನೀಗಿಸುವಲ್ಲಿ ಸೋತಿದೆ ಎಂಬ ಸಾಲುಗಳೂ ಬಂದಿವೆ.

"ದಲಿತರು ಬರುವರು" ಕವಿತೆಯಲ್ಲಿ ದಲಿತ ಚಳುವಳಿಯ ತೀಕ್ಷ್ಣತೆಯ ಚಿತ್ರಣ ಮೈದಾಳಿವೆ. ಚಳುವಳಿಯ ಆರಂಭದ ದಿನಗಳಲ್ಲಿ ದಲಿತರ ಹೋರಾಟದ ಬಗೆಗೆ ಕವಿಗೆ ಇದ್ದ ಮಹತ್ವಾಕಾಂಕ್ಷೆಯನ್ನ ಈ ಕವಿತೆಯಲ್ಲಿ ಕಾಣಬಹುದು.

ದಲಿತರು ಬರುವರು ದಾರಿಬಿಡಿ
ದಲಿತರ ಕೈಗೆ ರಾಜ್ಯಕೊಡಿ
ಕೋಟಿ ಕೋಟಿ ಕನಸುಗಳೊಂದಿಗೆ
ಹತ್ತಿ ಉರಿಯುವ ಮನಸುಗಳೊಂದಿಗೆ
ಗುಡುಗು ಮಿಂಚಿನ ಘೋಷಣೆಯಲ್ಲಿ
ಭೂಕಂಪನ ಭಾಷೆಗಳಲ್ಲಿ
ಬಂತೋ ದಲಿತರ ಮೆರವಣಿಗೆ
ನೆಲಕೆ ಕಾಲುಗಳ ಬರವಣಿಗೆ.
ದಲಿತ ಭಾರತದ ಬಾವುಟದಲ್ಲಿ
ನಿಂತರು ರೈತರು ಕಾರ್ಮಿಕರು
ಬಿರಿವವು ಹೂವು ಬನಬನದಲ್ಲಿ
ಹಾರಿದೊ ಹಕ್ಕಿ ನೂರಾರು
ಕಂಡಿತು ಕೆಂಪು ಮೂಡಣದಲ್ಲಿ
ಬೆಳಗಾಯಿತು ಬಡವರಿಗೆ.

"ಬಿದ್ದಾವು ಮನೆಗಳು" ಕವಿತೆ ವ್ಯವಸ್ಥೆಯ ಶೋಷಕ ಸ್ಥಿತಿಯನ್ನ ಆಳುವವರ ಶೋಷಣೆಯನ್ನ ಹೇಳುತ್ತಲೇ ಅವರ ವಿರುದ್ಧ ಕ್ರಾಂತಿಕಾರಿ ಹೋರಾಟಗಾರರಾಗಿ ಪರಿವರ್ತಿತವಾದ ಜನರ ಧೋರಣೆಯನ್ನ ಹೇಳುತ್ತದೆ.

ಗುಡಿಸಲು ಬೀಳುವಾಗ ಬಂಗಲೆ ನಗುತ್ತಿದ್ದೊ
ನಮ್ಮೂರ ಮೋರಿ ಹೆಣತುಂಬಿ! ಹರಿಯಿತು

[illegible]

[illegible]

[illegible]

[illegible]

[illegible]

[illegible]

ರಕ್ತದ ಕೋಡಿ ಊರೆಲ್ಲ!
- - - - - - - -
- - - - - - - -
ಬಡವರ ಹೆಸರೇಳಿ ಪಟ್ಟಕೆ ಬಂದೋರು
ಬಡವರ ಚಟ್ಟವ ಕಟ್ಟಿಸಿ । ಮಣ್ಮಾಡಿ
ಗುಡಿಸಲುಗಳ ನುಂಗಿ ನಗುತಾರಲ್ಲೊ
ತುಳಿಯುವ ಜನರನ್ನು ಸುಮ್ಮನೆ ಬಿಡಲಾರೊ
ಮನೆಮನೆ ಮುಂದಲ ಗಿಡದಲ್ಲಿ ನಾವೆಲ್ಲ
ಬರುತೀವಿ ಕೆಂಪನೆ ಹೂವಾಗಿ.

"ಕತ್ತೆ ಮತ್ತು ಧರ್ಮ" ಕಥನ ಕವಿತೆಯು ಜನರ ಮೌಢ್ಯವನ್ನೇ ವಸ್ತುವಾಡಿಕೊಂಡಿದೆ. ಜನಮರುಳೋ ಎಂಬಂತೆ ಕತ್ತೆ ಸತ್ತದ್ದು ಜಯುಶೆಟ್ಟಿಗೆ ಪವಾಡವಾಯ್ತು ಮುಂದೆ ಕತ್ತೆ ಹುಗಿದ ಜಾಗಕ್ಕೆ ಗೋರಿ ದೇವರೆಂಬ ಹೆಸರು ಮೂಡಿ ಅಲ್ಲಿಗೆ

ಕೈಚಾಚಿ ಬಿಕ್ಷದೋರು ಮೈಚಾಚಿ ಸೂಳೇರು
ಭಕ್ತೀಲಿ ಕುಡಿದು ಕುಣಿಯೋರು । ಸೇರವ್ರೆ
ಬಿಳಿಟೋಪಿಯೋರ ಬೆಳಕೇಲಿ.

ರಾಜರಾಣಿ ಪರಿವಾರವೂ ಹರಿದುಬಂದುದ ಕಂಡು ಸಿದ್ಧಯ್ಯನಿಗೆ ಹೂತಜಾಗವೇ ಕಾಣದಾಗುತ್ತದೆ ಎಂಬ ತೀಕ್ಷ್ಣ ವಿಡಂಬನೆ ಈ ನಾಡಿನ ವಾಸ್ತವಸ್ಥಿತಿಯೂ ಆಗಿದೆ.

"ಕಂಡೆ ನನ್ನವಳ ಒಂದು ದಿವಸ" ಕವಿತೆಯು ಸೊಗಸಾದ ಹೋಲಿಕೆ ರೂಪಕಗಳ ಮೂಲಕ ದಲಿತ ಮಹಿಳೆಗಾದ ಅತ್ಯಾಚಾರವನ್ನ ಹೇಳುತ್ತಲೇ ಇಡೀ ದೇಶದ ಬಡವರ ಬದುಕಿಗೆ ಕನ್ನಡಿ ಹಿಡಿವಂತಿವೆ.

ಕೊಲೆಯ ಹಿಂದಿನ ರಾತ್ರಿ ಸೂರ್ಯಚಂದ್ರರ ಹಿಡಿದು
ಹಣದ ಪೆಟ್ಟಿಗೆಯಲ್ಲಿ ಕೂಡಿಟ್ಟರು
ಭಾರತದ ಬಾವುಟವ ಸುತ್ತಿ ಬಾಯಿಗೆ ತುರುಕಿ
ಕಿತ್ತುಕೊಂಡರು ಅವಳ ಮಾತುಗಳನು
- - - - - - - - - - -
ಭಾರತ ದೇಶದ ಬೀದಿಯ ತುಂಬ
ಬೆಳ್ಳಿ ಬಾಕುಗಳ ಮೆರವಣಿಗೆ
ರಕ್ತದ ಕೊಳದಿಂದೀಚೆಗೆ ತೆಗೆದ
ಚಿಂದಿ ಬಟ್ಟೆಗಳ ಮೆರವಣಿಗೆ.

ಇದೇ ನೆಲೆಯಲ್ಲಿ 'ಚೋಮನ ಮಕ್ಕಳ ಹಾಡು,' 'ನಿನ್ನ ಮಗನ ಕೊಂದರು' ಕವಿತೆಗಳಿವೆ.

ಸಿದ್ಧಲಿಂಗಯ್ಯನವರ ಕಾವ್ಯ ಶೋಷಿತರ ಸ್ಥಿತಿಯನ್ನ ಹೇಳುವುದರ ಜೊತೆಗೆ ಕವಿತೆಯ ನಿರೂಪಣಾಕ್ರಮವನ್ನ ಕವಿತೆಯ ರೂಪ ಮತ್ತು ಭಾಷೆಯನ್ನು ಹೊಸದಾಗೇ ದುಡಿಸಿಕೊಂಡಿದ್ದಾರೆ. ಲೋಕವೇ ನಾನಿನ್ನ ನೋಡಬೇಕು, ನಿನ್ನೊಡನೆ ಮಾತಾಡಬೇಕು ಎನ್ನುವ ಕವಿ "ಮಾತಾಡಬೇಕು" ಕವಿತೆಯಲ್ಲಿ

ಕತ್ತಾಳೆಯ ಮುಳ್ಳುಗಳು ಹಾಲಿಲ್ಲದ ಕಳ್ಳಿಗಳು
ಮೈ ಸಿಗಿಯುವ ಬಾಡಬಕ್ಕದ ಗಿಡಗಳು
ಇವುದರ ಜೊತೆಗೆ ಕೊಂಚ ಮಾತಾಡಬೇಕು.
ಬಾಡಿಗೆ ಬೆಳಕಿನ ಚಂದ್ರನಿಗೆ ರವಷ್ಟು
ಪ್ರಶ್ನೆ ಕೇಳಬೇಕು
ಚಂದದ ಗುಲಾಬಿಯನ್ನು ಮುಳ್ಳುಗಳಿಂದ
ಬಿಡುಗಡೆ ಮಾಡಬೇಕು.

ಎಂದು ಸೊಗಸಾಗಿ ಹೇಳುತ್ತಾರೆ. ಇಂತಹ ಸ್ಥಿತಿಯೇ ಜನರು ಹುಲಿಗಳಾಗಲು ಕಾರಣವೆನ್ನುವಕವಿ "ಬಂದಿರುವರು ಹುಲಿಗಳಾಗಿ" ಕವಿತೆ ಮೂಲಕ ಹೇಳುತ್ತಾರೆ.

ಭಾಷಣಗಳ ಬಿಡಿಸಿದಿರಿ ಘೋಷಣೆಗಳ ಕುಡಿಸಿದಿರಿ
ಸಂಕಟಗಳ ಕಂಪನಕ್ಕೆ ಕೊನೆಯಿಲ್ಲವೆ ಹೇಳಿರಿ
ನಿಮ್ಮ ಬೇಟೆಯುತ್ಸವದಲಿ ಕುರಿಗಳಾಗಿ ಸತ್ತಜನರು
ಬಂದಿರುವರು ಹುಲಿಗಳಾಗಿ ಗರ್ಜನೆಯನು ಕೇಳಿರಿ.

"ಅಲ್ಲೆ ಕುಂತವರೆ" ಖಂಡಕಾವ್ಯವು ಸಿದ್ಧಲಿಂಗಯ್ಯನವರ ಅಪೂರ್ವ ಸೃಷ್ಟಿಗಳಲ್ಲೊಂದು. ಈ ಕವಿತೆಯಲ್ಲಿ ಮೊದಲರ್ಧ ಬರಗಾಲದ ಸ್ಥಿತಿಯನ್ನು ಕುರಿತದ್ದಾಗಿದೆ. ಎರಡನೆಯ ಭಾಗದಲ್ಲಿ ಸ್ವಾತಂತ್ರ್ಯ ನಂತರದ ಪ್ರತಿಗಾಮಿ ರಾಜಕೀಯ ವ್ಯವಸ್ಥೆಯು ಸಮುದಾಯದ ಮೇಲೆ ಎಸಗುತ್ತಿರುವ ದೌರ್ಜನ್ಯದ ಪ್ರತಿಮಾತ್ಮಕ ಚಿತ್ರಣವಿದೆ.

ಈ ಕವಿತೆ ಸಮಕಾಲೀನ ರಾಜಕಾರಣವನ್ನ ತನ್ನೊಳಗೆ ಆವಾಹಿಸಿಕೊಳ್ಳುತ್ತ ತುರ್ತುಪರಿಸ್ಥಿತಿಯ ಸನ್ನಿವೇಶವನ್ನ ಜನಪದ ತಂತ್ರಗಾರಿಕೆಯ ಮೂಲಕ ಸೊಗಸಾಗಿ ಹೆಣಕೊಂಡಿದೆ. ಈ ಕವಿತೆಯನ್ನು ಕುರಿತಂತೆ ಎಚ್.ಎಸ್.ರಾಘವೇಂದ್ರರಾವ್ ಅವರು "ಅಸಹಾಯಕತೆ ಮತ್ತು ವಿಷಾದಗಳಲ್ಲಿ ಅದ್ದಿ ತೆಗೆದಿರುವ ಈ ಕವಿತೆಯಲ್ಲಿನ ಅನುಭವ ಜಗತ್ತು ಹಿಂಸೆಗೆ ಗುರಿಯಾದವರ ಸ್ಥಿತಿಯನ್ನು ಅದು ಇರುವ ಹಾಗೆಯೇ ಭಾಷೆಯಲ್ಲಿ ಮರು ಮೂಡಿಸುವ ಬದಲು, ಸಾಹಿತ್ಯಕವಾದ ರೂಪಕಗಳು ಮತ್ತು

ನಾಟಕೀಯತೆಯನ್ನು ಮೈಗೂಡಿಸಿಕೊಂಡ ಕಥಾನಕದ ಘಟಕಗಳ ಮೂಲಕ ಕಟ್ಟಿಕೊಡುತ್ತದೆ. ಕವಿತೆಯ ರಚನೆಯಲ್ಲೂ ಗೇಯತೆ ಮತ್ತು ಮಾತುಗಳ ಸಂಯೋಜನೆ, ಪರಿಣಾಮಿಕಾರಿಯಾದ ದೃಶ್ಯ ಚಿತ್ರಣಗಳ ಅಳವಡಿಕೆ ಮುಂತಾದ ಸಂಗತಿಗಳು ಈ ಕವಿತೆಯನ್ನ ಸಿದ್ಧಲಿಂಗಯ್ಯನವರ ಕಾವ್ಯದಲ್ಲಿ ಮಾತ್ರವಲ್ಲ ಒಟ್ಟು ಕನ್ನಡ ಸಂದರ್ಭದಲ್ಲಿಯೇ ಅಪರೂಪವಾಗಿಸಿದೆ" ಎಂದಿದ್ದಾರೆ.

"ಕಪ್ಪುಕಾಡಿನ ಹಾಡು" ಸಿದ್ಧಲಿಂಗಯ್ಯನವರ ಮೂರನೇ ಸಂಕಲನ ೧೯೮೩ರಲ್ಲಿ ಪ್ರಕಟವಾದ ಈ ಸಂಕಲನ ಸಿದ್ಧಲಿಂಗಯ್ಯನವರ ಮೂಗುವಿಕೆಯನ್ನ ಆವೇಶ ರೊಚ್ಚಿನ ಹೇಳಿಕೆಗಳಿಗಿಂತ ಗಾಢವಾದ, ಆಪ್ತವಾದ ಪರಿಣಾಮಕಾರಿಯಾದ ಭಾಷೆ ಇಲ್ಲಿನದು. ಇಲ್ಲಿ ಕವಿತೆಯ ಭಾಷೆ, ಕವಿತೆಯ ದಾರಿ, ಕವಿಯ ಆವರಣ ವಿಸ್ತಾರವಾಗಿದೆ. ಇಲ್ಲಿ ನೋವಿನ ಹಾಡುಗಳಿವೆ, ಪ್ರೇಮಗೀತೆಗಳಿವೆ, ಹೋರಾಟದ ಹಾಡಿದೆ, ಕಥನಗೀತೆಗಳಿವೆ.

ಗುಡಿಸಲಲ್ಲಿ ಅರಳುವ ಗುಲಾಬಿ
ನಕ್ಷತ್ರ ನನ್ನ ಕವನ
ಕತ್ತಲೆಯಲ್ಲಿ ಕಾಣುವ ಬೆಳಕು
ಬಂಡಾಯದ ಈ ಕವನ
ಬದುಕ ಪ್ರೀತಿಸುವ ಬಡವರ ಮಗಳು
ನಿರಾಭರಣೆ ಕವನ
ಜನಗಳು ತಿನ್ನುವ ಅನ್ನದ ಅಗುಳು
ಜೀವ ನನ್ನ ಕವನ

ಹೀಗೆ ಕವಿತೆ ಮನೋರಂಜನೆಯ ಮಾಧ್ಯಮವಾಗಿದ್ದ, ಕಲೆಯಾಗಿದ್ದ ಹೇಳಿಕೆಗಳು ಇಲ್ಲಿ ಇಲ್ಲವಾಗಿ ಕವಿತೆ ಜೀವವಾಗಿದೆ ಜನರು ತಿನ್ನುವ ಅಗುಳಾಗಿದೆ. ಕಲೆಗಿಂತ ಜೀವ ಮುಖ್ಯವೆನ್ನುವ ಈ ಧೋರಣೆಯೇ ಕನ್ನಡ ಕಾವ್ಯಲೋಕಕ್ಕೆ ಹೊಸದು. ಹಾಗಾಗಿ ಕವಿತೆ ಗುಡಿಸಲನ್ನ, ಕೊಳೆಗೇರಿಯನ್ನ, ತಬರ ಚೋಮನನ್ನ, ಭೂತದ ಕತೆಯನ್ನ ಹಾಡು ಮಾಡುತ್ತದೆ. ಇಲ್ಲಿರುವ ಸೂತ್ರ ಮಾತ್ರ ಹಿಂದಿನ ಸಂಕಲನಗಳದ್ದೇ ಆದರೂ ಇಲ್ಲಿ ದಲಿತ ಎಂಬ ಆವರಣ ದಾಟಿ ಕವಿ ಸರ್ವ ಬಡವರವರೆಗೂ ವಿಸ್ತರಿಸಿಕೊಂಡಿದ್ದಾರೆ. ಹಾಗಾಗಿ ಹಿಂದೆ 'ಇಕ್ರಲಾ ಒದೀರ್ಲಾ' ಎಂದು ದಲಿತ ಪರವಾಗಿ ಗುಡುಗಿದ ಕವಿ ಇಲ್ಲಿ "ಯಾರಿಗೆ ಬಂತು ಎಲ್ಲಿಗೆ ಬಂತು ನೆಲವತ್ತೇಳರ ಸ್ವಾತಂತ್ರ್ಯ" ಎಂದು ಗುಡುಗಿದ್ದಾರೆ; ಕಪ್ಪು ಕಾಡಿನ ಹಾಡಿನಲ್ಲಿ.

ಹಳೆಯಕಾಲದ ಹರಿದ ಗುರಭತ್ರಿ
ಬಿಚ್ಚಿದರೆ ಗದೆ ಮುಚ್ಚಿದರೆ ಕತ್ತಿ
ಬಸವಣ್ಣ ಸರ್ವಜ್ಞ ಕನಕ ನುಡಿ ಬಳ್ಳಿಯನು ನೆಟ್ಟರೆದೆಗೆ

- - - - - - - - - - - -

ಈ ಊರ ಗುಡಿಗೋಪುರಗಳಿಗೆ ಬೆಂಕಿ ಹಚ್ಚಿ
ನನ್ನ ಸುಟ್ಟಂತೆ ಇವರನು ಸುಡಬೇಕು
ಉಳ್ಳವರ ಅಟ್ಟಹಾಸಕ್ಕೆ ಚಟ್ಟಕಟ್ಟಿ
ಸುಡುಗಾಡಿನಲ್ಲಿವರ ನೆಡಬೇಕು
ಎಂದು ಈ ಹುಡುಗ ಹೊರಟ
ಕಪ್ಪುಕಾಡಿನ ಕಡೆಗೆ
ಜನದ ಕಡೆಗೆ

ಹೀಗೆ ಇಲ್ಲಿ ದೇವರು ಕೂಡಾ ಬಡವರ ಕಡೆಗಿರುವ ಭೂತಪ್ಪನೂ ಆಗುತ್ತಾನೆ.

ಅಲೆಯುವ ಹೊಲೆಯರ ಹೊಲಿಯುವ ಮಾದಿಗರ
ಮಲಗಿದ ಜನಕೆಲ್ಲ ಗುರುಕಾಣೊ । ಭೂತಪ್ಪ
ಬಡವರ ಬಾಳಿಗೆ ಶಿವ ಕಾಣೊ

ಆದರೆ ಈ ಜನ ಈಗ ಏನಾಗಿದ್ದಾರೆ? ಎಂಬ ಪ್ರಶ್ನೆಗೆ ಉತ್ತರ ಕೇಳಿಕೊಂಡರೆ ಅದಕ್ಕೆ "ತಬರನ ಹಾಡು" ಕವಿತೆ ಹೀಗೆ ಹೇಳುತ್ತದೆ.

ಬಿಳಿಯ ಟೋಪಿಗಳ ಬಿಳಿಯ ಮೋಡಗಳ
ನಂಬಿ ಕುಂತ ಜನರು
ಸುಳ್ಳು ಭಾಷಣದ ಹಳ್ಳಕೆ ಬಿದ್ದು
ದಿಕ್ಕು ಕೆಟ್ಟರಯ್ಯ.

ಈ ಜನರ ಬಿಡುಗಡೆಯ ದಾರಿಯಾವುದು.? ಎಂಬ ಚಿಂತನೆಯನ್ನ ಮಾಡುವುದೇ "ದಾರಿ ಯಾವುದೋ" ಕವಿತೆ.

ಕತ್ತಲೆಯಲ್ಲಿ ಮುಳುಗಿದ ಜನಕೆ
ಸುತ್ತಲು ಸಾವನು ಕಾಣುವ ಜನಕೆ
ಕರುಣೆಯ ಸರಪಳಿ ಕೊಲ್ಲುವ ಜನಕೆ
ಬಿಡುಗಡೆಯನ್ನು ನೀಡುವ ಒಂದು
ದಾರಿ ಯಾವುದೋ
ಸರಿ–ದಾರಿ ಯಾವುದೋ

ಆದರೆ ಜನರ ನಡುವೆ ಏನಿದೆ? ಯಾರು ಏನಾಗಿದ್ದಾರೆ? ಎಂಬ ಪ್ರಶ್ನೆಗಳಿಗೆ ಉತ್ತರವೆಂಬಂತೆ "ಸಂಪಿಗೆಯ ಮರದಲ್ಲಿ" ಕವಿತೆಯಿದೆ.

ಬಡಜನರ ಗುಡಿಸಲಿಗೆ ಬೆಂಕಿಯನು ಇಟ್ಟವರು
ರಾಜರಾದರು ದೆಹಲಿ ನಾಡಿನಲ್ಲಿ

ಎಳೆಯ ಮಕ್ಕಳ ಕೊರಳ ದನಿ ಕಿತ್ತು ನಕ್ಕವರು
ರಕ್ತವನು ಹಂಚಿದರು ಅಮಲಿನಲ್ಲಿ.

. . . .

ಖಾಲಿಯಾಕಾಶದಲ್ಲಿ ಕಿರಣಗಳ ಸುಳಿವಿಲ್ಲ
ಇದು ಬೆಳಕೊ ಕತ್ತಲೆಯೊ ತಿಳಿಯದಲ್ಲ
ಹೂದೋಟಗಳ ತುಂಬ ಹುಚ್ಚು ನಾಯಿಯ ಸಂತೆ
ಕಿಕ್ಕಿರಿದ ಜನ ಕಾಣೊ ಜೈಲಿನಲ್ಲಿ

. . . .

ಎದೆ ಎದೆಯ ಮೇಲೆಲ್ಲ ಮೊಳೆ ಜಡಿಯುತ್ತಿದ್ದಾಗ
ಏಸುವಾಗಿದ್ದವರು ಎದ್ದರಲ್ಲೊ
ನೊಂದ ಮುಖಗಳ ತುಂಬು ನಗೆಯನ್ನು ಬಿತ್ತಿದರು
ಮೋರಿಗಳ ದಾರಿಯಲಿ ಬಂದ ಜನರು.

ಈ ಜನ ಯಾರು ಇವರು ಹೇಗಿದ್ದಾರೆ ಎಂಬುದಕ್ಕೆ ಸಾಕ್ಷಿಯೆಂಬಂತೆ "ಹೆಂಡಕ್ಕೆ ಸಾವಿಲ್ಲವೊ" ಕವಿತೆ ಇದೆ.

ನಮ್ಮಯ ದುಡಿಮೇಲಿ ಧಣಿಜೀವ ಅಡಗೈತೆ
ಧಣಿಗೆಂದು ನೋವಿಲ್ಲವೊ
ಹೆಂಡದ ಗಡಿಗೇಲಿ ನಮ್‌ಜೀವ ಅಡಗೈತೆ
ಹೆಂಡಕ್ಕೆ ಸಾವಿಲ್ಲವೊ
ಉರಿಬಾಡು ಹೆಂಡಕ್ಕೆ ಹುಟ್ಟಿ ಜನ ನಾವು
ವ್ಯಸನಕ್ಕೆ ತಾವಿಲ್ಲವೊ
ಹೆಂಡಕ್ಕೆ ಸಾವಿಲ್ಲವೊ

ಹೀಗೆ ಹಾಡುವ ಜನರೇ ಕೂಳಗೇರಿಗಳಲ್ಲಿ ಎಲ್ಲಿದ್ದಾರೆ ಎಂದು ತೋರುವ ಕವಿತೆಯಲ್ಲಿ ಹೀಗಿದೆ:

ಓಟಿನ ಕಾಲದ ಲೈಟಿನಕಂಬ
ಕತ್ತಲೆ ಚೆಲ್ಲಿತ್ತು
ಮನೆಗಳ ಮುಂದೆ ಹರಿಯುವ ಮೋರಿಗೆ
ತೂರಾಡುವ ಜನ ಬಿದ್ದಿತ್ತು.

ಹೀಗಾಗಿ ಇಡೀ ಸಂಕಲನದ ದನಿ ಎಂಬಂತೆ "ದೋಣಿಯ ಹಾಡು" ನಿಂತಿದೆ.

ಚೂರು ಚೂರಾಗಿತ್ತು ದೋಣಿ
ಮುರಿದು ಬಿದ್ದವು ಎಲ್ಲ ಕನಸು

ಹೇಳಲಾಗದ ಗೋಳಿನಲ್ಲಿ
ಬಾಳು ಬಿದ್ದಿತ್ತು.

ಸಿದ್ಧಲಿಂಗಯ್ಯನವರ ಇತ್ತೀಚಿನ ಕವಿತೆಗಳು 'ಮಾನವೀಯ' ನೆಲೆಯನ್ನ ಹೊತ್ತು ನಿಂತಿವೆ. ಹಾಗಾಗಿ ಈ ಕವಿತೆಗಳ ಸ್ವರೂಪ ವಿಸ್ತಾರವಾದ ಅರುಹನ್ನ ಹೊಂದಿರುವಂತದ್ದು.

ಕವಿತೆಯ ರೂಪಕ ಮತ್ತು ನಿರೂಪಣಾ ಕ್ರಮದಲ್ಲೂ ಈ ವ್ಯತ್ಯಾಸಗಳಿವೆ ಎನ್ನಬಹುದು.

ಕತ್ತಾಳೆಯ ಮುಳ್ಳುಗಳು ಹಾಲಿಲ್ಲದ ಕಳ್ಳಿಗಳು
ಮೈ ಸಿಗಿಯುವ ಬಾಡಬಕ್ಕದ ಗಿಡಗಳು
ಇವುದರ ಜೊತೆಗೆ ಕೊಂಚ ಮಾತಾಡಬೇಕು.
ಬಾಡಿಗೆ ಬೆಳಕಿನ ಚಂದ್ರನಿಗೆ ರವಷ್ಟು
ಪ್ರಶ್ನೆ ಕೇಳಬೇಕು
ಚಂದದ ಗುಲಾಬಿಯನ್ನು ಮುಳ್ಳುಗಳಿಂದ
ಬಿಡುಗಡೆ ಮಾಡಬೇಕು

ಜಲವಿಲ್ಲದ ಬಾವಿಗಳು ಮಾತಿಲ್ಲದ ಮಂತ್ರಿಗಳು
ಸೀಗೆ ಮೆಳೆಗಳು ಓಡಾಡುವ ಪೊಲೀಸರು
ಲೋಕವೇ ನಾ ನಿನ್ನ ನೋಡಬೇಕು
ಭಾಷಣಗಳಂತೆ ಬರುವ ಬಿಳಿ ಮೋಡಗಳಿಂದ
ತೊರೆ ಹರಿಯುವುದಿಲ್ಲ ಹಸಿರು ಏಳುವುದಿಲ್ಲ

ಕಾಲ ಕಾಲಕ್ಕೆ ಬರದಂತೆ ಮಳೆಯನ್ನು ತಡೆಯುತ್ತಿರುವವರಾರು?
ಕಾಮನಬಿಲ್ಲಿನಿಂದ ನಕ್ಷತ್ರಗಳನ್ನು ಕತ್ತರಿಸುತ್ತಿರುವವರಾರು?
ಸೂರ್ಯನನ್ನು ಸೆರಗಿನಿಂದ ಮರೆಮಾಡಿಕೊಂಡು
ಕೆದರಿದ ಕತ್ತಲೆಯನ್ನು ಎತ್ತರಿಸುತ್ತಿರುವವರಾರು?
ಮಾವು ಹಲಸುಗಳ ಫಲಕಿತ್ತುಕೊಂಡು
ಹೆಣ್ಣು ಅಲ್ಲ–ಗಂಡೂ ಅಲ್ಲದ
ಆತ್ಮಗಳನ್ನು ಹುಟ್ಟಿಸುತ್ತಿರುವವರಾರು?
ಲೋಕವೇ ನಾನಿನ್ನ ನೋಡಬೇಕು
ನಿನ್ನೊಡನೆ ಮಾತಾಡಬೇಕು.

ವಿಮರ್ಶಕರ ಗಮನವನ್ನು ಅಷ್ಟಾಗಿ ಸೆಳೆಯದ ಮಾತಾಡಬೇಕು ಎನ್ನುವ ತಲೆಬರಹದ್ದು ಈ ಕವನ. ಎಸ್.ಎಫ್ ಯೋಗಪ್ಪನವರೆ ಸಿದ್ಧಲಿಂಗಯ್ಯನವರನ್ನ ವಿಮರ್ಶಿಸುತ್ತ:

ಕಪ್ಪು ಕಾಡಿನ ಹಾಡು: ಈ ಕೃತಿ ವರ್ತಮಾನದ ಸತ್ಯಗಳ ಮೇಲೆ ಬೆಳಕು ಚೆಲ್ಲುವ ಮಹತ್ವದ ಕೃತಿಯಾಗಿದೆ. ಈ ಕವನ ಸಂಕಲನದ ಕೊನೆಯ ಕವಿತೆ 'ಸಂತೆ'ಯ ಕೆಳಗಿನ ಸಾಲುಗಳನ್ನು ಗಮನಿಸಬಹುದಾಗಿವೆ.

ಮೌಲ್ಯ ಆದರ್ಶಗಳ ಅಂಗಡಿಯ ಸಾಲಿನಲಿ
ನ್ಯಾಯಬೇಕೇ ಎಂಬ ದೊಡ್ಡ ಕೂಗು
ಜಾತಿ ಜಾಗಟೆಯನ್ನು ಬಾರಿಸುವ ಜಾತ್ರೆಯಲಿ
ದೇಶಭಕ್ತಿಯದೊಂದು ಸಣ್ಣ ಸೋಗು
ಹೆಸರು ಗುರುತುಗಳಿಲ್ಲ ಯಾರಿಗೂ ಮುಖವಿಲ್ಲ
ಎಲ್ಲರೂ ಒಂದೊಂದು ಹಣದ ಥೈಲಿ
ಹಣವ ಪಾವತಿ ಮಾಡಿ ಅಳಬಹುದು ನಗಬಹುದು
ಕನಸು ಬೀಳುವುದಿಲ್ಲ ಬರಿಗೈಯಲಿ.

ಕಾವ್ಯಕ್ಕೆ ಮನುಷ್ಯನ ಸ್ವಭಾವ, ಸಾಮಾಜಿಕ, ರಾಜಕೀಯ ಒಳಸುಳಿಗಳನ್ನು ಭೇದಿಸುವ ಶಕ್ತಿ ಇರಬೇಕು. ಕಾಯ ನಿಖರವಾಗಿ, ಅಸಂದಿಗ್ಧವಾಗಿ ಮೂಡಿ ಬರಬೇಕು. ವರ್ತಮಾನದ ಸಾಕ್ಷಿಪ್ರಜ್ಞೆಯಾಗಿ ಪುಟಿಯಬೇಕು. ಕವಿಯ ಆಕಾಂಕ್ಷೆ, ತಿರಸ್ಕಾರ, ತಾಟಸ್ಥ್ಯ, ಸಿಟ್ಟು, ಪ್ರೀತಿ ಸ್ಫೋಟ, ಮೌನ, ನಿಖರವಾಗಿ ಹೊಮ್ಮಿ ಬರಬೇಕು. ಯಾವ ಕಾವ್ಯ ಎಷ್ಟು ಸ್ಪಷ್ಟವಾಗಿ, ನಿಖರವಾಗಿ ಹೊಮ್ಮಿ ಬರುತ್ತದೆಯೋ ಅಷ್ಟು ಶಾಶ್ವತವಾಗಿ, ಅಭೇದ್ಯವಾಗಿ, ಸಾವಿಲ್ಲದ ಕಲೆಯಾಗಿ ಉಳಿಯುತ್ತದೆ. ಅಂತಹ ಕಾವ್ಯದ ಗಾಢ ಅನುಭವವನ್ನು ಡಾ.ಸಿದ್ಧಲಿಂಗಯ್ಯನವರ ಮೇಲಿನ ಕವನದ ಸಾಲುಗಳು ಕೊಡುತ್ತವೆ. ಆದರ್ಶಗಳು ಅಂಗಡಿಯಸಾಲು, ನ್ಯಾಯ ದೊಡ್ಡ ಕೂಗು, ಜಾತಿ, ಜಾತ್ರೆ, ದೇಶಭಕ್ತಿ ಸಣ್ಣಸೋಗು ಇವೆಲ್ಲವು ಒಂದರೊಳಗೊಂದು ಸಿಕ್ಕಿಕೊಂಡು, ಒಂದಕ್ಕೊಂದು ವಿರೋಧವಾಗಿ ಅರ್ಥಪುಟಿಸುವ ರೀತಿ ಆಶ್ಚರ್ಯ ಹುಟ್ಟಿಸುತ್ತವೆ.

ಡಾ. ಸಿದ್ಧಲಿಂಗಯ್ಯನವರ ದೃಷ್ಟಿ ಎಂದಿಗೂ ವಾಸ್ತವದಿಂದ ದೂರ ಉಳಿಯುವುದಿಲ್ಲ. ವಾಸ್ತವದ ಅರಿವೇ ಅವರ ಕಾವ್ಯದ ಒಳದ್ರವ್ಯವಾಗಿದೆ. ಈ ಕಾರಣಕ್ಕಾಗಿಯೇ ಅವರ ಕಾವ್ಯ ಶಾಶ್ವತವಾಗಿ ಉಳಿಯುತ್ತದೆ. ಅವರ ಪ್ರಸ್ತುತ ಕವನ ಸಂಕಲನದಲ್ಲಿಯ 'ಯುಗಾದಿ' ಹಬ್ಬದ ಐದು ಕವನಗಳು ವಾಸ್ತವಕ್ಕೆ ಸಾಕ್ಷಿಯಾಗಿವೆ.

ಯುಗಾದಿ ಹಬ್ಬವೆಂದರೆ ಸಾಂಪ್ರದಾಯಿಕವಾಗಿ ಸಡಗರದ ಪ್ರತಿಮೆಯಾಗಿ ಮನಸ್ಸಿನಲ್ಲಿ ಮೂಡಿನಿಲ್ಲುತ್ತದೆ. ಅದನ್ನು ದಾಟಿದ ವೈಚಾರಿಕ ಹೊಳಹು ಕಾಣದೇ ಹೋಗುತ್ತವೆ

ಡಾ. ಸಿದ್ಧಲಿಂಗಯ್ಯನವರು ಕನ್ನಡ ಸಾಹಿತ್ಯದ ಆ ಕೊರತೆಯನ್ನು ತುಂಬಿಕೊಟ್ಟಿದ್ದಾರೆ. ಅವರ ಯುಗಾದಿ ಗಳು ವಿಚಿತ್ರವಾಗಿವೆ:

ಬೇವು ಬೆಲ್ಲದ ಅದೇ ಹಳೆಯ ಪಾಠ
ಸ್ವಂತದ್ದೋ ಸಾಲದ್ದೋ ಒಬ್ಬಟ್ಟಿನೂಟ
ಬದುಕೇ ಇಲ್ಲದ ಅನಾದಿ ಲೆಕ್ಕಕ್ಕೆ
ನೀನೊಂದು ಶಬ್ದ ಮಾತ್ರ.
ಬೀದಿ ವಾಸಿಯ ಅಳಲು ಜೋಪಡಿಯ ಕತ್ತಲು
ದಿನ ದಿನದ ಅನ್ನಕ್ಕೆ ಮಾರಿಕೊಳ್ಳುವ ಮೈಯಿ
ಆಶೆಯಲಿ ಚಾಚಿರುವ ಲಂಚಕೋರನ ಕೈಯಿ
ಯುಗ ಯುಗವು ಕಳೆದರೂ ಅಳಿಯದೇ **(ಯುಗಾದಿ-೧)**

ಇಲ್ಲಿಯ ಸತ್ಯಗಳು ಕಪ್ಪು ಬಿಳುಪಿನ ಚಿತ್ರಗಳಾಗಿವೆ. ಸಾಮಾಜಿಕ ಅಸಮಾನತೆ, ಸರ್ಪಬಂಧವಾದ ಸಾಲು, ಜೋಪಡಿಯಲ್ಲಿಯ ಕತ್ತಲೆ, ಬೀದಿವಾಸಿಗಳ ಆಕ್ರಂದನ ಅನ್ನಕ್ಕಾಗಿ ಮೈ ಮಾರಿಕೊಳ್ಳುವುದು, ಲಂಚದ ಶೋಷಣೆ ಎಲ್ಲವೂ ಕಣ್ಣಿಗೆ ಕಟ್ಟಿ ಎದುರು ನಿಲ್ಲುತ್ತವೆ. ಯುಗಾದಿಯ ಎರಡನೆ ಕವನದಲ್ಲಿ ಕವಿ ಕೆಳಗಿನಂತೆ ಕೇಳುತ್ತಾನೆ:

ಉಳ್ಳವರಿಗೆ ಹಬ್ಬವಾಯ್ತು
ಕವಿಕುಲಕೆ ಕಬ್ಬವಾಯ್ತು
ಇಲ್ಲದವರಿಗೇನಾಯಿತು
ಹೇಳೆ ಯುಗಾದಿ

ಈ ಸಲದ ಯುಗಾದಿ
ಮಧ್ಯವಯಸ್ಕನ ಉದ್ಯೋಗದ ಕನಸಿನಂತೆ
ಲಂಚಕೋರನ ಮೃದುವಾದ ಮಾತಿನಂತೆ
ಏರುವ ಬೆಲೆ, ಇಳಿಯುವ ಘನತೆಯಂತೆ
ಚಿಂತಾಜನಕವಾಗದಿರಲಿ. **(ಯುಗಾದಿ)**

ಇಲ್ಲಿ ಬದುಕು ಸಿಂಬೆಯಿಂದ ಬಿಚ್ಚಿಕೊಂಡು ಹೆಡೆ ಎತ್ತುವ ಹಾವಿನಂತೆ ತೆರೆದುಕೊಳ್ಳುತ್ತದೆ.

ದೇವರು ಆತ್ಮ ಕಂಡವರಿಲ್ಲ
ಶಾಸ್ತ್ರ ಪುರಾಣ ಸುಳ್ಳಿನ ಕಂತೆ
ಅರಮನೆ ಗುರುಮನೆ ಮೋಸದಜಾಲ
ಮುಗಿಯಲಿ ಶೋಷಣೆ ಮಾಡುವಕಾಲ **(ಭೂಮಿ ಗುಂಡಗಿದೆ)**

ಎನ್ನುವಲ್ಲಿ ಗೆಲಿಲಿಯೋನ ಕಾಲದ ದೋಷಗಳ ಜೊತೆ ನಮ್ಮ ಕಾಲದ ಎಲ್ಲ ದೋಷಗಳನ್ನು ತೋರಿಸಿಕೊಟ್ಟಿದ್ದಾರೆ.

ಡಾ.ಸಿದ್ಧಲಿಂಗಯ್ಯನವರ 'ಆಯ್ದ ಕವಿತೆಗಳು' ಸಂಕಲನಕ್ಕೆ ಡಿ.ಆರ್.ನಾಗರಾಜ್ ಮುನ್ನುಡಿ ಬರೆಯುತ್ತ ಸಿದ್ಧಲಿಂಗಯ್ಯನವರನ್ನೊ 'ಉತ್ಪ್ರೇಕ್ಷಾಲಂಕಾರ ಚಕ್ರವರ್ತಿ!' ಎಂದು ಕರೆದಿದ್ದಾರೆ. "ಉತ್ಪ್ರೇಕ್ಷೆ ಎನ್ನುವುದು ಬಹುಪಾಲು ಕ್ರಾಂತಿಕವಿಗಳ ಏಕಮಾತ್ರ ಅಭಿವ್ಯಕ್ತಿ ತಂತ್ರ. ರಾಜಕೀಯ ತಂತ್ರಗಾರಿಕೆ ಸೌಂದರ್ಯಾತ್ಮಕ ತಂತ್ರಗಾರಿಕೆಯಾಗಿ ಭಾಷಾಂತರವಾಗುವದೇ ಇಲ್ಲ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಸಿದ್ಧಲಿಂಗಯ್ಯನವರು ಉಪಯೋಗಿಸಿದ ಇಕ್ರಲಾ, ವದಿರ್ಲಾ, ಎಬ್ರಲಾ ಎನ್ನುವ ಭಾಷೆ ನಾಗರಾಜರವರಿಗೆ ಉತ್ಪ್ರೇಕ್ಷೆಯಾಗಿ ಕಂಡಂತಿದೆ. ಶತಮಾನಗಳಿಂದ ಜಾತಿ ಸ್ತರದಲ್ಲಿ ದಲಿತರಾಗಿ ಮುಂದುವರೆದವರು ಉಪಯೋಗಿಸಿದ ಬಾಷೆ ಇಕ್ರಲಾ, ವದಿರ್ಲಾ ಎಬ್ರಲಾ ಆಗಿದೆ. ಅದರ ನೋವನ್ನು ದೈಹಿಕವಾಗಿ ಮಾನಸಿಕವಾಗಿ ದಲಿತ ಸಮುದಾಯ ಅನುಭವಿಸುತ್ತಾ ಬಂದಿದೆ. ಮುಂದುವರೆದವರು ಉಪಯೋಗಿಸಿದ ಭಾಷೆಯನ್ನೇ ಕಾಲದ ತಿರುವಿನಲ್ಲಿ ದಲಿತರು ಮುಂದುವರಿದವರ ಮೇಲೆ ಉಪಯೋಗಿಸಿದರೆ ಅದನ್ನು ಪ್ರಜಾಪ್ರಭುತ್ವದ ಬೆಳವಣಿಗೆ ಎಂದು ತಿಳಿಯಬೇಕಾಗುತ್ತದೆ. ಇದು ಬಯ್ಗುಳಗಳನ್ನು ಹಿಂದಿರುಗಿಸುವ ಕ್ರಿಯೆಯಲ್ಲ ದಮನದ ಉತ್ಕರ್ಷದಲ್ಲಿ ಮುಂದುವರೆದ ವ್ಯಕ್ತಿ ತಾನು ಉಪಯೋಗಿಸಿದ ಭಾಷೆಯನ್ನು ಮರಳಿ ತಾನೇ ಸ್ವೀಕರಿಸುವ ಸ್ಥಿತಿಗೆ ಬಂದಾಗ ಭೀತಿಗೊಳ್ಳುತ್ತಾನೆ. ಶಾಕ್ ಆಗಬೇಕಾದದ್ದು ಸಹಜವಾಗಿದೆ. ಇದು ಪ್ರಜಾಪ್ರಭುತ್ವದ ನಿಜವಾದ ಯಶಸ್ಸುಕೂಡಾ ಆಗಿದೆ. ಸಿದ್ಧಲಿಂಗಯ್ಯ ನಮ್ಮ ಮದ್ಯದ ಮಹತ್ವದ ಸೆಕ್ಯುಲರ್ ಕವಿಯಾಗಿದ್ದಾರೆ.

'ನೆನಪು' ಎನ್ನುವ ಕವನದಲ್ಲಿ ಒಂದರ ಮೇಲೊಂದು ಬತ್ತಿ ಬರುವ ರೂಪಕಗಳು ನೆನಪಿನ ತೀವ್ರತೆಯನ್ನು ಹಾಗು ಚಲನೆಯ ಗಾಢ ಅನುಭವವನ್ನು ಕೊಡುತ್ತವೆ:

ಹಾಡುವ ಹಕ್ಕಿ ಓಡುವ ಬಸ್ಸು
ಧುಮುಕುವ ಜೋಗದ ಜಲವನು ಕಂಡರೆ
ನಿನ್ನ ನೆನಪು ಗೆಳತಿ
ಕರೆಯುವ ಹಸುಗಳು ಕುಣಿಯುವ ನವಿಲು
ಚಂಗನೆ ನೆಗೆಯುವ ಜಿಂಕೆಯ ಕಂಡರೆ
ನಿನ್ನ ನೆನಪು ಗೆಳತಿ. (ನೆನಪು)

ಒಲವರಳಿದ ಆ ದಿನಗಳೆ ಹೂಗಳೆ
ಕಡಲ ತೀರಗಳೆ ಕಾಡದಿರಿ
ಬೆಳದಿಂಗಳು ತುಳುಕಾಡುವ ಹೊಳೆಗಳೆ
ಹಲವು ಬಣ್ಣಗಳೆ ಕಾಡದಿರಿ (ಕೋರಿಕೆ)

ಪ್ರೀತಿ ಎಂಬುದು ಗೆಳತಿ
ಮಿಂಚುಗಳ ಮಾಲೆಯೇನೆ
ಪಾರಿವಾಳದ ಎದೆಗೆ ಗುರಿಯಿಟ್ಟು ಬಿಟ್ಟ
ಬಾಣಗಳ ದಾಳಿಯೇನೆ **(ನಿನ್ನ ಕಣ್ಣಿನಮಾತು)**

ಸಿದ್ಧಲಿಂಗಯ್ಯನವರ ಕಾವ್ಯಭಾಷೆ:

ಕನ್ನಡ ಕಾವ್ಯ ಆಗಾಗ ಕೇಳರಿಯದಂತಹ ಹೊಸ ಹೊಸ ರೂಪಗಳನ್ನ ಹೊತ್ತು ನಿಂತಿದೆ. ಓದುವ ಕಾವ್ಯ, ಒಲಿದಂತೆ ಹಾಡುವ ಕಾವ್ಯ, ನರ್ತಿಸುವ ಮತ್ತು ಕೀರ್ತಿಸುವ ಕಾವ್ಯ, ಆಧುನಿಕ ಕಾವ್ಯ ಎಂದು ಮೊದಲಹಂತವನ್ನು ವಿಂಗಡಿಸಬಹುದು. ಆಧುನಿಕ ಕಾವ್ಯದಲ್ಲಿ ಆನಂದ ಮತ್ತು ಅರಿವನ್ನ ವಿಸ್ತರಿಸುವ ಕಾವ್ಯ, ಅಂತರಂಗ ಮತ್ತು ಬಹಿರಂಗದ ನೋವಿನ ಹೊರೆಹೊತ್ತಕಾವ್ಯ, ಪ್ರತಿಭಟನಾತ್ಮಕ ಮತ್ತು ಹೋರಾಟದ ಕಾವ್ಯ ಎಂದು ವಿಂಗಡಿಸಿಕೊಳ್ಳಬಹುದು. ಕವಿ ಡಾ.ಸಿದ್ಧಲಿಂಗಯ್ಯನವರನ್ನ ಈ ನೆಲೆಯಲ್ಲಿ ನೋಡಬಹುದು. 'ಹೊಲೆಮಾದಿಗರ ಹಾಡು" ಸಂಕಲನದ ಹೆಸರು ಮತ್ತು ಕಾವ್ಯಗಳಿಂದ ಕನ್ನಡ ಕಾವ್ಯಲೋಕಕ್ಕೇ ದಂಗುಬಡಿಸುವ ಹೊಸಭಾಷೆ, ಶೈಲಿ ಮತ್ತು ನಿರೂಪಣಾಕ್ರಮವನ್ನ ತಂದಿತ್ತವರು ಸಿದ್ಧಲಿಂಗಯ್ಯ. ಅವರ ಕಾವ್ಯದಲ್ಲಿ ಅವರು ಓಡಾಡಿದ ಪರಿಸರವಿದೆ. ದೇಸೀಯ ಸುಳಿಗಳಿವೆ. "ಒಂದು ಭಾಷೆ ಕೃತಿಯಲ್ಲಿ ದಾಖಲಾದಾಗ ಅಲ್ಲಿ ಕೇವಲ ಭಾಷೆ ಮಾತ್ರ ಮೂಡಿ ಬಂದಿರುವುದಿಲ್ಲ. ಬದಲಾಗಿ ಭಾಷೆಯೊಂದಿಗೆ ಆಯಾ ಜನಾಂಗದ ಸಂಸ್ಕೃತಿಯೂ ಮೂಡಿ ಬಂದಿರುತ್ತದೆ"[೭]

ಕರ್ನಾಟಕ ದಲಿತ ಸಂಘರ್ಷ ಸಮಿತಿಯವರು ಜನ ಸಂಘಟನೆಯನ್ನು ಮಾಡಲು ಸೂಜಿಮೊನೆಯಂತೆ ಆಕರ್ಷಿಸಿದ ಇವರ ಹಾಡುಗಳು ಜನರೊಡಲೊಳಗೆ ಅರಳಿ ನಿಂತ ಜನಪ್ರಿಯ ಹಾಡುಗಳಾಗಿವೆ. ಅವರ ಕವಿತೆಯಲ್ಲಿ ಶೋಷಿತ ಜನಾಂಗವೇ ಮಾತಾಡುವಂತಹ ತಾಜಾತನದ ಗಡುಸು ಭಾಷೆ ಇದೆ. ಈ ನೆಲೆಯಲ್ಲಿಯೇ ಈ ಹಿಂದಿನ ಡಾ. ಕಂಬಾರ ಮತ್ತು ಡಾ. ಡಿ.ಆರ್ ನಾಗರಾಜ್ ಅವರ ಹೇಳಿಕೆಗಳನ್ನ ಗಮನಿಸಬಹುದು. ಪ್ರಜಾವಾಣಿಯ ವಿಮರ್ಶೆಯಲ್ಲಿ ಡಾ. ಸಿ.ಎನ್.ರಾಮಚಂದ್ರನ್ ಅವರು "ಅಭಿವ್ಯಕ್ತಿಯ ನೆಲೆಯಲ್ಲಿ ಪ್ರಾರಂಭದಿಂದಲೂ ಇವರ ಕಾವ್ಯದಲ್ಲಿ ಎರಡು ಮುಖಗಳನ್ನು ಅಥವಾ ಎರಡು ಬಗೆಯ ನಿರೂಪಣೆಗಳನ್ನು ಕಾಣಬಹುದು. ಇವನ್ನ ಸ್ಥೂಲವಾಗಿ "ಸ್ವಭಾವೋಕ್ತಿ" ಮತ್ತು "ವಕ್ರೋಕ್ತಿ" ಎಂದು ಗುರುತಿಸಬಹುದು ಎನ್ನುತ್ತಾರೆ.

[illegible]

[illegible]

[illegible]

ಡಾ. ಡಿ.ಆರ್ ನಾಗರಾಜ್ ಅವರು "ಉತ್ಪ್ರೇಕ್ಷಾಲಂಕಾರ" ಎಡ ಪಂಥೀಯ ಕಾವ್ಯದ ಸಹಜ ಧರ್ಮ ಎನ್ನುವುದಾದರೆ ಸಿದ್ಧಲಿಂಗಯ್ಯ ಅ ಧರ್ಮದ ಅಧಿದೇವತೆ, ತೆಲುಗಿನಲ್ಲಿ ಶ್ರೀಶ್ರೀ ಕೂಡ ಇದೇ ರೀತಿಯ ಉತ್ಪ್ರೇಕ್ಷಾಲಂಕಾರ ಚಕ್ರವರ್ತಿ! ಮಹಾಪ್ರಸ್ಥಾನಂನ ಸಂಸ್ಕೃತ ಭೂಯಿಷ್ಟತೆ ಎಂಥವರನ್ನು ದಂಗುಬಡಿಸುತ್ತದೆ. ಜತೆಗೆ ಸಮೃದ್ಧವಾದ ಬ್ರಹ್ಮಣೀಯ ಮತ್ತು ವೈದಕೀಯ ಪ್ರತಿಮಾವಳಿ ಬೇರೆ. ಸಿದ್ಧಲಿಂಗಯ್ಯ ಆ ಬಗೆಯ ಅಸಂಗತ್ಯಕ್ಕೆ ಹೋಗುವುದಿಲ್ಲವಾದರೂ ಸದಾ ಉತ್ಪ್ರೇಕ್ಷಾಲಂಕಾರಕ್ಕೆ ಹಾತೂರೆಯುತ್ತಾರೆ." ಎಂದು ಅವರ ಭಾಷೆ ಕುರಿತಂತೆ ಸೊಗಸಾಗಿ ಹೇಳಿದ್ದಾರೆ.

❖

[illegible]
[illegible]
[illegible]
[illegible]
[illegible]
[illegible]
[illegible]

ಅಡಿ ಟಿಪ್ಪಣಿಗಳು

೧. ಡಾ. ಅರ್ಜುನ್‌ಗೊಳಸಂಗಿ : ಕನ್ನಡ ದಲಿತ ಸಾಹಿತ್ಯ: ಪುಟ–೧–೩–೩೨.

೨. ಲಕ್ಷ್ಮೀನಾರಾಯಣ ನಾಗವಾರ : ಬತ್ತದ ಬೆಳದಿಂಗಳು : ಪುಟ–೨–೭–೯–೨೨–೨೪–೩೨–೬೬–೯೭–೧೭೧–೨೨೬.

೩. ಡಾ. ಅಪ್ಪಗೆರೆ ಸೋಮಶೇಖರ : ಸುಟ್ಟಾವು ಬೆಳ್ಳಿಕಿರಣ :ಪು–೬ ಪು–೭೨.

೪. ಡಾ. ಸಿದ್ಧಲಿಂಗಯ್ಯ : ಹೊಲೆ ಮಾದಿಗರ ಹಾಡು : ಪುಟ–೪.

೫. ಕೀರ್ತಿನಾಥಕುರ್ತಕೋಟಿ : ನೂರು ಮರ, ನೂರು ಸ್ವರ : ಪುಟ–೪೦೧.

೬. ಡಾ. ಸಿದ್ಧಲಿಂಗಯ್ಯ : ಹೊಲೆ ಮಾದಿಗರ ಹಾಡು ಅಭೀಪ್ರಾಯ : ಜಿ.ಎಸ್. ಶಿವರುದ್ರಪ್ಪ: ಪುಟ–೩೬.

೭. ಜಿ. ಎಸ್. ಶಿವರುದ್ರಪ್ಪ : ದಲಿತ ಸಾಹಿತ್ಯ ಒಂದು ವಿಮೋಚನೆ: ದಲಿತ ಮಾರ್ಗ– ಪುಟ–೫೪–೩೫೩.

೮. ಡಿ.ಆರ್. ನಾಗರಾಜ್ : ಮೆರವಣಿಗೆ ಮುನ್ನುಡಿ : ಪುಟ–೧೪–೧೫.

೯. ಎಚ್. ದಂಡಪ್ಪ : ಬಡವರ ನಗುವಿನ ಶಕ್ತಿ : ಪುಟ–೧೪೧ ಪುಟ ೨೦೩.

ಅಧ್ಯಾಯ–೪

ಶ್ರೀಶ್ರೀ ಅವರ ಕಾವ್ಯಾಭಿವ್ಯಕ್ತಿಯ ಅನನ್ಯತೆ

ಶ್ರೀಶ್ರೀ ಅವರ ಕಾವ್ಯಾಭಿವ್ಯಕ್ತಿಯ ಅನನ್ಯತೆ

"ಯಾರ ಕವಿತಾ ಕವಿತಾಶಿಖರವು ವಿಪ್ಲವ ಪ್ರಭಂಜನವನ್ನು ಎಬ್ಬಿಸಿತೋ, ಯಾರು ಛಂದಸ್ಸುಗಳ ಸರ್ಪಬಂಧಗಳನ್ನು ಬಿಸುಟು ವಿಪ್ಲವಗೀತೆಗೆ ಶೃತಿ-ಗತಿಗಳನ್ನು ಮೇಳವಿಸಿದರೋ, ಯಾರ ಕವಿತ್ವವು ನೂತನ ಸಮಾಜ ಚೈತನ್ಯಕ್ಕೆ ಉಸಿರಾಯಿತೊ ಸಾಮಾಜಿಕ ವಿಪ್ಲವ ಚಳುವಳಿಗೆ ಪ್ರಾಣವಾಯಿತೋ, ಯಾರ ನುಡಿ, ಹಾಡು, ಬೋಧೆಗಳು ಯುವಪೀಳಿಗೆಗೆ ಸಮರಗಿತೆಯನ್ನು ಕಲಿಸಿದ್ದವೋ, ಯಾರ ಕಾವ್ಯವು ಸಾಹಿತ್ಯ ಲೋಕದ ಅನ್ಯಾಯ, ಸುಡುವ ಹಸಿವು, ಕೆಡುವುವ ವೇದನೆ, ದಾರಿದ್ರ್ಯ ದೌರ್ಜನ್ಯಗಳನ್ನು ಪರಿಷ್ಕರಿಸಿ ಬಹಿಷ್ಕರಿಸಿದರೋ, ಆ ಶ್ರೀಶ್ರೀ ವ್ಯಕ್ತಿಯಲ್ಲಿ ವಿಪ್ಲವ ಶಕ್ತಿ ಶೋಷಿತ ಜನ ವಿಮುಕ್ತಿಗಾಗಿ ಜಯಭೇರಿಯನ್ನು ಮೊಳಗಿಸಿದ ಮಹತ್ತರ ಕವಿತಾಮೂರ್ತಿ, ಅದಕ್ಕೇ ಶ್ರೀಶ್ರೀ ಎಂದರೆ ಚೈತನ್ಯ-ಹೋರಾಟ-ವಿಪ್ಲವ-ಅಭಿವೃದ್ಧಿ ಎಲ್ಲಕ್ಕೂ ಮೀರಿ ಶ್ರೀಶ್ರೀ ಎಂದರೆ ಮಾನವತೆ"[1]

ಇದು ಶ್ರೀ ಕತ್ತಿ ಪದ್ಮಾರಾವ್ ಅವರು ತೆಲುಗಿನ ಆಧುನಿಕ ಸೀಮಾಪುರುಷ ಶ್ರೀಶ್ರೀ ಬಗ್ಗೆ ಉದ್ಗರಿಸಿರುವ ಪ್ರಶಂಶನಾ ನುಡಿ.

ತೆಲುಗುಕಾವ್ಯ ಭಾವಕವಿತ್ವದ ಅಮಲಿನಲ್ಲಿ ಜಗವನ್ನೇ ಮರೆತು ಮಬ್ಬೇರಿದ ಸಮಯದಲ್ಲಿ, ಸ್ವಾತಂತ್ರ್ಯ ಸಂಗ್ರಾಮ ತೀವ್ರಗತಿಯಲ್ಲಿ ನಡೆಯುತ್ತಿದ್ದರೂ ಭಾರತದ ಭವಿಷ್ಯವು ಸಮಗ್ರ ಬದಲಾವಣೆಯೆಡೆಗೆ ಸಾಗದೆ ಉಪಶಾಂತಿಯ ಉಪಾಯಗಳಲ್ಲೇ ಕಣ್ಣಿಡಲು ಹವಣಿಸುತ್ತಿತ್ತು. ಆ ಸಮಯದಲ್ಲಿ ಶ್ರೀಶ್ರೀ ತೆಲುಗು ಕಾವ್ಯಲೋಕದಲ್ಲಿ ಬರಲಿರುವ ಅಥವಾ ಬರಬೇಕೆಂದು ಬಯಸಿದ, ನವಸಮಾಜದ ಸ್ಪಷ್ಟ ಚಿತ್ರಣವನ್ನು ತಮ್ಮ ಕಾವ್ಯದ ಮೂಲಕ ಕೊಡುತ್ತಾ ಹೊಂಬೆಳಕಾಗಿ ಮೂಡಿಬಂದರು. ತೆಲುಗು ಕಾವ್ಯಚರಿತ್ರೆಯಲ್ಲಿ ಹೊಸ ಮನ್ವಂತರದ ಹುಟ್ಟು ಹಾಕಿದರು.

ಗಾಂಧೀಜಿಯ ನಾಯಕತ್ವದಲ್ಲಿ ನಡೆಯುತ್ತಿದ್ದ ಅನೇಕ ಮುಖ್ಯವಾದ ಸುಧಾರಣೆ ಹೋರಾಟಗಳನ್ನು ನೇರವಾಗಿ ವೀಕ್ಷಿಸುತ್ತಿದ್ದರೂ ಜಗತ್ತಿನ ಮೂಲೆಮೂಲೆಗಳ ವಿದ್ಯಮಾನಗಳನ್ನು, ವೈಚಾರಿಕ ಸಾಹಿತ್ಯಿಕ ಬೆಳವಣಿಗೆಗಳನ್ನು ಶ್ರದ್ಧೆಯಿಂದ ಅಭ್ಯಸಿಸಿ ನಮ್ಮ ದೇಶವು ಹಿಡಿಯಬೇಕಾಗಿರುವ ದಾರಿಯನ್ನು ಇರುವ ದುರವಸ್ಥೆಯ ಸರಿಯಾದ ಪರಿಕಲ್ಪನೆಯ ಹಿನ್ನೆಲೆಯಲ್ಲೇ ಸೂಚಿಸಿದ ಪ್ರವಾದಿ ಕವಿ ಶ್ರೀಶ್ರೀ.

[illegible]

ಬಹುಶಃ ಇಷ್ಟನ್ನೇ ನೇರವಾಗಿ ಹೇಳಿಬಿಟ್ಟಿದ್ದರೆ ಶ್ರೀಶ್ರೀ ಮಹಾಕವಿ ಆಗುತ್ತಿದ್ದಿಲ್ಲ. ಹಳೆ ಭಾವ ಭಾಷೆ ಬಂಧನಗಳಲ್ಲಿ ಗೊಣಗುತ್ತಿದ್ದ ತೆಲುಗು ಕಾವ್ಯಕ್ಕೆ ಹೊಸ ಚೈತನ್ಯ-ನುಡಿಗಟ್ಟು-ನಡಿಗೆ-ರೂಪಗಳನ್ನು ಕೊಟ್ಟಿದ್ದರಿಂದ ಎನ್ನಬಹುದು.

ಅದಕ್ಕೆ ಅವರ ಯುಗ ನಿರ್ಮಾಪಕ ಕೃತಿ 'ಮಹಾಪ್ರಸ್ಥಾನಂ'ಗೆ ಮುನ್ನುಡಿ ಬರೆಯುತ್ತ ಚಲಂ "ನೆತ್ತರೂ ಕಣ್ಣೀರು ಕಲೆಸಿ ಹೊಸ ಟಾನಿಕ್ ತಯಾರು ಮಾಡಿದ್ದಾರೆ ಶ್ರೀಶ್ರೀ ಈ ವೃದ್ಧ ಪ್ರಪಂಚಕ್ಕೆ"[೨] ಎಂದು ಬಣ್ಣಿಸಿದ್ದಾರೆ.

ಅಲ್ಲದೆ ಅವರು "ಕೆಲದಿನಗಳಲ್ಲಿ ಇಂದು ಬೀಗುತ್ತಿರುವ ಕವಿಗಳು ಪ್ರತಿಯೊಬ್ಬರೂ ಶ್ರೀಶ್ರೀ ನೆರಳಕೆಳಗೆ ನಿಂತುಕೊಂಡು ತಮ್ಮ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳಬೇಕಾದ ಗತಿ ಬರುತ್ತದೆ" ಎಂದು ಭವಿಷ್ಯ ನುಡಿದರು. ಆ ಭವಿಷ್ಯವಾಣಿ ನಿಜವಾಯಿತು. ಹಸಿವಿನ ಯಾತನೆಗಳು ಅನಿವಾರ್ಯವಾಗಿದ್ದ, ಪ್ರಪಂಚದ ಆರ್ಥಿಕ ದುಸ್ಥಿತಿಯ ಸಮಯದಲ್ಲಿ ೧೯೩೪-೪೦ರ ಆರು ವರುಷದ ಅವಧಿಯಲ್ಲೆ ಬರೆದ ಎಲ್ಲ ಕವಿತೆಗಳು ಈ ಸಂಪುಟದಲ್ಲಿಲ್ಲ. ಪ್ರಪಂಚ ವ್ಯಾಪಕವಾಗಿ ಎದುರಿಸುತ್ತಿದ್ದ ದುಷ್ಕಾಲ ಯಾತನೆಗಳನ್ನು ಪ್ರಧಾನ ಇತಿವೃತ್ತವಾಗಿರುವಂತೆ ಇಲ್ಲಿ ಕವಿತೆಗಳನ್ನು ಸಂಕಲಿಸಲಾಗಿದೆ. ಪ್ರಸ್ತುತರೂಪದಲ್ಲಿ ಅದನ್ನು ೧೯೫೦ರಲ್ಲಿ ಪ್ರಥಮವಾಗಿ ಪ್ರಕಟಿಸಲು ಅವರ ಮಿತ್ರ ಮಚಲೀ ಪಟ್ಟಣದ ನಳಿನೀಕುಮಾರ್ ಆರ್ಥಿಕವಾಗಿಯೂ ಹಾರ್ದಿಕವಾಗಿಯೂ ಸಹಾಯಮಾಡಿದನು. ಎಳೆವರೆಯದಲ್ಲಿ ಅಕಾಲ ಮರಣಕ್ಕೆ ತುತ್ತಾದ 'ಉದಯ' ಪತ್ರಿಕಾ ಸಂಪಾದಕ ಕೊಂಪೆಲ್ಲ ಜನಾರ್ದನರಾಯರಿಗೆ ಈ ಸಂಕಲನ ಅರ್ಪಿತವಾಗಿದೆ.

ಈ ಸಂಕಲನದ ಮೂಲಕ ಶ್ರೀಶ್ರೀ ಕೊಳೆತುಹೋದ ಜಡಗಟ್ಟಿದ ಸಾಂಪ್ರದಾಯಿಕ ವ್ಯವಸ್ಥೆಯನ್ನು ಧ್ವಂಸಮಾಡಬೇಕು ಹೊಸ ಅರಿವಿನ ಶೋಷಣಾರಹಿತ ಸಮಾಜವನ್ನು ನಿರ್ಮಿಸಬೇಕು ಎಂಬ ಮಹಾದಾಶಯಕ್ಕೆ ತಕ್ಕಂತೆ ಅವರು ಕಾವ್ಯದ ಹಳೆಪದಗಳು, ಡಿಕ್ಷನ್, ವರ್ಣನೆಗಳು, ಅಲಂಕಾರಗಳು, ಛಂದಸ್ಸು, ಉಪಮಾನಗಳ ಪದ್ಧತಿಗಳನ್ನು ಇನ್ನು ಮತ್ತೆ ಮೇಲೇಳದಂತೆ ಅವುಗಳ ಸೊಂಟ ಮುರಿದರು.

"ಪ್ರಭುತ್ವಗಳು, ನ್ಯಾಯಾಲಯಗಳು, ರಕ್ಷಕ ಪಡೆಗಳು, ಸೆರೆಮನೆಗಳು, ನೇಣುಹಗ್ಗಗಳು, ಭಾವಕವಿತೆ ಇವೆಲ್ಲಾ ನಿಮ್ಮ ಪ್ರಿಯ ಮಿತ್ರರು ಯುದ್ಧಗಳಿಂದ, ಬಿಕ್ಷುಕರಿಂದ, ವಿಪ್ಲವಗಳಿಂದ, ಅಶಾಂತಿಯಿಂದ ನಿಮ್ಮನ್ನು ಕಾಪಾಡುತ್ತಾರೆ ನಿಮ್ಮ ಪ್ರಿಯ ಮಿತ್ರರು. ಇವರೆಲ್ಲರಿಗೆ ಅಧ್ಯಕ್ಷ ನಿಮ್ಮ ಡೊಂಗಿ ದೇವರು, ನಿಮ್ಮ ಧನಕ್ಕೇ ದಾಸ, ನಿಮ್ಮ ಡೊಂಗಿ ಪೂಜೆಗಳಿಗೆ ಸ್ವಾರ್ಥ ಪ್ರಾರ್ಥನೆಗಳಿಗೆ, ವಶಾನುವರ್ತಿ ಕಳ್ಳ, ಭಕ್ತ ಪರಾಧೀನ ಹತ್ತು ವರ್ಷ ತಡೆಯಿರಿ ಈ ನಡುವೆ ಆಸ್ತಿ ಮಾಡುವುದು ಮಕ್ಕಳನ್ನು ಪಡೆಯುವುದು, ಬೆಲೆ ಏರಿಕೆ ಇತ್ಯಾದಿಯಲ್ಲದೆ ನಿಮ್ಮ ಜೀವನವನ್ನು

ಅಮಿತವಾಗಿ ಪ್ರಭಾವಿಸುವಂತಹದು ಏನಾದರೂ ನಡೆದರೆ ಮತ್ತೆ ಹೊಸಕಾಪಿಕೊಂಡು ಶ್ರೀಶ್ರೀ ಪದ್ಯಗಳನ್ನು ಓದಿರಿ, ಆಗಲಾದರೂ ಅರ್ಥವಾಗುತ್ತೇನೋ..." ಎಂದು ಹೇಳಿದ ಚಲಂ ನಂತರ

"ಸ್ವಯಂ ಓದಿ, ಶ್ರೀಶ್ರೀಯನ್ನು ನೋಡಬೇಕೆನಿಸಿದರೆ ಸ್ವಯಂ ನೋಡಿ, ಯಾರ ಅಭಿಪ್ರಾಯವನ್ನು ಕೇಳಬೇಡಿ. ಮುಖ್ಯವಾಗಿ ಕವಿಯೆನಿಸಿಕೊಂಡವರು ಹೇಳಿದ್ದನ್ನು ಕೇಳಬೇಡಿ" ಎಂದು ಮಧ್ಯಮ ವರ್ಗದ ಜನರಿಗೆ ಚಲಂ ವ್ಯಂಗ್ಯ ಪೂರಿತವಾಗಿ ಶಿಪಾರಸ್ಸು ಮಾಡಿದ್ದಾರೆ. ಚಲಂ ಭಯ ಏನೆಂದರೆ ಆಕಾಶದಷ್ಟು ಎತ್ತರವಿರುವ ಶ್ರೀಶ್ರೀ ಕವಿತೆಯ ಬಗ್ಗೆ ಸರಿಯಾಗಿ ಅರ್ಥ ಮಾಡಿಕೊಳ್ಳದೆ ಅದರ ಧ್ಯೇಯ ಗೊತ್ತಾಗದೆ, ಮುಚ್ಚು ಮರೆ ಮಾತುಗಳಲ್ಲಿ ಆತನ ಬೆನ್ನು ತಟ್ಟಿ ಪರವಾಗಿಲ್ಲ ಎಂದು ಬಿಡುವ ವ್ಯರ್ಥ ಪ್ರಯತ್ನ ಮಾಡಿಬಿಡಬಹುದು ಎಂಬುದು. ಸಮುದ್ರ, ಬೆಂಕಿ, ಸಾಮಾನ್ಯ ಮನುಷ್ಯ, ಆಕಾಶ ಇತ್ಯಾದಿ ಶಬ್ದಗಳು ಶ್ರೀಶ್ರೀ ಕುರಿತಾಗಲೀ ಆತನ ಕಾವ್ಯ ಕುರಿತಾಗಲೀ ಮಾತನಾಡುವಾಗ ನಮ್ಮ ಮಾತಿನಲ್ಲಿ ಸಹಜವಾಗಿ ಬರುತ್ತವೆ. ಮಹಾಪ್ರಸ್ಥಾನಂ ತೆಲುಗಿನ ಎಂತಹ ಸಂದರ್ಭದಲ್ಲಿ ಬಂದಿತೆಂದು ಚಲಂ ವಿವರಿಸುತ್ತಾರೆ. " ಆ ಮೂಲೆಯಲ್ಲಿ ಹಳೆಯ ಗೋರಿಗಳ ಕಡೆ ಮುಖ ತಿರುಗಿಸಿಕೊಂಡು ಹಳೆಯ ಶಬ್ದಗಳಿಗೆ ಪಾಲಿಷ್ ಹೊಡೆಯುತ್ತಾ, ಕಲ್ಪನೆಗಳಿಗೆ ಕಟ್ಟು ಕಟ್ಟುತ್ತಾ, ಪ್ರೇಯಸಿಯ ಮೆಳ್ಳೆಗಣ್ಣುಗಳ ಮೇಲೆ ಪದ್ಯಗಳನ್ನು ಬರೆಯುತ್ತಿದ್ದಾರೆ. ರಾಮಾಯಣಗಳು, ಶರ್ಮಿಷ್ಠಗಳನ್ನು ವೃದ್ಧ ಮುನಿಗಳು ಬರೆದು ಅರ್ಪಿಸುತ್ತಿದ್ದಾರೆ. 'ಭಾರತಿಗೆ' ನೈವೇದ್ಯವಾಗಿ. ಅವರ ಧೈರ್ಯ ವಚನಗಳನ್ನು ಕೇಳಿ ಮತ್ತೆ ನಿದ್ದೆಹೋಗಿ, ರಣಹದ್ದುಗಳ ರೆಕ್ಕೆ ಸಪ್ಪಳ, ಸಮುದ್ರದ ಪ್ರಪಂಚ ಘೋಷ, ಚಂಡಮಾರುತದ ಬೋರ್ಗರೆತ ಕೇಳಿ ತಡೆದುಕೊಳ್ಳ ಬಲ್ಲ ಶಕ್ತಿಯಿದ್ದರೆ ಈ ಪುಸ್ತಕ ತೆರೆಯಿರಿ"

"ದೇವರು ಅಧಿಕಾರಿಗಳು,ನಿಧಿಗಳು, ಸೌಖ್ಯಗಳು ನೀತಿಗಳು ಸ್ವರ್ಗ, ಸೌಜನ್ಯಗಳನ್ನು ಮೂಟೆಕಟ್ಟಿಕೊಂಡು ಕುಲುಕುವ ನಿಮಗೆ ಅರ್ಥವಾಗದ ಬಾಧೆ, ಮರಣ, ದಾರಿದ್ರ್ಯ, ಅವಿಶ್ವಾಸ, ಅಶಾಂತ ಇವೆಲ್ಲ ಅರ್ಥವಾಗದೆ ಗಟ್ಟಿಯಾಗಿ ಸೃಷ್ಟಿಯನ್ನೇ ಪ್ರಶ್ನಿಸುತ್ತಿರುವ ಯುವಕರ ಲಕ್ಷಕಂಠಗಳನ್ನು ಏಕವಾಡಿ ಮಾತನಾಡುತ್ತಿದ್ದಾನೆ ಶ್ರೀಶ್ರೀ" ಎಂದು ಚಲಂ ಹೇಳಿದ್ದಾರೆ.

ಆಧುನಿಕ ತೆಲುಗು ಕಾವ್ಯದ ಪಿತಾಮಹರೆಂದು ಇಬ್ಬರನ್ನು ಗುರುತಿಸಲಾಗುತ್ತದೆ. ಒಬ್ಬರು ಗುರುಜಾಡ ಅಪ್ಪಾರಾವು (ಜನಪರ ನಿಲುವಿನ ಕವಿ) ಇನ್ನೊಬ್ಬರು ರಾಯಪ್ರೋಲು ಸುಬ್ಬರಾವು (ಇವರು ರಮ್ಯಪಂಥದ ಪ್ರಾರಂಭಿಕರು) ಶ್ರೀಶ್ರೀ ಅನುಸರಿಸಿದ್ದು ಗುರುಜಾಡರ ಜಾಡನ್ನು, ಅವರಿಗಿಂತ ಮತ್ತೊಂದು ಹೆಜ್ಜೆ ಮುಂದೆ ಹೋಗಿ ಸಾಮಾಜಿಕ ಕ್ರಾಂತಿ ಹಾಗೂ ಅಂತರಾಷ್ಟ್ರೀಯ ದೃಷ್ಟಿ ಇವುಗಳನ್ನು ಕಾವ್ಯದಲ್ಲಿ ತಂದರು.

ಕಮ್ಯುನಿಜಂ ಶ್ರೀಶ್ರೀಯಲ್ಲಿ ಕೇವಲ ಬೌದ್ಧಿಕ ನೆಲೆಯಲಿಲ್ಲ. ಅದು ಅವರ ಭಾವ ಸೆಲೆಯ ಮೂಲದಲ್ಲಿದೆ. ಶ್ರೀಶ್ರೀಯ ಜೀವಾಳವಾದ ಈ ಸಮತಾವಾದವೇ ಮುಂದಿನ ತೆಲುಗು ಕಾವ್ಯಕ್ಕೆಲ್ಲ ಬುನಾದಿ.

ಆದ್ದರಿಂದಲೇ ಶ್ರೀಶ್ರೀ ಕಾವ್ಯದಲ್ಲಿ ಬದುಕಿನ ಭೌತಿಕ ಬುನಾದಿ, ಶ್ರಮಗೌರವ, ಎಲ್ಲ ಜಾತಿ, ಕುಲ ವರ್ಣಭೇಧಗಳನ್ನು ಮೀರಿದ ಮಾನವೀಯತೆ, ವೈಜ್ಞಾನಿಕ ದೃಷ್ಟಿ, ಅಂತರಾಷ್ಟ್ರೀಯತೆ, ಹಿಂದಿನ ರಾಜರ ಚರಿತ್ರೆಯ ಬಗ್ಗೆ ತಿರಸ್ಕಾರ, ಇಂದಿನ ಶೋಷಕ ವರ್ಗದ ವಿರುದ್ಧ ಕ್ರೋಧ, ಶೋಷಿತರ ಬಗ್ಗೆ ತಾದಾತ್ಮ್ಯ ಮುಂತಾದ ಧೋರಣೆಗಳು ಒಡೆದು ಕಾಣುತ್ತವೆ.

ಕಾವ್ಯವನ್ನು ಅತ್ಯಂತ ವಿಶಾಲವಾದ ತಳಹದಿಯ ಮೇಲೆ ರೂಪಿಸಿದ್ದು-ವ್ಯಾಪಿಸಿದ್ದು ಶ್ರೀಶ್ರೀಯವರ ಹಿರಿಮೆ. ಅಂತರಾಷ್ಟ್ರೀಯ ಮಟ್ಟದ ಆಧುನಿಕ ಕಾವ್ಯ ಪ್ರಯೋಗಗಳನ್ನು ಅನುವಾದಿಸಿ ಮೊಟ್ಟ ಮೊದಲು ತೆಲುಗಿಗೆ ಕೊಟ್ಟವರು ಶ್ರೀಶ್ರೀಯವರೇ. ಅವುಗಳಲ್ಲಿ ಸರ್ರಿಯಾಲಿಜಂ, ಡಾಡಾಯಿಜಂ, ಮುಂತಾದ ಪ್ರಯೋಗಗಳು ಇವೆ. ಆದರೆ ಇವು ಕೇವಲ ಮಾದರಿಗಳನ್ನು ಸ್ಯಾಂಪಲ್‌ಗಾಗಿ ತೋರಿಸಿದ್ದು ಅಷ್ಟೆ. ಇವೆಲ್ಲವುಗಳಲ್ಲಿನ ಪರಿಶ್ರಮದಿಂದಾಗಿ ಅವರ ಕಾವ್ಯದಲ್ಲಿ ಚಮತ್ಕಾರಿಕತೆ, ವೈಚಿತ್ರ, ಅರ್ಥ-ಪದಗಳ ನಾಟ್ಯ ಮುಂತಾದ ಗುಣಗಳು ಮೈಗೂಡಿರುವುದು ಕಂಡುಬರುತ್ತದೆ. ಕಾವ್ಯದ ಸಾಧ್ಯತೆಯ ಮೇರೆಗಳನ್ನು ಅವರು ವಿಸ್ತರಿಸಿದರು.

“ಮಹಾಪ್ರಸ್ಥಾನಂ ೧೯೫೨-೫೪ರ ನಡುವೆ ಈ ಸಂಕಲನವು ೨೦ ಸಲ ಪುನರ್ಮುದ್ರಣಕಂಡಿದೆ. ಇಂದಿಗೂ ಅದರ ಜನಪ್ರಿಯತೆ ಕುಗ್ಗಿಲ್ಲ. ೧೯೮೪ರ ನಂತರ ಮೂರು ಮುದ್ರಣಗಳಾಗಿವೆ. ಸಾಹಿತ್ಯ ವಿದ್ಯಾರ್ಥಿಗಳ ಪಂಡಿತರ ನೆನಪಿನಲ್ಲಿ ಇನ್ನು ಅನೇಕಾನೇಕ ಪದ್ಯಪಂಕ್ತಿಗಳು ನೆಲೆನಿಂತಿವೆ. ಲಂಡನ್ನಿನ ಡಾ. ಗೋಪಾಲಕೃಷ್ಣಮೂರ್ತಿ ವಿದೇಶಾಂದ್ರ ಪ್ರಕಾಶನದಿಂದ ಶ್ರೀಶ್ರೀ ಸ್ವಹಸ್ತಾಕ್ಷರದಲ್ಲಿಯೂ, ಅವರ ಶ್ರೀಕಂಠದಲ್ಲಿಯೂ ಈ ಕವಿತೆಗಳನ್ನು ಅಕ್ಷರ ಧ್ವನಿರೂಪದಲ್ಲಿ ಪ್ರಕಟಿಸಿದರು. ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ ಸಂಪುಟಗಳೊಂದಿಗೆ ಈ ಕ್ಯಾಸೆಟ್‌ಗಳನ್ನು ಷೋಕೇಸಿನಲ್ಲಿಡುವುದು ಪ್ರತಿಷ್ಠೆಗೆ ಕಾರಣವೆನಿಸಿತು. ಒಬ್ಬ ಕವಿಯು ತಾನು ಬದುಕಿರುವಾಗಲೇ ಇಷ್ಟು ಮಹತ್ತರ ಗೌರವಕ್ಕೆ ಪಾತ್ರನಾಗುವುದು ವಿರಳ. ಈ ಸಂಪುಟದ ಕೆಲ ಗೀತೆಗಳಿಗೆ ಸ್ವರ ಪ್ರಸ್ತಾರ ಹಾಕಿ, ಸಂಗೀತ ನಾಟ್ಯ ರೂಪಗಳಲ್ಲಿ ಅಳವಡಿಸಿ, ಸಿನಿಮಾಗಳಲ್ಲಿ ಸೇರಿಸಿ ಸಂತೋಷಿಸಿದರು.”[೩] ಕೆಲವರು.

ಮಹಾಪ್ರಸ್ಥಾನಂ ಸಂಕಲನದಲ್ಲಿ ೪೦ ಕವಿತೆಗಳಿವೆ. ಮೊದಲ ಕವಿತೆಯ ಶೀರ್ಷಿಕೆಯೇ ಸಂಪುಟದ ಹೆಸರಾಗಿದೆ. ಅದೊಂದು ಕಾಯಿತು ಹಾಡು, ಅದು

ಶಿಷ್ಟಾ ಉಮಾಮಹೇಶ್ವರ ರಾವ್ ಬರೆದ 'ಮಾರೋ ಮಾರೋ' ಕವಿತೆಗೆ ಪ್ರತಿಯಾಗಿ ಬರೆದದ್ದಲ್ಲ. ಎಡ್ಗರ್ ಅಲೆನ್‌ಪೋ ಬರೆದ 'ದಿ ಬೆಲ್ಸ್' ಕವಿತೆಯನ್ನು ಓದಿ ಆವೇಶಗೊಂಡು ರಚಿಸಿದ ಕವಿತೆ.

ಕವಿ ನಮ್ಮ ಮುಂದೆ ಸಮತಾ ಸಮಾಜದ ಭವಿಷ್ಯವನ್ನಿಟ್ಟು ಅದನ್ನು ಕಟ್ಟುವುದರ ಕಡೆಗೆ ಸಾಗುವ ಕರೆ ನೀಡುತ್ತಾರೆ. ಅದನ್ನು ಮತ್ತೊಂದು ಪ್ರಪಂಚ ಎಂದು ಕರೆದಿದ್ದಾರೆ.

ಮತ್ತೊಂದು ಪ್ರಪಂಚ
ಮತ್ತೊಂದು ಪ್ರಪಂದ
ಮತ್ತೊಂದು ಪ್ರಪಂದ ಕರೆದಿದೆ!
ನಡೆಯಿರಿ ಮುಂದಕೆ
ನುಗ್ಗಿರಿ ನೂಕುತ
ಹೋಗೋಣ ಹೋಗೋಣ ಮೇಲ್ಮೇಲಕೆ!

ಶ್ರೀಶ್ರೀ ಹೇಳುವ ಆ ಪ್ರಪಂಚದ ದಾರಿಯೇನು ಅಷ್ಟು ಸುಲಭವಾದದ್ದಲ್ಲ.

ದಾರಿಯುದ್ದಕೂ ಗುಂಪಿಗೆ ನೆತ್ತರು
ತರ್ಪಣ ಕೊಡುತಾ ನಡೆಯಿರಿ ಮುಂದಕೆ!
ಮಾರ್ಗವ ನಡೆಯುತ ಬೇಟೆಗಳಾಡುತ
ಕೋಟಗಳೆಲ್ಲವ ದಾಟಿರಿ!
ನದಿ ನದಂಗಳು
ಅಡವಿ ಗುಡ್ಡಗಳು
ಮರುಭೂಮಿಗಳು ನಮಗೆಡರೇ?

ಎಷ್ಟೇ ಕಷ್ಟ-ಅಡ್ಡಿಗಳಿರಲಿ ನಮ್ಮನ್ನು ತಡೆಯಲಾರವು. ಇದು ವೀರರ ಮಾರ್ಗ. ಹೇಡಿಗಳ ಜಡವಾದಿಗಳ ಮಾರ್ಗವಲ್ಲ.

"ಎಲುಬುಗಳು ಕೊಳೆತ
ವಯಸ್ಸು ಕಳೆದ
ಸೋಮಾರಿಗಳೇ ಸಾಯಿರಿ
ರಕ್ತ ಕುದಿಯುವ
ಶಕ್ತಿಯು ತುಂಬಿದ
ಸೈನಿಕರೆಲ್ಲಾ ಬನ್ನಿರಿ!
ಹರೋ ಹರೋ ಹರಾ

ಹರ ಹರ ಹರಹರ
ಹರೋ ಹರಾ ! ಎಂದು ಚಲಿಸಿರಿ!"

ಎಂದು ಯುದ್ಧೋತ್ಸಾಹದಿಂದ ನಡೆಯಿರೆಂದು ಹುರಿದುಂಬಿಸುತ್ತಾರೆ. ತ್ರೇತಾಜ್ಞಿಪ್ರಳಯ ನಾಟ್ಯಗಳು, ಧನಂಜಯ, ಅಗ್ನಿಕಿರೀಟ ಹೋಮ ಜ್ವಾಲೆಯಂತಹ ಮತಸಂಬಂಧ ಪ್ರತಿಮೆಗಳನ್ನು ಲೌಕಿಕ ಪ್ರಸಂಗಗಳಂತೆ ಮಾರ್ಪಡಿಸಿ ಪ್ರಯೋಗಿಸಿದರು. ಅಂದಿನಿಂದ ಇಂದಿನವರೆಗೆ ಎಡಪಕ್ಷದ ಸಭೆಗಳಲ್ಲೂ ಅನ್ಯಸಭೆಗಳಲ್ಲೂ ಪದ ಸಂಚಲನದ ಹಾಡು ಪ್ರತಿಧ್ವನಿಸುತ್ತಲೇ ಇರುತ್ತದೆ. ತರುವಾಯ ಸುಪ್ರಸಿದ್ಧ ರಂಗಭೂಮಿಯ ನಟ ಬಂದಾ ಕನಕಲಿಂಗೇಶ್ವರ ರಾವು ಹಾಡಿದಾಗ ಅದನ್ನು ಚಲನ ಚಿತ್ರೀಕರಣ ಮಾಡಿದರು.

ಕಾಣಿಸಲಿಲ್ಲವೆ ಮತ್ತೊಂದು ಪ್ರಪಂಚದ
ಅಗ್ನಿ ಕಿರೀಟದ ಧಗ ಧಗ
ಕೆಂಪುಬಾವುಟದ ನಿಗನಿಗ
ಹೋಮಜ್ವಾಲೆಯ ಭುಗ ಭುಗ"

ಎನ್ನುತ್ತ ಕವಿ ಇಲ್ಲಿ ಸಮತಾ ಸಮಾಜದ ಸಂಕೇತವಾದ ಕೆಂಪು ಬಾವುಟವನ್ನು ಅದನ್ನು ಪಡೆಯಲು ಮಾಡಬೇಕಾಗಿರುವ ಹೋರಾಟದ ಭೀಕರತೆಯನ್ನು ತಿಳಿಸಿದ್ದಾರೆ.

ಎರಡನೇ ಕವಿತೆ 'ಐ' ವ್ಯಕ್ತಿ ನಿಷ್ಠಭಾವನೆಯಂತಿರುವ ಇದರಲ್ಲಿ ತಾನೇ ಒಂದು ಭೂತವೆಂದೂ, ಯಜ್ಞೋಪವೀತವೆಂದೂ, ಕ್ರಾಂತಿಗೀತೆಯೆಂದು ಸಾರಿದರು. ತಾನು "ಸ್ಮರಿಸ್ತೇ ಪದ್ಯಂ ಅರಿಸ್ತೇ ವಾದ್ಯಂ' ಅನಲ ವೇದಿಕ ಮುಂದು ಅಸ್ತ್ರ ನೈವೇದ್ಯಂ" ಆಗುತ್ತೇನೆಂದು ಹೇಳಿದರು. ತನ್ನ ಮಹೋದ್ರೇಕಗಳು ಭವಭೂತಿಯ ಶ್ಲೋಕಗಳಂತೆಯೂ ಪರಮೇಷ್ಠಿಯ ಗಲಿಬಿಲಿ ಎಂತಲೂ ಘೋಷಿಸಿದರು. ಗೀತೆಯ ಕೊನೆಗೆ ತನ್ನ ದಾರಿ ಇತರರಿಗೆ ಅಸಾಧ್ಯವಾದ ದಾರಿಯೆಂದೂ, ದ್ವಂದ್ವಾತೀತವಾಗಿ ನಿರರ್ಗಳವಾಗಿ ಆತ್ಮಸ್ತುತಿ ಮಾಡಿಕೊಂಡಿದ್ದಾರೆ.

ಶ್ರೀಶ್ರೀ ಆಡುನುಡಿಯ ಕವಿ ನಾನು ಎನ್ನುತ್ತಾರೆ. ಆದರೆ ಇದನ್ನೇ ಆಡುಭಾಷೆ ಎನ್ನುವುದಾದರೆ ಇನ್ನು ಕಾವ್ಯಭಾಷೆ ಎನ್ನುವುದು ಹೇಗಿದ್ದೀತು? ಸಂಸ್ಕೃತ ಭೂಯಿಷ್ಠ ಜಗತ್ತಿನೊಡನೆ ಶ್ರೀಶ್ರೀಯವರ ತೀವ್ರ ಮುಖಾಮುಖಿ ಆಶ್ಚರ್ಯ ಹುಟ್ಟಿಸುತ್ತದೆ. ಬ್ರಾಹ್ಮಣ ಸಂಸ್ಕೃತಿಯ ಪ್ರತಿಮೆ ಮತ್ತು ಮೌಲ್ಯಗಳ ಜೊತೆಗೆ ಈ ಪದ್ಯ ಮುಖಾಮುಖಿಯಾಗಿದೆ.

'ಜಯಭೇರಿ' ಎಂಬ ಕ್ರಾಂತಿಕಾರಿ ಹಾಡಂತೂ ಸಿನಿಮಾ ಹಾಡಾಗಿಯೂ ವೇದಿಕೆಗಳ ಕ್ರಾಂತಿಗೀತೆಯಾಗಿಯೂ ಸಾಕಷ್ಟು ಜನಪ್ರಿಯವಾಗಿದೆ.

ನಾನು ಸಹಿತ
ಪ್ರಪಂಚಾಗ್ನಿಗೆ
ಸಮಿತ್ತು ಒಂದನು ಆಹುತಿ ನೀಡಿದೆ!
ನಾನು ಸಹಿತ
ವಿಶ್ವ ಸೃಷ್ಟಿಗೆ
ಅಶ್ರುವೊಂದನು ಧಾರೆ ಎರೆದೆ!
ನಾನು ಸಹಿತ
ಭುವನ ಘೋಷಕೆ
ಉನ್ಮತ್ತಕೊರಳ ತೆರೆದುಕೂಗಿದೆ!

ಎಂದು ಶೋಷಿತರೆಲ್ಲರ ಧ್ವನಿಯಾಗಿ ತಾನು ಇಡೀ ವಿಶ್ವದ ಅಣುಭಾಗ ಎಂಬ ವಿನಯತೆಯಿಂದಲೇ ಪ್ರಾರಂಭವಾಗುವ ಈ ಕವಿತೆಯಲ್ಲಿ ಅಪರೂಪವೆನ್ನುವ ಹೊಸ ರೂಪಕಗಳಿವೆ.

ಅಂಬರದಿಂದ ಇಣುಕಿ ನೋಡುವ
ಬಣ್ಣ ಬಣ್ಣದ ತಾರೆಗಳೆಲ್ಲಾ ಉದುರಿ
ರಕ್ತ ಕಕ್ಕುತ್ತಾ
ಸಿಡಿದು ಹೋಗುತ್ತವೆ!
ಹಗಲುಗಳೆಲ್ಲಾ ಒಡೆದು ಹೋಗಿ
ನಿಶಿಥಿಗಳೆಲ್ಲಾ ಸವೆದು ಹೋಗಿ
ಮಹಾಪ್ರಳಯ ಜಗದ ತುಂಬಾ
ಪ್ರಗಲ್ಭಿಸುತ್ತದೆ!
ನಾನೊಬ್ಬನೇ ಧಾತ್ರಿ ತುಂಬಾ
ತುಂಬಿಹೋಗಿ
ನನ್ನ ಕೊರಳ ದನಿ ತುಂತುರಾಗಿ
ಜಗವೆಲ್ಲಾ ಹನಿಯಾಗಲು
ಆ ಮೂಹೂರ್ತ ಆಗಮಿಸುತ್ತದೆ.
....
....
ನಾನು ಸಹಿತ
ವಿಶ್ವವೀಣೆಗೆ
ತಂತಿಯಾಗಿ ಆರೋಹಣ
ಅವರೋಹಣವಾಗುತ್ತೇನೆ!

ನಾನು ಸಹಿತ
ಭುವನ ಭವನದ
ಪತಾಕೆಯಾಗಿ ಮೇಲೇಳುತ್ತೇನೆ!

ಎಂದು ಹಾಡುವ ಈ ಗೀತೆ ಇಂದಿಗೂ ಕೂಡಾ ಸಾಹಿತ್ಯ ಸಭೆಯಲ್ಲಲ್ಲದೇ ರಾಜಕೀಯ ಸಭೆಗಳಲ್ಲಿ ಕೂಡಾ ಮೊದಲ ಒಂಭತ್ತು ಮತ್ತು ಕೊನೆಯ ಒಂಭತ್ತು ಸಾಲುಗಳು ಉದಾಹೃತವಾಗುತ್ತವೆ.

ಏನೋ
ಏನೆಲ್ಲ, ಏನೇನೋ
ಘೋಷಣೆಗಳು ಕೇಳಿಬರುತ್ತಿವೆ!
ಗುಂಡಿಗೆಗಳು ಒಡೆದುಹೋಗುತ್ತಿವೆ!

ಯಾರೋ
ಯಾರ್‍ಯಾರೋ ಯಾರ್‍ಯಾರೋ
ತಲೆ ಹೊಯ್ದುಕೊಂಡು
ನಗ್ನವಾಗಿ ನರ್ತಿಸುತ್ತಿದ್ದಾರೆ! ಭಯೋ
ದ್ವಿಗ್ನವಾಗಿ ವರ್ತಿಸುತ್ತಿದ್ದಾರೆ.
....
....
ಇಂದೇ
ಇವತ್ತೇ, ಈ ದಿನವೇ
ಜಗವೆಲ್ಲ ಬಲಿ ಸಮಾರಂಭ!
ನರಜಾತಿಗೆ ಬದಲಾವಣೆ!
ನವಜೀವನ ಶುಭಸಮಯ! ಅಭ್ಯುದಯ!

ಇಲ್ಲಿನ ವಿವರಗಳು ಎರಡನೇ ಪ್ರಪಂಚ ಮಹಾಯುದ್ಧ ಕಾಲದವು. ಆಗ ಕರಗಿದ ಮೇಣದಬತ್ತಿಗಳಿಂದ ಆಗ ಹರಿದ ತಂತಿಗಳಿಂದ, ಗತಿಸಿದ ನವಯೋಧರ ಬಲಿಪೀಠದಿಂದ "ನರಜಾತಿಗೆ ಪರಿವರ್ತನೆ, ನವಜೀವನ ಶುಭಸಮಯ" ಆಗಮಿಸುತ್ತಿದೆ. ಎಂಬ ಆಶಾಭಾವ ವ್ಯಕ್ತಪಡಿಸಿದ್ದಾರೆ.

'ಅವತಾರ' ಕವಿತೆಯಲ್ಲಿ ಹಿಂದಿನ ಪರಿಕಲ್ಪನೆಗೆ ವಿರುದ್ಧವಾಗಿ ಹಿಂದಿನ ದೇವತೆಗಳ ವಾಹನಗಳು ತಂತಮ್ಮ ಊಳಿಗ ಬಂಧನಗಳನ್ನು ಕಿತ್ತೆಸೆದು ಹೊರಬರುವ ವರ್ಣನೆ ಇದೆ.

ಯಮನ ಕೋಣದ ಲೋಹಗಂಟೆಗಳು
ಮೋಡದ ಮರೆಯಲ್ಲಿ ಖಣಿಲ್ಲೆಂದವು
ನರಲೋಕದ ನಾಯಿಗಳು
ಸರಪಳಿ ಕಿತ್ತುಕೊಂಡು ನುಗ್ಗಿದವು
ಉದಯ ಸೂರ್ಯನ ಸಪ್ತಹಯಗಳು
ನೊರೆಯುಗುಳುತ್ತ ಓಟಕಿತ್ತವು
ಕನಕ ದುರ್ಗೆಯ ಚಂಡಸಿಂಹವು
ಜೂಲು ಕೊಡವಿ ಆಕಳಿಸಿದೆ
ಇಂದ್ರದೇವನ ಮುದ್ದಾನೆಯು
ಘೀಳಿಟ್ಟು ಸವಾಲು ಮಾಡಿದೆ
ನಂದೀಶ ಗುಟುರು ಹಾಕುತ್ತ
ಗಂಗೆದೊಗಲಲ್ಲಾಡಿಸಿ ಕಾಲುಕೆದರಿದ

ಆದಿ ವರಹ ಗುರಗುಟ್ಟುತ್ತ
ಕೋರೆ ಚಾಚಿದ.
ಭೂಮಿ ತಾಯಿಗೆ
ಹೆರಿಗೆ ನೋವು
ಹೊಸ ಸೃಷ್ಟಿಯ ಸ್ಫುರಿಸುತ್ತವೆ!

'ಜಗನ್ನಾಥ ರಥಚಕ್ರಗಳು' ಕವಿತೆಯಲ್ಲಿ ಇಲ್ಲಿಯುವರೆಗೆ ರಥಚಕ್ರಗಳು ಮೇಲುವರ್ಗದವರ ಪ್ರತಿನಿಧಿಯಾಗಿ ಆಕಾಶದಲ್ಲಿ ತೇಲುವಂತಿದ್ದರೆ – ಅದನ್ನು ಕವಿ ಭೂಮಿಗೆ ಎಳೆ ತಂದು ಶೋಷಿತ ವರ್ಗದ ರಕ್ಷಣೆಗಾಗಿ ನಡೆಸಿದ್ದಾರೆ.

ಪತಿತರೇ!
ಭ್ರಷ್ಟರೇ
ಯಾತನಾಸರ್ಪದುಷ್ಟರೆ!
ಬದುಕು ಸುಟ್ಟು
ಕೆಲಸಕ್ಕೆ ಬಾರದವರಾಗಿ
ಶನಿದೇವತೆ ರಥ ಚಕ್ರದ
ಅಡಿಯಲಿ ಸಿಲುಕಿ ನಲುಗಿದ
ದೀನರೇ!
ಹೀನರೇ!
ಕೂಳಿಲ್ಲದ, ಗೂಡಿಲ್ಲದ
ಪಕ್ಷಿಗಳೇ! ಬಿಕ್ಷುಗಳೇ!

ಸಖಿಯರಿಂದ ತಿರಸ್ಕೃತರೇ
ಜನರಿಂದ ತಿರಸ್ಕೃತರೇ
ಸಮೂಹದಿಂದ ಬಹಿಷ್ಕೃತರೇ
ಗುಟುಕು ಜೀವರೇ
ಚ್ಯುತಾಶಯರೇ
ಹೃತಾಶಯರೇ
ಹತಾಶರಾಗಿ
ಅಳಬೇಡಿ, ಅಳಬೇಡಿ!
. . . . .
. . . . .
ಬರುತಿದೆ ಬರುತಿದೆ
ಜಗನ್ನಾಥ
ಜಗನ್ನಾಥ
ಜಗನ್ನಾಥ ರಥ ಚಕ್ರ!
. . . . .
. . . .
ಅಂಬರ ದಾರಿಗಳ ಹಾದು
ಸಂಭ್ರಮದಿಂದ ಹೋಗುವ
ಅರಚುತ್ತಾ ಸಾಗಿ ಹೋಗುವ
ಜಗನ್ನಾಥ ರಥ ಚಕ್ರಗಳು
ರಥಚಕ್ರದ ಪ್ರಳಯ ಘರ್ಜನೆ
ಭೂಮಾರ್ಗ ಹಿಡಿಸುತ್ತೇನೆ!
ಭೂಕಂಪ ಹುಟ್ಟಿಸುತ್ತೇನೆ!

. . . . .
. . . . .
ಅಳಬೇಡಿರಿ ಅಳಬೇಡಿರಿ!
ಬಂತು, ಬಂದೇ ಬಿಟ್ಟಿತು
ಜಗನ್ನಾಥ,
ಜಗನ್ನಾಥ,
ಜಗನ್ನಾಥ ರಥ ಚಕ್ರಗಳು,
ಜಗನ್ನಾಥ ರಥ ಚಕ್ರಗಳು,
ರಥ ಚಕ್ರಗಳು

ರಥ ಚಕ್ರಗಳು
ರಥ ಚಕ್ರಗಳು, ರಥ ಚಕ್ರಗಳು
ಬಾ ಬನ್ನಿರೋ! ಬರ್‍ರೋ! ಬರ್‍ರಿ!
ಈ ಲೋಕ ನಿಮ್ಮದೇ ! ಅಂದುಕೊಳ್ಳಿ!
ನಿಮ್ಮ ರಾಜ್ಯವ ನೀವೇ ಆಳಿರಿ!

ಶ್ರೀಶ್ರೀ ಪ್ರಳಯಾನಂತರದ ಸೃಷ್ಟಿಭಾವನೆಗೆ ನವವ್ಯಾಖ್ಯಾನ ನೀಡಿದರು. 'ಜ್ವಾಲಾತೋರಣಂ'ನಲ್ಲಿ ಇಲ್ಲಿ ಸ್ವರ್ಗ ನರಕಗಳ ಸರಳಿನಾಟವಿದೆ. ಚಿತಾಗ್ನಿಕುಂಡವಿದೆ. ಸಮಾಧಿಗಳಿವೆ. ಹಿರಣ್ಯನೇತ್ರನ ಪದಾಘಾತ, ಕೃದ್ಧ ವೃಕೋದರನ ಗದಾಘಾತ, ಮಿಹಿರ ವಾಜೀಪತಿ, ರಾಘವ ಧನುದ್ಯತಿಗಳಿವೆ. ಈ ಪೌರಾಣಿಕ ಪ್ರತಿಮೆಗಳೆಲ್ಲಾ 'ಮಡಿಮಿನೇಡೇ ಮಟ್ಟಿನ ರೋಜಟ' ಎಂಬ ಕೊನೇ ಸಾಲಿನಲ್ಲಿ ಹೊಸ ಪ್ರಪಂಚದ ಬರುವಿಕೆಗೆ ಪೂರ್ವರಂಗವಾಗಿಸಿಕೊಂಡಿದೆ. ಜಾತಿಜಾತಿಗಳ ಒಟ್ಟಾಗುವಿಕೆ ಹೋರಾಡುವಿಕೆಯೇ ಇಲ್ಲಿನ ಹೊಸಹುಟ್ಟು.

ಹುಟ್ಟು ಸಾವುಗಳ ಗಡಿಯಲ್ಲಿ
ಆಕಳಿಸಿತು ಒಂದು ಚಿತಾಗ್ನಿ ಕುಂಡ
ಅನಾಥ ಜೀವರ ಸಮಾಧಿಗಳೆಲ್ಲ
ಒಟ್ಟಾಗಿ ಘೋಷಿಸಿದವು!
. . . . .
. . . . .
ಜಾತಿ ಜಾತಿ ನಿಘಾತ ಪಾತ
ಸಂಘಾತ ಹೇತುವಾಗಿ, ಕಾಲಕೇತುವಾಗಿ
ಅದೇ ಕಲ್ಪಾಂತರದ ಪ್ರಚಂಡ ಬಿರುಗಾಳಿ ಮೇಘೆ
ಪ್ರಥಮ ಘರ್ಜನೆಯ ಕಹಳೆಯ ಧ್ವನಿ!

ನವಕವಿತೆಯನ್ನು ಅಭಿವರ್ಣಿಸುವ ಮುಂದಿನ ಕವಿತೆಯು ಅದಕ್ಕೆ ಬೇಕಾದ ಪರಿಕರಗಳನ್ನು ವಿವರಿಸುತ್ತದೆ. ಆಧುನಿಕ ಕವನ ರಚನೆಗೆ ಬೇಕಾಗುವ ಆಲಂಬನ, ಉದ್ದೀಪನಗಳ ಪಟ್ಟಿಯಂತೆ ತೋರುವ ಈ ಕವಿತೆಯಲ್ಲಿ 'ನವಕವಿತಾ' ಧರ್ಮವನ್ನು, ವಸ್ತುವನ್ನು ಶ್ರೀಶ್ರೀ ವಿಶದೀಕರಿಸಿದ್ದಾರೆ. ಕವಿತೆಯ ಸಾಲುಗಳು ಕೆಂಪಗೆ, ಘಾಟಾಗಿ ಭಯಂಕರವಾಗಿ, ಹೃದಯ ವಿದ್ರಾವಕವಾಗಿ, ನಿರ್ಭೇದಕವಾಗಿ, ವಿನಾಶಕರವಾಗಿ, ನಿರರ್ಗಳವಾಗಿ ಇರುವ ವಸ್ತುವನ್ನು ಹೆಸರಿಸಿದ ಮೇಲೆ, ಕೊನೆಗೆ ನವಕವಿಯ ಪ್ರಧಾನ ಲಕ್ಷಣಗಳನ್ನು ವ್ಯಂಗ್ಯವಾಗಿ ನಿರೂಪಿಸುತ್ತವೆ. ಸಿಂಧೂರ, ರಕ್ತಚಂದನ, ಬಂದೂಕು, ರುದ್ರಾಲಿಕ, ನಯನ ಜ್ವಾಲೆ, ಘಾಟಾದ ಗಂಧಕಧೂಮ, ಭಗಿಲೆಸುವ ರಾಕ್ಷಸ ಇದ್ದಿಲು, ಹದ್ದುಗಳ ರೆಕ್ಕೆ ಸಪ್ಪಳ, ಹರೀಂದ್ರ ಗರ್ಜನೆ, ಪ್ರಯೋಧರ

[illegible]

ಪ್ರಚಂಡ ಘೋಷ, ಖಡ್ಗ ಮೃಗದ ವಿರಾವ, ಝುಂಝೂನಿಲ ಮೊದಲಾದ ಲಕ್ಷಣಗಳಿಂದ "ಕದಿಲೇದೀ ಕದಲಿಂಚೇದೀ ಮರೇದಿ ಮಾರ್ಪಿಂಚೇದೀ ಪಾಡೇದಿ ಪಾಡಿಂಚೇದಿ ಪೆನುಲಿದ್ದರ ವದಿಲಿಂಚೇದಿ ಮುನಮುಂದಕು ಸಾಗಿಂಚೇದಿ, ಪರಿಪೂರ್ಣಮು ಬ್ರತುಕಿಂಚೇದಿ, ಕಾವಾಲೋಯೇ ನವವಿತಾನಿಕಿ" ಎಂದು ಸುಲಭ ಸುಂದರ ಭಾಷೆಯಲ್ಲಿ ಬಿಡಿಸಿ ಹೇಳಿದರು. ಮೊದಲಿನ ಸಾಲುಗಳ ಗಾಢಗಂಭೀರತೆ ಈ ಸಾಲುಗಳಲ್ಲಿ ಸುಕುಮಾರವಾಗಿದೆ. ಮೊದಲು ಯಾರೂ ಕವಿತಾ ಲಕ್ಷಣ ವರ್ಣನೆಗೆ ಇಂತಹ ಸಾಮಾಗ್ರಿಯನ್ನು ಉಪಯೋಗಿಸಿರಲಿಲ್ಲ. ಕೊನೆಗೆ ಇಷ್ಟು ನಯವಾಗಿ ಮೆದುವಾಗಿ ಕಾವ್ಯ ಲಕ್ಷಣಗಳನ್ನು ಹೇಳಲಿಲ್ಲ. ಈ ಕಾವ್ಯ ರಚನೆಯ ಕಾಲಕ್ಕೆ ವಿಶ್ವನಾಥ, ದೇವುಲಪಲ್ಲಿ ಅವರ ರಮ್ಯ ಕವಿತಾ ಸೌಂದರ್ಯ ಭಾವನೆಗಳ ಪ್ರಭಾವವು ನೆಲ ಹಿಡಿದು ತಾನೇ ಆಧುನಿಕ ಕವಿತಾ ಮಾರ್ಗದರ್ಶಕತ್ವ ವಹಿಸಿ ದಾರಿ ತೋರುತ್ತಿರುವುದು ಸ್ಪಷ್ಟವಾಗುತ್ತದೆ. ಅವರ ಅಭಿವ್ಯಕ್ತಿ ವಿಧಾನದಲ್ಲಿರುವ ಆವೇಶ, ಪ್ರಯೋಗಿಸಿದ ಪದಜಾಲ, ಶಬ್ದ ಮಾಧುರ್ಯಗಳು ಓದುವವರನ್ನು ಕೇಳುವವರನ್ನು ಸೆರೆ ಹಿಡಿಯುತ್ತವೆ. ಅಚ್ಚರಿ ಮೂಡಿಸುತ್ತವೆ.

ಸಿಂಧೂರ, ರಕ್ತಚಂದನ
ಕೆಂದಾವರೆ, ಸಂಧ್ಯಾರಾಗ
ಹುಲಿಕೊಂದ ಜಿಂಕೆ ನೆತ್ತರು
ಹಾರಿಸಿದ ಕೆಂಪು ಧ್ವಜ
ರುದ್ರ ರೌದ್ರ ನಯನ ಜ್ವಾಲ
ಕಲಕತ್ತಾ ಕಾಳಿ ನಾಲಿಗೆ
ಬೇಕು ಕಣೋ ನವ ಕವಿತೆಗೆ.

ಘಾಟೇರಿದ ಗಂಧಕ ಧೂಮ
ಉಕ್ಕೇರಿದ ಉನ್ಮತ್ತ ಸಪ್ತಸಮುದ್ರ
ಕೆರಳಿ ಹರಡಿಕೊಳ್ಳುವ ರಾಕ್ಷಸ ಇದ್ದಿಲು
ಬುಗಿಲೇಳುವ ಚೂರ್ಣಕುಂಡ
ಅರಳಿದ ವಿದ್ಯುತ್ ತೇಜ
ಸಿಡಿದೆದ್ದ ಜನ ಸಮೂಹ
ಬೇಕು ಕಣೋ ನವಕವಿತೆಗೆ **(ನವ ಕವಿತಾ)**

"ಶ್ರೀಶ್ರೀ ಅವರೇ ಹೇಳುವಂತೆ "ಕ್ಲಿಷ್ಟವಾಗಿ ಬರೆಯುವಷ್ಟು ಸುಲಭವಾದ ಕೆಲಸ ಇಲ್ಲದಿರುವಂತೆಯೇ ಸುಲಭವಾಗಿ ಬರೆಯುವಂತಹ ಕಷ್ಟದ ಕೆಲಸ ಇನ್ನೊಂದಿಲ್ಲ. ಆಡಂಬರವಾಗಿ ಜೀವಿಸುವುದು ಸುಲಭ. ನಿರಾಡಂಬರವಾಗಿ ಬದುಕುವುದು ಕಷ್ಟ. ಜೀವನದಲ್ಲೂ ಸಾಹಿತ್ಯದಲ್ಲೂ ಸುಗಮತೆಯೇ ಸಾಧಿಸತಕ್ಕ ಆಶಯ"[೪]

ಹೋಗಲಿ,
ಹೋಗಲಿ,
ಹೋದರೆ ಹೋಗಲಿ!
ಸತಿಯರು, ಸುತರು, ಹಿತರು ಹೋಗಲಿ
ಹೋದರೆ
ಹೋಗಲಿ
ಬರಲಿ
ಬರಲಿ
ಬಂದರೆ ಬರಲಿ!
ಕಷ್ಟಗಳು, ನಷ್ಟಗಳು
ಕೋಪ, ತಾಪ, ಶಾಪಗಳು, ಬರಲಿ! **(ಕಲಾರವಿ)**

ಹೀಗೆ ಕವಿಗಳಿಗೆ ಎಷ್ಟೇ ಕಷ್ಟ ನಷ್ಟಗಳೇ ಬರಲಿ. ಕೋಪಾತಾಪಗಳು ಬರಲಿ ಕವಿಯು ತನ್ನ ಹಾದಿಯನ್ನು ಬಿಡಬಾರದೆಂದು ಹೇಳುತ್ತಾರೆ.

ಬ್ರೆಕ್ಟ್ ಮತ್ತು ನೆರೂದರನ್ನು ನೆನಪಿಸುವ ರಚನೆ ಖುಕ್ಕುಗಳದು ಸೃಷ್ಟಿಯಲ್ಲಿ ಕಾವ್ಯಕ್ಕೆ ಅನರ್ಹವಾದ ವಸ್ತುವಿಲ್ಲ ಎಂದರು. ಕವಿತಾ ಶಿಲ್ಪವು ಯಾವುದನ್ನಾಗಲೀ ಬೇಕಾದಂತೆ ಮಾರ್ಪಡಿಸುತ್ತದೆಂದರು. ಇವು ವೇದಮಂತ್ರಗಳಂತಿರದೆ ಸೂಕ್ತಿಗಳಾದದ್ದರಿಂದ ಖುಕ್ಕುಗಳೆಂದು ಕರೆದರು. ಸಾಹಿತ್ಯ ವಲಯದವರ ನಾಲಿಗೆಯ ಮೇಲೆ ಈ ನಾಲ್ಕುಸಾಲು ಸ್ಥಿರವಾಗಿ ನಿಂತಿವೆ.

ಯಾವುದನ್ನು ದೀನವಾಗಿ ನೋಡದಿರು!
ಕವಿತಾಮಯವೋ ಎಲ್ಲವೂ!
ರೊಟ್ಟಿ ಚೂರು
ಬಾಳೆ ಸಿಪ್ಪೆ
ಮರದ ಮೇಜು
ನಿನ್ನ ಕಡೆಗೇ ನೋಡುತ್ತಿರುತ್ತವೆ!
ತಮ್ಮ ಆಳ ಅಂತರ ಅರಿತುಕೋ ಎನ್ನುತ್ತವೆ.

"ಕವಿತಾ ಓ ಕವಿತಾ" ಕವನದಲ್ಲಿ ಕಾವ್ಯ ಹುಟ್ಟುವ ಬಗೆಯನ್ನು ಬಣ್ಣಿಸುತ್ತಾ ಅದು ಜನತೆಯ ಕಡೆಗೆ ಹೋಗಬೇಕಾದ ಸಾರ್ಥಕತೆಯನ್ನು ಕವಿ ನಿರೂಪಿಸಿದ್ದಾರೆ. ಸುಪ್ತ ಪ್ರಜ್ಞೆಯಲ್ಲಿ ಅದು ಹುಟ್ಟುವುದು ಕವಿಯ ಸಮಷ್ಟಿ ಪ್ರಜ್ಞೆಯ ಪ್ರತೀಕವಾಗಿಯೇ ಹಾಗೆಯೇ ಅದರ ಗಮ್ಯವೂ ಸಮಷ್ಟಿಯೇ.

ದಟ್ಟಡವಿಯಲಿ ಲಯಾತೀತವಾಗಿ
ಉಲಿವ ನಾನಾ ಜಂತು ದನಿಗಳಲಿ!

ನಕ್ಷತ್ರಾಂತರ್ನಿಬಿಡ ನಿಖಿಲಗಾನ
ಭೂಕಂಪಗಳು, ಸರ್ಕಾರದ ಪತನಗಳು
ವಿಪ್ಲವ ಯುದ್ಧ
ಎಲ್ಲವೂ ನಿನ್ನ ಚೇತನಾ–ಚೈತನ್ಯ !
ನಿನ್ನ ವಿಶ್ವರೂಪ ಸಾಕ್ಷಾತ್ಕಾರ!

"ಕವಿತಾ ಓ ಕವಿತಾ" ಎಂಬ ಕವಿತೆಯೇ ಅವರ ಕವಿತೆಯಲ್ಲಿ ಪರಮಶ್ರೇಷ್ಠವಾದದ್ದು ಎನ್ನುತ್ತಾರೆ ವಿಶ್ವನಾಥ ಸತ್ಯನಾರಾಯಣ. ಕವಿತಾರೂಪ ಸಾಕ್ಷಾತ್ಕಾರದಲ್ಲಿ ಅವರು ಅದ್ವಿತೀಯ ಪ್ರತಿಭೆಗಳನ್ನು ತೋರಿದ್ದಾರೆ. ಹಿಂಜರಿಯುತ್ತಾ ಗೊನಗುತ್ತಾ ತನ್ನ ಸಹಜವಾದ ರೀತಿಯಲ್ಲಿ ನವ್ಯಸಾಹಿತ್ಯ ಪರಿಷತ್ ವೇದಿಕೆಯಲ್ಲಿ ನಿಂತು ಶ್ರೀಶ್ರೀ ಈ ಕವಿತೆಯನ್ನು ವಾಚಿಸಿದಾಗ ಸಭಾಧ್ಯಕ್ಷರಾದ ವಿಶ್ವನಾಥ ಸತ್ಯನಾರಾಯಣರು ಆರ್ದನಯನಗಳಿಂದ ಆ ಮೂಲೆಯಿಂದ ಈ ಮೂಲೆಯವರೆಗೆ ನಡೆ ತಂದು ಅವರನ್ನು ಆಲಂಗಿಸಿ ಪ್ರಶಂಸಿದರೆಂದ ಮೇಲೆ ಬೇರೆ ವ್ಯಾಖ್ಯಾನ ಬೇಕೆ? ಎಂದೆಂದೂ, ಯಾರನ್ನೂ ಅದರಲ್ಲಿ ಸಮಕಾಲೀನ ಕವಿಗಳನ್ನು ಪ್ರಶಂಸಿಸುವರಲ್ಲದ ವಿಶ್ವನಾಥ ಸತ್ಯನಾರಾಯಣ ಅವರ ಮೆಚ್ಚುಗೆಯನ್ನು ಗಣಿಸುವ ವ್ಯಕ್ತಿಯಲ್ಲ . ಅಂಥವರು ಮುಗ್ಧರಾಗಿ ತಾನೇ ಅದನ್ನು ಪ್ರಕಟಿಸುವುದಾಗಿ ಹೇಳಿ ಚಲಂ ಅವರಿಗೆ ನೀನು ಮುನ್ನುಡಿ ಬರೆಯಯ್ಯಾ ಎಂದೂ ಮತ್ತೊಬ್ಬ ಪ್ರಸಿದ್ಧ ಕವಿ ಚಿಂತಾದೀಕ್ಷಿತರ ಮುಖಾಂತರ ಭಿನ್ನವಿಸಿದ್ದೇ ನಂಬಲಸಾಧ್ಯ ವಿಷಯ. ಈ ಮಹಾ ರಚನೆಯಲ್ಲಿ ಶ್ರೀಶ್ರೀ "ಇತರರಿಗೆ ಅಸಾಧ್ಯ"ವೆಂಬ ಮಾತನ್ನು ದಕ್ಕಿಸಿಕೊಂಡರು. ಶ್ರೀಶ್ರೀ ಆನಂತರ ಈ ಕಾವ್ಯವನ್ನು ತಾವೇ ಇಂಗ್ಲಿಷಿಗೆ ಅನುವಾದ ಮಾಡಿದರು. ಮೂಲವು ತನ್ನದಾದರೂ ಅದರ ಮೂಲ ಸ್ವಭಾವವನ್ನು (ಆತ್ಮವನ್ನು) ಅನುವಾದದಲ್ಲಿ ಆವಿಷ್ಕರಿಸಲಾಗಿಲ್ಲ"[೩]

ತಾಯಿ ಮಾತನು ಕೇಳದೆ ನಗರಕ್ಕೆ ಬದುಕು ಹುಡುಕಿಕೊಂಡು ಬಂದ ಬಡವನನ್ನ ನಗರ ಹೇಗೆ ನಿಷ್ಠೂರವಾಗಿ ಕೊಲ್ಲುತ್ತದೆ. ಕರುಳಿಲ್ಲದ ಅದರೊಳಗೆ ನಿಂತಮೇಲೆ ಮತ್ತೆ ತಾಯಿಕರುಳು ಹಳ್ಳಿಯ ಬೇರು ನೆನಪಾಗುತ್ತವೆ. ಆದರೆ ಅಷ್ಟರಲ್ಲೇ ಅವನ ಬದುಕೂ ದುರಂತದ ಹಾದಿಗೆ ನಾಂದಿ ಹಾಡಿರುತ್ತದೆ ಎಂಬ ಕಠೋರ ಸತ್ಯವನ್ನ ಹೇಳುವ ನಗರದ ಮಾನವೀಯತೆ ಮರೆತ ಚಿತ್ರ ನೀಡುವ ಕವಿತೆಯೇ "ದಾರಿಹೋಕ"

ಅವನ ಬಾಳಿಗೆ ಅದೇ ಅಂತಿಮ!
ಕುರುಡು ಕತ್ತಲೆಯಲಿ ಗೂಬೆಗಳು
ಘೂಂಕರಿಸಿದವು;
ಮಳೆಯು ನಿಂತು ಮೋಡದಲಿ

ಮಿಂಚೊಂದು ಮೆರೆಯಿತು;
ಬೆಳಗಿನ ಜಾವ ಆಯಿತೆಂದು
ಕೋಳಿಕೂಗಿತು;
ಸರಿದ ಮೋಡದ ನಡುವಿನಿಂದ
ಬೆಳ್ಳಿ ಚುಕ್ಕಿ ಅಣಕಿಸಿತು;
ದಾರಿಹೋಕರ ಕಳೇಬರದೊಂದಿಗೆ
ಶೀತಲಗಾಳಿ ಆಡತೊಡಗಿತು!
ಹಳ್ಳಿಯೂರಲಿ ತಾಯಿಗೇನೋ
ಕೆಟ್ಟ ಕನಸಲಿ ಕರುಳು ಸುಲಿಯಿತು!

'ಪ್ರತಿಜ್ಞೆ' ಎಂಬ ಅವರ ಕವನದಲ್ಲಿ, ತನ್ನ ಕಾವ್ಯ ಪ್ರಾಣ ಪ್ರಣವ ಎಂದು ಏಕೆಂಬುದನ್ನು ಸ್ಪಷ್ಟವಾಗಿ ಬಣ್ಣಿಸಿದ್ದಾರೆ. ಜಗತ್ತಿನಲ್ಲಿ, ಶ್ರಮಜೀವಿಯ ಬೆವರಿಗೆ ಹಾಗೂ ಅವನ ಕಣ್ಣೀರಿಗೆ ಬೆಲೆ ಕಟ್ಟುವುದು ಸಾಧ್ಯವಿಲ್ಲ. ಶ್ರಮಜೀವನಕ್ಕೆ ಮಿಗಿಲಾದ ಸೌಂದರ್ಯವಿಲ್ಲ ಎಂಬ ಸಂದೇಶವನ್ನು ಇದರ ಮೂಲಕ ಕವಿ ಸಾರಿದ್ದಾರೆ. ಜೀವನದಲ್ಲಿ ಅತ್ಯಂತ ಪ್ರಧಾನವಾದುದು ಶ್ರಮ. ಜಗತ್ತಿನ ಎಲ್ಲ ಸುಧಾರಣೆ, ಕೈಗಾರಿಕೆ, ವಿಜ್ಞಾನ, ಪ್ರಗತಿ, ಜ್ಞಾನ, ಅನ್ನ, ಧನ ಇತ್ಯಾದಿಗಳಿಗೆ ಶ್ರಮವೇ ಆಧಾರ. ಅಂಥ ಶ್ರಮಕ್ಕೆ ವರ್ಗ ಸಮಾಜದಲ್ಲಿ ಅತಿಕೆಳಗಿನ ಹೀನಸ್ಥಾನ. ಕವಿಗಳು ಕ್ರಾಂತಿವಾದಿಗಳು ಇಂಥ ವ್ಯವಸ್ಥೆಯನ್ನು ಬದಲಿಸಿ ಶ್ರಮಕ್ಕೆ ಅತ್ಯುನ್ನತ ಮಾನ್ಯತೆ ಸಿಗುವ ವ್ಯವಸ್ಥೆಯನ್ನು ತರ ಬಯಸುತ್ತಾರೆ. ಇದಕ್ಕೆ ಕವಿ ಪ್ರತಿಜ್ಞೆಗೈಯುತ್ತಾರೆ.

ನರಗಳ ಬಿಗುವು
ಕರಗಳ ಕಸುವು
ವರಗಳ ಮಳೆ ಕರೆಸ ಬೇಕೆಂದು
ಜಗದ ಭಾಗ್ಯವರ್ಧಿಸಲೀ ಎಂದು
ಗಣಿಗಳಲಿ, ಭೂಮಡಿಲಿನಲಿ, ಕಾರ್ಖಾನೆಗಳಲಿ
ದುಡಿವ
ದುಡಿದು ಬಳಲುವ
ದುಡ್ಡಿನ ದೊರೆಗೆ ಊಳಿಗನಾಗುವ
ಯಂತ್ರ ಭೂತಗಳ ಕೋರೆ ಉಜ್ಜುವ
ಕಾರ್ಮಿಕ ಧೀರರ ಕಣ್ಣುಗಳ ತುಂಬಾ
ಕಣ ಕಣ ಉರಿಯುವ
ಘಟ ಘಟ ಉದುರುವ
ಅಳುವಿನ ಬೆಂಕಿಗೆ, ವ್ಯಥೆಯ ಕಣ್ಣೀರಿಗೆ
ಖರೀದು ಕಟ್ಟುವ ಶರಾಬು ಇಲ್ಲವೊ' (ಪ್ರತಿಜ್ಞೆ)

ಇದು ಶ್ರಮಜೀವಿಗಳು ದುಡಿಯುವ ರೀತಿ ಮತ್ತು ಪರಿಸ್ಥಿತಿ. ನಿಜವಾಗಿ ನೋಡಿದರೆ ಅವರ ಕಣ್ಣೀರಿಗೆ ಬೆವರಿಗ ಎಂಥ ಬೆಲೆ? ಆದರೆ ಅವರನ್ನು ಹಸಿವೆ, ವೇದನೆ, ದಾರಿದ್ರ್ಯಗಳಲ್ಲಿ ಮುಚ್ಚಿರುವ ದೌರ್ಜನ್ಯ ಅನ್ಯಾಯಗಳನ್ನು ಕಂಡು ಕವಿಗೆ ಅತ್ಯಂತ ಕೋಪ ಬರುತ್ತದೆ. ತನ್ನ ಕಾವ್ಯ ಅವರ ಪರವಾಗಿ ಶೋಷಣೆಯ ವಿರುದ್ಧ ಹೋರಾಡಬೇಕೆಂದು ಕವಿ ಕಟಿಬದ್ಧನಾಗುತ್ತಾನೆ.

ಕಮ್ಮಾರನ ಕುಲುಮೆ, ಕುಂಬಾರನ ಚಕ್ರ
ಬೆಸ್ತನ ಬಲೆ, ನೇಕಾರನ ಮಗ್ಗ
ಶರೀರ ಕಷ್ಟ ಸ್ಫುರಿಸುವಂತಹ!
ಕೊಡಲಿ, ರಂಪ, ಕುಡುಗೋಲು,ನೇಗಿಲು
ಸಹಸ್ರ ವೃತ್ತಿಗಳ ಸಮಸ್ತ ಚಿಹ್ನೆಗಳು...
ನಾನು ಬಿಂಬಿಸುವ
ನಾನು ರಚಿಸುವ
ನಾನು ಕೇಳಿಸುವ ನವೀನ ಗೀತೆಗೆ
ನಾನು ರಚಿಸುವ ನವನವೀನ ರೀತಿಗೆ
ಭಾವ!
ಭಾಗ್ಯ!
ಪ್ರಾಣ!
ಪ್ರಣವ.

"ಪ್ರತಿಜ್ಞೆ ಅಬ್ಬೂರಿ ತಯಾರಿಸಿದ ಲಂಡನ್ ಪ್ರಗತಿಶೀಲ ಲೇಖಕರ ಮೆನಿಪೆಸ್ಟೋ ಓದಿ ೧೯೩೭ರಲ್ಲಿ ಈ ಕವಿತೆಯನ್ನು ರಚಿಸಿದರು. ಅವರು ತಮ್ಮ ಸ್ವಭಾವಕ್ಕೆ ತಕ್ಕಂತೆ ಅದರ ಮೂಲ ಭಾವಗಳಿಗೆ ಕಾವ್ಯರೂಪ ನೀಡಿದರು. ಅವರೇ ನುಡಿದಂತೆ ಆ ಸಮಯದಲ್ಲಿ ಜಾನ್ ಮೇಸ್‌ಪೀಲ್ಡ್ (೧೮೭೮-೧೯೬೭) ಬರೆದ ನಾವಿಕರ ಭಾಷೆಯ ಸಾಲ್ಟ್ ವಾಟರ್ ಬೆಲಾಡ್ಸ್ ಮತ್ತು ಬ್ಯಾರಾಕ್ ರೂಮ್ ಬ್ಯಾಲಾಡ್ಸ್' ಎಂಬ ಹಾಡುಗಳು ಅವರ ಮನೋಮಯ ಲೋಕದಲ್ಲಿ ಸುಳಿಯುತ್ತಿದ್ದವು.

ತತ್ಫಲವಾಗಿ ಪ್ರತಿಜ್ಞೆ ಅವರಿಗೆ ಮುದನೀಡಿತು. ಪ್ರಕಟವಾದ ಕ್ಷಣದಿಂದ ಸಾಹಿತ್ಯ ಲೋಕದ ಮನಸ್ಸನ್ನ ದೋಚಿತು. ತಾನು ನವೀನ ರೀತಿಯಲ್ಲಿ ಬರೆಯಲಿರುವ ನವ್ಯ ಕಾವ್ಯಕ್ಕೆ ಸಹಸ್ರ ವೃತ್ತಗಳ ಸಮಸ್ತ ಚಿಹ್ನೆಗಳೇ ಪ್ರಾಣ. ತನ್ನ ಭಾವೀ ರಚನೆಗಳೇ ನವೀನ ವೇದವಾಕ್ಯಗಳಾಗಲಿವೆ ಎಂದರು. ಛಂದಶಿಲ್ಪಕ್ಕೆ ಸ್ವರಪ್ರಸ್ತಾರ ಹಾಕಿ ಹಾಡಿದರು. ನಾಟಕ ವಿಶಾರದರು ಗೀತೆಯನ್ನು ಆಧರಿಸಿ ನೃತು ವಿಧಾನವನ್ನು ಪರಿಕಲ್ಪನೆ ಮಾಡಿದರು. ಈ ಗೇಯ ಭಾವಗಳಿಗೆ ಬೆಲೆಯಿರುವತನಕ, ಈ ರಚನೆ ಕೇಳುಗರನ್ನೂ, ಓದುಗರನ್ನೂ ತಲೆದೂಗುವಂತೆ ಮಾಡುವನಕ ಶ್ರೀಶ್ರೀ ಅಮರರಾಗಿರುತ್ತಾರೆ. ಶ್ರಮ

[illegible]

ಜೀವನ, ಗೌರವ, ಸೌಂದರ್ಯಗಳಿಗೆ ಅವರು ಬೆಲೆ ಕಟ್ಟಿದ ರೀತಿ ತೆಲುಗು ಸಾಹಿತ್ಯದಲ್ಲಿಯೇ ಅನನ್ಯವಾದದ್ದು"೩

'ಬಿಕ್ಷುವರ್ಷೀಯಸಿ' ತನಗಿಂತ ಹೆಣವೇ ಮೇಲೆಂಬಂತಿದ್ದ ಮುದುಕಿ ಸತ್ತಾಗ ಪಾಪ ಯಾರೆಂದು ಹುಚ್ಚುಗಾಳಿ ಕೇಳಿತಂತೆ? ಎಲುಬಿನ ತುಂಡು ಕಡಿಯುತ್ತಿದ್ದ ನಾಯಿ ಮಾತಾಡಲಿಲ್ಲ. ಒಂದು ಹುಳವನ್ನು ಹಿಡಿದ ಪಕ್ಷಿ ಹಾರಿಹೋಯಿತು. ಹಾರಿಬಂದ ಎಂಜಲೆಲೆ ಮಾತ್ರ 'ಇದು ನನ್ನ ಪಾಪವಲ್ಲ' ಎಂದಿತು. ಇಲ್ಲಿ ಉಪಯೋಗಿಸಿದ ಭಾಷೆ, ವರ್ಣಿಸಿದ ದೃಶ್ಯ, ಕಥಾವಸ್ತು, ವಿಷಾದಗಾಥೆ ಎದೆ ಹಿಂಡುತ್ತದೆ.

ರಸ್ತೆ ಬದಿಯಲ್ಲಿ
ಮರದ ಕೆಳಗೆ
ಆರಿಹೋದ ಒಲೆಯಂತೆ
ಕುಳಿತಿದ್ದಾಳೆ ಮುದುಕಿ ಒಬ್ಬಳು
ಮುಲುಗುಟ್ಟುತ್ತಾ ಮುತ್ತಿಕೊಳ್ಳುತ್ತಿದ್ದ
ನೊಣಗಳಿಂದ ಏಗಲಾಗದೆ.
. . . . .
. . . . .

ಬೆರಳುಗಳು ಮುದುಡಿಕೀಲುಸಡಲಿ
ಬಾಳಿನ ಬಗ್ಗೆ ಆಸೆ ಉಡುಗಿ
ಪಕ್ಕದ ಕಲ್ಲು ಬಂಡೆಯ ಹಾಗೆ
ಅಲುಗಾಡದೆ ಬಿದ್ದಿದ್ದಾಳೆ.

"ಆ ಅಜ್ಜಿ ಸತ್ತರ
ಆ ಪಾಪ ಯಾರದು?" ಎಂದು
ಉನ್ಮತ್ತ ಗಾಳಿ ಪ್ರಶ್ನಿಸುತ್ತಾ
ಹೊರಟು ಹೋಯಿತು!
. . . . .
. . . . .
ಆವರಿಸಿದ್ದ ದಟ್ಟ ಕತ್ತಲು
ಧೂಳೆದ್ದ ಸಂತೆಯಲಿ
ಇದು ನನ್ನ ಪಾಪವಲ್ಲ ಎಂದೇ
ಹಾರಿ ಬಂದಿತು ಎಂಜಲು ಎಲೆ.

ಅನಂತರದ 'ಉನ್ಮಾದಿ' ಕೂಳಿಲ್ಲದೆ ದಾರಿಯಲ್ಲಿ ಧೂಳೀನಲ್ಲಿ ತೂಗಾಡುತ್ತಾ ನಡೆಯುವ ಉನ್ಮಾದಿ ವಿಚಿತ್ರ ನೋಟ ಬೀರುತ್ತಾನೆ. ಸೊಟ್ಟರಾಗ ಹಾಡುತ್ತಾನೆ. ಅವನಿಗೆ ಆದ ಅನ್ಯಾಯ, ಅನಂತರ ಆತನ ಪ್ರವರ್ತನೆ ಸಭ್ಯ ಸಮಾಜವನ್ನು ಗೇಲಿ ಮಾಡುತ್ತವೆಂದು ಕವಿ ದುಃಖಿಸುತ್ತಾನೆ.

ಅಯ್ಯಾ ಹುಚ್ಚನೇ! ಎಳೆ ಹುಡುಗನೇ!
ಕ್ಷಮಿಸುತ್ತೀಯಾ? ಸಹಿಸುವೆಯಾ?
ಬುದ್ಧಿವಂತ ಜನ ನಿನಗೆ ಮಾಡಿದ
ಕೆಟ್ಟ ಅನ್ಯಾಯವನ್ನು।

ಹಾಗೆ ನೋಡದಿರು, ಹಾಗೆ ಹಾಡದಿರು
ಪರಿಹಾಸ ಮಾಡಬೇಡ ನಮ್ಮನು!
ಅಯ್ಯಾ ಹುಚ್ಚನೇ! ಎಳೇ ಹುಡುಗನೇ!
ಬೇಡಿಕೊಳ್ಳುತ್ತೇವೆ!

"ಒಂದು ರಾತ್ರಿ" ಕವಿತೆ ಉತ್ಪ್ರೇಕ್ಷಾಲಂಕಾರಕ್ಕೆ ಉತ್ತಮ ಉದಾಹರಣೆ ಎಂಬಂತಿದೆ. ಬಹುಳ ಪಂಚಮಿಯ ಬೆಳದಿಂಗಳು ಹೊಗೆಯಾಗಿ ವ್ಯಾಪಿಸಿ ಅಂಜಿಸುತ್ತದೆ. ಆಕಾಶದ ಮರುಭೂಮಿಯಲ್ಲಿ ಉಸುಕಿನ ಬಿರುಗಾಳಿ ಬೀಸುತ್ತದೆ. ಗಡುಸು ದೆವ್ವಗಳು ಗಾಳಿಯಲ್ಲಿ

ಶೋಷಿತರ ದೈನ್ಯ ಸ್ಥಿತಿಯನ್ನು ಚಿತ್ರಿಸುವಾಗ ಕವಿಗೆ ಎದೆತುಂಬಿ ಬರುತ್ತದೆ. ಒಬ್ಬ ನಿಸ್ಸಹಾಯ ಬಡಜೀವಿ ಸಾಯುತ್ತಲಿರುವ ಸಂದರ್ಭದಲ್ಲಿ

ಕೋಣೆಯೊಳಗೆ ಜಿನುಗುಗಳಂತೆ ಕತ್ತಲೆಗಳು
ಆತನ ದೀಪ ಕೋಣೆಯಲ್ಲಿ
ಮೂಲೆಯಲ್ಲಿ ಮುಲುಗುತ್ತಿವೆ
ಹಣತೆಯ ಎಣ್ಣೆ ಎಳೆಯುತ್ತ
ದಿಕ್ಕುಗಳನ್ನು ನೋಡುತ್ತಿದೆ
ಕತ್ತಲೆ ಕೋಣೆಯೊಳಗಿನ
ಸಿಂಹದಂತೆ ನಿಂತಿದೆ
ಕತ್ತಿಯಂಚಿನ ಮೇಲಿನ
ನೆತ್ತರ ಹನಿಯಂತಿದೆ.

ಅಮೂರ್ತವಾದ ಸಾಯುವ ಜೀವವನ್ನು ಇಲ್ಲಿಯ ದೀಪದ ಕುಡಿ, ಸಿಂಹ, ಕತ್ತಿಯಂಚಿನ ನೆತ್ತರ ಹನಿಗಳು ಮೂರ್ತಿಗೊಳಿಸಿ ನಮ್ಮೆದೆಯಲ್ಲಿ ನಿಲ್ಲಿಸುತ್ತಾರೆ ಕವಿ

ఇల్లి. ఇంథ 'జీవ దీప ఆరిహోయితు. తారెయాగి బదలాగి హోయితు ఎందు అదర చిరంతనెయన్ను సారుత్తారె. ఈ మూలక ఆగసద తారెగళల్లి ఈ మణ్ణిన జీవిగళ సావునోవుగళ సంకేతగళాగువంతె మాడుత్తారె. ఇల్లి బెళగిన ఆరువరె గంటెగే దురదృష్టవంతనొబ్బ ఆరిహోద అందినరాత్రి దీపవూ ఆరిహోగి తారుమారాయితు. సామాన్యనోర్వన సావు యారన్ను తట్టువుదిల్లవెందు కవియ చిత్రణ.

"జర్మన్ కవి బట్రాండ్ బెక్ట్ ప్రభావదింద మార్క్స్ చరిత్రెగె మాడిద వ్యాఖ్యానద కావ్యరూపవే 'దేశ చరిత్రలు' నాను మార్క్స్ తత్వగళన్ను శ్రద్ధా తాత్పర్యగళింద అధ్యయన మాడలిల్లవెందు, ననగె సిద్ధాంతద ఒళనోట అభిమానగళు కావ్య ముఖేన ఉంటాదువెందు శ్రీశ్రీ అనేక సారి హేళిద్దారె. ఇతిహాసద దారియల్లి మానవను స్వయంకృత అపరాధగళింద తందుకొండ పరమ దౌర్భాగ్యగళన్ను బేద బేదకి ఈ కవితెయల్లి కవి సేరిసిద్దానె. అదక్కె ఆయ్కె మాడిద ఛందస్సు మత్తు భాషె పరమశత్రువాద విమర్శకనన్ను మరుళు మాడుత్తవె. నరజాతి సమస్తవూ పరపీడా పరాయణత్వవెందూ, పరస్పర ఆరోహణ ఉద్యోగవెందూ, రణరక్త ప్రవాహసిక్తవెందూ దరిద్రరన్ను సుట్టు తిన్నువుదే హవ్యాసవెందూ కవియ తీర్మాన. బలవంతనదే రాజ్యవెందు చరిత్రె రూపిసుత్తదెందూ ఇతిహాసవెల్లా రక్త మత్తు కణ్ణీరినింద కలుషితవాగిదెయెందరు. మహా హంతకరే కాలక్కె కత్తియ సేతువె కట్టిద్దారె. సామ్రాజ్యగళు, క్షత్రియ శాసనగళు, ఇతరేతర శక్తిగళూ, తిరుగి బిద్దరె కాగదద మనెయంతె కుసిదు బీళుత్తవెందరు. పరస్పర సంఘర్షిసిద శక్తిగళల్లి ఇతిహాస జనిసితు ఎంబుదు అవర సిద్ధాంత. ఇన్ను ముందె పీడిసువ సామాజిక ధర్మక్కె అవకాశవిల్ల. ఈ రాణియ ప్రేమ పురాణ, ఆ దాళిగె తగులిద ఖర్చు ముంతాదవల్లదె "ఇతిహాసద కత్తల మూలెయ కెళకెళగె బిద్దు కాణెయాద కథెగళెల్లా బేకీగ" ఎందు కరెదరు. సామాన్యన బదుకు, సాహస తిళియబేకాగిదె. యావ పరమార్థవన్ను సాధిసిద్దేవెందు ఆత్మశోధనె మాడికొళ్ళబేకు ఎన్నువ ఈ గీతెయు తుంబా జనప్రియవాగిత్తు"[3]

శ్రీశ్రీ యావ చరిత్రెయన్న మహోన్నత చరిత్రెయెందు కరెయుత్తిద్దెవో అదన్న వాస్తవద పరీక్షెగె ఈడుమాడుత్తా చరిత్రెయ హుళుకుగళన్న బయలు మాడుత్తారె.

ಯಾವ ದೇಶದ ಚರಿತ್ರೆ ನೋಡಿದರು
ಏನಿದೆ ಗರ್ವ ಕಾರಣ?
ನರಜಾತಿ ಚರಿತ್ರೆ ಸಮಸ್ತ
ಪರಪೀಡನ ಪರಾಯಣ.

ಆದರೆ ಈ ಸತ್ಯ ಜನರಿಗೀಗ ಅರಿವಾಗಿದೆ. ಬಲಿಯಾಗುವ, ಮೋಸಕ್ಕೆ ಗುರಿಯಾಗುವ, ಆದರ್ಶದ ಹೆಸರಿನಲ್ಲಿ ಸಾಯುವ ಅಸಹಾಯಕ ಸ್ಥಿತಿಯ ಅರಿವಾಗಿದೆ ಅಂತಲೇ ಈಗ ಚರಿತ್ರೆ ಎಂದರೆ ಹೆಮ್ಮೆಯಲ್ಲ.

"ಚಿರಕಾಲ ಸಾಗಿದ ಮೋಸ
ಬಲಾಢ್ಯರ ದೌರ್ಜನ್ಯಗಳು
ಹಣವಂತರ ಕುಲೋಪಾಯಗಳು
ಇನ್ನೊ ನಾ? ಇನ್ನೂ ಸಲ್ಲದು! ಸಾಗದು."

ಚರಿತ್ರೆ ಎಂದರೆ ಉಳ್ಳವರ ಆಳುವವರ ದಾಖಲೆ ಅಲ್ಲ ಚರಿತ್ರೆಯ ನಿಜವಾದ ಆಕರಗಳಾಗಬೇಕಾದವರು ಸಾಮಾನ್ಯರು. ದಾಖಲಾಗಬೇಕಾದ್ದು ಸಾಮಾನ್ಯರ ಜೀವನ ಚರಿತ್ರೆ ಹಾಗಾಗಿಯೇ ಅನೇಕ ಪ್ರಶ್ನೆಗಳನ್ನ ಕೇಳುತ್ತಾರೆ ಶ್ರೀಶ್ರೀ.

"ನೈಲು ನದಿಯ ನಾಗರಿಕತೆಯಲಿ
ಸಾಮಾನ್ಯನ ಜೀವನ ಎಂಥಾದ್ದು?
ತಾಜ್‌ಮಹಲ್ ನಿರ್ಮಾಣಕ್ಕೆ
ಕಲ್ಲು ಹೊತ್ತ ಕೂಲಿಗಳಾರು?

ಸಾಮ್ರಾಜ್ಯದ ದಂಡಯಾತ್ರೆಯಲಿ
ಸಾಮಾನ್ಯರ ಸಾಹಸ ಎಂಥಾದ್ದು?
ಅರಸನೇರಿದ ಪಲ್ಲಕ್ಕಿ ಅಲ್ಲವೋ
ಅದನ್ನು ಹೊತ್ತ ಬೋಯಿಗಳ್ಯಾರು?"

ಈ ದೇಶದ ಸಾಮಾನ್ಯರ ಜೀವನ ಬಹಳ ಹೀನವಾಗಿದೆ. ನಿರ್ಜೀವವಾಗಿದೆ. ಗೋಳು ನೋವುಗಳಿಂದ ಜೀವನ ತುಂಬಿದೆ. ಅವರ ಸ್ಥಿತಿಯನ್ನು ಬಣ್ಣಿಸಲು ಅವರನ್ನು 'ನೆರಳುಗಳು' ಎಂದು ಕರೆದು ವಿಧ ವಿಧವಾಗಿ ಕವಿ ಚಿತ್ರಿಸಿದ್ದಾರೆ.

ನೋಡು ನೋಡು ನೆರಳುಗಳು
ನೆರಳುಗಳು ಹೊಗೆ ಮನೆಗಳು
ಯುಗ ಯುಗಗಳ ದರೋಡೆಯಲ್ಲಿ
ನರ ನರಗಳ ತಿಕ್ಕಾಟದಲ್ಲಿ

ಅಳು ತುಂಬಿದ ಹೊಗೆಗಟ್ಟಿದ
ಕಟ್ಟು ಪಾಡ ಜಾಡುಗಳು
ಕರುಣೆ ಹರಿವ ಗೋಡೆಗಳು
ನೋಡು ನೆರಳುಗಳು
ಬಡವರ ಹಟ್ಟಿಗಳು
ನರ ನರಗಳ ವೇದನೆಯಲ್ಲಿ
ತಲೆತಲಾಂತರದ ರೋದನದಲಿ
ಸೊರಗಿ ಸಿಕ್ಕಿ ಭಯದಿ ಸತ್ತು
ಬಿದ್ದ ಬದುಕು ಗೋಡೆಗಳು
ಪಾಳು ಬಿದ್ದ ಪಟ್ಟಿಗಳು...
ತಲಾತಂತರದ ಸೆರೆಮನೆಗಳ
ತೆರತೆರನ ತೆರೆಮರೆಯಲಿ
ಒತ್ತಡದಲಿ ಒರಗಿದ್ದ
ನಿರ್ಭಾಗ್ಯದ ನೆರಳುಗಳು
ಮರುಭೂಮಿಯ ದೋಣಿಗಳು
ಸೂರ್ಯನಲ್ಲಿ ಸೂಜಿಯೊಡನೆ
ಆಡುವಂಥ ನೆರಳುಗಳು.

ತಲೆ ತಲಾಂತರದ ಶೋಷಣೆಯಲ್ಲಿ ತುಳಿತಕ್ಕೆ ಸಿಕ್ಕಿ ನುಜ್ಜು ಗೊಜ್ಜಾದ ಬಡವರ ಸ್ಥಿತಿಯನ್ನು ಇದಕ್ಕಿಂತ ಚೆನ್ನಾಗಿ ಬಣ್ಣಿಸಲು ಸಾಧ್ಯವೇ? ನೆರಳುಗಳು ಎಂಬ ಮೂಲ ಪ್ರತಿಮೆಯ ಜೊತೆಗೆ ಹೊಗೆಗೂಡುಗಳು, ಗೋಡೆಗಳು, ಹಾಳು ಹಟ್ಟಿಗಳು ಎಂದು ಅನೇಕ ಬಗೆಯ ರೂಪಕಗಳು ಅರ್ಥ ಪುಷ್ಟಿಯನ್ನು ನೀಡುತ್ತವೆ.

'ಮಿಥ್ಯಾವಾದಿ' ಕವಿತೆ ಸಮಾಜದ ವಾಸ್ತವ ಸ್ಥಿತಿಯನ್ನು ಗುರುತಿಸಲಾಗದ, ದರೋಡೆಕೋರರನ್ನೂ ಬಂಡವಾಳದಾರರನ್ನೂ ಸಮರ್ಥಿಸುವ ಮಾಯವಾದದ ಖಂಡನೆ ಮಾಡುತ್ತದೆ. 'ವ್ಯತ್ಯಾಸಂ' ಕವಿತೆಯಲ್ಲಿ ಉಳ್ಳವರಿಗೂ ಬಡವರಿಗೂ ಇರುವ ತಾರತಮ್ಯಗಳ ವಿಮರ್ಶೆಯಿದೆ. ಇದು ಕೇವಲ ಸರಳೀಕೃತ ನಿರೂಪಣೆಯಲ್ಲ. ಶೋಷಣೆಯಿಂದಾಗಿ ಎರಡು ವರ್ಗಗಳ ಜೀವನ ರೀತಿ ನೀತಿಗಳು, ದೃಷ್ಟಿಕೋನಗಳು, ಸ್ಥಿತಿಗತಿಗಳು ಹೇಗೆ ಭಿನ್ನವಾಗಿವೆ ಎಂಬುದನ್ನು ಕಲಾತ್ಮಕವಾಗಿಯೂ ವಸ್ತು ನಿಷ್ಠವಾಗಿಯೂ ಬಣ್ಣಿಸುತ್ತದೆ. ಧನಿಕ ವರ್ಗವನ್ನ ಸಂಬೋಧಿಸಿ ಬರೆದ ಕವನ ಇದು.

ನೀವು ಅದೃಷ್ಟವಂತರು, ಬೆಳಕನ್ನು ಪ್ರೀತಿಸುವಿರಿ
ಕತ್ತಲನ್ನು ದ್ವೇಷಿಸುವಿರಿ

ಒಳಿತು ಕೆಡುಕುಗಳ ನಡುವೆ ಕಂಚುಗೋಡೆಗಳು ನಮಗೆ
ನಿಮ್ಮ ಊಹೆಗಳು ಒಳ್ಳೆ ಕೋಣೆಗಳೊಳಗೇ ಸಂಚರಿಸುತ್ತವೆ.
ಮರ್ಯಾದೆ, ಪುಣ್ಯ, ಮೌಲ್ಯ ಇತ್ಯಾದಿ
ನಿಶ್ಚಲ ನಿಶ್ಚಿತತೆಗಳು ನಿಮ್ಮವು
ಅದಕ್ಕೆ ನಮ್ಮದು
ಉಂಡೊಗೆದ ಪತ್ರೋಳಿ ಎಲೆ ನಮ್ಮ ಬದುಕು
ನಿಮ್ಮ ಕಣ್ಣನೋಟ ಸರಳರೇಖೆಯಲ್ಲಿ
ರೇಖೆ ಚದುರಿದರೆ ಹೌಹಾರುತ್ತೀರಿ
ರೇಖೆಯೀ ಕಡೆಯವರು ತಪ್ಪುಗಾರರು
ರೇಖೆ ರಕ್ಷಿಸಲಿಕ್ಕೆ ನ್ಯಾಯಸ್ಥಾನ, ರಕ್ಷಕರು, ಸೆರೆಮನೆ ನೇಣು
ಇತ್ಯಾದಿ

ನಾವು ಅಭಾಗ್ಯರು
ಸರಿಹದ್ದು ದೊರೆತರೆ
ಸಂದಿಯಲ್ಲಿ ನಮ್ಮ ಸಂಚಾರ
ನಿಮಗೆ ಗೋಡೆಗಳಿಲ್ಲ
ಗೋಡೆ ಕೆಡವುವುದೇ ನಮ್ಮ ಕೆಲಸ
ಚಿಂತೆಯೇ ನಮ್ಮ ಬದುಕು
ಅಂಧೋಳನ ನಮ್ಮ ಉಸಿರು
ಬಂಡಾಯ ನಮ್ಮ ವೇದಾಂತ
ನಮ್ಮದು ಮುಳ್ಳು ಕಲ್ಲುಗಳ ಆತಂಕಗಳ ಮುಂದಿನ ದಾರಿ

ಸಂಪ್ರದಾಯಗಳನ್ನು, ಗತಕಾಲವನ್ನು, ಪುಣ್ಯಮೌಲ್ಯಗಳನ್ನು ಗೌರವಿಸುವ ಧನಿಕರು ತಮ್ಮ ಸಿರಿವಂತಿಕೆ ಸ್ಥಾನಮಾನಗಳು ಇರುವ ಹಾಗೆಯೇ ಇರಲಿಕ್ಕೆ, ಕೆಳಗೆ ಬಿದ್ದವರು ಬಿದ್ದಲ್ಲೇ ಬಿದ್ದಿರಲಿಕ್ಕೆ ಅನುಕೂಲವಾದ ರೀತಿಯ ನಿಶ್ಚಿತವಾದ ಕಟ್ಟುಪಾಡುಗಳನ್ನು ಹಾಕಿಕೊಂಡಿದ್ದಾರೆ. ಗೋಡೆಗಳಂತೆ ಗಡಿ ರೇಖೆಯಂತೆ ಅವು ಅವರು ಬೆಳಕಿನಲ್ಲಿ ಬಾಳುತ್ತಾರೆಂದರೆ ತೋರಿಕೆಯ ಬಯಲಾಡಂಬರದ ರೀತಿಯನ್ನು ಬಾಳುತ್ತಾರೆಂದು ಅರ್ಥ. ಅಲ್ಲಿ ಇರುವ ಸತ್ಯವನ್ನು ಮುಚ್ಚಿಟ್ಟ ಯಾವುದೋ ಕೃತಕ ವೇಷ ಮಾತ್ರ ಮರೆಯುತ್ತದೆ. ನಿರ್ಗತಿಕರು ಮಾತ್ರ ಕತ್ತಲಲ್ಲಿ ಎಂದರೆ ಕಠೋರ ವಾಸ್ತವತೆಯಲ್ಲಿ ಸಹಜವಾಗಿಯೇ ಬದುಕುತ್ತಾರೆ. ವ್ಯಕ್ತಿ ವ್ಯಕ್ತಿಯ ನಡುವಿನ ಗೋಡೆಗಳನ್ನು ಕೆಡವಿ ಸಾಮೂಹಿಕ ಜೀವನ ಮಾಡುತ್ತಾರೆ. ಇವರು ಇಲ್ಲದವರಿಗೆ ಹೆಜ್ಜೆ ಹೆಜ್ಜೆಗೂ ತಪ್ಪುಗಳು, ಸಮಸ್ಯೆಗಳು, ಸಂದೇಹಗಳು, ಚಿಂತೆಗಳು ವಕ್ರಮಾರ್ಗಗಳು, ಸಂದುಗಳು ಇವರಿಗೆ ಆಕರ್ಷಕವಾಗಿ ಕಾಣುವುದು ಅನಿವಾರ್ಯವಾಗುತ್ತದೆ.

ಬಡವರಲ್ಲಿರುವ ದೋಷಗಳನ್ನು ಅವರು ಮಾಡುವ ತಪ್ಪುಗಳನ್ನು (ಕಳವು, ವಂಚನೆ, ಹೇಡಿತನ, ಅಸೂಯೆ, ಬರಗೇಡಿತನ, ಸೋಮಾರಿತನ, ಅಜ್ಞಾನ ಇತ್ಯಾದಿ) ನಾವು ನೋಡಬೇಕಾಗಿರುವುದು ಈ ದೃಷ್ಟಿಯಲ್ಲಿ. ಸಂಪ್ರದಾಯಿಕವಾಗಿ ಒಳಿತು–ಕೆಡುಕುಗಳ ಮೌಲ್ಯಮಾಪನೆಗೂ ಈ ಸಮಷ್ಠಿ ಪ್ರಜ್ಞೆಯ ದೃಷ್ಟಿಗೂ ವ್ಯತ್ಯಾಸ ಇರುವುದು ಇಲ್ಲೇ.

'ಯಾತಕ್ಕಾಗಿ ಬರೆಯಬೇಕು?' ಎಂಬ ಲೇಖನದಲ್ಲಿ ಶ್ರೀಶ್ರೀ "ನನ್ನ ಜೀವನದ ಕಾಲದಲ್ಲೆ ನನ್ನ ದೇಶದಲ್ಲಿ ಸಮತವಾದ ವ್ಯವಸ್ಥೆ ಸ್ಥಾಪಿತವಾದರೆ ನನಗೆ ಅದಕ್ಕಿಂತ ಆನಂದದಾಯಕವಾದ ವಿಷಯ ಬೇರೊಂದು ಇರುವುದಿಲ್ಲ. ಅದಕ್ಕೆ ನನ್ನ ಕವಿತ್ವ ಸ್ವಲ್ಪ ಮಾತ್ರಕ್ಕಾದರೂ ನೆರವಾಗಿದೆ ಎಂದು ಅನ್ನಿಸಿಕೊಳ್ಳುವುದಕ್ಕಾಗಿ ನಾನು ಕಾವ್ಯರಚನೆ ಮಾಡಿದ್ದೇನೆ; ಮಾಡಿದ್ದೇನೆ; ಮಾಡಲಿದ್ದೇನೆ." ಎಂದು ಹೇಳುತ್ತಲೇ ಮುಂದಿನ ಸಂಕಲನ ಮರೋಪ್ರಸ್ಥಾನಂ ಹುಟ್ಟನ್ನು ಕುರಿತು ಹೇಳಿದ್ದಾರೆ. "೧೯೪೦ ರಿಂದ ೭೦ರ ವರೆಗೂ ಅಭ್ಯುದಯ ಕವಿತಾಯುಗ ಎಂದು ಹೇಳಬಹುದು. ೭೦ರಲ್ಲಿ ಒಂದು ಮಹತ್ತರ ವಿಪ್ಲವ ಝುಂಝಾ ಪ್ರಭಂಜನ ಎದ್ದಿತು. ವಿಪ್ಲವ ಸಾಹಿತಿ ಸಂಘ (ವಿರಸಂ) ಆವಿರ್ಭವಿಸಿತು. ಅದು ನನ್ನ ಷಷ್ಠಿಪೂರ್ತಿ ವರ್ಷವಾಗಿದ್ದುದು ಒಂದು ವಿಶೇಷ. ಆ ವರ್ಷ ವಿರಸಂ ಆಗಮನವನ್ನು ನಾನು ಹೃದಯ ಪೂರ್ವಕವಾಗಿ ಆಹ್ವಾನಿಸಿದೆ.

ಇದು ೧೯೮೦. ಈ ದಶಕದಲ್ಲಿ ನಾನು ವಿರಸಂ ಆದರ್ಶಗಳ ಪ್ರೇರಣೆಯಿಂದ ಎಷ್ಟೋ ಪದ್ಯಗಳನ್ನು ಬರೆದಿದ್ದೇನೆ. ಬೂರ್ಶ್ವಾಗಳ ಶವ ಸಂಸ್ಕೃತಿಯನ್ನು ವಿರೋಧಿಸಿ ಶ್ರಮಜೀವಿಗಳ ಸಜೀವ ಸಂಸ್ಕೃತಿಗೆ ಪ್ರಾಧಾನ್ಯತೆ ಕೊಟ್ಟಿದ್ದೇನೆ. ಸದ್ಯದಲ್ಲೆ ಈ ಪದ್ಯಗಳೆಲ್ಲ ಒಂದು ಸಂಪುಟವಾಗಿ ಹೊರಬರಲಿದೆ ಆ ಸಂಪುಟದ ಹೆಸರು "ಮತ್ತೊಂದು ಪ್ರಸ್ಥಾನ."[೫]

'ಮತ್ತೊಂದು ಪ್ರಸ್ಥಾನ' ತೆಲುಗು ನೆಲದಲ್ಲಿ ಘಟಿಸಿದ ಚಾರಿತ್ರಿಕ ಹೋರಾಟಗಳನ್ನ ಸಾಹಿತ್ಯಿಕವಾಗಿ ದಾಖಲಿಸಿದ ಕವಿತೆ ಇಲ್ಲಿನ ಭಾಷೆ ದೇಸಿ ರೂಪದ್ದು ಈ ಹಿಂದೆ ಶ್ರೀಶ್ರೀ ಆಡುಭಾಷೆ ಬಗ್ಗೆ ಪ್ರಸ್ತಾಪಿಸಿದ್ದರೂ ನಿಜವಾಗಿ ಆಡುಭಾಷೆಯನ್ನ ಅರ್ಥಪೂರ್ಣವಾಗಿ ಬಳಸಿದ್ದು ಈ ಸಂಕಲನದಲ್ಲಿಯೇ. 'ವಿಪ್ಲವಕ್ಕೆ ಜಯವಾಗಲಿ' ಎಂದು ಮೂರು ಬಾರಿ ಹೇಳುವ ಮೂಲಕ ಅಂತ್ಯವಾಗುವ ಈ ಕವಿತೆ ರಕ್ತ, ನೆತ್ತರಿನ ಹೋರಾಟವನ್ನು ಅದು ಅನಿವಾರ್ಯ ಎಂಬ ಸಂಗತಿಯನ್ನು ಮತ್ತು ಆ ಬಗೆಯ ಹೋರಾಟದಿಂದಾಗಿ ಬಲಿಯಾದವರನ್ನ ಅಮರಗೊಳಿಸುವ ಕಾರ್ಯವನ್ನು ಶ್ರೀಶ್ರೀ ಇಲ್ಲಿ ಏಕಕಾಲಕ್ಕೇ ನೆರಮಾಡಿಸಿದ್ದಾರೆ. ವಿಪ್ಲವ ಎಂದರೇನು ಎಂಬ ಪ್ರಶ್ನೆಗೆ ಉತ್ತರವೆಂಬಂತೆ ಅದು ಎಲ್ಲಿದೆ ಎಂದು ಹೀಗೆ ಹಾಡುತ್ತಾರೆ.

ಯಿಪ್ಲವ ಯೆಲ್ಲೈತೆ
ಅಲ್ಲೆ ಕೂಳೈತೆ ನಿನ್ನ ಗೂಡೂ ಐತೆ
ಗಳ ಗಳ ಅಳ್ತಿದ್ರೆ
ಬರಲ್ಲ ಯಾವನೂ ನಿಂತಾವ್ಕೆ
ಯಿಪ್ಲವ ಯೆಲ್ಲೈತೆ–ನಿನ್ನ
ಎದೆಯಾಗೆ ಕೂತೈತೆ–ನಮ್ಮ
ಕಣ್ಣಾಗೆ ಅಡಗೈತೆ.

ಸಹನೆಗೆ ಬೆಲೆ ಇಲ್ಲ. ತಾಳ್ಮೆಗೆ ಫಲವಿಲ್ಲ ಎನ್ನುವ ಭಾವಕ್ಕೇ ಒತ್ತು ನೀಡುವ ಕವಿ ಶೋಷಕನ ರೀತಿಯನ್ನ ಈ ರೀತಿ ಕಟ್ಟಿಕೊಡುತ್ತಾರೆ.

ಏನು ಧಣಿ ಯೀ ಘೋರ
ಏನೆಂದು ಕೇಳಿದ್ರೆ
ಕೆರದಲ್ಲೆ ಹೊಡೆಯುತಾನೆ
ಕೆಟ್ಟಮಾತು ಬೈಯುತಾನೆ
ಆಸ್ತಿ ಕರಗಿ ಕಷ್ಟ ಬೆಳೆದು
ಸಾಯ್ತಿದ್ರೆ ದುಡ್ಡು
ತರ್ತಿಯಾ ತಾ ಅಂತಾನೆ– ಇಲ್ಲಾ ನಿನ್ನ
ಹೆಂಡ್ತಿನೇ ಬಾ ಅಂತಾನೆ– ಇಲ್ಲಾ ನಿನ್ನ
ಮಗಳ್ನೇ ಕೊಡಂತಾನೆ–ಅಂತೋನ್ನ
ಕೊಡಲೀಲೆ ಕಡೀಬೇಕಯ್ಯಾ
ಕುಡುಗೋಲಲಿ ತರೀಬೇಕಯ್ಯಾ
ಯಿಪ್ಲವ ಕರೆದೈತಯ್ಯಾ

ಹೀಗೆ ವಿಪ್ಲವದ ಅನಿವಾರ್ಯತೆಯ ಸ್ಥಿತಿಯನ್ನ ಕೂಲಿಗಳು, ಹಮಾಲರು, ವಿದ್ಯಾರ್ಥಿಲೋಕ ಎದುರಿಸುತ್ತಿರುವ ವಿಪತ್ತುಗಳನ್ನ ತೋರುತ್ತ ಬೂರ್ಶ್ವಾಗಳ ಸಂವಿಧಾನದಿಂದ ಬಂಡವಾಳಿಗರ ಸ್ವರ್ಗಲೋಕವನ್ನ ಕಿತ್ತೆಗೆಯಬೇಕೆನ್ನುತ್ತಾರೆ. ಅಂತಲೇ

ಯಿಪ್ಲವ ಏನನ್ನುತೈತೆ
ಮನ್ಸಾಗೊಂದೆ ಸಾವಂತೈತೆ
ಕಟ್ಟು ಹರಿದು ಬಾರೆಂತೈತೆ
ಕತ್ತಿ ಹಿರಿದು ಏಳಂತೈತೆ
ಯಿಪ್ಲವ ನಿನ್ನ ದಮ್ಮೆನುತೈತೆ.

ಎಂದು ಹಾಡುವ ಕವಿ ಸಾಯುಧ ಹೋರಾಟಗಾರರನ್ನ ಚಾರಿತ್ರಿಕ ದಾಖಲು ಮಾಡುತ್ತಾರೆ.

ಚಂದ್ರ ಪುಲ್ಲಾರೆಡ್ಡಿ ೧
ತರಿಮೆಲ ನಾಗಿರೆಡ್ಡಿ ೨
ಹಾಕಿದ ಗಡಿಕೂಗು
ಸತ್ಯಮೂರ್ತಿ ೩ ಪರಾಕ್ರಮ
ಚಾರು ಮಜೂಂದಾರ್ ೪ ಪವರ್
ನಮ್ಮವೇ ಡಿಯರ್ ಬ್ರದರ್
ಕೊಲ್ಲಿ ಪರಾ ೫ ಪಂಚಾದಿ ೬
ಅಲ್ಲಿಪುರಂ ೭ ಸಿಮ್ಹಾದ್ರಿ ೮
ಜಾಗಂಟಿ ೯ ತಾಮಾಡ ೧೦
ವೆಂಪಟಾಪು ೧೧ ಕೈಲಾಸಂ ೧೨
ಇವರೆಲ್ಲಾ ಯಾರಾದಿ
ಯಾರ್‍ಯಾರೋ ತಮ್ಮಯ್ಯ
ಇವರ ಹಾದಿನಿಂದಯ್ಯ
ಇನ್ನು ಭಯವಿಲ್ಲಯ್ಯ
ಕೆಂಪು ಕೆಂಪು ನೆತ್ತರಿನ
ಹೊಳೆಯಲ್ಲಿ ಈಜಯ್ಯ.

೧. **ಚಂದ್ರ ಪುಲ್ಲಾರೆಡ್ಡಿ (೧೯೮೪)** ಹಾಗೂ

೨. **ತರಿಮೆಲ ನಾಗಿರೆಡ್ಡಿ (೧೯೧೭–೭೬)** : ಸ್ವಾತಂತ್ರ್ಯ ಹೋರಾಟ ಕಾಲದಿಂದಲೂ ಚಳುವಳಿ, ಶ್ರೀಕಾಕುಳಂ ರೈತಾಪಿ ಸಮಸ್ತ ಹೋರಾಟಗಳ ಕಾಲದಲ್ಲಿ ಕ್ರಾಂತಿಕಾರಿ ರಾಜಕೀಯದಲ್ಲಿದ್ದವರು. ಸರ್ಕಾರದಿಂದ ನಿರ್ಭಂಧಕ್ಕೊಳಗಾಗಿ ಹಲವಾರು ವರ್ಷ ಅಜ್ಞಾತವಾಸ ಜೈಲುವಾಸ, ಅನುಭವಿಸಿದರು. ಆಂಧ್ರಪ್ರದೇಶದ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪ್ರಮುಖ ನಾಯಕರ ಸಾಲಿನವರು.

೩. **ಕಂಭಂ ಜ್ಞಾನ ಸತ್ಯಮೂರ್ತಿ (೧೯೩೪)** : ಕ್ರಾಂತಿಕಾರಿ ರಾಜಕೀಯದಿಂದ ಸ್ಪೂರ್ತಿ ಪಡೆದು ಶಿವಸಾಗರ್ ಹೆಸರಿನಲ್ಲಿ ಕವನ ರಚಿಸಿ ಪ್ರಸಿದ್ಧಿಯಾದವರು. ಮಾರ್ಕ್ಸ್‌ವಾದಿ–ಲೆನಿನ್‌ವಾದಿ ನಾಯಕರಲ್ಲೊಬ್ಬರು. ಜೈಲುವಾಸ ಅಜ್ಞಾತವಾಸದಲ್ಲಿದ್ದವರು. ಪಕ್ಷವಿರೋಧಿ ಚಟುವಟಿಕೆಗಳಿಂದ ಸಿ.ಪಿ.ಪಿ ಎಂ ಎಲ್ (ಪಿ. ಡಬ್ಲು)ನಿಂದ ಹೊರಹಾಕಲ್ಪಟ್ಟು ಪತ್ರಿಕೆಗಳಿಗೆ ಅಂಕಣ ಬರಹಗಾರರಾದವರು.

೪. **ಚಾರು ಮಜೂಂದಾರ್ (೧೯೧೬–೭೨)** : ತೇ ಬಾಗ ಹೋರಾಟ ಕಾಲದಿಂದಲೂ (೧೯೪೬) ಬಂಗಾಳದ ಕಮ್ಯುನಿಸ್ಟ್ ನಾಯಕ ಸಿಲ್ಗುರಿಯಲ್ಲಿ ರೈತಾಪಿ ಹೋರಾಟ ಕಟ್ಟಿದರು. ನಕ್ಸಲ್ಬರಿಯ ಹೋರಾಟದ ನಾಯಕ. ಭಾರತದಲ್ಲಿ

ಮಾರ್ಕ್ಸ್‌ವಾದಿ ಲೆನಿನ್‌ವಾದಿ ಪಕ್ಷದ ಸ್ಥಾಪಕ, ಸಿದ್ಧಾಂತಿ, ಆಚರಣಾಶಾಲಿ, ಕಲ್ಕತ್ತದಲ್ಲಿ ಪೋಲಿಸರಿಂದ ಬಂಧಿಸಲ್ಪಟ್ಟು ಲಾಕಪ್‌ನಲ್ಲೇ ೨೮-೭-೭೨ರಂದು ಮರಣ ಹೊಂದಿದರು.

೫. **ಕೊಲ್ಲಿಪರ ರಾಮನರಸಿಂಹರಾವು (೧೯೩೧-೭೨)** : ಸಿನಿಮಾರಂಗದಿಂದ ನಕ್ಸಲೈಟ್ ಚಳುವಳಿಕಡೆಗೆ ಸರಿದ ಕಲಾಕಾರ. ವಾರಂಗಲ್ ಜಿಲ್ಲೆಯಲ್ಲಿ ಪೋಲಿಸರು ಆತನನ್ನು ಬಂಧಿಸಿ ಮೇ ೧೧, ೧೯೭೨ರಂದು ಬೆರಳು ಕತ್ತರಿಸಿ, ಕಾಲು ಕಡಿದು ಹಾಕಿ ಕಣ್ಣು ಕಿತ್ತು ಹಾಕಿ ಚಿತ್ರ ಹಿಂಸೆ ಮಾಡಿದರೂ ಪಕ್ಷದ ರಹಸ್ಯ ಹೇಳದೆ ಮರಣ ಹೊಂದಿದಾತ.

೬. **ಪಂಚಾದಿ ಕೃಷ್ಣಮೂರ್ತಿ (೧೯೩೭-೧೯೬೯)** : ಪಂಚಾದಿ ನಿರ್ಮಲ (೧೯೪೪-೬೯) ಶ್ರೀಕಾಕುಳಂ ರೈತ ಹೋರಾಟದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ ದಂಪತಿಗಳು. ಆಂಧ್ರಪ್ರದೇಶದ ಸಿ.ಪಿ.ಪಿ.ಎಂ.ಎಲ್. ಪಕ್ಷದ ಪ್ರಥಮ ಕಾರ್ಯದರ್ಶಿ ಕೃಷ್ಣಮೂರ್ತಿ. ಪೋಲಿಸರ ಗುಂಡಿಗೆ ಇಬ್ಬರೂ ಬಲಿಯಾದರು.

೭. **ಅಲ್ಲಿಪುರಂ (೧೯೬೭-೭೧)** : ಶ್ರೀಕಾಕುಳಂ ಹೋರಾಟ ಅಬ್ಬರದಲ್ಲಿದ್ದಾಗ ಪೋಲಿಸರು ಕ್ರಾಂತಿಕಾರಿ ಜನರನ್ನು ಬಂಧಿಸಿ ಲಾಕಪ್‌ಗಳಲ್ಲಿ ಚಿತ್ರಹಿಂಸೆಗೆ ಗುರಿ ಪಡಿಸುತ್ತಿದ್ದರು. ಅಂತಹ ಚಿತ್ರಹಿಂಸೆಯಲ್ಲಿ ಮರಣಿಸಿದ ಈತ ಪಾರ್ವತಿಪುರದ ಗಿರಿಜನ.

೮. **ದೊರಿಕ ಸಿಂಹಾದ್ರಿ** : ಪಾರ್ವತಿಪುರದ ಗಿರಿಜನ ವ್ಯಕ್ತಿ. ಸಾವಿರಾರು ಗಿರಿಜನರೊಂದಿಗೆ ಬಂಧಿತನಾಗಿ ಜೈಲಿನಲ್ಲಿ ಚಿತ್ರಹಿಂಸೆಗೆ ಗುರಿಯಾಗಿ ಬಲಿಯಾದ ಶ್ರೀಕಾಕುಳಂ ರೈತ ಹೋರಾಟಗಾರ.

೯. **ಚಾಗಂಟಿ ಬಾಸ್ಕರರಾವ್ (೧೯೪೦-೬೯)** : ಎಂ.ಬಿ.ಬಿ.ಎಸ್. ಓದಿದವರು. ಪ್ರಜ್ಞಾ ವೈದ್ಯಶಾಲೆ ನಡೆಸುತ್ತಿದ್ದವರು. ಶ್ರೀಕಾಕುಳಂ ರೈತ ಹೋರಾಟದಲ್ಲಿ ಪಾಲ್ಗೊಂಡು ಪೋಲಿಸರ ಗುಂಡಿಗೆ ಆಹುತಿಯಾದರು.

೧೦. **ತಾಮಾಡಾ ಗಣಪತಿ (೧೯೩೪-೬೯)** : ಪ್ರಜಾದಳದ ನಾಯಕ ಶ್ರೀ ಕಾಕುಳಂ ಹೋರಾಟದಲ್ಲಿ ಮುಂದಾಳು. ಪೋಲಿಸರ ಗುಂಡಿಗೆ ಆಹುತಿಯಾದರು.

೧೧. **ವೆಂಪಟಾಪು ಸತ್ಯನಾರಾಯಣ (೧೯೩೫-೭೦)** : ಸ್ಕೂಲ್ ಮಾಸ್ತರಾಗಿ ಕೆಲಸ. ಗಿರಿಜನರ ಸಂಘಟಕ. ಶ್ರೀ ಕಾಕುಳಗೆರಿಲ್ಲಾ ಹೋರಾಟದಲ್ಲಿ ವೆಂಪಟಾಪು ಸತ್ಯಂದು ಎಣೆಯಲ್ಲದ ಸಾಹಸ. ಪೋಲಿಸು ತುಪಾಕಿಗೆ ಬಲಿಯಾದರು.

೧೨. **ಆದ್ಲ ಭಟ್ಲ ಕೈಲಾಸಂ (೧೯೩೩-೭೦)**: ಸ್ಕೂಲ್ ಮಾಸ್ಟರ್. ಶ್ರೀಕಾಕುಳಂ ಹೋರಾಟಕ್ಕೆ ಬುನಾದಿ ಹಾಕಿದವರು. ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದವರು. ವೆಂಪಟಾಪು ಸತ್ಯಂ ಜೊತೆಯಲ್ಲೇ ಪೋಲೀಸು ಗುಂಡಿಗೆ ಆಹುತಿಯಾದರು.

ಆಧುನಿಕ ತೆಲುಗು ಕಾವ್ಯನಾಡಿಯ ಮುಖ್ಯ ಧಮನಿಯಾಗಿ ಸಾಗಿಬಂದ ಮಹಾಕವಿ ಶ್ರೀಶ್ರೀಯವರು ಹಿಂದೆ ಮಹಾಕಾವ್ಯವೆಂದರೆ ಹದಿನೆಂಟು ಪರ್ವಗಳಲ್ಲಿರುತ್ತಿದ್ದರೆ ಇಂದು ಕೆಲವೇ ಸಾಲುಗಳಲ್ಲಿರುತ್ತದೆ. ಎಂದು ಘೋಷಿಸುವ ಧೀರರು. ಅವರು ಬರೆದ ಕಾವ್ಯ ಪ್ರಮಾಣದಲ್ಲಿ ಬಹಳವೇನಿಲ್ಲ. ಆದರೆ ಬರೆದ ಸ್ವಲ್ಪ ಕಾವ್ಯವೇ ತೆಲುಗು ಕಾವ್ಯ ಲೋಕಕ್ಕೆ ನೀಡುತ್ತ ಬಂದ ಮಹಾ ಚೈತನ್ಯ ಅದ್ಭುತವಾದುದು. ಮಹಾಪ್ರಸ್ಥಾನವನ್ನು ಸಾಹಿತ್ಯ ಲೋಕಕ್ಕೆ ನೀಡಿದ ಕವಿ ಮರೋಪ್ರಸ್ಥಾನದಲ್ಲಿ ವಿಪ್ಲವ ಕಾವ್ಯ ಚಳುವಳಿಯನ್ನು ಹುರಿದುಂಬಿಸಿದ್ದಾರೆ. ವಿಪ್ಲವ ಕಾವ್ಯದ ವಿಶಿಷ್ಟ ಲಕ್ಷಣವಾದ ಜಾನಪದ ನುಡಿಕಾರ ತನವನ್ನು ಜನಕ್ರಾಂತಿಯೊಡನೆ ಹೆಣೆದು ತೋರಿದ್ದಾರೆ.

ಯಿಪ್ಲವಂ ಯಾಡುಂದಿರಾ ನೀ ।
ಗುಂಡೆಲೋನೇ ಕೂಕುಂದಿರಾ ಮನ।
ಕಳ್ಳಲೋನೇ ದಾಗುಂದಿರಾ । ಓರಯ್ಯಾ ಸೇದ್ಯಗಾಡಾ ।
ಅಯ್ಯಯ್ಯಾ ಬಾನಿಸೇಡ । ಯೆನ್ನೇಳು, ಚಾಕರೀ

(ಮರೋಪ್ರಸ್ಥಾನಂ, ಪುಟ-೬೮)

ಎಂದು ಶ್ರಮಜೀವಿಗಳಲ್ಲಿ ಜಾಗೃತಿ ತುಂಬಿದ್ದಾರೆ. ಈ ಕವನದಲ್ಲಿ ಮುಂದೆ ಶೋಷಣೆಯ ರೀತಿಗಳನ್ನು ಶೋಷಿತರ ಪರಿ ಪರಿ ಬಾಧೆಗಳನ್ನು, ಕ್ರಾಂತಿಕಾರಿಗಳ ದೃಷ್ಟಾಂತಗಳನ್ನು, ಕ್ರಾಂತಿಯ ಮಾರ್ಗವನ್ನು ಸರಳ ಮತ್ತು ಚುರುಕುತನದಿಂದ ವಿವರಿಸಿದ್ದಾರೆ.

ಕೊನೆಯುಸಿರಿರುವವರೆಗೂ ಕ್ರಾಂತಿಯನ್ನೇ ಉಸಿರಾಡಿ ಉಸಿರಿದ ಕೊನೆಯ ಒಂದು ಸಿನಿಮಾ ಹಾಡಿನಲ್ಲಿಯೂ ದೇಶದ ದುರಂತ ಸ್ಥಿತಿಗಾಗಿ ಪರಿತಪಿಸಿ, ದೇಶದ ಏಳಿಗೆಯ ಪರಿಯನ್ನು ಶ್ರೀಶ್ರೀ ಸೂಚಿಸಿದ್ದಾರೆ.

"ಭಾರತ ಮಾತನುನೇನು-ಬಂದಿನ್ನೈ ಪಡಿ ಉನ್ನಾನು।
ಶರೀರ ಮಂತಾಕಾರಾಗಾರಂ ಸಂಕಳ್ಳೇ ನಾಕಲಂಕಾರಂ
ಉರಿತಾಡೇ ನಾ ಮೆಡಲೋ ಹಾರಂ-ಕನ್ನೀರೆ-ನಾ ಜೀವಾಧಾರಂ"

(ನೇಟಿಭಾರತಂ)

ಎಂದು ಇಂದಿನ ಭಾರತ ಮಾತೆಯ ದಯನೀಯ ಚಿತ್ರವನ್ನು ಕೊಡುತ್ತಾ:

"ಲೇದು ಲೇದು । ಲೇದು ಲೇದು ಮೇಮೊಸ್ತುನ್ನಾಂ ।
ನೀ ಕನ್ನಿಳ್ಳನು ತುಡಿಚೇಸ್ತಾಂ"

'ಒತ್ತೆ ರಾಜ್ಯದ ಕಟುಗ ಪಾಲನ ಇನ್ನು ಮುಂದೆ ಸಾಗದು. . . .ಸಮಾನ ಧರ್ಮವನ್ನು ಸ್ಥಾಪಿಸುತ್ತೇವೆ. ಭಾರತೀಯ ಕಣ್ಣೀರೆಸುತ್ತೇವೆ"

ಈ ಭವಿಷ್ಯವಾಣಿಯ ರೂಪದಲ್ಲಿ ದಿವಂಗತ ಶ್ರೀಶ್ರೀ ತೆಲುಗು ಜನಮನದಲ್ಲಿ ಎಂದೆಂದಿಗೂ ಬದುಕಿದ್ದಾರೆಂಬುದರಲ್ಲಿ ಉತ್ಪ್ರೇಕ್ಷೆಯೇನಿಲ್ಲ.

"ಊಗರಾ ಊಗರಾ ಊಗರಾ ।
ಉರಿಕೊಯ್ಯ ಅಂದುಕೊನಿ ಊಗರಾ"

(ತುದಿ ಪಯನಂತೆಲಿ ವಿಜಯಂ)

ಎಂಬುದುಶ್ರೀಶ್ರೀಯವರ ಒಂದು ಕ್ರಾಂತಿ ಬೋಧೆಯ ಹಾಡು. ನೇಣು ಹಗ್ಗವನ್ನು ಹಿಡಿದುಕೊಂಡು ತುಗಾಡು ಉಯ್ಯಾಲಾಡು ಎಂದು ಹುರಿದುಂಬಿಸುವ ಕಲ್ಪನೆಯೇ ಅನನ್ಯವಾಗಿದೆ.

''ಶಾಸನಗಳಿಗಿಂತ ಬಲಿಷ್ಠವಾದದ್ದು, ಉದಾತ್ತವಾದದ್ದು, ಅನುಲ್ಲಂಘನೀಯುವಾದುದು ಕವಿ ವಾಕ್ಯ: ಆದ್ದರಿಂದ ಕವಿಸಂಘಕ್ಕೆ ಮಾರ್ಗದರ್ಶಕನಾಗಬೇಕು. ಸಮಾಜವನ್ನು ಮುನ್ನೆಡೆಸುವುದೇ ವಿಪ್ಲವ ಪಂಥ ಅಭ್ಯುದಯ ರೀತಿ! ಒರೆಗಲ್ಲು!"[೫] ಎಂದು ಶ್ರೀಶ್ರೀ ಯಾವುದು ವಿಪ್ಲವ ಪಂಥ ಎಂಬ ಲೇಖನದಲ್ಲಿ ಹೇಳಿದ್ದಾರೆ. ಶ್ರೀಶ್ರೀ ಕವಿತೆ ಬೆಂಕಿಯು ಕೆಂಡಗಳೂ ಹೌದೆಂಬುದಕ್ಕೆ ಸಾಕ್ಷಿ ಎಂಬಂತಿರುವುದು. 'ಹತ್ತಿ ಹುಲಿಯ ಮೇಲೆ ಕೀಟ' ಎಂಬ ಕವಿತೆ. ಕುಂಬಾರ ಹುಳ ಎಂಬ ಕೀಟ ಹುಲಿಯ ಮೇಲೆ ದಾಳಿಮಾಡಿ ಕಂಗೆಡೆಸುವಷ್ಟು ಪ್ರಭಲ ಎಂಬುದು ಜಾನಪದ ನಂಬುಗೆ. ಇಲ್ಲಿ ಮುಖ್ಯಮಂತ್ರಿ ಹತ್ತಿ ಹುಲಿಯಾದರೆ ಕವಿ ಕೀಟ ಎಂಬ ಹೋಲಿಕೆ ಇದೆ.

" ಎಲೆಲೋ ಮುಖ್ಯಮಂತ್ರಿ – ಇಂದಿರಮ್ಮ
ನ ಬಾಜಾ ಭಜಂತ್ರಿ!
ಎಲೆಲೋ ವೆಂಗಳಬಚ್ಚಾ –ಜಿಗಣೆ ನಿನ್ನ
ಹೆಸರೆಂದರೇ ತಲೆನೋವು – ಲುಚಾ!"

ವ್ಯಕ್ತಿ ಕವಿತೆಗಳು ಮತ್ತು ಸಾಯುಧ ಹೋರಾಟದ ನೆಲೆಯಲ್ಲೆ ಶ್ರೀಶ್ರೀಯವರ ಸ್ವಕೀಯ ಪುರಾಣಂ ಕವಿತೆಯು ಪ್ರಸಿದ್ಧ ಕತೆಗಾರ, ವಿಮರ್ಶಕ, ಚಿಂತಕ ಕೊಡವಗಂಟ ಕುಟುಂಬರಾವ್ ಅವರನ್ನು, ವೆಂಪಟಾಂ ಕವಿತೆಯಲ್ಲಿ ವೆಂಪಟಾಪು ಸತ್ಯಂ ಅವರನ್ನು ಚಿತ್ರಿಸಿದ್ದಾರೆ. ಝುಂಝೂ ಕೂಡ ವಿಪ್ಲವದ ಕರೆ ನೀಡುವ ರಕ್ತದ ರಾಗಾಲಾಪನವಾಗಿದೆ.

" ಓ ಮಹಾತ್ಮ ! ಓ ಮಹರ್ಷಿ" ಕವಿತೆಯು ಏಕಕಾಲಕ್ಕೆ ಗತದ ಲೋಕವನ್ನು ಗಾಂಧಿಕಾಲದ ವಾಸ್ತವವನ್ನು ತುಲನೆ ಮಾಡುತ್ತ ಒಂದು ಕಾಲ ಈಗ ಅಪ್ರಸ್ತುತವೆಂದು (ಗತ) ಗಾಂಧೀಕಾಲಕ್ಕೆ ಈಗ ಬೆಲೆಯಿಲ್ಲವೆಂದೂ ಹೇಳುತ್ತ

ಕೆಡುವ ವ್ಯಕ್ತಿಗಳನ್ನ ಕೆಡುತ್ತಿರುವ ಸಮಾಜವನ್ನ ಸರಿಮಾಡುವ ಕ್ರಿಯೆಗಾಗಿ ಶಾಂತಿಗಿಂತಲೂ ಕ್ರಾಂತಿಯೇ ಮೇಲು ಎನ್ನುತ್ತಾರೆ ಶ್ರೀಶ್ರೀ ಹಾಗೇ ಮಂತ್ರ ಮಾಯಗಳು ಈಗ ಮಾವಿನಕಾಯಿ ಉದುರಿಸಲಾರವು ಎನ್ನುತ್ತಲೇ ಸತ್ಯ ಹೇಗಿದೆ ಎಂದು ಮುಖಕ್ಕೆ ಹಿಡಿಯುತ್ತಾರೆ.

ಕೂಳುಗಳ್ಳನ ಮನುಷ್ಯನೆನ ಬೇಕೇ
ಲಂಚಕೋರನ ಕ್ಷಮಿಸ ಬೇಕೇ
ಲೋಪರ್‌ನ ನವಾಬನೆನ ಬೇಕೆ
ಡಾಫರ್‌ನ ಷರೀಪನೆನ ಬೇಕೆ

ಎಂದು ಪ್ರಶ್ನಿಸುತ್ತ ಗಾಂಧೀವಾದಕ್ಕೆ ಹೊಸಲೋಕ ಏಕೀ ಪ್ರಶ್ನೆ ಮಾಡುತ್ತಿದೆ ಎಂಬ ಕಾರಣವನ್ನು ನೀಡುತ್ತಾರೆ.

ಯುವಜನತೆ ಕೆರಳಿದೆ ಬಾಪೂ
ಹೊಸ ಜನತೆ ಅರಳಿದೆ ಬಾಪೂ
ಹುಡುಕುತ್ತಿದೆ ಹೊಸ ದಿನಗಳು
ಕೊಡವುತ್ತಿದೆ ಹಳೆಯ ಧೂಳು
. . . . .
. . . . .
ಗೆದ್ದಲುಗಳು ಸಗಣಿ ಹುಳುಗಳು
ಎಲ್ಲ ಕಡೆಯೂ ಹರಿಯುತ್ತಿದ್ದರೆ
ದೇಶವೆಲ್ಲಾ ರೋಗಗ್ರಸ್ತ
ಇಲ್ಲಿಲ್ಲ ಇಲ್ಲ ಒಂದು ವೈದ್ಯಹಸ್ತ
ಮತ ನಿನಾದ ಮತ ವಿವಾದ
ಎರಡೂ ಕೂಡ ಕಡು ಪ್ರಮಾದ.

"ಅರೆರೇ ನಾಲ್ಕಾಣೆ ಬಿಲ್ಲೆ" ಕವಿತೆ ವ್ಯಕ್ತಿಯ ಒಳಗಿನ ಕನಸನ್ನ ಹೇಳುತ್ತಲೇ ವ್ಯಕ್ತಿಗಿಂತ ಸಮಾಜಮುಖ್ಯ ವ್ಯಕ್ತಿ ಸುಖಕ್ಕಿಂತ ಸಮಾಜ ಸುಖ ಮುಖ್ಯ ಎಂಬ ತತ್ವ ಆದರಿಸಿದ್ದು. ವಿಪ್ಲವದ ಮೂಲಕ ಎಲ್ಲಾ ಬಡಜನರ ಬದುಕು ಸುಖವಾಗುವುದೆಂಬ ಆಶಯ ಹೊತ್ತ ಈ ಕವಿತೆ ಕೆಂಪುಕೋಟೆ ಉರಿಸುವ, ಕೆಂಪು ಬಾವುಟ ಹಾರಿಸುವ ಕನಸು ಕಾಣುತ್ತದೆ.

" ಆ ವೇದನೆ ಕವಿತ್ವಕ್ಕೆ ಪರ್ಯಾಯ ಪದ" ಎಂಬ ಲೇಖನದಲ್ಲಿ ಶ್ರೀಶ್ರೀ ಈ ರೀತಿ ಹೇಳುತ್ತಾರೆ "ನೀನು ಸ್ವತಃ ಅಪಾಯಗಳೊಳಕ್ಕೆ ಹೋಗು, ಎರವಲು ತಂದುಕೊಂಡ ಅಭಿಪ್ರಾಯಗಳನ್ನು ಸುಟ್ಟು ಹಾಕುವುದಕ್ಕೆ ಅನುವಾಗುವಂತೆ ಒಂದು

ಬೆಂಕಿಪೊಟ್ಟಣವನ್ನು ನಿನ್ನೊಂದಿಗೆ ತೆಗೆದುಕೊಂಡು ಹೋಗುವುದು ಮರೆಯಬೇಡ. ಗುಂಡುಸೂಜಿಯ ಮೇಲೆ ಒಂಟಿ ಕಾಲಮೇಲೆ ನಿಂತುಕೊಳ್ಳುವುದು ದೊಡ್ಡಮಾತೇ. ಆದರೆ ಅದೇ ಅಷ್ಟು ದೊಡ್ಡದಲ್ಲ. ಇನ್ನೊಬ್ಬ ಕವಿ ಎಷ್ಟು ದೊಡ್ಡವನಾದರೂ ನೀನು ಅವನಾಗಬೇಕೆಂದು ಪ್ರಯತ್ನಿಸಬೇಡ. ಇಷ್ಟುದಿನ ನೀನು ಅರ್ಧ ಅನುಸ್ವಾರದಂತೆ, ಮುದ್ರಾಸುರನಂತೆ ಬದುಕಿದೆ. ಪೇಪರರ ವೈಟ್‌ನಂತೆ, ರಬ್ಬರ್ ಸ್ಟಾಂಪ್‌ನಂತೆ ಬದುಕಿದೆ. ಹೋಗು ಜೀವನದೊಳಕೆ.

ಇನ್ನೊಂದು ಬಗೆಯ ಕವಿತೆಗಳಲ್ಲಿ ಸಹ ಆವೇದನೆ ಇದೆ. ಆದರೆ ಆ ಆ ವೇದನೆ ಬದುಕುವ ಆವೇದನೆಯಲ್ಲ ಬದುಕಿಸುವ ಆ ವೇದನೆ ಅಲ್ಲವೇ ಅಲ್ಲ."[೫]

"ಯುಗಾದಿ" ಕವಿಗಳನ್ನ ಕಾಡುವ ಕವಿತೆ ನೀಡುವ ಮಹತ್ತರ ಹಬ್ಬ ಹೊಸ ಆರಂಭಕ್ಕೆ ಸಂಕೇತವಾದ ಈ ಹಬ್ಬ ಕುರಿತಂತೆ ಕವಿ ಮೂರು ಕವಿತೆಗಳಲ್ಲಿ ಭಿನ್ನ ಭಿನ್ನವಾಗಿ ನೋಡಿದ್ದಾರೆ. ರಾಕ್ಷಸ ಉಗಾದಿ, ಪಂಚರತ್ನ, ಉಗಾದಿ ಸ್ವಗತಗಳು.

ರಾಕ್ಷಸ ಉಗಾದಿಯಲ್ಲಿ ತಾನು ಬರೆವ ರೀತಿಯನ್ನ ಹೇಳುತ್ತಲೇ ನೀವು ಮಾಡಬಲ್ಲ ಮಹಾ ಸನ್ಮಾನಕ್ಕಿಂತ ನೀವು ಕೊಡುವ ಜೈಲು ಬದುಕೇ ಗೌರವವೆಂದು ಭಾವಿಸುವ ಶ್ರೀಶ್ರೀ ಯುಗಾದಿ ಕುರಿತು:

ವಿಪ್ಲವ ಝುಂಝೂನಿಲಗಳು
ಬೀಸುತ್ತಿಹ ಯುಗಾದಿ ಈ ದಿನ
ವಿಪ್ಲವ ರಣದುಂಧುಭೀಗಳು ಧ್ವ
ನಿಸುತ್ತಿಹ ಶುಭವೇಳೆಯಾ ದಿನ.

ಪಂಚರತ್ನಗಳೆಂದು ಐದು ಭಾಗಗಳಲ್ಲಿ ಯುಗಾದಿ ನೋಡುವ ಶ್ರೀಶ್ರೀ ಭಾಗ ಮೂರರಲ್ಲಿ

"ಉರಿಯೋ ಗುಡಿಸಲು ಉರಿಯುತಾ ಇದ್ದರೆ
ಮೇಲೇಳುವ, ಮಹಡಿ ಏಳುತಾ ಇದೆ
ಒಬ್ಬರದು 'ಅಬ್ಬಾ' ಒಬ್ಬರದು ಹಬ್ಬ!"

ಭಾಗ ಐದರಲ್ಲಿ ಭಾರತ ವಿಭಜನೆಯನ್ನು ಮನೆ ಒಡೆದಂತೆ ಭಾವಿಸುತ್ತಾ

"ಉಗಾದಿಗೆ ಸ್ವಾಗತ
ಅಖಂಡ ಭಾರತ
(ಅದೆ ಜಿನ್ನಾ ಒದ್ದುಕೊಂಡು ಹೋಗಿ ಮಿಕ್ಕ
ಚಿಂದಿಗಂಟು ಭಾರತ)"

ಉಗಾದಿಯ ಸ್ವಗತಗಳು ಕವಿತೆಯಲ್ಲಿ ನಾಲ್ಕು ಭಾಗಗಳಲ್ಲಿ ಭಿನ್ನ ಭೀನ್ನ ಅನಿಸಿಕೆಗಳನ್ನು ಹೆಕ್ಕಿ ಹೇಳುತ್ತಾರೆ. ಗುಮಾಸ್ತನ ಸ್ವಗತದಲ್ಲಿ ಯುಗಾದಿಯು

"ಓಹೋ ಹೊಸ ಉಗಾದಿ ಬಂದಿದೆ
ಹೊಸ ತೆರಿಗೆ ತಂದಿದೆ
ಹೊಸ ಯಾತನೆಗಳ ಚುಚ್ಚಿದೆ"
. . . . .
. . . . .
ಭೂಲೋಕ ಸ್ವರ್ಗ ಎಲ್ಲಿದೆಯೋ ಏನೋ
ನಮ್ಮ ಮನೆ ಪ್ರತ್ಯಕ್ಷ ನರಕ.
. . . . .
. . . . .
ಹಸಿವು ಹಸಿವು ಎಂಬ ಅಕ್ಷ
ರಗಳ ಬರೆಯುತ್ತಿರುವಾಗ
ಆಹಾ ಯುಗಾದಿಯ ನೆನೆದುಕೊಂಡರೇನೇ
ಮೈ ನಡುಕ ಬರುತ್ತದೆ
ಆದರೂ ಪರ್ವಾಗಿಲ್ಲ
ಒಂದು ವರ್ಷದ ಕಾಲ ತಾಳ್ಮೆ ವಹಿಸಿದರೆ
ಈ ಹೊಸ ವರ್ಷ ಹಳೆಯದಾಗಿ ಹೋಗುತ್ತದೆ
ಆದರೆ ಒಂದೇ ಸಮಸ್ಯೆ
ಅಲ್ಲಿಯವರೆಗೂ ನಮ್ಮ ದಿನಗಳು
ಬೆಳಕು ಹರಿಯುವುದು ಎಂತು?"

ಇನ್ನು ಸಾಮಾನ್ಯನ ಸ್ವಗತದಲ್ಲಿ ಯುಗಾದಿಯು ಹೀಗಿದೆ:

ಎಷ್ಟು ಯುಗಾದಿಗಳು ಬರಲಿಲ್ಲ ಇನ್ನೆ
ಷ್ಟು ಯುಗಾದಿಗಳು ಹೋಗಲಿಲ್ಲ
ಎಲ್ಲಿನ ಕಳ್ಳರು ಅಲ್ಲೆ
ಎಲ್ಲಿನ ಗೊಂಗಡಿ ಅಲ್ಲೆ

ವಿಪ್ಲವ ಕವಿಕಂಡ ಯುಗಾದಿ ಹೊಸ ಸಮರಕ್ಕೆ ಜಯಕಾರದಂತೆ ಮೂಢ ವಿಶ್ವಾಸಗಳು ಮರೆಯಾದಂತೆ ಕಾಣುತ್ತದೆ ವಿಪ್ಲವ ಕವಿಯ ಸ್ವಗತದಲ್ಲಿ

ಅನೀತಿ ಎದೆಯಲ್ಲಿ ಬಾಕುಗಳು
ಅನ್ಯಾಯದ ಪಕ್ಕೆಯೊಳಗೆ ತುಪಾಕಿಗಳು

ಸಾಮಾಜಿಕ ವಿಪ್ಲವ ಸಮರ
ಹುಳುಕು ಹಿಡಿದ ಸಂಸ್ಕೃತಿ ಮರಣ
ಇದೆ ಇಂದಿನ ಸತ್ಯ.
ಮೂಡಣದಿಂದ ಕತ್ತಲ ಬೇಧಿಸಿ ಬರುವ
ಉಷಸ್ಸನ್ನು ಹೊತ್ತು ತರುವ
ಐರಾವತದಂತೆ ಶಾಂತಿ ಅವತಾರದಂತೆ
ಉದಯಿಸುತ್ತದೆ ನವ ಯುಗಾದಿ
ಅದೆ ನಮಗುಗಾದಿ.

ಈ ಸಂಕಲನದ ಕೊನೆ ಕವಿತೆ ಕೂಡಾ ಹೀಗೆ ವಿಪ್ಲವಕ್ಕಾಗಿ ತೆಲಂಗಾಣ ಹೋರಾಟದಲ್ಲಿ ಬಲಿಯಾದ ಭೂಮಯ್ಯ, ಕಿಷ್ಟಗೌಡರ ಕುರಿತದ್ದಾಗಿದೆ. ಸರ್ಕಾರ ನೇಣು ಹಾಕಿದ ಈ ಇಬ್ಬರನ್ನ ಕುರಿತು ಬರದದ್ದೇ 'ಭೂಮ್ಯಾಕಾಶ' ಕವಿತೆ.

ಬದುಕುವುದೆಂದರೆ ಉಸಿರಾಡುವುದೇ ಆದರೆ
ಅವರೆಂದೋ ಸತ್ತರು
ಬದುಕುವುದೆಂದರೆ ಸಾಯಿಸುವುದಾದರೆ
ಅವರೆಂದೂ ಬದುಕಿಯೇ ಇದ್ದಾರೆ.

ಶ್ರೀ ಸಾಮಾನ್ಯ ಚಿರಪರಿಚಿತನೇ. ಆತನೇ ನೀನೂ, ನಾನೂ, ಎಲ್ಲರೂ ಕೂಡಿದವನು. ಎಂದು ಶ್ರೀಶ್ರೀ ಈತನನ್ನು ಚಿತ್ರಿಸಿದ್ದಾರೆ. ಈ ಬಗ್ಗೆ ಭಾವುಕತನ ಪ್ರಕಟಿಸುವ ಅವಶ್ಯಕತೆ ಏನೂ ಇಲ್ಲ. ನಮ್ಮೊಳಗೆ ಒಳಗಿನೊಳಗೆ ಕಿವಿಗೊಟ್ಟರೆ ನೆಲ–ಬಾನುಗಳಲ್ಲಿ ಏಕವಾಗಿ ತುಂಬಿರುವ ಒಂದು ಸಂದೇಶವಾಗಿ, ಒಂದು ಸಂಗೀತವಾಗಿ ಕೇಳುವುದು ಈ ಶ್ರೀ ಮಾನವ ಸಂಗೀತ, ಎಂದು ವಿಶ್ವಮಾನವ ಚಿತ್ರವನ್ನು ಕೊಟ್ಟಿದ್ದಾರೆ. ಆತನಿಗೆ ಸರಹದ್ದುಗಳಿಲ್ಲ. ಮಾನವನೇ ನನ್ನ ಸಂಗೀತ, ಮಾನವನೇ ನನ್ನ ಸಂದೇಶ" ಎಂದು ಶ್ರೀಶ್ರೀ ತಮ್ಮ ಮಹಾಸಂಕಲ್ಪವನ್ನು ಸಾರಿದ್ದಾರೆ.

ಧನಿಕರ ಆಷಾಡಭೂತಿತನ ಎಂದರೆ ತೋರುವಂತೆ ಹೇಳುವ ಮಾಡುವ ರೀತಿ ರೀತಿಯೊಂದಾದರೆ ಒಳಗಿರುವ ರೀತಿಯ ಇನ್ನೊಂದಾಗಿರುವ ದ್ವಿಮುಖತನ ಇಂದಿನ ಸಮಾಜದಲ್ಲಿ ಎಲ್ಲೆಲ್ಲಿಯೂ ಕಂಡುಬರುವ ಸಾಮಾನ್ಯ ದೃಶ್ಯವಾಗಿದೆ. ಧನಾರ್ಜನೆಗಾಗಿ ಅವರು ಅನುಸರಿಸುವ ಮಾರ್ಗಗಳೆಲ್ಲ ಅನ್ಯಾಯ, ಅನೀತಿ, ಅಮಾನವೀಯವಾದಂಥವು. ಸಮಾಜಕ್ಕಾಗಿ ಅವರು ತೋರುವ ಮೊಗವಾಡ ಧರ್ಮಕರ್ತ, ಸಮಾಜಸೇವಕ, ಬಡವರ ಬಂಧು, ಗಾಂಧಿವಾದಿ ಮುಂತಾದವು ಆದರೆ ವಾಸ್ತವವಾಗಿ ಕೆಳವರ್ಗಗಳವರೆಗೆ ಯಾವಾಗಲೂ ಅನ್ಯಾಯವಾಗುವುದೇ ಪರಿಣಾಮ.

ಇದನ್ನು ಬೂರ್ಜ್ವಾ ಸಂಸ್ಕೃತಿ ಎಂದು ಕರೆಯಬಹುದು. ಶ್ರೀಶ್ರೀಯವರು ಸಾಹಿತಿಗಳೂ ಈ ಸಂಸ್ಕೃತಿಗೆ ಹೇಗೆ ಬಲಿಯಾಗುತ್ತಾರೆಂಬುದನ್ನು ಕುರಿತು, "ಇಲ್ಲಿಯವರೆಗೆ ಕೆಲವು ವಿಚಾರಗಳನ್ನು ಬೂರ್ಜ್ವಾಸಂಸ್ಕೃತಿ ಹೊಗಳುತ್ತ ಬಂದಿದೆ. ಅದೇ ದೊಡ್ಡ ಕಾವ್ಯ ಎನ್ನುವವರು ಇವತ್ತಿಗೂ ಇದ್ದಾರೆ.

ಇಂದಿನ ಶಾಲೆ ಕಾಲೇಜುಗಳಲ್ಲಿ ಓದುವವರನ್ನು ಹಾಳು ಮಾಡುವುದೇ ಸಂಸ್ಕಾರ. ಇವರೇ ದೊಡ್ಡವರಾದಾಗ ಬೂರ್ಜುವಾ ಸಂಸ್ಕೃತಿಗೆ ಬಲವಾದ ಕೋಟೆಗಳಾಗಿ ನಿಲ್ಲುತ್ತಾರೆ.

ಇದಕ್ಕೆ ಪೂರಾ ವಿರುದ್ಧವಾದ ಸಾಮ್ಯವಾದ ಸಂಸ್ಕೃತಿಯೊಂದಿದೆ. ಇದು ರಷ್ಯಯಾ, ಚೀನಾ, ಕ್ಯೂಬಾಗಳಲ್ಲಿ ಮಾತ್ರವಲ್ಲ ಇಲ್ಲೂ ಇದೆ. ಆದರೆ ಅಲ್ಲಿ ಅದು ಪುಷ್ಕಳವಾಗಿದೆ. ಸರ್ಕಾರದ ಬೆಂಬಲವಿದೆ. ಇಲ್ಲಿ ಸಕೃತಿಗಿದೆ. ಸರ್ಕಾರವಷ್ಟೇ ಅಲ್ಲ ಅಡ್ಡದಾರಿಗಳನ್ನು ಹಿಡಿಯುವ ದೊಡ್ಡವರಲ್ಲೂ ಇದಕ್ಕೆ ಬೆಂಬಲವಿಲ್ಲ." ಎಂದಿದ್ದಾರೆ.

ಭಾರತದ ತಟಸ್ಥ, ಸಂಪ್ರದಾಯಬದ್ಧ, ಮದ್ಯಮಮಾರ್ಗೀಯ ಜಡಪರಿಸ್ಥಿತಿಯನ್ನು ಶ್ರೀಶ್ರೀಯವರು ನಗರದ ಬೀದಿಮದ್ಯದಲ್ಲಿ ನಿಂತ ಗೂಳಿಯ ಪ್ರತಿಮೆಯ ಮೂಲಕ ಬಹಳ ವಿನೋದ ಪೂರ್ಣವಾಗಿ ವಿಡಂಬಿಸಿದ್ದಾರೆ. ನಗರದ ರಸ್ತೆಯ ನಡುವೆ ಗತಜನ್ಮದ ಸಂಸ್ಮರಣೆಯಲ್ಲೆಂಬಂತೆ ಅರ್ಧನಿಮೀಲಿತ ನೇತ್ರದಲ್ಲಿ ಮೆಲುಕುಹಾಕುತ್ತಾ ನಿಂತುಬಿಟ್ಟಿದೆ. ಅದಕ್ಕೆ ರಸ್ತೆಯಲ್ಲಿ ಓಡಾಡುವ ಮೋಟಾರು, ಕಾರು, ಸೈಕಲ್ ಮೊದಲಾದ ವಾಹನಗಳನ್ನು ಕಂಡರೆ ಆಗದು. ಇದೆಲ್ಲಾ ಗಲಾಟೆ ಏನು? ಎಂಬಂತೆ ಮುಖ ಕಿವುಚುತ್ತದೆ.

"ಯಂತ್ರ ವಿರೋಧಿ, ಅಹಿಂಸಾವಾದಿ ಶಾಕಾಹಾರಿ।
ಮದ್ಯ ನಿಷೇಧ ಪ್ರಜ್ಞಾಶಾಲಿ । ನಗರಂ ನಡುವೀಥಿಲೋ।
ನಾಗರೀಕತೆ ಗಮನಾನ್ನಿ ನಿರೋಧಿಸ್ತು
ಇಲಾ ಎಂತ ಸೇಪಯಿನಾ ಸರೆ।
ಈ ಯೆದ್ದು ನಿಲ ಬಡಗಲದು।" **(ನಗರಂ ಲೋ ವೃಷಭಂ)**

ಬಡವರಿಗೆ, ದುಡಿವ ವರ್ಗಕ್ಕೆ ಸಿಗಬೇಕಾದ ಸ್ಥಾನಮಾನಗಳು ಸಿಗಬೇಕೆಂದು ಸತ್ಯವನ್ನೇ ಹೇಳಿದರೆ ಶೋಷಕರು ಕಲ್ಲು ತೂರುತ್ತಾರೆ, ಜೈಲು ತೋರಿಸುತ್ತಾರೆ ಇದನ್ನು ಶ್ರೀಶ್ರೀಯವರು

"ರೆಂಡು ರೆಂಡು ನಾಲುಗನ್ನಂದುಕು ಗೂಂಡಾಲು
ಗೂಂಡ್ರಾಳ್ಳು ವಿಸಿರೇ ಸೀಮ"

ಎಂದು ಬಹಳ ಸಹಜರೂಪದಲ್ಲಿ ತಿಳಿಸುತ್ತಾರೆ. ಅಹಿಂಸೆಯಿಂದಲೇ ಸ್ವರಾಜ್ಯ ಸಂಪಾದಿಸಿದ್ದೇವೆಂದು ಹೇಳಿಕೊಳ್ಳುತ್ತ ಅವಿನೀತಿಯಿಂದ ಅನ್ಯಾಯಗಳ ಬೆಲೆಯನ್ನೇರಿಸಿ

"స్వతంత్ర్యాన్ని బ్యాంకుల్లో వేసుకుని
చక్ర వడ్డీ లేపే కామందులకు । క్షణ క్షణం
మారుతూన్న లోకాన్ని । సరిగా అర్థం చేసుకున్న
వాళ్ళంతా । పేద ప్రజల పక్షం వహించడమే।
పెద్ద అపరాధమ్మై పోయింది" (ఖడ్గసృష్టి)

(ಸ್ವಾತಂತ್ರ್ಯವನ್ನು ಬ್ಯಾಂಕುಗಳಲ್ಲಿ ಹಾಕಿಕೊಂಡು ಚಕ್ರಬಡ್ಡೀ ಗಳಿಸುವ
ನೀಚರಿಗೆ ಕ್ಷಣಕ್ಷಣವೂ ಬದಲಾಗುತ್ತಿರುವ ಲೋಕವನ್ನು ಸರಿಯಾಗಿ
ಅರ್ಥಮಾಡಿಕೊಂಡವರು ಬಡಜನರ ಪಕ್ಷ ವಹಿಸುವುದೇ
ಅಪರಾಧವಾಗಿ ಹೋಗಿದೆ.)

ಅಹಿಂಸೆಯಿಂದ ಸ್ವಾತಂತ್ರ್ಯಗಳಿಸಿದೆವೆಂದು ಗಾಂಧಿಯ ಹೆಸರನ್ನು ಹೇಳಿಕೊಳ್ಳುತ್ತ ಧನಿಕ ವರ್ಗವು ಸ್ವಾತಂತ್ರ್ಯವನ್ನು ತಮಗೆ ಮಾತ್ರ ಅನುಕೂಲವಾಗುವಂತೆ ಹಣ ಅಧಿಕಾರಗಳನ್ನು ಗಳಿಸಲು ಬಳಸಿಕೊಂಡಿದೆ. ಚಕ್ರ ಬಡ್ಡಿಯಂತೆ ದಿನೇ ದಿನೇ ಅವರು ವೈಭವೋಪೇತವಾಗಿ ಬೆಳೆಯುತ್ತಲೇ ಇದ್ದಾರೆ. ಬಡಜನರಿಗೆ ಸ್ವಾತಂತ್ರ್ಯವಿಲ್ಲ. ಅದನ್ನು ತಮ್ಮ ಸ್ಥಿತಿ ಸುಧಾರಿಸಿಕೊಳ್ಳಲು ಬಳಸಿಕೊಳ್ಳಲೂ ಅವರಿಗೆ ಸಾಧ್ಯವಿಲ್ಲ. ಅವರ ಪರವಾಗಿ ಧ್ವನಿಯೆತ್ತದ ಕವಿಗಳನ್ನು ಮೇಧಾವಿಗಳನ್ನು ಧನಿಕವರ್ಗ ಹಲವಾರು ಹಿಂಸೆಗಳಿಗೆ ಗುರಿಮಾಡುತ್ತದೆ.

ಹೀಗೆ ಕೆಲವೇ ಸಾಲುಗಳಲ್ಲಿ ಸ್ವತಂತ್ರಭಾರತದ ವಾಸ್ತವ ಚಿತ್ರವನ್ನು ಶ್ರೀಶ್ರೀಯವರು ಪರಿಣಾಮಕಾರಿಯಾಗಿ ಕೊಟ್ಟಿದ್ದಾರೆ. ಬಡವರ ದೃಷ್ಟಿಯಿಂದ ಸ್ವಾತಂತ್ರ್ಯ ಹೋರಾಟ ನಿಜವಾದ ಅರ್ಥದಲ್ಲಿ ಈಗ ಆಗಬೇಕಾಗಿದೆ. ಅದಕ್ಕೇ ಶ್ರೀಶ್ರೀ ಕೊಡುವ ಮಾರ್ಗದರ್ಶನವೆಂದರೆ ಸಾಯುಧಕ್ರಾಂತಿ.

"అహింసె ఒక ఆశయమే కానీ ।
ఆయుధం ఎప్పుడూ కాదు ।
ఆశయం సాధించాలంటే । ఆయుధం
అవసరమే మరి। (ఖడ్గసృష్టి)

ಅಹಿಂಸೆ ಒಂದು ಆದರ್ಶವೇ ಹೊರತು ಆಯುಧವಾಗಲಾರದು. ಸಮಾಜದ ವಿಷಮತೆಗಳ ಅಂತ್ಯವಾಗಲು ಅಹಿಂಸಾಮಾರ್ಗ ನಿರುಪಯುಕ್ತ. ಹಿಂಸಾಮಾರ್ಗ ಅನಿವಾರ್ಯ ಎಂಬುದು ಅವರ ನಿರ್ಧಾರ.

ಅಂಥಾ ಕ್ರಾಂತಿಯ ಖಡ್ಗವನ್ನು ಮಹಾಕವಿ ಜನತೆಗೆ ನೀಡಿದ್ದಾರೆ. ಅದು ಲೇಖನಿಯಿಂದ, ಜನತೆಯಿಂದ ನಿರ್ಮಿಸಿದ ಖಡ್ಗ

“ ಈಕತ್ತಿ ಬೂಜು ಪಟ್ಟನ ಭಾವಾಲಕಿ ।
ಪುನರ್ಜನ್ಮಂ ಇವ್ವಡಾನಿಕ ಕಾದು ।
ಕುಳ್ಳಿ ಪೋತುನ್ನ ಸಮಾಜ ವೃಕ್ಷಾನ್ನಿ;
ಸಮೂಲಚ್ಛೇದಂ ಚೆಯ್ಯಡಾನಿಕೆ ।
ದೀನ್ನಿ ನಲ್ಲ ಬಜಾರು ಗುಂಡೆಲ್ಲೋ ದಿಂಚು ।
ದೀನಿತೋ ಕಲ್ಲ ಕಪಟಾಲನು ವಧಿಂಚು.... (ಖಡ್ಗ ಸೃಷ್ಟಿ)

ಕೊಳೆತ ಸಮಾಜವನ್ನೂ ಕಾಳಸಂತೆಕದೀಮರನ್ನೂ ಕಳ್ಳ ಕಪಟಗಳನ್ನೂ ಧ್ವಂಸ ಮಾಡಲು ಈ ಖಡ್ಗವನ್ನು ಬಳಸಬೇಕೆಂದು ಕವಿ ಆದೇಶಿಸುತ್ತಾರೆ. ಸಂಪ್ರದಾಯ ಶ್ರದ್ಧೆಯ ಬಗ್ಗೆಯೂ ಅವರದು ಖಡಾಖಮಡಿತವಾದ ನಿಲುವು ಅದು ಬೂಜುಗಟ್ಟಿದ 'ಭಾವಗಳ ಪುನರ್ಜನ್ಮ' ಅಂಥವುಗಳಿಂದ ಸಮಾಜ ವೃಕ್ಷವೇ ಕೊಳೆತುಹೋಗಿದೆ. ಇದನ್ನ ಅಮೂಲಾಗ್ರವಾಗಿ ಮಾರ್ಪಡಿಸಬೇಕೆಂಬುದು ಅವರ ನಿಲುವು.

ಸಾಮಾಜಿಕ ಕ್ರಾಂತಿಯ ಆಲೋಚನಾಕ್ರಮದಲ್ಲಿ ಶ್ರೀಶ್ರೀಯವರ ವಿಚಾರಗಳು ಕ್ರಾಂತಿ ಬೋಧೆ ಮಾಡುತ್ತವೆ. ಎನ್ನಬಹುದು.

ಇಂದಿನ ಯುಗ ಅಂತರಾಷ್ಟ್ರೀಯ ಯುಗ, ವೈಜ್ಞಾನಿಕ ಯುಗ, ಶ್ರಮಜೀವಿಗಳ ಯುಗ, ಈ ಶೋಷಣೆಯ ವ್ಯವಸ್ಥೆಯ ಜಡತೆಯನ್ನು ಪರಿಣಾಮಕಾರಿಯಾಗಿ ಈ ಪ್ರತಿಮೆ ಬಿಂಬಿಸುತ್ತದೆ. ಕಾಲ ಕೆಳಗಿನ ಭೂಮಿ ಕರಗಿ ಹೋಗುತ್ತಿರುವಾಗ, ಮನುಷ್ಯ ಮನುಷ್ಯರ ನಡುವೆ ಮಾಯಾಪೊರೆಗಳು ಹಬ್ಬಿಕೊಂಡಿರುವಾಗ–

“ಎನಕ್ಷತ್ರಾನಿಕೆ ತೆಗಿಲಿಂಚಾಲಿ
ಈ ಮನ ವಿಷಾದ ಶಕಟಾನ್ನಿ
ಎವರು ಮಳ್ಳಿ ಆತುಕುತಾರು
ಈ ಉರಿಗಿನ ಜೀವಿತಳಕಲಾಲ್ನಿ
ಅಂತಾ ಅಗಮ್ಯ ಗೋಚರಂ
ಅಂತಾ ಅರಣ್ಯ ರೋದನಂ” (ಶರಶ್ಚಂದ್ರಿಕ)

ಎಂದು ವಿಷಾದ ಗೀತೆ ಹಾಡುತ್ತಾರೆ ಶ್ರೀಶ್ರೀ. ಯಾವ ಆಶೆಯ ನಕ್ಷತ್ರಕ್ಕೆ ಜೋಡಿಸಬೇಕು, ನಮ್ಮ ಈ ವಿಷಾದದ ಬಂಡಿಯನ್ನ ಎಂದು ಪ್ರಶ್ನಿಸುತ್ತಾರೆ. ಕಾರಣವೆಂದರೆ ಕಷ್ಟಾರ್ಜಿತ ಸ್ವಾತಂತ್ರ್ಯವು ಹದ್ದುಗಳ ಪಾಲಾಗಿದೆ. ಕುರಿ ಯಾವಾಗಲೂ ಕಸಾಯಿಯವನನ್ನೇ ನಂಬಿಕೊಳ್ಳುತ್ತದೆ. ಸಾಮಾನ್ಯರೆಂಬ ಕುರಿಗಳಿಗೆ ತಮ್ಮ ಹಂತಕರು ಯಾರು ಎಂಬ ಬಗ್ಗೆ ತಿಳುವಳಿಕೆಯೇ ಇಲ್ಲದಿರುವಾಗ ಕವಿಯು ವಿಷಾದವನ್ನಲ್ಲದೆ ಬೇರೇನನ್ನೂ ಆಶ್ರಯಿಸಬೇಕು? ನಾವೆಷ್ಟಾದರೂ ಹೋರಾಡಿಯೇವು. ತ್ಯಾಗಗಳಿಗೆ ಸಿದ್ಧರಾದೇವು, ಆದರೆ ನಮ್ಮ ಜನಕ್ಕೆ ಜ್ಞಾನೋದಯವೇ ಆಗುತ್ತಿಲ್ಲವಲ್ಲಾ ಎಂಬ

ಆವೇದನೆಯನ್ನು ಶೇಷೆಂದ್ರಶರ್ಮ, ನಗ್ನಮುನಿ, ಮುಂತಾದ ಕವಿಗಳೂ ತಂತಮ್ಮ ಕಾವ್ಯದಲ್ಲಿ ಹೀಗೆಯೇ ವ್ಯಕ್ತಪಡಿಸಿದ್ದಾರೆ.

ಶೋಷಿತಕೋಟಿ ಜನರ ಬಗ್ಗೆ ಮಹಾಕವಿ ಶ್ರೀಶ್ರೀಯವರ ಹೃದಯಸ್ಪಂದನ ವೆಂತಹದೆಂಬುದನ್ನು ನೋಡಬಹುದು. ಅವರು ಚಂದ್ರನನ್ನು ಸಂಬೋಧಿಸಿ ಸರಸ ಸಲ್ಲಾಪ. ಮಾಡುತ್ತಾ ದೇಶದ ಸ್ಥಿತಿಗತಿಗಳ ಬಗ್ಗೆ ತಮ್ಮ ವಿಚಾರಗಳ ಮಂಥನ ನಡೆಸಿ ಕೊನೆಗೆ:

ಹೋಗುಚಂದಪ್ಪಾ ಹೋಗು । ನಿರ್ಮಲವಾದ ನಿನ್ನ ಬೆಳ್ದಿಂಗಳ
ಸುರಿಸುತ್ತ । ಮನೋಹರವಾದ ಸಂಗೀತ ಕೇಳಿಸುತ್ತಾ ।
ಪ್ರಯಾಣಮಾಡು–ಇದೋ ಒಂದು ಮಾತು;
ಈ ಪ್ರಪಂಚದಲ್ಲಿ । ಇನ್ನೊ ಎಷ್ಟೋ ಅಭಾಗ್ಯರಿದ್ದಾರೆ ।
ತಣ್ಣಗೆ ಅವರನ್ನು ಮಾತಾಡಿಸು ಧೈರ್ಯ ಹೇಳು ಅವರಿಗೆ ಮೆಲ್ಲೊ
ಆಸ್ಪತ್ರೆ ಕಿಟಕಿಯೊಳಗಿಂದ ನೀನು। ಕಿರಣಗಳ ಕರುಣೆಯಿಂದ ಕಳಿಸಿ
ವ್ಯಾದಿಗ್ರಸ್ತರ ಸೊರಗಿಹೋದ ಕೆನ್ನೆಗಳ ।
ದಯೆಯಿಂದ ಸ್ಪರ್ಶಿಸುವುದನ್ನು ಮರೆಯಬೇಡ ।
ಜೈಲುಗಲಲ್ಲಿದ್ದಾರೆ ಕೆಲವರು । ಅವರನ್ನು ಸಂತೈಸಗೊಳಿಸ
ಬೇಕು ಮತ್ತೆ । ತಪ್ಪುಗಳ ಮಾಡಿದ್ದಾರೆ ನಿಜವೇ ।
ಅದಕ್ಕೊಂದು ಅಲಕ್ಷ್ಯವಾಗಿ ನೋಡಬೇಕೇನು? ।
ಮುರಿದ ಗುಡಿಸಲಲ್ಲಿ ವಾಸಿಸುವ । ಪರಮ ದರಿದ್ರರ ಹಣೆಯ
ಮೇಲೆ । ಯಾವ ಕಂಡಿಯಿಂದಲೋ ಜಾಗ ಮಾಡಿಕೊಂಡು।
ಹೇಗಾದರೂ ಪಾಮರ್ಶನ ಮಾಡುತ್ತೀಯಲ್ಲಾ" **(ಶರಶ್ಚಂದ್ರಿಕ)**

ತೆಲುಗು ಕಾವ್ಯದಲ್ಲಿ ಕ್ರಾಂತಿಯನ್ನು ತಂದವರಲ್ಲಿ ಶ್ರೀಶ್ರೀಯವರ ಸ್ಥಾನ ಅತ್ಯುನ್ನತವಾದುದು ತೆಲುಗಿನಲ್ಲಿ ಸಮತಾವಾದದ ಆಧಾರದಿಂದ ಹೊಸ ಆಲೋಚನಾಕ್ರಮವನ್ನು, ದೃಷ್ಟಿಕೋನವನ್ನು ಶ್ರೀಶ್ರೀಯವರು ನೀಡಿದರೆನ್ನಬಹುದು. ಸಾಮಾಜಿಕ ಕ್ರಾಂತಿಗೆ ಯೋಗ್ಯವಾದ ಭಾಷೆಯನ್ನು ರೂಪಿಸಿಕೊಟ್ಟುದು ಅವರು ತೆಲುಗು ಕಾವ್ಯಕ್ಕೆ ನೀಡಿದ ದೊಡ್ಡ ಕಾಣಿಕೆಯಾಗಿದೆ.

ದೇಶದ ಸಮಾಜದ ಆಮೂಲಾಗ್ರ ಪರಿವರ್ತನೆಯ ಮಾರ್ಗವನ್ನು ಅವರು ತಮ್ಮ ಕಾರ್ಯದ ಮೂಲಕ ಸಾರಿ ಯುಗಕರ್ತರಾದರು, ಮಹಾಕವಿಯೆನಿಸದರು ನಂತರ ತೆಲುಗು ಕಾವ್ಯದ ಮೇಲೆ ಅವರ ಪ್ರಭಾವ ಬಹಳ ಗಾಢವಾದುದು. ೧೯೩೦ರ ವರೆಗೆ ತೆಲುಗು ಕಾವ್ಯವು ಶ್ರೀಶ್ರೀಯನ್ನ ನಡೆಸಿದರೆ ೧೯೩೦ರ ನಂತರ ತೆಲುಗು ಕಾವ್ಯವನ್ನು ಶ್ರೀಶ್ರೀ ನಡೆಸಿದರು. ಯುಗಧರ್ಮವನ್ನು ತೆಲುಗು ಕಾವ್ಯಲೋಕಕ್ಕೆ

ಮೊದಲು ಬೋಧಿಸಿದವರು ಶ್ರೀಶ್ರೀ. ಜನರಲ್ಲಿ ಕಳೆದ ಯುಗಧರ್ಮವೇ ವ್ಯಾಪಿಸಿದೆ. ಅವರಿಗೆ ಬದಲಾದ ಕಾಲಮಾನ-ಮೌಲ್ಯಗಳನ್ನು ಸ್ಪಷ್ಟವಾಗಿ ತಿಳಿಸಬೇಕು. ಸ್ವಾತಂತ್ರ್ಯ ಬಂದ ಕೂಡಲೇ ಇಂಥ ಆಧುನಿಕ ಯುಗ ಶಿಕ್ಷಣ ಪದ್ಧತಿಯು ಸಾರ್ವತ್ರಿಕವಾಗಿ ಬರಬೇಕಾಗಿತ್ತು. ದುರ್ದೈವದಿಂದ ಹಾಗಾಗಲಿಲ್ಲ. ಆದ್ದರಿಂದ ಕವಿಗಳ ಮೇಲೆ ಈ ಹೊಣೆ ಬಿದ್ದಿದೆ.

"ಜಾನುವಾಹನಂ ಮಾರಿಂದಿ, ದೂರಾನಿಕೆ
ಪೂರ್ವ ಪುಟರ್ಥಂ ಪೋಯಿಂದಿ
ಮಾನವುಡಾ ಮೇಲುಕೋನೇಸ್ತಂ ।
ಎದ್ದು ಬಂಡಿತೋ ಕೊಲವಕು ದೂರಾನ್ನಿ ।
ಎಗರವೋಯ್ ಚದುಲಯದ ಚೀಲುಸ್ತು"

ಇದು ಎತ್ತಿನ ಬಂಡಿಯ, ಸರೀಸೃಪಗಳ ಕಾಲವಲ್ಲ ಹಾಗೆಯೇ ಸಂದೇಹ, ಮೌಢ್ಯ ವರ್ಣ-ವರ್ಗಭೇದಗಳ ಕಾಲವೂ ಇದಲ್ಲ. ದುಡಿಮೆಗಾರ ಆಧುನಿಕನಾಗಬೇಕು. ಈ ಸಮಸ್ತ ವಿಶ್ವವನ್ನು ಆಳುವಂತಾಗಬೇಕು ಎಂಬುದು ಶ್ರೀಶ್ರೀಯವರ ಮಹದಾಶಯ.

"ಶಕ್ತಿಕೋಸಮೆ ನಡು ।
ಮುಕ್ತಿ ಕೋಸಮೆ ನಡು ।
ವಿಮುಕ್ತಿಕೋಸಮೆ ನಡು"

ಉದಯ ಬಹಳ ದೂರವಿಲ್ಲ, ಅಂಧಕಾರ ತೊಲಗುವುದು ಎಂದು ಜನರಲ್ಲಿ ಆಶಯವನ್ನು ತುಂಬುತ್ತಾ ಶಕ್ತಿಗಾಗಿ ಮುಕ್ತಿಗಾಗಿ, ವಿಮುಕ್ತಿಗಾಗಿ ನಡೆ. ವಾಸ್ತವತೆಯ ಮಾರ್ಗದಲ್ಲಿ ಸಾಗು ಎಂದು ಶ್ರೀಶ್ರೀ ಬೋಧಿಸಿದ್ದಾರೆ.

ಶ್ರೀಶ್ರೀ ಕವಿತೆ ಎಂದೊಡನೆ ಅಭ್ಯುದಯ, ದಿಗಂಬರ, ವಿಪ್ಲವ ಕವಿತೆಗಳೆಲ್ಲದರ ನೆನಪು ಸಾಮಾನ್ಯನ ಚರಿತ್ರೆ, ಸಾಮಾನ್ಯನ ಅಭಿವೃದ್ಧಿಯ ಕನಸು, ಸಾಮಾನ್ಯನ ಬದಲಾವಣೆಗೆ ಬೇಕಾದ ಮಾರ್ಗ ಅಸಲಿಗೆ ಸಾಹಿತ್ಯ ಯಾರಿಗೆ? ಮತ್ತು ಸಾಹಿತ್ಯ ಏಕೆ? ಎಂಬ ಪ್ರಶ್ನೆಗಳಿಗೆ ಉತ್ತರಗಳೇ ಎಂಬಂತಿವೆ ಅವರ ಕವಿತೆಗಳು. ಭಾಷಿಕ ಬದಲಾವಣೆ, ರೂಪಕಗಳ ಬದಲಾವಣೆ, ದೃಷ್ಟಿಕೋನದ ಬದಲಾವಣೆ ಬಯಸಿದ ಶ್ರೀಶ್ರೀ ಬ್ಯಾಲೆಟ್ ಪ್ರಧಾನ ವ್ಯವಸ್ಥೆಗಿಂತಲೂ ಬುಲೆಟ್ ಪ್ರಧಾನ್ಯತೆಗೆ ಸಾಥ್ ನೀಡಿದವರು. ಪ್ರಜಾ ಬಾವುಟಕ್ಕಿಂತ ಕಮ್ಯುನಿಷ್ಟ್ ಕೆಂಪು ಬಾವುಟಕ್ಕೆ ಮನಸೋತವರು. ಹೊಸ ಕಾಲದ ಹೊಸ ಕವಿತೆಯ ಹೊಸ್ತಿಲಲ್ಲಿ ನಿಂತ ನಮಗೆ ಇಂದು ಶ್ರೀಶ್ರೀ ಕವಿತೆಗಳಲ್ಲಿ ಮಿತಿಗಳೂ ಕಾಣುತ್ತವೆ ಆದರೆ ಕವಿತೆ ಕುರಿತಂತೆ ಶ್ರೀಶ್ರೀಗಿರುವ ಶ್ರದ್ಧೆ ಜನ ಸಾಮಾನ್ಯರ ಕುರಿತ ಅಪರೂಪದ ಕಾಳಜಿ ಎಂದೆಂದಿಗೂ ಅವರನ್ನೊಬ್ಬ ಮಹಾಕವಿ ಎಂದೇ ಕರೆಯುವಂತೆ ಮಾಡುತ್ತದೆ.

❖

ಟಿಪ್ಪಣಿ

೧. ಕತ್ತಿ ಪದ್ಮಾರಾವು – ಸಾಂಘಿಕ ವಿಪ್ಲವ ರಚಯಿತುಲು ಪುಟ–೧೧೯, ೧೨೦

೨. ಚಲಂ – ಮಹಾಪ್ರಸ್ಥಾನಂ ಮುನ್ನುಡಿ, ಪುಟ–೧೩

೩. ಮಹಾ ಕವಿ ಶ್ರೀಶ್ರೀ – ಬುದರಾಜು ರಾಧಾಕೃಷ್ಣ, ಗುರುಮೂರ್ತಿ ಪೆಂಡಕೂರು, ೨೦೦೫ ಪುಟ–೪೧,೪೪, ೪೫, ೪೮

೪. ಸುಗಮ – ಶ್ರೀಶ್ರೀ ಲೇಖನ ೧೯೪೫

೫. ಮಹಾಪ್ರಸ್ಥಾನ, ಮತ್ತೊಂದು ಪ್ರಸ್ಥಾನ – ಶ್ರೀ ಶ್ರೀ ಆಯ್ದ ಕವನಗಳು– ೧೯೯೧, ಪುಟ–೫೦, ೫೭, ೬೭

ಅಧ್ಯಾಯ-೫

ಸಿದ್ಧಲಿಂಗಯ್ಯ ಮತ್ತು ಶ್ರೀಶ್ರೀ ಕಾವ್ಯಗಳಲ್ಲಿನ ಸಮಾನತೆ ಮತ್ತು ವಿಭಿನ್ನತೆಯ ನೆಲೆಗಳು

ಸಿದ್ಧಲಿಂಗಯ್ಯ ಮತ್ತು ಶ್ರೀ ಶ್ರೀ ಕಾವ್ಯಗಳಲ್ಲಿನ ಸಮಾನತೆ ಮತ್ತು ವಿಭಿನ್ನತೆಯ ನೆಲೆಗಳು

ಶ್ರೀ ಶ್ರೀ ಮತ್ತು ಸಿದ್ಧಲಿಂಗಯ್ಯ ಭಿನ್ನ ತಲೆಮಾರುಗಳ ಭಿನ್ನ ಸ್ಥರಗಳಿಂದ ಬಂದ ವ್ಯಕ್ತಿಗಳು. ಜನಪರ ಕಾಳಜಿ ಹೊತ್ತ ಈ ಇಬ್ಬರೂ ಆಯಾ ಕಾಲದ ಕವಿತೆಗಳಿಗೆ ಮರುಜೀವ ನೀಡಿದವರು. ವಸ್ತು, ಶೈಲಿ ಮತ್ತು ವರ್ಣನೆಗಳ ಭಿನ್ನತೆಯನ್ನು ಆಯಾ ಕಾವ್ಯಗಳಿಗೆ ನೀಡಿದರು. ಓದುವ, ಆನಂದಿಸುವ, ಪ್ರತಿಕ್ರಿಯಿಸುವ ನೆಲೆಗಷ್ಟೇ ಸೀಮಿತವಾಗಿದ್ದ ಕಾವ್ಯವನ್ನನುಸರಿಸಿ ಹಾಡುವ, ವಾಸ್ತವಕ್ಕೆ ಮುಖಮಾಡುವ, ನೇರ ಹೋರಾಟದಿಂದಲೇ ಹುಟ್ಟಿಕೊಳ್ಳುವ ಹೊಸಬಗೆಯನ್ನ ಆಯಾ ಕಾವ್ಯಗಳಿಗೆ ನೀಡಿದ ಶ್ರೇಷ್ಠರಿವರು. ಶ್ರೀ ಶ್ರೀ ವಿಪ್ಲವ ಕಾವ್ಯಕ್ಕೆ ಮೂಲ ಕಾರಣರಾದಂತೆ ಸಿದ್ಧಲಿಂಗಯ್ಯ ದಲಿತ ಕಾವ್ಯದ ಆದಿಪುರುಷನಾದರು. ಶ್ರೀ ಶ್ರೀ ಕವಿತೆಗಳಲ್ಲಿ ನಗರದ ಬಡತನಗಳು ಶೋಷಣೆಯ ಮುಖಗಳು ಕಂಡುಬಂದರೆ ಸಿದ್ಧಲಿಂಗಯ್ಯನವರ ಕಾವ್ಯದಲ್ಲಿ ಹಳ್ಳಿ ಮತ್ತು ನಗರಗಳೆರಡರ ಚಿತ್ರಣಗಳು ಅದರಲ್ಲೂ ಆರಂಭದಲ್ಲಿ ದಲಿತರು ಅನಂತರದಲ್ಲಿ ಎಲ್ಲಾ ಬಡವರ ಚಿತ್ರಣಗಳು ಕಂಡುಬಂದಿವೆ. ಶ್ರೀ ಶ್ರೀ ಕವಿತೆಗಳಲ್ಲಿ ದೇವರುಗಳು ವ್ಯಂಗ್ಯ ವಿಡಂಬನೆಗೆ ಗುರಿಯಾದಂತೆ ಸಿದ್ಧಲಿಂಗಯ್ಯನವರ ಕಾವ್ಯದಲ್ಲೂ ಅಂತಹುದೇ ವ್ಯಂಗ್ಯ ಮತ್ತು ವಿಡಂಬನೆಯ ಜೊತೆ ಜೊತೆಗೆ ಅತ್ಯಂತ ಕೆಳವರ್ಗದ ದೇವರುಗಳಲ್ಲಿರುವ ಮಾನವೀಯ ಕಾಳಜಿಯನ್ನೂ ಶೋಧಿಸಿ ತೋರುತ್ತವೆ. ಡಿ.ಆರ್. ನಾಗರಾಜ್ ಅವರು ಈ ಇಬ್ಬರನ್ನು ಉತ್ಪ್ರೇಕ್ಷಾಲಂಕಾರದ ಕವಿಗಳೆಂದೇ ಕರೆದಿದ್ದಾರೆ. ಕವಿತೆಯ ವಸ್ತು, ಭಾಷೆ, ಮತ್ತು ಅಭಿವ್ಯಕ್ತಿಯ ಕ್ರಮದಲ್ಲಿ ಇಬ್ಬರೊಳಗೂ ಸಮಾನ ಮತ್ತು ವಿಭಿನ್ನ ನೆಲೆಗಳನ್ನು ಗುರ್ತಿಸಬಹುದು.

ಕನ್ನಡ ಮತ್ತು ತೆಲುಗು ಕಾವ್ಯಗಳ ತೌಲನಿಕ ನೋಟ ಈಗಾಗಲೇ ಇಡಿಯಾಗಿ ಅಲ್ಲದಿದ್ದರೂ ಕೆಲ ದೃಷ್ಟಿಕೋನಗಳಡಿಯಲ್ಲಿ ಪ್ರಾಚೀನ ಕಾವ್ಯದಿಂದ ಇಂದಿನ ಕಾವ್ಯದ ತನಕ ಅಧ್ಯಯನಗಳು ಆಗುತ್ತಲೇ ಬಂದಿವೆ. ಸಾಮಾಜಿಕ ನೆಲೆಯಲ್ಲೂ ಮತ್ತು ವ್ಯಕ್ತಿಗತವಾಗಿ ನಡೆದ ಆ ನೋಟಗಳಲ್ಲೂ ಸಮಾನ ಮತ್ತು ಭಿನ್ನ ಅಂಶಗಳಿವೆ. ಹಾಗೆ ನೋಡಿದರೆ ತೆಲುಗು ಮತ್ತು ಕನ್ನಡದ ನೆಲೆಗಳೇನೂ ಅಂತಹ ಹೆಚ್ಚು ಭಿನ್ನತೆ ಹೊಂದಿರುವ ಸಂಸ್ಕೃತಿಗಳನ್ನು ಹೊಂದಿಲ್ಲ. ಎರಡೂ ಪ್ರದೇಶಗಳ ಸಾಮಾಜಿಕ

ವ್ಯವಸ್ಥೆ, ಆರ್ಥಿಕವ್ಯವಸ್ಥೆ, ರಾಜಕೀಯ ಸಂಲನಗಳು ಸರಿಸುಮಾರು ಸಮಾನ ಮತ್ತು ಅಲ್ಪಸ್ವಲ್ಪ ಭಿನ್ನತೆಗಳಲ್ಲೇ ಕಂಡುಬರುತ್ತವೆ.

ಶ್ರೇಣೀಕೃತ ಜಾತಿ ವ್ಯವಸ್ಥೆ, ಮತ-ಧರ್ಮ ಪ್ರಧಾನವಾದ ಜೀವನದ ರೀತಿ ನೀತಿಗಳು ಸಾಮಾಜಿಕ ಮತ್ತು ಧಾರ್ಮಿಕ ಭೇದ ಭಾವಗಳು, ಶೋಷಣೆಯ ಬಗೆಗಳು. ವೃತ್ತಿ ಮತ್ತು ಪ್ರವೃತ್ತಿಗಳು ವೈವಿಧ್ಯಮಯ ಪ್ರದೇಶಗಳು, ಅಸಂಖ್ಯ ನಿರ್ಗತಿಕರು, ಕೂಲಿಗಳು, ಕೆಳವರ್ಗಗಳು, ಕೆಲವೇ ಜನರ ಕೈಯಲ್ಲಿ ನಿಂತಿರುವ ಉತ್ಪನ್ನ ಮೂಲಗಳು. ರಾಜಕೀಯ ನಿರ್ಧಾರಗಳು ಹೆಚ್ಚುಕಡಿಮೆ ಒಂದೇ ಎಂಬಂತಿವೆ. ಜಲಮೂಲ, ಕೃಷಿ, ಗಣಿಗಾರಿಕೆ, ಕೈಗಾರಿಕೆ ಐ.ಟಿ. ಮಾಧ್ಯಮಗಳು, ಉಡುಗೆ, ಊಟ, ಉಪಚಾರಗಳಲ್ಲೂ ಅಂತಹ ವ್ಯತ್ಯಾಸಗಳೇನಿಲ್ಲ.

ಈ ಎರಡೂ ಕಾವ್ಯಗಳು ಹೊರಡಿಸುವ ಸಮಾಜ ಚಿತ್ರಣವನ್ನು ನೋಡಿದರೆ ಮೇಲ್ಪದರಿನಲ್ಲಿ ಬದಲಾದಂತೆ ಕಂಡರೂ ಹಳೆಯ ಶೋಷಣಾ ಕ್ರಮವೇ ಇನ್ನೂ ದಟ್ಟವಾಗಿದೆ ಎಂದೆನಿಸುತ್ತದೆ. ಶೋಷಿತರ ಅಜ್ಞಾನ, ದಾರಿದ್ರ್ಯಗಳು ಇನ್ನೂ ಹಾಗೆ ಇರುವುದನ್ನು ಎರಡೂ ಕಾವ್ಯಗಳು ಬೆರಳು ಮಾಡುತ್ತವೆ.

ಎರಡೂ ಪ್ರದೇಶಗಳಲ್ಲೂ ಸಂಪ್ರದಾಯದ ಹಿಡಿತ ಇನ್ನೂ ಬಲವಾಗಿಯೇ ಇದೆ. ಮಧ್ಯಮ ವರ್ಗದ ಜನಗಳಂತೂ ಅದರಲ್ಲೂ ಅಕ್ಷರ ಸಮುದಾಯ ಇರುವ ವ್ಯವಸ್ಥೆಯನ್ನೇ ಒಪ್ಪಿಕೊಂಡು ಆದರ್ಶವಾದ ಗಾಂಧೀವಾದ, ಆಧ್ಯಾತ್ಮವಾದಗಳಲ್ಲೇ ಮುಳುಗಿದ್ದಾರೆ. ಸುಧಾರಣೆ ಆಗಬೇಕು ಎಂಬುದು ಅವರ ಕನಸಾದರೂ ಅದಕ್ಕಾಗಿ ಅವರು ಸಿಡಿದು ನಿಲ್ಲಲಾರರು. ಕೂಲಿ ಮತ್ತು ಬಡಜನರಲ್ಲಿ ಇನ್ನೂ ಹಾಗೆ ಉಳಿದ ಮೌಢ್ಯ ಮತ್ತು ಕಂದಾಚಾರಗಳು ಹೊಸ ಸಮಾಜ ರಚನೆಗೆ ತೀವ್ರವಾಗಿ ಮುಂದಾಗುತ್ತಿಲ್ಲ. ಇಂತಹ ಸ್ಥಿತಿ ಕಂಡು ಸಿಡಿದ ಸಮುದಾಯಗಳು ಕೂಡಾ ಈ ನೆಲೆಯಿಂದಲೇ ಮತ್ತು ಬಹಿಷ್ಕೃತ ನೆಲೆಯಿಂದಲೇ ಬಂದಿವೆ.

ತೆಲುಗಿನ ಅಂತಹ ಜನಾಂಗಗಳನ್ನು ಹೊತ್ತ ಕಾವ್ಯ ವರ್ಗ ಹೋರಾಟದ ಮೂಲಕ ಸಾಮಾಜಿಕ ಬದಲಾವಣೆಯ ಕನಸು ಹೊತ್ತಿವೆ. ಅದಕ್ಕಾಗೇ ಅದು 'ವಿಪ್ಲವ' ಎಂಬ ಹೊಸ ಹೆಸರಿನಿಂದ ವ್ಯವಸ್ಥೆಯ ಎಲ್ಲಾ ಅಂಶಗಳನ್ನು ವಿರೋಧಿಸಿ ಅಜ್ಞಾತವಾಸದಲ್ಲಿ ಬೆಂಕಿಯ ಕೆಂಡಗಳಂತಹ ಅಕ್ಷರದ ಮಳೆಗರೆದಿದೆ. ನಕ್ಸಲ್ ಬಾರಿ ಹೋರಾಟಕ್ಕೂ ಅದು ಸಾಥ್ ನೀಡಿದೆ. ಅಭ್ಯುದಯ ಕಾವ್ಯ, ದಿಗಂಬರ ಕಾವ್ಯ ವಿಪ್ಲವ ಕಾವ್ಯಗಳು ಹಂತಹಂತವಾಗಿ ಹೋರಾಟ ತೀವ್ರಗೊಂಡ ಸ್ವರೂಪವನ್ನೇ ಹೇಳುವಂತಿವೆ. ಈ ಮೂರೂ ಘಟ್ಟಗಳಲ್ಲೂ ಶ್ರೀ ಶ್ರೀ ಪಾತ್ರ ಗಮನಾರ್ಹವಾದುದು ಅಂತಲೇ ತೆಲುಗು ಕಾವ್ಯ ಮೊದಲು ಶ್ರೀಶ್ರೀಯನ್ನ ನಡೆಸಿತು. ಆನಂತರ ಶ್ರೀ ಶ್ರೀಯವರೇ ತೆಲುಗು ಕಾವ್ಯವನ್ನು ನಡೆಸಿದರು ಎಂಬ ಮಾತು ಬಂದಿದೆ.

ಕನ್ನಡದ ಸಿದ್ಧಲಿಂಗಯ್ಯನವರ ಕಾವ್ಯವೂ ಆರಂಭದಲ್ಲೂ ತೀವ್ರವಾದ ರೋಷ, ಆವೇಶಗಳ ರೊಚ್ಚನ್ನೇ ಹೊತ್ತು ನಿಂತಿದೆ. ಈ ಕಾವ್ಯ ದಲಿತ ಜನರ ಬದುಕಿನ ಬದಲಾವಣೆಗಾಗಿ ವರ್ಗ ಹೋರಾಟವನ್ನು ಬೆಂಬಲಿಸುತ್ತದೆ. ಆದರೆ ತೆಲುಗಿನಂತೆ ಸಿದ್ಧಲಿಂಗಯ್ಯ ಸಾಯುಧ ಹೋರಾಟಕ್ಕೆ ನಕ್ಸಲರಿಗೆ ಸಾಥ್ ನೀಡದೆ ಅಂಬೇಡ್ಕರ್ ಮತ್ತು ಮಾರ್ಕ್ಸ್‌ನ ಸಿದ್ಧಾಂತದ ಹೋರಾಟಗಳಿಗೆ ಮುಖಮಾಡಿದೆ. ಈ ಕಾವ್ಯದೊಳಗೆ ತಲೆಮರೆಸಿಕೊಂಡು, ಅಜ್ಞಾತವಾಸ ಅನುಭವಿಸಿ ಗುಂಡಿಗೆ, ನೇಣಿಗೆ ಬಲಿಯಾದವರ ಚಿತ್ರಣಗಳಿಲ್ಲ ಆದರೆ ಬಡವರ ಬದುಕಿನ ಪ್ರಾಮಾಣಿಕ ಕಾಳಜಿ ಇಲ್ಲಿದೆ. ಪ್ರಜಾಪ್ರಭುತ್ವದ ನೆಲೆಯೊಳಗಿನ ಪ್ರತಿಭಟನೆ ಮತ್ತು ಹೋರಾಟಗಳ ಕಾವ್ಯಗಳು ಇಲ್ಲಿ ಕಂಡುಬರುತ್ತವೆ.

ಎರಡೂ ಕವಿಗಳು ಸಾಮಾಜಿಕ ಕಠೋರ ವಾಸ್ತವವನ್ನು ತಮ್ಮ ಸಾಮರ್ಥ್ಯಗಳಿಗನುಗುಣವಾಗಿಯೇ ಅದ್ಭುತವಾಗಿ ಚಿತ್ರಿಸಿದ್ದಾರೆ. ಇಬ್ಬರ ಹೃದಯಗಳು ಜನಪರವಾದವು. ಶೋಷಣೆಯ ವಿರುದ್ಧ ಅಗ್ನಿ ಮುಖಿಗಳಾಗುವ ಪರಿ ಇಬ್ಬರಲ್ಲೂ ಕಾಣಬಹುದು.

ಹಾಗೇ ಮುಖ್ಯ ವ್ಯತ್ಯಾಸಗಳೂ ಇವೆ. ತೆಲುಗಿನಲ್ಲಿ ಹೋರಾಟದ ನಡುವೆ 'ವಿಪ್ಲವ' ಕಾವ್ಯ ಹುಟ್ಟಿದೆ. ಕೆಲವು ಕವಿಗಳು ಜನರ ಮಧ್ಯದಲ್ಲೇ ಬೆರೆತು ಹೋರಾಡಿದ್ದಾರೆ. ಸರ್ಕಾರದಿಂದ ಬಹಿಷ್ಕೃತರಾಗಿದ್ದಾರೆ. ಜೈಲುಗಳಲ್ಲಿ ಚಿತ್ರಹಿಂಸೆ ಅನುಭವಿಸಿದ್ದಾರೆ. ಪೋಲೀಸರಿಂದ ಕೊಲೆಯಾಗಿದ್ದಾರೆ. ಅಲ್ಲಿ ಕ್ರಾಂತಿ ಕಾವ್ಯ ಸಹಜವೆಂಬಂತಿದೆ.

ಕನ್ನಡದ ನೆಲದಲ್ಲಿನ ಕವಿಗಳು ಇಂತಹ ತೀವ್ರ ಹೋರಾಟ ಮಾಡಿಲ್ಲ. ಇಲ್ಲಿ ಸಾಯುಧ ಹೋರಾಟಗಳ ಕಮ್ಯುನಿಜಂ ಕವಿತೆಗಳಿಲ್ಲ. ಆದರೆ ಸೈದ್ಧಾಂತಿಕ ನೆಲೆಗಟ್ಟಿನಿಂದ ಹುಟ್ಟಿದ ಕವಿತೆಗಳಿವೆ. ಕನ್ನಡ ದಲಿತ ಬಂಡಾಯ ಕವಿತೆಗಳು 'ನೊಂದ ಜನರ ನೋವಿಗೆ ಮಿಡಿವ ಪ್ರಾಣ ಮಿತ್ರರಂತಿವೆ' ಅಂತಲೇ ಎರಡೂ ಕವಿತೆಗಳ ಹೋರಾಟದ ನಡೆ ನುಡಿಗಳಲ್ಲಿ ವ್ಯತ್ಯಾಸಗಳನ್ನೂ ಕಾಣಬಹುದಾಗಿವೆ.

ಶ್ರೀ ಶ್ರೀ ಮತ್ತು ಸಿದ್ಧಲಿಂಗಯ್ಯ ಸಮಾನ ಅಂಶಗಳು

"ಗ್ರಾಂಥಿಕ ಭಾಷೆ ಕಾವ್ಯರಚನೆಗೆ ಕೆಲಸಕ್ಕೆ ಬಾರದೆನ್ನುವುದು ನನ್ನ ಗಟ್ಟಿ ನಂಬಿಕೆ. ಆ ಭಾಷೆಯಲ್ಲಿ ಮಹೋತ್ಕೃಷ್ಟವಾದ ಕವಿತ್ವವಿದೆಯೆಂದು ಒಪ್ಪಿಕೊಳ್ಳುತ್ತಲೇ ಈ ನಂಬಿಕೆಯನ್ನಿಲ್ಲಿ ಪ್ರವಚಿಸುತ್ತಿರುವೆ. ಅದು ಗುತ್ತಿಗೆದಾರರ ಭಾಷೆ. ಅವರ ಪ್ರಯೋಜನವನ್ನು ರಕ್ಷಿಸುವುದಕ್ಕೆ ಮಾತ್ರವೇ ಅದು ಉಪಯೋಗಕ್ಕೆ ಬರುತ್ತದೆ. ಆಡು ಭಾಷೆ ಜನರ ಭಾಷೆ! ಸಮತಾವಾದ ವ್ಯವಸ್ಥೆಯಲ್ಲಿಯೆ ಪ್ರಜಾಪ್ರಭುತ್ವ ಪರಾಕಾಷ್ಠೆಗೆ ತಲುಪುತ್ತದೆಂದು ಒಪ್ಪಿಕೊಂಡರೆ ಜನರ ಭಾಷೆಯಲ್ಲಿ ಪ್ರಜಾಪ್ರಭುತ್ವ ಕವಿತೆ ಇರಬೇಕೆಂದು ಬೇರೆ ಹೇಳುವ ಅಗತ್ಯವಿಲ್ಲ" ಎಂದು "ಯಾತಕ್ಕಾಗಿ

ಬರೆಯಬೇಕು" ಎಂಬ ಲೇಖನದಲ್ಲಿ ಶ್ರೀಶ್ರೀ ಹೇಳಿದರೆ "ಕ್ರಾಂತಿಕಾವ್ಯ; ಜನಪದೀಕರಣ ಎಂಬ ಲೇಖನದಲ್ಲಿ ಸಿದ್ಧಲಿಂಗಯ್ಯನವರು ಇವತ್ತು ಜನ ಬಂಡಾಯ ಸಾಹಿತ್ಯ ಮತ್ತು ದಲಿತ ಸಾಹಿತ್ಯದ ಬಗ್ಗೆ ಮಾತಾಡುತ್ತಿದ್ದಾರೆ. ಮಿಶ್ರ ಭಾವನೆಗಳ ಸ್ವಾಗತ ನಮಗೆ ದೊರೆಯುತ್ತಿವೆ. ಕೆಲವರು ಈ ಸಾಹಿತ್ಯ ಚಳುವಳಿಯ ಬಗ್ಗೆ ತೀರ್ಮಾನಕ್ಕೆ ಬರಲು ಹಿಂದೆ-ಮುಂದೆ ನೋಡುತ್ತಿದ್ದಾರೆ. ಇನ್ನೂ ಕೆಲವರು ಸಾಹಿತ್ಯದಲ್ಲಿ ಈ ಬೆಳವಣಿಗೆ ಅನಾರೋಗ್ಯಕರವೆಂದು ಭಾವಿಸಿದ್ದಾರೆ. ಧರ್ಮಕ್ಕೂ ಕನ್ನಡ ಸಾಹಿತ್ಯಕ್ಕೂ ಇರುವ ಸಂಬಂಧ ಹಳೆಯದು. ಅದು ಬದಲಾಗುವ ಕಾಲ ಬಂದಿದೆ. ಸಮಾಜವನ್ನೂ ಶೋಷಣೆ ಮಾಡಿದ ಅಲ್ಪಸಂಖ್ಯಾತರ ಭಾವನೆಗಳೇ ಇಡೀ ಸಮಾಜದ ಭಾವನೆಗಳಲ್ಲ. ಅವರ ಸುಖ-ದುಃಖಗಳೇ ಎಲ್ಲರ ಬದುಕನ್ನು ಪ್ರತಿನಿಧಿಸುವುದಿಲ್ಲ. ಇದಕ್ಕಿಂತ ಭಿನ್ನವಾದ, ಈ ನೆಲದಲ್ಲೇ ತುಳಿಯಲ್ಪಟ್ಟ ವೈವಿಧ್ಯಮಯ ಭಾವನೆಗಳಿವೆ. ಬಹುಸಂಖ್ಯಾತ ಜನತೆ ಕಂಡ ಬಣ್ಣ ಬಣ್ಣದ ಕನಸುಗಳಿವೆ. ಪ್ರಸಿದ್ಧ ಕವಿ ಕಲಾವಿದರಿಗೆ ಕಾಣದೆ ಹೋದ ಕೋಟಿ ಸೂರ್ಯರ ಬೆಳಕುಗಳಿವೆ. ಆಳುವ ವರ್ಗದಿಂದ ಮುಚ್ಚಿಡಲ್ಪಟ್ಟಿದ್ದ ಈ ಅಮೂಲ್ಯ ಸತ್ಯಗಳನ್ನು ಕ್ರಾಂತಿಕಾರೀ ಸಾಹಿತಿಗಳು ಬಯಲಿಗೆ ತಂದು ಮರೆಯಾಗಿ ಹೋಗಿದ್ದ ಜನತೆಯ ಸಂಸ್ಕೃತಿಯನ್ನೂ ಅನಾವರಣ ಮಾಡಬೇಕಾಗಿದೆ. ಅದರಿಂದ ಸಾಹಿತ್ಯ ಮತ್ತು ಬದುಕಿನ ಸಂಬಂಧಗಳನ್ನು ನಾವು ಉದ್ಘಾಟಿಸಿದಂತಾಗುತ್ತದೆ.

ಇಲ್ಲಿಯವರೆಗಿನ ಸಾಹಿತ್ಯದಲ್ಲಿ ಕಾಣದ ಶೋಷಿತ ಜನತೆಯ ಬದುಕನ್ನು ಕೃತಿಗಳಲ್ಲಿ ಪ್ರಕಟಿಸಬೇಕು ಎಂಬುದಷ್ಟೇ ನಮ್ಮ ಗುರಿಯಲ್ಲ. ಈ ಜನತೆ ನಡೆಸುತ್ತಿರುವ ವಿಮೋಚನೆಯ ಹೋರಾಟಕ್ಕೆ ಬೆಂಬಲ ಕೊಡುವುದು ಪಾಲ್ಗೊಳ್ಳುವುದೂ ಅಗತ್ಯವಾಗಿದೆ. ಸಾಹಿತ್ಯದ ಪಾವಿತ್ರ್ಯತೆಯನ್ನೂ ಎತ್ತಿ ಹಿಡಿಯುವವರು ಇದನ್ನೂ ಒಪ್ಪುವುದಿಲ್ಲ. ಅವರ ಈ ರೀತಿಯ ಆಲೋಚನೆಗೆ ಸಾಹಿತ್ಯವನ್ನು ಬದುಕಿನಿಂದ ಬೇರ್ಪಡಿಸುವುದೇ ಕಾರಣ. ಸಾಹಿತಿ ಇವರ ಪಾಲಿಗೆ ಪವಾಡ ಪುರುಷ. ಈ ತಿಳುವಳಿಕೆಯಿಂದ ಎಂಥ ಕೆಟ್ಟ ಪರಿಣಾಮವಾಗಿದೆ ಎಂದರೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದವರನ್ನ ಆನೆ, ಕುದುರೆ ರಥದಲ್ಲಿ ಕೂರಿಸಿ ಮೆರವಣಿಗೆ ಮಾಡಲಾಗುತ್ತದೆ. ದೊರಕಿದ ಪ್ರಾಣಿಗಳ ಮೇಲೆ ಕೂತು ಮೆರವಣಿಗೆ ಮಾಡಿಸಿಕೊಳ್ಳುವ ನಮ್ಮ ಕವಿಗಳಿಗೂ ಮಂತ್ರಿಗಳಿಗೂ ಏನು ವ್ಯತ್ಯಾಸ? ನಿಜ ಜೀವನದಿಂದ ಸಿಡಿದು ಹೋಗಿರುವ ಸಾಹಿತಿ ಮತ್ತು ಸಾಹಿತ್ಯವನ್ನು ಜೀವನದ ಹತ್ತಿರಕ್ಕೆ ತರುವುದು ನಮ್ಮ ಗುರಿ.

ಇನ್ನೂ ಕೆಲವು ಕವಿಗಳಿದ್ದಾರೆ. ಕಾವ್ಯ ಆತ್ಮಸಂತೋಷಕ್ಕಾಗಿ, ನಮ್ಮ ಕಾವ್ಯವನ್ನು ಯಾರೂ ಓದಬೇಕಾಗಿಲ್ಲ ಎನ್ನುತ್ತಾರೆ. ಈ ನೆಲದ ಮೇಲೆ ಓಡಾಡುವ ಎಲ್ಲ ಮನುಷ್ಯರ ಚಟುವಟಿಕೆಗಳನ್ನೇ ಮಾಡುವ ಇವರಿಗೆ ಸಮಾಜಕ್ಕೂ ತಮಗೂ ಇರುವ

ಸಂಬಂಧ ಖಚಿತವಾಗಿಲ್ಲ. 'ನನಗಾಗಿ ನಾನು' ಎಂಬ ತತ್ವದ ಈ ಜನ ಕಾವ್ಯವನ್ನು ಬರೆದ ನಂತರ ಓದಿ ಹರಿದು ಹಾಕದೆ ಪ್ರಕಟಿಸುವ ಔಚಿತ್ಯವಾದರೂ ಏನು? ತಮ್ಮ ಕಾವ್ಯ ಮತ್ತೊಬ್ಬರನ್ನು ತಲುಪುತ್ತದೆ ಎಂಬುದನ್ನೇ ಕಡೆಗಣಿಸುವ ಇವರು ಓದುಗರ ಬಗ್ಗೆ ತಿರಸ್ಕಾರ ಭಾವವನ್ನೂ ಹೊಂದಿದ್ದಾರೆ. ಕನ್ನಡದ ಮುಖ್ಯ ಕವಿಯೊಬ್ಬರು ಅನೇಕ ಕವನಗಳನ್ನು ಕನಸಿನಲ್ಲಿ ಬರೆದಿದ್ದಾರೆ ಎಂದು ನಂಬಲಾಗಿದೆ. ಕಾವ್ಯದ ಹುಟ್ಟು ಮತ್ತು ಅದರ ಸಂವಹನದ ಬಗ್ಗೆ ನಮ್ಮ ಕವಿಗಳ ಭ್ರಮೆಗಳು ಜನಸಮುದಾಯವನ್ನು ಕುರಿತು ಅವರಿಗಿರುವ ತಾತ್ಸಾರವನ್ನು ತೋರಿಸುತ್ತದೆ.

ಸಾಹಿತ್ಯ ಮಾನವೀಯವಾಗಬೇಕು. ಕಾವ್ಯ ಮಾನವೀಯತೆಯ ಮಿಡಿತವಾಗಬೇಕು ಎಂಬುದು ನಮ್ಮ ಆಸೆ. ಇಂಡಿಯಾ ಉರಿಯುತ್ತಿದೆ. ದಲಿತರ ಕೊಲೆಯಾಗದ ಅವರ ಹೆಣ್ಣುಗಳ ಮೇಲೆ ಅತ್ಯಾಚಾರ ಮಾಡದ, ಅವರ ಗುಡಿಸಲಿಗೆ ಬೆಂಕಿ ಇಡದ ಒಂದು ದಿನವನ್ನು ನೀವು ಇಂಡಿಯಾದ ಚರಿತ್ರೆಯಲ್ಲಿ ಹುಡುಕಲಾರಿರಿ. ರಕ್ತಸಿಕ್ತವಾದ ಇಂಡಿಯಾದ ಇತಿಹಾಸದ ಪುಟಗಳಲ್ಲಿ ಮನುಷ್ಯನ ದರ್ಶನ ದುರ್ಲಭವಾದುದು. ಜಮೀನುದಾರಿ ಮತ್ತು ಬಂಡವಾಳಶಾಹಿ ಪದ್ಧತಿಯ ಸೈಜುಗಲ್ಲಿನಡಿಯಲ್ಲಿ ಸಿಕ್ಕಿ ಜಜ್ಜಿಹೋಗುತ್ತಿರುವ ಮಾನವೀಯತೆಯನ್ನು ರಕ್ಷಿಸುವ ಜವಾಬ್ದಾರಿ ಸಾಹಿತಿಗಳ ಮೇಲಿದೆ. ಯಾಕೆಂದರೆ ಸಾಹಿತಿ ಸಮಾಜದ ಅವಿಭಾಜ್ಯ ಅಂಗ. ಭಾರತದ ಜಾತಿಪದ್ಧತಿ ಮನುಷ್ಯರಲ್ಲಿ ಪರಸ್ಪರ ಪ್ರೀತಿ ವಿಶ್ವಾಸವನ್ನು ಅಸಾಧ್ಯವಾಗಿಸಿದೆ. ಇದರ ವಿರುದ್ಧ ಉಗ್ರ ಹೋರಾಟ ಆಗಬೇಕಾಗಿದೆ. ಮೂಲಭೂತ ಬದಲಾವಣೆಗಳಿಗಾಗಿ ಕ್ರಿಯಾಶೀಲನಾಗುವುದು ಸಾಹಿತಿಯ ಸಾಮಾಜಿಕ ಜವಾಬ್ದಾರಿ ಬರವಣಿಗೆಯ ಮೂಲಕ ನಡೆಯುವ ನಮ್ಮ ಹೋರಾಟ ಹೆಚ್ಚು ಪರಿಣಾಮಕಾರಿಯಾದದ್ದು.

ಬೆಲ್ಚಿ, ಪಂತ್‌ನಗರ, ವಿಲ್ಲುಪುರ, ಕಂಜವಾಲ ಹೀಗೆ ನಾಡಿನ ಮೂಲೆ ಮೂಲೆಯಲ್ಲಿ ದಲಿತರನ್ನ ಸುಟ್ಟ ಸುದ್ದಿಯನ್ನು ಓದಿ ರೊಚ್ಚಿಗೇಳದವನು ಮನುಷ್ಯನೇ? ಮಾನವತೆಯ ಹತ್ಯೆಯ ಈ ಸಂದರ್ಭದಲ್ಲಿ ಸಾಹಿತಿ ಅಂತರ್ಮುಖಿ ಆಗುವುದಾದರೆ ಆತ ಖಂಡಿತವಾಗಿಯೂ ಸಾಮಾಜಿಕ ಅಪರಾಧಿ ಆಗುತ್ತಾನೆ. ಬದುಕಿನ ಬಗ್ಗೆ ಅಪಾರ ಪ್ರೀತಿ ಮತ್ತು ನಿಷ್ಠೆಯಿಂದ ಕೂಡಿದ ಸಾಹಿತ್ಯ ನಮಗೆ ಬೇಕಾಗಿದೆ. ಅದನ್ನು ಕ್ರಾಂತಿಕಾರೀ ಸಾಹಿತಿಗಳು ಮಾತ್ರ ಕೊಡಬಲ್ಲರು. ಯಾಕೆಂದರೆ ಅವರು ಜೀವನವನ್ನು ಕಾವ್ಯವಾಗಿಸುತ್ತಾರೆ. ರಕ್ತವನ್ನು ಇಂಕುಮಾಡಿ ಬರೆಯುತ್ತಾರೆ.

ರಾಜಕೀಯ ಪ್ರಜ್ಞೆ ಎಂದರೆ ಕೆಲವರಿಗೆ ಏನೋ ಗಾಬರಿ ಭೀತಿ ಮೈ ನಡುಕ ಉಂಟಾಗುತ್ತದೆ. ತಾವು ಬದುಕುತ್ತಿರುವ ಸಮಾಜದ ರಚನೆಯ ಸೂಕ್ಷ್ಮತೆಗಳು ವೈಷಮ್ಯಗಳನ್ನು ವೈಜ್ಞಾನಿಕವಾಗಿ ಗ್ರಹಿಸಿ ಅದರ ಬದಲಾವಣೆಯ ಸಾಧ್ಯತೆಗಳ ಕಡೆಗೆ ಯೋಚಿಸುವುದೇ ರಾಜಕೀಯ ಪ್ರಜ್ಞೆ. ಕ್ರಾಂತಿಕಾರಿ ರಾಜಕೀಯ ಪ್ರಜ್ಞೆಯುಳ್ಳ ಕವಿ

[illegible]

[illegible]

[illegible]

[illegible]

ಹೊಸ ಅನುಭವದ ಭಾಷೆಯನ್ನು ಸೃಷ್ಟಿಸಬಲ್ಲ. ಆಗ ಕಾವ್ಯ ಸ್ವಗತವಾಗುವ ಅಪಾಯದಿಂದ ತಪ್ಪಿಸಿಕೊಂಡು ಜನಮುಖಿಯಾಗುತ್ತದೆ. ವಸ್ತುವಿನ ಗ್ರಹಿಕೆ ಮತ್ತು ನಿರೂಪಣೆಯಲ್ಲಿ ಗಮನಾರ್ಹವಾದ ಬದಲಾವಣೆ ಸಾಧ್ಯವಾಗುತ್ತದೆ. ಒಂದು ಹೂವಿನ ದಳಗಳು ರಾಜಕೀಯ ಪ್ರಜ್ಞೆ ಇಲ್ಲದ ಕವಿಗೆ ಹೆಣ್ಣೊಬ್ಬಳ ಕೈ ಬೆರಳುಗಳಂತೆ ಕಾಣಬಹುದು. ಆದರೆ ಉರಿಯುತ್ತಿರುವ ಬಂಡಾಯ ಕವಿಗೆ ಹೂವಿನ ಒಂದೊಂದು ದಳವೂ ಒಂದೊಂದು ಚೂರಿಯಾಗಿ ಕಾಣುತ್ತವೆ.

ದಲಿತ ಸಾಹಿತ್ಯದ ಬಗ್ಗೆ ಕೆಲವರು ವಿಚಿತ್ರವಾದ ಹೇಳಿಕೆಯನ್ನು ಮಂಡಿಸುತ್ತಿದ್ದಾರೆ. ತಾವು ಅಂದದ್ದೇ ಸಾಹಿತ್ಯ- ಎಂಬ ಭ್ರಮೆ ಇವರಿಗೆ ಇರುವಂತಿದೆ. ಸಮಾಜದಲ್ಲಿ ಇರುವ ವೈಷಮ್ಯಗಳೇ ಸಾಹಿತ್ಯದಲ್ಲಿ ಅಭಿವ್ಯಕ್ತಿ ಪಡೆದರೆ ತಪ್ಪೇನು? ಹೆಂಡ, ಬಾಡು ಇಂಥ ಪದಗಳು ಕಾವ್ಯದಲ್ಲೂ ಬರಬಹುದೇ? ಇದು ಮಡಿವಂತರ ಪ್ರಶ್ನೆ. ಇಂಥ ಪದಗಳನ್ನು ಓದುವುದಕ್ಕೇ ಹೆದರುವ ಈ ಜನ ಸಾಹಿತ್ಯದಲ್ಲಿ ಹುಳಿ, ಖಾರ, ಕೋಸಂಬರಿಯನ್ನೂ ನಿರೀಕ್ಷಿಸುತ್ತಾರೆ. ಈ ಅಪೇಕ್ಷೆ ಬರಹಗಾರರ ಮೇಲೆ ಹೇರುವ ಒತ್ತಾಯವಾಗಿದೆ. ಕ್ರಾಂತಿಕಾರಿ ಸಾಹಿತ್ಯದಲ್ಲಿ ಕಲೆ ಮತ್ತು ಸಾಹಿತ್ಯವನ್ನು ಕುರಿತ ಸಾಂಪ್ರದಾಯಿಕ ಅರ್ಥವಿವರಣೆಗಳು ಬದಲಾಗುತ್ತಿವೆ. ಕಲೆ ಮತ್ತು ಸಾಹಿತ್ಯದ ಬಗ್ಗೆ ಈಗ ಚಲಾವಣೆಯಲ್ಲಿರುವ ಪರಿಕಲ್ಪನೆಗಳು ಆಳುವ ವರ್ಗದ ದೃಷ್ಟಿಕೋನದಿಂದ ಪ್ರೇರೇಪಿತವಾಗಿರುವುದರಿಂದ ನಾವು ಈ ವಿವರಣೆಯನ್ನು ತಿರಸ್ಕರಿಸಬೇಕಾಗಿದೆ. ಬಹುಸಂಖ್ಯಾತರ ಬದುಕನ್ನು ಅರ್ಥೈಸುವಿಕೆಯಿಂದ ಮತ್ತು ಸಮಾಜದ ಚಾರಿತ್ರಿಕ ಬೆಳವಣಿಗೆಯ ತಿಳುವಳಿಕೆಯಿಂದ ಉಂಟಾದ ಪರಿಕಲ್ಪನೆಗಳನ್ನು ನಾವು ಸ್ವೀಕರಿಸಬೇಕಾಗಿದೆ.

ಹೊಸ ಸಾಹಿತ್ಯದ ವಿರೋಧದ ಹಿನ್ನೆಲೆಯಲ್ಲಿ ವರ್ಗ-ಹಿತಾಸಕ್ತಿ ಕೆಲಸ ಮಾಡುತ್ತಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಕ್ರಾಂತಿಕಾರಿ ಬರವಣಿಗೆಯಲ್ಲೂ ಈಗ ಪ್ರಕಟವಾಗುತ್ತಿರುವ ಆಲೋಚನೆಗಳು ಜೀವನದಲ್ಲಿ ನಿಜವಾಗಿಬಿಟ್ಟರೆ ಪಟ್ಟಭದ್ರರು ಮತ್ತು ಅವರ ಏಜಂಟರು ಸುಖಸವಲತ್ತುಗಳಿಂದ ವಂಚಿತರಾಗುತ್ತಾರೆ. ಜೀವನದಲ್ಲಿ ಉಂಟಾಗುವ ಬದಲಾವಣೆಯ ಭೀತಿಯಿಂದ ಅವರಿಗೆ ಸಾಹಿತ್ಯವನ್ನು ವಿರೋಧಿಸುವ ಸ್ಥಿತಿ ಬಂದಿದೆ.

ಕ್ರಾಂತಿಕಾರಿ ಕಾವ್ಯ ಜನಪದೀಕರಣಕ್ಕೆ ಒಳಗಾಗಬೇಕು. ಕವಿಗಳು ಜನಸಮುದಾಯದ ಭಾವನೆಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಜಾನಪದ ಸಂಗ್ರಾಹಕ ಜನಪದ ಗೀತೆಗಳನ್ನು ಅಚ್ಚುಹಾಕಿಸುವ ಕೆಲಸವನ್ನು ಮಾತ್ರ ಮಾಡುತ್ತಾನೆ. ಆದರೆ ಕ್ರಾಂತಿಕಾರಿ ಕವಿ ಜಾನಪದ ಸತ್ವವನ್ನು ಉಂಡು ಬೆಳೆದು ಜನತೆಯ ಋಣವನ್ನು ಹಿಂದಿರುಗಿಸಬೇಕಾಗಿದೆ. ಕ್ರಾಂತಿಕಾರಿ ಹಾಡುಗಳನ್ನು ಜನತೆ ತಮ್ಮದೆಂದು ಸ್ವೀಕರಿಸಬೇಕು. ಕವಿಯ ಹೆಸರೇ ಮರೆತುಹೋಗಿ ನಮ್ಮ ಕಾವ್ಯ ಜನಪದ ಕಾವ್ಯ ಆಗಬೇಕು.

ಹೀಗೆ ಕಾವ್ಯದ ಭಾಷೆ ಮತ್ತು ಭಾವ ಜನಪರವಾಗಬೇಕು. ಕವಿಯ ಬರಹ ಜನರ ಬದುಕಿನ ಬದಲಾವಣೆಗಾಗಿ ಕಾಳಜಿವಹಿಸಬೇಕು ಎಂದೇ ಭಾವಿಸುವ ಈ ಇಬ್ಬರೂ ಕವಿಗಳ ಎರಡು ಜನಪ್ರಿಯ ಕವಿತೆಗಳು ಇಂತಿವೆ:

"ನಾನು ಸಹಿತ
ಪ್ರಪಂಚಾಗ್ನಿಗೆ
ಸಮಿತ್ತು ಒಂದನು ಅಹುತಿ ನೀಡಿದೆ!
ನಾನು ಸಹಿತ
ವಿಶ್ವಸೃಷ್ಟಿಗೆ
ಅಶ್ರುವೊಂದನು ಧಾರೆ ಎರೆದೆ
ನಾನು ಸಹಿತ
ಭುವನ ಘೋಷಣೆ
ಉನ್ಮತ್ತ ಕೊರಳ ತೆರೆದುಕೂಗಿದೆ!
....
....
ನಾನು ಸಹಿತ
ಪ್ರಪಂಚಾಬ್ಜದ
ಶ್ವೇತ ಎಲೆಯಾಗಿ ಪಲ್ಲವಿಸುತ್ತೇನೆ!
ನಾನು ಸಹಿತ
ವಿಶ್ವ ವೀಣೆಗೆ
ತಂತಿಯಾಗಿ ಆರೋಹಣ
ಅವರೋಹಣವಾಗುತ್ತೇನೆ!
ನಾನು ಸಹಿತ
ಭುವನ ಭವನದ
ಪತಾಕೆಯಾಗಿ ಮೇಲೇಳುತ್ತೇನೆ!" **(ಜಯಭೇರಿ– ಶ್ರೀ ಶ್ರೀ)**

"ನೆನ್ನೆ ದಿನ
ನನ್ನ ಜನ
ಬೆಟ್ಟದಂತೆ ಬಂದರು.
ಕಪ್ಪು ಮುಖ ಬೆಳ್ಳಿ ಗಡ್ಡ ಉರಿಯುತ್ತಿರುವ ಕಣ್ಣುಗಳು
ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗದವು ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ

ಇರುವೆಯಂತೆ ಹರಿವ ಸಾಲು ಹುಲಿಸಿಂಹದ ದನಿಗಳು
ದಿಕ್ಕಾರ ಧಿಕ್ಕಾರ ಅಸಮಾನತೆಗೆ
ಎಂದೆಂದಿಗೂ ದಿಕ್ಕಾರ ಶ್ರೀಮಂತರ ಸೊಕ್ಕಿಗೆ
ಲಕ್ಷಾಂತರ ನಾಗರಗಳು ಹುತ್ತ ಬಿಟ್ಟು ಬಂದಂತೆ
ಊರ ತುಂಬ ಹರಿದರು
ಪಾತಾಳಕೆ ಇಳಿದರು
ಆಕಾಶಕೆ ನೆಗೆದರು
ಬೀದಿಯಲ್ಲಿ ಗಲ್ಲಿಯಲ್ಲಿ
ಬೇಲಿ ಮೆಳೆಯ ಮರೆಗಳಲ್ಲಿ
ಯಜಮಾನರ ಹಟ್ಟಿಯಲ್ಲಿ ಧಣಿಕೂರುವ ಪಟ್ಟದಲ್ಲಿ
ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು

ಇವರು ಬಾಯಿ ಬಿಟ್ಟೊಡನೆ
ಅವರ ಬಾಯಿ ಕಟ್ಟಿತು
ಇವರ ಕಂಠ ಕೇಳಿದೊಡನೆ
ಅವರ ದನಿ ಇಂಗಿತು
ಕ್ರಾಂತಿಯ ಬಿರುಗಾಳಿಯಲ್ಲಿ ಕೈಬೀಸಿದ ನನ್ನ ಜನ
ಛಡಿಯ ಏಟು ಹೊಡೆದವರ
ಕುತ್ತಿಗೆಗಳ ಹಿಡಿದರು.

ಪೋಲೀಸರ ದೊಣ್ಣೆಗಳು ಏಜೆಂಟರ ಕತ್ತಿಗಳು
ವೇದಶಾಸ್ತ್ರ ಪುರಾಣ ಬಂದೂಕದ ಗುಡಾಣ
ತರಗೆಲೆ ಕಸಕಡ್ಡಿಯಾಗಿ
ತೇಲಿ ತೇಲಿ ಹರಿದವು
ಹೋರಾಟದ ಸಾಗರಕ್ಕೆ
ಸಾವಿರಾರು ನದಿಗಳು." **(ಸಾವಿರಾರು ನದಿಗಳು: ಸಿದ್ಧಲಿಂಗಯ್ಯ)**

ಜಯಭೇರಿ ಕವಿತೆಯಲ್ಲಿ ಕವಿ ಭುವನ ಭವನದ ಪತಾಕೆಯಾಗಿ ಮೇಲೇಳುವ ರೀತಿಯನ್ನು ತೋರುತ್ತಾರೆ. ಅದಕ್ಕಾಗಿ ಪ್ರಪಂಚದಲ್ಲಿ ಎದ್ದಿರುವ ದಳ್ಳುರಿಗೆ ಸಮಿತ್ತನ್ನು ಆಹುತಿ ನೀಡುತ್ತಾರೆ. ಉನ್ಮತ್ತ ಕೊರಳ ಕೂಗಿಗೆ ಸೇರಿಕೊಳ್ಳುತ್ತಾರೆ. ಕವಿಗೆ ಗೊತ್ತು ತಾನೊಬ್ಬ ನಿಂತರೆ ವ್ಯವಸ್ಥೆ ಮಾತ್ರವಲ್ಲ ನಿಸರ್ಗವೂ ತಪ್ಪಿಬಿಡುತ್ತದೆಂದು ಹಾಗಾಗಿ ಪ್ರಪಂಚದ ವೀಣೆಯ ತಂತಿಯಾಗಿ ಅಂದರೆ ಜನರ ದನಿಯಾಗಿ ಆರೋಹಣ ಅವರೋಹಣವಾಗುತ್ತೇನೆ ಎಂದಿದ್ದಾರೆ.

ಸಮ ಸಮಾಜದ ಕನಸಿಗಾಗಿ ಶ್ರೀ ಶ್ರೀ ಕೆಲವರ ಸ್ವತ್ತಾದ ಅಗ್ನಿಯನ್ನು ಪ್ರಪಂಚಾಗ್ನಿಯಾಗಿ ಮಾರ್ಪಡಿಸಿ ಅದಕ್ಕೆ ಸಮಿತ್ತು ಹಾಕಿ ಜಯಭೇರಿಯ ಪತಾಕೆ ಹಾರಿಸಿದರೆ ಸಿದ್ಧಲಿಂಗಯ್ಯನವರಲ್ಲಿ ಲಕ್ಷಾಂತರ ನಾಗರಗಳು ಹುತ್ತಬಿಟ್ಟು ಬರಿದಂತೆ ಜನರ ಮೆರವಣಿಗೆ ಕಾಣುತ್ತಾರೆ. ಈ ಮೆರವಣಿಗೆ ಕೂಡಾ ಕೆಲವರ ಸ್ವತ್ತಿನ ಗದ್ದುಗೆಗಳನ್ನೆಲ್ಲಾ ಕೆಡವಿ ವರ್ಗತಾರತಮ್ಯವುಳ್ಳವನ್ನ ಮುಳುಗಿಸಿ ಸಮಮಾಡಿ ನಿಲ್ಲುವ ಸಾವಿರಾರು ನದಿಗಳ ಅಬ್ಬರವಾಗುತ್ತದೆ. ನೀರಿನ ಪ್ರತಿಮೆ ಮೂಲಕ ಸಿದ್ಧಲಿಂಗಯ್ಯ ಸಂಸ್ಕೃತಿಯ ಬದಲಾವಣೆಯನ್ನ ಕುರಿತ ಇಡೀ ಪರಂಪರೆಯನ್ನೇ ನೆನಪಿಸುತ್ತಾರೆ. ಈ ಹಿನ್ನೆಲೆಯಲ್ಲೂ ನೀರು ಬೇಂದ್ರೆಯ ಗಂಗಾವತರಣವನ್ನು, ಕಂಬಾರರ ಗಂಗವ್ವ ಗಂಗಾಮಾಯಿ ಕವಿತೆಗಳನ್ನು ನೆನಪಿಗೆ ತರುತ್ತಲೇ ಮುಂದುವರೆದ ಸಾವಿರಾರು ನದಿಯ ಪ್ರವಾಹ ಸಮವಾಗಿ ನಿಲ್ಲುವ ಮೂಲಕ ಹಳೆಯ ವೇದಶಾಸ್ತ್ರ ಪುರಾಣಗಳ ವ್ಯವಸ್ಥೆಯನ್ನೆಲ್ಲಾ ತೇಲಿಸಿ ಬಿಸಾಕುತ್ತಾರೆ. ಶ್ರೀ ಶ್ರೀಯವರ ಪ್ರಪಂಚಾಗ್ನಿಯನ್ನು ಇದೇ ನೆಲೆಯಲ್ಲಿ ನೋಡಬೇಕು.

ಹೋರಾಟ ಅಲ್ಲಿ ನಕ್ಷತ್ರಗಳು ರಕ್ತ ಕಕ್ಕುತ್ತ ಬಿದ್ದಂತೆ, ಹಗಲು ಒಡೆದು, ಮಹಾಪ್ರಳಯವಾದ ಉತ್ಪ್ರೇಕ್ಷೆಗಳನ್ನು ತಂದರೆ ಸಿದ್ಧಲಿಂಗಯ್ಯ ಕೂಡಾ ಭೂಕಂಪನವಾಯಿತು ಅವರ ಕುಣಿವ ಹುಚ್ಚಿಗೆ, ಹಗಲು ರಾತ್ರಿಗಳನು ಸೀಳಿ, ಲಕ್ಷಾಂತರ ನಾಗರಗಳು ಹುತ್ತಬಿಟ್ಟು ಬಂದಂತೆ ಎಂಬ ಉತ್ಪ್ರೇಕ್ಷೆಗಳ ಸರಮಾಲೆಗಳನ್ನೆ ಕಟ್ಟುತ್ತಾರೆ. ಅಲ್ಲಿ ಅಗ್ನಿ, ಯಜ್ಞ ಮಾರ್ಪಡಿಸಿದಂತೆ ಇಲ್ಲಿ ವೇದಶಾಸ್ತ್ರ ಪುರಾಣಗಳು ತೇಲಿ ತೇಲಿ ಹೋದಂತೆ ಚಿತ್ರಿಸುತ್ತಾರೆ. ಎರಡು ಅಪರೂಪದ ಕವಿಗಳ ಸಾಮಾಜಿಕ ಸ್ಪಂದನಗಳು ಸೊಗಸಾದ ಕವಿತೆಗಳೂ ಆಗಿರುವುದು ಇಲ್ಲಿನ ವಿಶೇಷವೆನ್ನಬಹುದು.

ಬರಹ ಮಾನವೀಕರಣಕ್ಕೆ ಒಳಗಾಗಬೇಕು. ಕವಿತೆ ಸಾಮಾಜಿಕ ಬದಲಾವಣೆಗೆ ಸ್ಪಂದಿಸಬೇಕೆಂಬುದು ಈ ಇಬ್ಬರೂ ಕವಿಗಳ ಮಹದಾಸೆ. ಅಂತಲೇ ಅವರ ಹಾಡುಗಳು ಜನರ ಚಳುವಳಿಯ ಹಾಡುಗಳಾದಾಗ ಅವರಿಬ್ಬರೂ ಸಂತೋಷಪಟ್ಟಿದ್ದಾರೆ. ಬರಹವನ್ನು ಕುರಿತಂತೆ ಶ್ರೀ ಶ್ರೀಯವರು "ಈ ದಿನ ಬರೆಯುತ್ತಿರುವ ಬರಹಗಾರರೆಲ್ಲ ಇಂದಿನ ಬರಹಗಾರರಲ್ಲ. ಭೌತಿಕವಾಗಿ ೨೦ನೇ ಶತಮಾನದಲ್ಲಿ ಬದುಕುತ್ತಿದ್ದರಾದ್ದರಿಂದ ಫೌಂಟೆನ್ ಪೆನ್‌ಗಳು ಬಳಸುತ್ತಿದ್ದಾರೆಂಬುದರ ಹೊರತು ಆತ್ಮಪರವಾಗಿ ಅವರು ಜೀವಿಸುತ್ತಿರುವ ಕಾಲ ಬೇರೆ. 'ಸಮಕಾಲೀನತೆ' ಎಂಬ ಗುಣ ಅವರ ಬರಹಗಳಲ್ಲಿ ಕಂಡುಬರುವುದಿಲ್ಲ. ನನ್ನಯ್ಯ ಭಟ್ಟನ (೧೧ನೇ ಶತಮಾನದ ತೆಲುಗು ಕವಿ) ತಲೆ ಹೊಡೆದಂತೆ ಬರೆಯುತ್ತಿದ್ದೇನೆಂದು ಒಬ್ಬನೆಂದರೆ ಸೀಸ ಪದ್ಯಗಳಲ್ಲಿ ಶ್ರೀನಾಥನಿಗೆ (೧೫ನೇ ಶತಮಾನದ ತೆಲುಗು ಕವಿ) ಪಾಠ ಕಲಿಸುತ್ತೇನೆ ಎಂದು ಮತ್ತೊಬ್ಬ ಅಂತಾನೆ. ವಿಶ್ವವಿದ್ಯಾಲಯದ ಪಠ್ಯಪುಸ್ತಕಗಳೂ ಈ ವಿಷಯವನ್ನು ಅಂಗೀಕರಿಸುತ್ತವೆ. ಪಾಪ ಅವಕ್ಕೆ ವ್ಯವಹಾರಿಕ ಭಾಷೆ ಅಂತಾ

ಒಂದಿದೆ ಎಂಬುದೇ ತಿಳಿಯದು. ಈ ದಿನದ ವಿಶ್ವವಿದ್ಯಾಲಯ ಯಾವ ಬದಲಾವಣೆಯೂ ಅರಿಯದ ಏಕಶಿಲಾ ನಗರ." ಎಂದಿದ್ದಾರೆ.

ಬರಹ ಮತ್ತು ಸಾಮಾಜಿಕ ಕಾಳಜಿಯನ್ನು ಕುರಿತಂತೆ ಸಿದ್ಧಲಿಂಗಯ್ಯನವರು "ನಾನು ಯಾವತ್ತೂ ಎಲ್ಲೂ ದಲಿತಕವಿ, ದಲಿತ ಸಾಹಿತಿ ಎಂಬುದನ್ನು ವ್ಯಕ್ತಪಡಿಸಿಲ್ಲ. ಬಹುಶಃ ಇದು ಓದುಗರ ಅಭಿಪ್ರಾಯ. ಸಹಜವಾಗಿ ನಾನು ಕನ್ನಡದ ಕವಿ ಆಗೋದಕ್ಕೆ ಇಷ್ಟಪಡುತ್ತೇನೆ. ಯಾವ ಉದ್ದೇಶದಿಂದ ದಲಿತ ಕವಿ, ಬಂಡಾಯಕವಿ ಎಂದು ಹೇಳುತ್ತೀರೋ ಇದು ನನಗೆ ಅನೇಕ ಸಲ ಗೊಂದಲವನ್ನು ಉಂಟುಮಾಡಿದೆ. ಸಾಹಿತ್ಯದ ಅಭ್ಯಾಸದ ದೃಷ್ಟಿಯಿಂದ ಸಾಹಿತ್ಯದ ಕಾಲಘಟ್ಟಗಳನ್ನು ಗುರ್ತಿಸುವ ದೃಷ್ಟಿಯಿಂದ ಈ ಬಗೆಯ ದಲಿತಕವಿ ಮಾತುಗಳು ಬಂದಾಗ ಅನಿವಾರ್ಯವಾಗಬಹುದು. ಆದರೆ ಒಬ್ಬ ಕವಿಯೆ ತಾನು ದಲಿತ ಕವಿ, ಬಂಡಾಯ ಕವಿ ಅಂತ ಹಣೆಪಟ್ಟಿ ಕಟ್ಟಿಕೊಳ್ಳುವುದು ಸಾಧುವಲ್ಲ. ಇದು ಸಾಹಿತ್ಯದ ಬೆಳವಣಿಗೆಗೆ ಪ್ರಯೋಜನವಾಗುವುದಿಲ್ಲ.

ಶೋಷಿತ ವರ್ಗಗಳ ಬದುಕಿನ ಬವಣೆಯನ್ನು ಆ ಬದುಕಿನ ಕಷ್ಟ ಸುಖಗಳನ್ನು ಕವಿತೆಯಲ್ಲಿ ತರಬೇಕು ಅನ್ನುವಂತಹ ಒಂದು ಅಭಿಪ್ರಾಯ ನನ್ನದಾಗಿತ್ತು. ಆದ್ದರಿಂದ ನನ್ನ ಮೊದಲಿನ ಕವಿತೆಗಳಲ್ಲಿ ಹೆಚ್ಚು ಬಡವರ ಪರವಾದ, ತುಳಿತಕ್ಕೆ ಒಳಪಟ್ಟ ಜನರ ನೋವನ್ನು ಅಳಲನ್ನು, ವ್ಯಕ್ತಮಾಡುವಂತಹ ಕೆಲಸವನ್ನು ಮಾಡಿದ್ದೇನೆ ಅನ್ನೋದು ನನ್ನ ಅಭಿಪ್ರಾಯ. ಯಾರು ಜಾಗೃತರಾಗಿ ಹೋರಾಟ ಮಾಡುತ್ತಾರೆ ಅವರು ದಲಿತರಾಗಬಹುದು. ಕಾರ್ಮಿಕರಾಗಬಹುದು. ರೈತರಾಗಬಹುದು. ಕೂಲಿಕಾರರಾಗಬಹುದು ಅಂತಹ ಜನವರ್ಗಗಳ ಬಗ್ಗೆ ನನಗೆ ಅಪಾರವಾದ ಗೌರವ ಮತ್ತು ಅಭಿಮಾನವಿದೆ. ಅದಕ್ಕಾಗಿ ಅವರ ಹೋರಾಟದ ಪರವಾದ ಅವರಿಗೆ ಬೆಂಬಲಕೊಡುವಂತಹ ಅನೇಕ ಕವಿತೆಗಳನ್ನು ನಾನು ರಚನೆ ಮಾಡಿದ್ದೇನೆ. ಇವತ್ತೂ ಕೂಡ ಜನಗಳ ಹೋರಾಟದ ಸಂದರ್ಭಗಳಲ್ಲಿ ಮೆರವಣಿಗೆ, ಧರಣಿ, ಸಂದರ್ಭದಲ್ಲಿ ನನ್ನ ಹಾಡುಗಳನ್ನು ಕಾರ್ಮಿಕರು, ರೈತರು, ದಲಿತರು, ಯುವಕರು ಹಾಡುತ್ತಿದ್ದಾಗ ಕೇಳಿದ ನನಗೆ ನಿಜವಾಗಿಯೂ ನನ್ನ ಕವಿತೆ ಸಾರ್ಥಕತೆಯನ್ನು ಪಡೆದಿದೆ ಎಂದೆನಿಸುತ್ತದೆ. ಈ ಜನಗಳಿಗೆ ಸ್ಫೂರ್ತಿಯಾಗಬೇಕು. ಈ ಜನಗಳಿಗೆ ಪ್ರೇರಣೆಯಾಗಬೇಕು ಎಂಬ ಕಾಳಜಿಯಿಂದ ನಾನು ನನ್ನ ಕವಿತೆಗಳನ್ನು ಒಕ್ಕೊರಲಿನಿಂದ ಗಟ್ಟಿಯಾಗಿ ಹಾಡುತ್ತಿದ್ದಾರಲ್ಲ ಎಂಬುದನ್ನು ಗಮನಿಸಿದಾಗ ನನಗೆ ನಿಜವಾಗಿಯೂ ಸಂತೋಷವಾಗುತ್ತದೆ."[3] ಎನ್ನುತ್ತಾರೆ.

ಶ್ರೀ ಶ್ರೀಯವರ ಮಹಾಪ್ರಸ್ಥಾನ ಕವಿತೆ ಅದೊಂದು ಕವಾಯಿತು ಹಾಡು. ಅದು ಶಿಷ್ಮಾ ಉಮಾಮಹೇಶ್ವರರಾವ್ ಬರೆದ 'ಮಾರೋ ಮಾರೋ' ಕವಿತೆಗೆ ಪ್ರತಿಯಾಗಿ ಬರೆದದ್ದಲ್ಲ. ಉಡ್ಗರ್ ಅಲೆನ್ ಪೇ ಬರೆದ 'ದಿಬೆಲ್ಸ್' ಕವಿತೆಯನ್ನು

ಓದಿ ಆವೇಶಗೊಂಡು ರಚಿಸಿದ ಕವಿತೆ ಅದರಲ್ಲೂ ಕದಂ ತೊಕ್ಕತೂ ಪದಂ ಪಾಡುತೂ ಹೃದಂತರಾಳಂ ಗರ್ಜಿಸ್ತು ದಾರಿ ಪೂಡುಗುನಾ ಗುಂಡೆನೆತ್ತರುಲು ತರ್ಪಣ ಮಿಸ್ತು ಪದಂಡಿ ಮುಂದಕು ಪದಂಡಿ ತ್ರೋಸಕು ಎಂದು 'ನೆತ್ತರು ಮಂಡೇ, ಶಕ್ತುಲು ನಿಂಡೇ' ಸೈನಿಕರಿಗೆ ಉದ್ಘೋಷಿಸಿದರು. ಮರೋಪ್ರಪಂಚಂ ಪಿಲಿಚಿಂದನಿ ಉಚ್ಚರಿಸಿದರು. ಹರೋಹರೋಹರ ಹರಹರ ಹರಹರ ಹರೋಹರ ಎಂದು ಯುದ್ಧೋತ್ಸಾಹದಿಂದ ನಡೆಯಿರೆಂದು ಹುರಿದುಂಬಿಸಿದರು. ತ್ರೇತಾಗ್ನಿ ಪ್ರಳಯಘೋಷ, ಸಿಡಿಯುತ್ತಿರುವ ಪರ್ವತಗಳು, ಜಲಪ್ರಳಯ ನಾಟ್ಯಗಳು, ಧನಂಜಯ, ಅಗ್ನಿಕಿರೀಟ ಹೋಮ, ಜ್ವಾಲೆಯಂತಹ ಮತ ಸಂಬಂಧ ಪ್ರತಿಮೆಗಳನ್ನು ಲೌಕಿಕ ಪ್ರಸಂಗಗಳಂತೆ ಮಾರ್ಪಡಿಸಿ ಪ್ರಯೋಗಿಸಿದರು. ಅಂದಿನಿಂದ ಇಂದಿನವರೆಗೆ ಎಡ ಪಕ್ಷದ ಸಭೆಗಳಲ್ಲೂ, ಅನ್ಯ ಸಭೆಗಳಲ್ಲೂ ಪಥ ಸಂಚಲನದ ಈ ಹಾಡು ಪ್ರತಿಧ್ವನಿಸುತ್ತಲೇ ಇದೆ.

ಸಿದ್ಧಲಿಂಗಯ್ಯನವರ 'ಕ್ರಾಂತಿಪದ' ಕವಿತೆಯಲ್ಲೂ ಇದೇ ಬಗೆಯ ಜನರ ಘೋರಾರ್ಭಟವನ್ನು ಗತಕಾಲದ ದೈವದ ಹೆಸರಿನ ಸಂಪ್ರದಾಯಿಕ ಪ್ರತಿಗಾಮಿ ಜಗತ್ತನ್ನ ಮೆಟ್ಟಿ ನಿಲ್ಲುವ ರೀತಿಯನ್ನು ಹೇಳುತ್ತದೆ. ಕ್ರಾಂತಿಗಾಗಿ ನುಗ್ಗುವ ಜನ.

"ರೈಲು ನಿಲುವ ತಾಣದಲ್ಲಿ ಭಾರ ಹೊತ್ತ ರಟ್ಟೆಯಲ್ಲಿ ತೊಟ್ಟಿಕ್ಕಿದ ಬೆವರಿನ ಹನಿ ಬೆಂಕಿಯಾಗಿ ಸಿಡಿದು, ಬಡಜನರ ಕಣ್ದೆರೆಸಿ ಶೋಷಕರನು ಕಂಗೆಡಸಿ ಕೆಂಗೆಡಿಗಳ ಕಾರುತ್ತಿದೆ ಘೋರಾರ್ಭಟವಾಗಿ, ಕರ್ಮ ಕಥೆಯ ದಾಟಿಯನು ಮುರಿದಿಕ್ಕುತ ಮುನ್ನೆಡೆದು, ಹಿಮ್ಮೆಟ್ಟಿಸಿ ಅಡ್ಡಬಂದ ಪಟ್ಟಭದ್ರಹಿತವ, ಮಿಡಿಯುತಲಿದೆ ಎದೆಗಳಲಿ, ದಬ್ಬುತಲಿದೆ ಜಡತೆಯನು, ಚಿಮ್ಮುತಿರುವ ಹೋರಾಟವು ಹೊಮ್ಮಿಮುಗಿಲೇರಿ"

ಸಿದ್ಧಲಿಂಗಯ್ಯನವರಲ್ಲಿನ ಘೋರಾರ್ಭಟ ಧ್ವನಿಯೇ ಶ್ರೀಶ್ರೀಯವರಲ್ಲೂ ಹೃದಯಾಂತರಾಳದ ಘರ್ಜನೆಯಾಗಿದೆ. ಶ್ರೀಶ್ರೀಯವರು "ವರ್ಷದಂಬರ ಪ್ರಳಯ ಘರ್ಜನೆಯಂತೆ ಘಟ ಘಟ ಘಟಘಟ ಮುರಿದು ನಡೆಯಿರಿ!" ಎಂದಂತೆ ಸಿದ್ಧಲಿಂಗಯ್ಯ "ಮುರಿದಿಕ್ಕುತ ಮುನ್ನೆಡೆದು ಹಿಮ್ಮೆಟ್ಟಿಸಿ ಅಡ್ಡಬಂದ ಪಟ್ಟಭದ್ರಹಿತವ" ಎಂದು ಹಾಡುತ್ತಾರೆ. ಅಲ್ಲಿ ಹೋರಾಟ ವರ್ಷಧಾರೆಯಾದಂತೆ ಇಲ್ಲಿ ಹೋರಾಟ "ಹೊಮ್ಮಿ ಮುಗಿಲಿಗೇರಿ" ಎಂದಾಗುತ್ತದೆ. ಅಲ್ಲಿ "ಮರುಳುಗಾಡು ಕೂಡ ಪ್ರತಿರೋಧ ಒಡ್ಡದು" ಎಂದು ಶ್ರೀಶ್ರೀ ಹೇಳಿದರೆ ಇಲ್ಲಿ ಸಿದ್ಧಲಿಂಗಯ್ಯ "ಸುಡುಗಾಡಿನ ಬಿರುಗಾಳಿಯು ಕ್ರಾಂತಿಗೀತೆ ಹಾಡಿ" ಎಂದು ಹೊಸ ರೂಪಕ ತರುತ್ತಾರೆ.

ಶ್ರೀಶ್ರೀಯವರ "ಅವತಾರಂ" ಮತ್ತು ಸಿದ್ಧಲಿಂಗಯ್ಯನವರ "ಸುಂಟರಗಾಳಿ" ಭಾವದೃಷ್ಟಿಯಿಂದ ಒಂದಾಗಿ ಬಿಡುತ್ತವೆ. ಅವತಾರಂನಲ್ಲಿ ಇಡೀ ಕವಿತೆ ಪೌರಾಣಿಕ

ಪ್ರತಿಮೆಗಳನ್ನು ಹೇಳುತ್ತ ಹೊಸಕಾಲದ ಹುಟ್ಟನ್ನ ಸೂಚಿಸುತ್ತದೆ. ಇಲ್ಲಿಯವರೆಗೆ ಒಡೆಯನ ಅಂಕೆಯಲ್ಲಿ ತಲೆ ಬಗ್ಗಿಸಿಕೊಂಡು ದುಡಿಯುತ್ತಿದ್ದ ಪ್ರಾಣಿಗಳು ತಿರುಗಿಬಿದ್ದು ಗರ್ಜಿಸತೊಡಗುತ್ತವೆ. ಇವುಗಳನ್ನು ಕವಿ ಶೋಷಿತ ವರ್ಗದ ಜಾಗೃತಿಯ ಪ್ರತೀಕಗಳಾಗಿಯೇ ಚಿತ್ರಿಸಿದ್ದಾನೆ. ಕವಿ ಇಲ್ಲೆಲ್ಲಾ ದೇವಲೋಕದ ಚಿತ್ರಣವನ್ನು ಸಂಪ್ರದಾಯಿಕ ವ್ಯವಸ್ಥೆಗೆ ಬಳಸಿಕೊಂಡರೆ ಕವಿ ಸಿದ್ಧಲಿಂಗಯ್ಯ ಭೂಲೋಕದ ಸಾಂಪ್ರದಾಯಿಕ ಜಗತ್ತಿನ ವಿರುದ್ಧ ನಡೆಯುವ ಹೋರಾಟವನ್ನು ತಿರುಗಿ ಬೀಳುವ ಪ್ರಸಂಗವನ್ನು ಉದ್ದಕ್ಕೂ ಹೇಳುತ್ತಾ ಹೋಗುತ್ತಾರೆ.

> "ಒಂದೊಂದು ಜೀವದಲಿ ಎದೆಯಂತರಾಳದಲಿ
> ಅಡಗಿಹುದು ಪರಿಶುದ್ಧ ಧರ್ಮಸತ್ವ
> ಮಾನವತೆಗಾಪತ್ತು ಬಂದೊಡನೆ ಸಿಡಿದೆದ್ದು
> ರಕ್ಷಣೆಗೆ ನಿಲ್ಲುವುದು ಯೋಧನಂತೆ"

ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಭರಾಟೆಯಲ್ಲಿ ಬಡವರ ಬದುಕು ಬೀದಿಪಾಲಾಗುತ್ತಿರುವಾಗ ಬಡವ-ಶ್ರೀಮಂತರ ನಡುವಿನ ಅಂತರ ಹೆಚ್ಚಾಗುತ್ತಿರುವಾಗ, ಶೋಷಕ ತನ್ನ ಶೋಷಣಾ ಪ್ರವೃತ್ತಿಯಿಂದ ಅಮಾನವೀಕರಣಗೊಂಡಿದ್ದಾನೆ. ಸಾಮಾನ್ಯ ಸಂದರ್ಭದಲ್ಲಿ ಶೋಷಿತನ ಆದರ್ಶ ಶೋಷಕನೇ ಆಗಿದ್ದಾನೆ. ಸಾಮಾಜಿಕ ಪ್ರಜ್ಞೆಯಿಲ್ಲದ ಶೋಷಿತನು ತಾನೂ ಶೋಷಕನಾಗಲೂ ಹಂಬಲಿಸುತ್ತಾನೆ. ಹೀಗೆ ಅಸಮಾನತೆಯ ಸಮಾಜ ವ್ಯವಸ್ಥೆಯಲ್ಲಿ ತುಳಿಯುವವರೂ ತುಳಿಸಿಕೊಳ್ಳುವವರೂ ಇಬ್ಬರಲ್ಲೂ ಮನುಷ್ಯತ್ವ ಇಲ್ಲವಾಗಿಸಿದೆ. ಶೋಷಿತನ ವಿಮೋಚನೆಯೆಂದರೆ ಶೋಷಕನ ವಿಮೋಚನೆಯೂ ಆಗುತ್ತದೆ. ಈ ಪ್ರಕ್ರಿಯೆ ಇವರಿಬ್ಬರ ಮಾನವೀಕರಣದಿಂದ ಪ್ರಾರಂಭವಾಗುತ್ತದೆ. ಅಂತಹ ಮಾನವೀಯ ಎಚ್ಚರ ಮೂಡಿಸಲು ಸಮುದಾಯಕ್ಕೆ ಕವಿ ತನ್ನ ಬರಹವನ್ನು ನೀಡುತ್ತಾನೆ. ಯಾರೂ ಲಕ್ಷಿಸದ ಅಲಕ್ಷಿತರ ಕುರಿತು ಹೀಗೆ ಬರೆವಾಗ ಭಾಷೆಗಳು ಬದಲಾದರೂ ನಾಡು ಬದಲಾದರೂ ಈ ದೇಶದ ಸಾಮಾನ್ಯರ ಬದುಕು ಬದಲಾಗಿಲ್ಲ ಎನ್ನುವಂತಿವೆ. ಶ್ರೀಶ್ರೀಯವರ "ಬಿಕ್ಷುವರ್ಷೀಯಸಿ" ಮತ್ತು ಸಿದ್ಧಲಿಂಗಯ್ಯನವರ "ಬೀಳು" ಕವಿತೆಗಳು.

> ರಸ್ತೆ ಬದಿಯಲ್ಲಿ
> ಮರದಕೆಳಗೆ
> ಆರಿಹೋದ ಒಲೆಯಂತೆ
> ಕುಳತಿದ್ದಾಳೆ ಮುದುಕಿ ಒಬ್ಬಳು
> ಮುಲುಗುಟ್ಟುತ್ತಾ ಮುತ್ತಿಕೊಳ್ಳುತ್ತಿದ್ದ
> ನೊಣಗಳಿಂದ ಏಗಲಾಗದೆ

ರಂಗೋಲೆಬುಟ್ಟಿ ತಲೆ
ಸುಕ್ಕುಗಟ್ಟಿದ ಮೈ
ಹೊಳಪಿಲ್ಲದ ಗಾಜುಗಣ್ಣುಗಳು
ತನಗಿಂತಲೂ ಶವಲೇಸು

ಒಡ್ಡಾಗಿ ಬಿದ್ದುಬಿಟ್ಟಳು
ತಿರಿದುಣ್ಣಲು ತಾಕತ್ತಿಲ್ಲ
ಬರಲಿರುವುದು ಚಳಿಗಾಲ
ದಿಕ್ಕಿಲ್ಲದ ದೀನಗಳು.

ಬೆರಳುಗಳು ಮುದುಡಿ, ಕೀಲಗಳು ಸಡಲಿ
ಬಾಳಿನ ಬಗ್ಗೆ ಆಸೆ ಉಡುಗಿ
ಪಕ್ಕದ ಕಲ್ಲು ಬಂಡೆಯ ಹಾಗೆ
ಅಲುಗಾಡದೆ ಬಿದ್ದಿದ್ದಾಳೆ.

"ಆ ಅಜ್ಜಿ ಸತ್ತರೆ
ಆ ಪಾಪ ಯಾರದು?" ಎಂದು
ಉನ್ಮತ್ತ ಗಾಳಿ ಪ್ರಶ್ನಿಸುತ್ತಾ
ಹೊರಟು ಹೋಯಿತು?

ಮೂಳೆ ತುಂಡೊಂದನು ಕಚ್ಚುತ್ತಿದ್ದ
ನಾಯಿ ಪ್ರತಿಕ್ರಿಯಿಸಲಿಲ್ಲ ಏನು!
ನೊಣ ಒಂದನು ಕಚ್ಚಿ ಹಿಡಿದು
ಬೇಗನೆ ಹೊರಟು ಹೋಯಿತೊಂದು ಓತಿಕೇತ!
ಆವರಿಸಿದ ದಟ್ಟಕತ್ತಲು
ಧೂಳೆದ್ದ ಸಂತೆಯಲಿ
'ಇದು ನನ್ನ ಪಾಪವಲ್ಲ' ಎಂದೇ
ಹಾರಿಬಂದಿತು ಎಂಜಲು ಎಲೆ (ಬಿಕ್ಷುವರ್ಷೀಯಸಿ: ಶ್ರೀ ಶ್ರೀ)

ಎಣ್ಣೆ ಕಾಣದ ತಲೆಯ ಕೂದಲುಗಳೆದ್ದೆದ್ದು
ನರ್ತನವ ಗೈಯುತಿರೆ ಮೋದದಿಂದ
ಬರಿಹೊಟ್ಟೆ ಕೊರಗಿತ್ತು ಕೊಳೆಬಟ್ಟೆ ಹರಿದಿತ್ತು
ಪ್ರೇತಕಳೆ ಚಿಮ್ಮಿತ್ತು ವದನದಿಂದ

ಹರಿದ ಸೀರೆಯ ಅಂಚು ಸುಳಿವ ಗಾಳಿಗೆ ಹಾರಿ
ಅಡಗಿದ್ದ ತೊಡೆಗಳನು ತೋರುತಿತ್ತು

ಚಿಂದಿಕುಬುಸವು ತನ್ನ ಒಲವು ಬಂದೊಡೆ ತೂರಿ
ವಕ್ಷಗಳ ದರ್ಶನವ ಮಾಡಿಸಿತ್ತು.

ಅನ್ನವಿಲ್ಲದ ಹೆಣ್ಗೆ ಕುಂಕುಮವು ಕಡುಕೇಡು
ಹಣೆಯಲ್ಲಿ ಬೆವರು ಹನಿ ಮಿನುಗುತ್ತಿತ್ತು
ಉಟ್ಟ ಸೀರೆಯ ಸೆರಗು ಎತ್ತೆತ್ತಲೋ ಏರಿ
ಬಡತನದ ಬಾವುಟವು ಹಾರುತಿತ್ತು
ಕಾಲ್ಗೆ ಮೆಟ್ಟುಗಳಿಲ್ಲ ಕೈಗಳಿಗೆ ಬಳೆಯಿಲ್ಲ
ಮೈಯೆಲ್ಲ ಬೆವರೆದ್ದು ನಾರುತ್ತಿತ್ತು
ಬವಣೆಯಲಿ ಬೆಂದ ತನು ಕೊಳೆಯಗೆಳೆತನ ಮಾಡಿ
ಮೂಳೆಯುಳಿದಿವೆ ಎಂದು ಸಾರುತ್ತಿತ್ತು

ಕಗ್ಗೋಲು ಕೊನೆಗೊಂಡು ಬಾಳಿಗೊಳಿತೊದಗುವುದು
ಎಂಬಾಸೆ ಕಣ್ಣಿನಲಿ ಮಾಗುತಿತ್ತು
ಉಮ್ಮೇಳವನದುಮಿಟ್ಟ ನೀರಿಲ್ಲದಾನೋಟ
ಬಾಳುವೆಗೆ ದಿಕ್ಕಾರ ಎನ್ನುತ್ತಿತ್ತು. (ಬೀಳು : ಸಿದ್ಧಲಿಂಗಯ್ಯ)

"ಮಾನವರ ಅಸ್ತಿತ್ವವನ್ನು ನಿರ್ಧರಿಸುವುದು ಅವರ ಪ್ರಜ್ಞೆಯಲ್ಲ. ಅವರ ಸಾಮಾಜಿಕ ಅಸ್ತಿತ್ವವು ಅವರ ಪ್ರಜ್ಞೆಯನ್ನು ನಿರ್ಧರಿಸುತ್ತದೆ" ಎಂಬ ಮಾರ್ಕ್ಸ್‌ನ ಮಾತಿನ ಹಿನ್ನೆಲೆಯಲ್ಲೇ ಶ್ರೀ ಶ್ರೀ ಕವಿತೆ ಗಮನಿಸಬೇಕು. ಕವಿತ್ರಯಂ ಎಂಬ ಲೇಖನದಲ್ಲಿ "ಲೋಕಾಭಿರಾಮವಾಗಿ ಕೇಳುತ್ತಿದ್ದೇನೆ ನೀನೂ ಒಬ್ಬ ಪ್ರಪಂಚ ಕವೀನಾ? 'ಅಲ್ಲ ನಾನು ಮತ್ತೊಂದು ಪ್ರಪಂಚದ ಕವಿ'"

ಇವರ ಕವಿತೆಯಲ್ಲಿ ವಿಪ್ಲವವಿದೆ. ಹೊಸಲೋಕಕ್ಕಾಗಿ ಮಾಡುವ ಪ್ರತಿಜ್ಞೆ ಕಾಣುತ್ತದೆ. ಬೆಲೆಯೇ ಇಲ್ಲದ ಬದುಕಿಗೆ ಒಂದು ಬೆಲೆ ಕಟ್ಟುವ ಪ್ರಯತ್ನವಿದೆ. ಅಂತಲೇ ಶ್ರಮ ಬರಡಾದಾಗ, ಬವಣೆ ಹೆಚ್ಚಾದಾಗ

ಅನಾಥರೆಲ್ಲ
ಅಶಾಂತರೆಲ್ಲ
ದೀರ್ಘಶೃತಿಯಲಿ, ತೀವ್ರ ಧ್ವನಿಯಲಿ
ಕೇಳಗೊಡುತ್ತಾರೋ
ವಿಪ್ಲವ ಶಂಖ!

ಜೀವನದಲ್ಲಿ ಅತ್ಯಂತ ಪ್ರಧಾನವಾದುದು ಶ್ರಮ. ಜಗತ್ತಿನ ಎಲ್ಲ ಸುಧಾರಣೆ, ಕೈಗಾರಿಕೆ, ವಿಜ್ಞಾನ, ಪ್ರಗತಿ, ಜ್ಞಾನ, ಅನ್ನ, ಧನ ಇತ್ಯಾದಿಗಳಿಗೆ ಶ್ರಮವೇ ಆಧಾರ.

ಅಂಥ ಶ್ರಮಕ್ಕೆ ಕೇಡು ಬಂದಾಗ ಹೊಸ ಮಾನ್ಯತೆಯ ವ್ಯವಸ್ಥೆಗಾಗಿ ಪ್ರತಿಜ್ಞೆ ಮಾಡುತ್ತಾರೆ. ತಮ್ಮ ಕಾವ್ಯ ಅಂತವರ ಪರವಾಗಿ ಶೋಷಣೆಯ ವಿರುದ್ಧವಾಗಿ ಎಂದೇ ಘೋಷಿಸುತ್ತಾರೆ.

> "ನನ್ನಲಿ ಪುಟಿವ ನವ ಕವಿತೆ
> ಕಾರ್ಮಿಕ ಲೋಕದ ಕಲ್ಯಾಣಕ್ಕೆ
> ಶ್ರಮಿಕ ಲೋಕದ ಸೌಭಾಗ್ಯಕ್ಕೆ
> ....
> ....
> ಕುಮ್ಮಾರನ ಕುಲುಮೆ ಕುಂಬಾರನ ಚಕ್ರ
> ಬೆಸ್ತನ ಬಲೆ ನೇಕಾರನ ಮಗ್ಗ
> ಕಾಯಕಷ್ಟ ಜ್ಞಾಪಿಸುವಂಥಾ
> ಹಲ, ಕೊಡಲಿ, ಗರಗಸ, ಕುಡುಗೋಲು
> ಸಹಸ್ರ ಕಸುಬಿನ ಚಿನ್ಹೆಗಳು–
> ನಾನು ಬಿಂಬಿಸುವ
> ನಾನು ರಚಿಸುವ
> ನಾನು ಕೇಳಿಸುವ ನವನವೀನ ಗೀತೆಗೆ." **(ಪ್ರತಿಜ್ಞೆ: ಶ್ರೀ ಶ್ರೀ)**

ಇದೇ ಭಾವ ಹೊಂದಿದ ಸಿದ್ಧಲಿಂಗಯ್ಯನವರ ಕವಿತೆ "ನನ್ನ ಜನಗಳು" ಸಿದ್ಧಲಿಂಗಯ್ಯ ಕೂಡಾ ಮಾನವೀಯ ಅಂತಃಕರಣವುಳ್ಳ ಸಮುದಾಯದ ಕವಿ. ಜನಕವಿ ಎಂಬುದಕ್ಕೆ ಈ ಕವಿತೆ ಉದಾಹರಣೆಯಾಗಿದೆ. ಕವಿ ತಾನು ಪ್ರತಿನಿಧಿಸುವ ಜನರನ್ನ ಅವರ ವೇದನೆಯನ್ನ ಈ ಕವಿತೆಯಲ್ಲಿ ಪರಿಚಯಿಸಿದ್ದಾರೆ. ಈ ಕವಿತೆಯಲ್ಲೂ ಸಮಾಜದ ದುಡಿವ ವರ್ಗಗಳಾದ ರೈತರ, ಕೂಲಿ ಕಾರ್ಮಿಕರ, ಗಣಿ ಕಾರ್ಮಿಕರ ಬದುಕಿನ ಸಂಕಷ್ಟಗಳಿವೆ.

ಭಾರತೀಯ ಸಮಾಜದಲ್ಲಿ ಇಂದಿಗೂ ಶ್ರಮಿಕರನ್ನು ಕಡೆಗಣಿಸಲಾಗುತ್ತಿದೆ. ಬಹುಸಂಖ್ಯಾತರ ಶ್ರಮದ ಪ್ರತಿಫಲವನ್ನು ಕೆಲವೇ ಮಂದಿ ಅನುಭವಿಸುತ್ತಿರುವುದು ಸಾಮಾಜಿಕ ಶೋಷಣೆಯ ಕ್ರೌರ್ಯವನ್ನು ಎತ್ತಿ ತೋರಿಸುತ್ತದೆ. ನೇರ ಅಭಿವ್ಯಕ್ತಿ ಸರಳ ನಿರೂಪಣೆಗಳ ಈ ಕವಿತೆ ಉಳ್ಳವರ ಮತ್ತು ಇಲ್ಲದವರ ಸಂಘರ್ಷದ ಅವಶ್ಯಕತೆಯನ್ನ ಹೇಳುತ್ತದೆ. ಆದರೆ ಇಲ್ಲಿ ಜನ ಇನ್ನೂ ಅಮಾಯಕರು ಎಂತಲೇ ಕವಿ ಹೇಳುತ್ತಾರೆ.

> "ಹಸಿವಿನಿಂದ ಸತ್ತೋರು ಸೈಜು ಗಲ್ಲು ಹೊತ್ತೋರು
> ವದೆಸಿಕೊಂಡು ವರಗಿದೋರು ನನ್ನ ಜನಗಳು

[illegible]

[illegible]

[illegible]

[illegible]

....

....

ಹೊಲವನುತ್ತು ಬಿತ್ತೋರು ಬೆಳೆಯ ಕುಯ್ದು ಬೆವರೋರು
ಬಿಸಿಲಿನಲ್ಲಿ ಬೇಯೋರು ನನ್ನ ಜನಗಳು

....

....

ಮಾಳಿಗೆಗಳ ಎತ್ತಿದೋರು ಬಂಗಲೆಗಳ ಕಟ್ಟಿದೋರು
ತಳಾದಿಗೆ ಸಿಕ್ಕಿದೋರು ನನ್ನ ಜನಗಳು

....

....

ಚಿನ್ನವನ್ನು ತೆಗೆಯೋರು ಅನ್ನವನ್ನು ಕಾಣದೋರು
ಬಟ್ಟೆಯನ್ನು ನೇಯೋರು ಬರಿ ಮೈಲೇ ಹೋಗೋರು"

(ನನ್ನ ಜನಗಳು: ಸಿದ್ಧಲಿಂಗಯ್ಯ)

ಮಾರ್ಕ್ಸ್‌ವಾದಿ ಹಿನ್ನೆಲೆಯಲ್ಲಿ ರಚಿತವಾಗಿರುವ ಈ ಕವಿತೆಯು ಜಮೀನ್ದಾರಿ, ಬಂಡವಾಳಶಾಹಿ ವ್ಯವಸ್ಥೆಯ ಕರಾಳ ಮುಖವನ್ನ ತೋರುತ್ತದೆ. ಶ್ರೀ ಶ್ರೀಯವರಲ್ಲಿ ವರ್ಗ ಅಸಮಾನತೆಯನ್ನು ಹೇಳುವಾಗ ರೊಚ್ಚು ಉಕ್ಕುತ್ತದೆ. ವಿಪ್ಲವದ ಶಂಖ ಮೊಳಗುತ್ತದೆ. ಸಿದ್ಧಲಿಂಗಯ್ಯನವರ ಈ ಕವಿತೆಯಲ್ಲಿ ಅಂತಹ ರೊಚ್ಚಿಲ್ಲ. ಬದಲಾಗಿ ಶೋಷಣೆಯ ಭೀಕರ ಚಿತ್ರಣವಿದೆ. ಶೋಷಿತನ ದುಃಖವನ್ನು, ಅಸಹಾಯಕತೆಯನ್ನು, ಬಲಿದಾನವನ್ನು ಮೋಸ ಹೋಗುವ ಪರಿಯನ್ನು, ಕನಸುಗಾರಿಕೆಯನ್ನ, ಭಕ್ತ ಸ್ಥಿತಿಯನ್ನ ನಿರ್ಲಿಪ್ತ ಮನಸ್ಥಿತಿಯಲ್ಲೇ ಕವಿ ಕಟ್ಟಿಕೊಡುತ್ತಾರೆ. ಹಾಗಾಗಿ ಶೋಷಿತರ ಗೀತೆ ನಾನು ರಚಿಸುವ ನವನವೀನ ಗೀತೆ ಎಂದು ಶ್ರೀ ಶ್ರೀ ಹೇಳಿದರೆ ಸಿದ್ಧಲಿಂಗಯ್ಯನವರು ಶೋಷಿತರು "ನನ್ನ ಜನಗಳೆಂದೇ" ಹಾಡುತ್ತಾರೆ.

"ಸಿಂಧೂರ, ರಕ್ತ ಚಂದನ
ಕೆಂದಾವರೆ, ಸಂಧ್ಯಾರಾಗ
ಹುಲಿಕೊಂದ ಜಿಂಕೆ ನೆತ್ತರು
ಹಾರಿಸಿದ ಕೆಂಪುಧ್ವಜ
ರುದ್ರರೌದ್ರ ನಯನ ಜ್ವಾಲ
ಕಲಕತ್ತಾಕಾಳಿ ನಾಲಗೆ
ಬೇಕು ಕಣೋ ನವ ಕವಿತೆಗೆ" (ನವ ಕವಿತೆ: ಶ್ರೀ ಶ್ರೀ)

ಎಂದು ಶ್ರೀ ಶ್ರೀ ಹಾಡಿದರೆ ಸಿದ್ಧಲಿಂಗಯ್ಯನವರು ಕೋಪವನ್ನೇ ಕಾವ್ಯ ಮಾಡುತ್ತ

"ಇಕ್ರಲಾ ವದೀರ್ಲಾ
ಈ ನನ್ ಮಕ್ಕಳ ಚರ್ಮ ಎಬ್ರಲಾ
ದೇವ್ರು ಒಟ್ನೇ ಅಂತಾರೆ
ಓಣಿಗೊಂದೊಂದ್‌ತರಾ ಗುಡಿಕಟ್ಟವ್ರೆ

ಎಲ್ಲಾರು ದೇವ್ರು ಮಕ್ಳು ಅಂತಾರೆ
ಹೊಲೇರ್‍ನ ಕ್ರಂಡ್ರೆ ಹಾವ್ ಕಂಡಂಗಾಡ್ತಾರೆ"

(ಒಂದು ಪದ: ಸಿದ್ಧಲಿಂಗಯ್ಯ)

ಈ ಇಬ್ಬರ ಕವಿತೆಗಳಲ್ಲಿ ರೋಷ ಹೀಗೆ ವ್ಯಕ್ತಕೊಂಡಿದ್ದರೂ ಅದು ವೈಯಕ್ತಿಕವಾದ ಆಕ್ರೋಶ ಸಿಟ್ಟಾಗಿ ಮನುಷ್ಯ ಸಂಬಂಧಗಳನ್ನು ಬೆಸೆಯುವ ಜಾತಿ, ಅಸ್ಪೃಶ್ಯತೆ, ಅಸಮಾನತೆಯನ್ನು ತೊಡೆದ ಹಾಕುವುದರತ್ತ ಅವರ ಕಾವ್ಯ ಹೆಜ್ಜೆ ಹಾಕಿವೆ.

ಹೂವು, ಎಲೆ, ಕೊಂಬೆ, ರೆಂಬೆ, ದುಂಬಿ, ಕೋಗಿಲೆ ಜಲದ ಕಲಕಲನಾದ ಮುಂತಾದ ಪದ ಜಾಲದಲ್ಲಿ ತೆಲುಗುಕಾವ್ಯ ಮುಳುಗಿದ್ದ ಕಾಲದಲ್ಲೂ ಲೋಹವಿಹಂಗ, ಮೌನಮೃದಂಗ, ಕಾರ್ಮಿಕಧೀರ, ಹಾರುವ ಲೋಹಶ್ಯೇನ ಪಿರಂಗಿಯಲ್ಲಿ ಜ್ವರ ಧ್ವನಿಸುವ ಮೃದಂಗ ನಾದ, ರವ್ವುಷ್ಣಗೀತೆ, ನವುಗ್ರಹೇತಿ ಇತ್ಯಾದಿ ಅಸಂಖ್ಯ ಪದ ಪುಂಜಗಳು ರೂಪಕಗಳನ್ನು ಶ್ರೀಶ್ರೀ ತಂದರು. ಅಗ್ನಿ ಕಿರೀಟವು ಧಗ ಧಗಲು, ಎರ್ರ ಭಾವುಟಾ ನಿಗನಿಗಲು, ಹೋಮಜ್ವಾಲಲ ಭುಗಭುಗಲು, ವರ್ಷಕಾಭ್ರಮುಲ ಪ್ರಳಯ ಘೋಷಲು, ಮರೋ ಪ್ರಪಂಚವು ಕಣಕಣ ಮಂಡೇ ತ್ರೇತಾಗ್ನುಲು, ಸಮುದ್ರಾಲ ಜಲಪ್ರಳಯ ನಾಟ್ಯಾಲು, ಇಂಥ ನವ ಸಂಗೀತಕ್ಕೆ ಹೊಂದುವಂತೆ ಆ ಪದಗಳನ್ನು ಶ್ರುತಿಗೊಳಿಸಿದರು. ಭಾಷೆಯ ಸೃಷ್ಟಿಯಲ್ಲಿ ಶ್ರೀಶ್ರೀಯವರದು ಲೀಲಾಜಾಲವಾದ ಅದ್ವಿತೀಯ ನೈಪುಣ್ಯ.

ಸಿದ್ಧಲಿಂಗಯ್ಯನವರ ಕವಿತೆ ಬಂಡಾಯವೆನ್ನುವುದು ಹುಟ್ಟುವುದಕ್ಕೆ ಮುಂಚೆಯೇ ದಲಿತ ಪ್ಯಾಂಥರ್ ಕರ್ನಾಟಕದಲ್ಲಿ ಕಾಲಿಡುವುದಕ್ಕಿಂತ ಮುಂಚೆಯೇ ಈ ದನಿ ಗುಡುಗಿರುವುದನ್ನು ಗಮನಿಸಬೇಕು. ಅಂಬೇಡ್ಕರ್, ಮಾರ್ಕ್ಸ್‌ವಾದಿ ಚಿಂತನೆಗಳ ಫಲವೆಂಬಂತೆ ಸಿದ್ಧಲಿಂಗಯ್ಯನವರ ಪ್ರಾರಂಭಿಕ ಕವಿತೆಗಳಿವೆ. ಆನಂತರ ಅವರ ಕವಿತೆಯಲ್ಲೂ ಗಾಂಧೀಚಿಂತನೆ ಸುಳಿದರೂ ಕೊನೆತನಕ ಸಿದ್ಧಲಿಂಗಯ್ಯನವರ ಜೊತೆಗಿದ್ದವರು ಮಾತ್ರ ಮಾರ್ಕ್ಸ್. ಶ್ರೀ ಶ್ರೀಗಿರುವಂತೆ ಮಾರ್ಕ್ಸ್ ಇಲ್ಲೂ ಇರುವುದರ ಪ್ರಯುಕ್ತ ಅಲ್ಲಿ ವಿಪ್ಲವವಿದೆ. ಇಲ್ಲಿ ಬಂಡಾಯವಿದೆ.

ಮೂಲೆ ಹಿಡಿದು ನಿನ್ನ ಮುಂದೆ
ಕೋಲುಯ್ಯುವೆ ಕುಣಿಯುವೆ
ವಂಚಕರನು ಗೋರಿ ಮಾಡಿ
ಹಾಲುಯ್ಯುವೆ ತಣಿಯುವೆ
....
....
ಹೀರಿದವರ ರಕ್ತದಿಂದ
ಮೈಗೆ ನೀರನುಯ್ಯುವೆ
ಮುದ್ದೆಯಾದ ಹೆಪ್ಪಿನಿಂದ
ಹಣೆಗೆ ಬೊಟ್ಟನಿಕ್ಕುವೆ

ಕೊಬ್ಬಿದವರ ಕರುಳ ಕಿತ್ತು
ಮುಡಿಗೆ ಹೂವ ಮುಡಿಸುವೆ
ಕ್ರಾಂತಿಯಲ್ಲಿ ನಿನ್ನ ಎದೆಗೆ
ನನ್ನ ಎದೆಯ ಒತ್ತುವೆ (ನನ್ನವಳಿಗೆ: ಸಿದ್ಧಲಿಂಗಯ್ಯ)

ಭಾರತ ದೇಶದ ಬೀದಿಯ ತುಂಬ
ಬೆಳ್ಳಿ ಬಾಕುಗಳ ಮೆರವಣಿಗೆ
ರಕ್ತದ ಕೊಳದಿಂದೀಚೆಗೆ ತೆಗೆದ
ಚಿಂದಿ ಬಟ್ಟೆಗಳ ಮೆರವಣಿಗೆ
(ಕಂಡೆ ನನ್ನವಳ ಒಂದು ದಿವಸ: ಸಿದ್ಧಲಿಂಗಯ್ಯ)

ಸುಳ್ಗೆ ಮಾಡೋ ಮೋಸಗಾರ
ಬಡ್ಡೀ ಮಕ್ಕಳ್ನ ಕ್ರಾಂತಿಕಾರಿಗಳ
ಮಾರ್ಕ್ಸ್‌ನಿಂದ ಜಡ್ಜ್‌ಮೆಂಟ್ ಕೊಡುಸ್ತೀನಿ
ಅವುರ್ಗೆ ಫಾಸಿ ಆಯ್ತದೆ (ಹಬ್ಬ: ಸಿದ್ಧಲಿಂಗಯ್ಯ)

ವಿಪ್ಲವದ ಎಚ್ಚರಿಕೆಯ ಸಂಕೇತವಾಗಿ ಶ್ರೀ ಶ್ರೀ 'ಗಂಟೆಗಳು' ಕವಿತೆ ಬರೆದಿದ್ದಾರೆ. ಈಗ ವಿಪ್ಲವದ ಸಮಯ ಹಳೆಯ ಜಡವ್ಯವಸ್ಥೆಯನ್ನ ಕಿತ್ತೊಗೆಯುವ ಉದ್ದೇಶದಿಂದ ಈಗ ಅವು ಮೊಳಗುತ್ತಿವೆ ಎನ್ನುತ್ತಾರೆ.

"ನಗರಗಳಲಿ, ಹಳ್ಳಿಗಳಲಿ
ಬಟ್ಟ ಬಯಲಲಿ, ಪರ್ವತಗುಹೆಯಂತೆ
ಮರಳುಗಾಡುಗಳಲಿ, ಸಮುದ್ರದಲಿ
ಕಾಡುಗಳ ಹಿಂದೆ, ಕಾದಾಟದಂತೆ

ಪ್ರಪಂಚವೆಲ್ಲಾ ಪ್ರತಿಧ್ವನಿಸುತ್ತಾ

ಗಂಟೆಗಳು! ಗಂಟೆಗಳು! ಗಂಟೆಗಳು!
ಗಂಟೆಗಳು! ಗಂಟೆಗಳು!
ಗಣಗಣ ಗಣಗಣ ಗಣಗಣ ಗಂಟೆಗಳು!
ಗಣಗಣ ಗಣಗಣ!
ಗಂಟೆಗಳು ಗಂಟೆಗಳು
....

ಸಿಂಹದಂತೆ, ಸಿಂಹಿಣಿಯಂತೆ
ಕೋವಿಯಂತೆ, ಕೋತಿಯಂತೆ
ಶಂಖದಹಾಗೆ, ಸರ್ಪದಹಾಗೆ
ನರಿಯಹಾಗೆ, ಮಾರ್ಜಾಲದಹಾಗೆ
ಪಂಡಿತರಂತೆ ಮಕ್ಕಳಂತೆ
....
....

ಉತ್ತರದಲಿ, ದಕ್ಷಿಣದಲಿ
ಪ್ರಭಾತದಲಿ, ಪ್ರದೂಷದಲಿ
ಜೊನ್ನ ಇರುಳ ಕತ್ತಲೆಯಲ್ಲೂ
ಸುಡು ಸುಡು ಬಿಸಿಲಿನಲಿ
ಜಡಮಳೆಯಲಿ, ಚಳಿಯಲಿ
ಈಗ, ಆಗ, ಸದಾ ಮೊಳಗುವ" **(ಗಂಟೆಗಳು: ಶ್ರೀ ಶ್ರೀ)**

'ದಲಿತರು ಬರುವರು' ಎಂಬ ಸಿದ್ಧಲಿಂಗಯ್ಯನವರ ಕವಿತೆ ಇಂಥದ್ದೇ ಘೋಷ ಮಾಡುವ ಎಚ್ಚರಿಕೆ ನೀಡುವ, ಸ್ಫೋಟಿಸುವ ಕವಿತೆಯಾಗಿದೆ. 'ದಲಿತ' ಎಂಬ ಶಬ್ದ ಅರ್ಥ ವ್ಯಾಪ್ತಿಯನ್ನ ಪರಿಶೀಲಿಸಿದರೆ 'ಹಿಂಸೆಗೆ ಒಳಗಾದ', 'ತುಳಿತಕ್ಕೆ ಒಳಗಾದ' ಎಂಬ ಅರ್ಥಗಳ ಜೊತೆಗೆ 'ಸೋಲಿಸಲಾಗದ' ಎಂಬ ಅರ್ಥವೂ ಇದೆ.

ದೇವಯ್ಯ ಹರವೆಯವರು ಹೇಳುವಂತೆ ನಮ್ಮ ಸಮಾಜದಲ್ಲೂ ಹಿಂಸೆಗೆ ಒಳಗಾದ ಹಾಗೂ ಸೋಲಿಸಲಾಗದ ಅಸ್ಪೃಶ್ಯರೆನಿಸಿಕೊಂಡ ಜನವರ್ಗವೇ ದಲಿತರು. "ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಯಾರನ್ನೂ ಕಡೆಗಣಿಸಲಾಗಿದೆಯೋ ಅಂಥವರು ಮಾತ್ರ ದಲಿತರು." ದಲಿತ ಸಾಹಿತ್ಯ ಮನುಷ್ಯನನ್ನ ಕೇಂದ್ರಬಿಂದುವಾಗಿ ಮಾನ್ಯ ಮಾಡುತ್ತದೆ. ಮನುಷ್ಯರ ಸುಖದುಃಖಗಳನ್ನು ಸಮರಸಗೊಳಿಸುವ ಮೂಲಕ ಸಮ್ಯಕ್ ಕ್ರಾಂತಿಯ ಕಡೆಗೆ ಮುನ್ನೆಡೆಯುತ್ತದೆ.

ಕೋಟಿ ಕೋಟಿ ಕನಸುಗಳೊಂದಿಗೆ
ಹತ್ತಿ ಉರಿಯುವ ಮನಸುಗಳೊಂದಿಗೆ
ಗುಡುಗು ಮಿಂಚಿನ ಘೋಷಣೆಯಲ್ಲಿ
ಭೂಕಂಪನ ಭಾಷೆಗಳಲ್ಲಿ
ಬಂತೋ ದಲಿತರ ಮೆರವಣಿಗೆ
ನೆಲಕೆ ಕಾಲುಗಳ ಬರವಣಿಗೆ

ದೇವರು ಗುರುಗಳ ತಿಪ್ಪೆಗೆ ತಳ್ಳಿ
ಮಂತ್ರಿ ಶಾಸಕರ ಮೋರಿಗೆ ನೂಕಿ
ತಾವೇ ಕಂಡ ಹೊಸ ದಾರಿಯಲಿ
ಹೊಂಟರು ದಲಿತರು ಮೆರವಣಿಗೆ
ಉರಿಯುವ ಪಂಜು ಕೈಯಲ್ಲಿ
ಕ್ರಾಂತಿಯ ಕಿಡಿಗಳು ಕಣ್ಣುಗಳಲ್ಲಿ
ಸಿಡಿದರು ಕೆಂಡದ ಉಂಡೆಗಳು
....
....

ಎಲ್ಲಾ ಜಾತಿಯ ಬಡವರು ಬಂದರು
ಎಲ್ಲಾ ಮತಗಳ ಶೋಷಿತರು
ಭಾಷೆ ಭೇದಗಳ ಗಡಿಯನು ದಾಟಿ
ಸಮತೆಯ ಭಾವದ ಚಿಲುಮೆಯ ಮೀಟಿ
ದಲಿತರು ಬರುವರು ದಾರಿಬಿಡಿ
ದಲಿತರ ಕೈಗೆ ರಾಜ್ಯಕೊಡಿ

ಎಂದು ಹಾಡುತ್ತ ತುಂಬಾ ಸೆಕ್ಯುಲರ್ ಆದ ನೆಲೆಯಲ್ಲಿ ಸಿದ್ಧಲಿಂಗಯ್ಯನವರು ದಲಿತ ಪರಿಕಲ್ಪನೆಯನ್ನು ವರ್ಗ ಪರಿಕಲ್ಪನೆಯನ್ನಾಗಿ ವಿಸ್ತರಿಸಿಕೊಂಡಿದ್ದಾರೆ ಹೀಗಾಗಿ ಈ ಇಬ್ಬರ ಸಿಟ್ಟುಗಳಲ್ಲಿ, ಉದ್ದೇಶಗಳಲ್ಲಿ ಸಮಾನ ಅಂಶಗಳಿವೆ ಎನ್ನಬಹುದು.

"ಜಗನ್ನಾಥ ರಥ ಚಕ್ರಗಳನ್ನು ಶ್ರೀಶ್ರೀಯವರು ಇಲ್ಲಿಯವರೆಗೆ ಮೇಲು ವರ್ಗದವರ ಪ್ರತಿನಿಧಿಯಾಗಿ ಆಕಾಶದಲ್ಲಿ ತೇಲುತಿದ್ದರೆ ಅದನ್ನು ಕವಿ ಭೂಮಿಗೆ ಎಳೆತಂದು ಪೀಡಿತ ವರ್ಗದ ರಕ್ಷಣೆಗಾಗಿ ನಡೆಸಿದ್ದಾರೆ."

ದೀನರೇ!
ಹೀನರೇ!
ಕೂಳಿಲ್ಲದ

ಗೂಡಿಲ್ಲದ
ಹಕ್ಕಿಗಳಿರಾ!
ಭಿಕ್ಷುಗಳಿರಾ!
ಗೆಳತಿಯರಿಂದ ಪರಿಚ್ಯುತರು
ಜನರಿಂದ ತಿರಸ್ಕೃತರು
ಸಮಾಜದಿಂದ ಬಹಿಷ್ಕೃತರು
ಗುಟುಕು ಜೀವರು
ಚ್ಯುತಾಶಯರು
ಹೃತಾಶ್ರಯರು
ಹತಾಶರಾಗಿ ಅಳಬೇಡಿ!
ನಿಮ್ಮ ರಕ್ತ ಕದಡಿ ಕದಡಿ
ನಿಮ್ಮ ನಾಡಿ ಕದಲಿ ಕದಲಿ
ನಿಮ್ಮ ಕರುಳು ತನಲಿ ಕನಲಿ
ಅಳಬೇಡಿ! ಅಳಬೇಡಿ!
ಓ ವೃಥಾ ನಿವಿಷ್ಟರೇ!
ಪತಿತರೇ!
ಭ್ರಷ್ಟರೇ!
ಯಾತನಾ ಸರ್ಪದಷ್ಟರೇ!
ಅಳಬೇಡಿ ಅಳಬೇಡಿ!
ಬರುತಿದೆ ಬರುತಿದೆ
ಜಗನ್ನಾಥ
ಜಗನ್ನಾಥ
ಜಗನ್ನಾಥ ರಥ ಚಕ್ರ!
....
....

ವಂಚನೆಗೆ ಒಳಗಾದ ತಮ್ಮಂದಿರೇ!
ನಿಮಗೋಸ್ಕರ ಲೇಖನಿ ಹಿಡಿದು
ಅಂಬರದಾರಿಗಳ ಹಾದು
ಸಂಭ್ರಮದಿಂದ ಹೋಗುವ
ಅರಚುತ್ತಾ ಸಾಗಿ ಹೋಗುವ
ಜಗನ್ನಾಥ ರಥ ಚಕ್ರಗಳು
ರಥ ಚಕ್ರದ ಪ್ರಳಯಘರ್ಜನೆ

ಭೂಮಾರ್ಗ ಹಿಡಿಸುತ್ತೇನೆ.
ಭೂಕಂಪ ಹುಟ್ಟಿಸುತ್ತೇನೆ." **(ಜಗನ್ನಾಥ ರಥಚಕ್ರಗಳು: ಶ್ರೀ ಶ್ರೀ)**

'ಗುಡಿಗೆ ಹೋಗುವವರ ಹಾಡು' ಸಿದ್ಧಲಿಂಗಯ್ಯನವರ ಈ ಕವಿತೆಯಲ್ಲೂ ರಥಗಳು ಚಲಿಸುತ್ತವೆ. ಆದರೆ ಅವು ದೇವಲೋಕದವಲ್ಲ. ದೇವಲೋಕದ ಪ್ರತಿನಿಧಿಯಾದ ಭೂಲೋಕದ್ದು. ಕವಿ ಇಲ್ಲಿ ಕಾಲನ ತೇರು ಎಳೆಯುತ್ತಾರೆ ಶ್ರೀ ಶ್ರೀ ಬಯಸಿದಂತೆಯೇ ಸಮಸಮಾಜದ ಕನಸಿನ ಹೂಗಳನ್ನೇ ಚಲ್ಲುತ್ತಾರೆ. ಕಾಲ ಕಾಲದ ಸಂಪ್ರದಾಯಗಳ ಅಡಿಯಲ್ಲಿ ಊರ ಹೊರಗಿರಬೇಕಾದ ಜನ ಇಲ್ಲಿ ಒಳಗೆ ಬರಲು ಆತಂಕ, ತಲ್ಲಣಗಳಿಂದ ಬರುವೆವು ಬರಮಾಡಿಕೊಳ್ಳೋ ದೇವಾ ಎಂದರೆ ಅಲ್ಲಿ ಶ್ರೀಶ್ರೀಯವರಲ್ಲಿ ಹಿಂಸೆ ಅಣಕಿಸವ ಧ್ವಂಸ ರಚನವಿದೆ. ಧ್ವಂಸ ಅಡಗಿಸುವ ಹಿಂಸೆ ರಚನೆ ಇದೆ. ಆದರೆ ಇಲ್ಲಿ ನಿರ್ಲಿಪ್ತ ಭಾವವಿದೆ. ಅಲ್ಲಿ ಜಗನ್ನಾಥನಿದ್ದರೆ ಇಲ್ಲಿ ಮಂಜುನಾಥ ಬಂದಿದ್ದಾನೆ.

"ಗುಟ್ಟಿನ ಲೋಕದ ಗುಡಿಗೆ ಹೋಗುವೆವು
ಶತಮಾನದ ಸುಳ್ಳನು ಒಡೆದು
ಹೊಸಬಾಳ ಪಯಣದಲ್ಲಿ
ನಾವಿಟ್ಟು ಮೊದಲಿ ಹೆಜ್ಜೆ
ಕೆಟ್ಟು ನಿಂತಿರುವ ಕಾಲದ ರಥವನು
ಎಳೆಯುತೀವಿ ಮುಂದೆ
ಸಮತೆಯ ಹೂಗಳು ಚಲ್ಲಿದ ಪಥವನು
ತುಳಿಯುತೀವಿ ನಾವು
ಮರೆತು ಹೋಗಿರುವ ಗುರುತುಸಿಗದಿರುವ
ನಮ್ಮ ಸೊಲ್ಲೆ ಬನ್ನಿ
ಜಗವೆಲ್ಲ ಕೇಳಲಿ ಅಚ್ಚರಿಗೊಳ್ಳಲಿ
ಹೊಸ ಮಾತೊಂದ ಅನ್ನಿ."

(ಗುಡಿಗೆ ಹೋಗುವವರ ಹಾಡು: ಶ್ರೀ ಶ್ರೀ)

ಯುಗಾದಿ ಹಬ್ಬ ಕವಿಗಳನ್ನ ಆಕರ್ಷಿಸುವ ಪ್ರಮುಖ ಆಕರ್ಷಣೆಯೂ ಹೌದು. ಹೊಸ ವರ್ಷದ ಹೊಸ ಚಿಗುರಿನ ಹೊಸ ಕೂಗಿನ, ಹೊಸ ಆರಂಭದ, ಹೊಸ ಉಡುಗೊರೆಗಳ ಸಿಹಿಕಹಿ ಭಾವಗಳ ಮಿಶ್ರಣದ ಈ ಹಬ್ಬ ಶ್ರೀ ಶ್ರೀ ಮತ್ತು ಸಿದ್ಧಲಿಂಗಯ್ಯ ಇಬ್ಬರನ್ನೂ ಕಾಡಿದೆ. ಶ್ರೀಶ್ರೀಯವರು ಯುಗಾದಿ ಕುರಿತಂತೆ ಮೂರು ಕವಿತೆ ಬರೆದರೆ ಸಿದ್ಧಲಿಂಗಯ್ಯನವರು ನಾಲ್ಕು ಕವಿತೆ ಬರೆದಿದ್ದಾರೆ. ಇಬ್ಬರ ಕಾಲ ಬೇರೆ, ನೆಲ ಬೇರೆ, ಭಾಷೆ ಬೇರೆ ಆದರೂ ಇಬ್ಬರೊಳಗಿನ ಸಾಮಾನ್ಯರ ಪರ ಒಲವು ಮಾತ್ರ ಒಂದೇ ಆಗಿವೆ.

'ರಾಕ್ಷಸ ಉಗಾದಿ' ಕವಿತೆಯಲ್ಲಿ ಶ್ರೀ ಶ್ರೀಯವರು ಯುಗಾದಿಯ ಒಂದು ವಾರದ ಮಾನವೀಯತೆಯ ಥಳುಕನ್ನು ವ್ಯಂಗ್ಯಮಾಡುತ್ತಾರೆ.

ಕೊಟ್ಟೆನಮ್ಮ ಬಾಗೀನ
ತೆಗೆದುಕೋಮ್ಮಾ ಬಾಗೀನ
ಹೀಗೊಂದು ವಾರ
ವ್ಯಾಪಾರ ಸಾಗುತ್ತದೆ!
ರಾಕ್ಷಸರೇ ಈ ಹಬ್ಬ
ಕಳೆಯಾಗಿ ನಡೆಸುವರು
ಗತಿಯಿಲ್ಲದವರಿಗೆ
ಎಂಜಲು ಅಗಳು ಹಾಕುವರು **(ರಾಕ್ಷಸ ಉಗಾದಿ: ಶ್ರೀ ಶ್ರೀ)**

ಈ ಹಬ್ಬದಲ್ಲೇ ಮುಖ್ಯಮಂತ್ರಿಯವರ ಸನ್ಮಾನದ ಕರೆಯನ್ನ ತಿರಸ್ಕರಿಸುತ್ತ ನನ್ನ ಜನವೇ ಬೇರೆ. ನಿಮ್ಮ ಜನವೇ ಬೇರೆ. ನನ್ನ ಜನರಿಗೂ ನಿಮ್ಮ ಜನರಿಗೂ ಹೊಂದಿಕೆ ಕುದುರದು ಬಿಡಿ ಎನ್ನುತ್ತ ಸನ್ಮಾನಕ್ಕಿಂತಲೂ ಜೈಲೇ ವಾಸಿ ನಿಮಗೆ ಅರೆಸ್ಟು ಮಾಡಿಸಲು ಅನೇಕ ದಾರಿಗಳಿವೆ. ಇದಕ್ಕಿಂತ ಸುಖ ಶಾಂತಿ ಬೇರಿಲ್ಲ. ಈ ಚಿಕ್ಕ ಆಸೆ ಈಡೇರಿಸಿ ಎಂದು ಕೇಳಿಕೊಳ್ಳುತ್ತಾರೆ.

"ಇದುವರೆಗೂ ಹೇಳಿದೆನೆ
ಈ ದೇಶವಿನ್ನು ಖೈದಿಯೇ ಎಂದು!
ಇಷ್ಟು ದೊಡ್ಡ ಜೈಲಿಗಿಂತ
ಚಿಕ್ಕ ಸೈಜಿನದು ಕೊಡಿ
....
....
ಸಾಯುತ್ತಿಹ ವ್ಯವಸ್ಥೆ ನಿಮ್ಮದು
ಬರುತ್ತಿಹ ಚರಿತ್ರೆ ನನ್ನದು
ಶವಾದರಣೆ ನಿಮ್ಮ ಧ್ಯೇಯ
ಶಿಶೋದಯ ನನ್ನ ನ್ಯಾಯ
ವಿಪ್ಲವ ಝುಂಝಾ ನಿಲಗಳು
ಬೀಸುತ್ತಿಹ ಯುಗಾದಿ ಈ ದಿನ
ವಿಪ್ಲವ ರಣದುಂಧುಬಿಗಳು ಧ್ವ
ನಿಸುತ್ತಿಹ ಶುಭ ವೇಳೆಯೀದಿನ
ವಿಗತಾಶರು ಪ್ರಗತಿಮಾರ್ಗ
ವಿರೋಧಿಗಳಿಗೆ ಸಮಾಧಿ

ವಿಪ್ಲವ ಜನವಾಹಿನಿಗಳು ಜ
ಯಿಸುತ್ತಿಹ ಯುಗಾದಿ" **(ರಾಕ್ಷಸ ಉಗಾದಿ: ಶ್ರೀ ಶ್ರೀ)**

ಅವರ ವಿಪ್ಲವದ ಉದ್ದೇಶ ತೆಲುಗಿನವರ ಆನಂದ ತೆಲುಗು ನಾಡಿನ ಅಭಿವೃದ್ಧಿ ಎನ್ನುವುದಾಗಿದೆ.

'ಪಂಚರತ್ನಗಳು' ಎನ್ನುವ ಕವಿತೆಯಲ್ಲಿ ಯುಗಾದಿಯನ್ನ ಕುರಿತು ವ್ಯಕ್ತಿ, ಸಮಾಜ, ಆಚರಣೆ, ಪ್ರಕೃತಿ ಮತ್ತು ದೇಶವೆಂಬ ಐದು ನೆಲೆಯಲ್ಲಿ ಚಿತ್ರಿಸಿದ್ದಾರೆ.

ಮೊದಲ ಭಾಗದಲ್ಲಿ ಯುಗಾದಿಯಿಂದ ತನಗೇನುಬೇಕೆಂದು ಕವಿಕೇಳಿಕೊಂಡರೆ ಎರಡನೇ ಭಾಗದಲ್ಲಿ ಯುಗಾದಿ ಎಂದರೆ

ಉಗಾದಿ ಹಾಡಿಗೆ ಒಂದೆ ಪಲ್ಲವಿ
ಬಾಧೆ, ಬಾಧೆ, ಬಾಧೆ– ಅದು
ಜಗವ ನೂಕುವ ಜನರ ಜೀವನ
ಗಾಥೆ ಗಾಥೆ ಗಾಥೆ **(ಪಂಚರತ್ನಗಳು: ಶ್ರೀ ಶ್ರೀ)**

ಮೂರನೇ ಭಾಗದಲ್ಲಿ ಕವಿತೆ ಹೈದ್ರಾಬಾದ್ ತೆಲುಗಿನಿಂದ ಕೂಡಿದ ಸಮಾಜ ವಿಮರ್ಶೆಯಾಗಿದೆ. ಇಲ್ಲಿ ತೆಲುಗು ಮತ್ತು ಉರ್ದು ಮಿಶ್ರಿತ ಭಾಷೆ ಇದೆ.

ಉರ್ರ್ಯೋ ಗುಡಿಸಲು ಉರಿಯುತಾ ಇದ್ದರೆ
ಮೇಲೇಳುವ ಮಹಡಿ ಏಳುತಾ ಇದೆ
ಒಬ್ಬರದು 'ಅಬ್ಬಾ' ಒಬ್ಬರದು ಹಬ್ಬ!
ತರತಮವೇಕೆ ಬಿಡು ಚಿಚಿ..ಜಾನ್? **(ಪಂಚರತ್ನಗಳು: ಶ್ರೀ ಶ್ರೀ)**

ನಾಲ್ಕನೇ ಭಾಗದಲ್ಲಿ ಪ್ರಕೃತಿಯಲ್ಲಿ ಹೊಸದು ಬಂದರೂ ವ್ಯವಸ್ಥೆಯಲ್ಲಿ ಹೊಸದು ಬರಲಾರದು. ಬರಬೇಕೆಂದರೆ ಉಗಾದಿಯ ಗಾಳಿ ಬದಲಾಗಬೇಕು ಎನ್ನುತ್ತಾರೆ.

ಉಗಾದಿ ಬಂದಿದೆ
ಆದರೂ
ಶುಭಾದಿ ಬಂದಿದೆ?
ಚೈತ್ರ ಅರಳಿದೆ
ಆದರೂ
ಆರ್ತಕರಗಿದೆ?
ಹಳೆಯದು ಹೋಗಿದೆ
ಆದರೂ

ಹೊಸದೂ ಬರುವುದಿಲ್ಲವೆಂದಿದೆ?
....
....
ಉಗಾದಿ ಬಿಸಿಗಾಳಿ
ಬೀಸಿ
ಜಗಗಳು ಅದುರಬೇಕು
ಸತ್ತ
ಶವಗಳು ನಡೆಯಬೇಕು (**ಪಂಚರತ್ನಗಳು: ಶ್ರೀ ಶ್ರೀ**)

ಐದನೇ ಭಾಗದಲ್ಲಿ ಯುಗಾದಿ ಅಖಂಡ ಭಾರತವೇ ಅಥವಾ ತೆಲುಗಿನ ಹಬ್ಬ ಮಾತ್ರವೇ ಎಂದು ಪ್ರಶ್ನಿಸುತ್ತಲೇ ಅಖಂಡ ಎಲ್ಲಿದೆ ಎನ್ನುತ್ತಾರೆ.

ಉಗಾದಿಗೆ ಸ್ವಾಗತ
ಅಖಂಡ ಭಾರತ
(ಅದೆ ಜಿನ್ನಾ ಒದ್ದುಕೊಂಡು ಹೋಗಿ ಮಿಕ್ಕ
ಚಿಂದಿಗಂಟು ಭಾರತ)
ಹೇಳುತ್ತಿದೆ ಸ್ವಾಗತ
ಕ್ಷಮಿಸಬೇಕು ತಪ್ಪು (**ಪಂಚರತ್ನಗಳು: ಶ್ರೀ ಶ್ರೀ**)

'ಉಗಾದಿ ಸ್ವಗತಗಳು' ಕವಿತೆಯಲ್ಲಿ ಐದು ರೀತಿಯ ಸ್ವಗತಗಳಿವೆ. ಅಭ್ಯುದಯ ಕವಿ ಸ್ವಗತ, ಗುಮಾಸ್ತ ಸ್ವಗತ, ಜೋಹುಕುಂ ಕವಿ ಸ್ವಗತ, ಸಾಮಾನ್ಯನ ಸ್ವಗತ, ವಿಪ್ಲವ ಕವಿ ಸ್ವಗತ ಎಂದು ಬಿಡಿ ಬಿಡಿಯಾಗಿ ಚಿತ್ರಿಸಿದ್ದಾರೆ. ಗುಮಾಸ್ತನ ಸ್ವಗತ ಕವಿತೆಯಲ್ಲಿ

"ಓಹೋ ಹೊಸ ಉಗಾದಿ ಬಂದಿದೆ
ಹೊಸ ತೆರಿಗೆ ತಂದಿದೆ
ಹೊಸಯಾತನೆಗಳ ಚುಚ್ಚಿದೆ
....
....
ಭೂಲೋಕ ಸ್ವರ್ಗ ಎಲ್ಲಿದೆಯೋ ಏನೋ
ನಮ್ಮ ಮನೆ ಪ್ರತ್ಯಕ್ಷ ನರಕ" (**ಉಗಾದಿ ಸ್ವಗತಗಳು: ಶ್ರೀ ಶ್ರೀ**)

ಇದೇ ರೀತಿಯ ಚಿತ್ರವು ಜೋಹುಕುಂ ಕವಿತೆಯಲ್ಲಿಯೂ ಕಾಣಬಹುದಾಗಿದೆ.

"ಎಷ್ಟು ಯುಗಾದಿಗಳು ಬರಲಿಲ್ಲ ಇನ್ನೆ
ಷ್ಟು ಯುಗಾದಿಗಳು ಹೋಗಲಿಲ್ಲ

ಎಲ್ಲಿನ ಕಳ್ಳರು ಅಲ್ಲೆ
ಎಲ್ಲಿನ ಗೊಂಗಡಿ ಅಲ್ಲೆ" **(ಉಗಾದಿಯ ಸ್ವಗತಗಳು: ಶ್ರೀ ಶ್ರೀ)**

ವಿಪ್ಲವ ಕವಿಯ ಸ್ವಗತದಲ್ಲಿ ಎಂದಿನಂತೆಯೇ ಕವಿ ಯುಗಾದಿಯನ್ನು ಕ್ರಾಂತಿಯ ಸಂಕೇತವಾಗಿ ಗ್ರಹಿಸುತ್ತಾರೆ.

ಅನೀತಿ ಎದೆಯಲ್ಲಿ ಬಾಕುಗಳು
ಅನ್ಯಾಯದ ಪಕ್ಕೆಯೊಳಗೆ ತುಪಾಕಿಗಳು
ಸಾಮಾಜಿಕ ವಿಪ್ಲವ ಸಮರ
ಹುಳುಕು ಹಿಡಿದ ಸಂಸ್ಕೃತಿ ಮರಣ
ಇದೆ ಇಂದಿನ ಸತ್ಯ
ಮೂಡಣದಿಂದ ಕತ್ತಲ ಬೇಧಿಸಿ ಬರುವ
ಉಷಸ್ಸನ್ನು ಹೊತ್ತು ತರುವ
ಐರಾವತದಂತೆ ಶಾಂತಿ ಅವತಾರದಂತೆ
ಉದಯಿಸುತ್ತದೆ ನವಯುಗಾದಿ
ಅದೆ ನಮುಗುಗಾದಿ **(ಉಗಾದಿಯ ಸ್ವಗತಗಳು: ಶ್ರೀ ಶ್ರೀ)**

ಸಿದ್ಧಲಿಂಗಯ್ಯನವರು ಬರೆದ ಯುಗಾದಿ–೧ರಲ್ಲಿ ಶ್ರೀ ಶ್ರೀಯವರಂತೆಯೇ ಸಾಮಾನ್ಯನ ಸಾಮಾಜಿಕ ಬದುಕೇ ಅನಾವರಣಗೊಂಡಿದೆ. ಇದು ಯಾರ ಯುಗಾದಿ ಎಂದು ಪ್ರಶ್ನಿಸುವ ಕವಿ ಯುಗಾದಿಯನ್ನ ಹೀಗೆ ಕಾಣುತ್ತಾರೆ.

ಬೇವು ಬೆಲ್ಲದ ಅದೇ ಹಳೆಯ ಪಾಠ
ಸ್ವಂತದ್ದೋ ಸಾಲದ್ದೋ ಒಬ್ಬಟ್ಟಿನೂಟ
ಬದುಕೇ ಇಲ್ಲದ ಅನಾದಿಯ ಲೆಕ್ಕಕ್ಕೆ
ನೀನೊಂದು ಶಬ್ದ ಮಾತ್ರ.

ಅರಳದೆ ಕಮರಿ ಹೋಗುವ ಜೀವಗಳು
ನಕ್ಷತ್ರದಂತೆ ನಗಲಾರದ ಬಾಳುಗಳು
ಎದೆ ಸೆಟ್ಟೆದು ನಿಲ್ಲಲಾರದ ದೇಹಗಳು
ಕಣ್ಣು ಕುಕ್ಕುವಾಗ ಇದು ಯಾರ ಯುಗಾದಿ?

ಬೀದಿ ವಾಸಿಯ ಅಳಲು ಜೋಪಡಿಯ ಕತ್ತಲು
ದಿನ ದಿನದ ಅನ್ನಕ್ಕೆ ಮಾರಿಕೊಳ್ಳುವ ಮಯ್ಯಿ
ಆಸೆಯಲಿ ಚಾಚಿರುವ ಲಂಚಕೋರನ ಕಯ್ಯಿ
ಯುಗಯುಗವು ಕಳೆದರೂ ಅಳಿಯದೇನು

(ಯುಗಾದಿ–೧: ಸಿದ್ಧಲಿಂಗಯ್ಯ)

‘ಯುಗಾದಿ-೨’ರಲ್ಲಿ ಸಿದ್ಧಲಿಂಗಯ್ಯನವರು ಸಮ ಸಮಾಜದ ಕನಸು ಕಂಡಿದ್ದಾರೆ. ಯುಗಾದಿ ಎಂದರೆ ಹರುಷ ಮಾತ್ರವಲ್ಲ. ಯಾರು ಏನೇ ಅಂದರೂ ಮಾವಿನೊಡನೆ ನೋವ ತಂದೆ ಎನ್ನುತ್ತಾರೆ.

ಉಳ್ಳವರಿಗೆ ಹಬ್ಬವಾಯ್ತು
ಕವಿ ಕುಲಕ್ಕೆ ಕಬ್ಬವಾಯ್ತು
ಇಲ್ಲದವರಿಗೇನಾಯಿತು
ಹೇಳೆ ಯುಗಾದಿ

....

....

ಬಾಳಿನೆಲ್ಲ ಕೇಡು ಕಳೆದು
ನವಯುಗಾದಿಯಾಗಲಿ
ಎಲ್ಲರೆದೆಯ ನೋವು ಅಳಿದು
ನವಜೀವನ ಮೂಡಲಿ **(ಯುಗಾದಿ-೨: ಸಿದ್ಧಲಿಂಗಯ್ಯ)**

“ಯುಗಾದಿ-೩”ರಲ್ಲಿ ಪ್ರಕೃತಿಯ ಜೊತೆ ಜೊತೆಗೇ ಮಾನವನ ಬದುಕನ್ನು ಬದಲು ಮಾಡುವ ಶುಭದ ಕನಸು ಕಾಣುತ್ತಾರೆ.

ನವಭಾವದ ನವಬದುಕನು
ಹೊಸಯುಗಾದಿ ತೆರೆಯಲಿ
ಪ್ರೀತಿಯ ಬೆಳದಿಂಗಳಲ್ಲಿ
ಭೂಮಿಯು ಮೈ ಮರೆಯಲಿ

ಕೆಡುಕಿನ ಕಡು ಕತ್ತಲಳಿದು
ಹಕ್ಕಿ ಹಾಡು ಮೊಳಗಲಿ
ಕಂದನ ಕಣ್ ಬೆಳಕಿನಲ್ಲಿ
ಹೊಸ ಯುಗಾದಿ ಮೂಡಲಿ

....

....

ಮರಕೆ ಬಿದ್ದ ಉರಿಯು ಆರಿ
ಮತ್ತೆ ಬನವು ಚಿಗುರಲಿ
ದೂರವಾದ ಹೃದಯಗಳಲಿ
ಮೈತ್ರಿ ಭಾವ ಸುಳಿಯಲಿ.

"ಯುಗಾದಿ-೪"ರ ಕವಿತೆ ಶ್ರೀ ಶ್ರೀ ಯೋಚನಾಲಹರಿಗೆ ತುಂಬಾ ಹತ್ತಿರವಾದ ಕವಿತೆ. ಇಲ್ಲಿ ಸಮ ಸಮಾಜ ಕಾಣುವ ಹಂಬಲವಿದೆ. ಮಾನವರ ಮಾನವತೆಯ ಪ್ರೀತಿಗಾಗಿ ಸಂಭ್ರಮಿಸುವ ಮನಸ್ಸಿದೆ. ದುಷ್ಟರ ಶಿಕ್ಷೆಗಾಗಿ ಕಾದು ಕುಳಿತವರ ತವಕವೂ ಇದೆ.

ಮಂಡೆಲಾ ಬಿಡುಗಡೆಯ ಬೆನ್ನ ಹಿಂದೆ
ಬಂದ ಈ ಯುಗಾದಿ
ಜಾತಿಮತಗಳ ಜೈಲು ವಾಸಿಗಳನ್ನು
ಬಿಡಿಸಿ ಕರೆ ತಂದೀತೆ
ಪ್ರೀತಿ ಮಾನವತೆಗಳ ಬಯಲಕಡೆಗೆ

ಕಂಡ ಕಂಡವರನ್ನು ಗುಂಡಿಟ್ಟು ಕೊಂದ
ಪುರುಷ ಸಿಂಹರ ವಿಚಾರಣೆಯ ದಿನಕ್ಕಾಗಿ
ಕಾದು ಕುಳಿತ ಮುದುಕನಂತೆ
ಯುಗಾದಿ ಭರವಸೆಗಳ ಪ್ರವಾದಿ

ಈ ಸಲದ ಯುಗಾದಿ
ಮಧ್ಯವಯಸ್ಕರ ಉದ್ಯೋಗದ ಕನಸಿನಂತೆ
ಲಂಚಕೋರನ ಮೃದುವಾದ ಮಾತಿನಂತೆ
ಏರುವ ಬೆಲೆ, ಇಳಿಯುವ ಘನತೆಯಂತೆ
ಚಿಂತಾಜನಕವಾಗದಿರಲಿ.

ಜನಸ್ತೋಮದ ಹಸಿರ ನಡುವೆ
ಬಾಂಧವ್ಯದ ಹೂಗಳರಳಿ
ಸಮಾನತೆಯ ಸಂತಸವನು
ಋತು ವಸಂತ ಸಾರಲಿ
ಯುಗ ಯುಗಗಳಿಂದ ಧಗಧಗಿಸುತಿರುವ
ಜನಮನದ ಕಾಡಿನೊಳಗೆ
ಪುಟ್ಟ ಕಂದನ ಕಣ್ಣಲ್ಲಿ ಕಂಡ
ಕನಸಿರಲಿ ಕೊನೆಯವರೆಗೆ **(ಯುಗಾದಿ-೪: ಸಿದ್ಧಲಿಂಗಯ್ಯ)**

ಕವಿತೆ ಎಂದರೆ ಏನು? ಯಾಕೆ? ಎಂಬ ಪ್ರಶ್ನೆಗಳನ್ನಿಟ್ಟುಕೊಂಡೇ ಶ್ರೀ ಶ್ರೀ ಬರೆಯುತ್ತಾರೆ. ಅವರ ಕವಿತೆಯಲ್ಲಿ ಆಕ್ರೋಶವಿದೆ. ವಿಪ್ಲವದ ರೋಷವಿದೆ. ಪರಿಪೂರ್ಣ ಬದುಕು ಬೇಕು ಎಂಬ ಹಂಬಲವಿದೆ. ಹಳೆಯ ಕವಿತೆ ಕೇವಲ ರಾಜರನ್ನ ಹೊತ್ತೊಯ್ಯುವ ರಥವೆಂದೂ ನವಕವಿತೆ ಜನಸಾಮಾನ್ಯರನ್ನ ಹೊತ್ತೊಯ್ಯುವ ಬಸ್ಸು, ಮೋಟಾರುಗಳೆಂದೇ ಭಾವಿಸುವ ಶ್ರೀಶ್ರೀಯವರ 'ನವಕವಿತೆ' ಹೀಗಿದೆ:

ಸಿಂಧೂರ, ರಕ್ತಚಂದನ
ಕೆಂದಾವರೆ, ಸಂಧ್ಯಾರಾಗ
ಹುಲಿಕೊಂದ ಜಿಂಕೆನೆತ್ತರು
ರುದ್ರ ರೌದ್ರನಯನ ಜ್ವಾಲ
ಕಲಕತ್ತಾಕಾಳಿ ನಾಲಿಗೆ
ಬೇಕುಕಣೋ ನವಕವಿತೆಗೆ
....
....
ಸಿಡಿದೆದ್ದ ಜನಸಮೂಹ
ಬೇಕುಕಣೋ ನವಕವಿತೆಗೆ
ರಣಹದ್ದುಗಳ ರೆಕ್ಕೆಯ ಸಪ್ಪಳ
ಹೊಗೆ ಗೂಡಿನ ಭೂಂಕಾರ ಧ್ವನಿ
ಅರಣ್ಯದ ಹರೀಂದ್ರ ಘರ್ಜನೆ
ಪ್ರಯೋಧರ ಪ್ರಚಂಡ ಘೋಷ
ಖಡ್ಗ ಮೃಗದಾಗ್ರಹ ಕೂಗು
ಝುಂಝಾನೀಲ ಷಡ್ಜುಧ್ವಾನ

ಬೇಕುಕಣೋ ನವಕವಿತೆಗೆ
ಚಲಿಸುವುದು ಚಲನಗೂಡುವುದು
ಪರಿವರ್ತಿಸುವುದು ಪರಿವ
ರ್ತನೆಗೆ ತೊಡಗಿಸುವುದು
ಹಾಡುವುದು ಹಾಡಿಸುವುದು
ಮೊದ್ಲು ನಿದ್ರೆಯಿಂದ ಬಡಿದೆಬ್ಬಿಸಿ
ಮುನ್ಮುಂದಕ್ಕೆ ಸಾಗಿಸುವುದು
ಪರಿಪೂರ್ಣ ಬದುಕ ನೀಡುವುದು
ಬೇಕುಕಣೋ ನವಕವಿತೆಗೆ **(ನವಕವಿತೆ: ಶ್ರೀ ಶ್ರೀ)**

"ಕೊತ್ತಕೆರಟಂ" ಎನ್ನುವ ಲೇಖನದಲ್ಲಿ ಶ್ರೀಶ್ರೀಯವರು "ಪ್ರಪಂಚಾದ್ಯಂತ ಮಾರ್ಕ್ಸಿಜಂ ತನ್ನ ಶಕ್ತಿಯನ್ನ ಋಜುವಾತು ಪಡಿಸುತ್ತಿದೆ. ಅಂತಹ ಮಾರ್ಕ್ಸಿಸ್ಟು ದರ್ಶನಕ್ಕೆ ವಿಪ್ಲವ ರಚನೆಗಾರರ ಸಂಘ ಬದ್ಧವಾಗಿರುತ್ತದೆ. ಆ ರೀತಿಯಲ್ಲಿ ಒಂದು ಸಿದ್ಧಾಂತಕ್ಕೆ ಒಳಪಡುವುದೆಂದರೆ ಕೈಗಳಿಗೆ ಬೇಡಿಹಾಕಿಕೊಂಡಂತೆ ಎಂದು ಕೆಲವರು ಭಾವಿಸುತ್ತಾರೆ. ಆದರೆ ಮಾರ್ಕ್ಸ್‌ವಾದ ಬರಹಗಾರರಿಗೆ ಅದು ಶಕ್ತಿ ನೀಡುವ ಸಾಧನ.

“ಕಥೆಯೊಳಗೆ ಕವಿತೆಗಳೊಳಗೆ ಊಹೆಯ ಹಾಡುಬೇಡ. ನಾಟಕಗಳೊಳಗೆ ಮಿತಿಮೀರಿದ ಕಲ್ಪನೆ ಬೇಡ. ಇಂದಿನ ಸಮಾಜದ ಆರ್ಥಿಕ ವ್ಯವಸ್ಥೆ, ವಾಸ್ತವಿಕ ಸ್ಥಿತಿಯನ್ನು ಅನುಸರಿಸಿ ಬರಹಗಳಿರಬೇಕು. ಬರಹಗಾರರ ಮೇಲೆ ಸಾಮಾಜಿಕ ಪ್ರಭಾವವು ಅನಿವಾರ್ಯವಾಗಿರುತ್ತದೆ.”[೪]

ಸಿದ್ಧಲಿಂಗಯ್ಯನವರು “ಶ್ರೀ ಸಾಮಾನ್ಯ ಮತ್ತು ಸಾಹಿತ್ಯಾಭಿವ್ಯಕ್ತಿ” ಎಂಬ ಲೇಖನದಲ್ಲಿ “ನಾನು ಈ ಶ್ರೇಣೀಕೃತ ಸಮಾಜದ ಒಂದು ಹಂತದಿಂದ ಬಂದವನು. ಸಾಹಿತ್ಯ ಒಂದು ಸಾಮಾಜಿಕ ಸಂಸ್ಥೆಯಾದ್ದರಿಂದ ಅದನ್ನು ಸಮಷ್ಟಿ ಜೀವನ ಕ್ರಮಕ್ಕೆ ಒಗ್ಗಿಸಿ ನೋಡುವುದರಲ್ಲಿ ನಂಬಿಕೆ ಉಳ್ಳವನು. ಈ ಹೊತ್ತು ನನಗೆ ಕಲಿಸುತ್ತಿರುವ ಸಾಹಿತ್ಯಿಕ ಶಿಸ್ತನ್ನು ಆಸ್ವಾದನೆಯ ಪ್ರಾಥಮಿಕ ಹಂತದಲ್ಲಿ ಸ್ವೀಕರಿಸಬಲ್ಲನೇ ಹೊರತು ಧೋರಣೆಗಳ ಮಟ್ಟದಲ್ಲಿ ಅಲ್ಲ. ಅದನ್ನು ನನ್ನ ವರ್ಗ ನನಗೆ ಕಲಿಸಿದೆ. ಸಾಹಿತ್ಯ ಆಕಾಶದಿಂದ ಉದಿರಿದ್ದಲ್ಲ. ಸಮಾಜದ ಒಂದು ನಿರ್ದಿಷ್ಟ ಅಂಗವಾದ ಸಾಮಾನ್ಯ ಮನುಷ್ಯನಿಗೂ ಸಾಹಿತ್ಯಕ್ಕೂ ಸಂಬಂಧ ಇರಲೇಬೇಕಾದ್ದು, ಸ್ವರೂಪದ ಬಗ್ಗೆ ಏನೇ ತಕರಾರು ಇದ್ದರೂ ಅದು ಅನಿವಾರ್ಯ, ಯಾಕೆಂದರೆ ಇವೆರಡೂ ಒಂದೇ ಸಮಾಜದ ಎರಡು ಅಂಗಗಳು.

ಸಾಹಿತ್ಯಾಭಿವ್ಯಕ್ತಿಯಲ್ಲಿ ಸಾಮಾನ್ಯ ಮನುಷ್ಯ ಎಂದರೆ ಸಾಮಾನ್ಯ ಮನುಷ್ಯನು ಸಾಹಿತ್ಯ ನಿರ್ಮಾಣದಲ್ಲಿ ಪಾಲ್ಗೊಂಡ ಬಗೆ. ಇದನ್ನು ಸಾಮಾಜಿಕವಾಗಿ ಚಿಂತಿಸುವುದು ನನ್ನ ಗುರಿ.

ಸಾಮಾನ್ಯ ಮನುಷ್ಯ ಎಂದರೆ ನನ್ನ ಮನಸ್ಸಿನಲ್ಲಿರುವುದು ಓದು ಬರಹ ಬರದವನು. ದುಡಿಮೆಗಾರ, ಕೀಳೆನಿಸಿಕೊಂಡವನು, ಆಸ್ಥಾನದಲ್ಲಿ ಜಾಗವಿಲ್ಲದವನು, ಪಂಡಿತನಲ್ಲದವನು ಇಂಥ ವ್ಯಕ್ತಿ ಸಾಹಿತ್ಯ ಸೃಷ್ಟಿಗೆ ಕೈ ಹಾಕುವುದು ಅಷ್ಟು ಸುಲಭವಲ್ಲ. ಇಂಡಿಯಾದಂಥ ದೇಶದಲ್ಲಂತೂ ಇದು ಅಸಾಧ್ಯ. ಜಾತಿ ಪದ್ಧತಿ ಇಲ್ಲಿನ ಎಲ್ಲ ಶೋಷಣೆಗಳ ಮೂಲ ಸಾಧನವಾಗಿ ಮುಂದುವರಿಯಿತು. ಇಂಡಿಯಾದ ಸಾಮಾಜಿಕ ವ್ಯವಸ್ಥೆಯು ಗೋಪುರಾಕಾರವಾದದ್ದು. ಕೆಳಗೆ ಸಿಕ್ಕಿರುವ ಜನ ಜಾಸ್ತಿ ಆದರೂ ದೇವರು, ಧರ್ಮದ ಹೆಸರಿನಲ್ಲಿ ನೀಚ ಅನ್ಯಾಯಕ್ಕೆ ಒಳಗಾದವರು. ೯೪% ಜನಕ್ಕೆ ವಿದ್ಯೆಯ ನಿರಾಕರಣೆ ಆಯಿತು. ಸಮಾಜದ ಬಹುಸಂಖ್ಯಾತರ ಅಭಿರುಚಿಗಳನ್ನೇ ಇಲ್ಲವಾಗಿಸಿ ಅವರ ಸೃಜನಶೀಲ ಶಕ್ತಿಯನ್ನು ಕಿತ್ತುಕೊಂಡಿದ್ದರಿಂದ ಸಾಮಾನ್ಯ ಮನುಷ್ಯನ ಸಾಹಿತ್ಯಾಭಿವ್ಯಕ್ತಿ ಕಲ್ಪನೆಗೂ ಬಾರದಾಯಿತು. ಅರಮನೆಗಳನ್ನು ಕಟ್ಟುವುದು, ಮೇಲಿರುವವರ ಮೃಷ್ಟಾನ್ನ ಭೋಜನದ ಸೃಷ್ಟಿಗಾಗಿ ಬೆವರು ಸುರಿಸಿ ದುಡಿಯುವುದರಲ್ಲಿ ನಿರತನಾದ ಸಾಮಾನ್ಯನಿಗೆ ಹಣೆ–ಬರಹ, ವಿಧಿಯ ಮಂಕುಬೂದಿ ಎರಚಿ ಹಾಗೆ ಇರುವಂತೆ ಮಾಡಿದರು. ಸಾಮಾನ್ಯನ ಇಡೀ ಬದುಕು ಹಿಂಸೆಯ ವಾತಾವರಣದಲ್ಲಿ ನಡೆಯಿತು. ಶೋಷಣೆ ದೇವರ ಹೆಸರಿನಲ್ಲಿ ನಡೆದದ್ದರಿಂದ ಪ್ರಶ್ನೆ

ಅನುಮಾನಗಳು ಏಳಲಿಲ್ಲ. ಪ್ರಭುವಿನ ಯುದ್ಧ ಖುಷಿ ಇತ್ಯಾದಿಗಳನ್ನು ಅಟ್ಟಕ್ಕೇರಿಸಿ, ವ್ಯವಸ್ಥೆಯನ್ನು ಪೋಷಿಸಿಕೊಂಡು ಬರುವ ಸಾಹಿತ್ಯ ಸೃಷ್ಟಿಯಾಯಿತು. ಎಲ್ಲ ಮುಗಿದ ಮೇಲೆ ಪ್ರಭುವಿಗೆ ಬರುವ ವಿರಕ್ತಿಯೂ ಕಾವ್ಯದ ವಸ್ತುವಾಯಿತು. ಭೋಗದ ತುತ್ತ ತುದಿಯಲ್ಲಿ ವಿರಕ್ತಿ ಬರುವುದರಿಂದ ಇದು ಸಾಮಾನ್ಯನಿಗೆ ದೂರ. ಯಾಕೆಂದರೆ ಭೋಗವೇ ಇಲ್ಲದವನಿಗೆ ಅದರ ತುದಿ ಮತ್ತು ವಿರಕ್ತಿ ಎಂದೆಂದೂ ಬಾರದಂಥವು. ಹೀಗೆ ಆಳುವ ವರ್ಗದ ಭಾವನೆಗಳು ಇಡೀ ಸಮುದಾಯದ ಭಾವನೆಗಳು ಎನ್ನುವಂತಹ ಸಾಹಿತ್ಯ ಸೃಷ್ಟಿಯಾಯಿತು. ಅವರ ಮೂಗಿನ ನೇರಕ್ಕೆ ಕಾವ್ಯ ಮೀಮಾಂಸೆ, ವಿಮರ್ಶೆಯ ಮಾನದಂಡಗಳು ಸಿದ್ಧವಾದವು. ಇಂಥ ಪರಿಸ್ಥಿತಿಯಲ್ಲಿ ಸಾಮಾನ್ಯನ ಮುಖ ಕಾಣನಿಲ್ಲ. ಅವನು ಕವಿಯಂತೂ ಆಗಲಿಲ್ಲ. ಆ ಕೊಳಕು ಸ್ಥಿತಿಯ ನಿರ್ಮಾಣದಲ್ಲಿ ಎಂಥದೋ ಅಂಥವೇ ಸಾಹಿತ್ಯ ಬಂತು. ಉದ್ದೇಶ ಪೂರ್ವಕವಾಗಿ ದೊಡ್ಡ ಪಾಲನ್ನು ಕತ್ತಲೆಯಲ್ಲಿಟ್ಟು ಅವರ ರಕ್ತ ಮಾಂಸವನ್ನುಂಡು ಕೊಬ್ಬಿದ ಮೇಲುವರ್ಗ ತನ್ನ ಧೋರಣೆಗಳನ್ನು ಸಾಹಿತ್ಯದಲ್ಲಿ ಅನ್ನಿಸಿತು. ಸಾಮಾನ್ಯರಿಂದ ಕ್ರಾಂತಿಕಾರಿಗಳಂತೆ ಸಿಡಿದು ಬಂದವರನ್ನು ತನ್ನೊಳಗೆ ಸೇರಿಸಿಕೊಂಡು ಅವರನ್ನ ತಮ್ಮವರಲ್ಲಿ ಒಬ್ಬರನ್ನಾಗಿಸಿತು. ಆದ್ದರಿಂದಲೇ ಈ ದೇಶದಲ್ಲಿ ಸಾಮಾನ್ಯನ ದನಿ ಸತ್ತು ಹೋದದ್ದು. ಅದು ಆಚೆಗೆ ಬರುವಾಗ ಪಾಲಿಷ್ ಆಗಿ ಬಂದದ್ದು.

ಇಷ್ಟಾದರೂ ಕನ್ನಡ ಸಾಹಿತ್ಯದಲ್ಲಿ ಸಾಮಾನ್ಯ ಮನುಷ್ಯನ ಅಭಿವ್ಯಕ್ತಿ ಇದೆ. ಇದೂ ಸಹ ಒಂದು ಚಳುವಳಿಯ ನಂತರವೇ ಆದದ್ದು.[3] ಆದ್ದರಿಂದ ಸಿದ್ಧಲಿಂಗಯ್ಯನವರ ಕಾವ್ಯಕ್ಕೆ ಭಿನ್ನತೆ ಲಭಿಸಿದೆ. ಕನ್ನಡ ಕಾವ್ಯ ಲೋಕವನ್ನು ಹೊಸದಿಕ್ಕಿನೆಡೆಗೆ ಸಾಗಿಸುವ ಶಕ್ತಿಶಾಲಿ ಕವಿ ಪರಂಪರೆಯಲ್ಲಿ ಇವರೂ ಒಬ್ಬರು. ಹಾಗಾಗಿ ಸಿದ್ಧಲಿಂಗಯ್ಯನವರಲ್ಲಿ ಕವಿತೆ ರಮ್ಯವಾಗಿ ಕಾಣಿಸಿಕೊಳ್ಳದೆ ಅಂತರಂಗದ ಅಳಲಾಗಿ ಕೊರಗದೆ ಬಂಡಾಯದ ಬೆಂಕಿಯಾಗಿ ಸಿಡಿಯುತ್ತದೆ. "ಕನವರಿಕೆ" ಎಂಬ ಕವಿತೆ ಶ್ರೀ ಶ್ರೀ ಕವಿತಾ ಧೋರಣೆಯಂತೆಯೇ ಸಿಡಿಯುತ್ತದೆ.

> "ಕಲ್ಲು ಕಟ್ಟಡದೆದುರು ಕೈ ಚಲ್ಲಿ ಕುಳಿತವರ
> ನಿಟ್ಟುಸಿರು ಧಿಕ್ಕಾರವಾಗಲೆಂದು
> ಒದೆತ ಹೊಡೆತಕ್ಕೆ ಸಿಕ್ಕಿ ಭೂಗತರಾದವರು
> ಒಂದೇ ನೆಗೆತಕ್ಕೆ ಉತ್ತರ ಕೊಡಲೆಂದು
> ಅಕ್ಷರಗಳ ಅಗ್ನಿಕುಂಡದಲ್ಲಿ
> ಸಿಟ್ಟು ಧಗಧಗಿಸಿ ಉರಿಯುತ್ತಿರಲೆಂದು
> ನನ್ನ ಕವಿತೆ ಹಾರೈಸುತ್ತದೆ." **(ಕನವರಿಕೆ: ಸಿದ್ಧಲಿಂಗಯ್ಯ)**

ಶ್ರೀ ಶ್ರೀಯವರ "ಕವಿತಾ! ಓ ಕವಿತಾ" ಎಂಬ ದೀರ್ಘ ಕವಿತೆಯ ಕೆಲವು ಸಾಲುಗಳು ಹೀಗಿವೆ:

"ಆ ಇರುಳೇ,
ದಟ್ಟಡವಿಯಲಿ ಲಯಾತೀತವಾಗಿ
ಉಲಿವ ನಾನಾ ಜಂತು ದನಿಗಳಲಿ!
ನಕ್ಷತ್ರಾಂತರ್ನಿಬಿಡ ನಿಖಿಲಗಾನ
ಭೂಕಂಪಗಳು, ಸರ್ಕಾರದ ಪತನಗಳು
ವಿಪ್ಲವ, ಯುದ್ಧ
ಎಲ್ಲವೂ ನಿನ್ನ ಚೇತನಾ-ಚೈತನ್ಯ!
ನಿನ್ನ ವಿಶ್ವರೂಪ ಸಾಕ್ಷಾತ್ಕಾರ!
ಭಯಂಕರ ನೋವಿನ ಹಾಡಿನ ಪಲ್ಲವಿ!
ನೇಣು ಏರಿಸಿದ ಶಿರ ಹೇಳಿದ ರಹಸ್ಯ!
ಉನ್ಮತ್ತ ಮನಸಿನ ಜೊನ್ನ ಸಂತಸದಲಿ
ಗೂಬೆಯ ಕರ್ಕಶ ಕೂಗು, ಕಪ್ಪೆಗಳ ವಟವಟ!
ಸಂಪು ಹೂಡಿದ ಕೂಲಿಗಳ
ಸಂಪು ಹೂಡಿದ ಮಡದಿ-ಮಕ್ಕಳ
ಹಸಿವು ಕಗ್ಗತ್ತಲೆಯ ಬೇಗೆಯಲಿ
ಬೇಗುದಿಯಲಿ
ಹಾಹಾಕಾರ! ಆರ್ತನಾದ!
ಒಂದು ಲಕ್ಷ ಲಕ್ಷ ಮಾತುಗಳು
ಶತಕೋಟಿ ಸಮುದ್ರ ತರಂಗಗಳ ಘೋಷಗಳು!"

(ಕವಿತಾ! ಈ ಕವಿತಾ!: ಶ್ರೀ ಶ್ರೀ)

ಸಿದ್ಧಲಿಂಗಯ್ಯನವರ "ನನ್ನ ಕವನ" ಶ್ರೀಶ್ರೀಯವರ ಕವಿತಾ! ಓ ಕವಿತಾದಂತೆಯೇ ಪ್ರಸಿದ್ಧಿಯಾದ ಕವಿತೆ. ಈ ಕವಿತೆ ಸಿದ್ಧಲಿಂಗಯ್ಯನವರ ಇಡೀ ಕವಿತೆಗಳ ಪ್ರಣಾಳಿಕೆಯಂತಿದೆ. ಸಿದ್ಧಲಿಂಗಯ್ಯನವರ ಒಟ್ಟು ಧೋರಣೆಗಳ ಸಣ್ಣ ಚಿತ್ರದಂತಿದೆ.

ಗುಡಿಸಲಿನಲ್ಲಿ ಅರಳುವ ಗುಲಾಬಿ
ನಕ್ಷತ್ರ ನನ್ನ ಕವನ
ಕತ್ತಲೆಯಲ್ಲಿ ಕಾಣುವ ಬೆಳಕು
ಬಂಡಾಯದ ಈ ಕವನ

ಬದುಕ ಪ್ರೀತಿಸುವ ಬಡವರ ಮಗಳು
ನಿರಾಭರಣೆ ಕವನ
ಜನಗಳು ತಿನ್ನುವ ಅನ್ನದ ಅಗುಳು

ಜೀವ ನನ್ನ ಕವನ

ಚಿಮ್ಮಿ ಹರಿಯುವ ರಕ್ತದ ಕೋಡಿ
ಕೆಂಪು ಕಡಲು ಕವನ
ಹೆಣ್ಣು ತುಳುಕಿಸಿದ ಕಣ್ಣೀರಿನ ಹನಿ
ನನ್ನ ಪುಟ್ಟ ಕವನ

ಕಾಡಿನ ನಡುವೆ ಕಂಗೆಟ್ಟವರಿಗೆ
ಕಂಡದಾರಿ ಕವನ
ನಡು ರಾತ್ರಿಯಲಿ ನಡುಗುವ ಜನತೆಗೆ
ಧೈರ್ಯ ಕೊಡುವ ಕವನ

ಮರಳುಗಾಡಿನಲಿ ಬೀಸುತಲಿರುವ
ಬಿರುಗಾಳಿ ನನ್ನ ಕವನ
ಅರಮನೆಯಲ್ಲಿ ಉರುಳುತಲಿರುವ
ಸಾವು ನನ್ನ ಕವನ

ಕುರಿಗಳ ಕಾಯುವ ಕುರುಬನ ಕೂಗು
ಜನರ ಮಾತು ಕವನ
ಸೋತ ರಟ್ಟೆಗಳ ಹೂತ ಕಾಲುಗಳ
ಬೆವರ ಹಸಿರು ಕವನ

ನನ್ನ ಜನದೊಡನೆ ನಾನಾಡಿದ ಮಾತು
ನಾನು ಕೊಡುವ ಕವನ
ನನ್ನ ಜನರ ನಾ ನೋಡಿದ ರೀತಿ
ನನ್ನ ಒಡಲ ಕವನ **(ನನ್ನ ಕವನ: ಸಿದ್ಧಲಿಂಗಯ್ಯ)**

ಶ್ರೀಶ್ರೀಯವರು "ಕವಿತೆ ಎಂದರೆ ಏನು? ಎಂಬ ಪ್ರಶ್ನೆ ಕೇಳಿಕೊಳ್ಳುತ್ತಲೇ "ಕವಿತೆ ಎಂದರೆ ಮಾತುಗಳು, ಗೌರವ ಮತ್ತು ಅಗೌರವದ ಸಮಾಜದೊಳಗೆ ಗೌರವ ಮತ್ತು ಅಗೌರವದ ಪದಗಳೂ ಇವೆ. ದಿಗಂಬರ ಕವಿಗಳು ಒಂದು ಬಗೆಯಲ್ಲಿ ಬೈಗುಳವನ್ನೇ ಪದ್ಯ ಮಾಡುತ್ತಿದ್ದಾರೆ ಎಂಬ ಮಾತುಗಳಿವೆ. ಇವು ಅಗೌರವವನ್ನು ಸೂಚಿಸುತ್ತವೆ. ಆದರೆ ವ್ಯವಸ್ಥೆಯ ರೀತಿಗನುಗುಣವಾಗಿ ಕವಿತೆ ಎಂದರೆ ಆವೇಶ ಕೂಡಾ ಆಗುತ್ತದೆ. ಅದೊಂದು ಸಂವಿಧಾನ. ಕೊಳಕು ತೊಳೆದು ಪರಿಶುಭ್ರಗೊಳಿಸುವುದು ಅದರ ಕೆಲಸ. ಅಂತಿವಾಗಿ ಕವಿತೆ ಅಂದರೆ ಆರೋಗ್ಯ. ಯಾರಾದರೂ ದಿಗಂಬರ ಕವಿತೆಗಳು ಆರೋಗ್ಯಕರವೇ? ಎಂದು ಕೇಳಿದರೆ ನಾನು

ಖಚಿತವಾಗಿಯೂ ಉತ್ತರಿಸುತ್ತೇನೆ ಹೌದು ಎಂದು. ಆ ಮಾತಿಗೆ ಬಂದರೆ ನನ್ನ ಹೆಸರಿನೊಳಗೇ ಎರಡು "s" ಗಳಿವೆ ಶ್ರೀಶ್ರೀ ಎಂದು.

ನಮ್ಮ ದೇಶದೊಳಗೆ ಸಿಂಹಗಳ ಸಂಖ್ಯೆ ಕ್ಷೀನಿಸುತ್ತಿದೆ. ನರಿಗಳ ಅದರಲ್ಲೂ ಬಾಲ ಹರಿದ ನರಿಗಳ ಸಂಖ್ಯೆಯೇ ಜಾಸ್ತಿಯಾಗುತ್ತಿದೆ. ಈ ಕಾಲದೊಳಗೆ ಒಂದು ಸಿಂಹವೂ ಉಳಿಯದಿದ್ದರೂ ಆಶ್ಚರ್ಯಪಡುವ ಪ್ರಮೇಯವಿಲ್ಲ. ಆದರೂ ಮಾನವ ಜಾತಿಯೊಳಗೇ ಸಿಂಹತ್ವ ಮಾತ್ರ ನಾಶವಾಗುವುದಿಲ್ಲ. (ಪಕ್ಕದಲ್ಲೇ ನರಿತನವಿರಬಹುದು. ಅದು ಬೇರೆ ವಿಷಯ)" ಎನ್ನುತ್ತಾರೆ.

ದಲಿತ ಸಾಹಿತ್ಯದ ಬಗ್ಗೆ ಮಾತಾಡುತ್ತ ಸಿದ್ಧಲಿಂಗಯ್ಯನವರು "ದಲಿತ ಸಾಹಿತ್ಯದಲ್ಲೂ ಆಕ್ರೋಶವಿದೆ. ಸಾಹಿತ್ಯ ಕಡಿಮೆ ಎಂಬ ಟೀಕೆ ಹೆಚ್ಚಾಗಿ ಕೇಳಿ ಬರುತ್ತಿದೆ. ಈ ಟೀಕೆಯಲ್ಲೂ ಕೊಂಚ ಸತ್ಯವಿದ್ದರೂ ಇದು ಸಹಾನುಭೂತಿರಹಿತ ಧೋರಣೆ. ಯಾಕೆಂದರೆ ಶತಮಾನಗಳ ನೋವುಂಡ ಜನ ಮಾತನಾಡುವಾಗ ಶೋಷಕರ ರೀತಿಯಲ್ಲಿ ತಣ್ಣಗೆ, ನಾಜೂಕಾಗಿ ಮಾತನಾಡಲಾರರು. ಈ ಆಕ್ರೋಶಕ್ಕೆ ಸಾಮಾಜ, ಸಾಂಸ್ಕೃತಿಕ ಸ್ಥಿತಿಯೇ ಕಾರಣ. ಆದ್ದರಿಂದ ದಲಿತ ಸಾಹಿತ್ಯದಲ್ಲಿ ಬರೀ ಕುಸುರಿಗೆಲಸವನ್ನು ನಿರೀಕ್ಷಿಸುವವರು ಈ ಸಾಹಿತ್ಯಕ್ಕೆ ಅನ್ಯಾಯ ಮಾಡುತ್ತಿದ್ದಾರೆ. ದಲಿತ ಸಾಹಿತ್ಯವನ್ನು ಸಾಮಾಜಿಕ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳುವುದು ಹೆಚ್ಚು ಔಚಿತ್ಯ ಪೂರ್ಣವಾದುದು. ಸಾಂಪ್ರದಾಯಿಕ ವಿಮರ್ಶಾ ಮಾನದಂಡಗಳು ಬದಲಾಗಬೇಕು. ಈ ಸಾಲು ಸಪ್ಪೆಯಾಗಿದೆ. ಈ ಪಂಕ್ತಿ ಖಾರವಾಗಿದೆ ಎಂದು ಭೋಜನ ಪರಿಭಾಷೆಯಲ್ಲಿ ದಲಿತ ಸಾಹಿತ್ಯದ ವಿಮರ್ಶೆ ನಡೆಯುತ್ತಿರುವುದು ವಿಷಾದನೀಯ. ನಮ್ಮ ವಿಮರ್ಶೆಯಲ್ಲಿ ಸಾಮಾಜಿಕ ಪರಿಭಾಷೆ ರೂಪುಗೊಳ್ಳುವವರೆಗೆ ದಲಿತ ಸಾಹಿತ್ಯಕ್ಕೆ ನ್ಯಾಯ ಸಿಕ್ಕುವುದಿಲ್ಲ."[೨]

"ಕ್ರಾಂತಿಕಾರಿ ಕಾವ್ಯ ಜನಪದೀಕರಣಕ್ಕೆ ಒಳಗಾಗಬೇಕು. ಕವಿಗಳು ಜನಸಮುದಾಯದ ಭಾವನೆಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಜಾನಪದ ಸಂಗ್ರಾಹಕ ಜನಪದ ಗೀತೆಗಳನ್ನು ಅಚ್ಚು ಹಾಕಿಸುವ ಕೆಲಸವನ್ನು ಮಾತ್ರ ಮಾಡುತ್ತಾನೆ. ಆದರೆ ಕ್ರಾಂತಿಕಾರಿ ಕವಿ ಜಾನಪದ ಸತ್ವವನ್ನೂಉಂಡು ಬೆಳೆದು ಜನತೆಯ ಋಣವನ್ನು ಹಿಂದಿರುಗಿಸಬೇಕಾಗಿದೆ. ಕ್ರಾಂತಿಕಾರಿ ಹಾಡುಗಳನ್ನು ಜನತೆ ತಮ್ಮದೆಂದು ಸ್ವೀಕರಿಸಬೇಕು. ಕವಿಯ ಹೆಸರೇ ಮರೆತು ಹೋಗಿ ನಮ್ಮ ಕಾವ್ಯ ಜನಪದ ಕಾವ್ಯ ಆಗಬೇಕು."[೨]

ಕವಿತೆ ಹೇಗಿರಬೇಕು? ಮತ್ತು ಕವಿತೆ ಏಕೆ ಹಾಗಾಗಬೇಕು? ಎಂಬ ಎರಡೂ ಪ್ರಶ್ನೆಗಳಿಗೆ ಈ ಇಬ್ಬರೂ ಕವಿಗಳು ಒಂದೇ ರೀತಿ ಮಿಡಿದಿದ್ದಾರೆ. ಈ ಹಿನ್ನೆಲೆಯಲ್ಲಿ ವ್ಯವಸ್ಥೆಯ ರೀತಿ ಅದರ ಸ್ವರೂಪವನ್ನು ಕುರಿತಂತೆ ಅಪ್ಪಟ ಜನಪದ ರೀತಿಯಲ್ಲೇ

[illegible]

ಈ ಇಬ್ಬರು ಕವಿಗಳ ಪ್ರಧಾನ ಕವಿತೆಗಳನ್ನ ಹೋಲಿಸಬಹುದಾಗಿದೆ. ಸಿದ್ಧಲಿಂಗಯ್ಯನವರ "ಅಲ್ಲೆ ಕುಂತವರ", ಶ್ರೀಶ್ರೀ ಅವರ "ಮರೋ ಪ್ರಸ್ಥಾನಂ" ಕವಿತೆಗಳು. ಸಿದ್ಧಲಿಂಗಯ್ಯನವರ "ಅಲ್ಲೆ ಕುಂತವರೆ" ಖಂಡ ಕವಿತೆಗೆ ಜನಪದರ ಮಳೆಯ ಹಾಡು ಪ್ರೇರಣೆ ನೀಡಿದೆ. ಮಳೆಯನ್ನೆ ರೂಪಕವಾಗಿಟ್ಟುಕೊಂಡು ಉದ್ದಕ್ಕೆ ಉಳ್ಳವರ. ಅಧಿಕಾರಿ, ಮಂತ್ರಿಗಳ, ಅಟ್ಟಹಾಸವನ್ನು ಸಾಮಾನ್ಯರ ಅಸಹಾಯಕತೆಯನ್ನು ಬಹು ಸೂಕ್ಷ್ಮವಾಗಿ ವಿವರಿಸಿದ್ದಾರೆ. ವರ್ಗ ಸಂಘರ್ಷಗಳು ಹುಟ್ಟಬೇಕಾದ ಈ ಸ್ಥಿತಿಯಲ್ಲೂ ಆಳುವ ವರ್ಗ ಮತ್ತು ಅವರ ಪ್ರತಿನಿಧಿಗಳಾದ ದೊಡ್ಡವರು ಹೇಗೆ ವೇಷಧಾರಿಗಳಾಗಿದ್ದಾರೆ ಹೇಗೆ ಗಾಂಧಿಯನ್ನು ಗಾಂಧಿಯ ಭಜನೆಯನ್ನು ತಮ್ಮ ಉದ್ದೇಶಕ್ಕೆ ಬಳಸಿಕೊಳ್ಳುತ್ತಾರೆ. ಸಂವಿಧಾನವೇ ಹೇಗೆ ಅವರಿಂದ ದುರ್ಬಳಕೆಯಾಗುತ್ತಿದೆ ಎಂದು ವಿವರಿಸುವ ಕವಿ ಇಲ್ಲಿ ಅಸಹಾಯಕ ಜನರ ಸಾವನ್ನ, ನೋವನ್ನ, ಏನೂ ಮಾಡಲಾಗದೆ ಸುಮ್ಮನೇ ನಿಂತ ಸ್ಥಿತಿಗೆ ಕಾರಣ ಅವರೊಳಗಿರುವ ಭಯವೆನ್ನುತ್ತ ಒಳ್ಳೆಯವರು, ರಕ್ಷಿಸುವವರು ಎನ್ನುವವರ ಬೆನ್ನಲ್ಲೇ ತುಳಿಯುವವರೂ, ಕೊಂದು ಬೇಳೆ ಬೇಯಿಸಿಕೊಳ್ಳೋ ಜನ ವೇಷ ಮರೆಸಿಕೊಂಡು "ಅಲ್ಲೆ ಕುಂತವರೆ" ಎನ್ನುವ ಭೀತಿಯಿಂದ ಮುಕ್ತಾಯ ಮಾಡುತ್ತಾರೆ. ಈ ಖಂಡ ಕಾವ್ಯದಲ್ಲಿ ಪದ ಮತ್ತು ಮಾತು ಎಂಬ ಎರಡು ಭಾವಗಳಿದ್ದು, ಪದ ಮತ್ತು ಮಾತು ಒಂದರ ನಂತರ ಒಂದು ಬರುತ್ತವೆ. ಪದದ ಮೂಲಕ ಪ್ರಕಟವಾಗುವ ಆಶಯ ಮಾತುಗಳಲ್ಲಿ ಮುಕ್ತಾಯವಾಗುತ್ತದೆ. ಈ ಖಂಡ ಕಾವ್ಯದ ಕೆಲ ಭಾಗಗಳನ್ನು ಈ ರೀತಿ ನೋಡಬಹುದು.

ಒಂದಾನೊಂದು ಊರು
ಊರಿಗೆ ಮಳೆಯಿಲ್ಲಾ
ಬೂಟಿನ ಸದ್ದು ಗುಂಡಿನ ಸದ್ದು
ಕತ್ತಿಯ ತಿವಿತ ಕೂಗಾಟ
....
....
ಅನ್ನ ನೀಡದೆ ಹೋದ ನೂರಾರು ದೇವರು
ಹೋದಾವು ಬಿದ್ದಾವು ಪಾಳುಬಾವಿ
ಅನ್ನ ನೀಡದ ದೊರೆಯ ದರಬಾರು ನಿರುವಾದು
ಬಡಜನ ಬುಡುತಾರೆ ಬಾಯಿ ಬಾಯಿ
ವಟ್ಟೆಗಿಲ್ಲದ ಜನರ ವಣನೆತ್ತಿಮ್ಯಾಲೇರಿ
ಕುಣಿಯುತ್ತ ಬರುತಾವೆ ಕರೆಬಾಣ
ಯಾರಾನ ಕದ್ದಾರೆ ಮರುಮಾತು ಕೊಟ್ಟಾರೆ
ಬಯಲಲ್ಲಿ ನಡಸವರೆ ಕತ್ತಿವರಸೆ

ಸುತ್ತಮುತ್ತ ಹಸಿರು ಮಳೆ
ಬೆಳೆಯುತಾರೆ ಬೆಂಕಿ ಬೆಳೆ
ಕಪ್ಪು ಜನರ ತಲೆಯ ಮ್ಯಾಲೆ
....
....
ಕಬ್ಬುಣದ ಭೂಮಿನ್ ಸದ್ದು
ಘಳಾರ್ ಅನ್ನೋ ಗುದ್ದು
ಮಳೆ ನೀರು ನನ್ ನೀರು
ನಾನು ನ್ಯಲುಕ್ ಕಚ್ಚಂಡ್ ಬುಟ್ಟೆ
ನೆತ್ತಿ ಮ್ಯಾಗಳ ಅಂಚು ಕಟ್ಗೆ ಕಡೀಂದ
ನಾಲ್ಕ್‌ಜನ ನ್ಯಂದೋಗಿರೋ ಮನೇವಳೀಕೆ
ಪುದೀರ್ನೆ ತೂರ್ ಬಂದ್ರು
ವಬ್ಬೊಬ್ಬರ್ಗ್ಗು ಮೂರು ಮೂರ್‌ಕಣ್ಣು
ಕೆಂಪು ಬಿಳಿ ಹಸ್ರು ರವರವ ಉರಿತವೆ
ಬಂದೋರೆ ಕುಂತಿದ್ದೋನ್ ಮುಂಗೈಯಿಡ್ಕಂಡು
ಕೈ ಉಳ್ಕಂಗ್ ನುಲ್ಚಿ ತಾಂಕ್ಯೂ ಅಂದ್ರು
ಗುರ್ತು ಕೂನು ಇಲ್ದೋರು
ನಂಗೊಂದು ಗೊತ್ತಾಗ್ದೆ ಈಕ್ ಮೆಟ್ಟಂಗಾದೆ

ಪದ: ಐದು ವರ್ಷದ ಹಿಂದೆ ಓಟಿಗೆ ಬಂದೋರು
ನೋಟನ್ನು ಕೊಟ್ಟೋರು ಅಲ್ಲವೇನೋ
ಕೊಟ್ಟ ಸಾಲವ ಜನರು ಯಿಂದಕ್ಕೆ ಕೊಡದಿರಲು
ಕೈ ಕಾಲು ಮುರಿಯೋರು ಅಲ್ಲವೇನೋ
ಮಾತು ಕೇಳದ ಜನರ ನೇತು ಹಾಕಲು ಮರಕೆ
ಹಾವಿನ ಹಗ್ಗವ ತಂದವರು
ಮಂತ್ರಿ ಮಾನ್ಯರ ಜೊತೆಗೆ ತಂತ್ರವ ಮಾಡೋರು
ಚೂರಿಯ ಗೆಳೆಯರು ಅಲ್ಲವೇನೋ
ಗಾಂಧೀ ಮಹತ್ಮನ ವಾರಸುದಾರರು
ರಾಮ ನಾಮವ ಜಪಿಸಿ ಬಂದರಲ್ಲೊ
ಕಚ್ಚೆ ಟೋಪಿಯ ಒಳಗೆ ಹೆಗಲ ಜೋಳಿಗೆ ತುಂಬ
ಬಡವರ ತಲೆಗಳ ತಂದರಲ್ಲೊ
....

....

"ಸ್ವಾಮಿ ಬಡರ್ ಮೇಲ್ ದಯಾ ದೇವರ್ ಮ್ಯಾಲೆ ಭಕ್ತಿ
ಎಳ್ಡೂ ಇರೋ ನಿಮ್ಮಂತೋರು ಈತರ ಕ್ವಲೆ
ಮಾಡ್ಬಾಡಿ ನನ್ ಬುಟ್ಬುಡಿ" ಅಂದೆ
ಅವ್ರು ಕ್ವಾಪ ನತ್ತಿಗೇರಿ
"ಲೋಪರ್ದೇಸ್ ನನ್ ಮಕ್ಳವಟ್ಟಿಗಿಟ್ಟಿಲ್ಲ
ತಿಕ್ ಬಟ್ಟಿಲ್ಲ ಎಷ್ಟಲೇ ಕೊಬ್ಬು
ನಾವು ಯಿಂಜಿನ್ನು ನೀವ್ ಪೆಟ್ಟಿಕಳ್ಳೆ
ನಿಮ್ಮುಂದೆ ನಾವ್ ನಮ್ಮಿಂದೆ ನೀವ್"
ಅಂತ ಜಾಡಿಸಿ ವದ್ರು
ಬೂಟ್ ಬಾಯ್ಗಿಕ್ಕುದ್ರು
....
....

ಅಲ್ಲಿ ದ್ವಡ್ ದ್ವಡ್ ಮನಸ್ರಯಿಂದ್ಗಡೆ
ಮರೇಲಿ ಯಾರೋ ಕುಂತಿದ್ರು
ಅವ್ರುನ್ನ ನೋಡ್ದೇಟಿಗೆ ನನ್ಗೆ
ಭೀತಿ ಬಡೀತು ಮಂಕು ಕವೀತು
ಅಲ್ಲೆ ದ್ವಡ ಮನಷ್ರಿಂದೆ

ಪದ: ಅಲ್ಲೆ ಕುಂತವರೆ ಅವರು
ಅಲ್ಲೇ ಕುಂತವರೆ
ಬೇವಿನ ಸೊಪ್ಪು ಹಾಸವರೆ
ಬೇವಿನ ಸೊಪ್ಪು ಹೊದ್ದವರೆ
ಹಳೇ ಕ್ಯರವ ಕಾಯಿೀಸಿ
ಮಯ್ಯಿಗೆ ಬರೆಯ ಎಳೆಯೋರು
ಸೈಜುಕಲ್ಲು ಹೊರುಸೋರು
ಹುಣಸೆ ಮರಕೆ ಕಟ್ಟೋರು
ಅಲ್ಲೆಕುಂತವರೆ ಅವರು
ಅಲ್ಲೇ ಕುಂತವರೆ **(ಅಲ್ಲೆ ಕುಂತವರೆ: ಸಿದ್ಧಲಿಂಗಯ್ಯ)**

'ಮತ್ತೊಂದು ಪ್ರಸ್ಥಾನ' ಶ್ರೀಶ್ರೀ ಬರೆದ ಜನಪದ ಶೈಲಿಯ ದೀರ್ಘ ಕವಿತೆ ಅಲ್ಲೆ ಕುಂತವರೆ ಕವಿತೆಯಂತೆ ಇಲ್ಲೂ ಜನಸಾಮಾನ್ಯರು, ಬಡರೈತರು ಶೋಷಣೆಗಳಿಗೆ

ಈಡಾಗುತ್ತಿರುವ ಪರಿಯನ್ನು ಹೇಳುತ್ತದೆ. ಆದರೆ ಅಲ್ಲಿಯ ಕವಿತೆಯಂತೆ ಇಲ್ಲಿ ಅನುಭವಿಸುತ್ತ ಕೂರುವ ಜನರಿಗೆ ಕವಿ ಸಮ್ಮತಿಸದೆ ದೊಡ್ಡ ವಿಪ್ಲವಕ್ಕೆ ಕರೆ ಕೊಡುತ್ತಾರೆ. ಈ ಕವಿತೆಯ ಇನ್ನೊಂದು ವಿಶೇಷವೆಂದರೆ ವಿಪ್ಲವ ಹೋರಾಟದಲ್ಲಿ ಭಾಗವಹಿಸಿ ಬಲಿಯಾದ ೧೨ ಜನರನ್ನು ಅವರು ಈ ಕವಿತೆಯಲ್ಲಿ ದಾಖಲಿಸಿದ್ದಾರೆ. ಇಡೀ ಕವಿತೆ ಆವೇಶ ಮತ್ತು ರೋಷಗಳ ದಳ್ಳುರಿಯಂತಿದೆ. ಸೇಡು ಪ್ರತಿಕಾರದ ಪ್ರತೀಕದಂತಿದೆ. ಶೋಷಣೆ ಅನುಭವಿಸುತ್ತಿರುವ ಸಮಾಜದ ಸಾಮಾನ್ಯನ ಭಾವದ ವಿಷಯದಲ್ಲಿ ಈ ಇಬ್ಬರೂ ಕವಿಗಳ ಸ್ಪಂದನೆ ಮಾತ್ರ ಅಚ್ಚರಿ ಹುಟ್ಟುವಷ್ಟು ಸಾಮ್ಯತೆಯನ್ನು ಪಡೆದಿದೆ.

> "ಏನಯ್ಯ ಬೇಸಾಯಗಾರ
> ಅಯ್ಯಯ್ಯೋ ಜೀತಗಾರ
> ಎಷ್ಟು ದಿನ ಈ ಚಾಕರಿ
> ಎಷ್ಟು ದಿನ ಈ ನೌಕರಿ
> ನಿನ್ನಾಳೋ ಧಣಿಯವನು
> ಒಬ್ಬ ಶುದ್ಧ ಪೋಕರಿ
> ನಿನ್ನ ಬೆವರ ಹಿಂಡಿ
> ನಿನ್ನ ಬದುಕಿನಿಂದ
> ರೂಪಾಯಗಳಿಗೆ ಹಿಂಡುತಾನೆ– ಅವು
> ಬರದಿದ್ರೆ ಹಿಂಡಿ ಗುಂಜುತಾನೆ– ನಿನ್ನ
> ಸಾಲದಲ್ಲಿ ಮುಳುಗ್ಸಿ
> ಬಡ್ಡೀಯೂ ಬೆಳೆಸಿ
> ನಿನ್ನ ಗುಂಡಿಗೆಯ ನಂಚಿಕೋತಾನೆ
> ಏನು ಧಣಿ ಈ ಘೋರ
> ಏನೆಂದು ಕೇಳಿದ್ರೆ
> ಕೆರದಲ್ಲೆ ಹೊಡೆಯುತಾನೆ
> ಕೆಟ್ಟ ಮಾತು ಬೈಯುತಾನೆ
> ಆಸ್ತಿ ಕರಗಿ ಕಷ್ಟ ಬೆಳೆದು
> ಸಾಯ್ತಿದ್ರೆ ದುಡ್ಡು
> ತರ್ತೀಯಾ ತಾ ಅಂತಾನೆ– ಇಲ್ಲಾ ನಿನ್ನ
> ಹೆಂಡ್ತೀನೇ ಬಾ ಅಂತಾನೆ– ಇಲ್ಲಾ ನಿನ್ನ
> ಮಗಳ್ನೇ ಕೊಡಂತಾನೆ –ಅಂತೋನ್ನ
> ಕೊಡಲೀಲೆ ಕಡೀಬೇಕಯ್ಯಾ

ಕುಡುಗೋಲಲಿ ತರೀಬೇಕಯ್ಯಾ
ಯಿಪ್ಲವ ಕರೆದೈತಯ್ಯಾ
....
....
ಯಿಪ್ಲವ ಏನನ್ನುತೈತೆ
ಮನ್ಸಾಗೊಂದೆ ಸಾವಂತೈತೆ
ಕಟ್ಟು ಹರಿದು ಬಾರೆಂತೈತೆ
ಕತ್ತಿ ಹಿರಿದು ಏಳಂತೈತೆ
ಯಿಪ್ಲವ ನಿನ್ನ ದಮ್ಮೆನುತೈತೆ
....
....
ರೈತ ಕಾರ್ಮಿಕ ಜನ ಸ
ಮೂಹದ ಜೊತೆ ಬೆರೆಯಿರಿ
ಬೂರ್ಜ್ವಾಗಳ ಸಂವಿಧಾನ
ಬೂಷ್ಟನೆಲ್ಲಾ ಕೆರೆಯಿರಿ
ಭೂತಳ ಸ್ವರ್ಗದ ನಿರ್ಮಾಪಕ
ರಾಗಿ ನಿಲ್ಲಿರಿ– ಆ ದಿಕ್ಕಿಗೆ
ನಿಮಗೆ ದಾರಿ ತೋರುವ
ದಿಕ್ಸೂಚಿ ಜನವರಳಿದೆ– ಅಂತಹವರಲ್ಲಿ
ಕೆಲವರು ಸತ್ತರು
ಎಷ್ಟೋ ಜನ ಬದುಕಿಹರು
ಎಲ್ಲರದೂ ಒಂದೆ ಲಕ್ಷ
ಒಂದೇ ಗುರಿ ಒಂದೇ ಧ್ಯೇಯ
ಅದೆ ನಮಗಪಾಥೇಯ
ಯಿಪ್ಲವನ ಬೆಳಗಿಸಯ್ಯಾ
ಚಂದ್ರ ಪುಲ್ಲಾರೆಡ್ಡಿ[೧]
ತರಿಮೆಲ ನಾಗಿರೆಡ್ಡಿ[೨]
ಹಾಕಿದ ಗಡಿಕೂಗು
ಸತ್ಯಮೂರ್ತಿ[೩] ಪರಾಕ್ರಮ
ಚಾರು ಮಜೂದಾರ್[೪] ಪವರ್
ನಮ್ಮವೇ ಡಿಯರ್ ಬ್ರದರ್
ಕೊಲ್ಲಿಪರಾ[೫] ಪಂಚಾದಿ[೬]

ಅಲ್ಲಿಪರುಂ[೭] ಸಿಮ್ಹಾದ್ರಿ[೮]
ಚಾಗಂಟಿ[೯] ತಾಮಾಡಾ[೧೦]
ವೆಂಪಟಾಪು[೧೧] ಕೈಲಾಸಂ[೧೨]
ಇವರೆಲ್ಲಾ ಯಾರಾಧಿ
ಯಾರರೋ ತಮ್ಮಯ್ಯ
ಇವರ ಹಾದಿ ನಿಂದಯ್ಯ
ಯಿನ್ನು ಭಯವಿಲ್ಲಯ್ಯ
ಕೆಂಪು ಕೆಂಪು ನೆತ್ತರಿನ
ಹೊಳೆಯಲ್ಲಿ ಈಜಯ್ಯಾ" **(ಮರೋ ಪ್ರಸ್ಥಾನಂ: ಶ್ರೀಶ್ರೀ)**

ಜನಪದ ಕಾವ್ಯದ ಪ್ರಭಾವ ಪ್ರೇರಣೆ ಈ ಇಬ್ಬರೂ ಕವಿಗಳ ಮೇಲಾಗಿದ್ದರೂ ಅದರ ತಾತ್ವಿಕ ನೆಲೆಯಲ್ಲಿ ತದ್ವಿರುದ್ಧವಾದ ವ್ಯತ್ಯಾಸವಿದೆ.

ಜನಪದ ಕಾವ್ಯಕ್ಕಿಂತ ಭಿನ್ನವಾದ ನೆಲೆಯಲ್ಲಿ ಈ ಕಾವ್ಯಗಳಿವೆ. ಜನಪದದ ಲಯಗಾರಿಕೆ, ನುಡಿಗಟ್ಟನ್ನು ಕಸಿಮಾಡಿ ಈ ಕವಿಗಳು ತಮ್ಮ ಕಾವ್ಯೋದ್ದೇಶಕ್ಕಾಗಿ ಬಳಸಿಕೊಂಡಿದ್ದಾರೆ.

ಜನಪದರಲ್ಲಿ ಅನಕ್ಷರತೆ ಮುಗ್ಧತೆ ಇದೆ. ಅಸಮಾನತೆಯ ವ್ಯವಸ್ಥೆಯ ವಿರುದ್ಧ ಹೋರಾಡದೆ ಯಥಾಸ್ಥಿತಿಯನ್ನ ಒಪ್ಪಿಕೊಳ್ಳುವ ಕಷ್ಟ ಬಂದಾಗ ದೈವದ ಮೊರೆ ಹೋಗುವ ಜನಪದರಿಗೂ ಅಸಮಾನ ವ್ಯವಸ್ಥೆಯ ವಿರುದ್ಧ ಬಂಡೆದ್ದು ಹೋರಾಟಕ್ಕಿಳಿಯಬೇಕೆನ್ನುವ ಈ ಕವಿಗಳಿಗೂ ಮೂಲಭೂತ ವ್ಯತ್ಯಾಸಗಳಿವೆ.

ಒಟ್ಟಾರೆ ಶ್ರೀ ಶ್ರೀ ಮತ್ತು ಸಿದ್ಧಲಿಂಗಯ್ಯನವರ ನಡುವಿನ ಸಮಾನ ಅಂಶಗಳನ್ನು ಈ ರೀತಿ ಪಟ್ಟಿ ಮಾಡಬಹುದು.

೧. ಇಬ್ಬರೂ ತಮ್ಮ ಕವಿತೆಗಳಿಂದ ಆಯಾ ಸಾಹಿತ್ಯಗಳಲ್ಲಿ ಹೊಸ ಪರಂಪರೆಯನ್ನೇ ನಿರ್ಮಿಸಿದರು.

೨. ಇಬ್ಬರ ಹಾಡುಗಳಿಗೆ ಮಾರ್ಚ್ ಸಾಂಗ್ ಗುಣಗಳಿವೆ. ಇಬ್ಬರ ಹಾಡುಗಳೂ ಅನೇಕ ಹೋರಾಟಗಳ ಜನಪ್ರಿಯ ಗೀತೆಗಳೂ ಆಗಿವೆ.

೩. ಈ ಇಬ್ಬರ ಹಾಡಿನಲ್ಲಿ ಎರಡು ಪ್ರಧಾನ ಅಂಶಗಳಿವೆ. ಒಂದು ತನ್ನವರಿಗಾಗಿ ಮಿಡಿಯುವುದು, ಇನ್ನೊಂದು ತನ್ನವರನ್ನ ಹಿಂಸಿಸುವ ಪರರಿಗಾಗಿ ಆಕ್ರೋಶ ತಾಳುವುದು.

೪. ಡೈನಾಮೈಟ್‌ನ ಸ್ಫೋಟದಂತೆ ಸಿಡಿಯುವ ಇವರ ಕವಿತೆಗಳ ಮೂಲ ಆಶಯ ಮಾನವೀಯತೆ.

೫. ಸಮ ಸಮಾಜದ ಕನಸನ್ನ ಈ ಇಬ್ಬರೂ ಕವಿಗಳ ಕವಿತೆಗಳಲ್ಲಿ ಗುರ್ತಿಸಬಹುದು.

೬. ಈ ಇಬ್ಬರೂ ಗ್ರಂಥ ಭಾಷೆಗಿಂತಲೂ ಜನಭಾಷೆಗೆ ಹೆಚ್ಚು ಮಿಡಿದಿದ್ದಾರೆ. ಜನಪದವನ್ನು ತಮ್ಮ ಉದ್ದೇಶಕ್ಕೆ ತಕ್ಕಂತೆ ಕಸಿ ಮಾಡಿಕೊಂಡಿದ್ದಾರೆ.

೭. ಈ ಇಬ್ಬರ ಕವಿತೆಗಳಲ್ಲಿ ಹಳೆಯ ಪ್ರತಿಮೆಗಳನ್ನ ಹೊಸ ಅರ್ಥದಲ್ಲಿ ಬಳಸಿಕೊಳ್ಳುವ ಉಮೇದು ಕಂಡುಬರುತ್ತವೆ.

೮. ಇಬ್ಬರನ್ನು ಉತ್ಪ್ರೇಕ್ಷಾಲಂಕಾರದ ಕವಿಗಳು ಎನ್ನಬಹುದು.

೯. ಇಬ್ಬರೂ ಆಯಾ ನೆಲ ಸಮಾಜಕ್ಕೆ ಸ್ಪಂದಿಸಿರುವಂತೆಯೇ ಪ್ರಪಂಚದ ಕೆಲ ಪ್ರಗತಿಶೀಲ ಚೇತನಗಳ ಚಿಂತನೆಗಳನ್ನು ತಮ್ಮ ಕವಿತೆಗಳ ವಸ್ತು ಮಾಡಿಕೊಂಡಿದ್ದಾರೆ.

೧೦. ಈ ಇಬ್ಬರೂ ಸರಳ ಮತ್ತು ಗಂಭೀರ ಕವಿತೆಗಳನ್ನ ಬರೆದಿದ್ದಾರೆ. ಸರಳ ಹಾಡುಗಳನ್ನ ನೇರವಾಗಿ ಜನ ಸಾಮಾನ್ಯರಿಗೆ ತಲುಪಿಸಲು, ಸಿದ್ಧಾಂತಗಳನ್ನು ಜನರ ಬಳಿ ತರಲು ಬಳಸಿಕೊಂಡರೆ, ಕಾವ್ಯಾಭಿಮಾನಿಗಳನ್ನ ಸಾಹಿತ್ಯವನ್ನ ಗಂಭೀರವಾಗಿ ಪರಿಗಣಿಸುವವರನ್ನ ದೃಷ್ಟಿಯಲ್ಲಿರಿಸಿಕೊಂಡು ಗಂಭೀರ ಕವಿತೆಗಳನ್ನ ಬರೆದಿದ್ದಾರೆ.

೧೧. ಇಬ್ಬರಲ್ಲೂ ಕಥನ ಕವಿತೆಗಳಿವೆ. ದೀರ್ಘ ಕವಿತೆಗಳಿವೆ. ಮಾರ್ಕ್ಸ್‌ವಾದಿ ಚಿಂತನೆಗಳ ಒಲವುಗಳಿವೆ. ಸಾರ್ವತ್ರಿಕ ಭಾವಗಳಿವೆ.

೧೨. ಶ್ರೀ ಶ್ರೀ ಎನ್.ಟಿ. ರಾಮರಾಯರನ್ನ ಬೆಂಬಲಿಸಿದಂತೆ ಸಿದ್ಧಲಿಂಗಯ್ಯ ರಾಮಕೃಷ್ಣ ಹೆಗ್ಗಡೆಯವರನ್ನ ಬೆಂಬಲಿಸಿದ್ದಾರೆ.

೧೩. ಈ ಇಬ್ಬರೂ ಕವಿಗಳು ಸಿನಿಮಾರಂಗವನ್ನು ನಾಟಕ ರಂಗವನ್ನು ದೂರವಿಟ್ಟುಕೊಂಡು ಬಂದಿಲ್ಲ.

೧೪. ಈ ಇಬ್ಬರೂ ಕವಿಗಳು ಹಳ್ಳಿ ಮತ್ತು ನಗರಗಳ ಜನರೊಂದಿಗೆ ಬೆರೆಯುತ್ತ ಹೋರಾಟಗಳಲ್ಲಿ ಭಾಗವಹಿಸುತ್ತ ಆ ಹೋರಾಟಗಳ ನೈಜ ಅನುಭವಗಳನ್ನೇ ಕಾವ್ಯ ಮಾಡಿದ್ದಾರೆ.

ಭಿನ್ನತೆಯ ಅಂಶಗಳು

ಸ್ವತಂತ್ರೋತ್ತರ ಕನ್ನಡ ಮತ್ತು ತೆಲುಗು ಕಾವ್ಯಗಳಲ್ಲಿ ಅನೇಕ ಭಿನ್ನತೆಯ ಅಂಶಗಳಿವೆ. ಎರಡೂ ಕಾವ್ಯಗಳು ಬೆಳೆದು ಬಂದಿರುವ ಹಿನ್ನೆಲೆಗಳೇ ಇದಕ್ಕೆ

ಕಾರಣವೆನ್ನಬಹುದು. ಈ ಎರಡೂ ರಾಜ್ಯಗಳ ಆರ್ಥಿಕ ಮತ್ತು ರಾಜಕೀಯ ಪರಿಸರಗಳಲ್ಲಿ ವ್ಯತ್ಯಾಸಗಳಿವೆ. ಶೋಷಣೆಯ ವಿಧಾನಗಳಲ್ಲಿ ಭಿನ್ನತೆಗಳಿವೆ. ಹಾಗೇ ಎರಡೂ ಕಾವ್ಯಗಳ ಪ್ರತಿಭಟನಾ ವಿಧಾನವೂ ಭಿನ್ನವಾಗಿವೆ.

ಶ್ರೀಶ್ರೀ ಮತ್ತು ಸಿದ್ಧಲಿಂಗಯ್ಯನವರ ತಲೆಮಾರುಗಳಲ್ಲಿ ವ್ಯತ್ಯಾಸಗಳಿವೆ. ಹಾಗೂ ಬದುಕಿನ ಕ್ರಮಗಳಲ್ಲೂ ವ್ಯತ್ಯಾಸಗಳಿವೆ. ಶ್ರೀಶ್ರೀ ಹುಟ್ಟಿನಿಂದಲೇ ತಾಯಿ ಕಳಕೊಂಡು ಮಲತಾಯಿಯ ಆಶ್ರಯದಲ್ಲಿ ಬೆಳೆದರು. ಪ್ರೌಢಶಾಲೆಯಲ್ಲಿರುವಾಗಲೇ ಸಾಹಿತ್ಯ ರಚನೆಗೆ ಇಳಿದರು. ಬಿ.ಎ., ಓದಿದ ಇವರು ಹಿಡಿದ ಹುದ್ದೆಗಳು ಹಲವಾರು ಎಲ್ಲೂ ಅಷ್ಟು ಸುಖ ಅನುಭವಿಸದೆ ಅಲೆಮಾರಿಯಂತೆಯೇ ಬದುಕಿದವರು ಕಪ್ಪೆ ಮೇಷ್ಟ್ರು ಎಂದು ಕರೆಸಿಕೊಂಡ ಲ್ಯಾಬ್ ಕ್ಯೂರೇಟರ್ ಹುದ್ದೆ, ವಿಶಾಖಪಟ್ಟಣದ ಬಂದರಿನಲ್ಲಿ ಟೈಮ್‌ಕೀಪರ್ ಹುದ್ದೆ, ವೆಯಿಂಗ್‌ಕ್ಲರ್ಕ್ ಹುದ್ದೆ, ಆಂದ್ರ ಪ್ರಭ ಉಪಸಂಪಾದಕ ಹುದ್ದೆ, ಮದ್ರಾಸಿನ ಆಕಾಶವಾಣಿ ಕೇಂದ್ರದಲ್ಲಿ ನೌಕರಿ, ಚಲನಚಿತ್ರರಂಗದಲ್ಲಿ ಸೇವೆ, ಹೈದ್ರಾಬಾದ್‌ನಲ್ಲಿ ಪೌರಸಂಬಂಧ ಕೆಲಸಗಾರನಾಗಿ ಸೇವೆ, ಆನಂದವಾಣಿ ಎಂಬ ಪತ್ರಿಕೆಯ ಸಂಪಾದಕ ೧೯೬೮ರಲ್ಲಿ ಜಿ. ವರಲಕ್ಷ್ಮೀ ನಿರ್ದೇಶನದ “ಮೂಗ ಜೀವಲು” & ೧೯೫೨ರಲ್ಲಿ ಬಿಡುಗಡೆಯಾದ ‘ಪ್ರಪಂಚಂ’ ಸಿನಿಮಾಗಳಲ್ಲಿ ನಟನಾಗಿ ಕಾಣಿಸಿಕೊಂಡರು. ೧೯೫೪ರಲ್ಲಿ ಸ್ಟಾಕ್‌ಹೋಂನಲ್ಲೂ ಜರುಗಿದ ಪ್ರಪಂಚ ಮಹಾಸಭೆಯಲ್ಲಿ ಭಾಗವಹಿಸಲು ಮೊದಲ ವಿದೇಶಿಯಾತ್ರೆ ಕೈಗೊಂಡರು. ‘ಅರಸಂ’ ಮತ್ತು ‘ವಿರಸಂ’ನ ಅಧ್ಯಕ್ಷ ಪದವಿಗೇರಿದರು. ೩ ಸಲ ರಷ್ಯಾ ಯಾತ್ರೆ, ೧೯೮೧ರಲ್ಲಿ ಚಿಗಾಗೋಯಾತ್ರೆ ಕೈಗೊಂಡರು.

ಈ ಶತಮಾನದ ಮಧ್ಯಬಾಗದಲ್ಲಿ ಶ್ರೀಶ್ರೀ ಮಹಾಕವಿಯಾಗಿ, ಮೇಧಾವಿಯಾಗಿ ಪ್ರಸಿದ್ಧರಾದರು, ಯುವಕರಿಗೆ ಆಕರ್ಷಕ ಆದರ್ಶವಾದರು. ಅವರ ಚಮತ್ಕಾರದ ಮಾತುಗಳೂ, ಉತ್ತರಗಳೂ ಒಳಹೊರಗಿಲ್ಲದ ಸ್ವಭಾವವೂ ನಾಲ್ವರೊಂದಿಗೆ ಬರೆಯುವ ಸ್ವಭಾವವು ಅವರನ್ನ ಗಡಿಗಳಾಚೆಗೂ ಪ್ರಸಿದ್ಧರನ್ನಾಗಿಸಿತು. ‘ಈ ಯುಗ ನನ್ನದು’ ಎಂದು ಹೇಳಿದ ಶ್ರೀ ಶ್ರೀ ‘ರಕ್ತದಿಂದ ರಾಗಾಲಾಪನೆ’, ‘ಬೆಂಕಿಯಿಂದ ಮಾತನಾಡಿಸಿದ’, ‘ಬಂಡಾಯ ನನ್ನ ಉಸಿರು’ ಎಂದ ಮಹಾಕವಿ ಶ್ರೀಶ್ರೀ. ೧೯೮೩ರಲ್ಲಿ ಮರಣ ಹೊಂದಿದರು.

ಸಿದ್ಧಲಿಂಗಯ್ಯ ಜೀತಗಾರಿಕೆಯ ನೋವಿನೊಳಗಿಂದ ಹುಟ್ಟಿದ ಕವಿ. ಹುಟ್ಟಿನಲ್ಲೇ ಇಬ್ಬರಿಗೂ ಅಗಾಧ ವ್ಯತ್ಯಾಸವಿದೆ. ಬಡತನದ ಬಿರು ಬೆಂಕಿಯೊಳಗೇ ಅರಳುತ್ತ ಬಂದ ಈ ಕವಿಯ ಜೀವನ ಶ್ರೀಶ್ರೀಯವರಂತೆ ನಗರಗಳಲ್ಲಿ ಮಾತ್ರ ಚಲಿಸದೆ ಹಳ್ಳಿ ಮತ್ತು ನಗರಗಳೆರಡರಲ್ಲೂ ಚಲಿಸುತ್ತದೆ. ಬಾಲ್ಯದಿಂದಲೂ ಪ್ರತಿಭಾವಂತನಾದ ಈ ಕವಿ ಪ್ರಾಥಮಿಕ ಶಾಲೆಯಿಂದಲೂ ಪ್ರತಿಭಾವಂತನಾದ ಈ ಕವಿ ಪ್ರಾಥಮಿಕ ಶಾಲೆಯಿಂದಲೂ ಸೊಗಸಾದ ವಿದ್ಯಾರ್ಥಿಯಾಗೇ ಅನಿಸಿಕೊಂಡವರು. ನಗರದ

ಬಡವರು ಹೇಗೆ ಬೆಳೆಯುತ್ತಾರೆ ಎಂಬುದಕ್ಕೆ ಸಿದ್ಧಲಿಂಗಯ್ಯ ಅತ್ಯುತ್ತಮ ಉದಾಹರಣೆ ಹುಟ್ಟಾ ಹೊಲೆಯನಾದ ಇವರ ಕಥೆಗೆ ಶ್ರೀಶ್ರೀಯವರ ಕಥೆಯಂತೆ ಬಡತನ ಮಾತ್ರ ಅಂಟಿಕೊಂಡಿಲ್ಲ ಜಾತಿಯ ಕ್ರೂರ ಹಸ್ತವೂ ಇವರ ತಲೆಯ ಮೇಲೇ ತೂಗುತ್ತಾ ಹೋಗಿದೆ. ಸ್ಮಶಾನದ ಗೋರಿಯ ಮೇಲೆ ಓದುತ್ತ ಕವಿಯಾದ ಇವರ ಎಷ್ಟೋ ಕವಿತೆಗಳು ಅಪ್ಪನ ದುಡುಕಿಗೆ ಸಿಕ್ಕು ಸುಟ್ಟು ಹೋಗಿವೆ. ಉಳಿದ ಕವಿತೆಯಲ್ಲೂ ಅವರು ಕನ್ನಡ ಕಾವ್ಯಕ್ಕೇ ಶಾಕ್ ನೀಡುವ ಶಕ್ತಿ ಹೊಂದಿದ್ದರು ಎಂಬುದು ಸಾಮಾನ್ಯವಲ್ಲ. ಎಂ.ಎ., ಪಿಹಚ್.ಡಿ. ಮಾಡಿದ ಇವರು ವಿಶ್ವವಿದ್ಯಾಲಯದ ಉಪನ್ಯಾಸಕರಾಗಿ ವಿಭಾಗದ ಮುಖ್ಯಸ್ಥರಾಗಿ, ಪ್ರೊಫೆಸರ್ ಆಗಿದ್ದಲ್ಲದೆ, ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಎಂ.ಎಲ್.ಸಿ. ದಲಿತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಹೀಗೆ ನಾಡಿನ ನಾನಾ ರಂಗಗಳಲ್ಲೂ ಹೆಸರಾದವರು. ಕವಿತೆ, ನಾಟಕ, ವಿಮರ್ಶೆ, ಸಂಶೋಧನೆ, ಜನಪದ, ಸಿನಿಮಾ, ವಿಮರ್ಶೆ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಪ್ರಸಿದ್ಧರಾದವರು.

ಸಿದ್ಧಲಿಂಗಯ್ಯನವರ "ಕತ್ತೆ ಮತ್ತು ಧರ್ಮ" ಶ್ರೀಶ್ರೀಯವರ "ನಿನ್ನೆಯ ಜಟಕಾವಾಲಾ" ಹೋಲಿಸಿ ನೋಡಬಹುದಾದ ಕಥನ ಗೀತೆಗಳು ಇಲ್ಲಿ ಇಬ್ಬರಲ್ಲೂ ದೃಷ್ಟಿ ಭಿನ್ನತೆಗಳಿವೆ. ನಿರೂಪಣಾ ವೈವಿಧ್ಯಗಳಿವೆ. ಸಿದ್ಧಲಿಂಗಯ್ಯನವರ "ಕತ್ತೆ ಮತ್ತು ಧರ್ಮದಲ್ಲೂ" ಲೋಕದ ಧಾರ್ಮಿಕ ಮೌಢ್ಯತೆಯೇ ಕಥನವಾಗಿದೆ. ದೇವರು & ಧರ್ಮಗಳು ಹೇಗೆ ಸಾಮಾನ್ಯರ ಮೌಢ್ಯಗಳಿಂದಲೂ ತಮ್ಮ ಬೇಳೆ ಬೇಯಿಸಿಕೊಳ್ಳುವ ವಸ್ತುಗಳಾಗುತ್ತವೆ ಎಂಬುದನ್ನು ಕವಿ ಇಲ್ಲಿ ಸೂಕ್ಷ್ಮವಾಗಿ ಶ್ರೀಮಂತ, ರಾಜಕಾರಣಿ ರಾಜನನ್ನ ತರುವುದರ ಮೂಲಕ ಇಡೀ ವ್ಯವಸ್ಥೆ ಹೇಗೆ ಸಾಮಾನ್ಯರನ್ನ ದೂರ ತಳ್ಳುತ್ತದೆ ಎಂಬುದನ್ನು ಚಿತ್ರಿಸಿದ್ದಾರೆ. ತನ್ನ ಸಾಕುಮಗಳಂತಿದ್ದ ಕತ್ತೆ ಸತ್ತಾಗ ಅದನ್ನು ಹೂತು ದೇಸಾಂತರ ಹೋದಾಗ

ಯಾಪಾರಕೊಂಟಿದ್ದ ದೂರಾದ ಜಯಶೆಟ್ಟಿ
ನೋಡಿದ ಸಿದ್ದಯ್ನ ಘನ ಪೂಜೇ ಬಂದಿಲ್ಲಿ
ಕೈ ಮುಗದು ವಂಟನು ಯಾಪಾರಕೆ.

ಶೆಟ್ಟೀಗೆ ಅವತ್ತು ಪ್ಯಾಟೇಲಿ ಸೌಭಾಗ್ಯ
ಬೆಳ್ಳಿಯ ಅಳಕೊಂಡ ಬಳ್ಳ ಬಬಳ್ಳ ನಮ್ಮಶೆಟ್ಟಿ
ಬಂಗಾರ ಬಾಚಿಕೊಂಡ ಚೀಲ ಚೀಲ

ಮನೆಗೋಗೋ ದಾರಿಯಲಿ ಶೆಟ್ಟಿಗೋರಿಯ
ಕೈಮುಗದು ಬಿದ್ದು ನಮಸ್ಕಾರ। ಮಾಡಿಕೊಟ್ಟ
ದೇವರ ಕಂಬ ಅದಕೆಣ್ಣೆ

ಊರೂರ ಸುದ್ದೀಲಿ ಜನಕೆ ಭಕ್ತಿಯ ಹುಟ್ಟಿ
ಸೇರಿತು ಪರುಷೆ ಗೋರಿದೇವ್ರ! ಹೆಸರೇಲಿ
ಗುಡಿಯೊಂದು ನಿಂತಿತಲ್ಲೊ ಮುಗಿಲುದ್ದ

ಕೈಚಾಚಿ ಭಿಕ್ಷದೋರು ಮೈಚಾಚಿ ಸೂಳೇರು
ಭಕ್ತೀಲಿ ಕುಡುದು ಕುಣಿಯೋರು! ಸೇರವ್ರೆ
ಬಿಳಿ ಟೋಪಿಯೋರ ಬೆಳಕೇಲಿ

ಪೂಜೆಗೆ ವೈದಿಕರು ದಾನಕೆ ಸಾವುಕಾರ್ರು
ಕತ್ತೆ ಗೋರಿಯ ಮೇಲೆ ಕೈಲಾಸ। ಹಬ್ಬಿತ್ತು
ರಾಜರಾಣಿಗೆ ಸುದ್ದಿ ಹೋಯ್ತು

ರಾಜ ಸುಂಗಾರವಾದ ರಾಣಿ ಸುಂಗಾರವಾದ್ಲು
ಕತ್ತೆಯ ಪೂಜೆಗೆ ಕುದುರೆಯ। ಏರಿಕೊಂಡು
ಬಂದರು ಗೋರಿಯ ದೇವರಿಗೆ
ದಾರಿ ದೇವರ ಕಂಡು ಧನ್ಯರಾಗಲು ಅಂದು
ರಾಜರಾಣಿಯರ ಜೊತೆ ಪರಿವಾರ। ಹರಿದಿತ್ತು
ಕೂಡಿತು ಪರುಸೆ ಕಡಲಾಗಿ

ಗೋರಿದೇವರ ಮಹಿಮೆ ಕೊಂಡಾಟ ನೆಡಿವಾಗ
ತಳ್ಳಾಟ ಹೊರಗೆ ಆಗಿತ್ತು। ಕತ್ತಿಹಿಡಿದು
ತಳವಾರ್ರು ಸಿದ್ದಯ್ನ ತಳ್ಳುತಾರೆ
ದೇಸಾಂತ್ರ ಹೋಗಿದ್ದ ಸಿದ್ದಯ್ಯ ಕತ್ತೇಯ
ಹೂತ ಜಾಗವ ನೋಡೊ ಆಸೇಲಿ। ಬಂದವ್ನೆ
ಹುಡುಕುತ ನಿಂತವ್ನೆ ಹೂತಜಾಗ

(ಕತ್ತೆ ಮತ್ತು ಧರ್ಮ: ಸಿದ್ಧಲಿಂಗಯ್ಯ)

ಶ್ರೀಶ್ರೀಯವರ ನಿನ್ನೆಯ 'ಜಟಕಾವಾಲ' ಕವಿತೆಯಲ್ಲಿ ಕೂಡಾ ಸಾಕುಮಗನಂತಿದ್ದ ಕುದುರೆ ಸಾವಿನ ಚಿತ್ರವಿದೆ. ಆದರೆ ಆ ಸಾವು ಮೌಢ್ಯ ಆಚರಣೆಯ ವಸ್ತುವಾಗದೆ ವಾಸ್ತವ ಭೀಕರತೆಯ ಚಿತ್ರಣವಾಗಿದೆ. ಜಟಕಾವಾಲ ದೈವದ ಮೊರೆ ಹೋಗದೆ, ಸಾಯುವ ಚಿಂತೆ ಮಾಡದೆ ಪರಿಹಾರಕ್ಕಾಗಿ ಹೋರಾಟದ ಪ್ರದೇಶಕ್ಕೆ ಹೋಗಬಯಸುತ್ತಾನೆ. ಕವಿಯನ್ನು ಕೂಡಾ ವರ್ಣನಾ ಪ್ರಧಾನ ಕಲ್ಪನಾ ಜಗತ್ತಿನಿಂದ ಬಿಡಿಸಿ ವಾಸ್ತವ ಪ್ರಜ್ಞೆಯ ಸಮಾಜ ಸಮಾಜ ಮುಖಿಯಾಗಬೇಕೆಂದು ಬದಲಿಸುತ್ತಾನೆ.

ತಾನು ಅರೊಟ್ಟಿಗೆ ಹುಲ್ಲು ತಿಂದು
ನಂಗೆ ದಿನಾನೂ ಹಿಟ್ಟು ಹುಟ್ಟಿಸ್ತಿತ್ತು ನನ್ ಕುದುರೆ
ಎರಡ್ದಿನ್‌ದಿಂದ ಆ ಹುಲ್ಲು ಕೂಡಾ ಮುಟ್ನಿಲ್ಲ
ನಿನ್ನೆ ಸತ್ತೆಹೋತು
ಕವಿಗೊಳೂ
ಕೇಳ್ಕೇಳಿ ನಂಗೋಳು
ಏನಂಗೆ ಬರ್ಕಂಡೋದಿಯಾ
ನಿಲ್ಲಯ್ಯೋ ತಿಕ್ಕ ಬ್ರಾಂಬಯ್ಯಾ
ಅಂದಂಗೆ ನೀನು ಬ್ರಾಂಬ್ರು ಅಂದ್ಕಳದು
ಬಿಟ್ಬಾಕಿದಿಯಂತೆ
ಹೋಗ್ಲಿ ಕೇಳಯ್ಯಾ ಮನ್ಸಾ
ನಾ ಯೋಳಿದ್ದೆಲ್ಲಾ ಇವರವಾಗಿ ಕೇಳಿ
ಲಚ್ಚಣವಾಗಿ
ಗೇಯೋ ಪಾಕ್ಯಾನದೊಳಗಿನ ಪದಗೋಳಂಗೆ
ಜಮಾಯಿಸ್ಸಿಬರ್ದು
ಅಂತೋವ ನೀನು ಎಡಗೈಯ
ಕಿರುಬೆರಳ ಉಗುರ್ನಾಗೆ ಗೀಚಾಕ್ತಿಯಂತೆ
ಅದೆಲ್ಲಾಯೀಗ ಬಿಟ್ಬಾಕಿದೀಯ
ಅಂಗಾದ್ರೆ ನೋಡು ಆ ಮದ್ಯನ ನಂಮೂರಿಗೆ
ಬಂದ್ನಲ್ಲ
ಜರೀಶಾಲು ಆಕ್ಕೊಂಡು
ಕಕ್ಕಾಬಿಕ್ಕಿ ಕವಿ
ಅವನಂಗೆ ಜಣಕ ಜಣಾ ಜಣಕಜಣಾ

ಕಾಗಜದ ಮ್ಯಾಲೆ ಅಚ್ಚರಗಳಕೆತ್ತು
ಅಲ್ಲ ನನ್ನ ಅಳುವೇ ಬೇಕಂತೀಯಾ
ಅಂಗಾರೆ ಅಳು
ಅಲ್ಲ ಕೇಳು (ನಿನ್ನೆಯ ಜಟಕಾವಾಲ: ಶ್ರೀಶ್ರೀ)

ಹೀಗೆ ವಸ್ತುವಿನ ಜೊತೆ ಜೊತೆಗೆ ವಸ್ತುವನ್ನು ರಚಿಸುವವನನ್ನು ಈ ಕವಿತೆ ಒಳಗೊಳ್ಳುತ್ತದೆ. ರಚನಾ ಪರಂಪರೆಯನ್ನು ಪ್ರಶ್ನಿಸುತ್ತದೆ. ಕವಿತೆ ಮುಂದುವರೆಯುತ್ತ ಹೇಗೆ ವಿದೇಶಿಗರ ಆರ್ಥಿಕ ದೃಷ್ಟಿಕೋನದ ರೋಗ ನಮ್ಮವರಿಗೂ ಬಡಿಯುತ್ತದೆ ಎನ್ನುತ್ತಲೇ ವಾಸ್ತವವನ್ನು ಹೀಗೆ ತೋರುತ್ತಾರೆ.

ಪಸುಗಳ ಡಾಕುಟ್ರತ್ರ ಓಡೋದೆ
ಒಂದ್ಸಲ ಬಂದು ನೋಡೀ ಅಂದೆ
ಹತ್ರುಪಾಯಿ ಹಿಡ್ಕಂಬಾ ಅಂದ
ಎಂಗೆ ಸಾಯೋದು
ಸರಿ ಅದು ಬದುಕಿದ್ರೆ ಸಾಕು ಆಮ್ಯಾಲೆ
ನೋಡ್ಕಳಾನ ಅಂತ
ಲಗಾಮು ಗಿಗಾಮು ಮಾರಾಕಿ
ಅರ್ಜೆಂಟಾಗಿ ಐದೂ ಹತ್ತು ಕೂಡಾಕಿ
ಜರೂರ್ನಾಗೆ ಒಪ್ಪಿಸ್ಕಂಡೆ
ದಾರಿನಾಗೆ ನಂಕೈಲೇ ಸೂಜಿಮದ್ದು
ಸೀಸಕೊಳ್ಳಸಿದ
ಕುದುರೆಗೆ ಎರಡು ಕಡೇನಾಗೂ ರಕ್ತ
ನನ್ನ ಎರಡೂ ಕಣ್ಣಾಗೆ ಕಣ್ಣೀರಿನಂಗೆ
ಲಾಭವಿಲ್ಲ ಬದುಕೋದೆಲ್ಲಿಂದ
ಅಂದ ಪ್ರಕಾರವೇ ಅದು ಬದುಕ್ನಿಲ್ಲ
ಮಾಸತ್ಯ ಪುರುಷ
....
....
ಅತ್ತೇ ಅತ್ತೇ
ಅತ್ರೆ ಲಾಭಯಿಲ್ಲಂತ ಯಿರಾಮ ತಕ್ಕೊಂಡೆ
ಎತ್ತಿನಂಗೆ ಎಲ್ಲೆಲ್ಲೋ ತಿರುಗಿದೆ
ಯಾವ್ದಪೋ ದಾರಿ ಭಗವಂತ ಅಂದ್ಕತಾನೆ
ಎಲ್ಲಿದಾನವ್ನು
ಸಿಮ್ಮಾಚಲಂ ಗವಿನಾಗಾ
ಹುಣ್ಸೆಗಿಡದ ತೋಪಿನಾಗಾ
ದರಗಾಗುಡ್ಡದ ಮೇಲಾ
ಗ್ಯಾನಾ ಪುರದೊಳಗಾ
ಎಲ್ಲಿದಾನೆ
ಯಿದ್ರೆ ಏನ್ಮಾಡ್ತಿದಾನೆ
ಅಬ್ಬಬ್ಬೋ ನಂನಂತೋರ್ನ ಕಾಪಾಡೋದೆ
ಅವನ ಕೆಲ್ಸನಾ
ಆಗಾಗವ್ನ ನೆನಸ್ಕಂತಿನಾಗ್ಲಿ
ಅದೊಂದು ಯೇಡಿತನ

ಹೀಗೆ ಕವಿತೆಯ ನಿಲುವು ಧಾರ್ಮಿಕತೆ ಕಡೆ ನಿಲದೆ ವೈಚಾರಿಕ ಚಿಂತನೆಯ ಕಡೆ ಹರಿಯುತ್ತದೆ. ಸ್ವಾಭಿಮಾನ ಮತ್ತು ದುಡಿಮೆಯೇ ಇಲ್ಲಿ ಮುಖ್ಯವೆಂದು ಭಾವಿಸುವ ವ್ಯಕ್ತಿಯ ಜೀವನದೊಳಗೂ ನಿರಾಶೆ ಆವರಿಸಿ ಬಿಡುತ್ತದೆ. ಅದಕ್ಕೆ ಸಾವು ಪರಿಹಾರವಲ್ಲ ಎಂದು ಚಿಂತಿಸುವ ಇಲ್ಲಿನ ಜಟಕಾವಾಲ ಸಮಸ್ಯೆಯ ಪರಿಹಾರಕ್ಕಾಗಿ ಸಿದ್ಧಲಿಂಗಯ್ಯನವರ ಸಿದ್ಧಯ್ಯನಂತೆ ದೇಸಾಂತರ ಹೋಗದೆ ಹೋರಾಟದ ಭೂಮಿಗೆ ಹೋಗುತ್ತಾನೆ. ಕವಿತೆ ಕೆಟ್ಟ ಸಮಾಜದ ಸಮಸ್ಯೆಯನ್ನಷ್ಟೇ ನಿರ್ಲಿಪ್ತವಾಗಿ ಚಿತ್ರಿಸದೆ ಪರಿಹಾರವನ್ನು ಆವೇಶದಿಂದ ಹೇಳಿಸಿದ್ದಾರೆ.

ಮಗ ಸತ್ತೊಡನೆ ಹೆಂಡತಿ ಅಗಸರವನ ಜೊತೆ ಓಡಿ ಹೋದಾಗಲೂ ಅಳದ ಜಟಕಾವಾಲ ಕುದುರೆ ಸತ್ತೊಡನೆ

"ಯೋಚೋದೇನು ಸತ್ತೋಗನಾ
ಅಂತಾನೆ ಅನ್ಕೊಂಡಿದ್ದೆ
ಏನ್ ಮಾಡ್ಬೇಕು ನಾನು
ಏನಾಗಬೇಕು ನನ್ ಬದ್ಕು
ರಾತಿರೆಲ್ಲಾ ಯಿದೇ ಆಲೋಸ್ನೆ
ಚೀಃ ಸಾಯಬಾರ್ದು
ಸತ್ತು ಸಾಧಿಸೋದೇನು
....
....
ಮನಸ್ನಂತಾ ಮಸ್ನ
ಕುದುರೆ ಸಾಯ್ತಂತ ನಾನೂ ಸಾಯೋದೆನ
ನಾಯಿಗಳು ಸಾಯ್ನಿಲ್ಲಾ
ಪಿಚ್ಚರು ಯಿಸ್ಟಾರ್‌ಗಳು ಸಾಯ್ನಿಲ್ಲಾ
ನಾನು ಮಾತ್ರ ಸಾಯಲ್ಲ
ಸಾಯೋವರ್ಗೂ ಬದುಕಿ ತೀರ್ತಿನಿ
ಸಾಯ್ಬೇಕಾದೋರ್ನ ಸಾಯ್ಸೇ ತೀರ್ತೀನಿ"

(ನಿನ್ನೆಯ ಜಟಕಾವಾಲಾ: ಶ್ರೀಶ್ರೀ)

ಈ ಬಗೆಯ ಅಧೋಜಗತ್ತಿನ ಜೀವಿಗಳ ಮೇಲಿನ ಪ್ರೀತಿಯೇ ಅವರನ್ನ ಪ್ರಜಾಕವಿ ಎನಿಸಿದವು.

ಮಾರ್ಕ್ಸ್ ವಾದವನ್ನೇ ನಂಬಿದ ಸಾಯುಧ ಹೋರಾಟವೇ ಬದಲಾವಣೆಯ ಅಸ್ತ್ರವೆಂದು ಭಾವಿಸಿದ ಶ್ರೀಶ್ರೀ ಅವರ ನೋಟಕ್ಕೂ ಮಾನವೀಯತೆಗಾಗಿ ಮಿಡಿವಾಗ

ಅಹಿಂಸೆಯ ಶಕ್ತಿ ದೊಡ್ಡದು ಎಂದು ಭಾವಿಸುವ ಸಿದ್ಧಲಿಂಗಯ್ಯನವರ 'ಗಾಂಧೀ'ಜಿ ಶ್ರೀಶ್ರೀ ಅವರ 'ಓ ಮಹಾತ್ಮ! ಓ ಮಹರ್ಷಿ' ಕವಿತೆಗಳಿಗೂ ವ್ಯತ್ಯಾಸಗಳಿವೆ. ಅಹಿಂಸೆಯಿಂದ ಆಫ್ರೀಕಾದ ಜನರನ್ನ ಸೂರ್ಯ ಮುಳುಗದ ನಾಡಿನ ಸೂರ್ಯನನ್ನು ಮುಳುಗಿಸಿದ ಗಾಂಧಿ ನಾಡಲಿ ನಾವೇಕೆ ಸೈತಾನರಾದೆವು ನಾವೇಕೆ ಭಾರತವನ್ನು ಬಲಿಕೊಟ್ಟೆವು ಎಂದು ಅಂತರಂಗದ ಪ್ರಶ್ನೆ ಕೇಳುವ ಸಿದ್ಧಲಿಂಗಯ್ಯನವರ ಗಾಂಧಿ ಹೀಗಿದೆ:

> ಜನವು ದಿಕ್ಕೆಟ್ಟಿರಲು ಹಾರಿದಿರಿ ಹಕ್ಕಿಯಂತೆ
> ಭಾರತದ ಕಡುನೀಲ ಗಗನದಲ್ಲಿ,
> ಜೀವ ಚೈತನ್ಯವನು ತುಂಬಿದಿರಿ ತಾಯಂತೆ,
> ಬಸವಳಿದ ಜನಮನದ ಭಾವದಲ್ಲಿ
> ಛತ್ರ ಚಾಮರವಿಲ್ಲ ಬಹುಪರಾಕುಗಳಿಲ್ಲ
> ಭಾರತದ ಬೀದಿಯಲಿ ಅರಸನಂತೆ
> ನಡೆದು ಬಂದಿರಿ ನೀವು, ನೊಂದ ಜೀವಿಯ ಕಂಡು
> ತಬ್ಬಿಕೊಂಡಿರಿ ಬಾಚಿ ತಂದೆಯಂತೆ
> ಆಫ್ರಿಕದ ರೈಲಿನಲಿ ಕರಿಯನೆಂದಬ್ಬರಿಸಿ
> ನೆಲಕೆ ದೂಡುತ ಕೇಕೆ ಹಾಕಿದವರ
> ಮೃಗಬಲವ ಮೆಟ್ಟಿದಿರಿ ದೇಶದಿಂದಟ್ಟಿದಿರಿ
> ಬಿಳಿಯ ಸೂರ್ಯನ ನೀವು ಮುಳುಗಿಸಿದಿರಿ.
> ಜಾತಿಮತಗಳ ವಿಷದ ಮಂಜುಕರಗಲಿ ಎಂದು
> ಬಿಸಿಲಿನಲಿ ತಿರುಗಿದಿರಿ ದೇಶವೆಲ್ಲ,
> ಹುಲ್ಲುಗರಿಕೆಗು ಕೂಡಾ ಪ್ರಾಣಮಾನಗಳುಂಟು
> ಎಂಬುದನು ಸಾರಿದಿರಿ ಲೋಕಕೆಲ್ಲ
> ನೀವು ಧನ್ಯರು ಗಾಂಧಿ, ನೀವು ದೇವರು ಗಾಂಧಿ.
> ನಾವಿಂದು ಸೈತಾನರೇಕಾದೆವು
> ಅಂತರಂಗದ ಮಾತ ಏಕೆ ಮರೆತೆವು ನಾವು
> ಏಕೆ ಭಾರತವನ್ನು ಬಲಿಕೊಟ್ಟೆವು **(ಗಾಂಧಿ: ಸಿದ್ಧಲಿಂಗಯ್ಯ)**

ಶ್ರೀ ಶ್ರೀ ಕೂಡಾ ಸಿದ್ಧಲಿಂಗಯ್ಯನವರಿಗೂ ಮೊದಲು ದೇಶ ಸ್ಥಿತಿಯನ್ನೆ ಮುಖ್ಯವಾಗಿಸಿಕೊಂಡು ಗಾಂಧಿ ನಂತರದ ಭಾರತ ಕುರಿತು ಚಿಂತಿಸಿದ್ದಾರೆ. ಆದರೆ ಅವರಲ್ಲಿ ಶಾಂತಿಗೆ ಜಾಗವಿಲ್ಲ. ಹಿಂಸೆಯಿಂದಲೇ ಸೃಷ್ಟಿ ಚಿಗುರುವುದು ಹಿಂಸೆಯಿಂದಲೆ ಮಾರ್ಪಾಡು ಬರುವುದು ಎಂದೇ ಶ್ರೀ ಶ್ರೀ ಭಾವಿಸುತ್ತಾರೆ.

"ಎಲ್ಲಯ್ಯಾ ನಿನ್ನ ಅಹಿಂಸೆ
ಎಲ್ಲಯ್ಯಾ ನಿನ್ನ ಕರುಣಾ ಅನುಕಂಪ
ನೋಡುದೇಶ ದ್ವೇಶ ಭುಗ್ನ
ಹಸಿವೆ ಜಿಹ್ವಾನಲ ವಿಭುಗ್ನ
ಇಪ್ಪತ್ತೆರಡು ವರ್ಷಗಳಿಗೂ ಹೆಚ್ಚು
ಕಾಲವೆಂಬುದು ಕರಗಿ ಹೋಗಲು
ಎಲ್ಲಿಯೂ ಕ್ಷಮೆ ಕಾಣುತ್ತಿಲ್ಲ
ಹಿಂಸೆ ತನ್ನಾಯುಧ ಇಳಿಸುತ್ತಿಲ್ಲ
ಹೌದು ನಿಜವೆ ನೀನು ಪಾಪ
ಸಾಯುಧತೆಗೆ ಕೊಟ್ಟೆ ಶಾಪ
ಸಾಗುತ್ತವಾ ಮಂತ್ರ ಮಾಯಗಳು
ಉದುರುತ್ತವಾ ಮಾವಿನ ಕಾಯಿಗಳು
ಸರ್ವ ಮಾನವ ಸಮಾನತ್ವ
ಸರಿ ಅದೇ ನಿನ್ನ ಮೂಲತತ್ವ
ಅಮಾನುಷ ಪೈಶಾಚಿಕತ್ವ
ಅದೇ ಎದುರಾಗುತ್ತಿರುವ ಸತ್ಯ.
ಕೊಳುಗಳ್ಳನ ಮನುಷ್ಯನೆನಬೇಕೇ
ಲಂಚಕೋರನ ಕ್ಷಮಿಸಬೇಕೇ
ಲೋಫರ್‌ನ ನವಾಬನೆನಬೇಕೇ
ಡಾಫರ್‌ನ ಷರೀಫನೆನಬೇಕೆ
....
....
ನಾನು ಪೂರ್ವದಿ ನಿಜವಾಗಿಯೂ
ನಿನ್ನ ಪೂಜಿಸಿದೆನು ನಂಬಿ
ಹೋಯಿತು ನನ್ನ ವಿಶ್ವಾಸವೆಲ್ಲಾ
ಬದಲಾದವು ನನ್ನ ಆಲೋಚನೆಗಳೆಲ್ಲಾ

ಯುವ ಜನತೆ ಕೆರಳಿದೆ ಬಾಪೂ
ಹೊಸ ಜನತೆ ಅರಳಿತೆ ಬಾಪೂ
ಹುಡುಕುತ್ತಿದೆ ಹೊಸದಿನಗಳು
ಕೊಡುವುತ್ತಿದೆ ಹಳೆಯ ಧೂಳು
....

....

ನೀನು ತೋರುತ್ತಿರುವ ಹಾದಿ
ಯಥಾ ಸ್ಥಿತಿ ಸೇರಲು ರಾಜಬೀದಿ
ಹಿಂಸೆಯಿಂದಲೆ ಸೃಷ್ಟಿ ಚಿಗುರುವುದು
ಹಿಂಸೆಯಿಂದಲೆ ಮಾರ್ಪಾಟು ಬರುವುದು."

ನೊಂದ ಜೀವಿಯನ್ನ ಕಂಡು ಶ್ರೀಶ್ರೀ ಬೆನ್ನೆಲುಬು ಮುರಿದೆಯೋ ತಂದೆ ಎಂದರೆ ಸಿದ್ಧಲಿಂಗಯ್ಯ ನೊಂದ ಜೀವಿಯ ಕಂಡು ಬಾಚಿ ತಬ್ಬಿಕೊಂಡರಿ ತಂದೆಯಂತೆ ಎಂದು ಭಾವಿಸುತ್ತಾರೆ. ಈ ಭಾವನೆಗಳಲ್ಲೇ ಅಗಾಧ ವ್ಯತ್ಯಾಸಗಳಿರುವುದನ್ನ ನಾವು ಗುರುತಿಸಬಹುದಾಗಿದೆ.

"ಕೊನೆ ಪಯಣ ಮೊದಲ ವಿಜಯ" ಎಂಬ ಶ್ರೀಶ್ರೀ ಅವರ ಕವಿತೆ ಮತ್ತು ಸಿದ್ಧಲಿಂಗಯ್ಯನವರ "ಸಂಪಿಗೆಯ ಮರದಲ್ಲಿ" ಕವಿತೆಗಳು ಮಾರ್ಕ್ಸ್ ವಾದೀ ಹಿನ್ನೆಲೆಯಲ್ಲಿ ವರ್ಗ ಹೋರಾಟಗಳನ್ನ ಹೇಳುತ್ತವೆ. ಆದರೆ ಶ್ರೀಶ್ರೀಯವರು ತಮ್ಮ ಕವಿತೆಯ ಮೂಲಕ ಅದನ್ನ ದೇಶೀಯ ನೆಲೆಯ ವಿವರವಾಗಿಸುತ್ತಲೇ ದೇಶಚರಿತ್ರೆ ಮತ್ತು ಗ್ಲೋಬಲ್ ಚರಿತ್ರೆಯ ಉದ್ದಕ್ಕೂ ವಿಸ್ತರಿಸುತ್ತಾರೆ. ಆದರೆ ಸಿದ್ಧಲಿಂಗಯ್ಯನವರ ಕವಿತೆಯಲ್ಲಿ ಈ ಬಹುಮುಖತೆಗಳು ಮತ್ತು ವಿಸ್ತಾರತೆ ಕಂಡುಬರುವುದಿಲ್ಲ.

ತೂಗಯ್ಯಾ ತೂಗಯ್ಯಾ ತೂಗಯ್ಯಾ!
ನೇಣು ಹಗ್ಗ ಹಿಡಕೊಂಡು ತೂಗಯ್ಯಾ!
ನೇಣು ಹಗ್ಗ ಅಂಟಿಕೊಂಡು ತೂಗಯ್ಯಾ!
ಉಯ್ಯಾಲೆಯಂತೆ ಚನ್ನಾಗಿ ತೂಗಯ್ಯಾ!
ಸೋದರಾ, ಸೋದರಾ, ಸೋದರಾ!
ಸಾವೆಂಬುದು ನಿನಗೆ ಇಲ್ಲವೆ ಇಲ್ಲವಯ್ಯ
ವೀರನೇ ಧೀರನೇ ಶೂರನೇ ತೂಗಯ್ಯಾ!
....
....
ಸೇಡು
ಹಿಡಿದು ಹಡೆಯೆತ್ತಿದೆ ಹಾವಂತೆ ಬುಸುಗುಟ್ಟಿ
ಪ್ರಜಾ ವಂಚಕಾಧಮರಿಗೆ ಸಮಾಧಿಗಳ ಕಟ್ಟಿದೆ
ಅದಕ್ಕೆ ತೂಗಯ್ಯಾ!
....
....
ಶ್ರೀಕಾಕುಳ ಅಡವಿಯಲ್ಲಿ ಇರುವೆ

ಹಾವನ್ನು ಕೊಲ್ಲುತಾವೆ!
ಸಿಂಹಾದ್ರಿ ಶಿಖರದ ಮೇಲೆ ಇಲಿ ಬೆಕ್ಕನ್ನು
ಕೊಲ್ಲುತಾವೆ।
ಸ್ವಾತಂತ್ರ್ಯಕ್ಕೆ ಮಾರು ಹೆಸರು
ಸಮತಾವಾದವೆ, ಸತ್ಯ!
....
....
ಸರೋಜಿನೀ
ದೇವಿ ಪೋಟೋ ಇಟ್ಟು ಹೊಗಳುತಾರೆ
ಪಂಚಾದಿ ನಿರ್ಮಲಂ' ಅದ್ರೆ ಭಯಹುಟ್ಟಿ
ನಡುಗುತಾರೆ
ಬಿಳಿಯರವನು ಅಂದು ನಿನ್ನ ಭಗವತ್‌ಸಿಂಗ್ ಅಂದ
ಕರಿಯರವನು ನಿನ್ನನಿಂದು
ನಕ್ಸಲೈಟ್ ಎಂದು ಕರೆದ
ಎಲ್ಲರೂ ನಿನ್ನ ನಾಳೆ ಬೆಳ್ಳಿಚುಕ್ಕಿ ಅಂತಾರೆ
ಅಲ್ಲೂರಿಗೆ ವಾರಸನೇ!
ಶ್ರೀ ಶ್ರೀ ಕವಿತ್ವ ಲಾಲಸನೇ!
ತೂಗಯ್ಯಾ ತೂಗಯ್ಯಾ ತೂಗಯ್ಯಾ
ನೀನು ತೂಗುತಿರೆ ಶತ್ರುವಿಗೆದೆ
ಗಾಬರಿಯಯ್ಯಾ!
....
....
ಇದು ಪ್ರಪಂಚ ಪರ್ಯಾಪ್ತ
ಜನಶಕ್ತಿಗೆ ಪರಮಾಪ್ತ!
ಈ ಹೋರಾಟ ಅಂತಿಮ ವಿಜಯದೊಂದಿಗೆ
ಸಮಾಪ್ತ!
ಯಾವ ದೇಶದಲ್ಲೂ ಏಕಾಂಗಿಯಲ್ಲ ನೀನು!
ವೀರ ವಿಯಟ್ನಾಂನಲ್ಲಿ ವಿಜಯಗೀತೆ ಹಾಡಿರುವೆ!
ಅಗೋ ಅಗೋ ಬಾಂಗ್ಲಾದಿ
ಬೆಂಕಿ ಮಳೆ ಸುರಿಯುತ್ತಿದೆ!
ಇದೋ ಇದೋ ಸಿಲೋನ್‌ನಲ್ಲಿ
ಕೆಂಪು ಸೇನೆ ಕದಲುತ್ತಿದೆ!

ಇದು ಪ್ರಪಂಚ ಕುಗ್ರಾಮ!
ಇದು ಗ್ಲೋಬಲ್ ಸಂಗ್ರಾಮ!"

(ಕೊನೆ ಪಯಣ ಮೊದಲ ವಿಜಯ: ಶ್ರೀ ಶ್ರೀ)

*೧ ಪಂಚಾದಿ ನಿರ್ಮಲ ಶ್ರೀಕಾಕುಳ ರೈತ ಹೋರಾಟದ ಸಮಯದಲ್ಲಿ ಹೋರಾಡಿ ಮರಣವಪ್ಪಿದ ಕ್ರಾಂತಿಕಾರಿ.

*೨ ಅಲ್ಲೂರಿ ಸೀತಾರಾಮರಾಜು– ಬ್ರಿಟೀಷ್ ವಿರುದ್ಧ ಬುಡಕಟ್ಟು ಜನರ ಸಾಯುಧ ಹೋರಾಟ ನಡೆಸಿದ ಜಾನಪದ ನಾಯಕ.

ಸಿದ್ಧಲಿಂಗಯ್ಯನವರ ಸಂಪಿಗೆ ಮರದಲ್ಲಿ ಕವಿತೆಯಲ್ಲೂ ಬಂಡಾಯದ ದನಿ ಇದೆ. ಮಾರ್ಕ್ಸ್‌ವಾದಿ ಹೋರಾಟವಿದೆ. ಆದರೆ ಈ ಕವಿತೆ ನಾಡಿನ ಬಡಜನರ ಜೋಪಡಿಗೆ ಮಾತ್ರ ಸೀಮಿತವಾಗಿದೆ.

ನೂರಾರು ಹಾವುಗಳು ಊರೆಲ್ಲ ನೋವುಗಳು
ಸಂಪಿಗೆಯ ಮರದಲ್ಲಿ ಸಾವಿನಾಟ
ಕೊಂಬೆ ಕೊಂಬೆಯ ಕೆಳಗೆ ಮಸೆದ ಕತ್ತಿಯ ಸಾಲು
ಹೆಣಗಳುಯ್ಯಾಲೆಯಲಿ ಮರದ ಕುಣಿತ
....
....
ಬಡಜನರ ಗುಡಿಸಲಿಗೆ ಬೆಂಕಿಯನು ಇಟ್ಟವರು
ರಾಜರಾದರು ದೆಹಲಿ ನಾಡಿನಲ್ಲಿ
ಎಳೆಯ ಮಕ್ಕಳ ಕೊರಳ ದನಿಕಿತ್ತು ನಕ್ಕವರು
ರಕ್ತವನು ಹಂಚಿದರು ಅಮಲಿನಲ್ಲಿ
ಈ ನಾಡಿನಾಪತ್ತು ನಮ್ಮ ಜನಗಳ ಸಾವು
ಬಂದು ನಿಂತಿತ್ತಯ್ಯ ಕಣ್ಣ ಮುಂದೆ
ಪೋಲೀಸು ಪಹರೆಯಲಿ ಭಾಷಣದ ಹೊಣೆಯಲ್ಲಿ
ಮುಖವು ಕಾಣಿಸಲಿಲ್ಲ ಗಂಡೊ ಹೆಣ್ಣೊ
ಬೆಳಕು ಚೆಲ್ಲುವ ಸೂರ್ಯ ಹೊಳೆವ ಚುಕ್ಕಿಗಳನ್ನು
ಕೊಂಡು ಕೊಂಡರೊ ಏನೊ ಶ್ರೀಮಂತರು
ಮಲಗಿದ್ದ ಹಕ್ಕಿಗಳು ಮೇಲೇಳಲಿಲ್ಲ
ಬೆಂಗಳೂರಿನ ಜನಕೆ ಬೆಳಕಾಗಲಿಲ್ಲ

ಖಾಲಿಯಾಕಾಶದಲಿ ಕಿರಣಗಳ ಸುಳವಿಲ್ಲ
ಇದು ಬೆಳಕೊ ಕತ್ತಲೆಯೊ ತಿಳಿಯದಲ್ಲ

ಹೂದೋಟಗಳ ತುಂಬ ಹುಚ್ಚು ನಾಯಿಯ ಸಂತೆ
ಕೆಕ್ಕರಿದ ಜನ ಕಾಣೋ ಜೈಲಿನಲ್ಲಿ
....
....
ಏನಾದರೊ ಅವರು ವ್ಯಾನಿನಲಿ ಹೋದವರು
ಮರ ಮರವು ನರಳಿತ್ತು ಗಾಳಿಯಲ್ಲಿ
ಮದ್ದು ಗುಂಡಿನ ಸದ್ದೊ ಎದೆಯೊಡೆದ ಸದ್ದೊ
ನೋವು ಬಿರಿಯುತ್ತಿತ್ತು ಹೂವಿನಲ್ಲಿ

ಬಡಜನರ ಜೋಪಡಿಗೆ ಕಾಡುಗಳ ಕತ್ತಲೆಗೆ
ಬೆಳಕು ಬೇಕೆಂದವರ ಕೊಂದರಲ್ಲೊ
ಈ ನೆಲದ ಹೂಬಳ್ಳಿ ಹಕ್ಕಿ ಮಕ್ಕಳಿಗೆಲ್ಲ
ಬದುಕ ಬೇಕೆಂದವರ ಬಗೆದರಲ್ಲೋ

ಏನು ಮಾಡುವೆ ಗೆಳೆಯ ಕಂಡ ಕಂಡಲ್ಲೆಲ್ಲ
ರುಂಡಗಳು ನೆಲಕುರುಳಿ ಬೀಳುವಾಗ
ಕಾದ ಬಂಡೆಯ ಸುತ್ತ ಬೆಳೆದ ಹಸುರಿನ ಮೇಲೆ
ಕೆಂಪುರಕ್ತವು ಚಿಮ್ಮಿ ಹರಿಯುವಾಗ

ಕೆಂಡ ಸಂಪಿಗೆಯಲ್ಲಿ ಕೆಂಡಗಳು ಅಡಗಿದ್ದು
ಮುಡಿದ ಹೆಣ್ಣುಗಳೆಲ್ಲ ಬೂದಿಯಾದೊ
ಹೆಜ್ಜೆ ಇಟ್ಟಲ್ಲೆಲ್ಲಾ ಕೆಂಪು ಕಮಲವು ಮೂಡಿ
ಬರುವ ಜನತೆಗೆ ಹೂವು ಹಾದಿಯದೊ

ಗಗನ ಸಾಗರದಲ್ಲಿ ಮುಗಿಲ ದೇಶಿಯ ಸಾಲು
ಎಣಿಸಿದಷ್ಟೂ ಮಿಗುವ ಜನಸಂದಣಿ
ಕೆಂಪು ಸೂರ್ಯನು ಹುಟ್ಟಿ ಮೆರವಣಿಗೆ ಬರುವಾಗ
ಕಪ್ಪು ಕಾಡಿನ ಹಾಡು ಮೊಳಗುತ್ತಿತ್ತು

(ಸಂಪಿಗೆಯ ಮರದಲ್ಲಿ: ಸಿದ್ಧಲಿಂಗಯ್ಯ)

ಕವಿ ಸಿದ್ಧಲಿಂಗಯ್ಯನವರು ಇಡೀ ಭಾರತವನ್ನ ಸಂಪಿಗೆ ಮರಕ್ಕೆ ಹೋಲಿಸುತ್ತ ಆ ಮರವನ್ನು ಆವರಿಸಿರುವ ಕರಾಳತೆಯನ್ನು ಇಲ್ಲಿ ಚಿತ್ರಿಸಿದ್ದಾರೆ. ಈ ಹೋಲಿಕೆಯ ಅಡಿಗರ ಇಂದು ನಮ್ಮೀ ನಾಡು ಕವಿತೆಯನ್ನು ನೆನಪಿಗೆ ತರುತ್ತದೆ. ಆದರೆ ತಾತ್ವಿಕ ನೆಲೆಯಲ್ಲಿ ಈ ಕವಿತೆ ಅಡಿಗರ ಕವಿತೆಗಳಿಗಿಂತಲೂ ಒಂದು ಹೆಜ್ಜೆ ಮುಂದಿದೆ ಎನ್ನಬಹುದು.

"ದೇಶ ಚರಿತ್ರೆಗಳು" ಎಂಬ ಶ್ರೀಶ್ರೀಯವರ ಕವಿತೆಯನ್ನು 'ನಲ್ವತ್ತೇಳರ ಸ್ವಾತಂತ್ರ' ಎಂಬ ಕವಿತೆಗಿಟ್ಟು ನೋಡಬಹುದು. ಈ ಎರಡೂ ಕವಿತೆಗಳು ಮಾರ್ಕ್ಸ್‌ವಾದಿ ಹಿನ್ನೆಲೆಯ ಚರಿತ್ರೆಯಿಂದ ಬಂದಿವೆ. ಸ್ವತಂತ್ರ್ಯ ನಂತರದಲ್ಲಿ ಕವಿ ಶ್ರೀ ಶ್ರೀಯವರು ಚರಿತ್ರೆ ಎಂದರೇನು? ಯಾವುದು ಚರಿತ್ರೆ? ದೇಶದ ಚರಿತ್ರೆ ಏನಾಗಿದೆ? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತ ಇದು ಈ ದೇಶದ್ದಲ್ಲ. ಇಡೀ ವಿಶ್ವವೇ ಹೇಗೆ ಸಾಮಾನ್ಯ ಕೂಲಿಕಾರ್ಮಿಕರನ್ನ ಶೋಷಣೆಗೆ ಒಳಪಡಿಸಿದೆ ಎಂದು ತೋರಿಸಿಕೊಡುತ್ತಾರೆ.

ಯಾವ ದೇಶದ ಚರಿತ್ರೆ ನೋಡಿದರು
ಏನಿದೆ ಗರ್ವ ಕಾರಣ?
ನರಜಾತಿ ಚರಿತ್ರೆ ಸಮಸ್ತ
ಪರಪೀಡನ ಪರಾಯಣ
....
....
ಬಲಿಷ್ಠರು ದುರ್ಬಲ ಜಾತಿಯನ್ನು
ಗುಲಾಮರನ್ನಾಗಿ ಮಾಡಿದರು
ನರಹಂತಕರು ಧರಾಧಿಪತಿಗಳಾಗಿ
ಚರಿತ್ರೆಯಲಿ ಪಸಿದ್ದಿಗೇರಿದರು
ರಣರಂಗ ಅಲ್ಲದ ಜಾಗ
ಭೂ ಭಾಗ ಹುಡುಕಿದರೂ ಸಿಗದು
ಗತವೆಲ್ಲಾ ತೊಯ್ದ ರಕ್ತ
ಇಲ್ಲವೇ ಕಂಬನಿಯಿಂದ
ತಣ್ಣಗಾದ ಸಂಸಾರಗಳು
ಸತ್ತ ಜನ ಸಮೂಹ
ಅಸಹಾಯಕರ ಹಾಹಾಕಾರ
ಇತಿಹಾಸದಲಿ ನರಳುತ್ತಿವೆ
....
....
ಚಿರಕಾಲ ಸಾಗಿದ ಮೋಸ
ಬಲಾಢ್ಯರ ದೌರ್ಜನ್ಯಗಳು
ಹಣವಂತರ ಕುಟಿಲೋಪಾಯಗಳು
ಇನ್ನೂನಾ? ಇನ್ನೂ ಸಲ್ಲದು! ಸಾಗದು!

....

....

ಚೀನಾದ ರಿಕ್ಷಾವಾಲಾ
ಚೆಕ್ ದೇಶದ ಗಣಿಯ ಕಾರ್ಮಿಕ
ಐರ್ಲೆಂಡಿನಲ್ಲಿ ಹಡಗಿನ ನೌಕರ
ತಣ್ಣಗಾದ ಆರ್ತರೆಲ್ಲರೂ
ಹಾಟೆನ್‌ಟಾಟ್, ಜೂಲೂ, ನೀಗ್ರೋ
ಖಂಡಾಂತರದ ವಿವಿಧ ಜಾತಿಗಳು
ಇತಿಹಾಸದ ಯಥಾರ್ಥತತ್ವ
ಸಾರುತ್ತಾರೆ ಒಕ್ಕೊರಲಿನಿಂದ
ಯಾವ ಯುದ್ಧ ಏಕೆ ನಡೆಯಿತೋ?
ಯಾವ ರಾಜ್ಯ ಎಷ್ಟು ದಿನಗಳಿದ್ದವೋ?
ದಿನಾಂಕಗಳು ಒಡಂಬಡಿಕೆ ಪತ್ರಗಳು
ಇದಲ್ಲವೋ ಚರಿತ್ರೆಗೆ ಅರ್ಥ

ಈ ರಾಣಿ ಪ್ರೇಮ ಪುರಾಣ
ಆ ಮುತ್ತಿಗೆಗಾದ ಖರ್ಚುಗಳು
ಮತಲಬುಗಳು ಕೈಫಿಯತ್ತುಗಳು
ಇದಲ್ಲವೋ ಚಾರಿತ್ರಿಕ ಸತ್ಯ

ಇತಿಹಾಸದ ಕತ್ತಲೆಕೋಣೆ
ತಳದಲ್ಲಿ ಹುದುಗಿ ಕಾಣಿಸದ
ಕಥೆಗಳೆಲ್ಲವೂ ಬೇಕೀಗ!
ಮಾಚಿದರೂ ಮಾಚದ ಸತ್ಯ.

ನೈಲು ನದಿಯ ನಾಗರಿಕತೆಯಲಿ
ಸಾಮಾನ್ಯನ ಜೀವನ ಎಂಥಾದ್ದು?
ತಾಜ್‌ಮಹಲ್ ನಿರ್ಮಾಣಕ್ಕೆ
ಕಲ್ಲು ಹೊತ್ತ ಕೂಲಿಗಳ್ಯಾರು?

ಸಾಮ್ರಾಜ್ಯದ ದಂಡಯಾತ್ರೆಯಲಿ
ಸಾಮಾನ್ಯರ ಸಾಹಸ ಎಂಥಾದ್ದು?
ಅರಸನೇರಿದ ಪಲ್ಲಕ್ಕಿ ಅಲ್ಲವೋ
ಅದನನು ಹೊತ್ತ ಬೋಯಿಗಳ್ಯಾರು?

....

....

ಚಾರಿತ್ರಿಕ ವಿಭಾತ ಸಂಧ್ಯಗಳ
ಮಾನವನ ಕಥೆಯ ವಿಕಾಸ ಎಂಥಾದ್ದು?
ಯಾವ ದೇಶ ಯಾವ ಪರಮಾರ್ಥ?
ಯಾವ ಶಿಲ್ಪ? ಯಾವ ಸಾಹಿತ್ಯ?
ಯಾವ ಶಾಸ್ತ್ರ? ಯಾವ ಗಂಧರ್ವ
ಯಾವ ಬೆಳಕಿಗೆ ಈ ಪ್ರಸ್ಥಾನ
ಯಾವ ಸ್ವಪ್ನ? ಯಾವ ದಿಗ್ವಿಜಯ?

(ದೇಶ ಚರಿತ್ರಲು: ಶ್ರೀ ಶ್ರೀ)

ಬ್ರಿಟಿಷರ ವಸಾಹತುಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡಿ ಪಡೆದ ಸ್ವಾತಂತ್ರ್ಯ ಹೇಗೆ ತನ್ನೆಲ್ಲಾ ಧ್ಯೇಯೋದ್ದೇಶವನ್ನು ಕಳೆದುಕೊಂಡಿದೆ ಎಂಬುದನ್ನು ನಲವತ್ತೇಳರ ಸ್ವಾತಂತ್ರ ಕವಿತೆಯು ಮಾರ್ಮಿಕವಾಗಿ ಚಿತ್ರಿಸುತ್ತದೆ. ಭಾರತೀಯ ಸಂದರ್ಭದಲ್ಲಿ ಸ್ವಾತಂತ್ರ್ಯವೆಂಬುದು ಕೆಲವೇ ಮಂದಿ ಉಳ್ಳವರ ಸ್ವತ್ತಾಗಿದೆ. ಬ್ರಿಟಿಷರಿಂದ ಪಡೆದ ಸ್ವಾತಂತ್ರ್ಯ ಏನಿಲ್ಲ ಕರಾಳತೆಯನ್ನು ಪಡೆದುಕೊಂಡಿದೆ ಎಂಬುದನ್ನು ಮಾರ್ಕ್ಸ್‌ವಾದಿ ಹಿನ್ನೆಲೆಯಲ್ಲಿ ಕವಿತೆ ಹೀಗೆ ಕಂಡರಿಸುತ್ತದೆ. ಸ್ವಾತಂತ್ರ್ಯ ನಂತರ ಅಧಿಕಾರಕ್ಕೆ ಪ್ರತಿಗಾಮಿ ರಾಜಕೀಯ ವ್ಯವಸ್ಥೆಯು ದಲಿತರು, ಶೋಷಿತರೆಲ್ಲರ ಹಂಬಲಗಳನ್ನು ನುಚ್ಚು ನೂರಾಗಿಸಿತು. ಪ್ರಜಾಪ್ರಭುತ್ವದ ಹೆಸರಿನಲ್ಲಿ ಸರ್ವಾಧಿಕಾರಿ ಮನಸ್ಥಿತಿ ತನ್ನೆಲ್ಲ ಕ್ರೌರ್ಯವನ್ನು ಮರೆಯುತೊಡಗಿತು. ಇಲ್ಲಿನ ಬಹುಸಂಖ್ಯಾತರು ಬ್ರಿಟಿಷರ ಗುಲಾಮಗಿರಿಯಿಂದ ಬಿಡಿಸಿಕೊಂಡರೂ ಸ್ವಾತಂತ್ರ್ಯ ನಂತರ ಸ್ವದೇಶಿಯರ ಗುಲಾಮಗಿರಿಯ ತೆಕ್ಕೆಗೆ ಮರಳಿದಂತಾಗಿದೆ. ಬ್ರಿಟಿಷರ ವಿರುದ್ಧ ಹೋರಾಟದಷ್ಟೇ ನಮ್ಮೊಳಗಿನ ಹಿತಶತ್ರುಗಳ ವಿರುದ್ಧದ ಹೋರಾಟ ಪ್ರಸ್ತುತದಲ್ಲಿ ಅತ್ಯಾವಶ್ಯಕ. ಒಟ್ಟಾರೆ ೪೭ರ ಸ್ವಾತಂತ್ರ್ಯ ಭಾರತದಲ್ಲಿ ಪರಿಣಾಮಕಾರಿಯಾದ ಬದಲಾವಣೆ ಮತ್ತು ಪ್ರಗತಿಯನ್ನು ಉಂಟುಮಾಡಿಲ್ಲ ಎಂಬುದರ ಬಗೆಗೆ ಕವಿಯಲ್ಲಿ ವಿಷಾದವಿದೆ. ಆದರೆ ಈ ಕವಿತೆಯು ಶ್ರೀ ಶ್ರೀಯವರ ಕವಿತೆಯಂತೆ ವಿಶ್ವಕ್ಕೆ ಮುಖಮಾಡದೆ ಮಾನವ ಸಮುದಾಯದ ಬದಲಾವಣೆಯ ಚಿತ್ರಕ್ಕೆ ಮುಖಮಾಡದೆ ದೇಶೀಯ ಬದಲಾವಣೆಗೆ ಮಾತ್ರ ಸೀಮಿತವಾಗಿದೆ.

ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಟಾಟಾ ಬಿರ್ಲಾ ಜೋಬಿಗೆ ಬಂತು
ಜನಗಳ ತಿನ್ನುವ ಬಾಯಿಗೆ ಬಂತು

ನಲವತ್ತೇಳರ ಸ್ವಾತಂತ್ರ್ಯ
ಬಡವರ ಮನೆಗೆ ಬರಲಿಲ್ಲ
ಬೆಳಕಿನ ಕಿರಣ ತರಲಿಲ್ಲ
ಗೋಳಿನ ಕಡಲನು ಬತ್ತಿಸಲಿಲ್ಲ
ಸಮತೆಯ ಹೂವನು ಅರಳಿಸಲಿಲ್ಲ
ಹಣವಂತರು ಕೈ ಸನ್ನೆ ಮಾಡಿದರೆ
ಕತ್ತಲೆಯಲ್ಲಿ ಬೆತ್ತಲೆಯಾಯಿತು
ಯಾರೂ ಕಾಣದ ಸ್ವಾತಂತ್ರ್ಯ
ಸಾವಿರಾರು ಜನ ಗೋರಿಯಾದರು
ಲಕ್ಷ ಲಕ್ಷ ಜನ ಗಲ್ಲಿಗೇರಿದರು
ರೈತ ಕಾರ್ಮಿಕರು ರಕ್ತವಕೊಟ್ಟರು

ಯಾರಿಗೆ ಬಂತು ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ
ಪೋಲೀಸರ ಬೂಟಿಗೆ ಬಂತು
ಮಾಲೀಕರ ಚಾಟಿಗೆ ಬಂತು
ಬಂದೂಕದ ಗುಂಡಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ

ಪಾರ್ಲಿಮೆಂಟಿನ ಕುರ್ಚಿಯ ಮೇಲೆ
ವರ್ಷಗಟ್ಟಲೆ ಚರ್ಚೆಗೆ ಕೂತು
ಬಡವರ ಬೆವರು ರಕ್ತವ ಕುಡಿದು
ಏಳಲೆ ಇಲ್ಲ ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ
ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ **(ನಲವತ್ತೇಳರ ಸ್ವಾತಂತ್ರ್ಯ: ಸಿದ್ಧಲಿಂಗಯ್ಯ)**

ಶ್ರೀಶ್ರೀ ಮತ್ತು ಸಿದ್ಧಲಿಂಗಯ್ಯನವರ ನಡುವಿನ ತಾತ್ವಿಕ ಭಿನ್ನತೆಯನ್ನ 'ಹೆಂಡಕ್ಕೆ ಸಾವಿಲ್ಲವೊ' ಎಂಬ ಸಿದ್ಧಲಿಂಗಯ್ಯನವರ ಕವಿತೆಯನ್ನು 'ಅರರೇ ನಾಲ್ಕಾಣೆ ಬಿಲ್ಲೆ' ಎಂಬ ಶ್ರೀ ಶ್ರೀ ಕವಿತೆಗೂ ಹೋಲಿಸಿ ಭಿನ್ನತೆಗಳನ್ನ ಗುರ್ತಿಸಬಹುದು. ಸಿದ್ಧಲಿಂಗಯ್ಯನವರ ಕವಿತೆ ಕ್ಷಣದ ಆನಂದಕ್ಕೆ ಸೀಮಿತವಾದರೆ ಶ್ರೀ ಶ್ರೀ ಕವಿತೆ ಈ ಜಗತ್ತಿಗೆ ಏನಾದರು ಮಾಡಬೇಕೆಂಬ ಆಸೆ ಹೊರುತ್ತದೆ. ಇಲ್ಲಿ ಸ್ವಂತ ಸುಖ ಮುಖ್ಯವಾದರೆ ಅಲ್ಲಿ ಸಮಾಜದ ಸುಖ ಮುಖ್ಯವಾಗಿದೆ. ಸಿದ್ಧಲಿಂಗಯ್ಯ ಚಿತ್ರಿಸಿರುವ ಕವಿತೆ ದಲಿತರ ಇಂದಿನ ಸ್ಥಿತಿಗೆ ಕನ್ನಡಿಯಂತಿದೆ.

ಭೂತಾಯಿ ಸಿಗಲಿಲ್ಲ ಈ ತಾಯಿ ಸಿಕ್ಕವಳೆ
ಕಾಣಿರೋ ಆನಂದವ
ಹೆಂಡಬಾಡಿನ ಮುಂದೆ ಇನ್ನೂ ದೇವರು ಉಂಟೆ
ಮಾಡಿರೋ ದೊಡ್ಡಬ್ಬವ
ಸಾವ್ಕಾರ್ರ ಸಂಗೀತವ
ನಮ್ಮಯ ದುಡಿಮೇಲಿ ಧಣಿಜೀವ ಅಡಗೈತೆ
ಧಣಿಗೆಂದು ನೋವಿಲ್ಲವೊ
ಹೆಂಡದ ಗಡಿಗೇಲಿ ನಮಜೀವ ಅಡಗೈತೆ
ಹೆಂಡಕ್ಕೆ ಸಾವಿಲ್ಲವೊ
ಉರಿಬಾಡು ಹೆಂಡಕ್ಕೆ ಹುಟ್ಟಿದ ಜನ ನಾವು
ವ್ಯಸನಕ್ಕೆ ತಾವಿಲ್ಲವೊ
ಹೆಂಡಕ್ಕೆ ಸಾವಿಲ್ಲವೊ **(ಹೆಂಡಕ್ಕೆ ಸಾವಿಲ್ಲವೊ: ಸಿದ್ಧಲಿಂಗಯ್ಯ)**

"ಅರರೇ ನಾಲ್ಕಾಣೆ ಬಿಲ್ಲೆ ದೊರೆಯಿತು
ಅದರಿಂದೇನು ಮಾಡುವೆ?"

ಎಂಬ ಮೂಲ ಪ್ರಶ್ನೆ ಸಿದ್ಧಲಿಂಗಯ್ಯನವರ ಜಗತ್ತಿಗೂ ಶ್ರೀ ಶ್ರೀ ಜಗತ್ತಿಗೂ ಇರುವ ವ್ಯತ್ಯಾಸಗಳನ್ನ ಹೇಳುತ್ತದೆ. ಸಿದ್ಧಲಿಂಗಯ್ಯನವರದು ಹಳ್ಳಿಯ ದಲಿತ ಲೋಕ ಅದಕ್ಕೆ ಹಣಕ್ಕಿಂತ ಹೆಂಡ ಬಾಡು ಮುಖ್ಯ ಸವ್ಕಾರ ಸಾಲದ ಚಿಂತೆ ಇಲ್ಲ. ಆದರೆ ಶ್ರೀ ಶ್ರೀ ಲೋಕ ನಗರದ ಬಡವರ ಲೋಕ ಇಲ್ಲಿ ಹಣದ ಬಳಕೆಯ ತಿಳುವಳಿಕೆ ಇದೆ. ಅಂತಲೇ ಅದರಿಂದೇನು ಮಾಡುವೆ ಎಂಬ ಪ್ರಶ್ನೆಗೆ ಉತ್ತರವಾಗಿ

ಇದರಿಂದ ಹಲಗೆ ಕೊಳ್ಳುವೆ
ನನಗೊಂದು ಬಳಪಕೊಳ್ಳುವೆ
ಇನ್ನೂ ಏನು ಕೊಳ್ಳುವೆ?
ನಾನೊಂದು ರೆಕ್ಕೆಗಳ ಆನೆ ಕೊಳ್ಳುವೆ
ಗೆಜ್ಜೆಗಳ ಕುದುರೆ ಕೊಳ್ಳುವೆ
ಇನ್ನೂ ಏನು ಕೊಳ್ಳುವೆ?
ಅಲ್ಲಿ ರಾಜನ ಪುತ್ರಿಯನೆ ಕೊಳ್ಳುವೆ
ಆಕೆಯ ನನ್ನ ಕೋಣೆಗೆ ಕೂಡಿ ಹಾಕುವೆ
ತಾಳಿದಾರವ ಮೂರು ಸಾರಿ ಮುಡಿಗಂಟು
ಹಾಕುವೆ

ಆ ನಂತರ?
ಆನೆ ಮೇಲೆ ಆಗಸದಲ್ಲಿ
ಇಬ್ಬರೂ ವಿಹಾರ ಮಾಡುವೆವು.

ಒಹೊಯ್ ಹುಚ್ಚು ಹುಡುಗ
ಎಷ್ಟು ಹೊತ್ತು ಸ್ವಂತದಾಸೆಯೇನಾ
ಈ ಜಗತ್ತಿಗಾಗಿ
ಏನಾದರೂ ಮಾಡೆಯಾ ನೀನು?
ಊ! ಯಾಕೆ ಮಾಡೆನು
ಬೆಲೆಯುಳ್ಳದ್ದು ನನ್ನ ನಾಲ್ಕಾಣೆ
ಇದರಲ್ಲಿ ಬಾಂಬುಗಳ ಕೊಳ್ಳುವೆ
ಚಾಕುಕೊಳ್ಳುವೆ ತು
ಪಾಕಿಗಳ ಕೊಳ್ಳುವೆ
ಇದರಲ್ಲಿ ಟ್ಯಾಂಕುಗಳ ಕೊಳ್ಳುವೆ
ಇದರಲ್ಲಿ ವಿಮಾನಗಳ ಕೊಳ್ಳುವೆ
ಎಲ್ಲ
ಬಡವರಿಗೆ ಹಂಚಿಬಿಡುವೆ
ಇಲ್ಲದವರಿಗೆ ಹಂಚಿಬಿಡುವೆ
ಕೂಲಿಗಳಿಗೆ ಸರಬರಾಜು ಮಾಡುವೆ
ರೈತರಿಗೆ ಸರಬರಾಜು ಮಾಡುವೆ
ಮಾಡಿ?
ಪ್ರಜಾ ಸೇನೆ ನಿರ್ಮಿಸುವೆ
ಪ್ರಜಾಯುದ್ಧ ಪ್ರಕಟಿಸುವೆ
ಬಡವರೊಂದಿಗೆ ಬಗ್ಗರೊಂದಿಗೆ
ಕಿರಿಯರೊಂದಿಗೆ ಹಿರಿಯರೊಂದಿಗೆ
ಕೂಲಿಯೊಂದಿಗೆ ರೈತರೊಂದಿಗೆ
ನಾನೂ ಒಬ್ಬ ಸೇನೆಯೊಳಗೆ
ಸಿಪಾಯಿಯಾಗುವೆನು
ಲಡಾಯಿ ಮಾಡುವೆನು
ಕೆಂಪುಕೋಟೆಯ ಉರಿಸಿ ಬಿಡುವೆ
ಕೆಂಪು ಬಾವುಟ ಹಾರಿಸುವೆ
ಅನ್ಯಾಯಗಳ ಹತ ಮಾಡುವೆವು
ಅಕ್ರಮಗಳ ಬದಲಾಯಿಸುವೆವು

ಈ ಪ್ರಪಂಚವ ಬದಲಾಯಿಸುವೆವು
ಪರಿಪಾಲಿಸುವೆವು
ಸಮ ಸಮಾಜವ ರೂಪಿಸುವೆವು
ನವ ಸಮಾಜವನೆ ನಿಮಗಂದಿಸುವೆವು"

(ಅರೆರೇ ನಾಲ್ಕಾಣೆ ಬಿಲ್ಲೆ: ಶ್ರೀ ಶ್ರೀ)

ಭಿನ್ನತೆಯ ಅಂಶಗಳು

ಶ್ರೀ ಶ್ರೀ ಮತ್ತು ಸಿದ್ಧಲಿಂಗಯ್ಯನವರ ಕವಿತೆಗಳಿಗೆ ಸಮಾನ ಅಂಶಗಳಿರುವಂತೆ ಭಿನ್ನತೆಯ ಅಂಶಗಳೂ ಇವೆ.

೧. ಭಾಷಾ ಸ್ವರೂಪದಲ್ಲಿ ವ್ಯತ್ಯಾಸಗಳಿವೆ. ಶ್ರೀ ಶ್ರೀ ದೇಶೀಭಾಷೆ ಬಳಸುತ್ತೇನೆ ಎನ್ನುವಾಗಲೂ ಅವರಲ್ಲಿ ಹೆಚ್ಚು ಸಂಸ್ಕೃತ ಭಾಷಾ ಬಳಕೆ ಇದೆ.

೨. ಸಿದ್ಧಲಿಂಗಯ್ಯನವರ ಮೇಲೆ ಮೈಸೂರಿನ ಸುತ್ತಲ ಮತ್ತು ಬೆಂಗಳೂರಿನ ಶ್ರೀರಾಂಪುರ ಕಾಲೊನಿಯ ಭಾಷಾ ಪ್ರಭಾವವಿದ್ದರೆ ಶ್ರೀ ಶ್ರೀ ಮೇಲೆ ವಿಶಾಖಪಟ್ಟಣದ ದೇಸಿ, ಹೈದ್ರಾಬಾದಿನ ಉರ್ದು ಪ್ರಭಾವವಿರುವುದನ್ನ ಗುರ್ತಿಸಬಹುದು.

೩. ತೆಲುಗು ಕಾವ್ಯದ ಮೇಲೆ ಸ್ವತಂತ್ರ್ಯ ಪೂರ್ವ ಕಾಲದಿಂದಲೇ ಮಾರ್ಕ್ಸ್ ಪ್ರಭಾವವಿದೆ. ಶ್ರೀ ಶ್ರೀ ಕವಿತೆಯ ಮೇಲಂತೂ ಅದೇ ಅನಿವಾರ್ಯ ಮತ್ತು ಅಂತಿಮ ಎಂಬಷ್ಟು ಗಾಢವಾಗಿದೆ. ಆದರೆ ಸಿದ್ಧಲಿಂಗಯ್ಯನವರ ಆರಂಭಿಕ ಎರಡು ಸಂಕಲನದಲ್ಲಿ ಮಾರ್ಕ್ಸ್‌ವಾದ ಕಂಡುಬಂದರೂ ಅವರ ಮೇಲೆ ಅಂಬೇಡ್ಕರ್ ಮತ್ತು ಗಾಂಧೀ ಪ್ರಭಾವವೂ ಇರುವುದು.

೪. ತೆಲುಗಿನ ಶ್ರೀಶ್ರೀ ಕವಿತೆಯುಲ್ಲಿ ಶ್ರೀಕಾಕುಳು ತೆಲಂಗಾಣದಂತಹ ಹೋರಾಟಗಳೂ, ಜಮೀನ್ದಾರರ ದೌರ್ಜನ್ಯಗಳು, ನಿಜಾಮರ ದಬ್ಬಾಳಿಕೆ, ರಜಾಕರ ಹಾವಳಿ, ಭ್ರಷ್ಟ ರಾಜಕಾರಣಗಳ ಪ್ರಭಾವವಿದೆ.

ಸಿದ್ಧಲಿಂಗಯ್ಯನವರ ಕವಿತೆಗಳಲ್ಲಿ ಕನ್ನಡ ಜನಪದ ಪರಂಪರೆ, ವಚನ ಸಾಹಿತ್ಯ, ದಾಸ, ಸೂಫಿ ಪಂಥಗಳು, ಬೆಲ್ಜಿ, ಬೆಂಡಿಗೇರಿಯಂತಹ ಪ್ರಕರಣಗಳು, ತುರ್ತುಪರಿಸ್ಥಿತಿಯಂತಹ ಪ್ರಸಂಗಗಳ ಜೊತೆಗೆ, ಕಾರಂತರ ತೇಜಸ್ವಿ, ಕುವೆಂಪು ಪ್ರಭಾವಗಳನ್ನು ಗುರ್ತಿಸಬಹುದು.

೫. ಹಿಂಸೆಯೇ ಪರಮ ಅಸ್ತ್ರವೆಂದು ಭಾವಿಸುವ ಶ್ರೀಶ್ರೀ ಕವಿತೆಗಳಲ್ಲಿ ಮತ್ತೆ ಮತ್ತೆ ನಕ್ಸಲೈಟ್ ಎಂಬ ಪದ ಮತ್ತು ಬಲಿಯಾದವರ ವಿವರಗಳು ಬಂದಿವೆ.

ಆದರೆ ಕನ್ನಡ ದಲಿತ ಬಂಡಾಯ ಕವಿತೆಗಳಲ್ಲಿ ಈ ಪದ ಬಳಕೆಯಾಗಿಲ್ಲ ಬಹುತೇಕರಿಗೆ ಈ ಪದವೇ ಗಾಬರಿ ಹುಟ್ಟಿಸುವಂತದ್ದು. ಸಿದ್ಧಲಿಂಗಯ್ಯನವರಲ್ಲಿ ಆರಂಭದಲ್ಲಿ ಮಾರ್ಕ್ಸ್ ಒಲವು ಕಂಡುಬಂದಿದೆಯಾದರೂ ಆನಂತರ ಅದು ಗಾಂಧಿ, ಬಸವ, ಲೋಹಿಯಾರನ್ನೂ ಒಳಗೊಂಡಿದೆ. ಅಂಬೇಡ್ಕರ್ ನನ್ನ ಸೇರಿಸಿಕೊಂಡು ವಿಸ್ತಾರವಾಗಿದೆ. ಬುದ್ಧನ ಪ್ರಶಾಂತತೆಯೂ ಇವರ ಕಾವ್ಯಗಳ ಮೇಲಿನ ಬೆಳಕಾಗಿದೆ.

೬. ಶ್ರೀ ಶ್ರೀ ಕವಿತೆಯಲ್ಲಿ ವ್ಯಕ್ತಿಯಿಂದ ಸಮೂಹವನ್ನು ಆವರಿಸಿಕೊಂಡರೆ ಸಿದ್ಧಲಿಂಗಯ್ಯ ಸಮೂಹದಿಂದ ವ್ಯಕ್ತಿಯ ಕಡೆ ಬರುತ್ತಾರೆ.

೭. ಶ್ರೀ ಶ್ರೀಯವರದು ಕೇವಲ ಕ್ರಾಂತಿಕಾವ್ಯವಾದರೆ ಸಿದ್ಧಲಿಂಗಯ್ಯನವರಲ್ಲಿ ಕ್ರಾಂತಿಯ ಜೊತೆಗೇ ಪ್ರೇಮಕಾವ್ಯವನ್ನು ನೋಡಬಹುದು. ಪ್ರೇಮದೊಳಗೂ ಹೇಗೆ ಜಾತೀಯ ವರ್ಗದ ಶೋಷಣೆ ಇದೆ ಎಂಬುದನ್ನವರು ತೋರುತ್ತಾರೆ.

೮. ಶ್ರೀಶ್ರೀಯವರದು ನಗರದ ವರ್ಗ ಕವಿತೆಯಾದರೆ ಸಿದ್ಧಲಿಂಗಯ್ಯನವರದು ನಗರದ ವರ್ಗ ಕವಿತೆಯ ಜೊತೆಗೇ ಹಳ್ಳಿಯ ಜನರ ದಲಿತ ಕಾವ್ಯವೂ ಹೌದು.

೯. ಶ್ರೀ ಶ್ರೀಯವರಲ್ಲಿ ದೈವ, ಪ್ರಶ್ನೆಯ, ವ್ಯಂಗ್ಯದ, ಹೇಡಿತನದ ವಿವರವಾದರೆ ಸಿದ್ಧಲಿಂಗಯ್ಯನವರಲ್ಲಿ ದೈವ ಮಾನವೀಯವಾಗೂ ಇದೆ ಎಂಬುದನ್ನು ಹಳ್ಳಿಯ ದೈವಗಳ ಮೂಲಕ ನಿರೂಪಿಸುತ್ತಾರೆ.

೧೦. ಶ್ರೀ ಶ್ರೀಯವರಲ್ಲಿ ವೈದಿಕ ಮತ್ತು ಮೇಲು ವರ್ಗದ ದೈವಗಳು ಮಾತ್ರ ಕಂಡರೆ ಸಿದ್ಧಲಿಂಗಯ್ಯನವರಲ್ಲಿ ಅಧೋ ಲೋಕದ ಗ್ರಾಮದೇವತೆಗಳಿಂದ ಪ್ರಕೃತಿ ಮಾತೆಯ ತನಕವೂ ಕಾವ್ಯ ವಿಸ್ತಾರಗೊಂಡಿದೆ.

❖

ಕೊನೆ ಟಿಪ್ಪಣಿ

೧. ಮಹಾಪ್ರಸ್ಥಾನ, ಮತ್ತೊಂದು ಪ್ರಸ್ಥಾನ: ಶ್ರೀ ಶ್ರೀ ಆಯ್ದ ಕವನಗಳು (ಅನು) ಎಚ್.ಎಸ್. ಶಿವಪ್ರಕಾಶ್, ಬಂಜಗೆರೆ ಜಯಪ್ರಕಾಶ್, ರಾಘವೇದ್ರರಾವ್, ೧೯೯೧, ಪುಟ- ೭-೮೧.

೨. ಜನ ಸಂಸ್ಕೃತಿ: ಡಾ. ಸಿದ್ಧಲಿಂಗಯ್ಯ: ೨೦೦೭; ಪುಟ-೨೧೯-೩೦೩.

೩. ಪ್ರತಿ ಸ್ಪಂದನ: ಡಾ.ಸಿದ್ಧಲಿಂಗಯ್ಯನವರ ಭಾಷಣಗಳು; ೨೦೦೩; ಪುಟ-೪೩.

೪. ಶ್ರೀ ಶ್ರೀ ಉಪನ್ಯಾಸಾಲು: ಚಲಸಾನಿ ಪ್ರಸಾದ್; ೨೦೦೦, ಪುಟ-೫೦.

೫. ಊರುಕೇರಿ ಆತ್ಮಕಥನ- ಡಾ. ಸಿದ್ಧಲಿಂಗಯ್ಯ; ೨೦೦೬, ಪುಟ-೧೧೫.

❖ ❖ ❖

ಭಾಗ – ೮

ಸಮಾರೋಪ

ಸಮಾರೋಪ

'ಶ್ರೀಶ್ರೀ ಮತ್ತು ಸಿದ್ಧಲಿಂಗಯ್ಯ ತೌಲನಿಕ ಅಧ್ಯಯನ' ಎಂಬ ಸಂಶೋಧನಾ ಪ್ರಬಂಧವು ನನ್ನ ಸ್ವಂತ ಅಧ್ಯಯನವನ್ನು ಆಧರಿಸಿ ರೂಪುಗೊಂಡಿದೆ. ಎರಡು ಭಿನ್ನ ಭಾಷೆಗಳ ಸಮಾನ ಆಶಯಗಳ ಕವಿಗಳನ್ನು ಒಂದೆಡೆ ಇಟ್ಟು ಅವರ ಜನಪರ ನಿಲುವು ಅವರ ತಾತ್ವಿಕ ಮತ್ತು ಸೈದ್ಧಾಂತಿಕ ಗ್ರಹಿಕೆಗಳು, ಆಯಾದೇಶೀಯ ಪರಂಪರೆಯನ್ನು ಬಳಸಿಕೊಂಡ ರೀತಿ ಈ ಪ್ರಬಂಧದ ಮುಖ್ಯ ವಸ್ತುವಾಗಿದೆ. ಕಾವ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸಿಕೊಂಡು, ಉಳಿದ ವಿಷಯಗಳಾದ ನಾಟಕ ವಿಮರ್ಶೆ, ಉಪನ್ಯಾಸ, ಸಂಶೋಧನೆ ಮೊದಲಾದ ಇವರ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳನ್ನು ಸ್ಥೂಲವಾಗಿ ಮಾತ್ರ ಗ್ರಹಿಸಲಾಗಿದೆ. ಅಧ್ಯಯನದ ಆಳಕ್ಕೆ ಇಳಿದೆಂತಲ್ಲಾ ದೃಷ್ಟಿ ಧೋರಣೆಗಳಿಗೆ ಸಂಬಂಧಿಸಿದ ಅನೇಕ ಸಂಗತಿಗಳು ಈ ಕಾವ್ಯಗಳಲ್ಲಿರುವುದು ಕಂಡುಬಂದಿತು. ಉದಾ: ಮಾರ್ಕ್ಸ್‌ವಾದಕ್ಕೆ ಬದ್ಧವಾದ ಶ್ರೀಶ್ರೀಯವರು ಇಂದಿರಾಗಾಂಧಿಯವರನ್ನು ಹೊಗಳುವುದು, ಅದೇ ಮಾರ್ಕ್ಸ್‌ವಾದವನ್ನು ನಂಬಿದ ಸಿದ್ಧಲಿಂಗಯ್ಯನವರು ಗಾಂಧಿಯನ್ನ ದೇವರು, ತಂದೆ ಎನ್ನುವುದು, ದೇವರು ಕುರಿತ ಇಬ್ಬರ ಭಿನ್ನದೃಷ್ಟಿಗಳು, ಪ್ರಕೃತಿಕುರಿತ ಭಿನ್ನ ನೋಟಗಳು, ವ್ಯಕ್ತಿ ಸಿದ್ಧಾಂತ ಕುರಿತ ಭಿನ್ನ ಕವಿತೆಗಳು, 'ಜಾತಿ ಬದಲಾಗಬೇಕು ಭೂಮಿಬೇಕು' ಎನ್ನುವ ಕವಿತೆಗಳು, 'ಸ್ಥಿತಿ ಬದಲಾಗಬೇಕು ಸಮಾನ ಅವಕಾಶಬೇಕು' ಎನ್ನುವ ಕವಿತೆಗಳು, ಬುಲೆಟ್ ಪ್ರಧಾನಕವಿತೆಗಳು, ಬ್ಯಾಲೆಟ್ ಪ್ರಧಾನ ಕವಿತೆಗಳು ಹೀಗೆ ಅನೇಕ ವಿಚಾರಗಳು ಈ ಕವಿತೆಗಳಲ್ಲಿರುವುದು ಕಂಡುಬಂದಿತು. ಈ ಅಧ್ಯಯನಕ್ರಮ ಪರಂಪರೆಯ ಜೊತೆಜೊತೆಗೇ ನಡೆಯಬೇಕಿದ್ದರಿಂದ ಪ್ರಬಂಧದ ವಿಸ್ತಾರ ಹೆಚ್ಚಾಗುವ ಸಾಧ್ಯತೆ ಕಂಡುಬಂತು. ಆಗ ನಾನು ಮಾರ್ಗದರ್ಶಕರೊಂದಿಗೆ ಚರ್ಚಿಸಿ ಕೊನೆಗೆ ಆಯ್ದ ಕೆಲವು ಪ್ರಾತಿನಿಧಿಕ ಕವಿತೆಗಳ ಮೂಲಕ ಈ ಎಲ್ಲ ಸಂಗತಿಗಳನ್ನು ಒಂದೆಡೆ ಕಟ್ಟಿಕೊಳ್ಳಲು ಪ್ರಯತ್ನಿಸಿದೆ. ತೆಲುಗು ಮತ್ತು ಕನ್ನಡ ಕಾವ್ಯ ಪರಂಪರೆಗಳು ಹೇಗೆ ಜನಸಾಮಾನ್ಯರ ಪರವಾಗಿ ಚಿಂತಿಸುತ್ತಾ ಬಂದಿವೆ. ಸಾಮಾಜಿಕ ಹೊಣೆಗಾರಿಕೆ ಹೇಗೆ ಕಾಲದಿಂದ ಕಾಲಕ್ಕೆ ಹೆಚ್ಚು ಗಾಢವಾಗುತ್ತಾ ಬಂದಿವೆ ಎಂಬುದನ್ನು ಸಾಂಕೇತಿಕವಾಗಿ ಈ ಪ್ರಬಂಧದಲ್ಲಿ ನಿರೂಪಿಸಲು ಪ್ರಯತ್ನಿಸಿರುವೆ. ಈ ಹಿನ್ನೆಲೆಯ ಈ ಅಧ್ಯಯನ ವ್ಯಕ್ತಿ ವೈಭವೀಕರಣವಾಗದೇ ಕೇವಲ ಕೃತಿನಿಷ್ಠವಾಗದೇ ಒಂದು ವಸ್ತುವನ್ನು ಆಶ್ರಯಿಸಿ ಬೇರೆ ಬೇರೆ ಪ್ರದೇಶದ ಬೇರೆ ಬೇರೆ ಕಾಲಮಾನದ ಈ ಕವಿಗಳು ಹೇಗೆ

[illegible]

ಸ್ಪಂದಿಸಿದ್ದಾರೆ ಎಂದು ಬಗೆದು ನೋಡಲಾಗಿದೆ. ಒಂದು ಅಥವಾ ಕೆಲವು ಸಮಾನ ಸನ್ನಿವೇಶಗಳು, ವರ್ಣನೆಗಳು ಬೇರೆಬೇರೆಯ ಈ ಕವಿಗಳಲ್ಲಿ ಹೇಗೆ ಸಾಮ್ಯತೆ ಮತ್ತು ಭಿನ್ನತೆಗಳನ್ನು ಪಡೆದುಕೊಂಡಿವೆ ಎಂಬ ವಿವೇಚನೆ ಮಾಡಲಾಗಿದೆ. ಹಾಗೇ ಈ ಇಬ್ಬರೂ ಮಹತ್ವದ ಕವಿಗಳ ಅನನ್ಯತೆಯನ್ನು ಅವರ ಕಾವ್ಯಗಳ ವೈಶಿಷ್ಟ್ಯವನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಹಿನ್ನೆಲೆಯೊಂದಿಗೆ ನಡೆದ ಈ ಅಧ್ಯಯನವು ಉತ್ತಮ ಫಲಿತಾಂಶ ನೀಡಿದೆಯೆಂದೇ ಭಾವಿಸಲಾಗಿದೆ. ಹೀಗೆ ಹೇಳುವಾಗಲೇ ಇಲ್ಲಿ ನಾನು ನೀಡಿದ ಅಭಿಪ್ರಾಯಗಳು ಅಥವಾ ದೃಷ್ಟಿಕೋನವೇ ಅಂತಿಮವೆಂದಾಗಲೀ ಪರಿಪೂರ್ಣವಾದುದೆಂದಾಗಲೀ ಭಾವಿಸಲಾಗಿಲ್ಲ. ಈ ದಿಕ್ಕಿನಲ್ಲಿ ಅಧ್ಯಯನಕ್ಕೆ ತೊಡಗುವವರಿಗೆ ಇದೊಂದು ದಿಕ್ಸೂಚಿಯಾದೀತೆಂದು ಮಾತ್ರ ಹೇಳಬಲ್ಲೆ. ಈ ಅಧ್ಯಯನದ ನೆಪದಲ್ಲಿ ನಾನು ಕಾಣಿಸಿರುವುದಕ್ಕಿಂತ ಕಂಡುಕೊಂಡದ್ದೇ ಹೆಚ್ಚಾಗಿದೆ. ಎರಡು ಭಾಷೆಗಳ, ಸಂಸ್ಕೃತಿ, ಕಾವ್ಯಧೋರಣೆ, ಅಭಿವ್ಯಕ್ತಿವಿಧಾನ, ಸಾಮಾಜಿಕ ಸ್ಪಂದನ ಮೊದಲಾದ ಮಹತ್ವದ ವಿಷಯಗಳ ವ್ಯಾಪಕ ಅರಿವು ನನಗೆ ಇದರಿಂದ ಸಾಧ್ಯವಾಗಿದೆ. ಕಾವ್ಯಗಳನ್ನು ಯಾವ ಯಾವ ನೆಲೆಗಳಿಂದ ಅಧ್ಯಯನ ಮಾಡಬಹುದೆಂಬ ಹೊಸ ಕ್ಷಿತಿಜ ಈ ಮೂಲಕ ನನ್ನೆದುರು ತೆರೆದುಕೊಂಡಿದೆ. ಎರಡು ಭಿನ್ನ ಭಾಷೆಗಳಲ್ಲಿನ ಕವಿಗಳ ಕಾವ್ಯದಲ್ಲಿ ಹುದುಗಿರುವ ತಾತ್ವಿಕತೆಯನ್ನು ಗುರುತಿಸುವ ಮತ್ತು ಆ ಕುರಿತು ಗಂಭೀರ ಜಿಜ್ಞಾಸೆ ನಡೆಸುವ ಹೊಸ ಹೊಳಹುಗಳನ್ನು ಈ ಅಧ್ಯಯನದ ಮೂಲಕ ನಾನು ಪಡೆದುಕೊಂಡಿರುವೆ. ಇದೊಂದು ಮೊದಲ ಪ್ರಯತ್ನ ಇದರೊಳಗೆ ಇನ್ನಷ್ಟು ಆಳಕ್ಕಿಳಿದರೆ ಇನ್ನೂ ಹೆಚ್ಚು ಸಂಗತಿಗಳು ದೊರೆಯುತ್ತವೆ. ಆ ಮೂಲಕ ಎರಡು ಭಾಷೆಗಳಿಗೆ ಅತ್ಯಂತ ಹೆಚ್ಚು ಪ್ರಯೋಜನ ಲಭಿಸುತ್ತದೆ ಎಂದೇ ಅಧ್ಯಯನದ ಮೂಲಕ ತಿಳಿಯಲಾಗಿದೆ.

ಕಾವ್ಯವು ಕಾಲದಿಂದ ಕಾಲಕ್ಕೆ ಬದಲಾಗುತ್ತಲೇ ಹೋಗುತ್ತದೆ. ಸಮಾಜ ಮತ್ತು ಸಮಾಜದ ವ್ಯಕ್ತಿಗೆ ಅನುಗುಣವಾಗಿ ತನ್ನ ಸ್ವರೂಪ ಮತ್ತು ನಿವೇದನ ವಿಧಾನವನ್ನೂ ಬದಲಾಯಿಸಿಕೊಳ್ಳುತ್ತಲೇ ಹೋಗುತ್ತದೆ. ಇಂತಹ ಕಾಲದಲ್ಲಿ ನಾವು ಮತ, ಭಕ್ತಿ, ಧರ್ಮ ಎಂದು ಅಭ್ಯಸಿಸುವ ಬದಲು ಹೊರಳು ಹಾದಿಯ ಕಾವ್ಯವು ಬದುಕಿಗೆ ಪ್ರಯೋಜನವಾಗಬಲ್ಲ ಜಾಗತಿಕ ದೃಷ್ಟಿಕೋನವನ್ನ ಹೆಚ್ಚು ಅಪೇಕ್ಷಿಸುತ್ತದೆ. ಈ ಹಾದಿಯ ಒಂದು ಪುಟ್ಟ ಪ್ರಯತ್ನ ಈ ನಿಬಂಧ. ಈ ಎರಡೂ ಕವಿಗಳ ಕಾವ್ಯಗಳು ಬದುಕಿನ ನಿರಂತರ ಸಂಘರ್ಷದ ಪ್ರತಿಧ್ವನಿಯೇ ಕಾವ್ಯ ಎಂದು ಸಾಬೀತುಪಡಿಸುವ ರೀತಿಯಲ್ಲಿವೆ. ಇವುಗಳ ಆಂತರ್ಯವನ್ನು ಬಗೆದು ನೋಡಿದಾಗ ಮಾನವೀಯತೆ, ಸ್ವಾಭಿಮಾನ, ದುಡಿಮೆಗಳೇ ಸತ್ಯಗಳೆಂದು ದೇವರು, ಪೂಜೆ, ಸ್ತುತಿಗಳು ಹೇಡಿತನದ ಲಕ್ಷಣಗಳೆಂದು ಈ ಕಾವ್ಯಗಳು ಸಾಬೀತು ಮಾಡುತ್ತವೆ. ಹಾಗೆ ನೋಡಿದರೆ ಈ ಅಧ್ಯಯನವು ಬಹುಶಿಸ್ತೀಯ ನೆಲೆಯನ್ನು ಬಯಸುತ್ತದೆ.

ಕಾವ್ಯವನ್ನು ಕೇವಲ ಕಾವ್ಯವಾಗಿ ನೋಡದೆ ಜನಸಾಮಾನ್ಯರ ಬದುಕಿನ ಮಾರ್ಗದರ್ಶಿ ಎಂದೂ, ಚರಿತ್ರೆಯೆಂದೂ, ಕನಸೆಂದೂ, ಹೊಸ ಬೆಳಕೆಂದು, ತಿನ್ನುವ ಅನ್ನವೆಂದೂ ನೋಡಬಹುದಾಗಿದೆ. ಹಾಗಾಗಿ ಕಾವ್ಯವನ್ನು ಇಲ್ಲಿ ಇಬ್ಬರು ವ್ಯಕ್ತಿಗಳ ವೈಯಕ್ತಿಕ ಚೌಕಟ್ಟಿನಲ್ಲಿ ಮಾತ್ರ ಗ್ರಹಿಸದೆ ಅದರಾಚೆಗಿನ ಸಮಾಜಶಾಸ್ತ್ರ, ಮಾನವಶಾಸ್ತ್ರ, ಅರ್ಥಶಾಸ್ತ್ರಗಳ ಚಿಂತನೆಗಳ ಬೆಳಕಿನಲ್ಲಿಟ್ಟು ವಿಮರ್ಶಿಸಬಹುದಾಗಿದೆ. ಅದರಂತೆ ಇಲ್ಲಿ 'ಜನಪರ' ಎಂಬ ಹೊಸ ಆಯಾಮದ ಮೂಲಕವೇ ಈ ಕವಿಗಳನ್ನು ಇಟ್ಟು ಪರೀಕ್ಷಿಸಲು ಪ್ರಯತ್ನಿಸಲಾಗಿದೆ.

ಇಂತಹ ಅಧ್ಯಯನಗಳು ಈ ಮೊದಲೂ ಪ್ರಾಚೀನ ಮತ್ತು ನಡುಗನ್ನಡ ಕವಿಗಳನ್ನು ಕುರಿತಂತೆ ನಡೆದಿವೆ. ಆದರೆ, ಆಧುನಿಕ ತೆಲುಗು ಮತ್ತು ಕನ್ನಡ ಕವಿಗಳನ್ನು ಜೊತೆಯಲ್ಲಿಟ್ಟು ನೋಡುವ ಕ್ರಮ ಹೊಸದೆಂದೇ ನನ್ನ ಭಾವನೆ. ಇಂತಹ ಇನ್ನೂ ಅನೇಕ ಕವಿಗಳ ಚರ್ಚೆ ಕನ್ನಡದಲ್ಲಿ ನಡೆಯಬೇಕಿದೆ. ಇದರಿಂದ ಸಾಹಿತ್ಯಿಕ ಗಟ್ಟಿತನ ನಮ್ಮ ಕಾವ್ಯಕ್ಕೆ ದಕ್ಕುತ್ತದೆ. ಪ್ರಸ್ತುತ ಅಧ್ಯಯನದ ಮಿತಿಯಲ್ಲಿ ಈ ಪ್ರಬಂದವನ್ನು ರಚಿಸಲಾಗಿದೆ. ಈ ಅಧ್ಯಯನ ಕುರಿತಂತಹ ಅನೇಕ ಪ್ರಶ್ನೆಗಳು, ಚರ್ಚೆಗಳು ಪ್ರಸ್ತುತ ಅಧ್ಯಯನದ ಕ್ರಮವನ್ನು ವಿಸ್ತರಿಸುತ್ತವೆ ಮತ್ತು ಪರಿಪೂರ್ಣವಾಗಿಸುತ್ತವೆ ಎಂದು ಅತ್ಯಂತ ವಿನಯದಿಂದ ಹೇಳಬಯಸುತ್ತೇನೆ.

❖

ಕನ್ನಡ ಪರಾಮರ್ಶನಾ ಗ್ರಂಥಗಳು

೧. ಅರವಿಂದ ಮಾಲಗತ್ತಿ : **ದಲಿತಯುಗ ಮತ್ತು ಕನ್ನಡ ಸಾಹಿತ್ಯ,** ಚೇತನ ಬುಕ್ ಹೌಸ್, ಮೈಸೂರು ೧೯೯೯.

೨. ಅರವಿಂದ ಮಾಲಗತ್ತಿ (ಸಂ) : **ದಲಿತಮಾರ್ಗ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

೩. ಅಪ್ಪಗೆರೆ ಸೋಮಶೇಖರ : **ತನುಮುಟ್ಟದ ಮುನ್ನ,** ಪ್ರಸಾದ್ ಏಜನ್ಸೀಸ್, ವಿದ್ಯಾರಣ್ಯಪುರಂ, ಮೈಸೂರು, ೨೦೦೬

೪. ಅಪ್ಪಗೆರೆ ಸೋಮಶೇಖರ : **ಸುಟ್ಟಾವು ಬೆಳ್ಳಿಕಿರಣ,** ಪ್ರಸಾದ್ ಏಜನ್ಸೀಸ್, ವಿದ್ಯಾರಣ್ಯಪುರಂ, ಮೈಸೂರು ೨೦೦೬

೫. ಅರ್ಜುನಗೊಳಸಂಗಿ (ಸಂ) : **ದಲಿತಸಾಹಿತ್ಯ-ಸಮಾಲೋಕನ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೩

೬. ಅಪ್ಪಗೆರೆ ಸೋಮಶೇಖರ (ಸಂ) : **ಪ್ರತಿಸ್ಪಂದನ** ಡಾ. ಸಿದ್ಧಲಿಂಗಯ್ಯನವರ ಭಾಷಣಗಳು, ಶ್ರೀಕ್ಷೇತ್ರ ಪ್ರಕಶನ, ಪೋರ್ಟ್‌ಮೊಹಲ್ಲಾ,ಮೈಸೂರು ೨೦೦೩

೭. ಅರವಿಂದ ಮಾಲಗತ್ತಿ : **ಹೊಸದಿಕ್ಕು,** ಸಂಪುಟ-೧, ಸಂಚಿಕೆ-೫, ಶಹಾಪುರ ಕಲಬುರ್ಗಿ ಜಿಲ್ಲೆ.

೮. ಯು. ಆರ್. ಅನಂತಮೂರ್ತಿ : **ಸಮಕ್ಷಮ,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೨

೯. ಯು. ಆರ್. ಅನಂತಮೂರ್ತಿ (ಲೇ) : **ಹೊಸಗನ್ನಡಕಾವ್ಯದ ಎರಡು ಮಾರ್ಗಗಳು,** ಜಿ. ಎಸ್. ಎಸ್. (ಸಂ) ಪ್ರಸಾರಂಗ, ಬೆಂಗಳೂರು, ೧೯೮೧.

೧೦. ಆರ್ಕೆ ಮಣಿಪಾಲ : **ಸಾಹಿತ್ಯ ಸಿದ್ಧಾಂತ ಮತ್ತು ಹೋರಾಟ,** ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು-೧೯೮೨.

೧೧. ಆರ್ಕೆ ಮಣಿಪಾಲ : **ಲೋಕಗ್ರಹಿಕೆ ಮತ್ತು ಅಭಿವ್ಯಕ್ತಿ,** ಸಂಕ್ರಮಣ ಪ್ರಕಾಶನ, ಧಾರವಾಡ ೧೯೯೫

೧೨. ಆರ್ಕೆ ಮಣಿಪಾಲ : **ಸಾಹಿತ್ಯ ಆಶಯ ಮತ್ತು ವಿನ್ಯಾಸ,** ಸಂಕ್ರಮಣ ಪ್ರಕಾಶನ, ಧಾರವಾಡ ೧೯೮೮.

೧೩. ಅರ್ಕಸಾಲಿ ವೃಷಭೇಂದ್ರಾಚಾರ್ : **ಸ್ವತಂತ್ರೋತ್ತರ ಕನ್ನಡ ತೆಲುಗು ಕಾವ್ಯಗಳಲ್ಲಿ ಸಾಮಾಜಿಕ ಪ್ರಜ್ಞೆ,** ವಿದ್ಯಾನಿಧಿ ಪ್ರಕಾಶನ, ಗದಗ ೧೯೯೧.

೧೪. ಇಂದೂಧರ ಹೊನ್ನಾಪುರ : **ಬಂಡಾಯ ಪ್ರಸ್ತುತ,** ಸಾಹಿತ್ಯ ಪ್ರಕಾಶನ, ಹೂವಿನಹಡಗಲಿ ೧೯೯೪

೧೫. ಕಾಳೇಗೌಡ ನಾಗವಾರ : **ಪ್ರೀತಿ ಮತ್ತು ನಿರ್ಭೀತಿ,** ರಶ್ಮಿ ಉದ್ಯಮ ಕೇಂದ್ರ ಮೈಸೂರು ೧೯೮೮.

೧೬. ಗಂಗಾರಾಂ ಚಂಡಾಳ : **ಚಾಂಡಾಳರ ಕೂಗು,** ಬಂಡಾಯ ಪ್ರಕಾಶನ, ಹೊನ್ನಾವರ ೧೯೮೩.

೧೭. ಗಣೇಶನ್ ಎಸ್ : **ದಲಿತಸಾಹಿತ್ಯ ಚಳುವಳಿ,** ಪಂಚಮ ಪ್ರಕಾಶನ, ಬೆಂಗಳೂರು ೧೯೮೨

೧೮. ಗಂಗಾರಾಂ ಚಂಡಾಳ : **ಕರ್ನಾಟಕ ದಲಿತಚಳುವಳಿ ಮತ್ತು ಅಂಬೇಡ್ಕರ್,** ಚೈತ್ರ ಪ್ರಕಾಶನ, ಕೋಲಾರ-೧೯೯೨

೧೯. ಗುರುಮೂರ್ತಿ ಪೆಂಡಕೂರು : (ಅನು) **ಸಮಗ್ರ ದಿಗಂಬರ ಕಾವ್ಯ,** ಯುವಕ ಸಂಘ, ರಾಮನಗರ, ಹಗಲಿಬೊಮ್ಮನಹಳ್ಳಿ, ೨೦೦೩.

೨೦. ಗೋಪಾಲಕೃಷ್ಣರಾವ್ : **ಕುಟುಂಬ ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ,** ಪ್ರಗತಿ ಪ್ರಕಾಶನ ಮಾಸ್ಕೋ ೧೯೮೦

೨೧. ಚಂದ್ರಶೇಖರ ಟಿ. ಆರ್ : **ದಲಿತ ಅಧ್ಯಯನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೫

೨೨. ಚಂದ್ರಶೇಖರ ಕಂಬಾರ : **ದೇಶೀಯ ಚಿಂತನೆ,** ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು ೨೦೦೪

೨೩. ಜಂಬಣ್ಣ ಅಮರಚಿಂತ : **ಅಧೋಜಗತ್ತಿನ ಕಾವ್ಯ,** ಬಂಡಾಯ ಪ್ರಕಾಶನ, ರಾಯಚೂರು ೧೯೮೨

೨೪. ಜವರಯ್ಯ ಮ. ನ. : **ಪರಂಪರೆ ದಲಿತ ಬಂಡಾಯ ಸಾಹಿತ್ಯ ಸಮಗ್ರ ಅಧ್ಯಯನ,** ಸಿದ್ಧಾರ್ಥ ಗ್ರಂಥಮಾಲೆ ಮೈಸೂರು ೧೯೯೪

೨೫. ತರೀಕೆರೆ ರಹಮತ್ : **ಪ್ರತಿಸಂಸ್ಕೃತಿ** ಕನ್ನಡಸಂಘ, ಕ್ರೈಸ್ತ ಕಾಲೋನಿ, ಬೆಂಗಳೂರು ೧೯೯೩

೨೬. ತರೀಕೆರೆ ರಹಮತ್ : (ಸಂ) **ಕನ್ನಡಸಾಹಿತ್ಯ ಮೀಮಾಂಸೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೧

೨೭. ತರೀಕೆರೆ ರಹಮತ್ : **ಮರದೊಳಗಣಕಿಚ್ಚು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೧

೨೮. ದಂಡಪ್ಪ. ಹೆಚ್. (ಸಂ) : **ಬಡವರ ನಗುವಿನ ಶಕ್ತಿ,** ಅಂಕಿತ ಪುಸ್ತಕ, ಬೆಂಗಳೂರು ೨೦೦೧

೨೯. ದೇವಯ್ಯ ಹರವೆ : **ದಲಿತಸಾಹಿತ್ಯ ಮತ್ತು ಇತರ ಲೇಖನಗಳು,** ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು ೧೯೯೧

೩೦. ದೊಡ್ಡಹುಲ್ಲೂರು ರುಕ್ಕೋಜಿ : (ಸಂ) **ಡಾ॥ ಸಿದ್ಧಲಿಂಗಯ್ಯನವರ ಸದನದ ಭಾಷಣಗಳು,** ಅಂಕಿತ ಪುಸ್ತಕ, ಬೆಂಗಳೂರು ೨೦೦೪

೩೧. ನಾಗರಾಜಪ್ಪ. ಕೆ. ಜಿ. : **ಮರುಚಿಂತನೆ,** ಪ್ರಣತಿ ಪ್ರಕಾಶನ, ತುಮಕೂರು ೧೯೮೩

೩೨. ನಾಗರಾಜ ಡಿ. ಆರ್. : **ಸಾಹಿತ್ಯ ಕಥನ,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ೧೯೯೫

೩೩. ನಾಗರಾಜ ಡಿ. ಆರ್ : **ಅಮೃತ ಮತ್ತು ಗರುಡ,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ೧೯೯೦

೩೪. ನಾಯಕ. ಜಿ. ಎಚ್. : **ನಿಜದನಿ,** ಅಕ್ಷರ ಪ್ರಕಾಶನ, ಹೆಗ್ಗೋಡು ೧೯೮೮.

೩೫. ನಾಯಕ ಜಿ. ಎಚ್. : **ಶತಮಾನದ ಕನ್ನಡ ಸಾಹಿತ್ಯ,** ಶ್ರೀರಾಘವೇಂದ್ರ ಪ್ರಕಾಶನ, ಅಂಕೋಲ ೨೦೦೦

೩೬. ನಿಂಗಪ್ಪ ಮುದೇನೂರು : **ಕನ್ನಡ ಜನಪದ ಮಹಾಕಾವ್ಯಗಳ ಸಾಂಸ್ಕೃತಿಕ ವೀರರು,** ಸಿವಿಜಿ. ಪಬ್ಲಿಕೇಷನ್ಸ್, ಬೆಂಗಳೂರು ೨೦೦೪

೩೭. ನಿಂಗಪ್ಪ ಮುದೇನೂರು : **ಸಂಸ್ಕೃತಿದರ್ಶನ,** ಸೂರ್ಯಪ್ರಕಾಶನ, ಮಲ್ಲಾಡಿಹಳ್ಳಿ ೨೦೦೫

೩೮. ಪುರುಷೋತ್ತಮ ಬಿಳಿಮಲೆ : **ಶಿಷ್ಟ ಪರಿಶಿಷ್ಟ,** ಮುದಿಪು ಪ್ರಕಾಶನ, ಮಂಗಳೂರು ೧೯೯೨

೩೯. ಪುರುಷೋತ್ತಮ ಬಿಳಿಮಲೆ : **ಬಂಡಾಯ ದಲಿತ ಸಾಹಿತ್ಯ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೦

೪೦. ಪುರುಷೋತ್ತಮ ಬಿಳಿಮಲೆ : **ದಲಿತ ಜಗತ್ತು,** ಹೊಸದಿಕ್ಕು ಪ್ರಕಾಶನ, ಮಂಗಳೂರು ೧೯೮೯

೪೧. ಪುತಿನ : **ಮಾಂದಳಿರು** ೧೯೩೬ **ಹಣತೆ** ೧೯೩೩

೪೨. ಬಸವರಾಜ ಸಬರದ : **ಬಂಡಾಯಜಾನಪದ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೬

೪೩. ಬರಗೂರು ರಾಮಚಂದ್ರಪ್ಪ : **ಬಂಡಾಯ ಕಾವ್ಯಮೀಮಾಂಸೆ,** ಅನ್ವೇಷಣಾ ಪ್ರಕಾಶನ, ಬೆಂಗಳೂರು ೧೯೯೧

೪೪. ಬರಗೂರು ರಾಮಚಂದ್ರಪ್ಪ : **ಪರಂಪರೆಯೊಂದಿಗೆ ಪಿಸುಮಾತು,** ಅಂಕಿತ ಪುಸ್ತಕ ಬೆಂಗಳೂರು ೨೦೦೪.

೪೫. ಬರಗೂರು ರಾಮಚಂದ್ರಪ್ಪ (ಪ್ರ.ಸಂ) : **ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ,** ವಿವಿಧ ಲೇಖಕರು, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೮೩

೪೬. ಮಹದೇವಯ್ಯ. ಸಿ. : **ದಲಿತರು ಮತ್ತು ಪರ್ಯಾಯ ರಾಜಕಾರಣ** : ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೫

೪೭. ಮುನಿವೆಂಕಟಪ್ಪ. ವಿ. : **ದಲಿತ ಚಳುವಳಿ,** ವಿಚಾರವಾದಿ ಪ್ರಕಾಶನ, ಮೈಸೂರು ೧೯೯೮

೪೮. ಮೊಗಳ್ಳಿ ಗಣೇಶ್ : **ದಲಿತರು ಮತ್ತು ಜಾಗತೀಕರಣ,** ಕನ್ನಡ ವಿಶ್ವವಿದ್ಯಾಲಯ ಹಂಪಿ ೧೯೯೪

೪೯. ರಾಜೇಂದ್ರ ಚೆನ್ನಿ : **ಅಧ್ಯಯನ** ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ ೧೯೯೧

೫೦. ರಾಘವೇಂದ್ರರಾವ್. ಹೆಚ್. ಎಸ್. : **ಶತಮಾನದ ವಿಮರ್ಶೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೨

೫೧. ರಾಘವೇಂದ್ರರಾವ್. ಹೆಚ್. ಎಸ್. : **ಮಹಾಪ್ರಸ್ಥಾನ ಮತ್ತೊಂದು ಪ್ರಸ್ಥಾನ,** ಸಾಹಿತ್ಯ ಮಿತ್ರರು, ಬೆಂಗಳೂರು ೧೯೯೧

೫೨. ಲಕ್ಷ್ಮೀನಾರಾಯಣ ನಾಗವರ : (ಸಂ) **ಬತ್ತದ ಬೆಳದಿಂಗಳು,** ಮಿಲಿಂದ್ ಪ್ರಕಾಶನ, ಬೆಂಗಳೂರು ೨೦೦೬.

೫೩. ವಿರೂಪಾಕ್ಷಿ ಪೂಜಾರಹಳ್ಳಿ (ಸಂ.) **ದಲಿತರು ಮತ್ತು ಚರಿತ್ರೆ** ಕ.ವಿ.ವಿ. ಹಂಪಿ, ೨೦೦೫.

೫೪. ಶಿವರುದ್ರಪ್ಪ ಜಿ.ಎಸ್. **ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ;** ಕ.ಸಾ.ಅ. ಬೆಂಗಳೂರು, ೧೯೯೦.

೫೫. ಶಿವರುದ್ರಪ್ಪ ಜಿ.ಎಸ್.: **ಪರಿಶೀಲನ,** ಶಾರದ ಪ್ರಕಾಶನ, ಬೆಂಗಳೂರು, ೧೯೮೨.

೫೬. ಶಿವಪ್ರಕಾಶ್ ಹೆಚ್.ಎಸ್.: **ಮೊದಲ ಕಟ್ಟಿನಗದ್ಯ;** ಅಭಿನವ, ಬೆಂಗಳೂರು, ೧೯೯೫.

೫೭. ಶಿವರುದ್ರಪ್ಪ ಜಿ.ಎಸ್. (ಸಂ.): **ಶ್ರೀಕುವೆಂಪು,** ಬೆಂಗಳೂರು ವಿವಿ, ೧೯೮೦.

೫೮. ಶಿವರಾಮ ಕಾರಂತ: **ಅರ್ಥಕೋಶ,** ಹರ್ಷ ಪ್ರಕಾಶನ, ಪುತ್ತೂರು, ೧೯೬೨.

೫೯. ಸಿದ್ಧಯ್ಯ ಕೆ.ಬಿ. (ಸಂ.): **ದಲಿತ ಕಾವ್ಯ,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೬.

ಸಿದ್ಧಲಿಂಗಯ್ಯನವರ ಕೃತಿಗಳು

೧. **ಊರು ಕೇರಿ ಭಾಗ–೧** (ಆತ್ಮಕಥೆ)

೨. **ಊರು ಕೇರಿ ಭಾಗ–೨** (ಆತ್ಮಕಥೆ)

೩. **ಮೆರವಣಿಗೆ** (ಸಮಗ್ರ ಕಾವ್ಯ)

೪. **ಅವತಾರಗಳು** (ವೈಚಾರಿಕ ಲೇಖನಗಳು)

೫. **ಹಕ್ಕಿನೋಟ** (ವಿಮರ್ಶೆ)

೬. **ಏಕಲವ್ಯ** (ನಾಟಕ)

೭. **ಪಂಚಮ ಮತ್ತು ನೆಲಸಮ** (ನಾಟಕ)

೮. **ಗ್ರಾಮದೇವತೆಗಳು ಒಂದು ಅಧ್ಯಯನ** (ಸಂಶೋಧನಾ ಪ್ರಬಂಧ)

೯. **ಜನ ಸಂಸ್ಕೃತಿ** (ವಿಮರ್ಶಾ ಲೇಖನಗಳು)

ತೆಲುಗು ಪರಾಮರ್ಶನ ಗ್ರಂಥಗಳು

೧. ಅದ್ದೆ ಪಲ್ಲಿರಾಮ ಮೋಹನರಾವ್; **ಶ್ರೀ ಶ್ರೀ ಕವಿತಾ ಪ್ರಸ್ಥಾನಂ.**

೨. ಕಡಿಯಾಲ ರಾಮಮೋಹನರಾಯ್; **ತೆಲುಗು ಕವಿತಾ** ವಿಕಾಸಂ (೧೯೮೨)

೩. ಕತ್ತಿ ಪದ್ಮಾರಾವು: **ಸಾಂಘಿಕ ವಿಪ್ಲವ ರಚಯಿತಲು,** ೧೯೮೩.

೪. ಕೊಡವಗಂಟಿಕುಟುಂಬರಾವು: **ಸಾಹಿತ್ಯ ಪ್ರಯೋಜನಂ.**

೫. ಕೊಡವಗಂಟಿಕುಟುಂಬರಾವು: **ಸಾಹಿತ್ಯಂಲೋ ವಿಪ್ಲವೋದ್ಯಮಂ**

೬. ನಾರಾಯಣರೆಡ್ಡಿ ಸಿ.: **ಆಧುನಿಕಾಂಧ್ರ ಕವಿತ್ವಮು ಸಂಪ್ರದಾಯಮು-ಪ್ರಯೋಗಮುಲು,** ೧೯೮೨.

೭. ನಾರಾಯಣರಾವು ವಲ್ಚೇರು: **ತೆಲುಗುಲೋ ಕವಿತಾ** ವಿಪ್ಲವ ಸ್ವರೂಪಂ, ೧೯೭೮.

೮. ಮಿರಿಯಾಲ ರಾಮಕೃಷ್ಣ: **ಶ್ರೀ ಶ್ರೀ ಕವಿತಾ ವೈಭವಂ**

೯. ಮೋಯನರಾವ್ ಡಿ: **ರೇಪಟಿ ಕವಿತ್ವಂ,** ೧೯೭೩.

೧೦. ರಂಗನಾಥಾಚಾರ್ಯಲು: **ತೆಲುಗು ಸಾಹಿತ್ಯಂ ಮರೋಚೂಪು,** ೧೯೮೧.

ಕವನ ಸಂಕಲನಗಳು

೧. **ಆರುದ್ರ :** ತ್ವಮೇವಾಹಂ

೨. **ಎಲ್ಲೋರ :** ರೇಪಟಿ ವಸಂತಂ.

೩. **ಎಲ್ಲೋರ :** ಜ್ವಾಲಾತೋರಣಾಲು

೪. **ಜಾಷುವಾ :** ಗಬ್ಬಿಲಂ

೫. ಸಿ. **ನಾರಾಯಣರೆಡ್ಡಿ :** ಜ್ವಾಲಾಮುಖಿ

೬. **ಬೋಯಿ ಭೀಮನ್ನ :** ಉಗಾದುಲು

೭. **ಬೋಯಿ ಭೀಮನ್ನ :** ಗುಡಿಸಲು ಕಾಲಿ ಪೋತುನ್ನೈ

೮. **ರಮಣಾರೆಡ್ಡಿ ಕೆ. ವಿ. :** ಅಡವಿ

೯. **ವರ ವರ ರಾವ್ (ಸಂ)** : ಚರಬಂಡರಾಜು ಕವಿತಲು ಪಾಟಲು

೧೦. **ವಿಪ್ಲವ ಕವುಲು** : ಮಾರ್ಚ

೧೧. **ಶೇಷೇಂದ್ರಶರ್ಮ** : ನಾದೇಶಂ ನಾ ಪ್ರಜಲು

ಶ್ರೀ ಶ್ರೀಯವರ ಕೃತಿಗಳು

೧. ಪ್ರಭವ (ಕವನ ಸಂಗ್ರಹ)

೨. ಮಹಾ ಪ್ರಸ್ಥಾನಂ (ವಿಮರ್ಶೆ)

೩. ವಾರಂ ವಾರಂ (ವಿಮರ್ಶೆ)

೪. ೧+೧=೧ (ರೇಡಿಯೋ ನಾಟಕಗಳು)

೫. ಮರೋ ಪ್ರಸ್ಥಾನಂ (ಕವನ ಸಂಗ್ರಹ)

೬. ಖಡ್ಗಸೃಷ್ಟಿ (ಕವನ ಸಂಗ್ರಹ)

೭. ಸಿಪ್ರಾಲಿ (ಕವನ ಸಂಗ್ರಹ)

೮. ವ್ಯಲು ರಿವಿವ್ಯಲು (ವಿಮರ್ಶೆ, ಅಂಕಣ ಬರಹಗಳು)

೯. ಶ್ರೀಶ್ರೀ ಉಪನ್ಯಾಸಾಲು (ಭಾಷಣಗಳು)

೧೦. ಅನಂತಂ (ಕಾಲ್ಪನಿಕ ಆತ್ಮಕಥೆ)